ಶ್ರೀ ವೇದಗರ್ಭ ಅನಂತಪದ್ಮನಾಭಸೂರಿ ವಿರಚಿತಃ

# ಮಧ್ವಸಿದ್ಧಾಂತಸಾರಃ

## ಪದಾರ್ಥಸಂಗ್ರಹ ಸಮೇತ

### ಭಾಗ–೧

ಅನುವಾದಕರು

ಪಂಡಿತರತ್ನ ಆ. ಭೀಮಸೇನಾಚಾರ್ಯ

ಸಂತೇಬಿದನೂರು

ಪ್ರಕಾಶಕರು

ಶ್ರೀ ಮಾಧ್ವ ಗ್ರಂಥ ಪ್ರಕಾಶನ

ಬಳ್ಳಾರಿ

1995

MADHVASIDDHANTASARA (Including Padarthasangraha) original text and translation in Kannada by A. S. BHEEMASENA CHARYA

© A. S. BHEEMASENACHARYA

THIS BOOK IS PUBLISHED WITH FINANCIAL ASSISTANCE OF TIRUMALA TIRUPATHI DEVASTANAM UNDER SCHEME 'AID TO PUBLISH BOOKS'

Publishers :

SRI MADHWAGRANTHA PRAKASHANA
L. N. Temple, Gold Smith Street,
BELLARY-583 101.

Printed by :

NAYAK PRINTERS
No. 4, Neelpotaiah Lane,
O. T. C. Road Cross,
BANGALORE-560 053.

# ಅನುವಾದಕರ ಬಿನ್ನಹ

ದ್ವೈತವೇದಾಂತ ವಾಙ್ಮಯ ಪ್ರಪಂಚದಲ್ಲಿ, ಶ್ರೀಮದಾನಂದತೀರ್ಥರ ಮೂಲ ಗ್ರಂಥಗಳನ್ನೇ ಆಧರಿಸಿ ಅನೇಕ ಕೃತಿಗಳು ಬಂದಿವೆ. ಅವುಗಳಲ್ಲಿ ಒಂದಾದ ಶ್ರೀ ವೇದಗರ್ಭ ಪದ್ಮನಾಭಾಚಾರ್ಯರ (ಪದ್ಮನಾಭ ಸೂರಿ-18ನೇ ಶತಮಾನ) ಕೃತಿ 'ಪದಾರ್ಥ ಸಂಗ್ರಹ'. ಈ ಗ್ರಂಥಕ್ಕೆ ಇರುವ ಅವರದ್ದೇ ಆದ ವ್ಯಾಖ್ಯಾನವೇ "ಶ್ರೀಮಧ್ವಸಿದ್ಧಾಂತಸಾರ". ಈ ಗ್ರಂಥವು ಮಧ್ವಸಿದ್ಧಾಂತದ ಕೈಪಿಡಿ ಎಂದರೆ ತಪ್ಪಾಗಲಾರದು. ಗ್ರಂಥಕಾರರು ಸಿದ್ಧಾಂತದ ಸಾರಸರ್ವಸ್ವವನ್ನು ಅನೇಕ ಪ್ರಕರಣಗಳ ಮೂಲಕ ಒದಗಿಸಿಕೊಟ್ಟು, ತತ್ವಜಿಜ್ಞಾಸುಗಳಿಗೆ ಅತ್ಯಂತ ಉಪಯುಕ್ತವಾಗುವಂತೆ ಮಾಡಿರುತ್ತಾರೆ. ಇದರ ಜೊತೆಗೆ ಪ್ರತಿಹಂತದಲ್ಲೂ ಶ್ರೀಮದಾಚಾರ್ಯರ, ಶ್ರೀ ಮಟ್ಟೀಕಾಚಾರ್ಯರ ಹಾಗೂ ಇತರ ಗ್ರಂಥಗಳನ್ನು ಉದಾಹರಿಸಿ, ಚಿಂತಕರಿಗೆ ಉಪಯುಕ್ತ ಪ್ರಮಾಣಗಳ ಸಂಗ್ರಹವನ್ನೇ ಒದಗಿಸಿದ್ದಾರೆ. ನ್ಯಾಯ-ವೈಶೇಷಿಕ ಶಾಸ್ತ್ರದ ರೀತಿಯಲ್ಲೇ ಸತ್‌ಸಿದ್ಧಾಂತವಾದ ಮಧ್ವಸಿದ್ಧಾಂತದ ಪ್ರಮೇಯಗಳನ್ನು ನಿರೂಪಿಸಿರುವ ಶೈಲಿ ಅರ್ಥಪೂರ್ಣವಾಗಿದೆ. ಈ ಪ್ರಕೃತ ಕೃತಿಯಲ್ಲಿ ಪದಾರ್ಥಸಂಗ್ರಹ, ಮಧ್ವಸಿದ್ಧಾಂತಸಾರದ ಮೂಲದ ಜೊತೆಗೆ ಕನ್ನಡಾನುವಾದವನ್ನು ಒದಗಿಸಲಾಗಿದೆ.

ಆಸ್ತಿಕರಿಗೆ ಸದುಪಯೋಗವಾಗಲೆಂದು ಶಾಸ್ತ್ರದ ರಹಸ್ಯಗಳನ್ನು, ಮುಖ್ಯ ತತ್ತ್ವಗಳನ್ನು ಒಳಗೊಂಡಿರುವ ಈ ಮಧ್ವಸಿದ್ಧಾಂತಸಾರ ಗ್ರಂಥದ ಅನುವಾದವನ್ನು ಯಥಾಯೋಚಿತವಾಗಿ ಮಾಡಿರುತ್ತೇನೆ. ಅಂತೆಯೇ ಸುಜನರು ಇದರ ಲಾಭ ಪಡೆದು ಸಂತುಷ್ಟರಾದರೇ ನನ್ನ ಪ್ರಯತ್ನದ ಸಾಫಲ್ಯವು.

ಮುದ್ರಣ ಕಾರ್ಯದಲ್ಲಿ ಕರಡು ತಿದ್ದುವ ಹಾಗೂ ಸಂಬಂಧಪಟ್ಟ ಇತರ ಕಾರ್ಯಗಳನ್ನು ಆಸಕ್ತಿಯಿಂದ ನಿರ್ವಹಿಸಿದ ನನ್ನ ಚಿರಂಜೀವಿಗಳಿಗೆ ಭಗವಂತನು ಜ್ಞಾನಭಕ್ತ್ಯಾದಿಗಳನ್ನೂ ದಯಪಾಲಿಸಲೆಂದು ಹಾರೈಸುವೆ. ಸಕಾಲದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ನಾಯಕ್ ಪ್ರಿಂಟರ್ಸ್‌ರವರಿಗೆ ಕೃತಜ್ಞತೆಗಳು.

ಎ. ಎಸ್. ಭೀಮಸೇನಾಚಾರ್ಯ

ಬಳ್ಳಾರಿ.

1995

# ವಿಷಯಾನುಕ್ರಮಣಿಕಾ


| | ವಿಷಯ | ಪುಟ ಸಂ. |
|---|---|---|
| | ಪ್ರಕಾಶಕರ ಅರಿಕೆ | |
| | ಮುನ್ನುಡಿ | |
| | ವಿಷಯಾನುಕ್ರಮಣಿಕಾ | |
| ೧ | ಪೀಠಿಕಾ .... | ೨ |
| ೨ | ಪದಾರ್ಥ ಪ್ರಕರಣ .... | ೩ |
| ೩ | ಗುಣ ಪ್ರಕರಣ .... | ೫ |
| ೪ | ಕರ್ಮ ಪ್ರಕರಣ .... | ೮ |
| ೫ | ಸಾಮಾನ್ಯ ಪ್ರಕರಣ .... | ೨೫ |
| ೬ | ವಿಶೇಷ ಪ್ರಕರಣ .... | ೩೫ |
| ೭ | ಸಮವಾಯ ನಿಷೇಧ ಪ್ರಕರಣ .... | ೪೮ |
| ೮ | ವಿಶಿಷ್ಟ ಪ್ರಕರಣ .... | ೫೨ |
| ೯ | ಅಂಶಿ ಪ್ರಕರಣ .... | ೬೨ |
| ೧೦ | ಶಕ್ತಿ ಪ್ರಕರಣ .... | ೬೫ |
| ೧೧ | ಸಾದೃಶ್ಯ ಪ್ರಕರಣ .... | ೮೬ |
| ೧೨ | ಅಭಾವ ಪ್ರಕರಣ .... | ೮೯ |
| ೧೩ | ದ್ರವ್ಯ ಪ್ರಕರಣ .... | ೧೦೬ |
| ೧೪ | ಪರಮಾತ್ಮ ಪ್ರಕರಣ .... | ೧೧೦ |
| | ಲಕ್ಷ್ಮೀ ಪ್ರಕರಣ .... | ೧೨೫ |
| ೧೫ | ಜೀವ ಪ್ರಕರಣ .... | ೧೪೦ |
| ೧೬ | ಅವ್ಯಾಕೃತಾಕಾಶ ಪ್ರಕರಣ .... | ೧೫೮ |
| ೧೭ | ಪ್ರಕೃತಿ ಪ್ರಕರಣ .... | ೧೭೦ |
| ೧೮ | ಗುಣತ್ರಯ ಪ್ರಕರಣ .... | ೧೭೪ |
| ೧೯ | ಮಹತ್ತತ್ತ್ವ ಪ್ರಕರಣ .... | ೧೮೧ |
| ೨೦ | ಅಹಂಕಾರ ತತ್ತ್ವಪ್ರಕರಣ .... | ೧೮೫ |
| ೨೧ | ಬುದ್ಧಿತತ್ತ್ವ ಪ್ರಕರಣ .... | ೧೮೭ |
| ೨೨ | ಮನಸ್ತತ್ತ್ವ ಪ್ರಕರಣ .... | ೧೮೯ |
| ೨೩ | ಇಂದ್ರಿಯ ಪ್ರಕರಣ .... | ೧೯೭ |

॥ ಶ್ರೀಃ ॥

॥ ಶ್ರೀ ಗುರುಭ್ಯೋ ನಮಃ ॥

# ಪದಾರ್ಥ ಸಂಗ್ರಹಃ

# ಶ್ರೀಮಧ್ವಸಿದ್ಧಾಂತಸಾರವ್ಯಾಖ್ಯಾ

## ಸಂವಿಲಿತಃ

**ಶ್ರೀರಾಮಂ ಹನುಮತ್ಸೇವ್ಯಂ ಶ್ರೀಕೃಷ್ಣಂ ಭೀಮಸೇವಿತಂ ।**

**ಶ್ರೀವ್ಯಾಸಂ ಮಧ್ವಸೇವ್ಯಂಚ ಹಯಗ್ರೀವ ಮುಪಾಸ್ಮಹೇ ॥**

ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಸ್ವರೂಪಾನಂದಾವಿರ್ಭಾವ ರೂಪವಾದ ಮೋಕ್ಷವೇ ಪರಮ ಪುರುಷಾರ್ಥವು. ಇಂತಹ ಫಲವು, ಶ್ರೀಮನ್ನಾರಯಣನೇ ಜಗತ್ತಿನ ಸೃಷ್ಟ್ಯಾದ್ಯಷ್ಟ ಕರ್ತನುಇತ್ಯಾದಿ ವಿಶಿಷ್ಟ ಪರಮಾತ್ಮನ ಜ್ಞಾನದಿಂದಲೇ ಲಭಿಸುವುದು. ಇಂತಹ ಭಗವತ್ ಜ್ಞಾನವು ಜಗತ್ ಜ್ಞಾನ ಸಾಪೇಕ್ಷವೇ ಆಗಿರುತ್ತದೆ. ಆದುದರಿಂದ ಅನೇಕಾವಾಂತರ ಭೇಧ ಭಿನ್ನಗಳಾದ ಪದಾರ್ಥಗಳ ಜ್ಞಾನವು ಅಗತ್ಯವಾಗಿರುವುದರಿಂದ ಯಥಾರ್ಥವಾದ ಪದಾರ್ಥಗಳನ್ನು ನಿರೂಪಿಸುವವರಾಗಿ ಅನ್ವರ್ಥಕವಾದ 'ಪದಾರ್ಥಸಂಗ್ರಹ'ವೆಂಬ ಗ್ರಂಥವನ್ನು ಆರಂಭಿಸುವರಾಗಿ ನಿರ್ವಿಘ್ನ ಪರಿಸಮಾಪ್ತ್ಯರ್ಥವಾಗಿ ಮಂಗಳವನ್ನು ಆಚರಿಸುತ್ತಾರೆ.

**ಲಕ್ಷ್ಮೀಪತಿಂ ಸಂಪ್ರಣಮ್ಯ ಸರ್ವಜ್ಞಾದಿ ಗುರೂನಪಿ ।**

**ಪದಾರ್ಥಾನಾಂ ಸಂಗ್ರಹೋಽಯಂ ಕ್ರಿಯತೇ ಶಾಸ್ತ್ರತೋಽಂಜಸಾ ॥**

ಇದೇ ಗ್ರಂಥಕಾರರು ತಮ್ಮ ಗ್ರಂಥದ ಸುಸ್ಪಷ್ಟಾರ್ಥತೆಗಾಗಿ ಅನ್ವರ್ಥಕ ನಾಮವಾದ "ಶ್ರೀ ಮಧ್ವಸಿದ್ಧಾಂತಸಾರಸಂಗ್ರಹ" ಎಂಬ ಟಿಪ್ಪಣಿಯನ್ನು ಸ್ವಯಂ ರಚಿಸುವವರಾಗಿ ತಾವು ಮಂಗಳವನ್ನು ಮಾಡುತ್ತಾರೆ.

**ಇಹಖಲು ಜಗುದುದಯಾದಿ ನಿಮಿತ್ತತ್ವೇನ ಪರಮಾತ್ಮ ತತ್ವಜ್ಞಾನಂ ಮೋಕ್ಷಸಾಧನಮಿತಿ ಅವಾಂತರಾನೇಕ ಭೇದಭಿನ್ನ ಪದಾರ್ಥನಿರೂಪಣಂ ಕುರ್ವನ್ ಗ್ರಂಥಾದೌ ಮಂಗಳಮಾಚರತಿ ।**

**ಲಕ್ಷ್ಮೀನಾರಾಯಣಂ ವಂದೇ ಪೂರ್ಣಬೋಧಗುರೂನಪಿ ।**
**ಜಯಾರ್ಯಾನ್ವ್ಯಾಸರಾಜಾಂಶ್ಚ ಮದ್ಗುರೂನಪಿ ಸಾದರಂ ।**
**ವೇದಗರ್ಭಕುಲೀನೇನ ಪದ್ಮನಾಭೇನ ಧೀಮತಾ ।**
**ಮಧ್ವಸಿದ್ಧಾಂತಸಾರೋಽಯಂ ತನ್ಯತೇ ಸೇವ್ಯತಾಂಬುಧೈಃ ॥**

ಲಕ್ಷ್ಮೀ ಪತಿಯಾದ ಶ್ರೀಮನ್ನಾರಯಣನನ್ನು ಪೂರ್ಣಪ್ರಜ್ಞರಾದ ಗುರುಗಳನ್ನು ಜಯತೀರ್ಥರನ್ನು, ವ್ಯಾಸರಾಜರನ್ನು ಹಾಗೂ ನನಗೆ ವಿದ್ಯಾದಾತೃಗಳಾದ ಸಾಕ್ಷಾದ್ ಗುರುಗಳನ್ನು ಆದರ ಪೂರ್ವಕವಾಗಿ ನಮಿಸಿ ವೇದಗರ್ಭವೆಂಬ ವಂಶದಲ್ಲಿ ಅವತರಿಸಿದ (ಹುಟ್ಟಿದ) ಪದ್ಮನಾಭನೆಂಬ ನನ್ನಿಂದ ಈ "ಮಧ್ವಸಿದ್ಧಾಂತಸಾರ"ವೆಂಬ ಗ್ರಂಥವು ರಚಿಸಲ್ಪಡುತ್ತದೆ. ಇದನ್ನು ಜ್ಞಾನಿಗಳು ಸೇವಿಸಿ ನನ್ನ ಬುದ್ಧಿಯನ್ನು ಶುದ್ಧಪಡಿಸಲಿ.

ಭಗವಂತನ ವಿಶಿಷ್ಟ ಜ್ಞಾನದಿಂದಲೇ ಮೋಕ್ಷವು. ವಿಶಿಷ್ಟ ಜ್ಞಾನವು ವಿಶೇಷಣ ಜ್ಞಾನ ಸಾಪೇಕ್ಷವಾದುದು, ಆದುದರಿಂದ ಜಗತ್ ಜ್ಞಾನದ ಸ್ಪಷ್ಟತೆಗಾಗಿ ಪದಾರ್ಥ ಸಂಗ್ರಹವನ್ನು ರಚಿಸುವವರಾಗಿ ಗ್ರಂಥಾರಂಭದಲ್ಲಿ ಮಂಗಳವನ್ನು ಮಾಡಿರುತ್ತಾರೆ.

## ೧. ಪೀಠಿಕಾ

**ನನು ನೈಯಾಯಿಕಾದಿಭಿರೇವ ಪದಾರ್ಥನಿರೂಪಣಸ್ಯ ಕೃತತ್ವಾತ್ ವ್ಯರ್ಥ ಏವ ಅಯಂ ಗ್ರಂಥ ಇತ್ಯತ ಆಹ ಅಂಜಸೇತಿ । ನೈಯಾಯಿಕಾದಿ ನಿರೂಪಿತ ಪದಾರ್ಥ ಮಧ್ಯೇ ಕಸ್ಯಚಿತಸ್ವರೂಪತ ಏವ ಅಭಾವಾತ್ಕೇಷಾಚಿಚ್ಛಾಸ್ತ್ರ ವಿರುದ್ಧತಯಾ ನಿರೂಪಣಾತ್ತಸ್ಯಾಂಜಸ್ಯಮೇವ ನಾಸ್ತಿ ಇತಿ ಭಾವಃ । ನನು ಭಗವನ್ನಿರೂಪಣಸ್ಯಾಪಿ ಶಾಸ್ತ್ರ ವಿರುದ್ಧತ್ವೇ ತದ್ವದನುಪಾದೇಯತಾಸ್ಯಾದಿತ್ಯತ ಆಹ ॥ ಶಾಸ್ತ್ರತ ಇತಿ ॥**
**ಲ್ಯಬ್ಲೋಪೇ ನಿಮಿತ್ತಾ ಪಂಚಮೀ ಶಾಸ್ತ್ರಮನುಸೃತ್ಯೇತ್ಯರ್ಥಃ ॥**

ತಾರ್ಕಿಕರೇ ಮೊದಲಾದ ಶಾಸ್ತ್ರಜ್ಞರು ತರ್ಕಸಂಗ್ರಹಾದಿ ಗ್ರಂಥಗಳಲ್ಲಿ ಪದಾರ್ಥಗಳನ್ನು ನಿರೂಪಿಸಿರುವುದರಿಂದ ಈ ಗ್ರಂಥವು ವ್ಯರ್ಥವಲ್ಲವೇ ? ಎಂದರೆ ಹೇಳುತ್ತಾರೆ "ಅಂಜಸಾ" ಎಂದು ಸಮಂಜಸವಾಗಿ ಇಲ್ಲಿ ನಿರೂಪಿಸಿರುವುದರಿಂದ ಈ ಗ್ರಂಥವು ವ್ಯರ್ಥವಾದುದಲ್ಲ. ಈ ಗ್ರಂಥವು ಶಾಸ್ತ್ರ ವಿರುದ್ಧವಾದರೆ ಪ್ರೇಕ್ಷಾವಜ್ಜನರಿಂದ ಉಪೇಕ್ಷಾರ್ಹವೇ ಅಲ್ಲವೇ ? ಎಂದರೆ "ಶಾಸ್ತ್ರತಃ" ಎಂದಿರುತ್ತಾರೆ. ಖಂಡಾದಿ ಶಾಸ್ತ್ರಗಳನ್ನು ಅನುಸರಿಸಿಯೇ ನಿರೂಪಿಸಿರುವುದರಿಂದ ಸಾರ್ಥಕವೇ ಆಗಿರುತ್ತದೆ. ನೈಯಾಯಿಕರ ಪದಾರ್ಥ ನಿರೂಪಣೆಯಲ್ಲಿ ಕೆಲವು (ಸಮವಾಯಾದಿಗಳು) ಶಾಸ್ತ್ರ ವಿರುದ್ಧಗಳೇ ಆಗಿರುತ್ತದೆ. ಆದುದರಿಂದ ಈ ಗ್ರಂಥವು ಶಾಸ್ತ್ರಾನುಸಾರಿಯಾಗಿರುವುದರಿಂದ ಸುತರಾಂ ಸಾರ್ಥಕವೇ ಆಗಿರುತ್ತದೆ. ಹೀಗೆ ಪೀಠಿಕೆಯು.

**ತತ್ರ ಸಾಮಾನ್ಯತಃ ಪದಾರ್ಥಾನ್ ನಿರೂಪಯತಿ ತತ್ರೇತಿ**

**ತತ್ರ ದ್ರವ್ಯ ಗುಣ ಕರ್ಮ ಸಾಮಾನ್ಯ ವಿಶೇಷ ವಿಶಿಷ್ಟಾಂಶಿ ಶಕ್ತಿ ಸಾದೃಶ್ಯಾಭಾವಾಃ ದಶ ಪದಾರ್ಥಾಃ ।**

**ಪದಾರ್ಥ ನಿರೂಪಣಸ್ಯ ಅವಶ್ಯಕತ್ವಾದಿತ್ಯರ್ಥಃ ।**

## ೨. ಪದಾರ್ಥ ಪ್ರಕರಣ

ಪದಾರ್ಥ ಸಮುದಾಯದಲ್ಲಿ (1) ದ್ರವ್ಯ (2) ಗುಣ (3) ಕರ್ಮ (4) ಸಾಮಾನ್ಯ (5) ವಿಶೇಷ (6) ವಿಶಿಷ್ಟ (7) ಅಂಶಿ (8) ಶಕ್ತಿ (9) ಸಾದೃಶ್ಯ (10) ಅಭಾವ.

ಹೀಗೆ ಹತ್ತು ಪದಾರ್ಥಗಳಿರುತ್ತದೆ. ಹೀಗೆ ಪದಾರ್ಥಗಳ ನಿರೂಪಣೆಯು ಅವಶ್ಯಕಗಳಾಗಿರುತ್ತದೆ.

**ನನು ಭಗವತ್ಪಾದೈರೇವ ತತ್ತ್ವಸಂಖ್ಯಾನೇ ಸ್ವತಂತ್ರಾಸ್ವತಂತ್ರ ಭೇದೇನ ದ್ವೈವಿಧ್ಯಸ್ಯ । ಬೃಹದ್ಭಾಷ್ಯೇ ಈಶ್ವರಃ ಪ್ರಕೃತಿಃ ಜೀವೋ ಜಡಂ ಚೇತಿ ಚತುಷ್ಟಯಂ । ಪದಾರ್ಥಾನಾಂ ಸಮುದ್ದಿಷ್ಟಂ ತತ್ರೇಶೋ ವಿಷ್ಣುರುಚ್ಯತ ಇತಿ ಚಾತುರ್ವಿಧ್ಯಸ್ಯ ಚೋಕ್ತೇಃ ದಶಪದಾರ್ಥ ಇತ್ಯೇತತ್ ಶಾಸ್ತ್ರ ವಿರುದ್ಧಂ ಇತಿ ಚೇದುಚ್ಯತೇ । ಅಸ್ಯ ಗ್ರಂಥಸ್ಯ ತಾರ್ಕಿಕಾದಿ ಸಮಯ ನಿರಾಸಾಯ ಪ್ರವೃತ್ತತ್ವೇನ ತದ್ವಿಭಾಗಮನುಸೃತ್ಯ ಕೇಷಾಂಚಿತ್ ಪದಾರ್ಥಾನಾ ಮಪಾಪಃ । ಕೇಷಾಂಚಿದುದ್ಧಾರಃ ಕ್ರಿಯತ ಇತಿ ನತದ್ವಿರೋಧಃ ।**

ಶ್ರೀಮದಾನಂದತೀರ್ಥರು ತತ್ವಸಂಖ್ಯಾನ ಗ್ರಂಥದಲ್ಲಿ "ಸ್ವತಂತ್ರಮಸ್ವತಂತ್ರಂಚ"ಎಂದು ಸ್ವತಂತ್ರ ಅಸ್ವತಂತ್ರ ಭೇದದಿಂದ ಪದಾರ್ಥ ದ್ವೈವಿಧ್ಯವನ್ನು ಮತ್ತು ಬೃಹತ್ ಭಾಷ್ಯದಲ್ಲಿ ಈಶ್ವರ, ಪ್ರಕೃತಿ, ಜೀವ, ಜಡಗಳೆಂದು ಪದಾರ್ಥಗಳು ನಾಲ್ಕು ವಿಧ ಅವುಗಳಲ್ಲಿ ವಿಷ್ಣುವೇ ಈಶನು ಹೀಗೆ ಪದಾರ್ಥಗಳಲ್ಲಿ ಚಾತುರ್ವಿಧ್ಯವನ್ನು ಹೇಳಿರುವುದರಿಂದ ಈ ಗ್ರಂಥಗಳಲ್ಲಿ ಹೇಳಿದ ಪದಾರ್ಥಗಳು ಹತ್ತೆಂದು ಹೇಳಿದರೆ ಪದಾರ್ಥ ವಿಭಾಗವು ಶಾಸ್ತ್ರ ವಿರುದ್ಧವಾಗಲಿಲ್ಲವೇ ಎಂದರೆ ಹೇಳುತ್ತಾರೆ. ಈ ಗ್ರಂಥವು ತಾರ್ಕಿಕರ ಶಾಸ್ತ್ರದ ನಿರಾಸಾರ್ಥವಾಗಿಯೇ ಪ್ರಸಕ್ತವಾಗಿರುವುದರಿಂದ ಅವರ ಗ್ರಂಥದ ವಿಭಾಗ ಕ್ರಮವನ್ನು ಅನುಸರಿಸಿ ಕೆಲವು ಪದಾರ್ಥಗಳ ತೆಗೆದು ಹಾಕುವಿಕೆ ಕೆಲವು ಪದಾರ್ಥಗಳ ಮೇಲಿಸುವಿಕೆ ಮಾಡುತ್ತದೆ. ಆದುದರಿಂದ ಈರೀತಿಯಾಗಿ ಪದಾರ್ಥಗಳು ಹತ್ತೆಂದು ಹೇಳಿದರೆ ಶಾಸ್ತ್ರ ವಿರೋಧವು ಬರುವುದಿಲ್ಲ.

**ತತ್ವಸಂಖ್ಯಾನಾದೌಚ ಸಾಮಾನ್ಯ ವಿಸ್ತರಾಭ್ಯಾಂ ಪದಾರ್ಥ ತತ್ವ ಜ್ಞಾನಂ ಮೋಕ್ಷಸಾಧನಮಿತ್ಯಭಿಪ್ರಾಯೇಣ ಪ್ರವೃತ್ತಂ ವಿಭಾಗದ್ವಯಮಿತಿ ನದೋಷಃ । ತತ್ರ ವಿಶಿಷ್ಟಾಂಶಿ ಶಕ್ತಿ ಸಾದೃಶ್ಯಾನಾಂ ತಾರ್ಕಿಕೈಃ ಪದಾರ್ಥಾಂತರತ್ವೇನಾನಂಗೀಕಾರಾತ್ ತನ್ನಿರಾಸಾಯ ವಿಭಾಗೇ ಪ್ರಕ್ಷೇಪಃ । ಸಮವಾಯಸ್ಯ ಅಪ್ರಾಮಾಣಿಕಸ್ಯೋ ಉದ್ವಾಪಃ । ತಾರ್ಕಿಕಾಂಗೀಕೃತದ್ರವ್ಯ ಗುಣಾದಿಷ್ವಪಿ ಬಹುವ್ಯತ್ಯಾಸೋಽಸ್ತಿ ತತ್ಸರ್ವಂ ತತ್ ಪದಾರ್ಥನಿರೂಪಣ ಪ್ರಸ್ತಾವೇ ದರ್ಶಯಿಷ್ಯಾಮಃ । ಪ್ರಮೇಯತ್ವಂ ಪದಾರ್ಥ ಸಾಮಾನ್ಯ ಲಕ್ಷಣಂ ಸ್ಫುಟತಯಾ ಉಪೇಕ್ಷ್ಯ ವಿಭಾಗ ಏವ ಆದೌಕೃತಃ ।**

ತತ್ವಸಂಖ್ಯಾನ ಬೃಹದ್ಭಾಷ್ಯಾದಿ ಗ್ರಂಥಗಳಲ್ಲಿ ಸಂಕ್ಷೇಪವಾಗಿಯೂ ಹಾಗೂ ವಿಸ್ತಾರಗಳಿಂದಲೂ ಪದಾರ್ಥಗಳ ತತ್ವಜ್ಞಾನವು ಮೋಕ್ಷ ಸಾಧನವೆಂಬ ಅಭಿಪ್ರಾಯದಿಂದಲೇ ಪದಾರ್ಥಗಳ ಸಾಮಾನ್ಯತಃ ವಿಭಾಗ ಪ್ರಸಕ್ತಿಯು, ಇಲ್ಲಿ ತಾರ್ಕಿಕಾದಿಗಳು ವಿಶಿಷ್ಟ, ಅಂಶಿ, ಶಕ್ತಿ, ಸಾದೃಶ್ಯಾದಿಗಳನ್ನು ಪದಾರ್ಥಾಂತರವಾಗಿ ನಿರೂಪಿಸಿರುವುದರ ಖಂಡನೆಯು, ಹಾಗೂ ಅಪ್ರಾಮಾಣಿಕ ಸಮವಾಯದ ನಿರಾಸವೂ ಉದ್ದೇಶ್ಯವಾಗಿ ವಿಭಾಗದ ಕ್ರಮವು ಆಗಿರುವುದರಿಂದ ಪೂರ್ವಾಚಾರ ವಿಭಾಗ ವಿರೋಧವು ಬರುವುದಿಲ್ಲ ತಾರ್ಕಿಕರಿಂದ ಅಂಗೀಕೃತವಾದ ದ್ರವ್ಯ ಗುಣಾದಿಗಳಲ್ಲೂ ಬಹು ವ್ಯತ್ಯಾಸವಿರುತ್ತದೆ. ಅವುಗಳನ್ನು ಆ ಪದಾರ್ಥ ನಿರೂಪಣಾ ಪ್ರಸಂಗದಲ್ಲಿ ತೋರಿಸುತ್ತೇವೆ ಮೊದಲು ಲಕ್ಷಣವನ್ನು ಹೇಳಿ ವಿಭಾಗವನ್ನು ಮಾಡಬೇಕು ಆದುದರಿಂದ ಪದಾರ್ಥಗಳ ವಿಭಾಗವನ್ನು ಹೇಗೆ ಮಾಡಿದರೋ ? ಎಂದರೆ, ಯಥಾರ್ಥ ಜ್ಞಾನ ವಿಷಯಕತೆಯೇ ಪದಾರ್ಥ ಸಾಮಾನ್ಯ ಲಕ್ಷಣವು ಸುಸ್ಪಷ್ಟವೇ ಆದುದರಿಂದ ಲಕ್ಷಣವನ್ನು ಹೇಳದೇ ಮೊದಲು ವಿಭಾಗವನ್ನೇ ಮಾಡಿರುತ್ತಾರೆ

**ದ್ರವ್ಯ ಸಾಮಾನ್ಯ ಲಕ್ಷಣಸ್ಯ ಉತ್ತರತ್ರ ವಕ್ಷ್ಯಮಾಣತ್ವಾತ್ ಪ್ರಥಮೋದ್ದಿಷ್ಟಂ ದ್ರವ್ಯಂ ವಿಭಜತಿ ।**

**ತತ್ರ ದ್ರವ್ಯಾಣಿ । ಪರಮಾತ್ಮ ಲಕ್ಷ್ಮೀ ಜೀವಾಃ ಅವ್ಯಾಕೃತಾಕಾಶ ಪ್ರಕೃತಿಃ ಗುಣತ್ರಯಾಃ । ಮಹತ್ತತ್ವಂ ಅಹಂಕಾರತತ್ವಂ ಬುದ್ಧಿಃ ಮನಃ ಇಂದ್ರಿಯ ಮಾತ್ರಾಭೂತ ಬ್ರಹ್ಮಾಂಡಾವಿದ್ಯಾವರ್ಣಾಂಧಕಾರ ವಾಸನಾ ಕಾಲ ಪ್ರತಿಬಿಂಬ ಭೇದಾತ್ ವಿಂಶತಿರೇವ ।**

**ಅಸ್ಯ ವಿಂಶತಿರೇವೇತ್ಯನೇನ ಸಂಬಂಧಃ ಏವ ಕಾರೇಣ ತಾರ್ಕಿಕೋಕ್ತ ವಿಭಾಗೋಽಪ್ರಮಾಣಿಕಃ ಪ್ರಮಾಣ ವಿರೋಧಶ್ಚೇತಿ ಸೂಚಯತಿ । ಪ್ರಕೃತಿ ಗುಣತ್ರಯಾದೀನಾಂ ಪ್ರಾಮಾಣಿಕತ್ವೇನ ದುರಪಪನ್ನತ್ವಾತ್ ಪೃಥಿವ್ಯಾದಿ ನವ ದ್ರವ್ಯೇಷ್ವಂತರ್ಭಾವಾಸಂಭವಾಚ್ಚ ಪೃಥಗ್ದ್ರವ್ಯತ್ವಂ ಯುಕ್ತಮಿತಿ ಭಾವಃ । ತದುಕ್ತಂ ವೈಶೇಷಿಕಾಧಿಕರಣ ಸುಧಾಯಾಂ । ಯದುಕ್ತಂ ವೈಶೇಷಿಕಾದಿಭಿಃ ಪೃಥಿವ್ಯಾದಿ ನವೈವ ದ್ರವ್ಯಾಣೀತಿ ತದಸತ್ ।**

**ಅಹಂಕಾರಾದೀನಾಮಪಿ ಸತ್ವಾದಿತಿ । ಏತೇಷಾಂ ಚ ಯಥಾ ದ್ರವ್ಯತ್ವಂ ತಥಾ ತತ್ತದವಸರೇ ವಕ್ಷ್ಯಾಮಃ ।**

ದ್ರವ್ಯ ಸಾಮಾನ್ಯದ ಲಕ್ಷಣವನ್ನು ಮುಂದೆ ಹೇಳುವವರಿರುವುದರಿಂದ ಪ್ರಥಮದಲ್ಲಿ ಉದ್ದಿಷ್ಟವಾದ ದ್ರವ್ಯವನ್ನು ವಿಭಜಿಸುತ್ತಾರೆ.

1. ಪರಮಾತ್ಮ 2. ಲಕ್ಷ್ಮೀದೇವಿ 3. ಜೀವರು 4. ಅವ್ಯಾಕೃತಾಕಾಶ 5. ಪ್ರಕೃತಿ 6. ಗುಣತ್ರಯ 7. ಮಹತ್ತತ್ವ 8. ಅಹಂಕಾರ ತತ್ವ 9. ಬುದ್ಧಿ ತತ್ವ 10 ಮನಸ್ಸು 11. ಇಂದ್ರಿಯ 12. ಮಾತ್ರಾ 13. ಭೂತ 14. ಬ್ರಹ್ಮಾಂಡ 15 ಅವಿದ್ಯೆ 16. ಆವರಣ 17. ಅಂಧಕಾರ 18. ವಾಸನೆ 19. ಕಾಲ 20. ಪ್ರತಿಬಿಂಬ.

ಹೀಗೆ ಭೇದಗಳಿಂದ ಇಪ್ಪತ್ತೇ ದ್ರವ್ಯಗಳಾಗಿರುತ್ತವೆ. ಇಲ್ಲಿಯ 'ಏವ'ಕಾರ ದಿಂದ ತಾರ್ಕಿಕರಿಂದ ಉಕ್ತ ವಿಭಾಗವು ಅಪ್ರಾಮಾಣಿಕವು, ಪ್ರಮಾಣ ವಿರುದ್ಧವೂ ಆಗಿರುತ್ತದೆ ಎಂದು ಸೂಚಿಸುತ್ತದೆ ಏಕೆಂದರೆ ಪ್ರಕೃತಿ ಗುಣತ್ರಯಾದಿಗಳು ಪ್ರಮಾಣಿಕಗಳಾಗಿ ಅನಿವಾರ್ಯ ದ್ರವ್ಯಗಳು ಆಗಿರುವುದರಿಂದ ತಾರ್ಕಿಕರು ನವದ್ರವ್ಯ ಗಳೆಂದು ಹೇಳಿರುವುದು ಅಪ್ರಮಾಣಿಕವು ಪ್ರಕೃತ್ಯಾದಿಗಳಿಗೆ ನವದ್ರವ್ಯಗಳಲ್ಲಿ ಅಂತರ್ಭಾವವು ಅಸಂಭಾವಿತವಾಗಿರುವುದರಿಂದ ಇದನ್ನೇ ವೈಶೇಷಿಕಾಧಿಕರಣ ಸುಧೆಯಲ್ಲಿ ವೈಶೇಷಿಕಾದಿಗಳಿಂದ (ತಾರ್ಕಿಕರಿಂದ) ಪೃಥಿವ್ಯಾದಿ ಒಂಭತ್ತು ದ್ರವ್ಯಗಳು ಎಂದು ಏನು ಹೇಳಲ್ಪಟ್ಟಿದೆ ಅದು ಅಯುಕ್ತವು ಮಹದಹಂಕಾರಾದಿ ಪ್ರತ್ಯೇಕ ದ್ರವ್ಯಗಳಿರುವುದರಿಂದ ಹೀಗೆ ಹೇಳಿರುತ್ತದೆ. ಇವುಗಳಿಗೆ ದ್ರವ್ಯತ್ವವು ಹೇಗೆ ಎಂಬುದನ್ನು ಆ ಪ್ರಕರಣಗಳಲ್ಲಿ ಹೇಳುತ್ತೇವೆ.

## ೩. ಗುಣ ಪ್ರಕರಣ

**ಗುಣಾನ್ ವಿಭಜತಿ ರೂಪ, ರಸ, ಗಂಧ, ಸ್ಪರ್ಶ, ಸಂಖ್ಯಾ,ಪರಿಮಾಣ, ಸಂಯೋಗ, ವಿಭಾಗ, ಪರತ್ವ, ಅಪ-ರತ್ವ, ದ್ರವತ್ವ, ಗುರುತ್ವ ,ಲಘುತ್ವ, ಮೃದುತ್ವ, ಕಾಠಿಣ್ಯ, ಸ್ನೇಹ, ಶಬ್ದ, ಬುದ್ಧಿ, ಸುಖ, ದುಃಖ, ಇಚ್ಛಾ, ದ್ವೇಷ, ಪ್ರಯತ್ನ, ಧರ್ಮ ಅಧರ್ಮ, ಸಂಸ್ಕಾರ, ಆಲೋಕ, ಶಮ, ದಮ, ಕೃಪಾ, ತಿತಿಕ್ಷಾ, ಬಲ, ಭಯ,ಲಜ್ಜಾ, ಗಾಂಭೀರ್ಯ ಸೌಂದರ್ಯ, ಧೈರ್ಯ, ಸ್ಥೈರ್ಯ, ಶೌರ್ಯ, ಔದಾರ್ಯ, ಸೌಭಾಗ್ಯ, ಪ್ರಭುತ್ವಾದಯೋ ಅನೇಕ ಗುಣಾಃ ॥**

**ಶಾಸ್ತ್ರೇ ಗುಣತ್ವೇನ ವ್ಯವಹಾರವಿಷಯತ್ವಂ ಗುಣ ಸಾಮಾನ್ಯ ಲಕ್ಷಣಂ। ನ ಚ ದುಃಖ ದ್ವೇಷಾಧರ್ಮೇಷ್ವವ್ಯಾಪ್ತಿರಿತಿ ವಾಚ್ಯಂ। ಸಜ್ಜನ ಕ್ಲೇಶಂ ನಿರೀಕ್ಷ್ಯ ಸ್ವಗತ ದುಃಖಸ್ಯ ತಮೋಯೋಗ್ಯೇಷು ದ್ವೇಷಸ್ಯ ಮಹತಾಂ ಪ್ರೀತ್ಯರ್ಥಮಧರ್ಮಸ್ಯ ಶಾಸ್ತ್ರೇ ತತ್ರ ತತ್ರ ಗುಣತ್ವೇನ ವ್ಯವಹಾರಾತ್ ।**

ಕ್ರಮ ಪ್ರಾಪ್ತವಾದ ಗುಣಗಳನ್ನು ವಿಭಜಿಸುತ್ತಾರೆ. 1. ರೂಪ 2. ರಸ 3. ಗಂಧ 4. ಸ್ಪರ್ಶ 5. ಸಂಖ್ಯೆ 6. ಪರಿಮಾಣ(ಪರಿಮಿತಿ) 7. ಸಂಯೋಗ 8 ವಿಭಾಗ 9. ಪರತ್ವ 10. ಅಪರತ್ವ 11. ದ್ರವತ್ವ 12. ಗುರುತ್ವ 13. ಲಘುತ್ವ 14. ಮೃದುತ್ವ 15. ಕಾಠಿಣ್ಯ 16. ಸ್ನೇಹ 17. ಶಬ್ದ 18. ಬುದ್ಧಿ 19. ಸುಖ 20 ದುಃಖ 21. ಇಚ್ಛೆ 22 ದ್ವೇಷ 23. ಪ್ರಯತ್ನ 24. ಧರ್ಮ 25. ಅಧರ್ಮ 26. ಸಂಸ್ಕಾರ 27. ಆಲೋಕ 28. ಶಮ 29. ದಮ 30. ಕೃಪೆ 31. ತಿತಿಕ್ಷ 32. ಬಲ 33. ಭಯ 34. ಲಜ್ಜೆ 35. ಗಾಂಭೀರ್ಯ 36. ಸೌಂದರ್ಯ 37. ಧೈರ್ಯ 38. ಸ್ಥೈರ್ಯ 39. ಶೌರ್ಯ 40. ಔದಾರ್ಯತೆ 41. ಸೌಭಾಗ್ಯ ಇವೇ ಮೊದಲಾದ ಅನೇಕ ಗುಣಗಳು ಶಾಸ್ತ್ರದಲ್ಲಿ ಗುಣಗಳೆಂದು(ಉತ್ಕರ್ಷತೆ ಪ್ರಾಪಕಗಳು) ವ್ಯವಹಾರ(ವಿಷಯತ್ವಂ) ಪಾತ್ರತೆಯೇ ಗುಣಸಾಮಾನ್ಯ ಲಕ್ಷಣವು. ದುಃಖ ದ್ವೇಷ ಅಧರ್ಮಾದಿಗಳಲ್ಲಿ ಈ ಗುಣಲಕ್ಷಣವು ಬರದೇ ಅವ್ಯಾಪ್ತವಾಗಲಿಲ್ಲವೇ ಎಂದರೆ ಹಾಗೆನಬಾರದು. ಸಜ್ಜನರ ಕ್ಲೇಶವನ್ನು ನೋಡಿ ತಾನು ದುಃಖಿಸುವುದು. ತಮೋಯೋಗ್ಯರಲ್ಲಿ ದ್ವೇಷಿಸುವುದು ಮಹಜ್ಜನರ ಪ್ರೀತಿಗಾಗಿ ಕಥಂಚಿತ್ ಅಧರ್ಮವನ್ನು ಆಚರಿಸುವುದು ಶಾಸ್ತ್ರದಲ್ಲಿ ಆ ಸ್ಥಳಗಳಲ್ಲಿ ಗುಣವೆಂದೇ ವ್ಯವಹಾರ ವಿಷಯಗಳಾಗಿವೆ.

**ಕೇಚಿತ್ತು ಸಾಮಾನ್ಯವಾನಸಮವಾಯಿಕಾರಣಮಸ್ಪಂದಾತ್ಮಾಗುಣ ಇತಿ ಸಾಮಾನ್ಯ ಲಕ್ಷಣಮಾಹುಃ। ತನ್ನ ಸಮವಾಯಸ್ಯ ನಿರಾಕರಿಷ್ಯಮಾಣತ್ವೇನಾಯುಕ್ತತ್ವಾತ್। ಕಿಂಚ ಗಗನಾದಿಗತ ಮಹತ್ಪರಿಮಾಣೇ ಪರಮಾಣು ಪರಿಮಾಣೇಚ ಅವ್ಯಾಪ್ತಿಃ। ನನು ಗುಣಕ್ರಿಯಾದೀನಾಂ ಗುಣ್ಯಾದ್ಯಭಿನ್ನತ್ವಾತ್ ವಿಭಾಗಾನುಪಪತ್ತಿಃ। ತಸ್ಯ ಭೇದಸಾಧ್ಯತ್ವಾತ್ ಇತಿಚೇನ್ನ। ಅಯಾವದ್ದ್ರವ್ಯಭಾವಿನಾಂ ಭೇದಾಭೇದಸ್ಯ ಯಾವದ್ದ್ರವ್ಯ ಭಾವಿನಾಂಚ ಅಭೇದೇಽಪಿ ಭೇದಪ್ರತಿನಿಧಿ ವಿಶೇಷಸ್ಯಚ ಸ್ವೀಕೃತತ್ವೇನ ವಿಭಾಗೋಪಪತ್ತೇಃ।**

**ಕೆಲವರು (ನೈಯಾಯಿಕಾದಿಗಳು) ಜಾತಿ ಉಳ್ಳದ್ದಾಗಿ ಅಸಮವಾಯಿ ಕಾರಣವಾಗಿಯೂ ಚಲನ ರಹಿತ ಸ್ವಭಾವವೇ ಗುಣಗಳ ಸಾಮಾನ್ಯ ಲಕ್ಷಣವೆಂದು**

ಹೇಳುತ್ತಾರೆ. ಇದು ಅಯುಕ್ತವು; ಸಮವಾಯ (ಸಂಬಂಧ) ವನ್ನು ಮುಂದೆ ನಿರಾಕರಿಸುತ್ತೇವೆ. ಆದ್ದರಿಂದ ಮತ್ತು ಗಗನಾದಿಗಳಲ್ಲಿಯು ಮಹತ್ಪರಿಮಾಣದಲ್ಲಿ ಪರಮಾಣುಗಳ ಪರಿಮಾಣ(ಪರಿಮಿತಿ)ದಲ್ಲಿ ಈ ಲಕ್ಷಣವು ಅವ್ಯಾಪ್ತವಾಗುವುದ ರಿಂದಲೂ ಗುಣ ಕ್ರಿಯಾದಿಗಳಿಗೆ ಗುಣಿಗಳಿಂದ ಕ್ರಿಯಾ ವಿಶಿಷ್ಟ ಪದಾರ್ಥಗಳಿಂದ ಅಭೇದವೇ ಇರುವುದರಿಂದ ಈ ಗುಣಗಳ ವಿಭಾಗವು ಅನುಪಪನ್ನವಲ್ಲವೆ ? ಎಂದರೆ ಅಲ್ಲ ಉಪಪನ್ನವೇ(ಯುಕ್ತವೇ) ಆಗಿರುತ್ತದೆ. ಯಾವದ್ದ್ರವ್ಯ(ದ್ರವ್ಯವಿರುವ ಪರ್ಯಂತರ ವಾಗಿಯೂ)ವಾದ ಗುಣಗಳಿಗೆ ಅಭೇದವನ್ನು ಅಯಾವದ್ದ್ರವ್ಯಭಾವೀ(ದ್ರವ್ಯವಿದ್ದರೂ ನಷ್ಟವಾಗುವ)ಗುಣಗಳಿಗೆ ಭೇದಾಭೇದವನ್ನು ಹೇಳಿ ಭೇದ ವ್ಯವಹಾರ ಸಿದ್ಧಿಗೋಸ್ಕರ ವಿಶೇಷವನ್ನು ಸ್ವೀಕರಿಸಿರುವುದರಿಂದ ವಿಭಾಗವು ಯುಕ್ತವೇ ಆಗಿರುತ್ತದೆ.

**ತದುಕ್ತಂ । ಖಂಡಿತೇ ಭೇದಃ ಐಕ್ಯಂಚ ಯಾವದ್ವಸ್ತು ನ ಭೇದವತ್ ಇತಿ ತತ್ವವಿವೇಕೇ । ತಥಾ ಸಾಮಸ್ತ್ಯೋದ್ಭೇದಿನೋಽನ್ಯತ್ರ ಧರ್ಮಾ ಉಭಯ ರೂಪಕಾಃ । ಭಾವೇತ ಏವ ಚೋಚ್ಛೇದಾತ್ ತದನ್ಯೇಚ ಸಮಸ್ತಶಃ । ಇತ್ಯನುವ್ಯಾಖ್ಯಾನೇಚ । ಏವಂಚ ಚತುರ್ವಿಂಶತಿ ಗುಣಾಃ ಇತಿ ವಿಭಾಗೋ ನಯುಕ್ತಃ ಗಾಂಭೀರ್ಯಾದೀನಾಮಪಿ ಗುಣತ್ವೇನ ಶಾಸ್ತ್ರೇ ವ್ಯವಹಾರಾತ್ । ಅತಸ್ತದಪಲಾಪೋ ನಯುಕ್ತಃ ಇತಿ ಭಾವಃ ।**

ಇದನ್ನೇ ತತ್ವ ವಿವೇಕದಲ್ಲಿ ಹೀಗೆ ಹೇಳಿರುತ್ತದೆ ಗುಣವು ಖಂಡಿತವಾದರೆ (ಬೇರೆ) ಗುಣ ಗುಣಿಗಳಿಗೆ ಭೇದಾಭೇದವೇ ಹಣ್ಣುಗಳಂತೆ (ಅಖಂಡಿತವಾಗಿದ್ದರೆ) ಬೇರೆಯಾಗದ (ಗುಣಕ್ಕೆ) ವಸ್ತುವಿನಿಂದ ಅಭೇದವೇ (ಹಾಲಿನಂತೆ) ಎಂದು. ಮತ್ತು ಅನುವ್ಯಾಖ್ಯಾನದಲ್ಲಿಯೂ ದ್ರವ್ಯ ಸಾಮನ್ಯಗುಣವೆಂದು ದ್ರವ್ಯಾಭಿನ್ನಗುಣವೆಂದು ಎರಡು ವಿಧವಾಗಿರುತ್ತದೆ. ದ್ರವ್ಯಸಾಮನ್ಯ ಎಂದರೆ ಯಾವದ್ರವ್ಯಭಾವಿ ದ್ರವ್ಯ ಭಿನ್ನವೆಂದರೆ ಅಯಾವದ್ರವ್ಯಭಾವೀ(ಬದಲಾಗುವುಗಳು) ಹೀಗಿರುವಲ್ಲಿ ಯಾವ ದ್ರವ್ಯ ಭಾವಿ ಗುಣಗುಣಿಗಳಿಗೆ ಅಭೇದಾಭೇದವೇ ತಿಳಿಯಬೇಕು. ಹೀಗೆ ಶ್ರೀಮದಾ ಚಾರ್ಯರು ಹೇಳಿರುತ್ತಾರೆ. ಒಟ್ಟಿನಲ್ಲಿ 24 ಗುಣಗಳೆಂದು ನೈಯಾಯಿಕರು ಹೇಳಿ ರುವುದು ಅಯುಕ್ತವೇ ಆಗಿರುತ್ತದೆ. ಗಾಂಭೀರ್ಯಾದಿಗಳಿಗೆ ಗುಣಗಳೆಂದು ಶಾಸ್ತ್ರದಲ್ಲಿ ಸ್ಪಷ್ಟ ವ್ಯವಹಾರವಿರುವುದರಿಂದ ಅವುಗಳಿಗೆ ಗುಣಾಪಲಾಪವು (ಗುಣಗಳಿಂದ ಅಲ್ಲ ಗಳೆಯುವಿಕೆಯೂ) ಯುಕ್ತವಲ್ಲ. ಉತ್ಕರ್ಷ ಪ್ರಾಪಕಗುಣಗಳು ಅನೇಕಗಳೆಂದು ವಿಭಾಗಿಸಿರುವುದೇ ಯೋಗ್ಯವಾಗಿರುತ್ತದೆ.

# ೪. ಕರ್ಮ ಪ್ರಕರಣ

ಕ್ರಮ ಪ್ರಾಪ್ತವಾದ ಕರ್ಮವನ್ನು ವಿಭಜಿಸುತ್ತಾರೆ.

**ವಿಹಿತ ನಿಷಿದ್ಧ ಉದಾಸೀನ ಭೇದೇನ ತ್ರಿವಿಧಂ ಕರ್ಮ ।**

**ಸಾಕ್ಷಾತ್ ಪರಂಪರಯಾವಾ ಪುಣ್ಯಪಾಪಾಸಾಧಾರಣ ಕಾರಣತ್ವಂ ಕರ್ಮೇತಿ ಸಾಮಾನ್ಯ ಲಕ್ಷಣಂ । ಉತ್ಕ್ಷೇಪಣಾದೀನಾಮಪಿ ಪರಂಪರಯಾ ಧರ್ಮಾಧರ್ಮ ಹೇತುತ್ವಾತ್ ನಾವ್ಯಾಪ್ತಿಃ ನಕುರ್ಯಾನ್ ನಿಷ್ಫಲಂ ಕರ್ಮೇತಿ ಶ್ರುತೇಃ ವ್ಯರ್ಥ ಕರ್ಮಣೋಽಪಿ ಪಾಪಸಾಧನತ್ವಮಿತಿ ಭಾವಃ । ಕೇಚಿತ್ತು ಗುಣಭಿನ್ನತ್ವೇಸತಿ ಅಸಮವಾಯಿ ಕಾರಣತ್ವಂ ಕರ್ಮ ಲಕ್ಷಣಮಾಹುಃ । ತತ್ತುಚ್ಛಂ । ಸಮವಾಯಸ್ಯ ನಿರಾಕರಿಷ್ಯ ಮಾಣತ್ವಾತ್ । ಕಿಂ ಚ ಈಶ್ವರ ಕ್ರಿಯಾಯಾಮವ್ಯಾಪ್ತೇಶ್ಚ । ನಚ ತಸ್ಯಾಪಿ ಪ್ರದೇಶಾಂತರ ಸಂಯೋಗಾಸಮವಾಯಿ ಕಾರಣತ್ವಂ ಇತಿ ವಾಚ್ಯಂ । ಸರ್ವದಾ ಸರ್ವದೇಶ ಸಂಯೋಗಸ್ಯ ಈಶ್ವರೇ ಸತ್ವೇನ ಪುನರ್ಜನನಾಯೋಗಾತ್ ।**

ಕ್ರಮ ಪ್ರಾಪ್ತವಾದ ಮೂರನೇ ಪದಾರ್ಥವೆನಿಸಿದ ಕರ್ಮವನ್ನು ನಿರೂಪಿಸುತ್ತಾರೆ. ಸಾಕ್ಷಾತ್(ನೇರವಾಗಿ) ಪರಂಪರೆಯಾಗಿ ವಿಹಿತ ನಿಷಿದ್ಧ ಉದಾಸೀನ ಭೇದೇನ ತ್ರಿವಿಧವಾದ ಕರ್ಮವು, ಪಾಪ ಪುಣ್ಯಗಳಿಗೆ ಅಸಾಧಾರಣ ಕಾರಣವಾಗಿರುವುದೇ ಕರ್ಮ ಸಾಮಾನ್ಯ ಲಕ್ಷಣವು. ಎತ್ತುವುದು ಒಗೆಯುವಿಕೆಯೇ ಮೊದಲಾದ ಉದಾಸೀನಾದಿ ಕರ್ಮಗಳಿಗೂ ಪರಂಪರೆಯಾಗಿ ಧರ್ಮಾಧರ್ಮ ಕಾರಣತೆ ಇರುವುದರಿಂದ ಅಲ್ಲೂ ಲಕ್ಷಣ ಸಮನ್ವಯವಾಗಿಅವ್ಯಾಪ್ತಿ ಬರುವುದಿಲ್ಲ ಮತ್ತು 'ನಕುರ್ಯಾತ್ ನಿಷ್ಫಲಂ ಕರ್ಮ' ವ್ಯರ್ಥ ಕ್ರಿಯೆಗಳನ್ನು ಮಾಡಬಾರದು ಎಂದು ಶ್ರುತಿಯು ವ್ಯರ್ಥ ಕ್ರಿಯೆಗಳಿಗೆ ಪಾಪ ಸಾಧನತ್ವವು ಹೇಳಿರುತ್ತದೆ.

ಕೆಲವರು ಗುಣಗಳಿಂದ ಭಿನ್ನವಾಗಿ ಅಸಮವಾಯಿಕಾರಣವಾಗಿರುವವುಗಳೇ ಕರ್ಮಗಳೆಂದು ಕರ್ಮಸಾಮಾನ್ಯ ಲಕ್ಷಣವನ್ನು ಹೇಳುತ್ತಾರೆ. ಅದು ಸರ್ವಾಪದ್ಧವು ಸಮವಾಯವನ್ನು ಮುಂದೆ ನಿರಾಕಾರಣ ಮಾಡುವುದರಿಂದ ಮತ್ತು ಈ ಲಕ್ಷಣವು ಈಶ್ವರನ ಕ್ರಿಯೆಯಲ್ಲಿ ಅವ್ಯಾಪ್ತವೂ ಆಗಿರುತ್ತದೆ ಪ್ರದೇಶಾಂತರ ಸಂಯೋಗ ಸಮವಾಯಿ ಕಾರಣತ್ವವು ಈಶ್ವರನ ಕ್ರಿಯೆಯಲ್ಲಿ ಉಂಟು ಎನ್ನಬಹುದಷ್ಟೇ ಎಂದರೆ ಅದು ತಪ್ಪಾಗುತ್ತದೆ. ಸರ್ವದಾ ಸರ್ವದೇಶ ಸಂಯೋಗವು ಈಶ್ವರನಲ್ಲಿ ಇರುವುದರಿಂದ ಸಂಯೋಗರೂಪವಾದ ಅಸಮವಾಯಿಕಾರಣತ್ವವು ಈಶ್ವರನ ಕ್ರಿಯೆಯಲ್ಲಿ ಪುನಃ ಹುಟ್ಟುವದಿಲ್ಲವಾದ್ದರಿಂದ ಅವ್ಯಾಪ್ತಿಯು ಬರುವುದರಿಂದ ಈ ಲಕ್ಷಣವು ದುಷ್ಟವೇ ಆಗಿರುತ್ತದೆ.

ವಿಧಿ ಚೋದಿತಂ ಯಜ್ಞಾದಿ ವಿಹಿತಂಕರ್ಮ । ನಕಲಂಜಂ ಭಕ್ಷಯೀತೇತ್ಯಾದಿ ನಿಷಿದ್ಧಂ । ವಿಹಿತವಿಭಾಗಮಾಹ

ವಿಹಿತಮಪಿ ಕಾಮ್ಯಾಕಾಮ್ಯ ಭೇದೇನ ದ್ವಿವಿಧಂ ।

ಫಲೇಚ್ಛಯಾ ಕೃತಂ ಕರ್ಮ ಕಾಮ್ಯಂ । ಈಶ್ವರ ಪ್ರಸಾದಾರ್ಥಂ ಕೃತಂ ಕರ್ಮ ಅಕಾಮ್ಯಂ ಇತ್ಯರ್ಥಃ। ತದುಭಯ ಕರ್ಮಣೋರಾಶ್ರಯಮಾಹ।

ತಚ್ಚ ಬ್ರಹ್ಮಾದಿ ಸರ್ವ ಜೀವನಾಂ ।

ನನು ಬ್ರಹ್ಮವಾಯು ಸ್ವರಸ್ವತೀಭಾರತೀನಾಂ ಭಗವತ್ ಜ್ಞಾನ ಭಕ್ತಿ ವಿನಾ ನ್ಯತ್ರ ಕಾಮನೈವ ನಾಸ್ತಿ । ತಥಾಹಿ । ಮಹಾಭಾರತ ತಾತ್ಪರ್ಯ ನಿರ್ಣಯೇ । ಜ್ಞಾನಭಕ್ತೀ ಹರೇ ಸ್ತೃಪ್ತಿಂ ವಿನಾ ವಿಷ್ಣೋರಪಿ ಕ್ವಚಿತ್ । ನಾಕಾಙ್ಕ್ಷ್ಯಂ ಕಿಮುತಾನ್ಯೇಭ್ಯೋಽಹ್ಯಸ್ತ್ರಂ ಕಾಮ್ಯ ಫಲಪ್ರದಂ । ಶುದ್ಧೇ ಭಾಗವತೇ ಧರ್ಮೇ ನಿರತೋ ಯತ್ ವೃಕೋದರಃ । ನಕಾಮ್ಯಕರ್ಮ ಕೃತ್ತಸ್ಮಾನ್ನಾಯಾಚ ದೇವಮಾನುಷಾನ್ । ನಹರಿಶ್ಚಾರ್ಥಿತಸ್ತೇನ ಕದಾಚಿತ್ ಕಾಮಲಿಪ್ಸಯಾ। ಅನ್ಯೇನಮೇವ ತದ್ಧರ್ಮೆ ಕೃಷ್ಣೈಕಾ ಸಂಸ್ಥಿತಾ ಸದಾ । ಧೃತರಾಷ್ಟ್ರಾದಪಿ ವರಂ ತತೋ ನಾತ್ಮಾರ್ಥಮಗ್ರಹೀತ್ । ತಸ್ಮಾದೇಕೋ ವಾಯುರೇವ ಧರ್ಮೇ ಭಾಗವತೇ ಸ್ಥಿತಃ ।

ಸಾಕ್ಷಾತ್ ಪರಂಪರೆಯಾಗಿ ಪಾಪ ಪುಣ್ಯ ಕಾರಣತೆಯೇ ಕರ್ಮ ಸಾಮಾನ್ಯ ಲಕ್ಷಣವೆಂದು ಹೇಳಿ ಅದರಲ್ಲಿ ವಿಭಕ್ತವಾದ ವಿಹಿತ ಕರ್ಮವೆಂದರೆ ವಿಧಿಬದ್ಧ ಯಜ್ಞಾದಿಗಳು ಅರ್ಥಾತ್ ಶಾಸ್ತ್ರ ವಿಹಿತ ಕರ್ಮವೇ ವಿಹಿತ ಕರ್ಮವು.

"ನಕಲಂಜಂ ಭಕ್ಷಯೀತ್" ಇತ್ಯಾದಿ ವಿಧಿನಿಷಿದ್ಧವಾದುದೇ ನಿಷಿದ್ಧ ಕರ್ಮ ಲಕ್ಷಣವು. ಹೀಗೆ ಹೇಳಿ ವಿಹಿತ ಕರ್ಮ ವಿಭಾಗವನ್ನು ಹೇಳುತ್ತಾರೆ. ವಿಹಿತ ಕರ್ಮವಾದರೂ ಕಾಮ್ಯಾಕಾಮ್ಯಗಳೆಂದು ಎರಡು ವಿಧಗಳಾಗಿರುತ್ತದೆ. ಭಗವದನುಗ್ರಹ ಅತಿರಿಕ್ತ ಫಲ ಇಚ್ಛೆಯಿಂದ ಮಾಡುವ ಕ್ರಿಯೆಯೇ ಕಾಮ್ಯ ಕರ್ಮವು, ಕೇವಲ ಭಗವತ್ಪ್ರಸಾದಾರ್ಥವಾಗಿಯೇ ಅವನ ಪ್ರೀತ್ಯರ್ಥವಾಗಿಯೇ ಮಾಡುವ ಕರ್ಮವೇ ನಿಷ್ಕಾಮ ಕರ್ಮವು. ಈ ಎರಡು ವಿಧ ವಿಹಿತ ಕರ್ಮಗಳಿಗೆ ಬ್ರಹ್ಮರುದ್ರಾದಿ ಸರ್ವ ಜೀವರುಗಳು ಆಶ್ರಿತರು. ಬ್ರಹ್ಮವಾಯು ಸರಸ್ವತಿ ಭಾರತಿಯರಿಗೆ ಭಗವಂತನ ಜ್ಞಾನ ಅವನಲ್ಲಿ ಭಕ್ತಿ ವಿನಃ ಬೇರೆ ಕಾಮನೆಯೇ ಇರುವುದಿಲ್ಲ. ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಸ್ಪಷ್ಟವಾಗಿ ಈ ನಾಲ್ವರಿಗೆ ಭಗವಂತನ ಜ್ಞಾನ ಭಕ್ತಿ ತೃಪ್ತಿ ವಿನಃ ಎಂದಿಗೂ ಬೇರೇ ಇಚ್ಛೆ ಇರುವುದಿಲ್ಲ ಅಂತೆಯೇ ಭೀಮಸೇನ ದೇವರು ಕಾಮ್ಯ ಫಲವಾದ ಶೈವಾದಿ ಅಸ್ತ್ರಗಳನ್ನು ದ್ರೋಣರಿಂದ ಅಪೇಕ್ಷಿಸುವವರಾಗಲಿಲ್ಲ. ಶುದ್ಧವಾದ ಭಾಗವತಧರ್ಮದಲ್ಲಿ ನಿರತನೆಂದರೆ ವೃಕೋದರನೇ (ಭೀಮಸೇನನೇ) ಆದ್ದರಿಂದಲೇ ಎಂದಿಗೂ ಯಾವಕಾರಣದಿಂದಲೂ ದೇವ ಮನುಷ್ಯರುಗಳನ್ನು ಏನೂ

ಬೇಡುವವನಾಗಲಿಲ್ಲ. ಕಾಮ್ಯ ಫಲೇಚ್ಛೆಯಿಂದ ಎಂದಿಗೂ ಶ್ರೀಕೃಷ್ಣನನ್ನೇ ಏನನ್ನೂ ಬೇಡಿದವನಲ್ಲ. ಇವನನ್ನು ಅನುಸರಿಸಿ ಭಾರತೀದೇವಿಯು (ದ್ರೌಪದಿಯು) ಶುದ್ಧ ಭಾಗವತ ಧರ್ಮದಲ್ಲಿ ಇವನಂತೇ ಆಸಕ್ತಳಾದವಳು. ದ್ರೌಪದಿಯು ಒಂದು ಪ್ರಸಂಗ ದಲ್ಲಿ ಧೃತರಾಷ್ಟ್ರನಿಂದ ವರವನ್ನು ಬಯಸಿದರೂ ಸ್ವಾರ್ಥವಾಗಿ ಬೇಡಿದವಳಲ್ಲ.

**ಲಕ್ಷ್ಮೀಃ ಸರಸ್ವತೀಚೇತಿ ಪರಶುಕ್ಲತ್ರಯಂ ಸ್ಮೃತಂ । ಅತಃ ಕಥಂ ಬ್ರಹ್ಮಾದಿ ಚತುರ್ಣಾಂ ಕಾಮ್ಯ ಕರ್ಮೇತಿ ಚೇದುಚ್ಯತೇ । ಬ್ರಹ್ಮಣಃ ಸತ್ಯಲೋಕಾಧಿಪತ್ಯರೂಪಂ ಪದಂ ವಾಯೋಶ್ಚ ವಾಯುಪದಂ ಪ್ರಾರಬ್ಧಕರ್ಮ ಫಲಂ । ಅನ್ಯಥಾ 'ಜ್ಞಾನೋದಯಾನಂತರಮೇವ ಮುಕ್ತಿಸ್ಯಾತ್ । ಪ್ರಾರಬ್ಧ ಕರ್ಮಚ ಕಾಮ್ಯಮೇವ । ನತು ನಿವೃತ್ತಂ ಕರ್ಮ । ತಸ್ಯಾಪರೋಕ್ಷ ಜ್ಞಾನ ಹೇತುತ್ವೇನ ಚರಿತಾರ್ಥತ್ವಾತ್ । ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತ ಇತಿ ಗೀತೋಕ್ತೇಃ। ತದ್ಭಾಷ್ಯೇಽಪಿ ನಿವೃತ್ತಾದೀನಿ ಕರ್ಮಾಣಿ ಅಪರೋಕ್ಷೇಶದೃಷ್ಟಯೇ । ಅಪರೋಕ್ಷ ದೃಶಿಶ್ಚೈವ ಮುಕ್ತ್ಯೈ ಕಿಂಚಿನ್ ನಮಾರ್ಗತಾಃ ಇತಿ ।**

ಆದುದರಿಂದಲೇ ಪರಮಾತ್ಮ, ಲಕ್ಷ್ಮೀದೇವಿ, ಬ್ರಹ್ಮ ವಾಯು ಸರಸ್ವತಿ ಭಾರತಿ ಈ ನಾಲ್ವರು ಒಂದಾಗಿ ಪರಶುಕ್ಲತ್ರಯರೆಂದು ಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ. ಹೀಗಿರಲು ಬ್ರಹ್ಮಾದಿ ನಾಲ್ವರಿಗೂ ಕಾಮ್ಯ ಕರ್ಮಾಶ್ರಯತೆ ಹೇಗೆ ಹೇಳಿದಿರಿ ? ಎಂದರೆ ಹೇಳುತ್ತಾರೆ.

ಬ್ರಹ್ಮದೇವರಿಗೆ ಸತ್ಯಲೋಕಾಧಿಪತ್ಯರೂಪವಾದ ಸ್ಥಾನವು ವಾಯುದೇವರಿಗೆ ಲೋಕ ರಕ್ಷಕತೆ ರೂಪ ವಾಯುಪದವು ಪ್ರಾರಬ್ಧಕರ್ಮ ಫಲವೇ ಆಗಿರುತ್ತದೆ. ಹಾಗಿಲ್ಲವಾದರೆ ಭಗವಂತನ ಅಪರೋಕ್ಷ ಜ್ಞಾನಾನಂತರ ಮೋಕ್ಷವೇ ಆಗಬೇಕಾಗಿದ್ದಿತು ಪ್ರಾರಬ್ಧ ಕರ್ಮವು ಕಾಮ್ಯ ಕರ್ಮವೇ ಆಗಿರುತ್ತದೆ. ನಿವೃತ್ತಿ ಕರ್ಮವಾಗಿರುವುದಿಲ್ಲ. ಪ್ರಾರಬ್ಧ ಕರ್ಮಕ್ಕೆ ಭಗವದಪರೋಕ್ಷ ಜ್ಞಾನ ಕಾರಣತೆಯಿಂದಲೇ ಪರ್ಯವಸಾನತೆ ಇರುವುದರಿಂದ ಅಂತೆಯೇ ಗೀತೆಯಲ್ಲಿ ಶ್ರೀಕೃಷ್ಣನು ಪಾರ್ಥನೇ ಎಲ್ಲ ಕರ್ಮಗಳು ಭಗವತ್ ಜ್ಞಾನದಲ್ಲಿಯೇ ಪರ್ಯವಸಾನವನ್ನು ಹೊಂದುತ್ತದೆ ಎಂದು ಹೇಳಿರುತ್ತಾನೆ. ಗೀತಾಭಾಷ್ಯದಲ್ಲಿಯಾದರೂ ನಿವೃತ್ತಾದಿಕರ್ಮಗಳೆಲ್ಲವೂ ಭಗವಂತನ ಅಪರೋಕ್ಷಾರ್ಥ ವಾಗಿಯೇ ಭಗವದಪರೋಕ್ಷ ಜ್ಞಾನವಾದರೂ ಮುಕ್ತಿಗೋಸ್ಕರವಾಗಿ ಎಂದು ಹೇಳಿರುತ್ತದೆ. ಮತ್ತು ಪ್ರಾರಬ್ಧ ಕರ್ಮಕ್ಕೆ ಕಾಮ್ಯ ಕರ್ಮತ್ವವು ಕರ್ಮ ಕ್ಷಯ ಅಧಿಕರಣ ಟೀಕಾದಲ್ಲಿ ಉಕ್ತವಾಗಿದೆ.

**ಪ್ರಾರಬ್ಧಸ್ಯ ಕಾಮ್ಯಕರ್ಮತ್ವಂಚ ಕರ್ಮಕ್ಷಯಾಧಿಕರಣ ಟೀಕಾಯಾಂ ಉಕ್ತಂ । ತಥಾಹಿ ತತ್ರ ಟೀಕಾ ಅತ್ರಾಪ್ಯಸ್ತಿ ವಿಶೇಷಃ ।**

**ಪೂರ್ವತನಂ ಕಾಮ್ಯಪುಣ್ಯಂ ದ್ವಿವಿಧಂ । ಪ್ರಾರಬ್ಧಂ ಅಪ್ರಾರಬ್ಧಂ ಚೇತಿ । ಪ್ರಾರಬ್ಧಸ್ಯ ನಾಸ್ತಿ ನಾಶಃ । ಅಪ್ರಾರಬ್ಧಂ ಚ ದ್ವಿವಿಧಂ । ಇಷ್ಟಂ ಅನಿಷ್ಟಂಚ । ತತ್ರೇಷ್ಟಮಪಿನ ನಶ್ಯತೀತ್ಯಾದಿ । ನಚ ಬ್ರಹ್ಮಣೋ ಬ್ರಹ್ಮ ಪದಂ ವಾಯುತ್ವಾವಸ್ಥಾಯಾಂ ಹನುಮದವತಾರೇ ರಾಮ ಸೇವಾ ಫಲತ್ವೇನ । ಭೀಮಾವತಾರೇ ಜರಾಸಂಧ ಹನನ ರಾಜಸೂಯಾದಿ ಕರ್ಮಫಲತ್ವೇನ ಚ ನಿರ್ಣಯೋಕ್ತೇಃ । ನ ಪ್ರಾರಬ್ಧಕರ್ಮಫಲ ಮಿತಿ ವಾಚ್ಯಂ । ಪ್ರಾರಬ್ಧೇನೈವ ರಾಜಸೂಯಸ್ಯಾಪಿ ಕಾರಣ ಸಂಭವಾತ್। ಪ್ರಾರಬ್ಧ ಕರ್ಮಣೈವ ಕ್ಲುಪ್ತ ಫಲ ಸೂಚಕತ್ವೇನೇದಾನೀಂತನ ಕರ್ಮಣ ಉಪಯೋಗಸ್ಯ ವಕ್ಷ್ಯಮಾಣತ್ವಾಚ್ಚ । ಅತೋ ಬ್ರಹ್ಮಣೋಽಪಿ ಕಾಮ್ಯ ಕರ್ಮ ಅಸ್ತ್ಯೇವ । ನಚೋಕ್ತ ಪ್ರಮಾಣ ವಿರೋಧಃ ।**

ಪ್ರಾರಬ್ಧ ಕರ್ಮಕ್ಕೆ ಕಾಮ್ಯ ಕರ್ಮತ್ವವು ಕರ್ಮಕ್ಷಯಾಧಿಕರಣ(ಸುಧೆಯಲ್ಲಿ) ಟೀಕಾದಲ್ಲಿ ಹೀಗೆ ಹೇಳಿರುತ್ತದೆ. ಈ ವಿಷಯದಲ್ಲಿ ವಿಶೇಷವೂ ಇರುತ್ತದೆ. ಪೂರ್ವ ಜನ್ಮಗಳ ಕಾಮ್ಯ ಪುಣ್ಯವು ಎರಡು ವಿಧವಾಗಿರುತ್ತದೆ. ಪ್ರಾರಬ್ಧ ಅಪ್ರಾರಬ್ಧಗಳೆಂದು, ಪ್ರಾರಬ್ಧ ಕರ್ಮಕ್ಕೆ ನಾಶವಿರುವುದಿಲ್ಲ. ಅಪ್ರಾರಬ್ಧವು ಎರಡು ವಿಧವಾಗಿರುತ್ತದೆ. ಇಷ್ಟಾನಿಷ್ಟಗಳೆಂದು, ಅವುಗಳಲ್ಲಿ ಇಷ್ಟವಾದ ಕರ್ಮಕ್ಕೂ ನಾಶವಿರುವದಿಲ್ಲ. ಇತ್ಯಾದಿ ಯಾಗಿ ಹೇಳಿರುತ್ತದೆ. ಬ್ರಹ್ಮ ದೇವರಿಗೆ ಸತ್ಯಾಧಿಪತ್ಯ ರೂಪಸ್ಥಾನವು ತಾನು ವಾಯುತ್ವಾವಸ್ಥೆಯಲ್ಲಿ ಹನುಮದವತಾರದಿಂದ ರಾಮದೇವರ ಸೇವೆಯ ಫಲ ವಾಗಿಯೂ, ಭೀಮಾವತಾರದಲ್ಲಿ ಜರಾಸಂಧನ ವಧೆ ರಾಜಸೂಯಾದಿ ಕರ್ಮಗಳ ಫಲವಾಗಿಯೂ ನಿರ್ಣಯದಲ್ಲಿ ಹೇಳಿರುವುದರಿಂದ ಬ್ರಹ್ಮಸ್ಥಾನವು ಪ್ರಾರಬ್ಧ ಕರ್ಮ ಫಲವಲ್ಲ ಎನಬಹುದಲ್ಲವೇ ? ಎಂದರೆ ಹಾಗೆನಬಾರದು ಪೂರ್ವ ಜನ್ಮದ ಪ್ರಾರಬ್ಧ ದಿಂದಲೇ ರಾಜಸೂಯಾದಿ ಯಜ್ಞಗಳ ಮಾಡವಿಕೆ ಸಂಭವಿಸಿರುವುದರಿಂದ ಪ್ರಾರಬ್ಧ ಕರ್ಮದಿಂದಲೇ ಕ್ಲೃಪ್ತ ಫಲಗಳ ಸೂಚಕತೆ ಇರುವುದರಿಂದ ಪ್ರಕೃತ ಪ್ರಸಕ್ತವಾದ ಕರ್ಮಗಳಿಗೂ ಪ್ರಾರಬ್ಧ ಕರ್ಮ ಫಲವಾಗಿಯೇ ಮುಂದೂ ಹೇಳುವುದರಿಂದ ಬ್ರಹ್ಮ ದೇವರಿಗೂ ಕಾಮ್ಯಕರ್ಮವು (ಪ್ರಾರಬ್ಧ ರೂಪವಾದ) ಇದ್ದೇ ಇರುತ್ತದೆ. ಈ ವಿಷಯದಲ್ಲಿ ಪ್ರಮಾಣ ವಿರೋಧಗಳು ಬರುವುದಿಲ್ಲ

**ಕೇವಲಮಾತ್ಮಭೋಗಾರ್ಥಮಿತರ ಪುರುಷವತ್ ಬ್ರಹ್ಮಣೋನ ಕಾಮನ । ಕಿಂತು ಸತ್ಯಲೋಕಾಧಿಪತ್ಯಂ ಜಗತ್ಸರ್ಜನಾದಿನಾ ಭಗವತ್ ಪ್ರೀತಯೇ ಸ್ಯಾದಿತ್ಯೇವಂ ರೂಪೇಣ ಕಾಮನಾಸದ್ಭಾವೇ ಬಾಧಕಾ ಭಾವಾತ್ । ಅತ ಏವ ಸ್ವಧರ್ಮ ನಿಷ್ಠಃ ಶತ ಜನ್ಮಭಿಃಪುಮಾನ್ ವಿರಿಂಚಿತಾಮೇತಿ ತತಃ ಪರಂಹಿಮಾಮ್ ಇತಿ ವಿರಿಂಚಿ ಪದಸ್ಯ ಕರ್ಮ**

ಫಲತ್ವೋಕ್ತಿಃ ಭಾಗವತೇ । ಅತ ಏವಚ ಭೀಮಸೇನಸ್ಯ ಭಗವದಾಜ್ಞಯಾ ಕಾಮ್ಯಾಸ್ತ್ರ ಸ್ವೀಕಾರೋ ನಿರ್ಣಯೇ ಪ್ರತಿಪಾದಿತಃ । ಆಜ್ಞಯೈವ ಹರೇ ದ್ರೌಣೇರಸ್ತ್ರೈರಸ್ತ್ರಾಣ್ಯಶಾಮಯತ್ । ಅದೃಶ್ಯೋಽಲಂಬುಸೋ ಭಗ್ನೋ ನಾನ್ಯತ್ರ ಚ ಕಥಂಚನ । ತಥಾಚ ಭಗವದಾಜ್ಞಯೈವ ಬ್ರಹ್ಮವಾಯ್ವೋಃ ಕಾಮ್ಯಕರ್ಮ ಕರಣ ಸಂಭವಾತ್ ನಕೋಽಪಿ ವಿರೋಧಃ । ತದುಕ್ತಂ ತೃತೀಯ ಸ್ಕಂಧ ತಾತ್ಪರ್ಯೇ । ಅಧಿಕಾರಿಕ ದೇವಾನಾಂ ಸ್ವಾಧಿಕಾರಾಭಿಕಾಮನಂ । ಭವತಿ ಪ್ರೀತಯೇ ವಿಷ್ಣೋಃ ಭಕ್ತ್ಯಾದ್ಯೈರಪಿ ಯತ್ಸದೇತಿ । ದ್ವಿತೀಯ ಸ್ಕಂಧ ತಾತ್ಪರ್ಯೇಽಪಿ । ಏಷಾಂ ಪದಾಂತರಾಪೇಕ್ಷಾ ವಾಯ್ವಾದೀನಾಂ ಮಹಾತ್ಮನಾಂ । ಆವೃತ್ಯತೇ ಪುನರ್ಯಾಂತೀತಿ । ಏವಂ ಬ್ರಹ್ಮಾದಾವಪಿ ಕಾಮ್ಯ ಕರ್ಮ ಸದ್ಭಾವೇ ನಕಂಚನ ವಿರೋಧಂ ಪಶ್ಯಾಮಃ ।

ಚತುರ್ಮುಖ ಬ್ರಹ್ಮದೇವರಿಗೆ ಇತರ ಪುರುಷರಂತೆ ಆತ್ಮ ಭೋಗಾರ್ಥವಾದ ಕಾಮನೆ ಇರುವುದಿಲ್ಲ ಆದರೆ ಸತ್ಯಲೋಕಾಧಿಪತ್ಯವು ಜಗತ್ ಸೃಷ್ಟ್ಯಾದಿ ಕ್ರಿಯಾಗಳು ಕೇವಲ ಭಗವತ್ ಪ್ರೀತಿಗೋಸ್ಕರವಾಗಿಯೇ ಆಗಲೆಂಬ ಕಾಮನ ವಿರುವುದರಿಂದ ಕಾಮ್ಯ ಕರ್ಮವು ಬ್ರಹ್ಮದೇವರಲ್ಲಿದೆ ಎಂದರೆ ಭ್ಯಾಧಕ ಬರುವುದಿಲ್ಲ.

ಆದುದರಿಂದಲೇ ಶ್ರೀಮದ್‌ಭಾಗವತದಲ್ಲಿ ಒಂದು ನೂರು ಜನ್ಮಗಳಲ್ಲಿ ಸ್ವಧರ್ಮ ದಲ್ಲಿ ಪೂರ್ಣ ನಿಷ್ಟನಾಗಿ (ವರ್ಣಾಶ್ರಮೋಚಿತ ಧರ್ಮದಲ್ಲಿ) ಸಾಧನ ಮಾಡಿ ಕೊಂಡವನು ಬ್ರಹ್ಮಪದವನ್ನು ಸೇರುತ್ತಾನೆ. ನಂತರ ಕ್ರಮವಾಗಿ ನನ್ನನ್ನು ಹೊಂದು ತ್ತಾನೆ ಎಂದು ಹೇಳಿರುವುದು ಸಮಂಜಸವಾಗಿರುತ್ತದೆ. ಆದುದರಿಂದಲೇ ಭೀಮಸೇನ ದೇವರು ಶ್ರೀಕೃಷ್ಣನ ಆಜ್ಞೆಯಿಂದ ಕಾಮ್ಯಾಸ್ತ್ರ ಸ್ವೀಕರಿಸಿರುವುದು ನಿರ್ಣಯದಲ್ಲಿ ಉಕ್ತವಾಗಿದೆ. ಕೃಷ್ಣನ ಆಜ್ಞೆಯಿಂದಲೇ ದ್ರೋಣ ಪುತ್ರರಾದ ಅಶ್ವತ್ಥಾಮರಿಂದ ಅಸ್ತ್ರಗಳನ್ನು ಕೇಳಿದರು (ಸ್ವೀಕರಿಸಿದರು) ಅದೃಶ್ಯನಾದ ಅಲಂಬುಸನನ್ನು ಭಗ್ನ ಗೊಳಿಸಿದರು. ಮತ್ತೆ ಯಾವ ಪ್ರಸಂಗದಲ್ಲಿಯೂ ಕಾಮ್ಯ ಕರ್ಮವನ್ನು ಸ್ವೀಕರಿಸಿ ರುವುದಿಲ್ಲ. ಒಟ್ಟಿನಲ್ಲಿ ಭಗವದಾಜ್ಞೆಯಿಂದಲೇ ಬ್ರಹ್ಮವಾಯುವಾದಿಗಳಿಗೆ ಕಾಮ್ಯ ಕರ್ಮ ಕರ್ತೃಕತೆ ಸಂಭವಿಸುವದರಿಂದ ಯಾವ ವಿರೋಧವೂ ಬರುವದಿಲ್ಲ ಮತ್ತು ತೃತೀಯಸ್ಕಂಧ ತಾತ್ಪರ್ಯದಲ್ಲಿ ಅಧಿಕಾರಿಕ ದೇವತೆಗಳಿಗೆ ಸ್ವಾಧಿಕಾರಾಭಿ ಕಾಮನೆಯು ಭಗವತ್ ಪ್ರೀತಿಗೋಸ್ಕರವಾಗಿಯೇ ಆಗುತ್ತದೆ. ಸಚ್ಚೇತನರುಗಳಿಗೆ ಭಕ್ತ್ಯರ್ಥವಾಗಿಯೇ ನಿರಂತರವೂ ಹೀಗೆ ಮತ್ತು ದ್ವಿತೀಯ ಸ್ಕಂಧ ತಾತ್ಪರ್ಯ ದಲ್ಲಿಯೂ ವಾಯುವಾದಿ ಮಹಾತ್ಮರುಗಳಿಗೆ ಸ್ಥಾನಾಂತರಾಪೇಕ್ಷೆಯು ಆವರ್ತನೆ ಗೋಸ್ಕರವಾಗಿ ಆಗುತ್ತದೆ ಒಟ್ಟಿನಲ್ಲಿ ಬ್ರಹ್ಮಾದಿ ದೇವತೆಗಳಿಗೆ ಕಾಮ್ಯ ಕರ್ಮ ಉಂಟೆಂದರೆ ಯಾವ ಪ್ರಮಾಣ ವಿರೋಧವೂ ಬರುವುದಿಲ್ಲ.

**ನನು ಕೃಷ್ಣ ರುಕ್ಮಿಣ್ಯೋಃ ಪುತ್ರಾರ್ಥಂ ರುದ್ರಂ ಪ್ರತಿತಪಃ ಕರಣಂ ಪುರಾಣಾದೌ ಶ್ರೂಯತೇ । ತತ್ಕಥಂ ಕಾಮ್ಯಂ ಕರ್ಮ ಸರ್ವಜೀವಾನಾ ಮೇವ ಇತ್ಯುಕ್ತಂ ಇತ್ಯತಆಹ ।**

ಲಕ್ಷ್ಮೀನಾರಾಯಣಯೋಸ್ತು ಲೀಲಯಾ ಮೋಹನಾಯ ವಾ ।

**ತು ಶಬ್ದೋ ಜೀವಾತ್ ವಿಶೇಷಂ ದ್ಯೋತಯತಿ ತಮೇವ ವಿಶೇಷ ಮಾಹ । ಲೀಲಯೇತಿ । ದೈತ್ಯಜನ ಮೋಹನಾಯೈವ ತಪಃ ಆದಿ ಕರ್ಮ ಭಗವತೋ ನತು ಸ್ವಪ್ರಯೋಜನಾಯ ತದುಕ್ತಂ ನಿರ್ಣಯೇ । ಯಯೌ ಕೈಲಾಸಮದ್ರೀಶಂ ಚಕಾರೇವ ತಪೋಽತ್ರಚ । ಶಾರ್ವಂತಪಃ ಕರೋತೀವ ಮೋಹನಾಯ ಸುದುರ್ಜನಾನ್ । ಪೂರ್ವಂ ತೇನೋದಿತಂ ಯತ್ತು ಲೋಕಾನ್ ಮೋಹಯ ಕಾಂಜಸಾ । ಶರ್ವಂ ಪ್ರತೀ ತವಾಹಂತು ಕುರ್ಯಾತ್ ದ್ವಾದಶ ವತ್ಸರಂ । ತಪೋ ಸುರಾಣಾಂ ಮೋಹಾಯ ಸುರಾಃ ಸಂತು ಗತಜ್ವರಾಃ ಇತಿ । ಏತೇನ ಋಷಭ ನಾರಾಯಣಾದ್ಯವತಾರೇಷ್ವಪಿ ಮೋಹಾಯ ಸಜ್ಜನ ಶಿಕ್ಷಾಯೈಚ ತಪಃ ಕರಣಮಿತಿ ಧ್ಯೇಯಂ ।**

ಶ್ರೀಕೃಷ್ಣ ರುಕ್ಮಿಣಿಯೊಂದಿಗೆ ಪುತ್ರಾರ್ಥಿಯಾಗಿ ರುದ್ರದೇವರನ್ನು ಕುರಿತು ತಪಸ್ಸು ಮಾಡಿದನೆಂದು ಪುರಾಣಗಳಲ್ಲಿ ಕೇಳಿ ಬರುತ್ತದೆ ಎಂದ ಮೇಲೆ ಕಾಮ್ಯ ಕರ್ಮವು ಜೀವರುಗಳಲ್ಲಿ ಮಾತ್ರವೇ ಎಂಬುದು ಅಯುಕ್ತವಲ್ಲವೇ ? ಎಂದರೆ ಉತ್ತರಿಸುತ್ತಾರೆ. ಲಕ್ಷ್ಮೀ ನಾರಾಯಣರು ಕೇವಲ ಲೀಲಾ ಮಾತ್ರದಿಂದಲೇ ಮತ್ತು ಅಸುರ ಜನ ಮೋಹನಾರ್ಥವಾಗಿಯೇ ಕರ್ಮಗಳನ್ನು ಮಾಡುತ್ತಾರೆ. ಆದುದರಿಂದ ಅವರಲ್ಲಿ ಕಾಮ್ಯ ಕರ್ಮ ಸಂಪರ್ಕವೇ ಇರುವುದಿಲ್ಲ. ಲಕ್ಷ್ಮೀನಾರಾಯಣರು ಜೀವರಾಶಿಯಿಂದ ಸುತರಾಂ ವಿಲಕ್ಷಣರೇ ಆಗಿರುವುದರಿಂದ, ಅದ್ದರಿಂದಲೇ ಲೀಲೆಯಿಂದ ಎಂದು ಶಾಸ್ತ್ರದಲ್ಲಿ ತಿಳಿಸಿರುತ್ತದೆ. ತಪಾದಿ ಕರ್ಮಕರಣಾದಿಗಳು ಮಾಡುವಿಕೆ ಸ್ವಪ್ರಯೋಜನವೇನೂ ಇಲ್ಲದೆ ಕೇವಲ ದೈತ್ಯಮೋಹನಾರ್ಥವಾಗಿಯೇ ಇರುತ್ತದೆ ಇದನ್ನೇ ನಿರ್ಣಯದಲ್ಲಿ ಶ್ರೀಕೃಷ್ಣನು ಕೈಲಾಸ ಪರ್ವತವನ್ನು ಸೇರಿ ಈಶ್ವರನ ಪ್ರಯುಕ್ತವಾದ ತಪಸ್ಸನ್ನು ಮಾಡುವವನಂತೆ ದುರ್ಜನ ಮೋಹನಾರ್ಥವಾಗಿ ನಟಿಸಿದನು. ಆ ನಟನವಾದರೂ ಪೂರ್ವದಲ್ಲಿ ಶಿವನನ್ನು ಕುರಿತು 'ಹೇ ಶಿವನೆ ಅಸುರ ಜನ ಮೋಹನಾರ್ಥವಾಗಿ ನಿನ್ನನ್ನು ಕುರಿತು ಹನ್ನೆರಡು ವರ್ಷ ತಪವನ್ನಾಚರಿಸುತ್ತೇನೆ. ಇದರಿಂದ ದೈತ್ಯರು ಮೋಹಿತರಾಗುತ್ತಾರೆ. ದೇವತೆಗಳು ವಿಜ್ವರರಾಗುತ್ತಾರೆ (ತಾಪರಹಿತರಾಗುತ್ತಾರೆ)' ಎಂದು ಹೇಳಿದೆ. ಇದರಂತೆಯೇ ಋಷಭ, ನರನಾರಾಯಣಾದಿ ಅವತಾರಗಳಲ್ಲಿಯೂ ಅಸುರಜನ ಮೋಹನ ಹಾಗೂ ಸುಜನ ಶಿಕ್ಷಣಗಳಿಗೋಸ್ಕರ ತಪಾದಿಗಳು ಮಾಡಿದುದು ಎಂದು ತಿಳಿಯಬೇಕು.

**ನಿಷಿದ್ಧ ಕರ್ಮಣಃ ಸ್ಥಾನಮಾಹ ।**

**ನಿಷಿದ್ಧಂ ಕರ್ಮ ರುದ್ರಾದೀನಾಂ**

**ಮನೋವಾಕ್ಕಾಯೈಃ ಸೊತ್ತಮಾಪರಾಧಾದ್ಯನುಷ್ಠಾನಂ ನಿಷಿದ್ಧಂಕರ್ಮ। ರುದ್ರಸ್ಯತು ರಾಮೇಣ ಸಹ ಯುದ್ಧಾಯೋದ್ಯಮಃ । ತದುಕ್ತಂ ನಿರ್ಣಯೇ । ತತೋಹಿ ಯುದ್ಧಾಯ ರಮೇಶ ಶಂಕರೌ ವ್ಯವಸ್ಥಿತೌತೇ ಧನುಷೀ ಪ್ರಗೃಹ್ಯ ಇತಿ । ತಥಾಸ್ಯೋತ್ತಮೇನ ಭೀಮಸೇನೇನ ಯುದ್ಧ ಕರಣಂ । ತದುಕ್ತಂ ನಿರ್ಣಯೇ । ಸವ್ಯಾಘ್ರರೂಪೀ ಕಪಿಲಾತ್ಮಿಕಾಮುಮಾಂ ಪರೀಕ್ಷಯನ್ ಹಂತುಮಿವಾದ್ರವಧೃತಂ । ಸಮೇ ಯುದ್ಧೇ ವಿಜಿತೋ ಮೂರ್ಛಿತಶ್ಚ ಗದಾಪ್ರಹಾರಾದಾಗಲಿಂಗಾಂತರಸ್ಥಃ । ವ್ಯಾಘ್ರೇಶ್ವರಂ ನಾಮಲಿಂಗಂ ಪೃಥಿವ್ಯಾಂ ಖ್ಯಾತ್ಯಂ ತಥಾ ತದ್ವದನ್ಯತ್ರ ಯುದ್ಧಂ । ಇತ್ಯಾದಿ । ತಥಾ ಕೃಷ್ಣಾವತಾರೇ ರುದ್ರೋ ಅಶ್ವಥಾಮೋಭೂತ್ವಾ ಕೃಷ್ಣಾಜ್ಞಾಂ ಉಲ್ಲಂಘ್ಯ ತದಸಮ್ಮತೋತ್ತರಾ ಗರ್ಭಂ ಕೃಂತನಾಯಾಪಾಂಡವೇಯಾಸ್ತ್ರಮಮುಚತ್ । ತದುಕ್ತಂ ನಿರ್ಣಯೇ । ಯಾದವೇಶೋಽಪಿ ಗೌತಮ್ಯಾಃ ಸುತಮಾಹೈಕಸಂತತೇಃ । ವಾಚಾ ನಿವೃತ್ತಯಾಸ್ತ್ರಂತದಿತ್ಯುಕ್ತೋ ದ್ರೌಣಿರಬ್ರವೀತ್ । ಪಕ್ಷಪಾತಾಡಿಚ್ಛಸಿತ್ವಂ ಭಾಗಿನೇಯಸ್ಯ ಸಂತತಿಂ । ತತ್ರೈವ ಪಾತಯಾಮ್ಯಸ್ತ್ರಮುತ್ತರಾ ಗರ್ಭ ಕೃಂತನೇ ಇತಿ ।**

ಮೂರು ವಿಧವಾದ ಕರ್ಮಗಳಲ್ಲಿ ಎರಡನೆಯ ನಿಷಿದ್ಧಕರ್ಮ ಲಕ್ಷಣವನ್ನು ಹೇಳುತ್ತಾರೆ. ಮನಸ್ಸು, ವಾಕ್ಯ (ಉಕ್ತಿ) ದೇಹಾದಿಗಳಿಂದ ಸೊತ್ತಮರ ಅಪರಾಧವನ್ನು ಮಾಡುವುದೇ ನಿಷಿದ್ಧ ಕರ್ಮವು. ಇಂತಹ ಕರ್ಮದ ಸ್ಥಾನವಾದರೂ ರುದ್ರಾದಿದೇವತೆಗಳಿಗೆ, ರುದ್ರದೇವರು ರಾಮನೊಂದಿಗೆ ಯುದ್ಧದಲ್ಲೇ ಪ್ರಯತ್ನ ಮಾಡುವವರಾದರು. ಇದನ್ನು ನಿರ್ಣಯದಲ್ಲಿ ರಾವಣನ ಸಂಹಾರಾನಂತರ ರಾಮಚಂದ್ರ ಈಶ್ವರ ಈರ್ವರು ಧನಸ್ಸನ್ನು ತೆಗೆದು ಯುದ್ಧದಲ್ಲಿ ಸನ್ನದ್ಧರಾದರು ಎಂದು ಹೇಳಿದೆ. ಮತ್ತು ಸೋತ್ತಮನಾದ ಭೀಮಸೇನ ದೇವರೊಂದಿಗೆ ಈಶ್ವರನು ಯುದ್ಧ ಮಾಡಿದನು ಇದನ್ನು ನಿರ್ಣಯದಲ್ಲಿ ವ್ಯಾಘ್ರರೂಪಿಯಾದ ಈಶ್ವರನು ಗೋರೂಪಿಯಾದ ಪಾರ್ವತಿಯನ್ನು ಕೊಲ್ಲಲು ಧಾವಿಸಿದಾಗ ತಪಾಸಕ್ತನಾದ ಭೀಮಸೇನದೇವರು ಗದೆಯಿಂದ ಈಶ್ವರನನ್ನು ಯುದ್ಧದಲ್ಲಿ ಮೂರ್ಛೆಗೊಳಿಸಲು ಲಿಂಗವನ್ನು ಪ್ರವೇಶಿಸಿ ಸ್ಥಿತನಾದನು. ಅದರ ಕುರುಹು ಆಗಿ ಇಂದಿಗೂ ವ್ಯಾಘ್ರೇಶ್ವರನ ಹೆಸರಿನಿಂದ ಹಿಮವತ್ಪರ್ವತದಲ್ಲಿ (ಕೇದಾರೇಶ್ವರನೆಂದು) ಪ್ರಸಿದ್ಧವಾಗಿದೆ ಮತ್ತು ಈಶ್ವರನು ಸೋತ್ತಮರೊಂದಿಗೆ ಅನೇಕ ವೇಳೆ ಯುದ್ಧ ಮಾಡಿದನು ಮತ್ತು ಕೃಷ್ಣಾವತಾರದಲ್ಲಿ ಈಶ್ವರನೇ ಅಶ್ವತ್ಥಾಮನಾಗಿ ಕೃಷ್ಣನ ಆಜ್ಞಾವನ್ನು ಉಲ್ಲಂಘಿಸಿ ಕೃಷ್ಣಗೆ ಅಸಮ್ಮತವಾಗಿ ಉತ್ತರಾಗರ್ಭವನ್ನು ಖಂಡಿಸಿದನು. ಅಪಾಂಡವೇ

ಯಾಸ್ತ್ರವನ್ನು (ಬ್ರಹ್ಮಶಿರೋಽಸ್ತ್ರ) ಬಿಡುವವನಾದನು ಇದನ್ನು ನಿರ್ಣಯದಲ್ಲಿ ಯಾದವೇಶನಾದ ಕೃಷ್ಣನು ಗೌತಮೀ ಪುತ್ರನಾದ ಅಶ್ವತ್ಥಾಮನನ್ನು ಕುರಿತು ಏಕ ಸಂತತಿಯಾದ ಉತ್ತರಾಗರ್ಭವನ್ನು ಕೆಡಸಬೇಡವೆಂದು ಹೇಳಿದನು ಅಶ್ವತ್ಥಾಮನು ಹೇ ಕೃಷ್ಣನೇ ಪಕ್ಷಪಾತದಿಂದ ತಂಗಿಯ ಗರ್ಭವನ್ನು ಬಯಸುತ್ತೀಯೆ, ಅಲ್ಲೀ ನನ್ನ ಅಸ್ತ್ರವನ್ನು ಬಿಟ್ಟು ಗರ್ಭವನ್ನು ನಾಶಪಡಿಸುತ್ತೇನೆ ಎಂದನು.

**ಏವಂ ಭೀಮಾಭಾವಾಯಾಪಾಂಡವೇಯಾಸ್ತ್ರಮಮುಚತ್ । ತದುಕ್ತಂ ನಿರ್ಣಯೇ । ತದಸ್ತ್ರಂ ಪ್ರಜ್ವಲದ್ದೃಷ್ಟ್ವಾಽಪಾಂಡವತ್ವಂ ವಿಧಿತ್ಸಯಾ । ಧರಾಯಾಂ ದ್ರೌಣಿನಾಮುಕ್ತಂ ಕೃಷ್ಣೇನ ಪ್ರೇರಿತೋಽರ್ಜುನಃ ಇತಿ । ತಥಾಽಪಾಂಡವತ್ವ ವಿಧಿತ್ಸಯಾ ದುರ್ಯೋಧನ ಭಾರ್ಯಾ ಸಂಭೋಗೇನ ತತ್ರ ಪುತ್ರೋತ್ಪತ್ತಿ ಪ್ರತಿಜ್ಞಾ ಕೃತಾ ದ್ರೌಣಿನಾ ತದುಕ್ತಂ ನಿರ್ಣಯೇ । ತದೈವ ಹಾರ್ದಿಕ್ಯ ಕೃಪಾನ್ವಿತೋಯಾ ಸುಯೋಧನಂ ದ್ರೌಣಿ ರಮ್ಯಂ ಶಯಾನಂ । ಪ್ರಭಗ್ನ ಸಕ್ಥಿಂ ಸ್ವಸೃಗಾಲ ಭೂತ್ಯೈಃ ಸಂಭಕ್ಷ್ಯಮಾಣಂ ದದೃಶೇ ಸ್ವಸಂತಂ । ಸದುಃಖ ಶೋಕಾಭಿ ಹತೋ ವಿನದ್ಯ ಪಾರ್ಥಾನ್ಮಯಾ ಭೂಪಕಿಮತ್ರ ಕಾರ್ಯಂ । ಇತ್ಯಾಹ ನಿಷ್ಪಾಂಡವತಾಂ ಕುರುಷ್ವೇತ್ಯಮುಂ ವ್ಯಥಾತ್ಪಾಂಸ್ವಭಿಷೇಕಿನಂ ನೃಪಃ । ಉಚ್ಛಿದ್ಯ ಸಂತತಿಂ ಪಾಂಡೋಃ ಕೃತ್ವಾ ಸ್ವಕ್ಷೇತ್ರ ಸಂತತಿಂ । ತಯಾ ಭೂರಕ್ಷಣ ಹೃದಾಶೋಭಿಷಿಕ್ತೋ ತಥೇತ್ಯಗಾದಿತಿ । ದ್ರೋಣ ಕರ್ಣದ್ರೌಣಿಕೃಪಾಃ ಕೃಷ್ಣಾಭಾವೇ ಮನೋದಧುಃ । ದೇವಾಶ್ಚಾದ್ಯಾಃ ಅಪಿತು ವಿರೋಧಂ ಚಕ್ರಿರೇ ಕ್ವಚಿತ್ ।**

ಭೀಮಸೇನದೇವರ ವಧೆಯನ್ನು ಬಯಸಿ ಅಪಾಂಡವಾಸ್ತ್ರವನ್ನು ಪ್ರಯೋಗಿಸಿದನು. ಇದನ್ನು ನಿರ್ಣಯದಲ್ಲಿ ನಿಷ್ಪಾಂಡವರನ್ನು ಮಾಡಲು ಮುಕ್ತವಾದ ಬಿಟ್ಟ ಅಸ್ತ್ರವು ಧಗಧಗನೆ ಉರಿಯುತ್ತಿರಲು ಪ್ರೇರಿತನಾದ ಅರ್ಜುನನು ಶಾಂತಗೊಳಿಸಿದನು ಎಂದು ಹೇಳಿದೆ. ಮತ್ತು ದುರ್ಯೋಧನನ ಪತ್ನಿ ಸಂಭೋಗದಿಂದ ಪುತ್ರೋತ್ಪತ್ತಿಯನ್ನು ಹೀಗೆ ಪ್ರತಿಜ್ಞೆಯೂ ಮಾಡುವವನಾದನು. ಈವಿಷಯವನ್ನು ನಿರ್ಣಯದಲ್ಲಿ ಅಶ್ವತ್ಥಾಮರು, ಹಾರ್ದಿಕ್ಯ ಕೃಪಾಚಾರ್ಯರಿಂದ ಯುಕ್ತರಾಗಿ ಸೀಳಲ್ಪಟ್ಟ ತೊಡೆಯುಳ್ಳವನಾಗಿ ನರಿಗಳಿಂದ ಕಿತ್ತಿಸಿಕೊಳ್ಳುತ್ತಾ ಶ್ವಾಸೋಚ್ಛ್ವಾಸ ಬಿಡುತ್ತಾ ಮರುಣೋನ್ಮುಖನಾಗಿ ಬಿದ್ದ ದುರ್ಯೋಧನನನ್ನು ನೋಡಿ, ದುಃಖದಿಂದ ತಪ್ತನಾಗಿ ಪಾಂಡವರನ್ನು ನಿಂದಿಸುತ್ತಾ ದುರ್ಯೋಧನಾ ನನ್ನಿಂದ ಏನಾಗಬೇಕು ಬೇಡು ಎಂದರು. ಆಗ ದುರ್ಯೋಧನನು 'ಭೂಮಂಡಲವನ್ನು ನಿಷ್ಪಾಂಡವವನ್ನಾಗಿ ಮಾಡು ಹಾಗೂ ನನ್ನ ಪತ್ನಿಯಲ್ಲಿ ಸಂತಾನೋತ್ಪಾದನವನ್ನು ಮಾಡು ಇಗೋ ನನ್ನ

ಸ್ಥಾನದಲ್ಲಿ ನಿನ್ನನ್ನು ಪಟ್ಟಾಭಿಷೇಕಿಸುತ್ತೇನೆ' ಎಂದು ಧೂಳಿಯಿಂದ ಅಶ್ವತ್ಥಾಮರನ್ನು ಅಭಿಷೇಕಿಸಿದನು. ಹಾಗೇ ಆಗಲೆಂದು ಅಶ್ವತ್ಥಾಮರು ಮುಂದೆ ಹೊರಟರೆಂದು ನಿರ್ಣಯದಲ್ಲಿ ಹೇಳಿರುತ್ತದೆ ಮತ್ತು ಒಂದು ಸಮಯದಲ್ಲಿ ದ್ರೋಣ ಪುತ್ರನಾದ ಅಶ್ವತ್ಥಾಮ, ಕರ್ಣ, ದ್ರೋಣಾಚಾರ್ಯ ಕೃಪಾಚಾರ್ಯರು ಕೃಷ್ಣನನ್ನು ಇಲ್ಲಾ ಎನಿಸಬೇಕೆಂದು ಮನಸ್ಸಲ್ಲಿ ನಿರ್ಧರಿಸಿದರು. ಹೀಗೆ ಶಿವಾದಿ ದೇವತೆಗಳೆಲ್ಲರೂ ಶ್ರೀಹರಿಯ ವಿರೋಧವನ್ನು ಒಂದೊಂದು ಸಂದರ್ಭದಲ್ಲಿ ಮಾಡಿಯೇ ಇರುತ್ತಾರೆ.

**ಏವಂ ಶೇಷಸ್ಯಾಪಿ ಬಲರಾಮಾವತಾರೇ ಕೃಷ್ಣ ವೈಮನಸ್ಯೇನ ಕೃಷ್ಣಂ ಪರಿತ್ಯಜ್ಯ ಅನ್ಯತ್ರ ಗಮನಮಭೂತ್ । ತದುಕ್ತಂ ನಿರ್ಣಯೇ । ಶ್ಯಮಂತ ಕಾರ್ಥೇ ರಾಮೋಽಪಿ ಕೃಷ್ಣಸ್ಯ ವಿಮನಾಭವತ್ । ಅವಿಶ್ವಾಸಾತ್ಸತುಸ ಕ್ರೋಧ ಏವ ಯಯೌ ವಿಧೇಹಾನವಸತ್ ಪಂಚಚಾಬ್ದಾನಿತಿ । ತಥಾ ಯುದ್ಧ ಕಾಲೇ ಭೀಮನಿಂದಾಮಕರೋತ್ । ತದುಕ್ತಂ ನಿರ್ಣಯೇ । ಪುನಃ ಪುನಶ್ಚ ತದ್ವೀಕ್ಷ್ಯ ಚುಕ್ರೋಧ ಮುಸಲಾಯುಧಃ । ಚುಕ್ರೋಶ ನೈವಧರ್ಮೋಯಮಿತ್ಯಸಾವೂರ್ಧ್ವಬಾಹುಕಃ । ಪುನಃ ಕ್ರೋಧಾಭಿ ತಾಮ್ರಾಕ್ಷ ಆದಾಯ ಮುಸಲಂ ಹಲಂ । ಅಭಿದುದ್ರಾವ ಭೀಮಂತಂ ನಚಚಾಲ ವೃಕೋದರಃ ।**

ರುದ್ರದೇವರಂತೆ ಶೇಷದೇವರೂ ಸಹ ಬಲರಾಮಾವತಾರದಲ್ಲಿ ಕೃಷ್ಣನಲ್ಲಿ ವೈಷಮ್ಯ ಬುದ್ಧಿಯಿಂದ ಕೃಷ್ಣನನ್ನು ಬಿಟ್ಟು ದೇಶಾಂತರಕ್ಕೆ ಹೋದನು. ಇದನ್ನು ನಿರ್ಣಯ ದಲ್ಲಿ ಹೇಳಿದೆ, ಬಲರಾಮನು ಶಮಂತಕ ಮಣಿಗೋಸ್ಕರವಾಗಿ ಕೃಷ್ಣನಲ್ಲಿ ವಿಮನಸ್ಕ ನಾಗಿ ಅವಿಶ್ವಾಸದಿಂದ ಕೃದ್ಧನಾಗಿಯೇ ವಿಧೇಹ ದೇಶವನ್ನು ಕುರಿತು ತೆರಳಿ ಹದಿನೈದು ವರ್ಷಗಳ ಪರ್ಯಂತರವಾಗಿಯೂ ಅಲ್ಲಿಯೇ ವಾಸ ಮಾಡಿದನು ಎಂದು ಹೇಳಿದೆ ಮತ್ತು ಗದಾಯುದ್ಧ ಕಾಂಡದಲ್ಲಿ ಭೀಮಸೇನನನ್ನು ನಿಂದಿಸಿದನು. ಇದನ್ನು ನಿರ್ಣಯದಲ್ಲಿ ಬಲರಾಮನು ಮುಸಲ(ನೇಗಿಲನ್ನು) ಕೈಯಲ್ಲಿ ಹಿಡಿದು ಪುನಃ ಪುನಃ ಭೀಮನನ್ನು ನೋಡುತ್ತಾ ಕ್ರೋಧದಿಂದ ಕೂಗಲಾರಂಭಿಸಿದನು. ಇದು ಅಧರ್ಮವು ಅಧರ್ಮವು ಎಂದು ಬಾಹುಗಳನ್ನೆತ್ತಿ ಕೂಗುತ್ತಾ ಕಣ್ಣುಗಳನ್ನು ಕೆಂಪಗೆ ಮಾಡಿ ಭೀಮನನ್ನು ಕುರಿತು ಧಾವಿಸಿ ಹಲಾಯುಧದೀದ ಹೊಡೆದನು. ಭೀಮಸೇನನು ಚಲಿಸಲಿಲ್ಲ ಎಂದು ಹೀಗೆ ಹೇಳಿದೆ.

**ಇಂದ್ರೋಽಪಿ ಪಾರಿಜಾತ ಹರಣಕಾಲೇ ಕೃಷ್ಣೇನ ಯುದ್ಧಮ ಕರೋತ್ । ಅರ್ಜುನಾವತಾರೇಽಪಿ ಕೃಷ್ಣಾವಜ್ಞಾಂಚಕಾರ । ತದುಕ್ತಂ ನಿರ್ಣಯೇ । ತದಾಜಗಾದ ಫಲ್ಗುನೋ ಸುರೈರ್ವಿದೂಷಿತಾತ್ಮನಾ । ನವಿಪ್ರತಾದೃಶೋಸ್ತ್ಯಹಂ ಯಥೈವ ಕೇಶವಾದಯಃ । ಅವಮೋನೇಽರ್ಜುನಃ**

**ಕೃಷ್ಣಂ ವಿಪ್ರಸ್ಯ ಶಿಶುರಕ್ಷಣ ಇತಿ । ಭೀಷ್ಮಸ್ತು ಭಾರ್ಗವಂ ರಾಮಮುವ-ನೇನೇ ಯುಯೋಧಚೇತ್ಯಾದಿ । ತಸ್ಮಾತ್ ರುದ್ರಾದೀನಾಂ ನಿಷಿದ್ಧಂ ಕರ್ಮಾಸ್ತೀತಿ ಸಾಧೂಕ್ತಂ । ನನು ಭೀಮಸೇನಸ್ಯಾಪಿ ಹಿಡಂಬೀ ಸಂಭೋಗ ರೂಪಂ ನಿಷಿದ್ಧಂ ಕರ್ಮಾಸ್ತಿ । ತತ್ಕಥಂ ರುದ್ರಾದೀನಾಮೇವ ನಿಷಿದ್ಧಂ ಕರ್ಮೇತ್ಯುಕ್ತಮಿತಿಚೇನ್ನ । ತಸ್ಯ ಸೋತ್ತಮಾಪರಾಧ ರೂಪತ್ವಾ ಭಾವಾತ್ । ತಸ್ಯಾಪಿ ವ್ಯಾಸಾಜ್ಞಯಾ ಕೃತತ್ವೇನ ನಿಷಿದ್ಧತ್ವಾಭಾವಾಚ್ಚ । ತದುಕ್ತಂ ನಿರ್ಣಯೇ । ತಾನ್ಭಕ್ತಿನಮ್ರ ಶಿರಸಸ್ಸಮುದೀಕ್ಷ್ಯ ಕೃಷ್ಣೋ ಭೀಮಂ ಜಗಾದ ನತ ಆಶು ಹಿಡಂಬಯಾಚ । ಏತಾಂ ಗೃಹಾಣ ಯುವತೀಂ ಸುರಸದ್ಮ ಶೋಭಾಂ ಜಾತೇ ಸುತೇ ಸಹಸುತಾ ಪ್ರತಿಯಾತು ಚೈಷಾ । ಏವಂ ಬ್ರುವತ್ಯಗಣಿತೋರುಗುಣೇರಮೇಶೇ ಓಮಿತ್ಯುದೀರ್ಯ ಕೃತವಾಂಶ್ಚ ತಥೈವ ಭೀಮ ಇತಿ ।**

ಇಂದ್ರನಾದರೂ ಪಾರಿಜಾತ ವೃಕ್ಷಹರಣ ಸಂದರ್ಭದಲ್ಲಿ ಕೃಷ್ಣನೊಂದಿಗೆ ಯುದ್ಧವನ್ನೇ ಮಾಡುವವನಾದನು. ಅರ್ಜುನಾವತಾರದಲ್ಲಿಯೂ ಕೃಷ್ಣನನ್ನು ಹೇಳನೆ ಮಾಡಿದನು. ಇದನ್ನು ನಿರ್ಣಯದಲ್ಲಿ ಹೇಳಿದೆ. ನಿರ್ಣಯದಲ್ಲಿ ಅರ್ಜುನನು ದೈತ್ಯರಿಂದ ದೂಷಿತ ಮನಸ್ಕನಾಗಿ ಸಂತಾನ ಅಪೇಕ್ಷೆಯುಳ್ಳ ಬ್ರಾಹ್ಮಣನನ್ನು ಕುರಿತು 'ಕೃಷ್ಣಾದಿಗಳಂತೆ ನಾನು ಹೇಡಿಯಲ್ಲ'ಎಂದು ಕೃಷ್ಣನನ್ನು ಅವಹೇಳಿಸಿದನು, ಬ್ರಾಹ್ಮಣನ ಶಿಶು ರಕ್ಷಣ ಸಂದರ್ಭದಲ್ಲಿ ಹೀಗೆ ಹೇಳಿದೆ. ಭೀಷ್ಮಾಚಾರ್ಯರಾದರೂ ಪರಶುರಾಮ ದೇವರೊಂದಿಗೆ ಅಂಬಾ ವಿಷಯದಲ್ಲಿ ಯುದ್ಧವನ್ನೇ ಮಾಡಿದರು. ಇತ್ಯಾದಿ ಪ್ರಸಂಗಗಳಿಂದ ಶೇಷರುದ್ರಾದಿ ದೇವತೆಗಳಲ್ಲಿ ನಿಷಿದ್ಧ ಕರ್ಮವಿದೆ ಎಂದು ಹೇಳಿದುದು ಯುಕ್ತವೇ ಆಗಿರುತ್ತದೆ. ಸರಿಯೇ, ಭೀಮಸೇನದೇವರು ರಾಕ್ಷಸಿಯಾದ ಹಿಡಂಬಿ ಸಂಭೋಗ ಮಾಡಿದುದು ನಿಷಿದ್ಧಕರ್ಮವಲ್ಲವೇ ? ಹೀಗಿರಲು ರುದ್ರಾದಿಗಳೇ ನಿಷಿದ್ಧಕರ್ಮ ಪಾತ್ರರೆಂಬುದು ತಪ್ಪಲ್ಲವೇ ? ಎಂದರೆ ಅದು ತಪ್ಪಾಗುವುದಿಲ್ಲ. ಸೋತ್ತಮಾಪರಾಧರೂಪವಲ್ಲ ಆದುದರಿಂದ ಮತ್ತು ಹಿಡಂಬೀ ಗ್ರಹಣವಾದರೂ ವೇದವ್ಯಾಸರ ಆಜ್ಞೆಯಿಂದಲೇ ಆಗಿರುತ್ತದೆ. ಇದನ್ನು ನಿರ್ಣಯದಲ್ಲಿ ಬಹುಭಕ್ತಿ ನಮ್ರಳಾಗಿ ನಿಂತ ಹಿಡಂಬಿಯನ್ನು ನೋಡಿ ವಾಸಿಷ್ಠ ಕೃಷ್ಣನು (ವೇದವ್ಯಾಸದೇವರು) ಭೀಮನನ್ನು ಕುರಿತು ಈ ಯುವತಿಯಾದ ಸ್ವರ್ಗ ಶೋಭೆ (ಅಭಿಮಾನಿನಿ)ಯಾದ ಹಿಡಂಬಿಯನ್ನು ಗ್ರಹಿಸು(ವಿವಾಹಿತನಾಗು), ಒಬ್ಬ ಮಗ ಹುಟ್ಟಲಾಗಿ ಆ ಮಗನೊಂದಿಗೆ ಅವಳು ವಾಸಿಸುತ್ತಾಳೆ. ಹೀಗೆಂದು ಅಗಣ್ಯ ಗುಣಪೂರ್ಣನಾದ ರಮೇಶನು ಹೇಳುತ್ತಿರಲು ಅಸ್ತು ಎಂದ ಭೀಮಸೇನ ದೇವರು ಸುತರಾಂ ನಿಷಿದ್ಧಕರ್ಮ ಅಪಾತ್ರರೇ ಆಗಿರುತ್ತಾರೆ.

**ಉದಾಸೀನ ಕರ್ಮ ಸ್ವರೂಪಂ ನಿರೂಪಯತಿ ।**

ಪ.ಸಂ, ಉದಾಸೀನಂ ಕರ್ಮತು ಪರಿಸ್ಪಂದಃ ।

**ವಿಧಿ ನಿಷೇಧಾಭ್ಯಾಂ ಭಿನ್ನಂ ಕರ್ಮೋದಾಸೀನಂ ತು ಪರಿಸ್ಪಂದಃ । ತದ್ವಿಭಾಗಮಾಹ ।**

ಪ.ಸಂ.—ಉತ್ಕ್ಷೇಪಣಾಪಕ್ಷೇಪಣಾಕುಂಚನ ಪ್ರಸರಣ ಗಮನಾಗಮನ ಭ್ರಮಣ ವಮನ ವಪನ ಭೋಜನ ವಿದಾರಣಾದ್ಯನೇಕವಿಧಃ ।

**ಊರ್ಧ್ವ ಪ್ರಕ್ಷೇಪಣ ಉತ್ಕ್ಷೇಪಣಂ । ಅಧಃ ಪ್ರಕ್ಷೇಪೋಪಕ್ಷೇಪಣಂ । ಮುಕುಲೀಕರಣಂ ಆಕುಂಚನಂ । ವಿಸ್ತಾರ ಕರಣಂ ಪ್ರಸರಣಂ। ಗಮನಾದಿಕಂ ಚ ಪ್ರಸಿದ್ಧಮೇವ । ನನು ಭ್ರಮಣಾಗಮನಾದೀನಾಂ ಗಮನ ರೂಪತ್ವಾನ್ನಪಾರ್ಥಕ್ಯಮಿತಿ ಚೇನ್ನ । ಭ್ರಮತೀತ್ಯುಕ್ತೇ ಗಚ್ಛತಿ ಇತಿ ಪ್ರತ್ಯಯಸ್ಯ ಗಚ್ಛತಿ ಇತ್ಯುಕ್ತೇ ಭ್ರಮತೀತಿ ಪ್ರತ್ಯಯಸ್ಯ ಚ ಅಭಾವೇ ನೋಭಯೋರ್ಭಿನ್ನತ್ವಾತ್ । ನ ಚ ಗಮನ ವಿಶೇಷೋ ಭ್ರಮಣಾಧಿಕಂ। ತರ್ಹ್ಯುತ್ಕ್ಷೇಪಣಾದೀನಾಮಪಿ ಗಮನ ವಿಶೇಷತ್ವಾತ್ ತೇಷಾಮಪಿ ಪೃಥಕ್ ನಿರ್ದೇಶೋ ನಸ್ಯಾತ್ । ತಸ್ಮಾತ್ ಕರ್ಮಾಣ್ಯನೇಕಾನ್ಯೇವ ನತು ಪಂಚ ವಿಧಾನೀತಿಭಾವಃ ।**

ಮೂರು ವಿಧವಾದ ಕರ್ಮಗಳಲ್ಲಿ ಕೊನೆಯದಾದ ಉದಾಸೀನ ಕರ್ಮದ ಸ್ವರೂಪವನ್ನು ನಿರೂಪಿಸುತ್ತಾರೆ. ವಿಧಿ ನಿಷೇಧ ಭಿನ್ನ ಕರ್ಮವೇ ಉದಾಸೀನ ಕರ್ಮವು, ಪರಿಸ್ಪಂದಾದಿ ರೂಪವಾದವುಗಳು (ಚಲನಾತ್ಮಕ). ಈ ಕರ್ಮದ ವಿಭಾಗವನ್ನು ಹೇಳುತ್ತಾರೆ. ಮೇಲೆ ಎತ್ತಿ ಒಗೆಯುವಿಕೆ, ಕೆಳಗೆ ತಳ್ಳುವಿಕೆ, ಮುದ್ದೆ ಮಾಡುವಿಕೆ, ಹರವುವಿಕೆ, ತಿರಿಗಿಸುವಿಕೆ, ಹೊರಗೆಡಹುವಿಕೆ, ಭುಂಜಿಸುವಿಕೆ, ಸೀಳುವಿಕೆ ಇತ್ಯಾದಿ ಅನೇಕ ವಿಧಗಳಾಗಿರುತ್ತದೆ. ಮೇಲಕ್ಕೆ ಎಸೆಯುವಿಕೆ, ಮೀಟುವಿಕೆ, ಕೆಳಗೆ ತಳ್ಳುವಿಕೆ, ಚಿಮ್ಮುವಿಕೆ, ಕುಗ್ಗಿಸುವಿಕೆ, ಪ್ರಸರುಸುವಿಕೆ, ಗಮನಾದಿಗಳೇ ಮೊದಲಾದ ಉದಾಸೀನ ಕ್ರಿಯೆಗಳು ಪ್ರಸಿದ್ಧಗಳೇ ಆಗಿರುತ್ತದೆ. ತಿರಿಗಿಸುವಿಕೆ, ನಡೆಸುವಿಕೆ ಮೊದಲಾದವುಗಳು ಗಮನದಲ್ಲೇ ಅಂತರ್ಭಾವವಿರುವುದರಿಂದ, ಪ್ರತ್ಯೇಕ ಹೇಳುವುದು ತಪ್ಪಲ್ಲವೇ ? ಎಂದರೆ ತಪ್ಪಾಗುವುದಿಲ್ಲ. ತಿರುಗುತ್ತಾನೆ ಎಂದರೆ ಹೋಗುತ್ತಾನೆ ಎಂದು ಅರ್ಥವಾಗುವುದಿಲ್ಲ. ಹೋಗುತ್ತಾನೆ ಎಂದರೆ ತಿರುಗುತ್ತಾನೆ ಎಂದು ಜ್ಞಾನವಾಗುವುದಿಲ್ಲ. ಆದುದರಿಂದ ಗಮನ, ಭ್ರಮಣಗಳು ಭಿನ್ನವಾದುದೆ, ಭ್ರಮಣವು ಗಮನ ವಿಶೇಷವೇ ಅಲ್ಲವೆ ಎಂದರೆ ಹಾಗಾದರೆ ಹಾರುವಿಕೆ ತಳ್ಳುವಿಕೆ ಇತ್ಯಾದಿಗಳೂ ಗಮನ ವಿಶೇಷಗಳೇ ಆಗಿ ಅವುಗಳಿಗೂ ಪ್ರತ್ಯೇಕ ನಿರ್ದೇಶವಿಲ್ಲದೇ ಹೋಗಬೇಕಾಗಿ ಒಂದೇ ಗಮನ ಶಬ್ದದಿಂದ ಎಲ್ಲ ಕ್ರಿಯೆಗಳ ಜ್ಞಾನವು ಆಗಬೇಕಾದೀತು. ಕರ್ಮ ವಿಶೇಷಗಳೆಲ್ಲವೂ ಭಿನ್ನ ಭಿನ್ನ ಕರ್ಮಗಳೇ

ಆಗಿರುತ್ತದೆ ಆದುದರಿಂದ ಉದಾಸೀನ ಕರ್ಮವು ಅನೇಕ ವಿಧಗಳೇ ಆಗಿರುತ್ತದೆ. ನೈಯ್ಯಾಯಿಕರು ಐದು ವಿಧವಾದ ಕರ್ಮವೆಂದು ವಿಭಾಗಿಸಿರುವುದು ಅಸಮ್ಮತವಾದದ್ದು.

**ಉದಾಸೀನ ಕರ್ಮಣಾಂ ಆಶ್ರಯ ಮಾಹ ।**

**ಯಥಾಯೋಗಂ ಚೇತನಾಚೇತನಯೋಃ ಧರ್ಮಃ ।**

**ನನು ಚೇತನ ಮಾತ್ರಸ್ಯ ವ್ಯಾಪ್ತತ್ವಾತ್ ಕಥಂ ಅಚೇತನೇಷು ಕ್ರಿಯೇತಿಚೇನ್ನ । ಪರಮಾತ್ಮನಿ ಅಣುತ್ವಾದಿ ನಾನಾಪರಿಮಾಣಸ್ಯ ಜೀವೇ ಅಣು ಪರಿಮಾಣಸ್ಯಚ ವಕ್ಷ್ಯಮಾಣತ್ವೇನ ಗಮನಾದಿ ಕ್ರಿಯಾಂಗಿಕಾರೇ ಬಾಧಕಾಭಾವಾತ್ । ಪುನಃ ಕ್ರಿಯಾ ವಿಭಾಗಮಾಹ ।**

**ಪುನರ್ದ್ವಿವಿಧಃ ನಿತ್ಯೋ ಅನಿತ್ಯಶ್ಚ ।**

**ನಿತ್ಯಸ್ಯೋದಾಹರಣ ಮಾಹ ।**

**ನಿತ್ಯ ಈಶ್ವರಾದಿ ಚೇತನ ಸ್ವರೂಪಭೂತಃ ।**

**ಈಶ್ವರೇ ಸೃಷ್ಟಿ ಸಂಹಾರ ಗಮನಾದಿ ಕ್ರಿಯಾಃ ಸ್ವರೂಪ ಭೂತಾಃ । ಜೀವೇ ಗಮನಾದಿ ಕ್ರಿಯಾಃ ಸ್ವರೂಪ ಭೂತಾಃ ಮುಕ್ತೌ ಸಂಯುಗಭಿವ್ಯಜ್ಯಂತೇ । ನನ್ವೀಶ್ವರೇ ತಾವತ್ ಕ್ರಿಯಾ ಅನಿತ್ಯಾಕ್ರಿಯಾತ್ವಾತ್ । ಅಚೇತನ ಕ್ರಿಯಾವದಿತ್ಯನುಮಾನವಿರುದ್ಧಂ ಕ್ರಿಯಾನಿತ್ಯತ್ವಂ । ಕಿಂ ಚ ಸೃಷ್ಟಿ ಸಂಹಾರಾದಿ ಕ್ರಿಯಾಣಾಂ ನಿತ್ಯತ್ವೇ ಸರ್ವದಾ ಸೃಷ್ಟಿ ಸಂಹಾರಾದಿ ಕ್ರಿಯಾ ಸಮಾವೇಶಃ ಸ್ಯಾತ್ । ಗಮನಸ್ಯಾಪಿ ನಿತ್ಯತ್ವೇ ಸರ್ವದಾ ಗಮನಂ ಸ್ಯಾದಿತಿ ಚೇನ್ನ । ಸೃಷ್ಟ್ಯಾದೀನಾಂ ಶಕ್ತಿ ವ್ಯಕ್ತಿ ಸ್ವೀಕಾರಾತ್ । ಸೃಷ್ಟಿಕಾಲೇ ಸೃಷ್ಟಿ ಕ್ರಿಯಾ ವ್ಯಕ್ತ್ಯಾತ್ಮನಾ ವರ್ತತೇ । ಅನ್ಯದಾತು ಶಕ್ತ್ಯಾತ್ಮನಾ । ಏವಂ ಸಂಹಾರ ಕ್ರಿಯಾಪಿ । ಗಮನಮಪಿ ತಥೇತಿ ನವಿರೋಧಃ ।**

ಉದಾಸೀನ ಕರ್ಮಗಳ ಅಧಿಷ್ಠಾನ(ಆಶ್ರಯ)ವನ್ನು ಹೇಳುತ್ತಾರೆ. ಯಥಾ ಯೋಗ್ಯವಾಗಿ ಚೇತನ ಅಚೇತನಗಳೆಲ್ಲವೂ ಆಶ್ರಯಗಳೇ ಆಗುತ್ತವೆ. ಸರಿಯೇ ಚೇತನ ಮಾತ್ರದಲ್ಲಿಯೇ ತುಂಬಿರುವ ಕ್ರಿಯಾಗಳನ್ನು ಅಚೇತನದಲ್ಲಿಯೂ ಹೇಳುವುದು ತಪ್ಪಲ್ಲವೇ ಎಂದರೆ ತಪ್ಪಾಗುವುದಿಲ್ಲ. ಪರಮಾತ್ಮನಲ್ಲಿ ಸ್ವಅಭಿನ್ನವಾದ ಅಣುತ್ವಾದಿ ಅನೇಕ ಪರಿಮಾಣಗಳ ಕ್ರಿಯೆ ಜೀವನಲ್ಲಿ ಅಣು ಪರಿಮಾಣ ಕ್ರಿಯೆಗಳನ್ನು ಮುಂದೆ ನಿರೂಪಿಸುತ್ತೇವೆ. ಆದುದರಿಂದ ಜಡದಲ್ಲಿ ಕ್ರಿಯೆಯನ್ನು ಒಪ್ಪಿದರೆ ಭಾದಕ ಬರುವುದಿಲ್ಲ. ಮತ್ತು ಈ ಕ್ರಿಯೆಯು ನಿತ್ಯ ಅನಿತ್ಯ ಹೀಗೆ ಎರಡು ವಿಧಗಳಾಗಿರುತ್ತವೆ. ನಿತ್ಯ ಕ್ರಿಯೆಗಳು ಈಶ್ವರಾದಿ ಚೇತನ ಸ್ವರೂಪಗಳಾಗಿರುತ್ತವೆ.

ಈಶ್ವರನಲ್ಲಿ ಸೃಷ್ಟಿ ಸಂಹಾರ ಗಮನಾದಿ ಕ್ರಿಯಾಗಳು ಅವನ ಸ್ವರೂಪವಾಗಿ ನಿತ್ಯವಾಗಿರುತ್ತವೆ. ಜೀವನಲ್ಲಿ ಗಮನಾದಿ ಕ್ರಿಯಾಗಳು ಸ್ವರೂಪ ಭೂತವಾಗಿ ಮುಕ್ತಿಯಲ್ಲಿ ಸ್ಪಷ್ಟ ಅಭಿವ್ಯಕ್ತವಾಗುತ್ತದೆ. ಹೀಗೆ ನಿತ್ಯಕ್ರಿಯೆಗಳು ಇರುತ್ತವೆ. ಆದರೆ ಈಶ್ವರನಲ್ಲಿ ಇರುವ ಕ್ರಿಯೆ ಅನಿತ್ಯವೇ ಆಗಿರುತ್ತದೆ, ಕ್ರಿಯೆಯಾಗಿರುವುದ ರಿಂದ(ಕ್ರಿಯಾತ್ವಾತ್) ಜಡದ ಕ್ರಿಯೆಯಂತೆ, ಹೀಗೆ ಅನುಮಾನದಿಂದ ಪರಮಾತ್ಮನ ಕ್ರಿಯೆಯಲ್ಲಿ ನಿತ್ಯತ್ವವು ವಿರುದ್ಧವಾಗಿರುತ್ತದೆ. ಮತ್ತು ಪರಮಾತ್ಮನ ಸೃಷ್ಟಿ, ಸಂಹಾರಾದಿ ಕ್ರಿಯಾಗಳಿಗೆ ಅನಿತ್ಯತೆಯನ್ನು ಹೇಳಿದರೆ ಸದಾ ಸೃಷ್ಟಿ, ಸದಾ ಸಂಹಾರ ಹೀಗೆ ವಿರುದ್ಧ ಧರ್ಮಗಳ ಸಮಾವೇಶವು ಆಗಬೇಕಾಗುತ್ತದೆ. ಹಾಗೆಯೇ ಪರಮಾತ್ಮ ಗಮನಾದಿಗಳಿಗೂ ನಿತ್ಯಗಮನಾದಿ ಪ್ರಸಂಗಬರಬೇಕಾದೀತು ಎಂದರೆ ಸಮಾಧಾನ ಹೇಳುತ್ತಾರೆ. ಪರಮಾತ್ಮನ ನಿತ್ಯ ಕ್ರಿಯೆಗಳಲ್ಲಿ ಶಕ್ತಿತ್ವ ವ್ಯಕ್ತಿತ್ವಗಳೆಂಬ ಧರ್ಮ ಗಳನ್ನು ಹೇಳುವುದರಿಂದ ವಿರೋಧ ಬರುವುದಿಲ್ಲ. ಸೃಷ್ಟಿಕಾಲದಲ್ಲಿ ಸೃಷ್ಟಿ ಕ್ರಿಯೆಯು ವ್ಯಕ್ತರೂಪವಾಗಿರುತ್ತದೆ. ಲಯಕಾಲದಲ್ಲಿ ವ್ಯಕ್ತಿರೂಪವಾಗಿರುತ್ತದೆ. ಇದರಂತೆಯೇ ಲಯಕಾಲದಲ್ಲಿ ಸಂಹಾರ ಕ್ರಿಯೆಯು ಶಕ್ತಿರೂಪವಾಗಿ ವರ್ತಿಸಿ ಸೃಷ್ಟಿಕಾಲದಲ್ಲಿ ವ್ಯಕ್ತರೂಪವಾಗುತ್ತದೆ. ಹೀಗೆಯೇ ಪರಮಾತ್ಮನ ಕ್ರಿಯೆಗಳೆಲ್ಲವೂ ನಿತ್ಯವಾದರೂ ಅವನ ಇಚ್ಛೆಯಂತೆ ಶಕ್ತಿ ವ್ಯಕ್ತ್ಯತೆಗಳನ್ನು ತಾಳುವುದರಿಂದ ವಿರೋಧ ಬರುವುದಿಲ್ಲ.

**ತದುಕ್ತಮನುವ್ಯಾಖ್ಯಾನೇ । ಅನಿತ್ಯತ್ವಾತ್ ಕ್ರಿಯಾಣಾಂತು ಕಥಮೇವ ಸ್ವರೂಪತಾ । ಇತಿ ಚೇತ್ ಸವಿಶೇಷೋಪಿ ಕ್ರಿಯಾಶಕ್ತ್ಯಾತ್ಮ ನಾಸ್ಥಿರಃ । ಶಕ್ತಿತಾ ವ್ಯಕ್ತಿತಾ ಚೇತಿ ವಿಶೇಷೋಽಪಿ ವಿಶೇಷವಾನಿತಿ । ಬೃಹದ್ಭಾಷ್ಯೇಽಪಿ । ಕ್ರಿಯಾಣಾಂಚ ನನಾಶೋಸ್ತಿತಚ್ಛಕ್ತೇಃ ಪೂರ್ವ ಕಾಲತಃ । ವಿಶೇಷ ಏವೋ ಪರತಿಃ ಕ್ರಿಯಾಯಾಃ ಸಮುದೀರಿತಾ । ಕರೋತಿ ನಕರೋತೀತಿ ವಿಶೇಷ ವ್ಯವಹಾರಕೃತ್ । ವ್ಯಕ್ತಿಭಾವಂ ಗತಾಯಾತು ಕರೋತೀತಿ ಸ್ವರೂಪಿಣೇ । ಶಕ್ತಿರೂಪ ಸ್ಥಿತಾಸ್ಯೈವ ಕ್ರಿಯಾ ಶಕ್ತಿರುದೀರ್ಯತ ಇತಿ । ಅನಿತ್ಯತ್ವಾನುಮಾನಂತು "ಸ್ವಾಭವಿಕೀ ಜ್ಞಾನ ಬಲಕ್ರಿಯಾ ಚ"। ಜ್ಞಾನಂ ನಿತ್ಯಂ ಕ್ರಿಯಾ ನಿತ್ಯಾ ಬಲಂ ನಿತ್ಯಂ ಪರಾತ್ಮ ನಃ ಇತ್ಯಾದಿ ಪ್ರಮಾಣ ಬಾಧಿತತ್ವಾತ್ ಅಪ್ರಮಾಣಂ । ಅನ್ಯಥಾ ಪರಪಕ್ಷೇಪೀಶ್ವರೇಚ್ಛಾಯಾ ಸರ್ವದಾ ಸತ್ವಾತ್ಸರ್ವದಾ ಸೃಷ್ಟ್ಯಾದ್ಯಾಪತ್ತಿಃ।**

ಈ ವಿಷಯವನ್ನು ಅನುವ್ಯಾಖ್ಯಾನದಲ್ಲಿ ಕ್ರಿಯೆಗಳೆಲ್ಲವೂ ಅನಿತ್ಯಗಳಾಗಿರುವುದ ರಿಂದ ಪರಮಾತ್ಮನ ಸ್ವರೂಪತೆ ಹೇಗೆ ಎಂದರೆ ಈಶ್ವರನ ಕ್ರಿಯೆಗಳಲ್ಲಿ ನಿತ್ಯತೆಯಿರು ವುದರಿಂದ ಶಕ್ತಿ ವ್ಯಕ್ತಿ ಭಾವಗಳು ಇರುತ್ತವೆ. ವಿಶೇಷವಶಾತ್ ಅವುಗಳಿಗೆ ಭಗವದಿಚ್ಛಾನುಸಾರವಾಗಿ ಶಕ್ತಿ ವ್ಯಕ್ತಿತ್ವಗಳ ವಿಶೇಷಗಳುಳ್ಳವನು ಈಶ್ವರನು ಎಂದು

ಹೇಳಿದೆ. ಮತ್ತು ಬೃಹದ್ಭಾಷ್ಯದಲ್ಲಿಯೂ ಪರಮಾತ್ಮನಲ್ಲಿಯ ಕ್ರಿಯೆಗಳಿಗೆ ಪರಮಾತ್ಮನ ಸ್ವರೂಪತೆಯಿಂದ ಅನಾದಿ ಕಾಲತೆಯಿರುವುದರಿಂದ ಜನ್ಮವೂ ಇಲ್ಲ ವಿಶೇಷ ಸಾಮರ್ಥ್ಯದಿಂದಲೇ ಕ್ರಿಯಾಗಳ ಶಕ್ತಿತ್ವ ವ್ಯಕ್ತಿತ್ವಗಳು ಹೇಳಲ್ಪಟ್ಟಿದೆ. ಆದುದರಿಂದಲೇ ಮಾಡುತ್ತಾನೆ. ಮಾಡುವುದಿಲ್ಲ ಹೀಗೆ ವಿರುದ್ಧ ವ್ಯವಹಾರಗಳು ಅವನಲ್ಲಿ ಅವಿರುದ್ಧವೇ ಆಗಿರುತ್ತದೆ ಪರಮಾತ್ಮನಲ್ಲಿಯ ಕ್ರಿಯೆಗಳು ವ್ಯಕ್ತಿತ್ವವನ್ನು ತಾಳಿದಾಗ ಸ್ವರೂಪಗಳೆನಿಸಿಕೊಳ್ಳುತ್ತದೆ. ಶಕ್ತಿ ಭಾವವನ್ನು ತಾಳಿದಾಗ ಕ್ರಿಯಾ ವಿಶಿಷ್ಟವೆನಿಸಿಕೊಳ್ಳುತ್ತವೆ ಹೀಗಿರುವುದರಿಂದ ಪರಮಾತ್ಮನ ಕ್ರಿಯೆಗಳು ನಿತ್ಯಗಳೂ ಅವನ ಸ್ವರೂಪಗಳೇ ಆಗಿರುತ್ತದೆ. ಹಿಂದೆ ಹೇಳಿದ ಅನಿತ್ಯತ್ವ ಅನುಮಾನವಾದರೂ ಪರಮಾತ್ಮನ ಜ್ಞಾನಕ್ರಿಯಾದಿಗಳ ಸ್ವಾಭಾವಿಕವಾಗಿ ಅವನ ಸ್ವರೂಪವೇ ಆಗಿ ನಿತ್ಯಗಳೇ ಆಗಿರುತ್ತದೆ. ಎಂದು ಶ್ರುತಿಯಿಂದಲೂ ಹಾಗೂ ಭಗವಂತನ ಜ್ಞಾನವು ನಿತ್ಯ, ಕ್ರಿಯೆಯೂ ನಿತ್ಯ, ಬಲವೂ ನಿತ್ಯ ಇತ್ಯಾದಿ ಶ್ರುತಿ ಪ್ರಮಾಣಗಳಿಂದ ಭಾದಿತವೇ ಆಗಿರುತ್ತದೆ. ಪರಪಕ್ಷದಲ್ಲಿಯೂ (ನಯ್ಯಾಯಿಕರ ಪಕ್ಷದಲ್ಲಿಯೂ) ಈಶ್ವರ ಇಚ್ಛೆಗೆ ನಿತ್ಯತೆ ಹೇಳಿರುವುದರಿಂದ ಸದಾ ಸೃಷ್ಟಿ ಪ್ರಳಯಾದಿಗಳು ಆಗಲಿ ಎಂಬ ಆಪತ್ತಿಯು(ಆಪಾದನೆಯು) ಬಂದೇ ಬರುತ್ತದೆ. ಆದುದರಿಂದ ಪರಮಾತ್ಮನ ಕ್ರಿಯೆಯಲ್ಲಿ ಅವನ ಇಚ್ಛಾನುಸಾರವಾದ ಶಕ್ತಿ ವ್ಯಕ್ತಿ ಭಾವಗಳನ್ನು ಒಪ್ಪಲೇಬೇಕು.

**ನ ಚ ಸಿಸೃಕ್ಷಯಾಸೃಷ್ಟಿಃ ಸಂಜಿಹೀರ್ಷಯಾ ಸಂಹಾರಃ । ತೇಚ ನ ಸರ್ವದೇತಿ ವಾಚ್ಯಂ । ತತ್ ಕಿಂ ಸಿಸೃಕ್ಷಾ ಸಂಜಿಹೀರ್ಷಾ ಚೇಚ್ಛಾತಿರಿಕ್ತಾ ಉತೇಚ್ಛಾ ಸ್ವರೂಪ ಭೂತಾ ನಾದ್ಯಃ । ಅಷ್ಟ ಗುಣತ್ವ ವ್ಯಾಘಾತೇನ ಅಪಸಿದ್ಧಾಂತಾಪಾತಾತ್ । ದ್ವಿತೀಯೇ ಪೂರ್ವೋಕ್ತ ದೋಷಾನಿಸ್ತಾರಃ । ಕಾಲ ವಿಶೇಷ ಸಹಕಾರಿ ವಿರಹಾನ್ನಸರ್ವದಾ ಸೃಷ್ಟ್ಯಾದಿಃ ಇತಿ ಚೇತ್ ಸಮಮಸ್ಮತ್ಪಕ್ಷೇಽಪಿ ।**

ಸೃಷ್ಟಿಸಲಿಚ್ಛೆಯಿಂದ ಸೃಷ್ಟಿಯು, ನಾಶ ಮಾಡಲಿಚ್ಛೆಯಿಂದ ಸಂಹಾರವು, ಇವುಗಳು ಸರ್ವದಾ ಆಗಲಿ ಎನ್ನಬಾರದು. ಏಕೆಂದರೆ ಸೃಜಿಸಲು ಸಂಹರಿಸಲು ಇವೇ ಏನಿದೆ ಇದು ಭಗವಂತನ ಸ್ವರೂಪವೋ ಬೇರೆಯೋ, ಸ್ವರೂಪವಲ್ಲ, ನಿನ್ನ (ನೈಯಾಯಿಕ)ಮತದಂತೇ ಎಂಟೇಗುಣಗಳೆಂಬ ಮಾತಿಗೆ ವಿರುದ್ಧವಾಗಿ ಅಪಸಿದ್ಧಾಂತ ಸ್ವರೂಪವೆಂದರೆ ಸದಾ ಸೃಷ್ಟಿ ನಾಶಗಳಾಗುತ್ತಿರಲಿ, ಎಂಬ ಆಪಾದನೆಯು ಬಂದೇ ಬರುತ್ತದೆ. ಕಾಲ ವಿಶೇಷರೂಪ ಸಹಕಾರಿ ಸಾಮಗ್ರಿ ಇರುವಿಕೆ ಇಲ್ಲದಿರುವಿಕೆಯಿಂದ ಸೃಷ್ಟ್ಯಾದಿಗಳಿದ್ದುದರಿಂದ ಸದಾ ಆಗಲಿ ಎಂಬುದಿಲ್ಲಾ ಅಂದರೆ ನಮ್ಮ ಪಕ್ಷವೇ ಒಪ್ಪಿದಂತಾಯಿತು.

**ಮುಕ್ತಾನಾಂ ಕ್ರಿಯಾತು ಗಮನಾದಿರೂಪಾ । ಸತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ ಸ್ತ್ರೀಭಿರ್ವಾಯಾನೈರ್ವಾ ಇತ್ಯಾದಿ ಶ್ರುತಿ ಸಿದ್ಧಾ । ಉಕ್ತಂ ಬೃಹದ್ಭಾಷ್ಯೇ । ಏವಂ ವಿಮುಕ್ತ ಜೀವಾನಾಂ ಸ್ವರೂಪೈಃ ಸ್ವಗುಣೈರಪಿ । ಸ್ವಕ್ರಿಯಾಭಿಸ್ಸದೈವೈಕ್ಯಂ ನಿತ್ಯಂಸ್ವಾವಯವೈರಪೀತಿ । ನಚ ಸೋತ್ಪತ್ತಿ ವಿನಾಶವತೀತಿ ವಕ್ತುಂ ಶಕ್ಯಾ । ಪ್ರಕೃತಿ ಸಂಬಂಧಾಭಾವೇನೋಪಾದಾನಾಭಾವಾತ್ । ಸಂಸಾರಿಣಾಂತು ಕಿಂ ಮಯಾ ಕಾರ್ಯಮಿತ್ಯಾದಿ ಚಿಂತನಾದಿ 'ಕ್ರಿಯಾಣಾಮನಿತ್ಯತ್ವಂ ಜೀವೇನ ಭೇದಾಭೇದಃ । ಮುಕ್ತಾವುಚ್ಛೇದ ದರ್ಶನಾತ್ ।**

ಮುಕ್ತರ ಕ್ರಿಯೆಯು ಗಮನಾಗಮನಾದಿರೂಪವಾದದ್ದು. ಮುಕ್ತರು ಸ್ತ್ರೀಯರ ವಾಹನ ಮೊದಲಾದವುಗಳಿಂದ ಸ್ವೇಚ್ಛೆಯಾಗಿ ಆಡುವವರಾಗಿ, ತಿನ್ನುವವರಾಗಿ, ಆನಂದಪಡುವವರಾಗಿ ಇರುತ್ತಾರೆ. ಹೀಗೆ ಹೇಳುವುದು ವೇದ ಪ್ರಮಾಣ ಸಿದ್ಧವು. ಬೃಹದ್ಭಾಷ್ಯದಲ್ಲಿಯೂ ಹೇಳಿರುತ್ತದೆ. ಮುಕ್ತ ಜೀವರುಗಳಿಗೆ ಸ್ವಗುಣಗಳು ಸ್ವಕ್ರಿಯಾಗಳು ಸ್ವರೂಪ ಭೂತಗಳೇ ಆಗಿರುವುದರಿಂದ ನಿತ್ಯವಾದ ಸ್ವ ಅವಯವಗಳಿಂದಲೇ ವಿಹರಿಸುತ್ತಾರೆ. ಅವರ ಗುಣ ಕ್ರಿಯಾದಿಗಳು ಉತ್ಪತ್ತಿವಿನಾಶ ಉಳ್ಳವುಗಳು ಎನಬಾರದು, ಪ್ರಕೃತಿ ಸಂಬಂಧವೇ ಇಲ್ಲದಿರುವುದರಿಂದ ಸಂಸಾರಿಗಳಂತೆ ನಾನು ಏನು ಮಾಡಬೇಕು, ಹೇಗೆ ಮಾಡಬೇಕು ಇತ್ಯಾದಿ ಚಿಂತಾಮೂಲಕ ಕ್ರಿಯೆಗಳು ಅನಿತ್ಯಗಳೇ ಆಗಿವೆ. ಈ ಕ್ರಿಯಾಗಳಿಂದ ಜೀವನಿಗೆ ಭೇದಾಭೇದವು ಮುಕ್ತಿಯಲ್ಲಿ ಸ್ವರೂಪಾತಿರಿಕ್ತ ವಸ್ತು ಸಂಬಂಧವೇ ಕಡಿದು ಹೋಗಿರುವುದರಿಂದ ಎಲ್ಲಾ ಕ್ರಿಯೆಗಳು ಸ್ವರೂಪಗಳೇ ಆಗಿ ನಿತ್ಯವೇ ಆಗಿರುತ್ತದೆ.

**ತದುಕ್ತಂ ಬೃಹದ್ಭಾಷ್ಯೇ । ಏವಮುಕ್ತ ಕ್ರಿಯಾನಿತ್ಯಾನಾನ್ಯೇಷಾಂ ಭ್ರಾಂತಿ ಸಂಭವಾತ್ । ಮುಕ್ತಾಉಚ್ಛೇದತಶ್ಚೈವನಿತ್ಯೇಷೇಣಾಖಿಲಸ್ಯಚ । ಅನಿತ್ಯಾನಾಂ ಕ್ರಿಯಾಯಾಶ್ಚ ಮುಕ್ತಾವಪಿ ಸಮಾಸ್ಥಿತಾಃ । ಅಭಿನ್ನಾ ಅಪಿ ತಾಜ್ಞೇಯಾಃ ಅಭಿವ್ಯಕ್ತೇಃ ಪುನಃ ಪುನಃ । ಚಿಂತನಾದಿ ಕ್ರಿಯಾ-ಣಾಂತು ಮುಕ್ತಾ ಉಚ್ಛೇದತಸ್ಸದಾ । ಕಿಂ ಮಯಾಕಾರ್ಯಮಾದೀನಾಂ ಭೇದಾಭೇದಃ ಉದೀರಿತಃ । ಭೇದಾಭೇದಸ್ತು ಬಂಧಾನಾಂ ಗುಣೈಃಸ್ವೈಃ ಕರ್ಮಭಿಸ್ತಥಾ ಇತಿ । ಅನಿತ್ಯ ಕ್ರಿಯಾಯಾಃ ಸ್ಥಾನಮಾಹ ।**

**ಅನಿತ್ಯೋ ಅನಿತ್ಯಗಃ ।**

---

ಬೃಹದ್ಭಾಷ್ಯದಲ್ಲಿ ಹೇಳಿರುತ್ತಾರೆ. ಮುಕ್ತರಕ್ರಿಯೆಗಳೆಲ್ಲವೂ ನಿತ್ಯವಾದವು ಸಂಸಾರಿಗಳಿಗೆ ಭ್ರಾಂತಿ ಇರುವುದರಿಂದ ಅವರ ಕ್ರಿಯೆಗಳು ಅನಿತ್ಯವೇ ಆಗಿರುತ್ತದೆ ಎಂದು ಹೇಳಿದೆ. ಮುಕ್ತರುಗಳಿಗೆ ಸ್ವರೂಪಾತಿರಿಕ್ತವಾದವುಗಳೆಲ್ಲಾ ನಿಶ್ಶೇಷವಾಗಿ

ನಾಶವೇ ಆಗಿರುವುದರಿಂದ ಕ್ರಿಯಾದಿಗಳು ನಿತ್ಯಗಳಾದರೂ ಕಿಂಚಿದನಿತ್ಯಕ್ರಿಯೆಯೂ ಇದೆ. ಹೇಗೆಂದರೆ, ಅವರ ಕ್ರಿಯೆಗಳು ಅಭಿವ್ಯಕ್ತತೆವನ್ನು ತಾಳುವುದರಿಂದ ಆಲೋಚನಾದಿ ಕ್ರಿಯಾಗಳಂತೂ ಮೋಕ್ಷದಲ್ಲೇ ಇಲ್ಲ. ನಾನೇನು ಮಾಡಬೇಕು, ಇತ್ಯಾದಿ ಸಂಸಾರಿಗಳ ಕ್ರಿಯೆಗಳಿಗೆ ಭೇದಾಭೇದವೇ ಹೇಳಿದೆ. ಪ್ರಕೃತಿ ಬದ್ಧರಿಗೆ ಸ್ವಗುಣ ಮೂಲಕವಾಗಿ ಭೇದಾಭೇದವು ಹೇಳಿರುತ್ತದೆ. ಅನಿತ್ಯ ಕ್ರಿಯಾಸ್ಥಾನವನ್ನು ಹೇಳುತ್ತಾರೆ. ಅನಿತ್ಯ ವಸ್ತುಗಳಲ್ಲಿರುವ ಕ್ರಿಯಾಗಳೆಲ್ಲವೂ ಅನಿತ್ಯವೇ ಆಗಿರುತ್ತದೆ.

**ಶರೀರಾದ್ಯನಿತ್ಯ ವೃತ್ತಿ ಕ್ರಿಯೇತ್ಯರ್ಥಃ । ನನ್ವನಿತ್ಯ ಕ್ರಿಯಾಸದ್ಭಾವೇ ಮಾನಾಭಾವಃ । ನ ಚ ಗಚ್ಛತೀತಿ ಪ್ರತ್ಯಕ್ಷ ಪ್ರತೀತಿರೇವ ಮಾನ ಮಿತಿ ವಾಚ್ಯಂ । ಪೂರ್ವದೇಶ ವಿಭಾಗೋತ್ತರ ದೇಶ ಸಂಯೋಗಯೋಃ ಏವ ಗಚ್ಛತೀತಿ ಪ್ರತ್ಯಯ ವಿಷಯತ್ವೋಪಪತ್ತೇಃ । ನ ಚ ಶರೀರಾದೌ ಕ್ರಿಯಾಭಾವೇ ಉತ್ತರದೇಶ ಸಂಯೋಗೋತ್ಪತ್ತಿರೇವ ನಸಂಭವತೀತಿ ವಾಚ್ಯಂ । ಜೀವ ಪ್ರಯತ್ನೇನೈವ ತದುತ್ಪತ್ತ್ಯುಪಪತ್ತೇರಿತಿಚೇನ್ನ । ಪ್ರಯತ್ನಸ್ಯ ಜೀವಗತತ್ವೇನ ಶರೀರೋತ್ತರದೇಶ ಸಂಯೋಗ ಜನಕತ್ವಾಸಂಭವಾತ್ ।**

ಶರೀರಾದಿ ಅನಿತ್ಯ ಪದಾರ್ಥಗಳಲ್ಲಿರುವ ಕ್ರಿಯಾಗಳೆಲ್ಲಾ ಅನಿತ್ಯವೇ. ಅನಿತ್ಯವಾದ ಕ್ರಿಯೆಗಳಿವೆ ಎಂಬಲ್ಲಿ ಪ್ರಮಾಣವಿಲ್ಲ ಎನಬಾರದು. ಹೋಗುತ್ತಾನೆ ಎಂಬ ಪ್ರತ್ಯಕ್ಷ ಪ್ರಮಾಣವೇ ಆಗಿರುವುದರಿಂದ ಹಾಗೆನಬಾರದು, ಹೋಗುತ್ತಾನೆ ಎಂಬುದರ ಅರ್ಥವೇನು ? ಈ ಸ್ಥಳವು ನಿತ್ಯಜೀವನ ಕ್ರಿಯೆಯ ಸಂಯೋಗವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಸೇರಿದನೆಂದರ್ಥವು. ದೇಹದಲ್ಲಿ ಕ್ರಿಯೆ ಇಲ್ಲವಾದರೆ ದೇಹಕ್ಕೆ ಈ ಸ್ಥಳ ಸಂಯೋಗದಿಂದ ಮತ್ತೊಂದು ಸ್ಥಳ ಸಂಯೋಗ ಹೇಗೆ, ಆದ್ದರಿಂದ ದೇಹದಲ್ಲಿ ಕ್ರಿಯೆ ಎಂತಲೂ ಅನ್ನಬಾರದು. ಜೀವನಲ್ಲಿಯ ಪ್ರಯತ್ನ ರೂಪ ಕ್ರಿಯೆಯಿಂದ ದೇಹಕ್ಕೆ ಸ್ಥಳ ಸ್ಥಳಾಂತರ ಸಂಯೋಗ ರೂಪ ಗಮನವು ಎನ್ನುತ್ತೇವೆ ಎಂದರೆ, ಅದೂ ತಪ್ಪು ಪ್ರಯತ್ನ ಜೀವನಲ್ಲಿದ್ದರೆ ಕ್ರಿಯಾ ದೇಹದಲ್ಲಿ ಹೇಗೆ ಬಂದೀತು. ಅಸಂಭವೇ ಆಗಿರುತ್ತದೆ.

**ಅನ್ಯಥಾ ಸ್ಥಿತಿಕಾಲೇಽಪಿ ತಾದೃಶ ಪ್ರಯತ್ನ ಸಂಭವೇನ ಗಮನ ಪ್ರಸಂಗಾದಿತ್ಯಲಂ । ಅಧಿಕಂತು ಸುಧಾಯಾಂ ದ್ರಷ್ಟವ್ಯಂ । ನನ್ವಥಾಪಿಗಮನಾದಿ ನಪ್ರತ್ಯಕ್ಷಂ । ಕಿಂತ್ವನುಮಾನ ಗಮ್ಯಂ । ನ ಚೇಂದ್ರಿಯಾನ್ವಯ ವ್ಯತಿರೇಕಾನುವಿಧಾನಾದ್ಗಮನಂ ಪ್ರತ್ಯಕ್ಷಮಿತಿ ವಾಚ್ಯಂ । ಶರೀರ ರೂಪಾಶ್ರಯ ಗ್ರಹಣೋಪಕ್ಷೀಣತ್ವೇನ ಚರಿತಾರ್ಥತ್ವಾದಿತಿಚೇನ್ನ । ಘಟ-ರೂಪಾದೇರಪಿ ಪ್ರತ್ಯಕ್ಷತ್ವಾಭಾವ ಪ್ರಸಂಗಾತ್ । ಕ್ರಿಯಾತುಲ್ಯತ್ವಾತ್ ।**

ಜೀವನಲ್ಲಿ ಪ್ರಯತ್ನವಿದ್ದರೆ ಸಾಕು ದೇಹದಲ್ಲಿ ಕ್ರಿಯೆಯು ಹುಟ್ಟುತ್ತದೆ ಎನ್ನುವ ಪಕ್ಷದಲ್ಲಿ ಜೀವ ಕೂತಿದ್ದಾಗ್ಯೂ ಅವನಲ್ಲಿ ಪ್ರಯತ್ನ ಸಂಭವವಾದ್ದರಿಂದ ಗಮನ ಕ್ರಿಯಾ ಹುಟ್ಟಿ ಹೋಗುತ್ತಾನೆಂಬ ಪ್ರಮಾದ ಬರಲಿ, ಆದ್ದರಿಂದ ನಿತ್ಯ ಜೀವನಲ್ಲಿಯು ಕ್ರಿಯೆಗಳು ಅನಿತ್ಯ ದೇಹಗಳಲ್ಲಿಯು ಕ್ರಿಯೆ ಇಲ್ಲಾ ಎನ್ನಬಾರದು ಹೆಚ್ಚಿನ ವಿಚಾರಗಳನ್ನು ಸುಧಾದಲ್ಲಿ ಕಾಣಬಹುದು. ಆದರೂ ಗಮನಾದಿಗಳು ಪ್ರತ್ಯಕ್ಷವಲ್ಲ, ಅನುಮಾನದಿಂದಲೇ ತಿಳಿಯಲರ್ಹವಾದುದು. ಚಕ್ಷುರಾದಿ ಇಂದ್ರಿಯಗಳ ಅನ್ವಯ ವ್ಯತಿರೇಕಗಳ ವಿಧಾನದಿಂದ ಗಮನಾದಿಗಳು ಪ್ರತ್ಯಕ್ಷವೇ ಎನ್ನಬಹುದಲ್ಲವೇ ಎಂದರೆ, ಹಾಗೆ ಎನ್ನಬಾರದು. ಶರೀರರೂಪ ಆಶ್ರಯ ಗ್ರಹಣೋಪಕ್ಷಿಣತೆಯಿಂದಲೇ ಚರಿತಾರ್ಥವೆನ್ನುತ್ತೇವೆ, ಅನ್ನಬಾರದು. ಘಟರೂಪಾದಿಗಳಿಗೂ ಪ್ರತ್ಯಕ್ಷತೆಇಲ್ಲವಾಗಲಿ ಎಂಬ ಪ್ರಸಂಗ ಒದಗುವುದರಿಂದ, ಕ್ರಿಯಾ ವಿಷಯದಲ್ಲಿ ಸಾಮ್ಯತೆಯಿರುವುದರಿಂದ.

ನನು ಶರೀರಕ್ರಿಯಾ ನಪ್ರತ್ಯಕ್ಷಾ । ಕ್ರಿಯಾತ್ವಾತ್ । ಪರಮಾಣು ಕ್ರಿಯಾವದಿತಿ ಚೇನ್ನ । ಘಟ ರೂಪಂ ನ ಪ್ರತ್ಯಕ್ಷಂ ರೂಪತ್ವಾತ್ । ಪರಮಾಣು ರೂಪವದಿತ್ಯಪಿ ವಕ್ತುಂ ಶಕ್ಯತ್ವಾತ್ । ಕಿಂ ಚ ಯೋಗ್ಯ ದ್ರವ್ಯವೃತ್ತಿತ್ವೇನ ಸಾಮಾನ್ಯವತ್ಪ್ರತ್ಯಕ್ಷತ್ವಂ ಕ್ರಿಯಾಯಾಃ ಯುಕ್ತಮೇವ । ನನು ಶರೀರ ಪರಿಸ್ಪಂದೋನಪ್ರತ್ಯಕ್ಷಃ । ಪರಿಸ್ಪಂದತ್ವಾತ್ । ತರಣಿಪರಿಸ್ಪಂದವದತಿ ಚೇನ್ನ । ದೂರಸ್ಥಿತ್ವ ದೋಷೇಣ ತರಣಿ ಪರಿಸ್ಪಂದಸ್ಯ ಅಪ್ರತ್ಯಕ್ಷತ್ವೇಪಿ ಶರೀರ ಕ್ರಿಯಾಯಾಃ ಸಮೀಪಸ್ಥಿತ್ವೇನ ಪ್ರತ್ಯಕ್ಷತ್ವ ಸಂಭವಾತ್ । ಅನ್ಯಥಾ ಪರಿಮಾಣರೂಪ ಜಾತ್ಯಾದೀನಾಂ ದೂರಸ್ಥೇ ಅಪ್ರತ್ಯಕ್ಷತ್ವೇನ ಸಮೀಪಸ್ಥೇಪಿ ದೇವದತ್ತಾದಾವಪ್ರತ್ಯಕ್ಷತ್ವಪ್ರಸಂಗಾದಿತ್ಯಾದಿ ಸುಧಾಯಾಂದ್ರಷ್ಟವ್ಯಂ । ತಸ್ಮಾದನಿತ್ಯಕ್ರಿಯಾಸಿದ್ಧಿಃ । ಇತಿ ಕರ್ಮಪ್ರಕರಣಂ ।

ಶರೀರ ಕ್ರಿಯೆಯು ಪ್ರತ್ಯಕ್ಷವಲ್ಲ, ಕ್ರಿಯೆ ಯಾಗಿರುವುದರಿಂದ ಪರಮಾಣು ಕ್ರಿಯೆಯಂತೇ ಎನ್ನಬಾರದು. ಏಕೆಂದರೆ ಘಟರೂಪವು ಪ್ರತ್ಯಕ್ಷವಲ್ಲ, ಪರಮಾಣು ರೂಪದಂತೆ ಎಂದು ಸತ್ಪ್ರತಿಪಕ್ಷಾನುಮಾನವನ್ನು ಹೇಳಲು ಶಕ್ಯವಾಗುವುದರಿಂದ ಮತ್ತು ಯೋಗ್ಯ ದ್ರವ್ಯಗಳಲ್ಲಿರುವುದರಿಂದ, ಸಾಮಾನ್ಯದಂತೆ ಕ್ರಿಯೆಯು ಪ್ರತ್ಯಕ್ಷವೂ ಯುಕ್ತವೇ ಆಗಿರುತ್ತದೆ. ಶರೀರದ ಪರಿಸ್ಪಂದವು(ತಿರುಗುವಿಕೆ) ಚಲನವು ಪ್ರತ್ಯಕ್ಷವಲ್ಲ. ಪರಿಸ್ಪಂದವಾದುದರಿಂದ ಸೂರ್ಯನ ಚಲನದಂತೇ ಎನ್ನಬಾರದು. ಸೂರ್ಯನ ತಿರುಗುವಿಕೆ ದೂರ ಸ್ಥಿತಿ ದೋಷದಿಂದ ಅಪ್ರತ್ಯಕ್ಷವಾದರೂ ಶರೀರ ಕ್ರಿಯೆ ಸಮೀಪದಲ್ಲೇ ಇರುವುದರಿಂದ ಪ್ರತ್ಯಕ್ಷದ ಸಂಭವವೇ ಆಗಿರುತ್ತದೆ. ಹಾಗಲ್ಲದ

ಪಕ್ಷದಲ್ಲಿ ದೂರಸ್ಥ ಪದಾರ್ಥಗಳಲ್ಲಿ ಪರಿಮಾಣರೂಪ ಜಾತ್ಯಾದಿಗಳಿಗೆ ದೂರ ಸ್ಥಿತಿತ್ವ ದೋಷದಿಂದ ಅಪ್ರತ್ಯಕ್ಷತೆ, ಆದರೆ ಸಮೀಪದಲ್ಲಿರುವ ದೇವತಾದಿಗಳಲ್ಲೂ ಪ್ರತ್ಯಕ್ಷ ವಾಗದೇ ಹೋಗಲಿ ಇತ್ಯಾದಿ ಆಪಾದನೆಗಳನ್ನು ಸುಧಾದಲ್ಲಿ ಕಾಣಬಹುದು. ಒಟ್ಟಿನಲ್ಲಿ ಅನಿತ್ಯ ಕ್ರಿಯೆಯು ಸಿದ್ಧಿಸುತ್ತದೆ.

ಹೀಗೆ ನಾಲ್ಕನೆಯದಾದ ಕರ್ಮವಿಭಾಗ ಪ್ರಕರಣದ ಕನ್ನಡಾನುವಾದ ಸಮಾಪ್ತವಾಯಿತು.

## ೫. ಸಾಮಾನ್ಯ ಪ್ರಕರಣ

**ಕ್ರಮಪ್ರಾಪ್ತಂ ಸಾಮಾನ್ಯಂ ವಿಭಜತಿ ನಿತ್ಯಮಿತಿ ।**

ನಿತ್ಯಮನಿತ್ಯಂ ಚೇತಿ ಸಾಮಾನ್ಯಂ ದ್ವಿವಿಧಂ । ಪ್ರತಿವ್ಯಕ್ತ್ಯನನುಗತಂ । ಪುನರ್ದ್ವಿವಿಧಂ ।

**ಪುನರ್ವಿಭಜತಿ ॥** ಜಾತಿರುಪಾಧಿಶ್ಚೇತಿ ।

**ನಚ ಜಾತಿವ್ಯತಿರೇಕೇಣ ಉಪಾಧಿ ಸದ್ಭಾವೇ ಮಾನಾಭಾವಃ ಇತಿ ವಾಚ್ಯಂ । ಪ್ರಮೇಯತ್ವಾದೀನಾಂ ಇತರ ನಿರೂಪ್ಯತ್ವೇನ ಜಾತಿತ್ವ ಅಸಿದ್ಧೇಃ । ತದುಕ್ತಂ ತರ್ಕತಾಂಡವೇ । ತರತಮತ್ವಾದೇರಪಿ ಅತಿಶಯ ವಿಶಿಷ್ಟೋಪಾಧಿತ್ವಾತ್ । ನಹಿ ಜಾತಿಃ ಸಾಪೇಕ್ಷೇತಿ । ನ್ಯಾಯಾಮೃತೇಪಿ। ಆತ್ಮತ್ವಸ್ಯ ಜಾತಿತ್ವೇ ಲಾಘವಂ । ಉಪಾಧಿತ್ವೇ ಗೌರವಮಿತಿ । ಶಾಸ್ತ್ರೀಯ ಜಾತಿವ್ಯವಹಾರ ವಿಷಯೋ ಜಾತಿರಿತಿ ಜಾತಿ ಸಾಮಾನ್ಯ ಲಕ್ಷಣಂ । ಬ್ರಾಹ್ಮಣತ್ವಾದೇಃ ಜಾತಿತ್ವೇನ ವ್ಯವಹಾರಃ ಬೃಹದ್ಭಾಷ್ಯಾದೌ ದೃಷ್ಟಃ । ತಥಾಹಿ.**

ಪದಾರ್ಥಗಳ ನಿರೂಪಣೆಯಲ್ಲಿ ಕ್ರಮವಾಗಿ ಒದಗಿದ ಸಾಮಾನ್ಯವನ್ನು ವಿಭಾಗಿಸುತ್ತಾರೆ. ಸಾಮಾನ್ಯವು ನಿತ್ಯ, ಅನಿತ್ಯವೆಂದು ಎರಡು ವಿಧಗಳಾಗಿವೆ. ಪ್ರತಿ ವ್ಯಕ್ತಿಗಳಲ್ಲೂ ಅನನುಗತವಾದು. ಪುನಃ ಜಾತಿ ಉಪಾಧಿ ಎಂದು ಎರಡು ವಿಧವಾದವು.

ಜಾತಿ ವ್ಯತಿರಿಕ್ತವಾಗಿ ಉಪಾಧಿ ಎಂಬ ಸಾಮಾನ್ಯವು ಉಂಟೆಂಬಲ್ಲಿ ಪ್ರಮಾಣವಿಲ್ಲ ಎಂದರೆ, ಹೀಗೆನಬಾರದು. ಪ್ರಮೇಯತ್ವಾದಿಗಳಿಗೆ ಇತರ ನಿರೂಪಕವಾಗಿ ಇರುವುದ ರಿಂದ ಉಪಾಧಿತ್ವವು, ಜಾತೀಯತೆಯು ಸಿದ್ಧಿಸದೇ ಹೋಗುತ್ತದೆ. ಈ ವಿಷಯವನ್ನು

ತರ್ಕತಾಂಡವದಲ್ಲಿ ನಿರೂಪಿಸಿರುತ್ತಾರೆ. ತರತಮತ್ವಾದಿಗಳಲ್ಲಿ ಸಹ ವಿಶಿಷ್ಟ ಉಪಾಧಿ ಇರುತ್ತದೆ. ಇದು ಜಾತಿ ಸಾಪೇಕ್ಷವಾಗಿರುವುದಿಲ್ಲ [?] ಎಂದು ಮತ್ತು ಆತ್ಮತ್ವಾದಿಗಳಲ್ಲಿ ಜಾತಿತ್ವವನ್ನು ಹೇಳಿದರೆ ಲಾಘವವು, ಉಪಾಧಿತ್ವವನ್ನು ಹೇಳಿದರೆ ಗೌರವವೆಂದು ನ್ಯಾಯಾಮೃತದಲ್ಲಿ ಹೇಳಿರುತ್ತಾರೆ ಶಾಸ್ತ್ರೀಯ ಜಾತಿ, ವ್ಯವಹಾರ ವಿಷಯತ್ವವೇ ಜಾತಿಯು. ಹೀಗೆ ಜಾತಿ ಸಾಮಾನ್ಯ ಲಕ್ಷಣವು ಬ್ರಾಹ್ಮಣತ್ವಾದಿಗಳಲ್ಲಿ! ಜಾತಿತ್ವೇನ ವ್ಯವಹಾರವು ಬೃಹದ್ಭಾಷ್ಯಾದಿಗಳಲ್ಲಿ ಕಂಡಿರುತ್ತದೆ. ಮುಂದಿನ ಕ್ರಮದಲ್ಲಿ ಹೇಳಿರುತ್ತದೆ.

**ವಿಷ್ಣೋಃ ಬ್ರಾಹ್ಮಣಜಾತಿಸ್ಸನ್ ಬ್ರಹ್ಮಾಜಜ್ಞೇ ಚತುರ್ಮುಖಃ । ಇತೋಽಗ್ರೇ ಜಗತಸ್ತಸ್ಮಾತ್ ಕ್ಷತ್ರಜಾತಿರಜಾಯತ । ವಾಯುಃ ಸದಾಶಿವೋಽನಂತೋ ಗರುಡಃ ಶಕ್ರ ಏವಚ । ಕಾಮಶ್ಚ ವರುಣಶ್ಚೈವ ಸೋಮ ಸೂರ್ಯೌ ಯಮಸ್ತಥಾ । ಏವಮಾದ್ಯಾಃ ಕ್ಷತ್ರಿಯಾಸ್ತು ದೇವಾನಾಂ ಬ್ರಹ್ಮ ನಿರ್ಮಿತಾಃ । ಶ್ರೇಯಸೀ ಸರ್ವಜಾತಿಭ್ಯಃ ಕ್ಷತ್ರಜಾತಿರಿತಿ ಶ್ರುತಿಃ। ನೈವ ಕ್ಷತ್ರಾತ್ ಪರಾಜಾತಿಃ ಬ್ರಹ್ಮ ಜಾತಿಂ ವಿನಾಕ್ವಚಿತ್ । ರುದ್ರಾದನ್ಯೇ ತಥಾರುದ್ರಾಃ ವಾಯೋರನ್ಯೇಚ ವಾಯವಃ । ಅಗ್ನೇರನ್ಯೇಚ ವಸವೋ ವೈಶ್ಯಾ ಇತ್ಯೇವ ಕೀರ್ತಿತಾಃ । ಅಶ್ವಿನೌ ಪೃಥಿವೀ ಚೈವ ಕಾಲಾಮೃತ್ಯವ ಏವ ಚ । ಶೂದ್ರದೇವಾಸ್ಸಮುದ್ದಿಷ್ಟಾ ದೇವವರ್ಣಾಃ ಇತಿಸ್ಮೃತಾಃ ।**

ವಿಷ್ಣುವಿನ ದೆಸೆಯಿಂದ ಚತುರ್ಮುಖ ಬ್ರಹ್ಮನು ಬ್ರಾಹ್ಮಣ ಜಾತಿಯವರಾಗಿ ಮೊದಲು ಹುಟ್ಟಿದರು. ಆ ಚತುರ್ಮುಖನ ದೆಸೆಯಿಂದ ಕ್ಷತ್ರಿಯ ಜಾತಿಯು ಹುಟ್ಟಿತು. ವಾಯು, ಸದಾಶಿವ, ಅನಂತ, ಶೇಷ, ಗರಡು, ಇಂದ್ರ, ಕಾಮ, ವರುಣ, ಚಂದ್ರ ಹಾಗೂ ಸೂರ್ಯ ಇವರೇ ಮೊದಲಾದ ದೇವತೆಗಳು ಬ್ರಹ್ಮನಿಂದ ನಿರ್ಮಿತರಾದ ಕ್ಷತ್ರಿಯರು. ಬ್ರಹ್ಮಾತಿರಿಕ್ತ ಕ್ಷತ್ರಿಯ ಜಾತಿಯು ಶ್ರೇಯಸ್ಸಿಗೆ ಕಾರಣರೆಂದು ಶ್ರುತಿ ಹೇಳುತ್ತದೆ. ಬ್ರಹ್ಮ ಜಾತಿ ವಿನಃ ಕ್ಷತ್ರಿಯ ಜಾತಿಗೆ ಸಮವಾದ ಶ್ರೇಷ್ಠ ಜಾತಿಯು ಮತ್ತೊಂದಿಲ್ಲ. ಏಕಾದಶ ರುದ್ರರಲ್ಲಿ ರುದ್ರದೇವರನ್ನು ಬಿಟ್ಟು ಹದಿನಾಲ್ಕು ಅಗ್ನಿಗಳಲ್ಲಿ ಅಗ್ನಿಯನ್ನು ಬಿಟ್ಟು ಮೂರು ಗಣದ ದೇವತೆಗಳು ವೈಶ್ಯರೆನಿಸಿರುತ್ತಾರೆ. ನಾಸತ್ಯ, ರುದ್ರರೆಂಬ ಅಶ್ವಿನಿ ದೇವತೆಗಳು ಪೃಥಿವೀ ಕಾಲ, ಮೃತ್ಯು ಇತ್ಯಾದಿಗಳು ಶೂದ್ರರೆನಿಸುತ್ತಾರೆ. ಹೀಗೆ ದೇವತೆಗಳಲ್ಲಿಯೂ ವರ್ಣಗಳು ಎಂದು ಸ್ಮೃತಿಗಳಲ್ಲಿ ಸಿದ್ಧವಾಗಿರುತ್ತವೆ.

**ಕೇಚಿತ್ತು । ನಿತ್ಯಮೇಕಮನೇಕಾನುಗತಂ ಸಾಮಾನ್ಯಮಿತಿ ಜಾತಿ ಲಕ್ಷಣಮಾಹುಃ । ತದ್ದೂಷಯತಿ । ಪ್ರತಿವ್ಯಕ್ತೀತಿ । ಅನನುಗತಮಿತ್ಯಪಿ ಲಕ್ಷಣಂ । ಕ್ವಚಿದನಿತ್ಯಮಪೀತ್ಯಪಿ ದ್ರಷ್ಟವ್ಯಂ । ತಥಾ ಚ ಬ್ರಾಹ್ಮಣ**

**ತ್ವಾದಿ ಜಾತೇರ್ನಿತ್ಯತ್ವಾಭಾವಾದೇಕತ್ವಾಭಾವಾದನುಗತತ್ವಾಭಾವಾಚ್ಚ ತದುಕ್ತಂ ಲಕ್ಷಣಂ ಅಸಂಭವೀತಿ ಭಾವಃ । ನನು ಜಾತಿ ಮಾತ್ರಂ ನಿತ್ಯಮೇವ ಅನಿತ್ಯತ್ವೇ ಪ್ರಮಾಣಾಭಾವಾತ್ । ನ ಚ ಮನುಷ್ಯೋತ್ಪತ್ತೌ ಮನುಷ್ಯತ್ವಸ್ಯೋತ್ಪತ್ತಿಃ ತನ್ನಾಶೇ ತನ್ನಾಶಃ ಪ್ರತ್ಯಕ್ಷಸಿದ್ಧಃ ।**

ಕೆಲವರು (ನಯ್ಯಾಯಿಕರು) ನಿತ್ಯವಾಗಿ, ಏಕವಾಗಿ, ಅನೇಕಾನುಗತವಾದುದು ಸಾಮಾನ್ಯ ಜಾತಿ ಲಕ್ಷಣವೆಂದು ಹೇಳುತ್ತಾರೆ. ಅದನ್ನು ದೂಷಿಸುತ್ತಾರೆ. ಪ್ರತಿವ್ಯಕ್ತಿಯಲ್ಲೂ ಅನನುಗತವಾದುದೇ ಜಾತಿಯು. ಕೆಲವು ಸ್ಥಳದಲ್ಲಿ ಜಾತಿಯು ಅನಿತ್ಯವು ಆಗಿರುತ್ತದೆ. ಹೇಗೆಂದರೆ ಬ್ರಾಹ್ಮಣತ್ವಾದಿ ನಿತ್ಯತ್ವವಿಲ್ಲದೇ, ಏಕತ್ವವಿಲ್ಲದೇ ಅನನುಗತತ್ವವು ಇಲ್ಲದಿರುವುದರಿಂದ ಹಿಂದಿನ ಲಕ್ಷಣವು ಅಸಂಭವಿಯಾಗುತ್ತದೆ. ಜಾತಿ ಮಾತ್ರವೇ ನಿತ್ಯವೆನ್ನಬಹುದಷ್ಟೇ ಅನಿತ್ಯತ್ವದಲ್ಲಿ ಪ್ರಮಾಣವಿಲ್ಲದಿರುವುದರಿಂದ, ಮನುಷ್ಯನು ಉತ್ಪನ್ನನಾದರೆ ಮನುಷತ್ವದ ಉತ್ಪತ್ತಿಯು, ಮನುಷ್ಯನು ನಷ್ಟನಾದರೆ ಮನುಷ್ಯತ್ವವು ನಾಶವಾಗುವುದು ಪ್ರತ್ಯಕ್ಷ ಸಿದ್ಧವಾಗಿರುತ್ತದೆ.

**ಅನ್ಯಥಾ ಭೂತಲವದುಪಲಬ್ಧಿ ಪ್ರಸಂಗ ಇತಿ ವಾಚ್ಯಂ । ಮನುಷ್ಯನಾಶೇಪಿ ಮನುಷ್ಯತ್ವಸ್ಯ ನಾಶಾಭಾವಾತ್ । ತದಾ ಕಾಲವೃತ್ತಿತ್ವೇನ ಪ್ರತ್ಯಕ್ಷೇಣಾನುಪಲಂಭಾದಿತಿ ಚೇನ್ನ । ರೂಪಾದೀನಾಮಪಿ ಉತ್ಪತ್ತಿ ವಿನಾಶಾಭಾವ ಪ್ರಸಂಗಾತ್। ಘಟಾದಿ ನಾಶೇಪ್ಯವಿನಷ್ಟಸ್ಯೈವ ರೂಪಾದೇಃ ಕಾಲ ವೃತ್ತಿತ್ವೋಪ ಪತ್ತೇಃ । ನಚ ರೂಪಾದೇಃ ಕಾಲ ವೃತ್ತಿತ್ವೇ ಕಾಲಸ್ಯ ಪ್ರತ್ಯಕ್ಷತ್ವಾಪತ್ತಿಃ । ಮಹತ್ವ ಸಮಾನಾಧಿಕರಣ ಉದ್ಭೂತ ರೂಪವತ್ವಸ್ಯ ಪ್ರತ್ಯಕ್ಷತ್ವ ಪ್ರಯೋಜಕತ್ವಾದಿತಿ ವಾಚ್ಯಂ। ದೈಹಿಕ ಸಂಬಂಧೇನ ರೂಪವತ್ವಸ್ಯ ಪ್ರತ್ಯಕ್ಷತ್ವ ಪ್ರಯೋಜಕತ್ವೇನ ಕಾಲಿಕ ಸಂಬಂಧಸ್ಯ ಅಪ್ರಯೋಜಕತ್ವಾತ್।**

ಹಾಗಿಲ್ಲದ ಪಕ್ಷದಲ್ಲಿ ಮನುಷ್ಯತ್ವವು ಭೂತಲದಂತೆ ಕಣ್ಣಿಗೆ ಕಾಣಿಸಲಿ, ಹೀಗೆನ್ನಬಾರದು. ಶರೀರ ನಾಶವಾದರೂ ಮನುಷ್ಯತ್ವದನಾಶವಿಲ್ಲವಾದ್ದರಿಂದ, ಹಾಗೆಂದರೆ ಮನುಷ್ಯತ್ವವು ಕಾಣಲಿ ಎಂದರೆ, ಆಕಾಲದಲ್ಲಿದ್ದುದರಿಂದ ಹೀಗೆ ಕಾಣುವುದಿಲ್ಲ ಎಂಬುದು ತಪ್ಪಾಗುತ್ತದೆ. ರೂಪಾದಿಗಳಿಗೂ ಉತ್ಪತ್ತಿನಾಶಗಳಿಲ್ಲವಾಗಬೇಕಾದೀತು. ಘಟಾದಿಗಳು ನಷ್ಟವಾದರೂ ನಾಶವಾಗದೇ ಇರುವ ರೂಪಾದಿಗಳಿಗೆ ಕಾಲವೃತ್ತಿತ್ವವು ಉಪಪನ್ನವೇ ಆಗಿರುತ್ತದೆ. ಎಂದರೆ ರೂಪಾದಿಗಳು ಕಾಲದಲ್ಲಿದ್ದರೆ, ಕಾಲಕ್ಕೆ ಪ್ರತ್ಯಕ್ಷತೆ ಬರಲಿ ಎಂದರೆ ಬರುವುದಿಲ್ಲ. ಪ್ರತ್ಯಕ್ಷತೆಗೆ ಮಹಾ ಪರಿಮಾಣ ವಿಶಿಷ್ಟ ಉದ್ಭೂತ ರೂಪವಿರುವಿಕೆ ಕಾರಣ ಅದು ಇಲ್ಲಿಲ್ಲಾ ಎನ್ನುತ್ತೇನೆ ಎಂದರೆ ಅದೂ ಯುಕ್ತವಾಗುವುದಿಲ್ಲ. ಪ್ರತ್ಯಕ್ಷತೆಗೆ ದೈಹಿಕ ಸಂಬಂಧದಿಂದ ರೂಪವಿರುವಿಕೆ ಕಾರಣ

ವಾದ್ದರಿಂದ ಕಾಲಿಕ ಸಂಬಂಧವು ಅಪ್ರಯೋಜಕವೇ ಆಗಿದೆ. ಆದ್ದರಿಂದ ಕಾಲಕ್ಕೆ ಪ್ರತ್ಯಕ್ಷತೆ ಬರಲಿ ಎಂಬ ಆಪತ್ತಿಯು(ಆಕ್ಷೇಪವು) ಉಳಿದೇ ಉಳಿಯುತ್ತದೆ.

**ಅನ್ಯಥಾತ್ವನ್ಮತೇಽಪಿ ಕಾಲಸ್ಯ ಜಗದಾಧಾರತ್ವೇನ ರೂಪಾಧಾರತ್ವೇ ಪ್ರತ್ಯಕ್ಷತ್ವ ಪ್ರಸಂಗಾತ್ । ಮನುಷ್ಯತ್ವಾದಿ ಜಾತ್ಯಾಶ್ರಯತ್ವೇ ಮನುಷ್ಯತ್ವಾದಿ ಪ್ರಸಂಗಾಚ್ಚ । ನ ಚ ತೇಜಸ್ಸಂಯೋಗಾದಿನಾ ರೂಪೋತ್ಪತ್ತೇಃ । ಪೂರ್ವರೂಪಸ್ಯಚ ವಿನಾಶಾವಗಮಾತ್ ನರೂಪಾದಿಕಂ ನಿತ್ಯಮಿತಿವಾಚ್ಯಂ ವಿಶ್ವಾಮಿತ್ರಸ್ಯ ವರಾದಿನಾಬ್ರಾಹ್ಮಣ್ಯೋತ್ಪತ್ತೇಃ ಕ್ಷತ್ರಿಯತ್ವಸ್ಯಚ ವಿನಾಶಾವಗಮಾತ್ ಬ್ರಾಹ್ಮಣತ್ವಾದಿಕಮಪಿ ನನಿತ್ಯಮಿತ್ಯಪಿ ವಕ್ತುಂ ಶಕ್ಯತ್ವಾಚ್ಚ । ಸುರಾಪಾನಾದಿನಾ ಬ್ರಾಹ್ಮಣ್ಯನಾಶಸ್ಯ ಪುರಾಣಾದಿ ಪ್ರಸಿದ್ಧತ್ವಾಚ್ಚ । ಜನ್ಮನಾಜಾಯತೇ ಶೂದ್ರಃ ಕರ್ಮಣಾಜಾಯತೇ ದ್ವಿಜಃ ಇತ್ಯಾದಿ ಪ್ರಮಾಣೇನ ಬ್ರಾಹ್ಮಣತ್ವಸ್ಯ ಉಪನಯನಾದಿ ಸಂಸ್ಕಾರ ಜನ್ಯತ್ವಾವಗಮಾಚ್ಚ ।**

ನಿನ್ನ ಮತ ರೀತಿಯಾಗಿ ಕಾಲಕ್ಕೆ ಜಗದಾಧಾರತ್ವ ಹೇಳುವುದರಿಂದ, ರೂಪಕ್ಕೂ ಆಧಾರವಾಯಿತು. ಕಾಲವು ಪ್ರತ್ಯಕ್ಷವಾಗಲಿ ಎಂಬ ಪ್ರಸಂಗ ಬರುತ್ತದೆ. ಮನುಷ್ಯತ್ವಾದಿ ಜಾತಿಗಳಿಗೂ ಕಾಲವು ಆಶ್ರಯವಾದ್ದರಿಂದ ಕಾಲಕ್ಕೆ ಮನುಷ್ಯತ್ವಾದಿ ಪ್ರಸಂಗವೂ ಬರುತ್ತದೆ ತೇಜಸ್ಸಂಯೋಗಾದಿಗಳಿಂದಲೇ ರೂಪದ ಉತ್ಪತ್ತಿಯು ಪೂರ್ವರೂಪಾದಿಗಳು ನಾಶವಾಗುವುದರಿಂದ ರೂಪಕ್ಕೆ ನಿತ್ಯತೆಯನ್ನು ಹೇಳಬಾರದು ಅದರಂತೆಯೇ ಬ್ರಾಹ್ಮಣತ್ವಾದಿ ಜಾತಿಗಳೂ ಅನಿತ್ಯಗಳೇ ಆಗಿರುತ್ತವೆ. ವಿಶ್ವಾಮಿತ್ರರಿಗೆ ವರಾದಿಗಳಿಂದ ಬ್ರಾಹ್ಮಣತ್ವವು. ಕ್ಷತ್ರಿಯತ್ವದ ನಾಶವೂ ಕಂಡಿರುವುದರಿಂದ, ಸುರಾಪಾನಾದಿಗಳಿಂದ ಬ್ರಾಹ್ಮಣತ್ವ ನಾಶವು ಪುರಾಣಾದಿಗಳಲ್ಲಿ ಕಂಡು ಬರುತ್ತಿದೆ. ಮತ್ತು ಜನ್ಮದಿಂದ ಶೂದ್ರನಾಗಿರುತ್ತಾನೆ. ಉಪನಯನಾದಿ ಷೋಡಶ ಕರ್ಮಗಳಿಂದ ಬ್ರಾಹ್ಮಣನಾಗುತ್ತಾನೆ. ಎಂದು ಪ್ರಮಾಣಗಳು ಹೇಳಿರುವುದರಿಂದ ಜಾತಿಯಾದುದು ಅನಿತ್ಯವೇ ಆಗಿರುತ್ತದೆ.

**ತದುಕ್ತಂ ಅನುವ್ಯಾಖ್ಯಾನೇ । ಕುತೋಭಸ್ಮತ್ವಮಾಪ್ತಸ್ಯ ನರತ್ವಂ ಪುನರಿಷ್ಯತಇತಿ । ನನ್ವಥಾಪಿ ಜಾತಿರೇಕಾ ಸರ್ವತ್ರಾಂಗೀಕಾರ್ಯಾ । ಘಟೋಯಂ ಘಟೋಯಂ ಇತ್ಯೇಕಾಕಾರ ಪ್ರತ್ಯಯಾತ್ । ನಚೈಕಾಕಾರ ಪ್ರತ್ಯಯೋ ವ್ಯಕ್ತಿವಿಷಯಕಃ ವ್ಯಕ್ತೀನಾಮನಂತತ್ವಾದಿತಿ ಚೇನ್ನ । ಅಯಂ ರೂಪ್ಯಯಂರೂಪೀ ಇತ್ಯನುಗತಾಕಾರ ಪ್ರತ್ಯಯ ಬಲೇನ ರೂಪ ಗಂಧಾದೀನಾಂ ಅಪಿ ಏಕೈಕತ್ವಾಪತ್ತೇಃ । ನಚ ರೂಪವತ್ವ ಗಂಧವತ್ವಾದಿ ಅನುಗತೋಪಾಧಿ ಬಲಾದನುಗತ ಪ್ರತ್ಯಯೋಪಪತ್ತಿರಿತಿ ವಾಚ್ಯಂ ।**

ಈ ವಿಷಯವನ್ನು ಅನ್ಯಃವ್ಯಾಖ್ಯಾದಲ್ಲಿ ಹೇಳಿರುತ್ತಾರೆ. ಸತ್ತು ಬೂದಿಯಾದ ಅವನಿಗೆ ಪುನಃ ನರತ್ವವೆಲ್ಲಿಯದು. ಹೀಗೆಂದು, ಆದರೂ ಒಂದು ಜಾತಿಯನ್ನು ಸರ್ವ ಪದಾರ್ಥಗಳಲ್ಲಿ ಇದೆಯೆಂದು ಒಪ್ಪಬೇಕು. ಏಕೆಂದರೆ ಇದು ಘಟ ಎಂದು ಏಕಾಕಾರವಾದ ಜ್ಞಾನ ಬರುವುದರಿಂದ, ಏಕಾಕಾರವಾದ ಜ್ಞಾನವು ವ್ಯಕ್ತಿ ವಿಷಯವು ವ್ಯಕ್ತಿಗಳು ಅನಂತವಾಗಿರುವುದರಿಂದ ಒಂದು ಜಾತಿಯನ್ನು ಅನೇಕ ಪದಾರ್ಥಗಳಲ್ಲಿ ಒಪ್ಪಬೇಕು ಎಂಬುದು ಯುಕ್ತವಲ್ಲ. ಏಕೆಂದರೆ ಇದು ರೂಪ ಉಳ್ಳದ್ದು ಇದೂ ರೂಪ ಉಳ್ಳದ್ದೇ ಎಂಬ ಅನುಗತವಾದ ಜ್ಞಾನ ಬರುವುದರಿಂದ ರೂಪಗಂಧಾದಿಗಳಿಗೂ ಏಕತ್ವ ಬರಲಿ ಎಂಬ ಆಪತ್ತಿ ಬರುವುದರಿಂದ ರೂಪವಿರುವಿಕೆ, ಗಂಧವಿರುವಿಕೆ ಇತ್ಯಾದಿ ಅನುಗತವಾದ ಉಪಾಧಿ ಬಲದಿಂದ ಅನುಗತಜ್ಞಾನವು ಯುಕ್ತವಾಗುತ್ತದೆ ಎಂಬುದು ಯುಕ್ತವಲ್ಲ.

**ಗಂಧತ್ವೇನ ಅನುಗತೀ ಕೃತಾನಾಂ ಗಂಧತ್ವಾದ್ಯುಪಾಧೀನಾಂ ಅನುಗಮ ಸಂಭವಾದಿತ್ಯಾದಿತ್ವದೀಯ ವ್ಯವಹಾರ ವಿರೋಧೇನ ಉಪಾಧೇರನುಗತತ್ವಾ ಸ್ವೀಕಾರಾತ್ । ನನ್ವನುಗತ ಧರ್ಮಾಭಾವೇ ಧೂಮಾದೌ ವ್ಯಾಪ್ತಿಗ್ರಹಃ ಗವಾದಿ ಪದೇಷು ಶಕ್ತಿಗ್ರಹಃ ದಂಡಾದೌ ಕಾರಣತಾಗ್ರಹಃ ಅನಾಗತ ಪಾಕಾದೌ ಚಿಕೀರ್ಷಾ ಚ ನಸ್ಯಾತ್ । ನಹಿ ಪರೋವೃತ್ತಿ ಧೂಮೋವ್ಯಾಪ್ತಿ ಗ್ರಹಾದಗೃಹೀತವ್ಯಾಪ್ತಿ ಕೇನಪರ್ವತೀಯ ಧೂಮೇನ ಅನುಮಿತಿಃ ಸಂಭವತಿ ।**

ಗಂಧತ್ವ ರೂಪ ಧರ್ಮದಿಂದ ಅನುಕರಿಸಿದ ಗಂಧತ್ವ ಧರ್ಮವೇ ಮೊದಲಾದ ಉಪಾಧಿಗಳಿಗೆ ಅನುಕರಣವು ಸಂಭವಿಸುತ್ತದೆ. ಎಂಬ ನಿನ್ನ ವ್ಯವಹಾರ ವಿರೋಧ ಬರುವುದರಿಂದ ಉಪಾಧಿಗೆ ಅನುಗತತ್ವವು ಒಪ್ಪಲಾಗುವುದಿಲ್ಲ. ಅನುಗತ ಧರ್ಮವೇ ಇಲ್ಲವಾದರೆ ಧೂಮಾದಿಗಳಲ್ಲಿ ವ್ಯಾಪ್ತಿ ಜ್ಞಾನವು ಗೋ ಮೊದಲಾದ ಪದಗಳಲ್ಲಿ ಶಕ್ತಿ ಜ್ಞಾನವು ದಂಡಾದಿಗಳಲ್ಲಿ ಘಟಕಾರಣತ್ವಾದಿ ಜ್ಞಾನವು ಒದಗಿದೆ, ಪಾಕಾದಿಗಳಲ್ಲಿ ಇಚ್ಛೆಯು ಇಲ್ಲವಾಗಲಿ ಅಂದರೆ (ಇಷ್ಟಾಪತ್ತಿಃ) ಮುಂದಿರುವ ಹೊಗೆಯಲ್ಲಿ ಅದ ವಹ್ನಿ ವ್ಯಾಪ್ತಿ ಜ್ಞಾನದಿಂದ ವ್ಯಾಪ್ತಿ ಜ್ಞಾನವಿಲ್ಲದ ಪರ್ವತೀಯ ಹೊಗೆಯಿಂದ ಅನುಮಿತಿಯು ಹುಟ್ಟುವುದೇ ಇಲ್ಲ.

**ನವಾ ಏಕವ್ಯಕ್ತೌ ಶಕ್ತಿಗ್ರಹಾತ್ ವ್ಯಕ್ತ್ಯಂತರಲಾಭಃ । ನಾಪಿಸಿದ್ಧ ಪಾಕಜ್ಞಾನಾದನಾಗತ ಪಾಕೇ ಚಿಕೀರ್ಷಾ । ಅತಃ ಧೂಮತ್ವಾದಿ ಸಾಮಾನ್ಯ ಪ್ರತ್ಯಾಸತ್ಯಾ ಸರ್ವಾನುಗತತಯಾ ಸರ್ವ ಧೂಮಾದ್ಯುಪ ಸಂಹಾರೇಣ ವ್ಯಾಪ್ತ್ಯಾದಿಗ್ರಹೇ ಅನುಮಾನಾದಿ ಪ್ರವೃತ್ತಿರಿತಿ ಚೇನ್ನ ।**

ಅನುಗತ ಧರ್ಮಂ ವಿನಾಪಿ ಸಾದೃಶ್ಯೇನ ಸರ್ವತ್ರ ವ್ಯಾಪ್ತ್ಯಾದಿ ಗ್ರಹ ಸಂಭವಾತ್ । ಅಯಂ ಧೂಮಃ ಏತತ್ಸದೃಶಾಶ್ಚ ವಹ್ನಿವ್ಯಾಪ್ಯಾ ಇತ್ಯೇವಂ ಕ್ರಮೇಣ ವ್ಯಾಪ್ತಿಗ್ರಹಃ । ಏವಂ ಇಯಂ ಗೌಃ ಏತಸ್ಸದೃಶಾಶ್ಚ ಗೋ ಶಬ್ದ ವಾಚ್ಯಾಃ ಇತ್ಯೇವ ಶಕ್ತಿಗ್ರಹಃ ।

ಒಂದು ವ್ಯಕ್ತಿಯಲ್ಲಿ ಶಕ್ತಿ ಜ್ಞಾನವಾದರೆ ವ್ಯಕ್ತ್ಯಂತರದಲ್ಲಿಯೂ ಶಕ್ತಿ ಜ್ಞಾನ ವಾಗುವುದಿಲ್ಲ. ಹಾಗೂ ಸಿದ್ಧ ಪಾಕ ಜ್ಞಾನದಿಂದ ಅಸಿದ್ಧ ಪಾಕದಲ್ಲಿ ಇಚ್ಛೆಯೂ ಆಗುವುದಿಲ್ಲ. ಆದುದರಿಂದಲೇ ಧೂಮತ್ವಾದಿ ಸಾಮಾನ್ಯ ಜ್ಞಾನದಿಂದ ಎಲ್ಲ ಧೂಮ ಗಳಲ್ಲೂ ವ್ಯಾಪ್ತ ಜ್ಞಾನದಿಂದ ಅನುಮಾನ ಪ್ರವೃತ್ತಿಯಾಗಲಿ ಎನಲು ಆಗುವುದಿಲ್ಲ. ಅನುಗತ ಧರ್ಮವಿಲ್ಲದಲೇ ಸಾದೃಶ್ಯದಿಂದಲೇ ಎಲ್ಲ ಸ್ಥಳಗಳಲ್ಲೂ ವ್ಯಾಪ್ತಿ ಜ್ಞಾನವು ಸಂಭವಿಸುತ್ತದೆ ಈ ಹೊಗೆಯು ಈ ಹೊಗೆಗೆ ಸದೃಶವಾದುದು. ಅಗ್ನಿಗೆ ವ್ಯಾಪ್ತ ವಾದುದು ಈ ಕ್ರಮದಿಂದ ವ್ಯಾಪ್ತಿ ಜ್ಞಾನವಾಗುತ್ತದೆ ಹೀಗೆಯೇ ಈ ಗೋವು ಈ ಗೋವಿಗೆ ಸದೃಶವಾದುದು, ಗೋ ಶಬ್ದವಾಚ್ಯವಾದುದು ಎಂಬುದರಿಂದಲೇ ಶಕ್ತಿ ಜ್ಞಾನವು.

ಏವಂ ಕಾರಣತಾ ಗ್ರಹಾದಿಕಮಪಿ । ತದುಕ್ತಂ ವೈಶೇಷಿಕಾಧಿ ಕರಣಾನುವ್ಯಾಖ್ಯಾನೇ । ಇತಿ ಉತ್ಪತ್ತಿರಪಿ ಹಿ ಸಾದೃಶ್ಯೈನೈವ ಗಮ್ಯತ ಇತಿ । ಭಕ್ತಿ ಪಾದೀಯಾನುವ್ಯಾಖ್ಯಾನೇಪಿ । ಕಿಂಚಿತ್ ಸಾದೃಶ್ಯ ವಿಜ್ಞಾನಾ ದಖಿಲಸ್ಯಾಪಿವಸ್ತುನಃ । ಶಬ್ದ ಶಕ್ತಿಗ್ರಹಶ್ಚ ಸ್ಯಾತ್ತತ್ತಸ್ಸಾದೃಶ್ಯಮಾನತಃ । ಶಕ್ತಿಃ ಸಾದೃಶ್ಯಗಾಯತಃ ಇತಿ ಚ । ನಚ ಸಾದೃಶ್ಯಸ್ಯ ಅನುಗತತ್ವೇ ಕಿಮಪರಾರ್ಧಂ ಸಾಮಾನ್ಯೇನ ಇತಿ ವಾಚ್ಯಂ । ಏಕ ನಿರೂಪಿತ ಅಪರಾಧಿ ಕರಣವೃತ್ತಿತ್ವೇನ ತ್ರಿವಿಕ್ರಮನ್ಯಾಯೇನ ತತಾಸ್ವೀಕಾರಾತ್ ।

ಹೀಗೆಯೇ ಕಾರಣತ್ವಾದಿ ಜ್ಞಾನಾದಿಗಳು ಸಹ ಆಗಿರುತ್ತದೆ. ಈ ವಿಷಯವನ್ನೇ ವೈಶೇಷಿಕಾಧಿಕರಣ ಅನುವ್ಯಾಖ್ಯಾನದಲ್ಲಿ ಉತ್ಪತ್ತಿಯು ಸಾದೃಶ್ಯದಿಂದಲೇ ಜ್ಞಾತ ವಾಗುತ್ತದೆ ಎಂದು ಹೇಳಿರುತ್ತದೆ. ಭಕ್ತಿಪಾದೀಯ ಅನುವ್ಯಾಖ್ಯಾನದಲ್ಲಿಯೂ ಸ್ವಲ್ಪ ಸಾದೃಶ್ಯ ವಿಜ್ಞಾನದಿಂದ ಯಾವತ್ತೂ ಸದೃಶ ವಸ್ತುಗಳ ಜ್ಞಾನವು ಹಾಗೇ ಏಕಶಬ್ದ ಜ್ಞಾನದಿಂದ ಸದೃಶ ಪದಾರ್ಥಗಳಲ್ಲಿ ಶಕ್ತಿ ಜ್ಞಾನವು ಆಗುತ್ತಿದೆ. ಶಕ್ತಿಯು ಸಾದೃಶ್ಯವನ್ನು ಅನುಸರಿಸಿರುವುದರಿಂದ ಹೀಗೆ ಹೇಳಿರುತ್ತದೆ. ಸಾದೃಶ್ಯಕ್ಕೂ ಅನುಗತತ್ವ ಹೇಳಿದರೆ ಸಾಕು. ಸಾಮಾನ್ಯದಿಂದ ಏನು ಪ್ರಯೋಜನವು ಹೀಗೆನ ಬಾರದು. ಒಂದು ಧರ್ಮವನ್ನು ಹೇಳಿದರೆ ಅದು ಮತ್ತೊಂದು ವಸ್ತುವಿನಲ್ಲಿ ಇರುವುದರಿಂದ ತ್ರಿವಿಕ್ರಮನ್ಯಾಯದಿಂದ (ಒಂದು ಆವರಿಸಿದರೆ ಮತ್ತೊಂದು ಸಿದ್ಧ ಎಂಬ) ಆಯಾ ವ್ಯಕ್ತಿಯು ಜ್ಞಾತವಾಗುವುದರಿಂದ,

ಪ್ರತಿಯೋಗಿತ್ವಾನುಯೋಗಿತ್ವಾದಿವತ್ । ಏತೇನ ಸಾದೃಶ್ಯೇನೈವ ಏಕಾಕಾರ ಪ್ರತ್ಯಯಃ ಸಮಾಹಿತೋ ಭವತಿ । ಅನ್ಯಥಾ ಭಿನ್ನಾಶ್ಚ ಭಿನ್ನ ಧರ್ಮಾಶ್ಚ ಪದಾರ್ಥಾನಿಖಿಲಾಅಪಿ । ನರತ್ವಾದಿಕಮಪ್ಯೇವಂತತ್ತ್ವಧರ್ಮ ತಯೋಯತೇ । ನಸರ್ವಧರ್ಮಏಕೋಸ್ತೀತಿ ವೈಶೇಷಿಕಾಧಿಕರಣಾನು ವ್ಯಾಖ್ಯಾನೋದಾಹೃತ ಪ್ರಮಾಣ ವಿರೋಧ ಪ್ರಸಂಗಾತ್ । ಇತ್ಯಲಂ । ನಿತ್ಯ ಜಾತೇರುದಾಹರಣಮಾಹ ।

ಪ.ಸಂ.— ॥ ಜೀವತ್ವಾದಿಯಾವದ್ವಸ್ತುಭಾವಿನಿತ್ಯಂ ॥

ಶರೀರನಾಶೇಪಿ ಜೀವನಾಶಾಭಾವೇನ ಜೀವತ್ವಸ್ಯ ನಿತ್ಯತ್ವಾತ್ । ಆದಿಪದೇನ ದೇವತ್ವಾದಿ ಸಂಗ್ರಹಃ । ಅನಿತ್ಯಸ್ಯೋದಾಹಣ ಮಾಹ ।

ಪ.ಸ.— ॥ ಬ್ರಾಹ್ಮಣತ್ವಮನುಷ್ಯತ್ವಾದ್ಯಯಾವದ್ವಸ್ತುಭಾವ್ಯನಿತ್ಯಂ ॥

ಪ್ರತಿಯೋಗಿತ್ವ ಅನುಯೋಗಿತ್ವಗಳಿಗೆ ಹೇಗೆ ಸಂಬಂಧವೋ ಹಾಗೆ ಸಾದೃಶ್ಯ ಶಕ್ತ್ಯಾದಿಗಳಿಗೆ ಒಟ್ಟಿನಲ್ಲಿ ಸಾದೃಶ್ಯದಿಂದಲೇ ಏಕಾಕಾರ ಜ್ಞಾನವು ಒದಗುವುದಾಗುತ್ತದೆ. ಅಂತೆಯೇ ಪದಾರ್ಥಗಳು ಸರ್ವ ಪದಾರ್ಥ ಧರ್ಮಗಳೂ ಭಿನ್ನ ಭಿನ್ನಗಳೇ ಆಗಿರುತ್ತವೆ ಎಂಬುದು ಸತ್ಯವೇ ಆಗಿರುತ್ತದೆ. ನರತ್ವಾದಿ ಧರ್ಮಗಳು ಆಯಾ ವ್ಯಕ್ತಿಗಳಲ್ಲಿಯೇ ಇರುವವುಗಳಾಗಿರುತ್ತದೆ. ಸರ್ವ ವಸ್ತುಗಳಲ್ಲೂ ಒಂದು ಧರ್ಮವಿಲ್ಲ ಎಂದು ಹೇಳುವ ವೈಶೇಷಿಕಾಧಿಕರಣ ಅನುವ್ಯಾಖ್ಯಾನ ವಿರೋಧವೂ ಬರುವುದಿಲ್ಲ. ನಿತ್ಯ ಜಾತಿಗೆ ಉದಾಹರಣವನ್ನು ಹೇಳುತ್ತಾರೆ. ಜೀವತ್ವಾದಿಗಳು ನಿತ್ಯಪದಾರ್ಥಗಳಲ್ಲಿರುವ ಧರ್ಮಗಳು ನಿತ್ಯವಾದ ಜಾತಿಗಳು ಶರೀರ ನಾಶವಾದರೂ ಜೀವನಾಶವಾಗುವದಿಲ್ಲವಾದ್ದರಿಂದ ನಿತ್ಯವಾದ ಜೀವನಲ್ಲಿರುವ ಜೀವತ್ವ ಧರ್ಮವು ನಿತ್ಯವೇ ಆಗಿರುತ್ತದೆ. ಇದರಂತೇ ದೇವತ್ವಾದಿ ಧರ್ಮಗಳು ಅನಿತ್ಯ ಜಾತಿಗೆ ಉದಾಹರಣವನ್ನು ಹೇಳುತ್ತಾರೆ ಬ್ರಾಹ್ಮಣತ್ವಾದಿಗಳು ವ್ಯಕ್ತಿಸತ್ತರೆ ಮನುಷ್ಯತ್ವವು ಹೋಗುತ್ತದೆ. ಭ್ರಷ್ಟನಾದರೆ ಬ್ರಾಹ್ಮಣತ್ವವು ಹೋಗುತ್ತದೆ. ಹೀಗೆ ಅನಿತ್ಯ ಪದಾರ್ಥಗಳಲ್ಲಿರುವ ಧರ್ಮರೂಪ ಜಾತಿಗಳು ಅನಿತ್ಯಗಳೇ ಆಗಿರುತ್ತದೆ.

ನನು ಬ್ರಾಹ್ಮಣತ್ವಮನುಷ್ಯತ್ವಾದಿಜಾತೀನಾಂ ಜೀವಾನಾಂ ಮುಕ್ತಾವಪ್ಯನುಪ್ರವೇಶೋ ಅಸ್ತಿ । ಅನ್ಯಥಾ ಮುಕ್ತೌ ಮನುಷ್ಯೋತ್ತಮಸ್ಯ ಅಪಕರ್ಷತಾರತಮ್ಯಾವಧಿತ್ವಂ ನಸ್ಯಾದಿತಿ ಚೇದುಚ್ಯತೇ । ಬ್ರಾಹ್ಮಣತ್ವಾದಿಕಂ ದ್ವಿವಿಧಂ ಶರೀರೋಪಾಧಿಕಂ ಸ್ವಾಭಾವಿಕಂ ಚೇತಿ । ತತ್ರ ಶರೀರೋಪಾಧಿಕಸ್ಯ ಉತ್ಪತ್ತಿ ವಿನಾಶೌ । ಸ್ವಾಭಾವಿಕಸ್ಯ ಮುಕ್ತಾವನುಸ್ಯೂತಿಃ । ತದುಕ್ತಂ ಗೀತಾ ತಾತ್ಪರ್ಯೇ । ವಿಪ್ರತ್ವಾದ್ಯಾಸ್ತತ್ರ ಪುಂಸ್ಯಾಃ ಸ್ವಾಭಾವ್ಯಾ ಏವ ಮುಕ್ತಿಗಾ ಇತಿ ।

ಬ್ರಾಹ್ಮಣತ್ವ ಮನುಷ್ಯತ್ವಾದಿ ಜಾತಿಗಳು ಜೀವರಿಗೆ ಮುಕ್ತಿಯಲ್ಲೂ ಅನುಸರಿಸಿರುತ್ತದೆ. ಇಲ್ಲವಾದರೆ ಮುಕ್ತಿಯಲ್ಲಿ ಮನುಷ್ಯೋತ್ತಮರೆಂಬ ಮೊದಲಾದ ತಾರತಮ್ಯ ವಿಧಾನವು ಇಲ್ಲವಾಗಬೇಕಾದೀತು ಹೌದೂ, ಬ್ರಾಹ್ಮಣ್ಯಾ(ಬ್ರಾಹ್ಮಣತ್ವ) ದಿಗಳು ಎರಡು ವಿಧಗಳಾಗಿವೆ. ಶರೀರೋಪಾಧಿಗಳು, ಸ್ವಾಭಾವಿಕಗಳು ಎಂದು. ಆ ಎರಡರಲ್ಲಿ ಶರೀರೋಪಾಧಿಕವಾದ ಮನುಷ್ಯತ್ವ ಬ್ರಾಹ್ಮಣತ್ವಾದಿಗಳಿಗೆ ಹುಟ್ಟು ಸಾವುಗಳು, ಸ್ವಾಭಾವಿಕವಾದವುಗಳಿಗೆ ಮುಕ್ತಿಯಲ್ಲೂ ಇರುವಿಕೆ ಇದನ್ನು ಗೀತಾತಾತ್ಪರ್ಯದಲ್ಲಿ ಹೇಳಿರುತ್ತಾರೆ. ಪುಣ್ಯ ಸಾಧಕವಾದ ಸ್ವಾಭಾವಿಕ ವಿಪ್ರತ್ವಾದಿಗಳು ಮುಕ್ತಿಯಲ್ಲೂ ಇರುತ್ತವೆ ಎಂದು.

ತಥಾ ವರ್ಣಾಶ್ರಮಾಚಾರರತಾ ಮನುಷ್ಯಾ ಧರ್ಮಮನುಂಸೋಽಪಿ ಸಮೇತಿ ಕಾಲ ಇತ್ಯುತ್ಕ್ರಾಂತಿಪಾದೀಯಾನುವ್ಯಾಖ್ಯಾನ ಸುಧಾಯಾಂ। ವರ್ಣಾಶ್ರಮಾಚಾರರತಾಮನುಷ್ಯಾ ಇತ್ಯನೇನ ಮನುಷ್ಯಾಣಾಂ ಮುಕ್ತೌ ವರ್ಣಾಶ್ರಮವತ್ವಮಸ್ತೀತಿ ಸೂಚಯತೀತ್ಯುಕ್ತಂ। ತೃತೀಯಸ್ಕಂಧ ತಾತ್ಪರ್ಯೇಽಪಿ। ಪಶುವೃಕ್ಷಾದಿ ಭೇದೇನ ಜೀವಾ ಏವ ಸ್ವತಃ ಸ್ಥಿತಾಃ। ಸಂಸೃತೌ ವ್ಯತ್ಯಯಸ್ತೇಷಾಂ ಮುಕ್ತೌ ತತ್ತತ್ಸ್ವರೂಪತಾ। ತತ್ರ ಸ್ಥಾವರ ಮುಕ್ತೇಭ್ಯೋ ವರಾಜಂಗಮ ಮುಕ್ತಿಗಾಃ। ತೇಭ್ಯೋಮಾನುಷ ಮುಕ್ತಾಶ್ಚವಿಪ್ರ ಮುಕ್ತಾಸ್ತತೋಽಧಿಕಾಃ ಇತಿ।

ಉತ್ಕ್ರಾಂತಿಪಾದೀಯ ಅನುವ್ಯಾಖ್ಯಾನ ಸುಧಾದಲ್ಲಿ ಮುಕ್ತಿಯಲ್ಲೂ ಆನಂದ ಉದ್ರೇಕದಿಂದ ಫಲಾಕಾಂಕ್ಷೆ ಇಲ್ಲದಲೇ ವರ್ಣಾಶ್ರಮಾಚಾರರತರಾಗಿ ಮಂತ್ರಗಳನ್ನು ಪಠಿಸುತ್ತಾ ಕಾಲವನ್ನು ಕಳೆಯುತ್ತಾರೆ ಎಂದು ಹೇಳಿ ಮುಕ್ತಿಯಲ್ಲೂ ವರ್ಣಾಶ್ರಮಗಳು ಮನುಷ್ಯಾದಿ ಭೇದಗಳು ಇವೆಯೆಂದು ಸೂಚಿಸಿರುತ್ತಾರೆ. ಮತ್ತೂ ಮುಕ್ತಿಯಲ್ಲಿ ಸ್ವರೂಪತಃ ಪಶುವೃಕ್ಷಾದಿರೂಪಗಳಿಂದಿರುತ್ತಾರೆ. ಅವರುಗಳಿಗೆ ಸಂಸಾರದಲ್ಲಿ ವ್ಯತ್ಯಾಸವಾಗಲಿ ಮುಕ್ತಿಯಲ್ಲಿ ಸ್ವರೂಪತಃ ಇರುವಿಕೆಯೇ ಮೋಕ್ಷದಲ್ಲಿ ಸ್ಥಾವರ ಜೀವರಕ್ಕಿಂತಲೂ ಜಂಗಮ ಮುಕ್ತರು ಶ್ರೇಷ್ಠರು ಅವರಕ್ಕಿಂತಲೂ ಮಾನುಷ ಮುಕ್ತರು ಅವರಕ್ಕಿಂತಲೂ ವಿಪ್ರಮುಕ್ತರು ಅಧಿಕರು ಹೀಗೆ ತಾರತಮ್ಯವಿರುತ್ತದೆ.

ಭಾಷ್ಯೇಽಪಿ। ಮುಕ್ತಿಃ ಹಿತ್ವಾನ್ಯಥಾರೂಪಂ ಸ್ವರೂಪೇಣವ್ಯವಸ್ಥಿತಿಃ ಇತಿ। ಜಾತಿನ್ಯಾಯಂ ಉಪಾಧಾವತಿದಿಶತಿ।

ಸರ್ವಜ್ಞತ್ವ ಪ್ರಮೇಯತ್ವಾದ್ಯುಪಾಧಿರಪಿತದ್ವತ್ ॥

ಸರ್ವಜ್ಞತ್ವಂ ಪರಮಾತ್ಮನಿ ನಿತ್ಯಂ। ಪ್ರಮೇಯತ್ವಂ ಘಟಾದಾವ ನಿತ್ಯಂ ಇತ್ಯರ್ಥಃ। ಗೋತ್ವಾದೇಃ ಅನ್ಯ ನಿರೂಪಣಾಧೀನಾ ನಿರೂಪಣತ್ವಾ

**ಜ್ಞಾತಿಃ । ಪ್ರಮೇಯತ್ವಾದೇಃ ಚ ಪ್ರಮಾವಿಷಯಾದಿ ನಿರೂಪಣಾಧೀನ ನಿರೂಪಣಕತ್ವಾದುಪಾಧಿತ್ವಂ ।**

ಭಾಷ್ಯದಲ್ಲಿಯೂ 'ಸಂಸಾರದಲ್ಲಿಯ ಅನ್ಯಥಾರೂಪ(ಅನೇಕಾನೇಕ ಯೋನಿಗಳು)ವನ್ನು ಬಿಟ್ಟು ಸ್ವರೂಪದಿಂದ ಸ್ಥಿತವಾಗುವುಕೆ ಮುಕ್ತಿಯು' ಹೀಗೆ ಹೇಳಿರುತ್ತಾರೆ.

ಜಾತಿಯ ಕ್ರಮವನ್ನೇ ಅವಲಂಬಿಸಿ ಉಪಾಧಿ ಸ್ವರೂಪವನ್ನು ತಿಳಿಸುತ್ತಾರೆ. ಸರ್ವಜ್ಞತ್ವ ಪ್ರಮೇಯತ್ವಾದಿ ಉಪಾಧಿಯೂ ಜಾತಿಯಂತೇ ನಿತ್ಯಪದಾರ್ಥಗಳಲ್ಲಿರುವುದು ನಿತ್ಯ ಅನಿತ್ಯ ಪದಾರ್ಥಗಳಲ್ಲಿರುವುದು ಅನಿತ್ಯವು. ಸರ್ವಜ್ಞತ್ವವು ಪರಮಾತ್ಮನಲ್ಲಿ ನಿತ್ಯವಾದುದು, ಪ್ರಮೇಯತ್ವವು ಘಟಾದಿಗಳಲ್ಲಿ ಅನಿತ್ಯವು, ಗೋತ್ವಾದಿಗಳಿಗೆ ಬೇರೇ ನಿರೂಪಣೆ ಅಗತ್ಯವಿಲ್ಲವಾದುದರಿಂದ ಜಾತಿತ್ವವು ಪ್ರಮೇಯತ್ವಾದಿಗಳಿಗೆ ಪ್ರಮಾಣ ವಿಷಯಾದಿ ಅನ್ಯನಿರೂಪಣಾಧೀನವಾಗಿರುವುದರಿಂದ ಉಪಾಧಿತ್ವವು.

**ತಥಾ ಚ ಇತರ ನಿರೂಪಣಾಧೀನ ನಿರೂಪಣಕತ್ವಂ ಉಪಾಧಿ ಲಕ್ಷಣಂ । ಅತ ಏವೋಪಾಧಿಖಂಡನ ಮಂದಾರಮಂಜರ್ಯಾಂ ಪ್ರವಾಹತೋ ಅನಾದಿತ್ವಸ್ಯ ಉಪಾಧಿತ್ವಮುಕ್ತಂ । ನನ್ವಸ್ಮದಾದಿ ಜ್ಞಾನ ವಿಷಯತ್ವಮೀಶ್ವರೇ ಅಸ್ತೀನವಾ । ನೇತಿಪಕ್ಷೇ ತತ್ಪ್ರತಿಪಾದಕ ಶಾಸ್ತ್ರ ಶ್ರವಣಾದಿವೈಯರ್ಥ್ಯಂ । ಆದ್ಯೇ ಅಸ್ಮದಾದಿ ಜ್ಞಾನನಾಶೇತಧ್ಘಟಿತ ವಿಷಯತ್ವಸ್ಯಾಪಿ ನಾಶಪ್ರಸಂಗಃ ನಚೇಷ್ಟಾಪತ್ತಿಃ । ನಿತ್ಯಸ್ಯಾನಿತ್ಯಧರ್ಮಾ ಭೇದಾಯೋಗಾತ್ । ನ ಚ ಪರಮಾತ್ಮನಾಭೇದಾಭೇದಃ । ಮೃತ್ಯೋಸ್ಸ ಮೃತ್ಯುಮಾಪ್ನೋತಿ ಯಃಇಹನಾನೇವ ಪಸ್ಯತೀತೀವಶಬ್ದೇನ ಭೇದಾಭೇದ ನಿಷೇಧಾತ್ ।**

ಪದಾರ್ಥಾಂತ ಜ್ಞಾನದಿಂದ ತಿಳಿಯುವುದು ಉಪಾಧಿಯು. ಅನ್ಯಜ್ಞಾನ ಜ್ಞಾಪ್ಯತೆಯೇ ಉಪಾಧಿ ಲಕ್ಷಣವು. ಆದುದರಿಂದಲೇ ಉಪಾಧಿಖಂಡನ ಮಂದಾರ ಮಂಜರಿ ಗ್ರಂಥದಲ್ಲಿ ಪ್ರವಾಹತಃ ಅನಾದಿತ್ವವೇ ಉಪಾಧಿತ್ವವು ಎಂದಿರುತ್ತಾರೆ. (ಪೂರ್ವಪಕ್ಷ) ನಮ್ಮಗಳ ಜ್ಞಾನ ವಿಷಯತೆ ಪ್ರರಮಾತ್ಮನಿಗಿದೆಯೇ ? ಇಲ್ಲವೇ ? ಇಲ್ಲವೆಂದರೆ, ಅವನನ್ನು ತಿಳಿಸುವ ಶಾಸ್ತ್ರಗಳಿಗೂ ಅದರ ಶ್ರವಣ ಮನನಾದಿಗಳಿಗೂ ವ್ಯರ್ಥತೆಯು ಬರುತ್ತದೆ. ಇದೆಯೆಂದರೆ ನಮ್ಮಗಳ ಜ್ಞಾನ ನಾಶವಾದರೆ ಇದನ್ನೊಳಗೊಂಡವಿಷಯಕ್ಕೂ ನಾಶಪ್ರಸಂಗ ಬರುತ್ತದೆ. ಈಶ್ವರನ ಜ್ಞಾನದ ನಾಶ ಇಷ್ಟವಲ್ಲಾ ಇಲ್ಲಿ ಹೇಗೆ ಎಂದರೆ. ನಿತ್ಯವಾದುದಕೆ, ಅನಿತ್ಯ ಧರ್ಮದಿಂದ ಅಭೇದವು ಅಂಗೀಕೃತವಾಗಿದೆ. ಅಂದರೆ ಪರಮಾತ್ಮನಲ್ಲಿಯ ನಿತ್ಯ ಜ್ಞಾನಕ್ಕೂ, ಅಸ್ಮದಾದಿ ಪ್ರಪಂಚ ವಿಷಯಕ್ಕೂ ಅನಿತ್ಯ ಜ್ಞಾನಕ್ಕೂ ಅಭೇದವೇ ಅಂಗೀಕೃತವಾಗಿರುತ್ತದೆ. ಅಸ್ಮದಾದಿ

ವಿಷಯಕ ಜ್ಞಾನಕ್ಕೂ ಭಗವಂತನಿಗೂ ಭೇದಾಭೇದ ಹೇಳೋಣವೆಂದರೆ, ಹಾಗೆ ಹೇಳಬಾರದು. ಯಾವನು ಭಗವಂತನಲ್ಲಿ ಅವನ ಗುಣ ಜ್ಞಾನಾದಿಗಳಿಗೆ ಭೇದವನ್ನಾಗಲಿ ಭೇದಾಭೇದವನ್ನಾಗಲಿ ತಿಳಿಯುತ್ತಾನೆಯೋ ಅವನು ಅತಿ ಮೃತ್ಯುವಿಗೆ ಭಾಗಿಯಾಗುತ್ತಾನೆ ಎಂದು ಶ್ರುತಿಯು ಹೇಳಿರುವುದರಿಂದ ಶ್ರುತಿಯಲ್ಲಿರುವ ನಾನಾ ಪದವು ಭೇದನನ್ನು ಇವ ಎಂಬ ಅವ್ಯಯವು ಸುತರಾಂ ಅಭೇದವನ್ನು ಹೇಳುವುದರಿಂದ ಭೇದಾಭೇದವನ್ನೂ ತಿಳಿಯಬಾರದು.

**ತದುಕ್ತಂ ಕಾಠಕ ಭಾಷ್ಯೇ । ಅತೋಽನಾನೇವೇತೀವ ಶಬ್ದೋಽಲ್ಪ ವಿಷಯೋ ಭೇದಾಭೇದ ವಿಷಯಶ್ಚೇತಿ । ಅನುವ್ಯಾಖ್ಯಾನೇಽಪಿ ಇತಿ ಶ್ರುತಾವಿನೇತ್ಯಸ್ಮಾದ್ಭೇದಾಭೇದ ನಿರಾಕೃತಿಃ । ಇವೋಽಭಯೋಽಚ ಸಾದೃಶ್ಯ ಇತಿ ವಾಕ್‌ಶಬ್ದ ನಿರ್ಣಯ ಇತಿ । ಬೃಹದ್ಭಾಷ್ಯೇಽಪಿ । ನಾನೇವೇತಿ ಭೇದಾಭೇದ ನಿರಾಕರಣಾರ್ಥಂ । ವಿರುದ್ಧೋಭಯಸಂಯೋಗ ಇವಶಬ್ದಃ ಪ್ರಯುಜ್ಯತೇ ಇತಿ । ಅತೋ ಅಸ್ಮದಾದಿ ಜ್ಞಾನವಿಷಯತ್ವರೂಪ ಧರ್ಮ ಈಶ್ವರೇ ಕಥಮಿತಿ ಚೇನ್ನ । ಸರ್ವಜ್ಞಾನ ವಿಷಯತ್ವಸ್ಯ ಈಶ್ವರೇ ಸರ್ವದಾ ಸತ್ವಾತ್ । ನ ಚ ಜ್ಞಾನನಾಶೇ ಕಥಂ ತತ್ಸತ್ವಮಿತಿ ವಾಚ್ಯಂ । ತಸ್ಯ ಜ್ಞಾನೋಽಪಾಧಿಕತ್ವಾಭಾವಾತ್ । ಅಸ್ಮದಾದಿ ಜ್ಞಾನಾದ್ವ್ಯಜ್ಯತ ಇತ್ಯಂಗೀಕಾರಾತ್ । ಅತೋಽನವಿರೋಧಃ । ಇತಿ ಸಾಮಾನ್ಯ ಪ್ರಕರಣಂ।**

ಕಾಠಕ ಭಾಷ್ಯದಲ್ಲಿ ಶ್ರುತಿಯಲ್ಲಿರುವ ನಾನಾ ಇವ ಈ ಎರಡು ಶಬ್ದಗಳು ಭೇದಾಭೇದಗಳನ್ನು ಹೇಳಿ ನಿಷೇಧಿಸುತ್ತದೆ ಎಂದು, ಅನುವ್ಯಾಖ್ಯಾನದಲ್ಲಿಯೂ ಶ್ರುತಿಯಲ್ಲಿರುವ ಇವ ಶಬ್ದವು ಭೇದಾಭೇದವನ್ನು ನಿಷೇಧಿಸುತ್ತದೇ ಎಂದಿರುತ್ತಾರೆ. ಬೃಹದ್ಭಾಷ್ಯದಲ್ಲಿಯೂ ವಿರುದ್ಧೋಭಯ ಸಂಯೋಗಾರ್ಥದಲ್ಲಿ ಇವ ಶಬ್ದ ಪ್ರಯುಕ್ತವಾಗುತ್ತದೆ. ಆದುದರಿಂದ ಶ್ರುತಿಗತ ಇವ ಶಬ್ದವು ಭೇದಾಭೇದವನ್ನು ಹೇಳಿ ನಿಷೇಧಿಸಿದೆ ಎಂದು ಹೇಳಿದೆ ಆದುದರಿಂದ ನಮ್ಮಗಳ ವಿಷಯಕ ಜ್ಞಾನ ವಿಷಯಕತೆ ಪರಮಾತ್ಮನಿಗೆ ಹೇಗೇ ? ಎಂಬ ಸಂಶಯಕ್ಕೆ ಅವಕಾಶವಿಲ್ಲ. ಸರ್ವ ಜ್ಞಾನ ವಿಷಯತ್ವವು ಸರ್ವ ಈಶ್ವರನಲ್ಲಿರುವುದರಿಂದ ಜ್ಞಾನ ನಾಶ (ವಿಷಯನಾಶ)ವಾಗುತ್ತಿರಲು ತದ್ವಿಷಯಕ ಜ್ಞಾನಕ್ಕೆ ಸತ್ವ(ಸ್ಥಿತಿ) ಹೇಗೇ ಎಂದರೆ ಪರಮಾತ್ಮನ ಜ್ಞಾನಕ್ಕೆ ಉಪಾಧಿಕತ್ವವಿಲ್ಲವಾದ್ದರಿಂದ ನಮ್ಮಗಳ (ಜೀವರುಗಳ) ಜ್ಞಾನದಿಂದಲೇ ವ್ಯಕ್ತವಾಗುತ್ತದೆ ಎಂದು ಅಂಗೀಕರಿಸುವುದರಿಂದ, ಆದುದರಿಂದಲೇ ಯಾವ ವಿರೋಧವೂ ಬರುವುದಿಲ್ಲ.

ಹೀಗೆ ಸಾಮಾನ್ಯ ಪ್ರಕರಣಕನ್ನಡಾನುವಾದವು ಮುಗಿದುದು.

# ೬. ವಿಶೇಷ ಪ್ರಕರಣ

ಕ್ರಮಪ್ರಾಪ್ತ ವಿಶೇಷಂ ನಿರೂಪಯತಿ ।

ಪ.ಸಂ.—ಭೇದಾಭಾವೇಽಪಿ ಭೇದವ್ಯವಹಾರನಿರ್ವಾಹಕಾ ಅನಂತಾಏವ ವಿಶೇಷಾಃ ॥

**ಅತ್ರ ಭೇದಾಭಾವೇಪಿ ಭೇದವ್ಯವಹಾರಹೇತುತ್ವಂ ವಿಶೇಷಸ್ಯ ಲಕ್ಷಣಂ ಅನಂತಾ ಏವ ವಿಶೇಷಾಃ ಇತಿಲಕ್ಷ್ಯನಿರ್ದೇಶಃ । ಭೇದೇ ಅತಿವ್ಯಾಪ್ತಿ ವಾರಣಾಯ ಭೇದಾಭಾವೇಪೀತಿ ವಿಶೇಷಣಂ । ನನು ವಿಶೇಷೋನ ಪದಾರ್ಥಾಂತರಂ । ತತ್ಸದ್ಭಾವ ಏವ ಮಾನಾಭಾವಾದಿತಿ ಚೇನ್ನ । ಘಟಾದಿ ಗುಣಿನಾಂ ರೂಪಾದಿ ಗುಣಾನಾಂ ಚ ಪರಸ್ಪರಮಭೇದಪಕ್ಷೇ ಭೇದಪಕ್ಷೇ ಭೇದಾಭೇದಪಕ್ಷೇ ಚ ವಿಶೇಷಸ್ಯ ಅವಶ್ಯಂ ವಾಚ್ಯತ್ವಾತ್ ।**

ಕ್ರಮಪ್ರಾಪ್ತವಾದ ವಿಶೇಷವೆಂಬ ಪದಾರ್ಥವನ್ನು ನಿರೂಪಿಸುತ್ತಾರೆ. ಭೇದ ವಿಲ್ಲವಾದರೂ ಭೇದ ವ್ಯವಹಾರ ಕಾರಣವಾದುದೇ ವಿಶೇಷವು. ಇಂತಹ ವಿಶೇಷಗಳು ಅನಂತಗಳಾಗಿರುತ್ತವೆ. ಭೇದ ವ್ಯವಹಾರ ಕಾರಣತೆಯೇ ವಿಶೇಷ ಲಕ್ಷಣವೆಂದರೆ ಇದು ಭೇದದಲ್ಲೂ ಇರುವುದರಿಂದ ಅತಿವ್ಯಾಪ್ತಿಯು, ಆದ್ದರಿಂದ ಭೇದಾಭೇದ ಸ್ಥಳದಲ್ಲಿ ಭೇದ ವ್ಯವಹಾರ ಸಾಧನತ್ವ ಕಾರಣತ್ವವೇ ವಿಶೇಷ ಲಕ್ಷಣವು. ವಿಶೇಷವೆಂಬ ಪದಾರ್ಥವಿರುವ ವಿಷಯದಲ್ಲಿ ಪ್ರಮಾಣವಿಲ್ಲವಾದುದರಿಂದ ವಿಶೇಷವೇ ಇಲ್ಲಾ ಎನ್ನುತ್ತೇನೆ ಎಂದರೆ ಹಾಗೆನಬಾರದು. ರೂಪಾದಿಗುಣಗಳು ಘಟಾದಿಗುಣಿಗಳು, ಇವೆರಡಕ್ಕೂ ಭೇದ ಪಕ್ಷದಲ್ಲೂ ಅಭೇದ ಪಕ್ಷದಲ್ಲೂ ಭೇದಾಭೇದ ಪಕ್ಷದಲ್ಲೂ ವಿಶೇಷ ವನ್ನು ಒಪ್ಪಲೇಬೇಕು.

**ತಥಾಹಿ ॥ ಅಭೇದಪಕ್ಷೇ ತಾವದ್ಘಟೇರೂಪಮಿತಿ ಭೇದ ಪ್ರತ್ಯಯಃ ರೂಪನಾಶೇಽಪಿ ಘಟಸ್ಯಾನಾಶಃ । ಘಟ ಶಬ್ದಸ್ಯ ರೂಪಾಬೋಧಕತ್ವಂ ರೂಪಶಬ್ದಸ್ಯ ಘಟಾಬೋಧ ಕತ್ವಂ । ನೀಲೋ ಘಟ ಇತಿ ಸಹ ಪ್ರಯೋಗಃ ಘಟ ರೂಪ ಶಬ್ದಯೋಃ ಅಪರ್ಯಾಯತ್ವಂ ಘಟೇಜ್ಞಾತೇಪಿ ರೂಪಾದಿ ಸಂದೇಹಶ್ಚ । ಏತೇ ಅನುಭವಸಿದ್ಧಾಃ ಭೇದಂವಿನಾ ಅನುಪಪದ್ಯ ಮಾನಾಃ ತತ್ಪ್ರತಿನಿಧಿಂ ವಿಶೇಷಂ ಕಲ್ಪಯಂತಿ । ನ ಚೈತೇ ಪ್ರತ್ಯಯಾ ಭ್ರಮಾಃ । ಕದಾಪಿ ಬಾಧಾ ಅನುಪಲಂಭಾತ್ ।**

ವಿಶೇಷವನ್ನು ಒಪ್ಪದಿದ್ದರೆ ಅನೇಕ ವ್ಯವಹಾರ ವಿರೋಧಗಳು ಬರುತ್ತದೆ. ಗುಣ ಗುಣಿ ಅಭೇದ ಪಕ್ಷದಲ್ಲಿ ಘಟದಲ್ಲಿ ರೂಪವು ಎಂಬ ವ್ಯವಹಾರವಿದೆ. ಇದು ತಪ್ಪಾಗ ಬೇಕಾಗುತ್ತದೆ. ರೂಪ ನಾಶವಾದರೆ ಘಟನಾಶವಾಗದಿರುವುದು ಕಂಡಿದೆ, ಘಟ ಶಬ್ದಕ್ಕೆ ರೂಪ ಬೋಧಕತೆ ರೂಪ ಶಬ್ದಕ್ಕೆ ಘಟ ಬೋಧಕತೆ ಬರುಬೇಕಾಗತ್ತದೆ ನೀಲ ಘಟವು ಎಂದುಸಹ ಪ್ರಯೋಗ ಬರಬೇಕಾಗುತ್ತದೆ. ಘಟರೂಪ ಶಬ್ದಗಳಿಗೆ ಪರ್ಯಾಯತೆ ಬರಬೇಕಾಗುತ್ತದೆ. ಘಟ ಜ್ಞಾತವಾದರೆ, ಅದರ ರೂಪವೂ ಜ್ಞಾತ (ತಿಳಿದಿರುವುದು)ವಾಗುತ್ತದೆ. ಅದಾಗದೇ ರೂಪದಲ್ಲಿ ಸಂದೇಹ ಬರಬೇಕಾಗುತ್ತದೆ. ಇವುಗಳೆಲ್ಲವೂ ಅನುಭವ ಸಿದ್ಧವಾದವುಗಳು. ಭೇದವಿಲ್ಲದೇ ಸರಿಪಡುವವುಗಳಲ್ಲದ ಕಾರಣ ಆ ಭೇದವನ್ನು ಹೇಳುವವರು ಭೇದ ಪ್ರತಿನಿಧಿಯಾದ ವಿಶೇಷವನ್ನು ಒಪ್ಪಲೇ ಬೇಕು. ಹಿಂದೆ ಹೇಳಿದ ವ್ಯವಹಾರ ಜ್ಞಾನಗಳು ಭ್ರಮಗಳಲ್ಲವೂ ಎಂದೇದಿಗೂ ಬಾಧ ಜ್ಞಾನ ಬರುವುದಿಲ್ಲವಾದ್ದರಿಂದ.

**ಕಿಂಚ ನೀಲಘಟಯೋಃ ಅಭೇದೋನೀಲಘಟಾಭ್ಯಾಂ ಅಭಿನ್ನಃ ಉತ ಭಿನ್ನೋಽಭಿನ್ನಾಭಿನ್ನೋವಾ । ನಾದ್ಯಃ । ನೀಲಘಟಯೋರಭೇದ ಇತಿ ಭೇದ ವ್ಯವಹಾರೋನಸ್ಯಾತ್ । ಘಟಪದೇನ ನೀಲಾಭೇದ ಪ್ರತ್ಯಯಾದಿ ಪ್ರಸಂಗಾಚ್ಚ । ನ ದ್ವಿತೀಯಃ। ತರ್ಹಿ ನೀಲಘಟಾಭೇದನ್ಯಾಯೇನ ನೀಲ ಘಟಯೋ ಭೇದಸಂಭವೇ ಅಭೇದಾಂಗೀಕಾರಾಯೋಗಾತ್ । ಅತ ಏವ ನತೃತೀಯಃ। ಅತಃ ಭೇದವ್ಯವಹಾರ ನಿರ್ವಾಹಾಯ ಅಭೇದವಾದಿಭಿಃ ವಿಶೇಷೋಂಗೀ-ಕಾರ್ಯಃ । ತದುಕ್ತಂ ಜನ್ಮಾಧಿಕರಣ ಅನುವ್ಯಾಖ್ಯಾನೇ । ಭೇದಹೀನೇತ್ವ ಪರ್ಯಾಯ ಶಬ್ದಾಂತರ ನಿಯಾಮಕಃ । ವಿಶೇಷೋನಾಮ ಕಥಿತಃ ಸೋಸ್ತಿವಸ್ತುಷ್ವಶೇಷತ ಇತಿ ।**

ಮತ್ತೂ ಗುಣಗುಣಿಗಳಿಗೆ ಅಭೇದವನ್ನು ಒಪ್ಪಿದರೆ ಆ ಅಭೇದ ನೀಲಘಟ ಗಳಿಂದ ಅಭಿನ್ನವೋ ಭಿನ್ನವೋ ಭಿನ್ನಾಭಿನ್ನವೋ, ಅಭಿನ್ನವೆಂದರೆ ನೀಲಘಟಗಳಿಗೆ ಅಭೇದವಾದ್ದರಿಂದ ಭೇದ ವ್ಯವಹಾರವು ಇಲ್ಲವಾಗಲಿ ಘಟ ಪದದಿಂದ ನೀಲಾ ಭೇದ ಜ್ಞಾನವಾಗಲಿ, ಭಿನ್ನವೆಂದರೆ ನಿನ್ನ ಪಕ್ಷದಂತೆ ಅಭೇದಾಂಗೀಕಾರ ಯುಕ್ತವೇ ಆಗುತ್ತದೆ. ಅದ್ದರಿಂದಲೇ ಭೇದಾಭೇದವೆಂಬ ಮೂರನೇ ಪಕ್ಷವೂ ಕೂಡುವುದಿಲ್ಲ. ಆದ್ದರಿಂದ ಅಭೇದಾಂಗೀಕಾರಿಗಳಿಂದಲೂ ವ್ಯವಹಾರಸಿದ್ಧಿಗಾಗಿ ವಿಶೇಷವನ್ನು ಒಪ್ಪಲೇ ಬೇಕು, ಇದನ್ನೇ ಜನ್ಮಾಧಿಕರಣ ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ಭೇದ ರಹಿತವಾದ ಸ್ಥಳದಲ್ಲಿ ಅಪರ್ಯಾಯ ಶಬ್ದ ನಿಯಾಮಕವಾದ ವಿಶೇಷವೆಂಬುದು ಹೇಳಿದೆ. ಅದು ಅನೇಕ ವಸ್ತುಗಳಲ್ಲಿವೆ ಎಂದು.

ಏವಂ ಗುಣಗುಣಿನೋಃ ಭೇದಪಕ್ಷೇಪಿ ವಿಶೇಷೋಭ್ಯುಪಗಂತವ್ಯಃ । ತಥಾಹಿ । ನೀಲಘಟಯೋರ್ಭೇದಃ ಕಿಂ ಭೇದಿಭ್ಯಾಂ ನೀಲ ಘಟಾಭ್ಯಾಂ ಭಿನ್ನೋ ಅಭಿನ್ನೋ ಭಿನ್ನಾಭಿನ್ನೋವಾ । ನಾದ್ಯಃ । ತಸ್ಯಾಪಿ ಭೇದಸ್ಯ ಭೇದಾದಿವಿಕಲ್ಪೇಸತಿ ಭೇದಪಕ್ಷಸ್ಯೈವ ಸ್ವೀಕರ್ತವ್ಯತ್ವೇನ ಅನವಸ್ಥಾ ಪತ್ತೇಃ । ನ ದ್ವಿತೀಯಃ । ನೀಲಘಟಯೋರಭೇದಃ ಕಿಮಭೇದಿಭ್ಯಾಂ ಭಿನ್ನೋ ಅಭಿನ್ನೋಭಿನ್ನಾಭಿನ್ನೋವಾ । ನಾದ್ಯಃ । ಭೇದಪರಂಪರಯಾ ಅನವಸ್ಥಾನಾತ್। ತನ್ನಾಯೇನ ನೀಲ ಘಟಯೋಃ ಭೇದಸ್ಯ ಚ ಭೇದೋಪ ಪತ್ತ್ಯಾವಭೇದಾಭ್ಯುಪಗಮವೈಯರ್ಥ್ಯಾತ್ । ನ ದ್ವಿತೀಯಃ । ಅಭೇದ ಪರಂಪರಾಪತ್ತೇಃ । ಅಭೇದಸ್ಯಾಭೇದಿಭ್ಯಾಮಭೇದ ಇತಿಭೇದ ವ್ಯವಹಾ-ರಾನುಪಪತ್ತೇಃ । ಅತ ಏವ ನತೃತೀಯಃ । ಪಕ್ಷದ್ವಯೋಕ್ತ ದೋಷಾ ಪತ್ತೇಃ ।

ಹಿಂದೆ ಹೇಳಿದಂತೆ ಗುಣಗುಣಿಗಳಿಗೆ ಭೇದವನ್ನು ಒಪ್ಪುವುದರಿಂದಲೂ ವಿಶೇಷವು ಅಂಗೀಕಾರ್ಯವೇ ಏಕೆಂದರೆ ನೀಲ ಘಟಗಳ ಭೇದವು, ಭೇದ ಉಳ್ಳ ಘಟ ನೀಲಗಳಿಂದ ಭಿನ್ನವೋ, ಅಭಿನ್ನವೋ, ಭಿನ್ನಾಭಿನ್ನವೋ, ಭಿನ್ನವೆನಲು ಬರುವುದಿಲ್ಲ, ಅಭೇದಕ್ಕೂ ಭೇದಾದಿ ವಿಕಲ್ಪವಾಗುತ್ತಿರಲು, ಭೇದ ಪಕ್ಷವೇ ಸ್ವೀಕಾರಾರ್ಹವಾಗಿ ಅನವಸ್ಥೆ ಬರುತ್ತದೆ, ಎರಡನೇ ಪಕ್ಷ ಅಭೇದಗಳಿಂದ (ನೀಲಘಟ) ಭಿನ್ನವೋ, ಅಭಿನ್ನವೋ, ಭಿನ್ನಾಭಿನ್ನವೋ ಹೀಗೆ ಅಲ್ಲೂ ವಿಕಲ್ಪವೇ ಆಗುತ್ತದೆ. ಭಿನ್ನವೆಂದರೆ ಭೇದಪರಂಪರೆಯಾಗಿ ಹಿಂದೆ ಹೇಳಿದಂತೆ ಅನವಸ್ಥಾ ಅದೂ ನಿಯಮದಿಂದ ಭೇದ ಅಂಗೀಕಾರಕ್ಕೆ ವ್ಯರ್ಥತೆ, ಎರಡನೇ ಪಕ್ಷವಾದ ಅಭೇದವೂ ಕೂಡುವುದಿಲ್ಲ ಅಭೇದ ಪರಂಪರಾ ಒದಗುತ್ತದೆ. ಅಭೇದಕ್ಕೆ ಭೇದವುಳ್ಳವುಗಳಿಂದ ಭೇದವು ಹೀಗೆ ಭೇದ ವ್ಯವಹಾರವೇ ಅಯುಕ್ತವಾಗುತ್ತದೆ. ಆದ್ದರಿಂದಲೇ ಮೂರನೇ ಪಕ್ಷವೂ ಯುಕ್ತವಾಗುವುದಿಲ್ಲ, ಎರಡು ಪಕ್ಷದ ದೋಷಗಳೇ ಒದಗುವುದರಿಂದ.

ಅತೋ ಭೇದವಾದಿಭಿರಪಿ ಅನವಸ್ಥಾದಿ ಪರಿಹಾರಾರ್ಥಂ ವಿಶೇಷ ಬಲಾತ್ ನೀಲಘಟ ಭೇದ ಏವ ಸ್ವಸ್ಯ ಭೇದಿಭ್ಯಾಂ ಭೇದ ಇತಿ ಸ್ವೀಕರ್ತವ್ಯಂ ತಥಾ ಚ ಭೇದ ಪಕ್ಷೇಽಪಿ ವಿಶೇಷೋಂಗೀಕರ್ತವ್ಯಃ । ಏವಂ ಭೇದಾಭೇದ ವಾದಿಭಿರಪಿ ಏಕತ್ರ ದ್ವಯೋಃ ಪರಸ್ಪರ ವಿರೋಧಸ್ಯ ಏಕತ್ರ ವಿರೋಧ ಪರಿಹಾರಾರ್ಥಂ ವಿಶೇಷೋಂಗೀಕರ್ತವ್ಯಃ । ಭೇದಾಭೇದಾದಿ ವಿಕಲ್ಪದೋಷ ಪ್ರಸಂಗಶ್ಚ । ತದುಕ್ತಂ ಅನುವ್ಯಾಖ್ಯಾನೇ । ಏತಾದೃಶೇ ವಿಶೇಷೇಽಸ್ಮಿನ್ ಕೋದ್ವೇಷೋವಾದಿನಾಂ ಭವೇದಿತಿ ।

ಆದುದರಿಂದ ಭೇದವಾದಿಗಳು ಅನವಸ್ಥಾದಿ ಪರಿಹಾರಾರ್ಥವಾಗಿ ವಿಶೇಷವನ್ನು ಒಪ್ಪಿ ಸ್ವನಿರ್ವಾಹಕವೆನಲೇಬೇಕು. ಒಟ್ಟಿನಲ್ಲಿ ಭೇದ ಪಕ್ಷದಲ್ಲೂ ವಿಶೇಷಾಂಗೀಕಾರ ಅನಿವಾರ್ಯವೇ ಆಗಿರುತ್ತದೆ. ಹೀಗೆ ಭೇದಾಭೇದವಾದಿಗಳೂ ಪರಸ್ಪರ ವಿರೋಧ (ಏಕತ್ರ) ಪರಿಹಾರವಾಗಲು ವಿಶೇಷಾಂಗೀಕಾರಿಗಳೇ ಆಗಬೇಕು. ಇಲ್ಲವಾದರೆ ಹಿಂದಿನಂತೆ ವಿಕಲ್ಪಾದಿದೋಷಗಳು ಅನಿವಾರ್ಯವೇ ಆಗಿರುತ್ತದೆ. ಅನುವ್ಯಾಖ್ಯಾನದಲ್ಲಿ ಇದನ್ನೇ ಹೇಳಿರುತ್ತಾರೆ. ಅನೇಕ ವ್ಯವಹಾರ ನಿರ್ವಾಹಕ ವಿಶೇಷದಲ್ಲಿ ಯಾವ ವಾದಿಯಾದರೂ ದ್ವೇಷಿಸುತ್ತಾನೆ ಎಂದು ವಿಶೇಷವೆಂಬ ಪದಾರ್ಥವನ್ನು ಒಪ್ಪಲೇಬೇಕು.

**ಕಿಂಚ ಪರಮಾತ್ಮನಿ ವಿಶೇಷ ಸ್ತಾವತ್ ಸ್ವೀಕರ್ತವ್ಯಃ । ತಥಾಹಿ । ಆನಂದಂಬ್ರಹ್ಮಣೋವಿದ್ವಾನಿತ್ಯಾದಿ ಶ್ರುತ್ಯಾನಂದಾದಿ ಧರ್ಮಾಃ ಭಗವತಿ ಪ್ರಸಿದ್ಧಾಃ । ವಿಜ್ಞಾನಮಾನಂದಂ ಬ್ರಹ್ಮೇತಿ ಆನಂದಾದೇಬ್ರಹ್ಮಾತ್ಮೈಕ್ಯಂ ಉಚ್ಯತೇ । ತಥಾ । ಯಥೋದಕಂ ದುರ್ಗೇವೃಷ್ಟಂ ಪರ್ವತೇಷು ಧಾವತಿ । ಏವಂ ಧರ್ಮಾನ್‌ಪೃಥಕ್ ಪಶ್ಯನ್ ತಾನೇವಾನುಧಾವತಿ । ಮೃತ್ಯೋಸ್ಸ ಮೃತ್ಯುಮಾಪ್ನೋತಿಯ ಇಹನಾನೇವಪಶ್ಯತೀತಿ ಭೇದ ಪಕ್ಷಸ್ಯ ಭೇದಾಭೇದ ಪಕ್ಷಸ್ಯ ಚ ನಿಂದಾಕೃತಾ । ಅತೋ ಅತ್ಯಂತಾಭೇದಂ ಸ್ವೀಕೃತ್ಯ ಭೇದವ್ಯವಹಾರೋ ವಿಶೇಷೇಣ ಸಮರ್ಥನೀಯಃ ।**

ಮತ್ತೂ ಪರಮಾತ್ಮನಲ್ಲಿ ವಿಶೇಷವನ್ನು ಅಂಗೀಕರಿಸಬೇಕು. ಏಕೆಂದರೆ ಒಂದು ಶ್ರುತಿಯಲ್ಲಿ ಜ್ಞಾನಿ ಆದವನು ಬ್ರಹ್ಮನಲ್ಲಿ ಆನಂದವನ್ನು ತಿಳಿಯುತ್ತಾನೆಂದು ಹೇಳುತ್ತದೆ. ಮತ್ತೊಂದು ಶ್ರುತಿಯು ವಿಜ್ಞಾನಾನಂದವೇ ಬ್ರಹ್ಮನೆಂದು ಹೇಳುತ್ತದೆ. ಹೀಗೆ ಒಂದೆರಡು ಭೇದ ಒಂದೆರಡು ಅಭೇದ ಬ್ರಹ್ಮಾದಿಗಳಿಗೆ ಹೇಳುತ್ತದೆ. ಪರಸ್ಪರ ವಿರೋಧವೇ ಕಾಣುತ್ತದೆ. ಭೇದಾಭೇದ ಹೇಳೋಣವೆಂದರೆ. ಛೇ ಒಂದೇ ಮಳೆಯ ನೀರು ಕೊಟೆಗಳಲ್ಲಿ ಬಿದ್ದು ಪರ್ವತಗಳಲ್ಲಿ ಭಿನ್ನವಾಗಿ ಹರಿಯುತ್ತದೋ ಹಾಗೆ ಪರಬ್ರಹ್ಮನಲ್ಲಿ ಅವನ ಗುಣಗಳಿಂದ ಭೇದವನ್ನು ಯಾವ್ರೋನು ತಿಳಿಯುತ್ತಾನೆಯೋ ಅವನೂ ಹಾಗೇ ಹರಿದು ಹೋಗುತ್ತಾನೆಂದು ಒಂದು ಶ್ರುತಿಯು, ಹಾಗೆಯೇ ಯಾವನು ಮೃತ್ಯುವಿಗೆ ತುತ್ತಾಗುತ್ತಾನೆಂದು ಒಂದು ಶ್ರುತಿಯು ಹೇಳಿರುವುದರಿಂದ ಪರಬ್ರಹ್ಮನಲ್ಲಿ ಗುಣಗಳಿಂದ ಸುತರಾಂ ಅಭೇದವೇ ಒಪ್ಪಿ ವ್ಯವಹಾರ ಸಿದ್ಧಿಗೋಸ್ಕರ ಶ್ರೀಹರಿಯಲ್ಲಿಯೂ ವಿಶೇಷಗಳನ್ನೇ ಒಪ್ಪಲೇಬೇಕು.

**ತದುಕ್ತಂ ಋಗ್ಭಾಷ್ಯೇ । ಉಕ್ತ್ವಾ ಧರ್ಮಾನ್ಪೃಥಕ್ತ್ವಸ್ಯ ನಿಷೇಧಾದೇವಮೇವಹಿ । ವಿಶೇಷೋ ಜ್ಞಾಯತೇ ಶ್ರುತ್ಯಾ ಭೇದಾದನ್ಯತ್ವ ಸಾಕ್ಷಿತ ಇತಿ । ಅಪಿ ಚ ಘಟಾದೇಸ್ತಾವಜ್ಜನಿಃ ಪ್ರತ್ಯಕ್ಷಸಿದ್ಧಾ । ಸಾಜನಿಃ ನಿತ್ಯಾಃ**

ನಿತ್ಯಾವಾ । ನಾದ್ಯಃ । ಸರ್ವದಾ ಘಟಸ್ಯ ಜನ್ಮಾಪತ್ತೇಃ । ನದ್ವಿತೀಯಃ । ತರ್ಹಿ ಜನೇರಪಿ ಜನಿರಂಗೀಕರ್ತವ್ಯಾ । ತಥಾಚ ತತ್ರಾಪ್ಯೇವಮಿತ್ಯನವಸ್ಥಾಪಾತಾತ್ । ಅತೋಘಟಜನಿರೇವ ವಿಶೇಷ ಬಲಾಜ್ಜನೇರಪಿ ಜನಿರಿತಿ ಸ್ವೀಕರ್ತವ್ಯಾ । ಗತ್ಯಂತರಾಭಾವಾತ್ । ತದುಕ್ತಂ ಬೃಹದ್ಭಾಷ್ಯೇ । ಯಥಾ ಜನೇರ್ಜನಿರ್ನಾನ್ಯಾ ತಸ್ಯಾಃ ವಸ್ತು ಜನಿರ್ಜನಿರಿತಿ । ಸ ಚ ವಿಶೇಷಃ ಏಕಸ್ಮಿನ್ವಸ್ತುನಿ ಏಕ ಏವೇತಿನನಿಯಮಃ ।

ಇದನ್ನೇ ಋಗ್ಭಾಷ್ಯದಲ್ಲಿ ಹೇಳಿರುತ್ತಾರೆ. ಶ್ರುತಿಯೂ ಪರಮಾತ್ಮನಲ್ಲಿ ಪ್ರತ್ಯೇಕ ಧರ್ಮಗಳನ್ನು ಹೇಳಿ ವಿರುದ್ಧವಾದ್ದರಿಂದ ಜಗತ್ತಿನಲ್ಲಿ ಕಾಣಬರುವ ವಿಶೇಷವನ್ನು ಪರಮಾತ್ಮನಲ್ಲಿ ಒಪ್ಪಿ ಗುಣಗಳ ಭೇದ ವಿರೋಧವನ್ನು ಪರಿಹರಿಸಬೇಕೆಂದು (ಶ್ರುತಿಗಳೇ ಪರಿಹರಿಸುತ್ತವೆ) ಮತ್ತೂ ಘಟಾದಿಗಳ ಹುಟ್ಟು ಪ್ರತ್ಯಕ್ಷವಾದುದು. ಈ ಹುಟ್ಟು ನಿತ್ಯವೇ, ಅನಿತ್ಯವೇ ? ನಿತ್ಯವೆಂದರೆ ಸದಾ ಹುಟ್ಟುತ್ತಿರಬೇಕಾಗುತ್ತದೆ, ಅನಿತ್ಯವೆಂದರೆ ಹುಟ್ಟಿಗೊಂದು ಹುಟ್ಟು ಒಪ್ಪಬೇಕಾಗುತ್ತದೆ. ಹಾಗೆ ಅನವಸ್ಥಾ ಬರುತ್ತದೆ. ಆದ್ದರಿಂದ ಅನಿವಾರ್ಯವಾಗಿ ಘಟದ ಹುಟ್ಟಿನಲ್ಲಿ ವಿಶೇಷ ಒಂದನ್ನು ಒಪ್ಪಿ ಸ್ವನಿರ್ವಾಹಕತೆ ಹೇಳಲೇಬೇಕು. ಅಂತೆಯೇ ಬೃಹದ್ಭಾಷ್ಯದಲ್ಲಿ ವಸ್ತು ಜನ್ಮಗಳಿಗೆ ಜನ್ಮದ ಅನವಸ್ಥಾ ಪರಿಹಾರಾರ್ಥವಾಗಿ ವಿಶೇಷವನ್ನು ಸರ್ವತ್ರದಲ್ಲೂ ಒಪ್ಪಲೇಬೇಕೆಂದು, ಅಂತಹ ವಿಶೇಷವು ಒಂದು ವಸ್ತುವಿನಲ್ಲಿ ಒಂದೇ ಎಂಬ ನಿಯಮವೂ ಇಲ್ಲಾ ಎಂದಿರುತ್ತಾರೆ.

ಕಿಂತು ಅನಂತಾ ಇತ್ಯಾಹ । ಅನಂತ ಇತಿ । ಅನಂತಾ ಇತ್ಯನೇಕತ್ವೋಪಲಕ್ಷಣಂ । ಯಸ್ಮಿನ್ವಸ್ತು ನಿಯಾವಂತಃ ಸಂಭಾವಿತಾಃ ತಾವಂತ ಸ್ವೀಕರ್ತವ್ಯಾಃ । ಪರಮೇಶ್ವರೇ ಅನಂತಾವಾ । ತಥೈವಸುಧೋಕ್ತೇಃ । ಆಶ್ರಯ ಮಾಹ

ಪ.ಸಂ.—ಸರ್ವಪಧಾರ್ಥನಿಷ್ಠಾಃ ।

ನನು ವಿಶೇಷಸ್ಯ ದ್ರವ್ಯ ಮಾತ್ರ ನಿಷ್ಠತ್ವಂ ಅಂಗೀಕರ್ತವ್ಯಂ । ನ ತು ಸರ್ವವಸ್ತುನಿಷ್ಠತ್ವಮಪಿ । ದ್ರವ್ಯನಿಷ್ಠ ವಿಶೇಷಸ್ಯೈವ ದ್ರವ್ಯಗತ ಗುಣ ಕ್ರಿಯಾದಿಷು ಭೇದ ವ್ಯವಹಾರ ಜನಕತ್ವ ಸಂಭವಾತ್ ।

ಆದರೆ ವಿಶೇಷಗಳು ಅನಂತವಾದವು ಎಂದಿರುತ್ತಾರೆ. ಅನೇಕ ಪದಾರ್ಥಗಳಲ್ಲಿ ಎಂಬುದು ಫಲ ಲಕ್ಷಣವು. ಯಾವ ವಸ್ತುವಿನಲ್ಲಿ ಎಷ್ಟು ಸಂಭಾವಿತವೋ ಅಷ್ಟಷ್ಟು ವಿಶೇಷಗಳನ್ನೂ ಒಪ್ಪಬೇಕು. ಪರಮೇಶ್ವರನಲ್ಲಿ ಅಸಂಖ್ಯಾತವಾದವು ಹಾಗೆ ಸುಧಾದಲ್ಲಿ ಹೇಳಿರುತ್ತಾರೆ ವಿಶೇಷಗಳಿಗೆ ಆಶ್ರಯವಾದುದು ಅನೇಕ ಪದಾರ್ಥಗಳೂ ಆದರೆ ವಿಶೇಷಗಳನ್ನು ದ್ರವ್ಯ ಪದಾರ್ಥದಲ್ಲಿಯೇ ಒಪ್ಪಬೇಕು. ಸರ್ವ ಪದಾರ್ಥದಲ್ಲಿ

ಒಪ್ಪಬಾರದು. ದ್ರವ್ಯದಲ್ಲಿರುವ ಭಿನ್ನಾಭಿನ್ನ ಗುಣ ಕ್ರಿಯಾದಿಗಳ ವ್ಯವಹಾರ ಸಿದ್ಧಿಗೆ ವಿಶೇಷದ ಉಪಯೋಗವಾಗಿರುವುದರಿಂದ.

**ತದುಕ್ತಂ ಗೀತಾತಾತ್ಪರ್ಯೇ। ಅಭಾವೋಯತ್ರ ಭೇದಸ್ಯ ಪ್ರಮಾಣಾವಸಿತೋಭವೇತ್। ವಿಶೇಷೋನಾಮತತ್ರೈವ ವಿಶೇಷ ವ್ಯವಹಾರವಾನ್। ದ್ರವ್ಯಾತ್ಮನಾಸನಿತ್ಯೋಽಪಿ ವಿಶೇಷಾತ್ಮೈವ ಜಾಯತ ಇತಿ। ಅನುವ್ಯಾಖ್ಯಾನೇಽಪಿ। ದ್ರವ್ಯಮೇವತತೋಽನಂತಃ ವಿಶೇಷಾತ್ಮತಯಾಸದಾ। ನಾನಾ ವ್ಯವಹೃತೇರ್ಹೇತುಃ ಅನಂತತ್ವಂ ವಿಶೇಷತ ಇತಿ। ನ ಚ ಸೋಽಸ್ತಿ ವಸ್ತುಷ್ವಶೇಷತ ಇತಿ ಸರ್ವಪದಾರ್ಥನಿಷ್ಟತ್ವಂ ಜನ್ಮಾಧಿಕರಣ ಅನುವ್ಯಾಖ್ಯಾಯಾಮುಕ್ತಮಿತಿ ವಾಚ್ಯಂ। ತತ್ರ ವಸ್ತು ಪದಸ್ಯ ದ್ರವ್ಯಪರತಯಾ ಜನ್ಮಾಧಿಕರಣ ಸುಧಾಯಾಂ ವ್ಯಾಖ್ಯಾತತ್ವಾತ್।**

ಇದನ್ನು ಗೀತಾತಾತ್ಪರ್ಯದಲ್ಲಿ ಹೇಳಿರುತ್ತಾರೆ. ಅಭೇದದ ಅಭಾವವು ಎಲ್ಲಿ ಪ್ರಮಾಣದಿಂದ ಸಿದ್ಧವಾಗಿದೆಯೋ ಅಲ್ಲಿ ವಿಶೇಷವೆಂಬ ವಸ್ತುವು ವ್ಯವಹಾರವನ್ನು ಸಮಗೊಳಿಸುತ್ತಿದೆ. ದ್ರವ್ಯಾತ್ಮಕವಾಗಿ ನಿತ್ಯವಾದರೂ ವಿಶೇಷಾತ್ಮಕ (ಸ್ವರೂಪ) ವಾಗಿ ಹುಟ್ಟುತ್ತದೆ ಎಂದು ಅನುವ್ಯಾಖ್ಯಾನದಲ್ಲಿಯೂ, ದ್ರವ್ಯವೇ ಅನಂತ ವಿಶೇಷ ಸ್ವರೂಪಗಳಾಗಿ ನಾನಾ ವ್ಯವಹಾರಗಳಿಗೆ ಎಂದು ಜನ್ಮಾಧಿಕರಣ ಅನುವ್ಯಾಖ್ಯಾನದಲ್ಲಿ ವಿಶೇಷವು ವಸ್ತುವಿನಲ್ಲಿದೆ ಎಂದಿರುವುದರಿಂದ ಸಕಲ ಪದಾರ್ಥಗಳಲ್ಲಿ ಎಂಬ ಅರ್ಥ ವಾಗುತ್ತದೆ. ದ್ರವ್ಯದಲ್ಲಿಯೇ ಎನ್ನುವುದು ಹೇಗೆ ? ಎಂದರೆ, ಅಲ್ಲಿಯು ವಸ್ತು ಶಬ್ದಕ್ಕೆ ದ್ರವ್ಯವೆಂದೇ ಸುಧಾದಲ್ಲಿ ಬರೆದಿರುವುದರಿಂದ ವಿರೋಧವಿಲ್ಲ.

**ತಥಾಹಿ ತತ್ರಸುಧಾವಾಕ್ಯಾನಿ। ಅಶೇಷ ದ್ರವ್ಯೇಷು ಸ ವಿಶೇಷೋಂಗೀಕರ್ತವ್ಯಃ। ವಿಶೇಷಾಶ್ಚ ಅಶೇಷತೋ ವಸ್ತುಷು ಅನಂತೇಷು ದ್ರವ್ಯೇಷು ಅನಂತಾ ಏವಸಿಂತಿ। ನ ಪುನರೇಕ ಏವ ಸರ್ವತ್ರ। ತಥಾ ಪ್ರತಿ ದ್ರವ್ಯ ಮನೇಕತ್ವೇ ವಿಶೇಷಾಣಾಂ ಪರಸ್ಪರಂ। ಭೇದೇನ ಭಾವ್ಯಂ ಇತ್ಯಾದೀನಿ। ಅತಃ ಕಥಂ ಸರ್ವ ಪದಾರ್ಥನಿಷ್ಟತ್ವಂ ಇತಿಚೇದುಚ್ಯತೇ। ದ್ರವ್ಯನಿಷ್ಟ ಗುಣಕ್ರಿಯಾದಿಷು ಭೇದವ್ಯವಹಾರಸ್ಯ ದ್ರವ್ಯಗತ ವಿಶೇಷಣ ನಿರ್ವಾಹೇಽಪಿ ಅಭಾವೇಷು ವಿಚಿತ್ರ ವ್ಯವಹಾರಸ್ಯ ದ್ರವ್ಯಗತ ವಿಶೇಷಾತಿರಿಕ್ತ ವಿಶೇಷೇಣೈವ ವಕ್ತವ್ಯತ್ವಾತ್।**

ಸುಧಾದಲ್ಲಿಯು ವಾಕ್ಯಗಳಾದರೂ ಹೀಗೆ ಇರುತ್ತದೆ. ಯಾವತ್ತೂ ದ್ರವ್ಯಗಳಲ್ಲಿ ವಿಶೇಷಗಳನ್ನು ಒಪ್ಪಬೇಕು. ಆದರೆ ವಿಶೇಷಗಳು ಅಶೇಷ ವಸ್ತುಗಳಲ್ಲೂ ಅನಂತ ದ್ರವ್ಯಗಳಲ್ಲಿ ಅನಂತವಾಗಿರುತ್ತದೆ. ಒಂದೇ ಎಲ್ಲಡೆಯಲ್ಲೂ ಇರುವುದಿಲ್ಲ. ಹಾಗೂ

ಪ್ರತಿ ದ್ರವ್ಯಗಳಲ್ಲೂ ಪ್ರಾತಿಸ್ವಿಕವಾಗಿ (ಪ್ರತ್ಯೇಕ ಪ್ರತ್ಯೇಕ) ವಿಶೇಷಗಳನ್ನು ಭಿನ್ನಾಭಿನ್ನಗಳಾಗಿಯೇ ತಿಳಿಯಬೇಕು. ಹೀಗೆ ಹೇಳಿರುವುದರಿಂದ, ಹೇಗೆ ಸರ್ವಪದಾರ್ಥಗಳಲ್ಲಿ ವಿಶೇಷವು ಎಂದರೆ ಹೇಳುತ್ತಾರೆ. ದ್ರವ್ಯದಲ್ಲಿರುವ ಗುಣ ಕ್ರಿಯಾದಿಗಳಲ್ಲಿ ಭೇದ ವ್ಯವಹಾರವನ್ನು ದ್ರವ್ಯದಲ್ಲಿರುವ ವಿಶೇಷಗಳು ನಿರ್ವಹಿಸಿದರೆ ಅಭಾವದಲ್ಲಿರುವ ವಿಚಿತ್ರ ವ್ಯವಹಾರಕ್ಕೆ ದ್ರವ್ಯದಲ್ಲಿರುವ ವಿಶೇಷಾತಿರಿಕ್ತ ವಿಶೇಷವೇ ಬೇಕಾಗುವುದೆಂದು ಹೇಳಬೇಕು.

**ತಥಾಹಿ । ಅತ್ಯಂತಾಭಾವಾದಯಃ ತಾವದ್ಭಾವಭಿನ್ನಾಃ ಅನುಭವ ಸಿದ್ಧಾಃ । ತೇಷು ಪ್ರಮೇಯತ್ವಾದಿ ಭಾವ ಧರ್ಮಾಃ ಭಾವಭಿನ್ನತ್ವಾದಯಃ ಅಭಾವ ಧರ್ಮಾಶ್ಚ ಸಂತಿ । ತೇಚ ಅಭಾವ ಸ್ವರೂಪ ಭೂತಾಃ । ನತ್ವತಿರಿಕ್ತಾಃ । ತದುಕ್ತಂ ಅನುವ್ಯಾಖ್ಯಾನೇ । ಭಾವಾಭಾವ ಸ್ವರೂಪಾಸ್ತು ವಿಶೇಷಾ ಏವ ವಸ್ತುನಃ । ಅಭಿನ್ನಾ ಏವ ಸಂಗ್ರಾಹ್ಯಾವ್ಯವಹಾರ ಪ್ರಸಿದ್ಧಯಇತಿ । ತೈತ್ತಿರೀಯಭಾಷ್ಯೇಽಪಿ । ಪ್ರತಿಯೋಗಿತಾಽಪ್ಯಭಾವಸ್ಯಾಪಿ ಅಸ್ತ್ಯಭಾವತಯಾ ಸ್ಫುಟಂ । ನಹ್ಯಭಾವೋಪ್ಯಧರ್ಮಾತ್ಮಾ ನತು ಸ್ಯಾದ್ಭಾವ ಧರ್ಮಯುಕ್ । ಅಭಾವಸ್ಯ ಅಸ್ತಿತಾನಾಮಸ್ಯಾದೇವಾಭಾವ ರೂಪಿಣೀ । ಅಭಾವತಾಪಿ ಸೈವಸ್ಯಾನ್ನತುಸ್ಯಾದ್ಭಾವರೂಪಿಣೀತಿ ।**

ಹೇಗೆಂದರೆ ಅತ್ಯಂತಾಭಾವಾದಿಗಳು ಭಾವಭಿನ್ನಗಳಾಗಿ ಅನುಭವಸಿದ್ಧಗಳಾಗಿವೆ ಅವುಗಳಲ್ಲಿ ಪ್ರಮೇಯತ್ವಾದಿ ಭಾವ ಧರ್ಮಗಳಿವೆ. ಇನ್ನೂ ಭಾವಭಿನ್ನತ್ವಾದಿ ಅಭಾವ ಧರ್ಮಗಳೂ ಇವೆ. ಅವುಗಳೆಲ್ಲವೂ ಅಭಾವ ಸ್ವರೂಪಭೂತಗಳಾದವುಗಳೇ ? ಅತಿರಿಕ್ತವಾದವುಗಳೇ ? ಇದನ್ನು ಅನುವ್ಯಾಖ್ಯಾನದಲ್ಲಿ ಹೇಳುತ್ತಾರೆ. ಅನೇಕ ಭಾವ ಧರ್ಮಗಳು ಅಭಾವ ಸ್ವರೂಪಗಳಾಗಿವೆ. ಅವುಗಳ ವ್ಯವಹಾರ ಸಿದ್ಧಿಗಾಗಿ ಅಭಿನ್ನವಾದವುಗಳನ್ನು ಸಂಗ್ರಹ ಮಾಡಿ ವಸ್ತುಗಳಲ್ಲಿ ವಿಶೇಷವನ್ನೇ ಹೇಳಬೇಕು. ತೈತ್ತಿರೀಯ ಭಾಷ್ಯದಲ್ಲಿಯೂ ಅಭಾವಕ್ಕೆ ಪ್ರತಿಯೋಗಿತ್ವೇನ ಭಾವರೂಪತಾ ಸ್ಫುಟವಾಗದೇ ಅಭಾವವು ಭಾವ ಧರ್ಮಯುಕ್ತವಾಗೋದಿಲ್ಲ. ಅಭಾವಕ್ಕಿರುವ ಅಸ್ತಿತ್ವವು ಅಭಾವರೂಪವೇ ಆಗಿರುತ್ತದೆ. ಅಭಾವತ್ವವೂ ಅಭಾವ ರೂಪವೇ ಆಗುತ್ತಾಗಲಿ ಭಾವರೂಪವಾಗೋದಿಲ್ಲ ಹೀಗೆ ಹೇಳಿರುತ್ತದೆ.

**ತಥಾ ಚ ಅಭಾವೇ ಭಾವಪ್ರತಿಯೋಗಿತ್ವಾಸ್ತಿತ್ವಾದೀನಾಮಭಾವ ಸ್ವರೂಪತ್ವೇ ಭೇದವ್ಯವಹಾರನಿರ್ವಾಹಾರ್ಥಂ ತತ್ರಾಪಿ ವಿಶೇಷಸ್ಯ ಸ್ವೀಕಾರ್ಯತ್ವಾತ್ । ನ ಚ ದ್ರವ್ಯಮಾತ್ರನಿಷ್ಠತ್ವ ಪ್ರತಿಪಾದಕ ಪ್ರಮಾಣ ವಿರೋಧ ಇತಿ ವಾಚ್ಯಂ । ಪರಮಾತ್ಮಾದಿ ದ್ರವ್ಯಾಣಾಂ ಏವ ತತ್ರ ಪಕೃತತ್ವೇನ ತದಭಿಪ್ರಾಯೇಣವಾ ದ್ರವ್ಯಗತ ಗುಣಾದಿಷು ದ್ರವ್ಯನಿಷ್ಠ ವಿಶೇಷಾ**

ತಿರಿಕ್ತೋ ನವಿಶೇಷೋಽಂಗೀಕರ್ತವ್ಯಃ ಇತ್ಯಭಿಪ್ರಾಯೇಣವಾ ಸುಧಾದೌ ದ್ರವ್ಯಪದೋಪಪತ್ತೇರಿತಿದಿಕ್ । ನನು ವಿಶೇಷ ಬಲಾದೇವ ಗುಣಗುಣ್ಯಾದೀನಾಂ ಭೇದವ್ಯವಹಾರ ನಿರ್ವಾಹೇವಿಶೇಷೇಪಿ ವಿಶೇಷತ್ವಾದಿ ಧರ್ಮಾಣಾಂ ಸತ್ವಾತ್ತತ್ರ ಭೇದವ್ಯವಹಾರ ನಿರ್ವಾಹಾಯ ವಿಶೇಷಾಂತರಂ ಕಲ್ಪ್ಯಂಸ್ಯಾತ್ ತಥಾ ಚ ಅನವಸ್ಥಾ ಸ್ಯಾದಿತ್ಯತ ಆಹ ।

ಪ.ಸಂ.– ಸ್ವನಿರ್ವಾಹಕಾಶ್ಚ ।

ಒಟ್ಟಿನಲ್ಲಿ ಅಭಾವದಲ್ಲಿ ಭಾವ ಪ್ರತಿಯೋಗಿತ್ವ ಅಸ್ತಿತ್ವಾದಿಗಳಿಗೆ ಅಭಾವ ಸ್ವರೂಪತೆ ಇರುವುದರಿಂದ ಭೇದ ವ್ಯವಹಾರ ನಿರ್ವಾಹಾರ್ಥವಾಗಿ ಅಭಾವದಲ್ಲೂ ವಿಶೇಷವನ್ನು ಒಪ್ಪಲೇಬೇಕು. ವಿಶೇಷವು ದ್ರವ್ಯ ಮಾತ್ರದಲ್ಲಿಯೇ ಎಂಬ ಪ್ರಮಾಣ ವಿರೋಧ ಬರುವುದಿಲ್ಲವೇ ? ಎಂದರೆ ಬರುವುದಿಲ್ಲ. ಆ ಸ್ಥಳಗಳಲ್ಲಿ ಪರಮಾತ್ಮಾದಿ ದ್ರವ್ಯಗಳೇ ಪ್ರಸಕ್ತ ಅಭಿಪ್ರಾಯದಿಂದಲೂ ದ್ರವ್ಯಗುಣ ಕ್ರಿಯಾದಿಗಳಲ್ಲಿ ದ್ರವ್ಯದಲ್ಲಿರುವ ವಿಶೇಷವೇ ಹೇಳಬೇಕು. ಬೇರೆ ವಿಶೇಷವನ್ನು ಒಪ್ಪಬಾರದು ಎಂಬ ಅಭಿಪ್ರಾಯದಿಂದಾಗಲಿ, ಸುಧಾದಿಗಳಲ್ಲಿ ದ್ರವ್ಯ ಮಾತ್ರ ಉಕ್ತವಾಗಿದೆ ಎಂದು ಹೇಳಿದರೆ ಯುಕ್ತವೇ ಆಗುತ್ತದೆ ದಿಗ್ದರ್ಶನವು ವಿಶೇಷ ಬಲದಿಂದ ಗುಣಗುಣ್ಯಾದಿಗಳಲ್ಲಿ ಭೇದ ವ್ಯವಹಾರ ನಿರ್ವಹಿಸಿದರೆ ವಿಶೇಷದಲ್ಲಿ ವಿಶೇಷತ್ವ ವ್ಯವಹಾರಾರ್ಥವಾಗಿ ಇನ್ನೊಂದು ವಿಶೇಷ ಹೀಗೆ ಅನೇಕ ವಿಶೇಷಗಳ ಒಪ್ಪುವಿಕೆಯಿಂದ ಅನವಸ್ಥಾ ಬರುವುದಿಲ್ಲವೇ ? ಎಂದರೆ ಬರುವುದಿಲ್ಲಾ, ವಿಶೇಷಕ್ಕೆ ಸ್ವನಿರ್ವಾಹಕತೆ ಇರುವುದರಿಂದ ವಿಶೇಷಗಳು ಸ್ವನಿರ್ವಾಹಕಗಳೇ ಆಗಿರುತ್ತವೆ.

ಭವೇದೇವೇಯಮನವಸ್ಥಾ ಯದಿ ವಿಶೇಷೇ ವಿಶೇಷಾಂತರಂ ಸ್ಯಾತ್। ನೈತದಸ್ತಿ । ಕಿಂನಾಮ ದ್ರವ್ಯಗತೋ ವಿಶೇಷ ಏವ ಸ್ವಸ್ಮಿನ್ನಪಿ ವಿಶೇಷ ವ್ಯವಹಾರ ಹೇತುರಿತ್ಯಭ್ಯುಪಗಮಾತ್ । ತದುಕ್ತಮನುವ್ಯಾಖ್ಯಾನೇ । ವಿಶೇಷಾಸ್ತೇಷ್ಯನಂತಾಶ್ಚ ಪರಸ್ಪರವಿಶೇಷಿಣಃ । ಸ್ವ ನಿರ್ವಾಹಕತಾ ಯುಕ್ತಾಃ ಸಂತಿ ವಸ್ತುಷ್ವಶೇಷತಃ ಇತಿ । ಬೃಹದ್ಭಾಷ್ಯೇಽಪಿ । ವಿಶೇಷಸ್ಯ ವಿಶೇಷೋಽನ್ಯೋ ನಚೈವಾಸ್ತಿಕಥಂಚನ । ಸ್ವ ಸ್ಯಾಪಿತು ವಿಶೇಷಶ್ಚ ಸ್ವಯಮೇವ ಭವಿಷ್ಯತಿ ಇತಿ । ಗೀತಾತಾತ್ಪರ್ಯೇಽಪಿ । ವಿಶೇಷೋಽಪಿ ಸ್ವರೂಪಂ ಸಸ್ವನಿರ್ವಾಹಕ ಏವ ಚೇತಿ । ವಿಶೇಷಂ ವಿಭಜಂತಿ ।

ವಿಶೇಷಕ್ಕೆ ವಿಶೇಷಾಂತರವನ್ನು ಒಪ್ಪಿದರೆ ಅನವಸ್ಥೆ ಅಲ್ಲವೇ ಎಂದರೆ ಹಾಗಲ್ಲಾ, ಸ್ವನಿರ್ವಾಹಕತ್ವವನ್ನೇ ಒಪ್ಪುವುದರಿಂದ ಅನವಸ್ಥೆ ಇಲ್ಲ. ದ್ರವ್ಯದಲ್ಲಿರುವ ವಿಶೇಷವೇ ತನ್ನಲ್ಲಿಯ ವಿಶೇಷ ವ್ಯವಹಾರಕ್ಕೂ ಕಾರಣವೆಂದು ಒಪ್ಪಿರುವುದರಿಂದ, ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ಅನಂತಗಳಾದ ವಿಶೇಷಗಳು ಪರಸ್ಪರ ವಿಶೇಷ

ಗಳಾಗಿರುತ್ತವೆ. ಸ್ವನಿರ್ವಾಹಕಯುಕ್ತಗಳಾಗಿಅನೇಕ ವಸ್ತುಗಳಲ್ಲಿರುತ್ತವೆ. ಬೃಹದ್ಭಾಷ್ಯದಲ್ಲಿಯೂ, ವಿಶೇಷಕ್ಕೆ ಬೇರೆ ವಿಶೇಷ ಬಂದಿರುವುದಿಲ್ಲ ತನಗೆ ತಾನೇ ವಿಶೇಷವಾಗಿ ವ್ಯವಹಾರ ನಿರ್ವಾಹಕವಾಗುತ್ತದೆ ಎಂದು ಹೇಳಿರುತ್ತದೆ. ಗೀತಾ ತಾತ್ಪರ್ಯದಲ್ಲಿಯೂ ವಿಶೇಷವು ತನ್ನ ಸ್ವರೂಪದಿಂದಲೇ ಸ್ವ ನಿರ್ವಾಹಕವಾಗಿರುತ್ತದೆ ಹೀಗೆಂದು ಹೇಳಿರುತ್ತಾರೆ.

ಪ.ಸಂ —ತೇದ್ವಿವಿಧಾಃ । ನಿತ್ಯಾ ಅನಿತ್ಯಾಶ್ಚೇತಿ । ನಿತ್ಯಾ ಈಶ್ವರಾದಿ ನಿತ್ಯ ದ್ರವ್ಯಗತಾಃ । ಘಟಾದ್ಯನಿತ್ಯದ್ರವ್ಯಗತಾ ಅನಿತ್ಯಾಃ ।

ವಿಶೇಷವನ್ನು ವಿಭಜಿಸುತ್ತಾರೆ. ವಿಶೇಷವು ನಿತ್ಯಾ ಅನಿತ್ಯಗಳೆಂದು ಎರಡು ವಿಧಗಳಾಗಿರುತ್ತದೆ. ಈಶ್ವರಾದಿ ನಿತ್ಯದ್ರವ್ಯಗಳಲ್ಲಿರುವುದು ನಿತ್ಯಗಳು, ಅನಿತ್ಯ ದ್ರವ್ಯಗಳಲ್ಲಿರುವುದು ಅನಿತ್ಯಗಳು.

ಈಶ್ವರಾದಿ ನಿತ್ಯದ್ರವ್ಯಾಣಾಂ ವಿನಾಶಾಭಾವೇನ ನಾಶಕಾಭಾವತ್ತದ್ಗತಾ ವಿಶೇಷಾಃ ನಿತ್ಯಾ ಇತಿ ಭಾವಃ । ಘಟಾದೀನಾಂ ವಿನಾಶೇನ ತದ್ಗತ ಧರ್ಮಾಣಾಂ ವಿನಾಶೇವಿಶೇಷೋಽಪಿ ನಶ್ಯತೀತ್ಯಪಿ ಧ್ಯೇಯಂ । ತದುಕ್ತಂ ಗೀತಾತಾತ್ಪರ್ಯೇ । ನಿತ್ಯ ಏವ ವಿಶೇಷಶ್ಚ ಕಶ್ಚಿದೇವಂ ದ್ವಿಧೈವಸಃ । ವಸ್ತುಸ್ವರೂಪಮಸ್ತ್ಯೇವೇತ್ಯೇವಮಾದಿ ಪ್ರಭೇದಿನ ಇತಿ । ನೈಯ್ಯಾಯಿಕಾಸ್ತು । ನಿತ್ಯದ್ರವ್ಯ ವೃತ್ತಯೋ ವಿಶೇಷಾಸ್ತ್ವನಂತಾ ಏವೇತ್ಯಾಹುಃ । ತನ್ನ ಘಟಾದ್ಯನಿತ್ಯ ದ್ರವ್ಯೇಷ್ವಪಿ ವಿಶೇಷಸ್ಯ ವ್ಯಕ್ತತ್ವಾತ್ । ಕಿಂಚ ಗಗನಾದಿ ನಿತ್ಯದ್ರವ್ಯೇಕುತೋ ವಿಶೇಷ ಅಂಗೀಕರ್ತವ್ಯಃ । ಪ್ರಯೋಜನಾಭಾವಾತ್। ನನು ಗಗನಂತಾವದ್ವಿಭು । ತಸ್ಯ ಸಕಲ ಮೂರ್ತದ್ರವ್ಯ ಸಂಯೋಗೋವಕ್ತವ್ಯಃ । ಸ ಚ ನೈಕದೇಶಾವಚ್ಛೇದೇನ ।

ಈಶ್ವರಾದಿಗಳಿಗೆ ನಾಶವಿಲ್ಲವಾದ್ದರಿಂದ, ಈಶ್ವರಾದಿ ನಿತ್ಯವಸ್ತುಗತ ವಿಶೇಷಗಳೂ ನಾಶವಿಲ್ಲವಾದ್ದರಿಂದ ನಿತ್ಯವಾದವು ಘಟಾದಿಗಳಿಗೆ ವಿನಾಶ ಉಂಟಾದ್ದರಿಂದ, ಅನಿತ್ಯ ಪದಾರ್ಥಗಳಲ್ಲಿರುವ ವಿಶೇಷಗಳು ಅನಿತ್ಯವಾದವುಗಳು. ಇದನ್ನು ಗೀತಾತಾತ್ಪರ್ಯದಲ್ಲಿ ಹೇಳಿದೆ. ವಿಶೇಷವಾದುದು ಎರಡು ವಿಧವಾಗಿ ವಸ್ತು ಸ್ವರೂಪಾನುಸಾರವಾಗಿ ನಿತ್ಯಾನಿತ್ಯ ಪ್ರಭೇದವುಳ್ಳದ್ದಾಗಿದೆ ಎಂದು. ನೈಯ್ಯಾಯಿಕರು (ತಾರ್ಕಿಕರು) ನಿತ್ಯ ದ್ರವ್ಯಗಳಲ್ಲಿರುವ ವಿಶೇಷಗಳು ಅನಂತವಾದವುಗಳು ಎನ್ನುತ್ತಾರೆ. ಘಟಾದಿ ದ್ರವ್ಯಗಳಲ್ಲೂ ವಿಶೇಷಗಳಿರುವುದರಿಂದ ಮತ್ತೂ ಗಗನಾದಿ ನಿತ್ಯದ್ರವ್ಯದಲ್ಲಿಯೇ ಏಕೆ ವಿಶೇಷವನ್ನು ಅಂಗೀಕರಿಸಬೇಕು. ಗಗನವಾದುದು ವಿಭುದ್ರವ್ಯವು ಅದಕ್ಕೆ ಸಕಲ ಮೂರ್ತದ್ರವ್ಯ(ಪೃಥವಿ, ಜಲ, ತೇಜಸ್ಸು) ಸಂಯೋಗ ಹೇಳಲೇಬೇಕು. ಅಸಂಯೋಗವಾದರೂ ಒಂದು ಸ್ಥಾನದಿಂದಲ್ಲ.

ತಸ್ಯ ಅಖಂಡತ್ವೇನೈಕದೇಶಾಭಾವಾತ್ । ನಾಪಿ ಕಾರ್ತ್ಸ್ನ್ಯೇನ ಸಂಯೋಗಃ । ಸಂಯೋಗಸ್ಯಸ್ವಾತ್ಯಂತಾಭಾವ ಸಮಾನಾಧಿಕರಣತ್ವರೂಪಾ ವ್ಯಾಪ್ಯವೃತ್ತಿತ್ವ ಭಂಗಪ್ರಸಂಗಾತ್ । ನ ಹಿ ಸರ್ವತ್ರ ಸಂಯೋಗೇ ತತ್ರ ಸಂಯೋಗಾತ್ಯಾಂತಾಭಾವಸ್ಯಾವಕಾಶೋಽಸ್ತಿ । ತದುಕ್ತಂ । ಯತ್ರ ಸಂಯೋಗೋನ ತತ್ರತದಭಾವಃ ಇತಿ । ಅತೋಗಗನಾದಿ ವಿಭುದ್ರವ್ಯಸ್ಯ ಘಟಾದಿನಾ ಸಂಯೋಗತದಭಾವೋಭಯ ನಿರ್ವಾಹಕೋವಿಶೇಷೋ ಅನನ್ಯಗತ್ಯಾಸ್ವೀಕರಣೀಯಃ ।

ಆಕಾಶಕ್ಕೆ ಅಖಂಡತೆ ಇರುವುದರಿಂದ ಏಕದೇಶವಿರುವುದಿಲ್ಲ. ಸರ್ವತ್ರ ಸಂಯೋಗವು ಶಕ್ಯವಿಲ್ಲಾ. ಸಂಯೋಗಕ್ಕೆ ತಾನಿಲ್ಲದ ಕಡೆ ಪ್ರದೇಶ ವಿಶೇಷದಿಂದ ಇರುವಿಕೆ ಎಂಬ ವ್ಯಾಪ್ಯ ವೃತ್ತಿತ್ವ (ವ್ಯಾಪಿಸಿರುವಿಕೆ) ಇಲ್ಲವಾಗಲಿ ಎಂಬ ಪ್ರಸಂಗ ಬರುವುದರಿಂದ ಎಲ್ಲಡೆಯಲ್ಲೂ ಸಂಯೋಗವೆಂದರೆ ಅದರ ಅತ್ಯಂತಾಭಾವಕ್ಕೆ ಅವಕಾಶವೇ ಇರುವುದಿಲ್ಲ ಎಂದು ಹೇಳಿದೆ ಎಲ್ಲಿ ಸಂಯೋಗವೋ ಅಲ್ಲಿ ಅದರ ಭಾವವಿಲ್ಲ ಎಂದು, ಅದುದರಿಂದಲೇ ಗಗನಾದಿ ವಿಭುದ್ರವ್ಯಗಳಲ್ಲಿ ಘಟಾದಿಗಳ ಸಂಯೋಗ ತದಭಾವ ನಿರ್ವಾಹಕವಾದ ವಿಶೇಷವನ್ನು ವಿಧಿ ಇಲ್ಲದೇ ಅಂಗೀಕರಿಸಲೇ ಬೇಕು.

ಕಿಂಚ ಗಗನಾದೌ ಸರ್ವವ್ಯಾಪ್ಯವೃತ್ತಿರಸ್ತಿ । ಸಾ ಚ ವ್ಯಾವರ್ತಕ ಧರ್ಮ ವ್ಯಾಪ್ಯಾ । ಘಟಪಟಾದೌ ತಥಾನುಭವಾತ್ । ಗಗನಾದಾವಿತರ ವ್ಯಾವರ್ತಕೋನ ಕೋಽಪಿ । ನಚಾಕಾಶತ್ವಂ ವ್ಯಾವರ್ತಕಂ । ತಸ್ಯ ಶಬ್ದಾಶ್ರಯತ್ವರೂಪತ್ವೇನ ಶಬ್ದನಾಶೇ ತನ್ನಾಶಾತ್ ವ್ಯಾವೃತ್ತ್ಯಭಾವ ಪ್ರಸಂಗಾತ್ । ನ ಚ ತದ್ಗತಂ ಪರಿಮಾಣಂ ವ್ಯಾವರ್ತಕಂ । ತಸ್ಯ ಕಾಲದಿ ಸಾಧಾರಣತ್ವೇನ ಅವ್ಯಾವರ್ತಕತ್ವಾತ್ । ಸಾಮಾನ್ಯ ಗುಣತ್ವಾಚ್ಚ । ಅತ ಏವ ನಸಂಯೋಗಾದಯೋಽಪಿವ್ಯಾವರ್ತಕಾಃ । ಪರಮಾಣುಷು ಯದ್ಯಪಿ ಪರಮಾಣುತ್ವ ಜಾತಿಃ ಇತರ ವ್ಯಾವೃತ್ತಿ ಹೇತುರಸ್ತಿ ।

ಗಗನಾದಿಗಳಿಗೆ ಸರ್ವತ್ರ ವ್ಯಾಪ್ತಿ ಇದೆ. ಅದು ವ್ಯಾವರ್ತಕ ಧರ್ಮದಿಂದ ವ್ಯಾಪ್ತವಾದುದು. ಘಟಪಟಾದಿಗಳಲ್ಲಿ ಮತ್ತು ಹಾಗೆ ಅನುಭವವಿರುವುದರಿಂದ ಆಕಾಶದಲ್ಲಿ ಇತರ ವ್ಯಾವರ್ತಕವಾದುದು ಬೇರೇ ಯಾವದೂ ಇರುವುದಿಲ್ಲ. ಆಕಾಶತ್ವವು ವ್ಯಾವರ್ತಕವಲ್ಲ. ಅದು ಶಬ್ದಾಶ್ರಯುವಾಗಿರುವುದರಿಂದ ಶಬ್ದನಾಶವಾದರೆ ಶಬ್ದಾಶ್ರಯ ನಾಶವಾಗಿರುವುದರಿಂದ ವ್ಯಾವೃತ್ತಿಯು ಅಪ್ರಸಂಗವಾಗುವುದರಿಂದ, ಆಕಾಶದಲ್ಲಿರುವ ಪರಿಮಾಣ(ಮಿತಿ)ವು ವ್ಯಾವರ್ತಕವಾಗುವುದಿಲ್ಲ. ಅಸಾಧಾರಣ ಧರ್ಮವಾದ್ದರಿಂದ ವ್ಯಾವರ್ತಕವಾಗುವುದಿಲ್ಲ. ಸಾಮಾನ್ಯ ಗುಣವು ಆಗಿರುವುದರಿಂದಲೇ ಸಂಯೋಗಾದಿಗಳೂ ವ್ಯಾವರ್ತಕಗಳಾಗುವುದಿಲ್ಲ. ಮತ್ತು ಪರಿಮಾಣುಗಳಲ್ಲಿ ಪರಿಮಾಣುತ್ವವಿದೆ. ಅದು ಜಾತಿ ಆದ್ದರಿಂದ ಇತರ ವ್ಯಾವೃತ್ತಿ ಕಾರಣವಾಗಿದೆ.

**ತಥಾಪಿ ಪರಮಾಣ್ವಂತರಾದಿ ಸಂಯೋಗೇ ತದಭಾವ ಸಿದ್ಧ್ಯರ್ಥಂ ವಿಶೇಷಸ್ಯ ಅವಸ್ಯಕತ್ವಾತ್ । ಅನಿತ್ಯ ದ್ರವ್ಯೇಷ್ವಪಿನ ವಿಶೇಷ ಸ್ವೀಕಾರ್ಯಃ ತೇಷಾಂ ಅವಯುವವತ್ವೇನ ಪ್ರದೇಶ ಭೇದೇನ ಸಂಯೋಗ ತದಭಾವಯೋಃ ಉಪಪತ್ತೇಃ । ದ್ರವ್ಯ ವಿಶೇಷ ಗುಣಾದಿಭ್ಯಃ ಇತರ ವ್ಯಾವೃತ್ತಿ ಸಂಭವಾಚ್ಚ । ದಂಡಿನಿ ದ್ರವ್ಯೇಣ ದಂಡಾದಿನಾಃದಂಡಿ ವ್ಯಾವೃತ್ತಿಃ । ಗಂಧಾದಿ ವಿಶೇಷ ಗುಣೇನ ಪೃಥಿವೀತ್ವಾದಿ ಜಾತ್ಯಾಚ ಪೃಥಿವ್ಯಾದೀನಾಂ ಇತರ ವ್ಯಾವೃತ್ತಿಃ । ಪಾಚಕಾದೀನಾಂತು ಪಾಚಕಾದಿ ಕ್ರಿಯಯಾ ಅಪಾಚಕಾದಿ ವ್ಯಾವೃತ್ತಿಃ । ಅತ ಏವ ದ್ರವ್ಯಗುಣಾದೀನಾಂ ವ್ಯಾವರ್ತಕಾನಾಮಭಾವೇಂತೇ ವಿಶೇಷಃ ಸ್ವೀಕೃತಃ ಇತಿತಸ್ಯಾಂ ವಿಶೇಷಃ ಇತಿ ಸಂಪ್ರದಾಯ ಇತಿ ಚೇದತ್ರೋಚ್ಯತೇ।**

ಪರಮಾಣುವೇ ಹೊರತಾದ ಮೊದಲಾದವುಗಳ ಸಂಯೋಗದಲ್ಲಿ ತದಭಾವ ಸಿದ್ಧ್ಯರ್ಥವಾಗಿ ವಿಶೇಷಾದಿ ಅವಶ್ಯಕತೆ ಇದ್ದೇ ಇರುತ್ತದೆ. ಅನಿತ್ಯ ದ್ರವ್ಯಗಳಲ್ಲಿಯೂ ವಿಶೇಷಾಂಗೀಕಾರ ಬೇಡ ಅನ್ನಬಹುದು ಹೇಗೆಂದರೆ ಅವುಗಳಿಗೆ ಅವಯುವಗಳಿರುವುದ ರಿಂದ ಅವುಗಳ ಪ್ರದೇಶ ಭೇದದಿಂದ ಸಂಯೋಗ ತದಭಾವಗಳು ಯುಕ್ತವಾಗುತ್ತದೆ. ದ್ರವ್ಯ ವಿಶೇಷ ಗುಣಕ್ರಿಯಾದಿಗಳಿಂದ ಇತರ ಭೇದ ಸಂಭವಿಸುತ್ತಿದೆ. ದಂಡಿಯು ದಂಡರಹಿತನಿಂದ ಭೇದವು, ಗಂಧಾದಿ ವಿಶೇಷ ಗುಣಗಳಿಂದಲೂ ಪೃಥಿವೀತ್ವಾದಿ ಜಾತಿ ಗಳಿಂದ ಪೃಥಿವ್ಯಾದಿಗಳಿಗೆ ಬೇರೆ ಪದಾರ್ಥಗಳಿಂದ ಭೇದ ಜ್ಞಾನವು, ಅಡಿಗೆಯವನಿಗೆ ಅಡಿಗೆ ಕೆಲಸವಿಲ್ಲದ ಅಪಾಚಕನಿಂದ ಭೇದವು. ಆದುದರಿಂದಲೇ ದ್ರವ್ಯದ ಗುಣ ಕ್ರಿಯಾದಿಗಳಿಗೆ ಭೇದ ಧರ್ಮಗಳು ಇಲ್ಲವಾದರೆ ಕೊನೆಗೆ ವಿಶೇಷಾಂಗೀಕಾರವು ಎಂದು ಸಾಂಪ್ರದಾಯವು ಎಂದರೆ ಹೇಳುತ್ತಾರೆ.

**ಗಗನಪರಮಾಣ್ವಾದೀನಾಂ ಅಪಿ ಸಾವಯುವತ್ವೇನ ಸಂಯೋಗ ತದ ಭಾವಯೋಃ ಸಂಭವಾತ್ । ನಚ ಸಾವಯುವತ್ವೇಘಟಾದಿವತ್ ಅನಿತ್ಯ ತ್ವಾಪತ್ತಿಃ । ಅನಾರಂಭಕಾವಯುವಾನಾಂ ಸತ್ವಾತ್ । ಅನ್ಯಥಾ ಇಹ ಪಕ್ಷಿನೇಹಪಕ್ಷೀತ್ಯಾದಿ ಪ್ರತ್ಯಯೋನಸ್ಯಾತ್ । ನಚ ಇಹೇತಿ ಪ್ರತ್ಯಯಃ ಆಲೋಕ ವಿಷಯಕೋನತ್ವಾಕಾಶಾವಯುವ ವಿಷಯಕ ಇತಿ ವಾಚ್ಯಂ । ಇಹಾಲೋಕ ಇಹಾಲೋಕಾಭಾವಃ ಇತಿ ಪ್ರತ್ಯಯೋರಘಟನಾ ಪ್ರಸಂಗಾತ್ । ಆಲೋಕಾಭಾವ ದಶಾಯಾಮಪಿ ಇಹೇತಿ ಪ್ರತ್ಯಯ ಸತ್ವಾಚ್ಚ । ಅಂಧಸ್ಯಾಪಿ ಇಹೇತಿ ಪ್ರತ್ಯಯ ಸಂಭವಾಚ್ಚ । ತಸ್ಮಾದಾ ಕಾಶಾದೀನಾಂ ಸಾವಯುವತ್ವಂ ಸ್ವೀಕರ್ತವ್ಯಂ ।**

ಗಗನ ಪರಮಾಣ್ವಾದಿಗಳಿಗೂ ಅವಯವಗಳಿರುವುದರಿಂದ ಸಂಯೋಗ ತದಭಾವಗಳು ಕೂಡುತ್ತದೆ. ಆಕಾಶ ಪರಮಾಣುಗಳಿಗೆ ಅವಯುವವಿದ್ದರೆ ಘಟಾದಿ ಗಳಂತೆ ಅನಿತ್ಯತೆ ಬರಬೇಕಲ್ಲವೇ ? ಎಂದರೆ ಇಲ್ಲ. ಆ ಅವಯುವಗಳಿಗೆ ಅನಾರಂಭಕತೆ

ಇರುವುದರಿಂದ ಅನಿತ್ಯತೆ ಪ್ರಸಂಗವಿಲ್ಲ. ಆಕಾಶಕ್ಕೆ ಅವಯುವವಿಲ್ಲವಾದರೆ ಇಲ್ಲಿ ಪಕ್ಷಿ ಇದೆ, ಇಲ್ಲಿ ಪಕ್ಷಿ ಇಲ್ಲ ಎಂಬ ವ್ಯವಹಾರಬಾರದಿರಲಿ, ಅಲ್ಲಿ ಇಲ್ಲಿ ಎಂಬುದು ಆಕಾಶ ವೆನ್ನಬಾರದು ಬೆಳಕನ್ನು ಹೇಳುತ್ತದೆ ಎಂಬುದು ಸರಿಯಲ್ಲ, ಏಕೆಂದರೆ ಇಲ್ಲಿ ಬೆಳಕು ಅಲ್ಲಿ ಬೆಳಕಿಲ್ಲ ಎಂಬ ವ್ಯವಹಾರ ಸ್ಥಳದಲ್ಲಾದರೂ ಆಕಾಶದ ಅವಯುವ ವನ್ನು ಒಪ್ಪಲೇ ಬೇಕಾಗುತ್ತದೆ. ಮತ್ತೂ ಕತ್ತಲೆಯಲ್ಲಿಯೂ ಇಲ್ಲಿ ಅಲ್ಲಿ ಎಂಬ ವ್ಯವಹಾರವು ಬರುತ್ತದೆ. ಮತ್ತೂ ಕುರುಡಗೂ ಇಲ್ಲಿ ಎಂಬ ಜ್ಞಾನ ಬರುವುದರಿಂದ ಆಕಾಶಕ್ಕೆ ಅವಯುವಗಳನ್ನು ಒಪ್ಪಬೇಕು.

ಪ್ರದೇಶ ಭೇದೇನ ಸಂಯೋಗ ತದಭಾವಾಂಗೀಕರ್ತವ್ಯಂ। ತದುಕ್ತಂ ಅನುವ್ಯಾಖ್ಯಾನೇ ನಚಾನಾವಯುವಂ ವಸ್ತು ಕ್ವಚಿತ್ ಸ್ಯಾನ್ಮಾನಗೋಚರಂ ಇತಿ। ಛಾಂದೋಗ್ಯ ಭಾಷ್ಯೇಪಿ। ಆಕಾಶಾಅಪ್ಯತಸ್ತ್ವೇತೇಹ್ಯನಂತಾ ಅಪ್ಯಣಾದಿವದಿತಿ। ನಚ ಪರಮಾಣೋ ಅವಯುವವತ್ವೇ ಪರಮಾಣುತ್ವ ಭಂಗಪ್ರಸಂಗ ಇತಿ ವಾಚ್ಯಂ। ಅನ್ಯಾಪೇಕ್ಷಯಾ ಪರಮಾಣುತ್ವೇಪಿ ಸ್ವಾವಯುವವಾಪೇಕ್ಷಯಾ ಮಹತ್ವೋಪಪತ್ತೇಃ। ತದುಕ್ತಮನು ವ್ಯಾಖ್ಯಾನೇ। ಅಣುತ್ವಂಚ ಮಹತ್ವಂಚ ಯತೋವಸ್ತ್ವವ್ಯಪೇಕ್ಷಯಾ। ತಾರತಮ್ಯ ಸ್ಥಿತಾಯಸ್ಮಾತ್ಪದಾರ್ಥಾಸರ್ವಏವಚೇತಿ।

ಪ್ರದೇಶ ಭೇದದಿಂದ ಸಂಯೋಗ ತದಭಾವಗಳನ್ನು ಅಂಗೀಕರಸಬೇಕು. ಇದನ್ನೇ ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ಅವಯುವಗಳಲ್ಲಿರುವ ವಸ್ತುವೇ ಪ್ರಮಾಣ ಪ್ರಮಿತವಾಗಿ ಜಗತ್ತಿನಲ್ಲಿ ಇಲ್ಲವೆಂದು ಛಾಂದೋಗ್ಯಭಾಷ್ಯದಲ್ಲಿಯೂ, ಪೃಥವಿ, ಜಲ ಪರಮಾಣುಗಳಂತೇ ಆಕಾಶ ಪರಿಮಾಣಗಳು ಅನಂತಗಳೇ ಆಗಿರುತ್ತವೆ ಎಂದು ಪರಮಾಣುಗಳಿಗೆ ಅವಯುವಗಳನ್ನು ಒಪ್ಪಿದರೆ ಪರಮಾಣ ಶಬ್ದ ವಾಚ್ಯತೆಯೇ ಇಲ್ಲ ವಾಗಬೇಕಾಗುತ್ತದೆ ಎಂದರೆ ಹಾಗಲ್ಲ, ಬೇರೆ ವಸ್ತುಗಳಕ್ಕಿಂತಲೂ ಪರಮಾಣವೇ ಸಾವಯವ ದೃಷ್ಟಿಯಿಂದ ಮಹತ್ಪರಿಮಾಣವಾದುದೇ ಅನುವ್ಯಾಖ್ಯಾನದಲ್ಲಿ ಇದನ್ನೇ ಹೇಳಿರುತ್ತಾರೆ. ಅಣುತ್ವದ ಮಹತ್ವದ ಕೇವಲ ವಸ್ತು ದೃಷ್ಟಿಯಿಂದಲೇ ಎಲ್ಲೆಡೆಯೂ ತಾರತಮ್ಯವುಳ್ಳ ಪದಾರ್ಥಗಳೇ ಆಗಿರುವುದು.

ಕಿಂಚ ಪರಮಾಣೋರವಯುವಾನಂಗೀಕಾರೇ ತಸ್ಯದಶದಿಕ್ಷ್ವಭಿ ಸಂಭಂದೋ ನಸ್ಯಾತ್। ಅತೋ ಅವಯುವೊಂಗೀಕಾರ್ಯಃ। ತದುಕ್ತ ಮನುವ್ಯಾಖ್ಯಾನೇ। ಅತಃ ಸರ್ವಪದಾರ್ಥಾನಾಂ ಭಾಗಾಸ್ಸಂತ್ಯೇವ ಸರ್ವದಾ। ಸರ್ವದಿಷ್ವಭಿಸಂಬಂಧಾದವಿಭಾಗಃ ಪರಮಾಣುತಾ ಇತಿ। ಅತೋನ ಸಂಯೋಗತದಭಾವಾನ್ಯಥಾನುಪಪತ್ಯಾ ವಿಶೇಷ ಸಿದ್ಧಿಃ। ನಾಪಿ ವ್ಯಾವೃತ್ತ್ಯನ್ಯಥಾನುಪಪತ್ಯಾ ವಿಶೇಷಸಿದ್ಧಿಃ। ಗಗನೇ ಗಗನತ್ವೇನೈವ

**ಇತರ ವ್ಯಾವೃತ್ತ್ಯುಪಪತ್ತೇಃ । ನ ಚ ತಸ್ಯೋಪಾಧಿತ್ವೇನ ಶಬ್ದಾಶ್ರಯತ್ವಾದಿ ರೂಪತ್ವಾದ ನಿತ್ಯತ್ವಂ ಇತಿ ವಾಚ್ಯಂ ।**

ಮತ್ತೂ ಪರಮಾಣುವಿಗೆ ಅವಯವಗಳನ್ನು ಒಪ್ಪದ ಪಕ್ಷದಲ್ಲಿ ಹತ್ತು ದಿಕ್ಕುಗಳ ಸಂಬಂಧವೇ ಇಲ್ಲವಾಗಬೇಕಾದೀತು. ಆದುದರಿಂದಲೇ ಅವಯವಗಳನ್ನು ಒಪ್ಪಬೇಕು ಇದನ್ನೇ ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ದಶದಿಕ್ ಸಂಬಂಧ ಸರ್ವ ಪದಾರ್ಥ ಗಳಿಗಿರುವುದರಿಂದಲೇ ಎಲ್ಲಾ ಪದಾರ್ಥಗಳೂ ಸಾವಯವಗಳೇ. ಅವಯವ ವಿಭಾಗ ಉಳ್ಳವುಗಳೇ ಹತ್ತು ದಿಕ್ಕಿನ ಸಂಬಂಧವಿದ್ದರೂ ವಿಭಾಗಿಸಲು ಸೂಕ್ಷ್ಮತೆಯಿಂದ ಅಶಕ್ಯವಾದುದರಿಂದಲೇ ಅದಕ್ಕೆ ಪರಮಾಣುವೆಂದು ಹೆಸರಾಗಿದೆ. ಆದ್ದರಿಂದಲೇ ಸಂಯೋಗತದಭಾವಾನುಪಪತ್ತಿಯಿಂದ ವಿಶೇಷಾಂಗೀಕಾರವೆಂಬುದು ಸರಿಯಲ್ಲ. ಇತರ ಭೇದ ಅನ್ಯಥಾನುಪಪತ್ತಿಯಿಂದಲೂ ವಿಶೇಷಾಂಗೀಕಾರವಲ್ಲವು. ಆಕಾಶದಲ್ಲಿ ಆಕಾಶತ್ವದಿಂದಲೇ ಇತರ ಭೇದಕೂಡುತ್ತದೆ, ಆಕಾಶತ್ವಕ್ಕೆ ಶಬ್ದಾಶ್ರಯತೆ ರೂಪ ಉಪಾಧಿಯಾಗಿರುವುದರಿಂದ ಅನಿತ್ಯತೆ ಇಲ್ಲ.

**ತಸ್ಯಜಾತಿತ್ವೇನ ಉಪಾಧಿತ್ವಾಭಾವತ್ । ನಚ ವ್ಯಕ್ತ್ಯಭೇದಾನ್ನ ಗಗನತ್ವಂ ಜಾತಿರಿತಿ ವಾಚ್ಯಂ । ಅನನುಗತ ಧರ್ಮಸ್ಯೈವ ಜಾತಿತ್ವೇನ ವ್ಯಕ್ತಿ ಬಾಹುಲ್ಯಸ್ಯ ಅಪ್ರಯೋಜಕತ್ವಾತ್ । ಅಸ್ತುವಾ ಅಖಂಡೋ-ಪಾಧಿತ್ವಂ ಅಭಾವತ್ವವನ್ನಿತ್ಯತ್ವಂ ಚ । ಜಾತಿರೇವ ವ್ಯಾವರ್ತಿಕೇತಿವ್ಯಾಪ್ತೇರ ಭಾವತ್ವೇ ಭಗ್ನತ್ವಾತ್ । ತ್ವಯೈವ ದ್ರವ್ಯಗುಣಾದೀನಾಂ ವ್ಯಾವರ್ತಕ ತ್ವೋಕ್ತೇಶ್ಚ । ಪರಮಾಣೌತು ನವ್ಯಾವೃತ್ತ್ಯನ್ಯಥಾನುಪಪತ್ಯಾ ವಿಶೇಷ ಸಿದ್ಧರಿತಿತ್ವಯೈವೋಕ್ತಂ ಇತಿ ನತಾರ್ಕಿಕಮತೇ ಅಂತ್ಯ ವಿಶೇಷ ಸಿದ್ಧಿರಿತಿ । ವಿಶೇಷಪ್ರಕರಣಂ ।**

ಗಗನತ್ವಕ್ಕೆ ಜಾತಿತ್ವವೇ ಇರುವುದರಿಂದ ಉಪಾಧಿತ್ವ ಇಲ್ಲ. ಏಕವ್ಯಕ್ತಿ ಗಗನ ವಾದುದರಿಂದ ಆಕಾಶತ್ವಕ್ಕೆ ಜಾತಿ ಎಂಬುದಿಲ್ಲ ಎನ್ನಬಾರದು. ಅನನುಗತ ಧರ್ಮಕ್ಕೆ (ಏಕ ವ್ಯಕ್ತಿಗತಕ್ಕೆ) ಜಾತಿಯು ಆದ್ದರಿಂದ ವ್ಯಕ್ತಿ ಬಾಹುಲ್ಯತೆ ಅಪ್ರಯೋಜಕವೇ ಆಗಿರುತ್ತದೆ. ಗಗನತ್ವಕ್ಕೆ ಅಖಂಡೋಪಾಧಿತೆಯಾಗಲಿ, ಅಭಾವತ್ವದಂತೆ ನಿತ್ಯತ್ವವೂ ಇರಲಿ ಮತ್ತು ಜಾತಿಯು ಇತರ ಭೇದ ಜನಕವು ಎಂಬ ವ್ಯಾಪ್ತಿಯು ಅಭಾವತ್ವದಲ್ಲಿ ಭಗ್ನವೂ ಆಗಿರುತ್ತದೆ ನಿನ್ನಿಂದಲೇ (ತಾರ್ಕಿಕ) ದ್ರವ್ಯ ಗುಣಾದಿಗಳಿಗೆ ವ್ಯಾವರ್ತಕತೆ ಒಪ್ಪಿರುತ್ತದೆ. ಪರಮಾಣುವಿನಲ್ಲಿ ಇತರ ಭೇದ ಪ್ರತಿಪತ್ತ್ಯನ್ಯಥಾನುಪಪತ್ಯಾ ವಿಶೇಷ ಸಿದ್ಧಿ ಇಲ್ಲವು ಎಂದು ನಿನ್ನಿಂದಲೇ ಹೇಳಲ್ಪಟ್ಟಿದೆ. ಆದುದರಿಂದ ತಾರ್ಕಿಕ ಮತದಲ್ಲಿ ಅಂತ್ಯ ವಿಶೇಷಸಿದ್ಧಿಯು ಇಲ್ಲವಾಯಿತು.

ಹೀಗೆ ವಿಶೇಷ ಪ್ರಕರಣ ನಿರೂಪಣದಲ್ಲಿ ಕನ್ನಡಾನುವಾದವು.

# ೭. ಸಮವಾಯ ನಿಷೇಧ ಪ್ರಕರಣ

ನನು ಸಮವಾಯೋನಾಮ ಪದಾರ್ಥಾಂತರಮಸ್ತಿ । ತತ್ಕಥಂ ದ್ರವ್ಯೈವೇತಿ ಪದಾರ್ಥ ವಿಭಾಗಃ ಇತ್ಯತ ಆಹ ।

ಪ.ಸಂ.—ಸಮವಾಯಸ್ತು ಸ್ವರೂಪತ ಏವನಾಸ್ತಿ ।

ತು ಶಬ್ದೋ ಅಪ್ರಮಾಣಿಕತ್ವ ಪ್ರಮಾಣವಿರುದ್ಧತ್ವರೂಪ ವಿಶೇಷ ದ್ಯೋತಕಃ । ನನು ಕಥಂ ಸಮವಾಯೇ ಪ್ರಮಾಣಾಭಾವಃ । ಇಹತಂತುಷು ಪಟಸಮವಾಯಃ ಇತಿ ಪ್ರತ್ಯಕ್ಷಸ್ಯೈವ ಪ್ರಮಾಣತ್ವಾತ್ ಇತಿ ಚೇನ್ನ । ತಾದೃಶಪ್ರತೀತೇರೇವಾಸಿದ್ಧೇಃ ಅಥೇಹತಂತುಷು ಪಟಃ ಇತಿ ಪ್ರತ್ಯಯಃ ಸಂಬಂಧ ಪೂರ್ವಕಃ ಇಹ ಪ್ರತ್ಯಯತ್ವಾತ್ । ಇಹ ಕುಂಡೇ ಬದರಾಣೀತಿ ಪ್ರತ್ಯಯವತ್ ।

ಸಮವಾಯವೆಂಬ ಮತ್ತೊಂದು ಪದಾರ್ಥವಿರಲು ಹತ್ತೇಪದಾರ್ಥಗಳೆಂಬ ವಿಭಾಗವು ಹೇಗೆ ? ಎಂದರೆ ಹೇಳುತ್ತಾರೆ (ಮನುಷ್ಯನ ಕೊಂಬಿನಂತೆ) ಸಮವಾಯ ಎಂಬುದು ಸ್ವರೂಪದಿಂದಲೇ ಅಲ್ಲ. ತುಕಾರದಿಂದ ಸಮವಾಯ ವಿಷಯದಲ್ಲಿ ಅಪ್ರಾಮಾಣಿಕತೆ ಪ್ರಮಾಣ ವಿರುದ್ಧತೆಯನ್ನು ತಿಳಿಸುತ್ತಾರೆ. (ಪೂರ್ವಪಕ್ಷ) ಸಮವಾಯ ವಿಷಯದಲ್ಲಿ ಪ್ರಮಾಣವಿಲ್ಲವೆಂದು ಹೇಗೆ ಹೇಳುತ್ತೀರಿ. ಈ ಎಳೆಗಳಲ್ಲಿ ಬಟ್ಟೆಯು ಎಂದು ಪ್ರತ್ಯಕ್ಷವೇ ಇರುವುದರಿಂದ ಎಂದರೆ ತಪ್ಪು, ಹಾಗೆ ಪ್ರತೀತಿ (ವ್ಯವಹಾರ)ಯೇ ಇರುವುದಿಲ್ಲಾ, ಅನುಮಾನವನ್ನು ಹೇಳುತ್ತೇವೆ. ಈ ಎಳೆಗಳಲ್ಲಿ ಬಟ್ಟೆಯೆಂಬ ಜ್ಞಾನವು ಸಂಬಂಧ ಪೂರ್ವಕವಾಗಿದೆ ಇಲ್ಲಿ ಎನ್ನುವುದರಿಂದ ಪಾತ್ರೆಯಲ್ಲಿ ಹಣ್ಣುಗಳು ಎಂಬಂತೇ ಮತ್ತೂ,

ಶುಕ್ಲಃ ಪಟಃ ಇತಿ ವಿಶಿಷ್ಟಜ್ಞಾನಂ ವಿಶೇಷಣ ವಿಶೇಷ್ಯ ಸಂಬಂಧ ವಿಷಯಕಂ ವಿಶಿಷ್ಟಜ್ಞಾನತ್ವಾತ್ ದಂಡೀ ದೇವದತ್ತ ಇತಿ ಜ್ಞಾನವದಿತ್ಯಾಭ್ಯಾಂ ಅನುಮಾನಾಭ್ಯಾಂ ಸಂಬಂಧಃ ಸಿಧ್ಯನ್ ಸಂಯೋಗಬಾಧೇ ಸಮವಾಯಮಾದಾಯೈವ ಸಿಧ್ಯತಿ । ನಹಿ ತಂತುಪಟಯೋಃ ಶುಕ್ಲಪಟಯೋಃ ಸಂಯೋಗೋ ವಕ್ತುಂ ಶಕ್ಯಃ । ಕುಂಡಬದರವದ್ವಿವಿಕ್ತತಯಾ ಅನುಪಲಂಭಾತ್ ಇತಿ ಚೇನ್ನ ।

ಮತ್ತೊಂದು ಸಮಾನವು ಬಿಳಿ ಬಟ್ಟೆಯೆಂಬ ವಿಶಿಷ್ಟ ಜ್ಞಾನವು ವಿಶೇಷಣ ಸಂಬಂಧ ವಿಷಯಕವು ವಿಶಿಷ್ಟ ಜ್ಞಾನವಾದ್ದರಿಂದ, ದಂಡವುಳ್ಳ ದೇವದತ್ತನು ಎಂಬಂತೆ

ಈ ಎರಡೂ ಅನುಮಾನಗಳಿಂದ ಒಂದು ಸಂಬಂಧವು ಸಿದ್ಧವಾಗುತ್ತದೆ. ಸಂಯೋಗವಂತೂ ಅಲ್ಲ (ಗುಣ ಗುಣಿಗಳಲ್ಲಿ ಪ್ರತ್ಯೇಕವಿಲ್ಲದಿರುವುದರಿಂದ) ಆಸಂಬಂಧವೇ ಸಮವಾಯವು, ಪಾತ್ರೆ ಬೋರೆ ಹಣ್ಣು ಪ್ರತ್ಯೇಕವಿಲ್ಲದಿರುವುದರಿಂದ ಸಂಯೋಗವಾಗದ ಸಮವಾಯ ಸಂಬಂಧವು ಸಿದ್ಧಿಸುತ್ತದೆ ಎಂದರೆ ತಪ್ಪು.

ಇಹ ತಂತುಷು ಪಟಸಮವಾಯಃ ಇತಿ ಪ್ರತ್ಯಯಸ್ಯ ತ್ವಯಾ ಸ್ವೀಕೃತತ್ವೇನ ತಂತು ಪಟಸಮವಾಯಯೋಃ ಅಪಿ ಸಮವಾಯಾಪತ್ತೇಃ। ಇಹ ಭೂತಲೇಘಟಾಭಾವಃ ಇತಿ ಪ್ರತ್ಯಯಸಂಭವೇನ ಭೂತಳ ಘಟಾಭಾವಯೋರಪಿ ಸಮವಾಯಾಪತ್ತೇಶ್ಚ । ನಚ ಅಭಾವ ಭೂತಲಯೋಃ ವಿಶೇಷಣವಿಶೇಷ್ಯಭಾವ ಸಂಬಂಧೇನ ವಿಶಿಷ್ಟ ಪ್ರತ್ಯಯ ನಿರ್ವಾಹಃ ಇತಿ ವಾಚ್ಯಂ । ತಸ್ಯ ತ್ವಯಾ ಸಂಬಂಧತ್ವೇನ ಅನಂಗೀಕಾರಾತ್ । ಅಂಗೀಕಾರೇವಾತಂತು ಪಟಯೋಃ ಶುಕ್ಲ ಪಟಯೋಃ ಅಪಿ ವಿಶೇಷಣ ವಿಶೇಷ್ಯಭಾವ ಸಂಬಂಧ ಸಂಭವೇನ ಸಮವಾಯ ಅಸಿದ್ಧಿ ಪ್ರಸಂಗಾತ್ ।

ನೀನು ಈ ಎಳೆಗಳಲ್ಲಿ ಬಟ್ಟೆಯೆಂಬ ವ್ಯವಹಾರವನ್ನು ಒಪ್ಪುವುದಿಲ್ಲ. ಈ ಎಳೆಗಳಲ್ಲಿ ಬಟ್ಟೆ ಸಮವಾಯವೆಂಬ ವ್ಯವಹಾರವನ್ನೇ ಒಪ್ಪುತ್ತೀಯೆ ಆದುದರಿಂದ ಪ್ರಶ್ನಾಪ್ರಸಿದ್ಧಿಯೂ, ಆಸಮವಾಯಕ್ಕೆ ಮತ್ತೊಂದು ಸಮವಾಯ ಒಪ್ಪಬೇಕಾಗುತ್ತದೆ. ಹಾಗೆ ವ್ಯವಹಾರ ಒಪ್ಪುವುದಾದರೆ ಭೂತಳೆ ಘಟಾಭಾವಃ ಎಂಬಲ್ಲಿ ಭೂತಳಕ್ಕೂ ಘಟಾಭಾವಕ್ಕೂ ಸಮವಾಯವೇ ಒಪ್ಪ ಬೇಕಾಗುತ್ತದೆ (ಶುಕ್ಲ ಪಟಗಳಂತೇ ಅವಿಯುಕ್ತವಾಗಿ ತೋರುವುದರಿಂದ) ಅಲ್ಲಿ ಸಮವಾಯವಲ್ಲ ವಿಶೇಷ್ಯ ವಿಶೇಷಣ ಭಾವ ಸಂಬಂಧವೆನ್ನುತ್ತೀನೆ ಎಂದರೆ, ಈ ಸಂಬಂಧವನ್ನು ನೀನೊಪ್ಪಿಯೇ ಇರುವುದಿಲ್ಲ, ಒಪ್ಪುವ ಪಕ್ಷದಲ್ಲಿ ತಂತು ಪಟಗಳಲ್ಲೂ ಶುಕ್ಲಪಟಗಳಲ್ಲೂ ಆಸಂಬಂಧವೇ ಸಾಕಾಗಿರಲು ಸಮವಾಯದ ಅಗತ್ಯವೇ ಇಲ್ಲದೇ ಸಮವಾಯ ಅಸಿದ್ಧಿ ಪ್ರಸಂಗವು ಬಂದೇ ಬರುತ್ತದೆ.

ನಚ ಸಮವಾಯೇ ಸಮವಾಯಾಂಗೀಕಾರೇ ತತ್ರಾಪಿ ಸಮವಾಯಾಂತರಾಪತ್ಯ ಅನವಸ್ಥಾ ಪ್ರಸಂಗ ಬಾಧಕ ಇತಿ ವಾಚ್ಯಂ । ತರ್ಹಿ ಸಂಬಂಧಂ ವಿನಾಪಿ ಸಮವಾಯ ವಿಶಿಷ್ಟ ಪ್ರತ್ಯಯವತ್ತಂತು ಪಟಯೋರಪಿ ಸಂಬಂಧಂ ವಿನಾ ವಿಶಿಷ್ಟ ಪ್ರತ್ಯಯೋಪಪತ್ತೇಃ । ಅಭಾವೇ ಸಮವಾಯಾಂಗೀಕಾರೇ ಬಾಧಕಾಭಾವಾಚ್ಚ । ನಚಾಭಾವೇ ಸಮವಾಯಾಂಗೀಕಾರೇ ಘಟಧ್ವಂಸಸ್ಯಾಪಿ ಕಪಾಲೇನ ಸಮವಾಯಸ್ಯ ವಕ್ತವ್ಯತ್ವೇನ ಸಮವಾಯಿನಾಶೇ ಸ್ವಸಮವೇತ ಕಾರ್ಯನಾಶಸ್ಯ ಘಟನಾಶ ಜನ್ಯತದ್ರೂಪನಾಶಸ್ಥಲೇ

**ದೃಷ್ಟತ್ವೇನ ಕಪಾಲಿನಾಶೇ ಘಟಧ್ವಂಸಸ್ಯಾಪಿ ನಾಶೇನ ಘಟೋನ್ಮಜ್ಜನ ಪ್ರಸಂಗೋ ಬಾಧಕ ಇತಿ ವಾಚ್ಯಂ ।**

ಒಂದು ಸಮವಾಯ ಸಂಬಂಧಕ್ಕೆ ಮತ್ತೊಂದು ಅದಕ್ಕೆ ಮತ್ತೊಂದು ಹೀಗೆ ಅನವಸ್ಥಾ ಬರುವುದಿಲ್ಲವೇ ಅಂದರೆ ಇಲ್ಲ. ಸಂಬಂಧವಿಲ್ಲದೇ ಸಮವಾಯ ವಿಶಿಷ್ಟ ಪ್ರತ್ಯಯದಂತೇ ತಂತು ಪಟಗಳಿಗೂ ಸಂಬಂಧವಿಲ್ಲದೇ ವಿಶಿಷ್ಟ ಪ್ರತ್ಯಯದಿಂದ ಉಪಪನ್ನವಾಗುತ್ತದೆ. ಅಭಾವದಲ್ಲಿ ಸಮವಾಯವನ್ನು ಅಂಗೀಕರಿಸಿದರೂ ಬಾಧಕವಿಲ್ಲ. ಅಭಾವದಲ್ಲಿ ಸಮವಾಯವನ್ನು ಅಂಗೀಕರಿಸಿದರೆ ಘಟಧ್ವಂಸಕ್ಕೂ ಕಪಾಲಿದಲ್ಲಿ ಸಮವಾಯವನ್ನು ಒಪ್ಪಬೇಕಾಗಿ ಬರುತ್ತದೆ. ಸಮವಾಯ ನಾಶವಾದರೆ ತನ್ನಿಂದ ಸಂಯುಕ್ತ ಕಾರ್ಯನಾಶಕ್ಕೆ ಘಟನಾಶ ಜನ್ಯತ ರೂಪ ನಾಶ ಸ್ಥಳದಲ್ಲಿ ಕಂಡಿರುವುದರಿಂದ ಕಪಾಲಿ ನಾಶವಾದರೆ ಘಟ ಧ್ವಂಸವು ನಾಶವಾಗುವುದರಿಂದ ಘಟೋನ್ಮಜ್ಜನ ಪ್ರಸಂಗ ಬಾಧಕವು, ಹೀಗೆನ್ನಬಾರದು.

**ಸಮವಾಯಿಕಾರಣ ನಾಶಸ್ಯೈವ ಸ್ವ ಸಮವೇತ ಕಾರ್ಯನಾಶ ಪ್ರಯೋಜಕತ್ವ ಸಂಭವೇ ಕಪಾಲಸ್ಯ ಘಟಧ್ವಂಸಂ ಪ್ರತಿ ಸಮವಾಯಿ ಕಾರಣತ್ವಾಭಾವೇನ ತನ್ನಾಶಸ್ಯತನ್ನಾಶಾ ಪ್ರಯೋಜಕತ್ವಾತ್। ಸಮವಾಯಿ ನಾಶಸ್ಯ ಸ್ವಸಮವೇತ ಭಾವಕಾರ್ಯನಾಶ ಪ್ರಯೋಜಕತ್ವಾದ್ವಾನದೋಷಃ ನಚ ಪಕ್ಷದ್ವಯೋಪಿ ವಿಶೇಷಣ ಪ್ರಕ್ಷೇಪೇಗೌರವಂ। ಅಭಾವ ವಿಶಿಷ್ಟ ಪ್ರತ್ಯಯಾನ್ಯಥಾನುಪಪತ್ಯಾ ಸಮವಾಯಸ್ಯ ಕಲ್ಪ್ಯತ್ವೇನ ಫಲಮುಖ ಪ್ರಾಮಾಣಿಕ ಗೌರವಸ್ಯಾದೋಷತ್ವಾತ್ ।**

ಸಮವಾಯಿ ಕಾರಣ ನಾಶಕ್ಕೂ ಸ್ವಸಮವೇತ ಕಾರ್ಯ ನಾಶವೇ ಕಾರಣ ವಾಗಿರುವುದರಿಂದ ಕಪಾಲಿ ನಾಶಕ್ಕೆ ಘಟಧ್ವಂಸವನ್ನು ಕುರಿತು ಸಮವಾಯ ಕಾರಣತೆ ಇಲ್ಲವಾದ್ದರಿಂದ ಸಮವಾಯಿ ಕಾರಣನಾಶಕ್ಕೆ ಘಟನಾಶ ಅಪ್ರಯೋಜಕವೇ ಆಗಿರುವುದರಿಂದ ಸಮವಾಯಿ ನಾಶಕ್ಕೆ ಸ್ವಸಮವೇತ ಭಾವಕಾರ್ಯ ನಾಶ ಪ್ರಯೋಜಕವಾಗಿರುವುದರಿಂದಲೂ ದೋಷವಿಲ್ಲ ಎರಡೂ ಪಕ್ಷದಲ್ಲಿಯೂ ಗೌರವ ಬರುವದಿಲ್ಲ. ಆದರೆ ತಪ್ಪಾಗಿರುವುದಿಲ್ಲ ಅಭಾವದ ವಿಶಿಷ್ಟಜ್ಞಾನದ ಅನಿವಾರ್ಯತೆ ಗಾಗಿಯೂ, ಸಮವಾಯವನ್ನು ಕಲ್ಪಿಸಬೇಕಾಗುವುದರಿಂದ ಫಲಮುಖವಾಗಿ ಪ್ರಾಮಾಣಿಕವಾದ ಗೌರವವು ದೋಷವಾಗುವುದಿಲ್ಲ.

**ನಚೇಷ್ಟಾಪತ್ತಿರಿತಿ ವಾಚ್ಯಂ। ಅಪಸಿದ್ಧಾಂತಾತ್ । ನನ್ವಯಂ ಪಟ ಏತತ್ತಂತು ಸಂಬದ್ಧಃ। ಏತದಾಶ್ರಿತತ್ವಾತ್ ಏತತ್ತಂತು ಸಂಬದ್ಧ ತೃಣಾ ದಿವತ್ ಇತ್ಯನುಮಾನೇನ ಸಮವಾಯ ಸಿದ್ಧಿರಿತಿಚೇನ್ನ। ಪಟಸ್ಯತಂತ್ವ ಭಿನ್ನತ್ವೇನ ತದಾಶ್ರಿತತ್ವಾಭಾವಾತ್ । ತದುಕ್ತಂ ಗೀತಾತಾತ್ಪರ್ಯೇ।**

**ತಂತುಭ್ಯೋನ್ಯಃ ಪಟಃ ಸಾಕ್ಷಾತ್ಕಸ್ಯ ದೃಷ್ಟಿಪಥಂಗತಃ ಇತಿ । ಕಿಂಚ ಅಭಾವೋ ಭೂತಲ ಸಂಬದ್ಧಃ ಏತದಾಶ್ರಿತತ್ವಾತ್ ಕುಂಡಬದರವತ್ ಇತ್ಯನುಮಾನೇನ ಅಭಾವೇಪಿ ಸಮವಾಯಸಿದ್ಧಿಃ ಸ್ಯಾದಿತ್ಯಲಂ। ಅಧಿಕಂತು ಸುಧಾಯಾಂದ್ರಷ್ಟವ್ಯಂ। ಸೂತ್ರಕಾರೇಣಾಪಿ ಸಮವಾಯಾಭ್ಯುಪಗಮಾಚ್ಚ ಸಾಮ್ಯಾದನವಸ್ಥಿತೇರಿತಿ ಸಮವಾಯೋನಿರಾಕೃತಃ । ಇತಿ ಸಮವಾಯ ಭಂಗ ಪ್ರಕರಣಂ ।**

ಇಷ್ಟಾಪತ್ತಿಯೇ ಎನ್ನಬಾರದು. ಅಪಸಿದ್ಧಾಂತ ಬರುವುದರಿಂದ ಈ ಬಟ್ಟೆಯು ಈ ಎಳೆಗಳಲ್ಲಿ ಸಂಬದ್ಧವು. ಈ ಎಳೆಗಳನ್ನು ಆಶ್ರಯಿಸಿರುವುದರಿಂದ ಈ ಎಳೆಗಳಿಗೆ ಸಂಬದ್ಧ ತೃಣಾದಿಗಳಂತೇ ಎಂಬ ಅನುಮಾನದಿಂದ ಸಮವಾಯ ಸಂಬಂಧವು ಸಿದ್ಧಿಸುತ್ತದೆ, ಎಂಬುದು ತಪ್ಪು. ಎಳೆಗಳಿಗೆ ಬಟ್ಟೆಯಿಂದ ಭೇದವೇ ಇಲ್ಲದಿರುವುದರಿಂದ ಬಟ್ಟೆಗೆ ಎಳೆಗಳ ಆಶ್ರಯವೆಂಬುದೇ ಅಸಿದ್ಧವಾದ್ದರಿಂದ, ಇದನ್ನೇ ಗೀತಾ ತಾತ್ಪರ್ಯ ದಲ್ಲಿ ಹೇಳಿರುತ್ತಾರೆ. ಎಳೆಗಳ ಹೊರತಾಗಿ (ಬಿಟ್ಟು) ಆಗಲಿ, ಬಟ್ಟೆ ಬಿಟ್ಟು ಎಳೆಗಳಾಗಲಿ ಯಾರು ಕಂಡಿರುತ್ತಾರೆ ಹೀಗೆಂದು ಮತ್ತು ಅಭಾವವು ಭೂಮಿಯಿಂದ ಸಂಬದ್ಧವಾದುದು. ಭೂಮಿಯನ್ನೇ ಆಶ್ರಯಿಸಿರುವುದರಿಂದ ಎಂಬ ಅನುಮಾನದಿಂದ ಅಭಾವದಲ್ಲೂ ಸಮವಾಯ ಸಂಬಂಧ ಸಿದ್ಧಿಸಬೇಕಾದೀತು. ಇಲ್ಲಿ ಸಾಕು. ಇನ್ನು ಅನೇಕ ದೋಷಗಳನ್ನು ಸುಧಾದಲ್ಲಿ ಕಾಣಬಹುದು (ಸಮವಾಯ ಒಪ್ಪಿದರೆ) ಮತ್ತು ಸೂತ್ರಕಾರರಾದ ಬಾದರಾಯಣರೇ "ಸಮವಾಯಾಭ್ಯುಪಗಮಾಚ್ಚ ಸಾಮ್ಯಾದ ನವಸ್ಥಿತೇಃ"ಎಂಬ ಸೂತ್ರದಲ್ಲಿ ಸಮವಾಯವನ್ನು ಒಪ್ಪಿದರೆ ಅನವಸ್ಥೆ ಅನಿವಾರ್ಯವೇ ಎಂದು ಸಮವಾಯವನ್ನು ನಿರಾಕರಿಸಿರುತ್ತಾರೆ.

ಹೀಗೆ ಸಮವಾಯಭಂಗ ಪ್ರಕರಣದ ಕನ್ನಡಾನುವಾದವು ಮುಗಿದುದು.

# ೮. ವಿಶಿಷ್ಟ ಪ್ರಕರಣ

**ಕ್ರಮಪ್ರಾಪ್ತಂ ವಿಶಿಷ್ಟಂ ನಿರೂಪಯತಿ ।**

ಪ.ಸಂ.—ವಿಶೇಷಣ ಸಂಬಂಧೇನ ವಿಶೇಷ್ಯಸ್ಯ ಯ ಆಕಾರಃ ತದ್ವಿಶಿಷ್ಟಂ । ತದ್ವಿವಿಧಂ ನಿತ್ಯಮನಿತ್ಯಂಚ । ನಿತ್ಯಂ ಸರ್ವಜ್ಞತ್ವಾದಿ ವಿಶಿಷ್ಟಂ ಪರಬ್ರಹ್ಮಾದಿ । ದ್ವಿತೀಯಂ ದಂಡಾದಿ ವಿಶೇಷಣ ಸಂಬಂಧೇನ ಪರಿಣತಂ ದಂಡ್ಯಾದಿ ॥

**ವಿಭಜತಿ । ಆದ್ಯಮಾಹ । ಸರ್ವಜ್ಞತ್ವಾದಿತಿ । ಸರ್ವಜ್ಞತ್ವಾದೇಃ ಅನಾಗಂತುಕತ್ವೇನ ತದಾಭಾವೇ ತದಭಾವಸ್ಯಾಭಾವಾತ್ ತದ್ವಿಶಿಷ್ಟಸ್ಯ ನಿತ್ಯತ್ವಂ ಇತಿ ಭಾವಃ । ದ್ವಿತೀಯಮಾಹ । ದಂಡಾದೀತಿ । ದಂಡಾದೇರಾಗಂತುಕತ್ವೇನ ತದಭಾವೇ ದಂಡಿನೋ ವಿಶಿಷ್ಟಸ್ಯ ವಿನಾಶ ಇತಿ ಭಾವಃ । ನನು ವಿಶಿಷ್ಟಂ ನಪದಾರ್ಥಾಂತರಂ । ದಂಡೀತ್ಯಾದೌ ವಿಶೇಷಣ ವಿಶೇಷ್ಯ ತತ್ಸಂಬಂಧಾತಿರಿಕ್ತಸ್ಯ ಅಭಾವಾತ್ । ಕಿಂಚ ತಸ್ಯ ಉತ್ಪತ್ತ್ಯಾದಿಮತ್ತ್ವೇ ಉಪಾದಾನ ಕಾರಣಂ ವಾಚ್ಯಂ । ನಿರುಪಾದಾನಕ ಸೃಷ್ಟೇರಭಾವಾತ್ ।**

ಪದಾರ್ಥಗಳಲ್ಲಿ ಆರನೆಯದಾಗಿ ಕ್ರಮಪ್ರಾಪ್ತವಾದ ವಿಶಿಷ್ಟವನ್ನು ನಿರೂಪಿಸುತ್ತಾರೆ. ವಿಶೇಷಣದ ಸಂಬಂಧದಿಂದ ವಿಶೇಷ್ಯವು ಬೇರೇ ಆಕಾರ ಬರುವುದಕ್ಕೆ ವಿಶಿಷ್ಟವೆನ್ನುತ್ತಾರೆ. ಹೇಗೆಂದರೆ ದಂಡೀದೇವದತ್ತಃ ಎಂಬುದು, ಈ ವಾಕ್ಯದಲ್ಲಿ ದಂಡವು ವಿಶೇಷಣವು ದೇವದತ್ತನು ವಿಶೇಷ್ಯನು, ವಿಶೇಷ್ಯನಾದ ದೇವದತ್ತನಿಗೆ ವಿಶೇಷಣವಾದ ದಂಡ ಸಂಬಂಧದಿಂದ ದಂಡೀ ದೇವದತ್ತನು ಎಂಬ ರೂಪಾಂತರ ಬರುತ್ತದೆ. ಈ ತೆರನಾದ ರೂಪಾಂತರಕ್ಕೆ ವಿಶಿಷ್ಟವೆನ್ನುತ್ತಾರೆ. ಇದು ಎರಡು ವಿಧವು ನಿತ್ಯ ಹಾಗೂ ಅನಿತ್ಯವೆಂದು. ನಿತ್ಯವಾದುದು ನಿತ್ಯವಾದ ಪರಮಾತನಲ್ಲಿಯ ಸರ್ವಜ್ಞತ್ವಾದಿಗಳು, ಪರಬ್ರಹ್ಮತೆ ಇತ್ಯಾದಿಗಳು, ಅನಿತ್ಯವಾದುದು ಅನಿತ್ಯ ದಂಡಾದಿ ವಿಶೇಷಣಗಳಿಂದ (ಪರಿಣತ) ರೂಪಾಂತರತಾಳಿದ ದಂಡಿ ಇತ್ಯಾದಿಗಳು ಪರಮಾತ್ಮನಲ್ಲಿ ಸರ್ವಜ್ಞತ್ವಾದಿಗಳು ಅನಾಗಂತ (ಹೊಸದಾಗಿ ಬಂದುದಲ್ಲ ಹೋಗುವುದೂ ಅಲ್ಲ) ವಿಶೇಷಣ ಹೋಯಿತು. ಆದ್ದರಿಂದ ವಿಶಿಷ್ಟ ಹೋಯಿತು ಎನ್ನುವದಿಲ್ಲವಾದ್ದರಿಂದ ನಿತ್ಯ ವಿಶಿಷ್ಯಗಳು ವಿಶೇಷ್ಯನಾದ ದೇವದತ್ತಾದಿಗಳಲ್ಲಿ ದಂಡಾದಿ ವಿಶೇಷಣಗಳು ಆಗಂತುಕ ಬಂದುಹೋಗುವವುಗಳಾದ್ದರಿಂದ ದಂಡಿ ವಿಶಿಷ್ಟಗಳು ಅನಿತ್ಯವಾದವುಗಳು. ವಿಶಿಷ್ಟವೆಂಬ ಪದಾರ್ಥವನ್ನು ಒಪ್ಪಿಸಲು ಇಲ್ಲವೆಂದು ಪೂರ್ವಪಕ್ಷ ಮಾಡುತ್ತಾರೆ.

ವಿಶಿಷ್ಟವೆಂಬ ಪದಾರ್ಥವೇ ಇಲ್ಲ. ದಂಡೀ ಎಂಬ ವಿಶಿಷ್ಟದಲ್ಲಿ ದಂಡಿ ವ್ಯಕ್ತಿ ಇವರ ಸಂಬಂಧ ಅತಿರಿಕ್ತ ಪದಾರ್ಥ ಇಲ್ಲದಿರುವುದರಿಂದ ಮತ್ತು, ವಿಶಿಷ್ಟವೆಂಬ ಪದಾರ್ಥವನ್ನು ಒಪ್ಪಿದರೆ ಅದಕ್ಕೆ ಹುಟ್ಟಿದೆಯೋ ಇಲ್ಲವೋ, ಇದ್ದರೆ ಉಪಾದಾನ ಕಾರಣವನ್ನು ಹೇಳಬೇಕು. ಉಪಾದನವಿಲ್ಲದೆ ಹುಟ್ಟಲು ಶಕ್ಯವೇ ಇಲ್ಲ.

**ಉಪಾದಾನಂಚ ಕಿಂ ದಂಡ ಪುರುಷಾಭ್ಯಾಂ ಅನ್ಯತ್ ಕಿಂವಾ ದಂಡ ಪುರುಷಾವೇವ । ನಾದ್ಯಃ । ಅನುಪಲಂಭಾತ್ । ದ್ವಿತೀಯೇಽಪಿ ದಂಡ ಮಾತ್ರಂವಾ ಪುರುಷ ಮಾತ್ರಂವಾ ಉಭಯಂ ವಾ ನಾದ್ಯ ದ್ವಿತೀಯೌ । ಏಕೈಕ ಮಾತ್ರಸ್ಯ ದ್ರವ್ಯೋಪಾದಾನತ್ವಾಸಂಭವಾತ್ । ಪಟಾದೌ ಬಹೂನಾಮೇವ ತಂತೂನಾಂ ಉಪಾದಾನತ್ವ ದರ್ಶನಾತ್ । ನ ತೃತೀಯಃ । ಮಿಲಿತಯೋಃ ಉಪಾದಾನತ್ವೇ ತದಾರಬ್ಧ ದ್ರವ್ಯೇ ದಂಡತ್ವ ಪುರುಷತ್ವಯೋಃ ಸಮಾವೇಶಾಪತ್ತ್ಯಾ ಜಾತಿಸಾಂಕರ್ಯಂ ಸ್ಯಾತ್ । ಕಿಂಚ ।**

ಉಪಾದಾನವಾದದು ದಂಡ ಪುರುಷದಿಂದ ಬೇರೆಯಾದುದೇ ಅಥವಾ ದಂಡ ಪುರುಷರೇನೇ ಮೊದಲನೆಯದು ಕಾಣಿಸುವುದೇ ಇಲ್ಲ, ದಂಡ ಪುರುಷರೆಂದರೆ ದಂಡ ಮಾತ್ರವೋ, ಪುರುಷ ಮಾತ್ರವೋ, ಎರಡೂ ಕೂಡಿಯೋ, ದಂಡ ಒಂದೇ ಪುರುಷ ಒಂದೇ ಉಪಾದಾನವಾಗುವಂತಿಲ್ಲ. ಒಂದೊಂದಕ್ಕೆ ಉಪಾದಾನತೆ ಕೂಡುವುದಿಲ್ಲ. ಬಟ್ಟೆಯಲ್ಲಿ ಅನೇಕಾನೇಕ ಎಳೆಗಳ ಉಪಾದಾನತೆ ಕಂಡಿರುವುದರಿಂದ ಎರಡೂ ಕಲೆತು ಉಪಾದಾನ ಕಾರಣವೆಂದರೆ ದಂಡತ್ವ ಪುರುಷತ್ವಗಳು ಒಂದು ಜಾತಿ ಸಾಂಕರ್ಯವಾಗುತ್ತದೆ

**ರೂಪೀ ಘಟಃ ಇತ್ಯತ್ರ ರೂಪ ವಿಶಿಷ್ಟ ದ್ರವ್ಯಸ್ಯ ರೂಪ ಘಟೋಭಯಾರಬ್ಧತ್ವಮಂಗೀಕರ್ತವ್ಯಂ । ನ ಚ ತದ್ಯುಕ್ತಂ । ಗುಣಸ್ಯ ದ್ರವ್ಯಾರಂಭಕತ್ವಾದರ್ಶನಾತ್ । ದ್ರವ್ಯತ್ವ ಗುಣತ್ವಯೋಃ ಜಾತಿ ಸಾಂಕರ್ಯಾಪತ್ತೇಶ್ಚ । ದಂಡ ಪುರುಷಯೋಃ ಪ್ರತ್ಯೇಕಮುಪಾದಾನತ್ವೇ ವಿಶಿಷ್ಟ ದ್ವಯಾಪತ್ತಿಃ । ತಥಾಚ ಮೂರ್ತದ್ವಯಸ್ಯ ಅಲ್ಪ ಪ್ರದೇಶೇ ಅವಸ್ಥಾನಾಪತ್ತಿಃ । ಅಪಿ ಚ ವಿಶೇಷ್ಯೇಣವಾ ವಿಶೇಷಣೇನವಾ ಆರಬ್ಧಂ ದ್ರವ್ಯಂ ಚೇತನೋ ಅಚೇತನೋವಾ । ನಾದ್ಯಃ । ಅಚೇತನಸ್ಯ ಚೇತನಂ ಪ್ರತ್ಯುಪಾದಾನತ್ವಾನುಪಪತ್ತೇಃ । ನ ದ್ವಿತೀಯಃ । ಅಹಂ ದಂಡೀತಿ ಜ್ಞಾನಾಭಾವ ಪ್ರಸಂಗಾತ್ । ಇತ್ಯಾದಿ ದೋಷಾಃ ಪ್ರಸರಂತೀತಿ ಚೇತ್ । ಉಚ್ಯತೇ ।**

ರೂಪವುಳ್ಳ ಘಟವು ಎಂಬಲ್ಲಿ ರೂಪ ವಿಶಿಷ್ಟ ದ್ರವ್ಯಕ್ಕೆ ರೂಪ ಘಟ ಇವರಡರಿಂದ ಹುಟ್ಟಿದ್ದೆಂದು ಅಂಗೀಕರಿಸಬೇಕಾಗುತ್ತದೆ. ಅದು ಯುಕ್ತವಾಗುವುದಿಲ್ಲ. ಗುಣಕ್ಕೆ ದ್ರವ್ಯೋತ್ಪಾದಕತೆಯು ಎಲ್ಲೂ ಕಂಡಿಲ್ಲವಾದ್ದರಿಂದ ಮತ್ತು ದ್ರವ್ಯತ್ವ ಗುಣತ್ವಗಳ ಜಾತಿ ಸಾಂಕರ್ಯವು ಬರುತ್ತದೆ. ದಂಡೀಪುರುಷರೀರ್ವರಿಗೂ ಪ್ರತ್ಯೇಕೋಪಾದಾನತೆ

ಹೇಳಿದರೆ ವಿಶಿಷ್ಟಗಳೆರಡು ಬರಲೀ ಎಂಬ ಆಪಾದನೆ ಬರುತ್ತದೆ. ಮೂರ್ತ ದ್ರವ್ಯ ಗಳಿಗೆ ಅಲ್ಪಸ್ಥಾನದಲ್ಲಿರುವಿಕೆ ಆಗಲಿ ಎಂಬ ಆಪಾದನೆಯು ಬರುತ್ತದೆ ಮತ್ತೂ ವಿಶೇಷ್ಯದಿಂದಲೋ ವಿಶೇಷಣದಿಂದಲೋ ಆದ ವಸ್ತುವು ಚೇತನವೋ ಅಚೇತನವೋ, ಚೇತನವೆನ್ನಲಾಗುವುದಿಲ್ಲ ಜಡದಿಂದ ಚೇತನೋತ್ಪತ್ತಿ ಎಲ್ಲೂ ಕಂಡಿರುವುದಿಲ್ಲಾ, ಅಚೇತನವಾದರೆ ನಾನು ದಂಡೀಯಂಬ ಜ್ಞಾನ ಬರದೇ ಹೋಗಬೇಕಾಗುತ್ತದೆ ಅಚೇತನವಾದ್ದರಿಂದ ಇತ್ಯಾದಿ ಅನೇಕ ದೋಷಗಳು ಒದಗುವುದರಿಂದ ವಿಶಿಷ್ಟವೆಂಬ ಪದಾರ್ಥವೇ ಅಪ್ರಾಮಾಣಿಕವು ಅಂದರೆ ಹೇಳುತ್ತಾರೆ.

**ವಿಶಿಷ್ಟಂ ವಿಶೇಷಣ ವಿಶೇಷ್ಯ ತತ್ಸಂಬಂಧಾತಿರಿಕ್ತಂ ಅವಶ್ಯಮಂಗೀ ಕರ್ತವ್ಯಂ। ದಂಡೀತಿ ವಿಶಿಷ್ಟ ವ್ಯವಹಾರಸ್ಯ ವಿಶಿಷ್ಟ ಜ್ಞಾನ ಸಾಧ್ಯತ್ವಾತ್। ವಿಶಿಷ್ಟ ಜ್ಞಾನ ವಿಷಯಸ್ಯೈವ ವಿಶಿಷ್ಟತ್ವಾತ್। ನ ಚ ದಂಡ ಪುರುಷ ತತ್ಸಂಬಂಧ ಜ್ಞಾನಾದೇವ ವಿಶಿಷ್ಟ ವ್ಯವಹಾರ ಇತಿ ವಾಚ್ಯಂ। ದಂಡಪುರುಷ ತತ್ಸಂಬಂಧಾ ಇತಿ ಸಮೂಹಾಲಂಬನ ಜ್ಞಾನಾದ್ದಂಡೀತಿ ವ್ಯವಹಾರಾ ಪತ್ತೇಃ। ಸಮೂಹಾಲಂಬನಾದ್ವಿಶಿಷ್ಟ ಜ್ಞಾನಸ್ಯ ಸಮೂಹಾಲಂಬನಜನ್ಯ ವ್ಯವಹಾರಾದ್ವಿಶಿಷ್ಟಜ್ಞಾನಜನ್ಯ ವ್ಯವಹಾರಸ್ಯ ಭೇದಾಭಾವ ಪ್ರಸಂಗಾತ್। ಕಿಂಚ।**

ವಿಶಿಷ್ಟವಾದುದು ವಿಶೇಷಣ ಮತ್ತು ವಿಶೇಷ್ಯ ಅವುಗಳ ಸಂಬಂಧವು ಇವುಗಳಿಂದ ಬೇರೆಯಾದುದೆಂದು ಒಪ್ಪಲೇಬೇಕು. ದಂಡೀ ಎಂಬ ವಿಶಿಷ್ಟ ವ್ಯವಹಾರಕ್ಕೆ ವಿಶಿಷ್ಟ ಜ್ಞಾನ ಸಾಧ್ಯತೆ ಇರುವುದರಿಂದ, ವಿಶಿಷ್ಟ ಜ್ಞಾನ ವಿಷಯಕ್ಕೆ ವೈಶಿಷ್ಟತೆ ಎಂಬುದು ಅನುಭವಸಿದ್ಧವು. ಪ್ರತ್ಯೇಕ ದಂಡ, ಪುರುಷ, ಅವುಗಳ ಸಂಬಂಧ ಜ್ಞಾನದಿಂದ ವಿಶಿಷ್ಟ ವ್ಯವಹಾರವಾಗುತ್ತದೆಂದು ಎನ್ನಬಾರದು, ವ್ಯವಹಾರ ವಿರುದ್ಧವಾದ್ದರಿಂದ ದಂಡ, ಪುರುಷ ಎರಡರ ಸಂಬಂಧವು ಎಂಬ ಸಮೂಹಾಲಂಬನ ಜ್ಞಾನದಿಂದ ವಿಶಿಷ್ಟ ಜ್ಞಾನ ವಾಗುತ್ತದೆ. ವಿಶಿಷ್ಟ ವ್ಯವಹಾರವು ಉಪಪನ್ನವಾಗುತ್ತದೆ. ಅಂದರೆ ವಿಶಿಷ್ಟ ಜ್ಞಾನಕ್ಕೆ ಸಮೂಹಾಲಂಬನ ಜ್ಞಾನ ಜನ್ಯತ್ವವು ಹಾಗೂ ವಿಶಿಷ್ಟ ಜ್ಞಾನ ಸಮೂಹಾಲಂಬನ ಜ್ಞಾನಕ್ಕೂ ಅಭೇದ ವ್ಯವಹಾರ ಬರಲಿ.

**ಏಕೋದಂಡೀತ್ಯೇಕತ್ವೋಲ್ಲೇಖಿ ಪ್ರತ್ಯಯೋನಸ್ಯಾತ್। ದಂಡ ಪುರುಷತತ್ಸಂಬಂಧಾನಾಂಬಹುತ್ವಾತ್। ನ ಚ ಪುರುಷಗತಮೇಕತ್ವಂ ಭಾಸತೇ ಇತಿ ವಾಚ್ಯಂ। ದಂಡ ಪುರುಷ ತತ್ಸಂಬಂಧಾನಾಂ ತ್ರಯಾಣಾಂ ಪ್ರತೀತಿ ವಿಷಯತ್ವೇ ಪುರುಷಗತೈಕತ್ವ ಮಾತ್ರಭಾನೇ ಮಾನಾಭಾವಾತ್। ಏಕಃ ಪುರುಷಃ ಇತಿ ಪ್ರತೀತ್ಯಾಪತ್ತೇಶ್ಚ। ನ ಚ ಪುರುಷಗತಮೇಕತ್ವಂ ದಂಡಿನಿಭಾಸತ ಇತಿ ವಾಚ್ಯಂ। ದಂಡಿನ ಏವಾಭಾವೇತತ್ರಾನ್ಯಗತೈಕತ್ವ ಭಾನಾಯೋಗಾತ್।**

ಮತ್ತೂ ಒಬ್ಬನೇ ದಂಡೀ ಹೀಗೆಂಬ ಜ್ಞಾಪಕ ಜ್ಞಾನ ಬರದೇ ಹೋಗಲಿ ದಂಡ, ಪುರುಷ ಅವುಗಳ ಸಂಬಂಧ ಹೀಗೆ ಬಹುವಾದ್ದರಿಂದ ಪುರುಷನಲ್ಲಿಯು ಏಕತೆ ತೋರುತ್ತದೆಂದು ಎನ್ನಬಾರದು ಅಜ್ಞಾನದಲ್ಲಿ ದಂಡ, ಪುರುಷ, ತತ್ಸಂಬಂಧ ವಿಷಯ ವಾಗಿರಲು ಒಂದೇ ತೋರುವುದೆಂಬ ಪ್ರಮಾಣವಿಲ್ಲವು. ಒಬ್ಬ ಮನುಷ್ಯ ಹೀಗೆ ಪ್ರತೀತಿ ಬರಬೇಕಾದೀತು. ಪುರುಷನಲ್ಲಿರುವ ಏಕ ಸಂಖ್ಯಾ ದಂಡಿಯಲ್ಲಿ ತೋರುತ್ತದೆ ಎಂತಲೂ ಎನ್ನಬಾರದು. ದಂಡಿಯೇ ಇಲ್ಲದಿರಲು ಅವನಲ್ಲಿ ಏಕತೆ ಅಸಂಭಾವಿತವೇ ಆಗಿರುತ್ತದೆ.

**ಕಿಂಚ । ಪ್ರತಿಯೋಗಿ ಭೇದೇನ ಅತ್ಯಂತಾಭಾವ ಭೇದಃ ಸ್ವೀಕೃತಃ । ತಥಾಚ ದಂಡ್ಯಭಾವ ಪ್ರತಿಯೋಗೀನ ದಂಡಃ ನ ಚ ಪುರುಷಃ । ತಯೋಃ ದಂಡ ಪುರುಷಾಭಾವಯೋಃ ಪ್ರತಿಯೋಗಿತ್ವಾತ್ । ಅತೋ ವಿಶಿಷ್ಟಾ ಭಾವ ಪ್ರತಿಯೋಗಿತ್ವೇನ ವಿಶಿಷ್ಟಮನ್ಯದಂಗೀಕರ್ತವ್ಯಂ । ಯಚ್ಚೋಕ್ತಂ ಉಪಾದಾನಾಭಾದಿತ್ಯಾದಿ । ತತ್ತುಚ್ಛಂ । ವಿಶೇಷ್ಯ ಸನ್ನಿಧಾನೇನ ವಿಶೇಷಣ ಸ್ಯೈವ ವಿಶಿಷ್ಟೋಪಾದಾನತ್ವಾತ್ । ವಿಶೇಷ್ಯ ಸನ್ನಿಧಾನಂಚ ನಿಮಿತ್ತ ಕಾರಣಂ ।**

ಮತ್ತು ಅತ್ಯಂತಾಭಾವಗಳಿಗೆ ಭೇದವು ಪ್ರತಿಯೋಗಿ ಭೇದಗಳಿಂದಲೇ ನಿಶ್ಚಿತ ವಾಗಿರುವವುಗಳು. ಅಂದಮೇಲೆ ದಂಡಿ ಅಭಾವಕ್ಕೆ ಪ್ರತಿಯೋಗಿ ಎಂದರೆ ದಂಡವೂ ಆಗುವುದಿಲ್ಲ ಪುರುಷನೂ ಆಗುವುದಿಲ್ಲ. ದಂಡ ಪುರುಷರಿಗೆ ವಿಶಿಷ್ಟಾಭಾವ ಅಭಾವ ಪ್ರತಿಯೋಗಿತ್ವ ಇಲ್ಲದಿರುವುದರಿಂದ ವಿಶಿಷ್ಟಾಭಾವ ಪ್ರತಿಯೋಗಿತ್ವಕ್ಕಾಗಿ ವಿಶಿಷ್ಟವನ್ನೇ ಅಂಗೀಕಾರ ಮಾಡಬೇಕು. ಇನ್ನೂ ಉಪಾದಾನಕಾರಣವಿಲ್ಲವಾದುದರಿಂದ ವಿಶಿಷ್ಟವಿಲ್ಲವೆಂಬುದು ಅತಿ ತುಚ್ಛವಾದುದು. ವಿಶೇಷ್ಯ ಸನ್ನಿಧಾನದಿಂದ ವಿಶೇಷಣಕ್ಕೆ ವಿಶಿಷ್ಟೋಪಾದಾನತೆಯಿರುವುದರಿಂದ ವಿಶೇಷ್ಯ ಸನ್ನಿಧಾನವೇ ನಿಮಿತ್ತ ಕಾರಣವು.

**ನಚೈಕಸ್ಯ ಆರಂಭಕತ್ವಾನುಪಪತ್ತಿಃ । ಏಕೇನೈವ ದೀರ್ಘತಂತುನಾ ಪಟಾರಂಭದರ್ಶನಾತ್ । ಏಕಸ್ಯ ದ್ರವ್ಯಸ್ಯ ಘಟಾದೇರೂಪಾದಿಗುಣೋ ಪಾದಾನತ್ವವದ್ದ್ರವ್ಯೋಪಾದಾನತ್ವ ಸಂಭವಾಚ್ಚ । ನಚೈಕಸ್ಯೈವೋಪಾದಾ ನತ್ವೇ ಉಪಾದಾನದ್ವಯ ಸಂಯೋಗಾಭಾವೇನ ಅಸಮವಾಯಿಕಾರಣಾ ಭಾವ ಇತಿ ವಾಚ್ಯಂ । ಸರ್ವಮಪಿ ಕಾರ್ಯಂ ಅಸಮವಾಯಿಕಾರಣ ಜನ್ಯ ಮಿತಿನಿಯಮಾಭಾವಾತ್ । ಸರ್ಗಾದ್ಯಕಾಲೀನ ಪರಮಾಣು ಕ್ರಿಯಾ ಯಾಂ ವ್ಯಭಿಚಾರಾತ್ । ಅಸ್ತುವಾತನ್ನಿಯಮಃ । ವಿಶೇಷಣ ವಿಶೇಷ್ಯ ಸಂಬಂಧಸ್ಯೈವಾಸಮವಾಯಿಕಾರಣತ್ವಾತ್ । ನ ಚ ರೂಪ ವಿಶಿಷ್ಟ ದ್ರವ್ಯೇ ರೂಪಸ್ಯ ಗುಣತ್ವಾದಾರಂಭಕತ್ವಾನುಪಪತ್ತಿಃ ।**

ಒಂದಕ್ಕೆ ಆರಂಭಕತೆ(ಜನಕತೆ)ಇಲ್ಲವೆಂದಿರಿ.ಅದೂ ತಪ್ಪಾದುದು, ಅತಿ ದೊಡ್ಡದಾದ ಒಂದೇ ಎಳೆಯಿಂದಲೇ ಬಟ್ಟೆ ಹುಟ್ಟಿರುವುದು ಕಂಡಿರುತ್ತದೆ. ಒಂದೇ ದ್ರವ್ಯವಾದ ಘಟಾದಿಗಳಿಗೆ ರೂಪಾದಿ ಗುಣೋಪಾದಾನತ್ವದಂತೆ ದ್ರವ್ಯೋಪಾದನತ್ವವು ಯುಕ್ತವೇ ಆಗಿ ಸಂಭವಿಸುವುದರಿಂದ, ಒಂದಕ್ಕೆ ಉಪಾದನತೆ ಹೇಳಿದರೆ ಎರಡು ಉಪಾದಾನಗಳ ಸಂಯೋಗ ರೂಪ ಅಸಮವಾಯಿ ಕಾರಣವು ಇಲ್ಲವಾಗುವುದಿಲ್ಲೆಂದು ಎನ್ನಬಾರದು. ಎಲ್ಲಕ್ಕೂ ಅಸಮವಾಯಿ ಕಾರಣವಿರಬೇಕೆಂಬ ನಿಯಮವಿಲ್ಲವಾದ್ದರಿಂದ ಸೃಷ್ಟಿಯ ಸಮಯದಲ್ಲಿ ಪರಮಾಣು ಕ್ರಿಯೆಯಲ್ಲಿ ವ್ಯಭಿಚಾರ ಬರುವುದರಿಂದ ಅಸಮವಾಯಿಕಾರಣತೆ ನಿಯಮವೂ ಇರಲಿ ಇಲ್ಲಿ ವಿಶೇಷ್ಯ ವಿಶೇಷಣಗಳ ಸಂಬಂಧವೇ ಅಸಮವಾಯಿ ಕಾರಣವಾಗಿರುತ್ತದೆ. ರೂಪ ವಿಶಿಷ್ಟ ದ್ರವ್ಯದಲ್ಲಿ ರೂಪಗುಣತ್ವಾರಂಭಕತೆ ಇದೇ ಅದು ಇಲ್ಲವಾಗಲಿ ಎನ್ನಬಾರದು.

ಸತ್ತಾಸಾಕ್ಷಾದ್ವ್ಯಾಪ್ಯಜಾತಿಮತ್ವೇನ ದ್ರವ್ಯವದ್ಗುಣಸ್ಯ ಅಪಿ ಆರಂಭಕತ್ವ ಸಂಭವಾತ್ । ಅಥವಾ । ವಿಶೇಷಣ ಸನ್ನಿಧಾನೇನ ವಿಶೇಷ್ಯಮೇವ ವಿಶಿಷ್ಟೋಪಾದಾನಮಸ್ತು । ಬಾಧಕಾಭಾವಾತ್ । ಯದ್ವಾ । ವಿಶೇಷಣ ವಿಶೇಷ್ಯಯೋಃ ಉಭಯೋರಪಿ ಪ್ರತ್ಯೇಕಂ ವಿಶಿಷ್ಟೋಪಾದಾನತ್ವಮಸ್ತು । ನ ಚ ವಿಶಿಷ್ಟದ್ವಯಾಪತ್ತಿಃ । ಇಷ್ಟಾಪತ್ತೇಃ । ನ ಚ ದಂಡ ಕುಂಡಲಾದಿ ನಾನಾ ವಿಶೇಷಣ ಸ್ಥಲೇ ನಾನಾ ವಿಶಿಷ್ಟಾಪತ್ಯಾ ಮೂರ್ತಾನಾಮಲ್ಪ ಪ್ರದೇಶೇ ಅವಸ್ಥಾನಾನುಪಪತ್ತಿಃ । ವಿಶಿಷ್ಟಾನಿಸಂತೀತಿ ಪ್ರತೀತ್ಯಾಪತ್ತಿಶ್ಚೇತಿ ವಾಚ್ಯಂ । ವಿಶಿಷ್ಟಾನಾಂ ಪರಸ್ಪರಮಭಿನ್ನತ್ವೇನ ಅಲ್ಪ ಪ್ರದೇಶೇ ಅವಸ್ಥಾನಸ್ಯ ವಿಶಿಷ್ಟೇ ಬಹುತ್ವ ಪ್ರತ್ಯಯಾಭಾವಸ್ಯ ಚ ಉಪಪತ್ತೇಃ ।

ದ್ರವ್ಯತ್ವ ಗುಣತ್ವಗಳು ಸತ್ತಾಜಾತಿಗೆ ಸಾಕ್ಷಾದ್ವ್ಯಾಪ್ಯಗಳಾಗಿರುವುದರಿಂದ ದ್ರವ್ಯದಂತೇ ಗುಣಕ್ಕೂ ಆರಂಭಕತೆ ಯುಕ್ತವೇ ಆಗಿರುತ್ತದೆ. ಅಥವಾ ವಿಶೇಷಣ ಸನ್ನಿಧಾನದಿಂದ ವಿಶೇಷವೇ ವಿಶಿಷ್ಟೋಪಾದಾನವಾಗಬಹುದು ಬಾಧಕವಿಲ್ಲವಾದ್ದರಿಂದ ಅಥವಾ ವಿಶೇಷಣ ವಿಶೇಷ್ಯಗಳಿಗೆರಡಕ್ಕೂ ಉಪಾದಾನತೆ ಇರಲಿ, ವಿಶಿಷ್ಟ ದ್ವಯಾ ಆಗಲೆಂಬ ಆಪತ್ತಿಯೂ ಇಲ್ಲ. ಇಷ್ಟವೇ ಆಗಿರುವುದರಿಂದ, ದಂಡ ಕುಂಡಲ ಇತ್ಯಾದಿ ಅನೇಕ ವಿಶೇಷಣ ಸ್ಥಳದಲ್ಲಿ ಅನೇಕ ವಿಶಿಷ್ಟಾಪತ್ತಿ ಬಂದು ಮೂರ್ತ ಪದಾರ್ಥಗಳಿಗೆ ಅಲ್ಪ ಪ್ರದೇಶದಲ್ಲಿರುವಿಕೆ ಅನುಪಪತ್ತಿಯೂ ವಿಶಿಷ್ಟಗಳು ಇರುತ್ತವೆ. ಹೀಗೆ ವ್ಯವಹಾರ ಬರಲಿ ಎಂಬ ಆಪಾದನೆ ಬರುತ್ತದೆಂದೆನಬಾರದು. ಅದೂ ಇಷ್ಟವೇ ವಿಶಿಷ್ಟ ಪದಾರ್ಥಗಳು ಪರಸ್ಪರ ಭಿನ್ನಗಳಾಗಿ ಅಲ್ಪಸ್ಥಾನದಲ್ಲೇ ಇರುವಿಕೆಯು ವಿಶಿಷ್ಟಗಳಲ್ಲಿ ವಿಶಿಷ್ಟ ಜ್ಞಾನದ ಅಭಾವ ವ್ಯವಹಾರವೂ ಉಪಪನ್ನವೇ ಆಗಿರುತ್ತದೆ.

ಕಿಂಚ । ಈಶ್ವರ ಅಚಿಂತ್ಯಶಕ್ತ್ಯಾ ಮೂರ್ತಾನಾಮಪಿ ಬಹೂನಾಂ ಅಲ್ಪ ಪ್ರದೇಶೇ ಸತ್ವೋಪಪತ್ತೇಃ । ಪಾಂಡವೈರಾನೀತ ಬಹುಯೋಜನ

**ಸುವರ್ಣರತ್ನಪರ್ವತಾನಾಂ ಇಂದ್ರಪ್ರಸ್ಥೇ ಅಲ್ಪಪ್ರದೇಶೇ ಅವಸ್ಥಾನಾತ್ । ಪ್ರಾಗ್ಜ್ಯೋತಿಷನಗರಾತ್ ಸಮಾಹೃತ ಬಹು ದ್ರವ್ಯಾಣಾಂ ದ್ವಾರಕಾಯಾಂ ಅಲ್ಪಪ್ರದೇಶೇ ಅವಸ್ಥಾನಾತ್ । ಪರಮಾಣು ಪ್ರದೇಶೇ ಅನಂತ ಪ್ರಾಣಿ ರಾಶಿಃ ಇತಿವತ್ । ತದುಕ್ತಂ ನಿರ್ಣಯೇ । ಸುವರ್ಣ ರತ್ನನಿರಯಃ ಚತುರ್ಭಿ ಸ್ತ್ರೈಃ ಸಮಾರ್ಜಿತಾಃ । ಚತ್ವಾರೋ ಯೋಜನಾನಾಂಹಿ ದಶತ್ರಿಂಶತ್ ಶತಂ ತಥಾ । ಚತುಃಶತಂ ಚ ಕ್ರಮಶಃ ಉಚ್ಛ್ರಯಾದ್ಗಿರಯೋರ್ಜಿತಾಃ । ಪ್ರತೀಚ್ಯಾದ್ಯಪಸವ್ಯೇನ ಕ್ರಮಾದೇಭ್ಯಃ ಸಮಾರ್ಜಿತಾಃ । ವಿಶ್ವಕರ್ಮಕೃತ ತ್ವಾತ್ತು ಹರಸ್ಯಾಲ್ಪೇಪಿಚಸ್ಥಲೇ । ಅಂತರ್ಗತಾಸ್ತೇಗಿರಯಸ್ತದದ್ಭುತಮಿವಾ ಭವದಿತಿ ।**

ಮತ್ತು ಈಶ್ವರನ ಅಚಿಂತ್ಯಾದ್ಭುತ ಶಕ್ತಿಯಿಂದ ಅನಂತಗಳಾದ ಮೂರ್ತ ಪದಾರ್ಥಗಳಿಗೆ ಅಲ್ಪಸ್ಥಾನ ವೃತ್ತಿತ್ವವು ಯುಕ್ತವೇ ಆಗಿರುತ್ತದೆ. ಪಾಂಡವರಿಂದ ತಂದ ಸುವರ್ಣರತ್ನಗಳ ಪರ್ವತಗಳೇ ಅಲ್ಪಸ್ಥಾನವಾದ ಇಂದ್ರಪ್ರಸ್ಥದಲ್ಲಿ ಅಡಕಾಗಿದ್ದುದೆಂದು ಹೇಳಿರುತ್ತದೆ. ಮತ್ತು ಶ್ರೀಕೃಷ್ಣನು ನರಕನನ್ನು ವಧಿಸಿ ಪ್ರಾಗ್ಜ್ಯೋತಿಷ ಪುರದಿಂದ ತಂದ ಬಹು ದ್ರವ್ಯವು ಅಲ್ಪಸ್ಥಾನವಾದ ದ್ವಾರಕೆಯಲ್ಲಿ ಇದ್ದಿತೆಂದೂ ಹೇಳಿರುತ್ತದೆ. ಪರಮಾಣು ಪ್ರದೇಶದಲ್ಲಿ ಅನಂತ ಜೀವರಾಶಿಗಳು ಎಂಬಂತೇ. ಇದನ್ನೇ ನಿರ್ಣಯದಲ್ಲಿ ಹೇಳಿರುತ್ತಾರೆ. ನಾಲ್ಕು ಪಾಂಡವರು ನಾಲ್ಕು ದಿಕ್ಕಿನಿಂದ ಸಂಪಾದಿಸಿದ ಬಂಗಾರ ರತ್ನಗಳ ಪರ್ವತಗಳು ನಾಲ್ಕು ದಿಕ್ಕುಗಳಲ್ಲಿ ನಲವತ್ತು ಯೋಜನ ಅಗಲವಾಗಿ ಮುನ್ನೂರು ಯೋಜನ ಉದ್ದವಾಗಿ ನಾನ್ನೂರು ಯೋಜನ ಎತ್ತರವಾಗಿ ಪರ್ವತಗಳು ಪೂರ್ವದಿಂದ ಅಪಸವ್ಯವಾಗಿ ಪೂರ್ವ, ಉತ್ತರ, ಪಶ್ಚಿಮ ದಕ್ಷಿಣ ದಿಕ್ಕುಗಳಲ್ಲಿ ರಾಶಿಗಳಾಗಿದ್ದವು. ವಿಶ್ವಕರ್ಮ ನಿರ್ಮಿತವಾದ್ದರಿಂದ ಅಲ್ಪ ಸ್ಥಳ ವಾದರೂ ಇಂದ್ರಪ್ರಸ್ಥದಲ್ಲಿ ನಾಲ್ಕು ಸುವರ್ಣ ಪರ್ವತಗಳು ಒಳಬಡಿಸಿಕೊಂಡಿದ್ದವು, ಅತಿ ಅದ್ಭುತಗಳಾಗಿದ್ದವು. ಹಾಗೆಯೇ ಇನ್ನೂ ಗಜತುರಗಾದಿ ಅಗಾಧ ಸಂಪತ್ತು ತುಂಬಿದ್ದವು.

**ತಥಾ ಚತುರ್ದಂತಾನ್ ಷಟ್ ಸಹಸ್ರಾನ್ ಕರೀಂದ್ರಾನ್ ಪ್ರಯೋಬ್ಧಿಜಾನ್ ಪ್ರಾಹಿಣೋದ್ದ್ವಾರವತ್ಯೈ।ನರಾಧಿಪಾನ್‌ದೇವಗಂಧರ್ವನಾಗಾನ್ ಜಿತ್ವಾನೀತಂ ಹೇಮರತ್ನೋಚ್ಚರಾಶಿಂ । ಶತದ್ವಯಂ ಯೋಜನಾನಾಂ ಸಮೃದ್ಧಂ ಸಮಂತತಃ ಪ್ರಾಹಿಣೋತ್ ಸ್ವಾಂಪುರೀಂಸ ಇತಿ । ತಥಾ ವಿಷ್ಣು ತತ್ವನಿರ್ಣಯೇಪಿ । ಪರಮಾಣು ಪ್ರದೇಶೇಪಿಹ್ಯನಂತಾ ಪ್ರಾಣಿರಾಶಯಃ । ಸೂಕ್ಷ್ಮತ್ವಾದೀಶಶಕ್ತ್ಯೈವ ಸ್ಥೂಲಾ ಅಪಿ ಚ ಸಂಸ್ಥಿತಾಃ। ಸಹಸ್ರಯೋಜನ ಸಭಾಂ ಪ್ರಭಾವಾದ್ವಿಶ್ವಕರ್ಮಣಃ । ಅನಂತಾರಾಶಯೋನಂತಾಃ ಪ್ರಜಾನಾಮಧಿಸಂಸ್ಥಿತಾಃ ಇತಿ । ಯದ್ವಾ ।**

ಆರು ಸಹಸ್ರ ಸಂಖ್ಯಾಕವಾದ ನಾಲ್ಕು ದಂತಗಳುಳ್ಳ ಕ್ಷೀರಸಾಗರದಲ್ಲಿ ಹುಟ್ಟಿದ ಗಜೇಂದ್ರಗಳನ್ನು ದ್ವಾರಾವತಿಗೆ ಕಳುಹಿಸಿದನು. ಇನ್ನೂ ರಾಜಾಧಿರಾಜರುಗಳನ್ನು ದೇವ ಗಂಧರ್ವರನ್ನು, ನಾಗರಗಳನ್ನು ಜಯಿಸಿ ತಂದ ಬಂಗಾರ ರತ್ನಗಳ ದೊಡ್ಡ ರಾಶಿಯನ್ನು ಎರಡು ನೂರು ಯೋಜನ ಪರಿಮಿತವಾದ ಸಮೃದ್ಧ ಧನರಾಶಿಯನ್ನು ಶ್ರೀ ಕೃಷ್ಣನು ದ್ವಾರಾವತಿಗೆ ಕಳುಹಿಸಿದನು. ಅಲ್ಪ ಸ್ಥಳದ ದ್ವಾರಾವತಿಗೆ ಎಂದು ಹೇಳಿದೆ. ಹಾಗೆ ವಿಷ್ಣು ತತ್ವನಿರ್ಣಯದಲ್ಲಿ ಪರಮಾಣು ಪ್ರದೇಶದಲ್ಲಿ ಅನಂತ ಜೀವರಾಶಿಗಳೂ ಎಂದು ಹೇಳಿರುತ್ತದೆ. ಈಶ್ವರ ಶಕ್ತಿಯಿಂದ ಸೂಕ್ಷ್ಮಸ್ಥಳಗಳಲ್ಲೂ ಸ್ಥೂಲ ಪದಾರ್ಥಗಳೂ ಅಡಕವಾಗಿರುತ್ತದೆ ವಿಶ್ವಕರ್ಮನ ಪ್ರಭಾವದಿಂದ ಸಹ ಪ್ರಯೋಜನ ಉಳ್ಳ ಸಭೆಯು ಇಂದ್ರಪ್ರಸ್ಥದಲ್ಲಿದ್ದಿತು. ಪ್ರಜರ ಗುಂಪುಗಳೂ ಅನಂತ ಗಳಾಗಿದ್ದವು ಹೀಗೆ ಇಚ್ಛಾಶಕ್ತಿಯಿಂದ ಅಲ್ಪ ಪ್ರದೇಶದಲ್ಲಿ ಅನಂತವಾದದ್ದು ಶಕ್ಯವೇ.

**ವಿಶೇಷಣ ವಿಶೇಷ್ಯೇಮಿಲತ್ವಾ ಏಕವಿಶಿಷ್ಟೋಪಾದಾನೇ ಭವತಃ । ನ ಚೈವಂ ಜಾತಿಸಾಂಕರ್ಯ ಪ್ರಸಂಗಃ । ದ್ರವ್ಯತ್ವ ಗುಣತ್ವಯೋಃ ಪರಸ್ಪರ ಪ್ರತಿಬಂಧೇನ ಪರಸ್ಪರ ಅನುಸ್ಯೂತೇರಭಾವಾತ್ । ಅತಏವ ರೂಪಾದಿ ವಿಶಿಷ್ಟಸ್ಥಲೇಪಿ ನಜಾತಿ ಸಾಂಕರ್ಯಂ । ವಿಶಿಷ್ಟಸ್ಯ ದ್ರವ್ಯ ಗುಣಾಭ್ಯಾಂ ಅನ್ಯತ್ವಾತ್ । ಅತ ಏವ ವಿಶಿಷ್ಟಂ ಪದಾರ್ಥಾಂತರಮಿತಿ ಸಿದ್ಧಾಂತಃ । ಏತೇನ ದಂಡಾದಿ ವಿಶಿಷ್ಟಸ್ಯ ದ್ರವ್ಯತ್ವಾತ್ ಗುಣತ್ವಾದಿ ವಿಶಿಷ್ಟಸ್ಯ ಗುಣಾದಿತ್ವಾತ್ ನ ವಿಶಿಷ್ಟಂ ಪದಾರ್ಥಾಂತರಮಿತಿ ನಿರಾಸ್ತಂ । ಗುಣಾದಿ ವಿಶಿಷ್ಟಸ್ಯ ದ್ರವ್ಯ ಗುಣಾಭ್ಯಾಂ ಅತಿರಿಕ್ತತ್ವಾತ್ ।**

ವಿಶೇಷಣ ವಿಶೇಷ್ಯ ಎರಡೂ ಕಲೆತು ಒಂದು ವಿಶಿಷ್ಟೋಪಾದಾನಯಾಗುತ್ತದೆ. ಜಾತಿ ಸಾಂಕರ್ಯ ಪ್ರಸಂಗವೂ ಬರುವುದಿಲ್ಲ. ದ್ರವ್ಯತ್ವ ಗುಣತ್ವಗಳಿಗೆ ಪರಸ್ಪರ ಪ್ರತಿಬಂಧಕತೆಯಿರುವುದರಿಂದ ಪರಸ್ಪರ ಅನುಸ್ಯೂತ (ಸೇರಿ ಕೊಂಡಿರುವಿಕೆ) ಇಲ್ಲ ದಿರುವುದರಿಂದ ಆದ್ದರಿಂದಲೇ ರೂಪಾದಿ ವಿಶಿಷ್ಟಗಳಲ್ಲೂ ಜಾತಿ ಸಾಂಕರ್ಯವಿರುವುದಿಲ್ಲ ವಿಶಿಷ್ಟಕ್ಕೆ ದ್ರವ್ಯ ಗುಣಗಳಿಂದ ಭೇದವೇಯಿರುವುದರಿಂದ, ಅದುದರಿಂದಲೇ ವಿಶಿಷ್ಟವು ಪದಾರ್ಥಾಂತರವೇ ಆಗಿರುತ್ತದೆ ಎಂಬುದೇ ಸಿದ್ಧಾಂತವು. ಒಟ್ಟಿನಲ್ಲಿ ದಂಡಾದಿ ವಿಶಿಷ್ಟ ದ್ರವ್ಯವಾದ್ದರಿಂದ ಗುಣಾದಿ ವಿಶಿಷ್ಟಕ್ಕೆ ಗುಣಾದಿಗಳು ಇರುವುದರಿಂದ ವಿಶಿಷ್ಟವೂ ಪದಾರ್ಥಾಂತರನಲ್ಲ ಎಂಬುದು ನಿರಾಕೃತವಾಯಿತು. ವಿಶಿಷ್ಟವಾದುದು ದ್ರವ್ಯ ಗಳಿಂದಾ ಬೇರೆಯೇ ಆಗಿರುವುದರಿಂದ.

**ಯಚ್ಚೋಕ್ತಂ ದಂಡಾದಿನಾ ಪರಿಣತೋ ದಂಡೀ ಚೇತನೋವಾ ಅಚೇತನೋವೇತ್ಯಾದಿ । ತದಪ್ಯಯುಕ್ತಂ । ಅಚೇತನತ್ವಾಂಗೀಕಾರಾತ್ । ದಂಡಾದಿ ಸಂಬಂಧೇನ ಅಚೇತನಸ್ಯೈವ ಶರೀರಸ್ಯ ವಿಶಿಷ್ಟೋಪಾದಾನತ್ವಾತ್।**

**ಕೇವಲ ಶರೀರೇ ಪುರುಷ ಪ್ರವೇಶವತ್ ವಿಶಿಷ್ಟ ಶರೀರೇ ಚೇತನ ಪ್ರವೇಶ ಸಂಭವಾತ್ । ಅಹಂ ದಂಡೀತ್ಯಾದಿ ಪ್ರತ್ಯಯಸ್ತು ಸ್ಥೂಲೋಽಹಂ ಕೃಶೋಽಹಂ ಮನುಷ್ಯೋಽಹಂ ಇತ್ಯಾದಿಪ್ರತ್ಯಯವದುಪಪನ್ನಃ। ಏತತ್ಸರ್ವಂ ಉಪಾಧಿಖಂಡನ ಮಂದಾರಮಂಜರ್ಯಾಂ ಸಮ್ಯಗುಪಪಾದಿತಂ । ಸುಧಾ ಯಾಮಪಿ । ವಿಶಿಷ್ಟಾಕಾರೋಽನವಿಶೇಷಣಂ । ನಾಪಿ ಸಂಬಂಧಃ । ಕಿನ್ನಾಮ ವಿಶೇಷ್ಯಂ । ನ ಚ ತನ್ಮಾತ್ರಂ । ದ್ವಿವಿಧೋಹಿ ವಿಶಿಷ್ಟಾಕಾರಃ । ಯಾವ ದ್ವಿಶೇಷ್ಯ ಭಾವ್ಯಯಾವದ್ವಿಶೇಷ್ಯ ಭಾವೀಚ । ತತ್ರಾದ್ಯೋ ವಿಶೇಷ್ಯೇಣಾ ತ್ಯಂತಾಭಿನ್ನಃ । ಯಥೇಶ್ವರ ಸ್ವರೂಪೇಣ ಸರ್ವಜ್ಞಃ ।**

ಮುನ್ನವೇ ಆಕ್ಷೇಪಿಸಿತ್ತು ದಂಡಾದಿಗಳಿಂದ ಸಿದ್ಧವಾಗುವ ದಂಡೀ ಎಂಬ ವಿಶಿಷ್ಟವು ಚೇತನವೇ ಅಚೇತನವೇ ಎಂದು. ಅದೂ ಯುಕ್ತವೇ ಅಚೇತನವೆಂದು ಅಂಗೀಕರಿಸುತ್ತೇವೆ. ಕೋಲಿನ ಸಂಬಂಧದಿಂದ ಅಚೇತನ ಶರೀರಕ್ಕೆ ವಿಶಿಷ್ಟೋಪಾದಾನ ಕತೆಯಿರುವುದರಿಂದ, ಕೇವಲ ಶರೀರದಲ್ಲಿ ಪುರುಷ(ಜೀವ)ನ ಪ್ರವೇಶದಂತೆ. ವಿಶಿಷ್ಟ ಶರೀರದಲ್ಲೂ ಚೇತನ ಪ್ರವೇಶವು ಸಂಭವಿಸುವುದರಿಂದ, ನಾನು ದಂಡವುಳ್ಳವನು ಇತ್ಯಾದಿ ವ್ಯವಹಾರವು ನಾನು ದಪ್ಪಸಿದ್ದೇನೆ, ಕೃಶನಾಗಿದ್ದೇನೆ, ಮನುಷ್ಯನಿದ್ದೇನೆ ಇತ್ಯಾದಿ ವ್ಯವಹಾರದಂತೆ ಯುಕ್ತವೇ ಆಗಿರುತ್ತದೆ. ಇವುಗಳೆಲ್ಲವು ವ್ಯಾಸತೀರ್ಥರ ಉಪಾಧಿಖಂಡನ ಮಂದಾರಮಂಜರಿಯಲ್ಲಿ ಚೆನ್ನಾಗಿ ಹೇಳಲ್ಪಟ್ಟಿದೆ, ಸುಧಾದಲ್ಲಿಯೂ ಹೇಳಿರುತ್ತದೆ. ವಿಶಿಷ್ಟಾಕಾರವಾದುದು ವಿಶೇಷಣವಲ್ಲ , ವಿಶೇಷಣ ಸಂಬಂಧವೂ ಅಲ್ಲ. ವಿಶೇಷ್ಯವು ಯಾವುದು ಎಂದರೆ ವಿಶಿಷ್ಟಾಕಾರವು ಎರಡು ವಿಧವು. ವಿಶೇಷ್ಯ ಭಾವ್ಯವು ವಿಶೇಷ್ಯ ದಿಂದಾಗಿ ಅಭಿನ್ನವಾದುದು. ಹೇಗೆಂದರೆ ಈಶ್ವರನು ಸ್ವರೂಪದಿಂದ ಸರ್ವಜ್ಞನು ಎಂಬಂತೆ.

**ಏವಂ ಯತ್ರ ಯತ್ರ ವಿಶೇಷಣ ಸಂಬಂಧಃ ಯಾವದ್ದ್ರವ್ಯಭಾವೀ ತತ್ರ ತತ್ರವಿಶಿಷ್ಟಾಕಾರೋಽಪಿ ತಥಾ ಭೂತೋ ವಿಶೇಷ್ಯೇಣಾತ್ಯಂತಾಭಿನ್ನೋ ದ್ರಷ್ಟವ್ಯಃ । ಯಥಾ ಹಿ ಸಂಯೋಗ ಸಚಿವಾಃ ತಂತವಃ ಪಟಾಕಾರೇಣ ಪರಿಣಮಂತೇ ತಥಾ ಆಗಂತುಕವಿಶೇಷಣ ಸಂಬಂಧಾದ್ವಿಶೇಷ್ಯ ಸ್ವರೂಪಂ ವಿಶಿಷ್ಟಾಕಾರೇಣ ಪರಿಣಮತ ಇತಿ । ತಥಾ ತತ್ವನಿರ್ಣಯ ಟೀಕಾಯಾ ಮಪಿ ।**

ಎಲ್ಲೆಲ್ಲಿ ವಿಶೇಷಣ ಸಂಬಂಧ ಯಾವದ್ದ್ರವ್ಯಭಾವಿಯೋ ಅಲ್ಲಲ್ಲಿ ವಿಶಿಷ್ಟಾ ಕಾರವೂ ಆಯಾವದ್ರವ್ಯಭಾವಿಯೇ ಆಗಿ ವಿಶೇಷ್ಯದಿಂದ ಅತ್ಯಂತ ಅಭಿನ್ನವೇ ಆಗಿರುತ್ತದೆ. ಹೇಗೆ ಬಿಡದೇ ಕಲೆತಿರುವ ಎಳೆಗಳು ಪಟರೂಪವಾಗಿ ಪರಿಣಾಮವನ್ನು ಹೊಂದಿರುತ್ತದೋ ಹಾಗೆ ಆಗಂತುಕ ವಿಶೇಷಣ ಸಂಬಂಧದಿಂದ ವಿಶೇಷ್ಯ ಸ್ವರೂಪವು

ವಿಶಿಷ್ಟಾಕಾರವಾಗಿಯೇ ಪರಿಣಮಿಸುತ್ತದೆ. ಹೀಗೆ ವಿಷ್ಣು ತತ್ವನಿರ್ಣಯ ಟೀಕೆಯಲ್ಲೂ ಹೇಳಿರುತ್ತದೆ.

ನ ದಂಡಾದಿನಾ ದೇವದತ್ತಸ್ಯ ಭೇದಃ ಕ್ರಿಯತೇ । ಕಿಂತು ದಂಡಾದಿ ವಿಶೇಷಣ ಸಂಬಂಧೇನ ದೇವದತ್ತೋ ವಿಶಿಷ್ಟರೂಪಂ ದ್ರವ್ಯಾಂತರಂ ಉತ್ಪಾದಯತೀತಿ । ತಥೋಪಾಧಿಖಂಡನ ಟೀಕಾಯಾಮಪಿ । ದಂಡ ಕುಂಡಲ ಸಂಬಂಧಾದ್ವಿಶಿಷ್ಟ ದ್ವಯಸ್ಯೈವೋತ್ಪತ್ತೇರಿತಿ । ತಥಾ ತತ್ವವಿವೇಕೇ । ವಿಶಿಷ್ಟ ಶುದ್ಧಯೋಶ್ಚೈವೇತಿ । ತಟ್ಟೀಕಾಯಾಮಪಿ । ವಿಶಿಷ್ಟಸ್ಯ ವಿಶೇಷ್ಯ ಸ್ವರೂಪಸ್ಯ ಚ ಭೇದಾಭೇದೌ । ಅಭೇದಶ್ಚೇತಿ ಜ್ಞಾತವ್ಯಂ । ಪರ್ವತಸ್ಯ ಅಗ್ನಿಮತಃ ಭೇದಾಭೇದೌ । ಪರ್ವತಸದ್ಭಾವೇಪಿ ಅಗ್ನಿಮತೋ ಅಭಾವಾತ್ ವಿಷ್ಣೋಃ ಸ್ಸರ್ವಜ್ಞಸ್ಯ ಚಾತ್ಯಂತಾ ಭೇದ ಏವ । ಏವ ಕಾರೇಣ ವಿಶಿಷ್ಟಸ್ಯೈವ ಅನಭ್ಯುಪಗಮಂ ಸರ್ವತ್ರ ಭೇದಾಭ್ಯುಪಗಮಂ ಚ ವ್ಯಾವರ್ತಯತೀತಿ । ನನು ಈಶ್ವರಸ್ಯ ಚಕ್ರಾದಿಸಂಬಂಧೇ ಚಕ್ರೀತ್ಯಾದಿಕಥಂ ವ್ಯವಹಾರಃ । ಚಕ್ರಾದಿನಾಮಾಗಂತುಕತ್ವೇನ ತತ್ಸಂಬಂಧಾದ್ವಿಶಿಷ್ಟೋತ್ಪತ್ತೇಃ ಅಭಾವಾತ್ । ಏವಂ ಮುಕ್ತಾನಾಮಪೀತಿ ಚೇನ್ನ । ಚಕ್ರಾದಿ ವಿಶೇಷಣಾನಾಂ ಏವ ವಿಶೇಷ್ಯ ಸನ್ನಿಧಾನೇನ ಅಚಿಂತ್ಯಶಕ್ತ್ಯಾ ವಿಶಿಷ್ಟಾತ್ಮನಾ ಪರಿಣಾಮೇನ ವಿಶೇಷ್ಯಸ್ಯ ಶುದ್ಧಾತ್ಮಾಂಗೀಕಾರಾತ್ । ಯದ್ವಾ ।

ದಂಡ ಮಾತ್ರದಿಂದಲೇ ದೇವದತ್ತನಿಗೆ ವಿಶಿಷ್ಟ ಭೇದ ಬರುವುದಿಲ್ಲ, ದಂಡ ಸಂಬಂಧದಿಂದ ದೇವದತ್ತನು ವಿಶಿಷ್ಟ ದ್ರವ್ಯಾಂತರ ರೂಪನಾಗಿ ದೇವದತ್ತನು ವಿಶಿಷ್ಟನೇ, ದೇವದತ್ತನೆಂದು ಭೇದವನ್ನು ಕೇಳುತ್ತಾನೆ ಎಂದು ಹಾಗೆ ಉಪಾಧಿಖಂಡನ ಟೀಕೆಯಲ್ಲಿಯೂ ದಂಡ, ಕುಂಡಲಗಳ ಸಂಬಂಧದಿಂದ ವಿಶಿಷ್ಟ ದ್ವಯಗಳು ಹುಟ್ಟುತ್ತವೆ ಎಂದು, ಹಾಗೆ ತತ್ವವಿವೇಕದಲ್ಲಿಯೂ ಅದರ ಟೀಕೆಯಲ್ಲೂ ವಿಶೇಷ್ಯ ಸ್ವರೂಪಕ್ಕೂ, ವಿಶಿಷ್ಟಕ್ಕೂ ಭೇದಾಭೇದವನ್ನು ಒಪ್ಪಬೇಕು. ಹಾಗೂ ಅಭೇದವನ್ನೂ ಒಪ್ಪಬೇಕು. ಪರ್ವತಃ ಅಗ್ನಿಮಾನ್ ಎಂಬಲ್ಲಿ ಪರ್ವತಕ್ಕೂ, ಅಗ್ನಿವುಳ್ಳದ್ದು ಎಂಬುದಕ್ಕೂ ಭೇದಾಭೇದವು. ಅಭೇದವೇ ಯಾಕಾಗಬಾರದೆಂದರೆ. ಅಗ್ನಿ ಇಲ್ಲದ ಸ್ಥಳದಲ್ಲಿ ಬೆಂಕಿವುಳ್ಳದ್ದು ಎಂಬುದು ಇಲ್ಲವಾದ್ದರಿಂದ, ವಿಷ್ಣುವಿಗೂ ಸರ್ವಜ್ಞತೆಗೂ ಸುತರಾಂ ಅಭೇದವೇ. ವಿಶಿಷ್ಟವನ್ನು ಅಂಗೀಕರಿಸದಿರುವುದಾಗಲಿ, ಸರ್ವತ್ರ ಭೇದವೇ ಆಗಲಿ ಹೇಳಲಾಗುವುದಿಲ್ಲ. ಪರಮಾತ್ಮನಿಗೆ ಚಕ್ರ ಸಂಬಂಧವಿದೆ, ಆದರೆ ಚಕ್ರೀ ಎಂಬ ವ್ಯವಹಾರವು ಹೇಗೆ ? ಏಕೆಂದರೆ ಚಕ್ರ ಆಗಂತುಕ (ಒಂದು ವೇಳೆ ಇರುವುದು ಒಂದು ವೇಳೆ ಇರದಿರುವುದು) ಮುಕ್ತರ ವಿಷಯದಲ್ಲೂ ವಿಶಿಷ್ಟತೆ ಹಾಗೆನ್ನಬಾರದು ಶಕ್ತ್ಯಾದಿ ವಿಶೇಷಣಗಳಿಗೆ ವಿಶೇಷ್ಯನಾದ ಪರಮಾತ್ಮನಲ್ಲಿ ಸದಾ ಸನ್ನಿಧಾನವಿರುವುದರಿಂದ

ಪರಮಾತ್ಮನಿಗೆ ಶುದ್ಧತೆ ಅಂಗೀಕೃತವಾಗಿರುತ್ತದೆ. ಆದರೆ ಅವನ ಅಚಿಂತ್ಯಾದ್ಭುತ ಶಕ್ತಿಯಿಂದ ವಿಶಿಷ್ಟನೂ ಹೌದು ಅವಿಶಿಷ್ಟ(ಶುದ್ಧ)ನೂ ಹೌದು. ಅರ್ಥಾತ್ ಅಭಿವ್ಯಕ್ತಿ ಅನಭಿವ್ಯಕ್ತತೆಗಳು ಪರಮಾತ್ಮನಲ್ಲಿರುವಂತೇ ಸಕಲ ಗುಣಗಳಿಗೂ ಎಂದು ತಿಳಿಸುತ್ತಾರೆ.

**ಪರಮಾತ್ಮನಃ ಸರ್ವಾಧಾರತ್ವಂ ಸ್ವರೂಪಂ । ಅತಶ್ಚಕ್ರಾದ್ಯಾಧಾರತ್ವ ಮಪಿ ಸ್ವರೂಪಮೇವ । ಪರಂತ್ವಾಗಂತುಕ ಚಕ್ರಾದಿ ಸನ್ನಿಧಾನೇನಾಭಿ ವ್ಯಜ್ಯತೇ । ಯಥಾ । ಸರ್ವದಾ ವಿದ್ಯಮಾನಂ ಜಗದಾಧಾರತ್ವಂ ಜಗತ್ಸರ್ಜ ನೇನಾಭಿವ್ಯಜ್ಯತ ಇತ್ಯಲಂ । ಇತಿ ವಿಶಿಷ್ಟ ಪ್ರಕರಣಂ ।**

ಪರಮಾತ್ಮನಿಗೆ ಸರ್ವಾಧಾರತೇ ಸ್ವರೂಪವಾದುದು, ಹಾಗೆ ಚಕ್ರಧಾರಕತೆ ಸ್ವರೂಪವೇ ಆಗಿರುತ್ತದೆ. ಅವತಾರಾದಿಗಳಲ್ಲಿ ಚಕ್ರಾದಿ ಆಗಂತುಕತೆಯಿಂದ ಅಭಿವ್ಯಕ್ತವಾಗುತ್ತದೆ. ಹೇಗೆಂದರೆ ಸರ್ವದಾ ವಿದ್ಯಮಾನವಾದ ಸರ್ವಾಧಾರಕತೆ ಜಗತ್ ಸೃಷ್ಟಿ ಪೂರ್ವದಲ್ಲಿ ಅನಭಿವ್ಯಕ್ತವಾಗಿರುತ್ತದೆ. ಸೃಷ್ಟಿ ನಂತರ ಅಭಿವ್ಯಕ್ತ ವಾಗುತ್ತದೆ. ಆದ್ದರಿಂದ ಅವನಲ್ಲಿರುವ ವಿಶಿಷ್ಟತೇ ಅವನಿಂದ ಸುತರಾಂ ಅಭಿನ್ನಗಳೇ ಆಗಿರುತ್ತವೆ.

ಹೀಗೆ ವಿಶಿಷ್ಟ ಪ್ರಕರಣದ ಕನ್ನಡಾನುವಾದವು ಮುಗಿದುದು.

# ೯. ಅಂಶಿ ಪ್ರಕರಣ

**ಕ್ರಮಪ್ರಾಪ್ತಂ ಅಂಶಿನಂ ನಿರೂಪಯತಿ**

ಪ.ಸಂ.—ಅಂಶೀ ತು ಹಸ್ತವಿತಸ್ತ್ಯಾದ್ಯತಿರಿಕ್ತಃ ಪಟಾದಿಃ ಗಗನಾದಿಃ ಚ ಅನುಭವಸಿದ್ಧಃ ॥

**ತುಶಬ್ದಸ್ತು ಅನಂಗೀಕಾರವಾದಿನಂ ನಿರಾಚಷ್ಟೇ । ನನು ತಂತು ವ್ಯತಿರೇಕೇಣ ಪಟಸ್ಯಾಂಶಾಃ ನಸಂತೀತಿ ಚೇನ್ನ । ಹಸ್ತವಿತಸ್ತ್ಯಾದಿ ಪರಿಮಿತಾನಾಮೇವಾವಯವಾನಾಂ ಪ್ರತ್ಯಕ್ಷ ಸಿದ್ಧತ್ವೇನ ಅಪಲಾಪಾ ಯೋಗಾತ್ । ನಚ ತ ಏವ ಪಟಸ್ಯ ಉಪಾದಾನಂ ನ ತಂತವ ಇತಿ ವಾಚ್ಯಂ ಅನುಭವ ವಿರೋಧಾತ್ । ತಂತ್ವನ್ವಯವ್ಯತಿರೇಕಾನುವಿಧಾನಾಚ್ಚ । ನಚ ತಂತೂನಾಂ ಪಟಾವಯವ ಹೇತುತ್ವಂ ತೇಷಾಂ ಪಟ ಹೇತುತ್ವ ಮಸ್ತ್ವಿತಿ ವಾಚ್ಯಂ ।**

ಕ್ರಮಪ್ರಾಪ್ತವಾದ ಏಳನೆಯ ಅಂಶಿ ಪದಾರ್ಥವನ್ನು ನಿರೂಪಿಸುತ್ತಾರೆ. ಅಂಶಿ ಎಂದರೆ ಅಂಶ(ಅವಯವ)ವುಳ್ಳದ್ದು, ಅಂಶಿ ಗೇಣು ಮೊಳ ಇತ್ಯಾದಿ ಪರಿಮಿತಿಯಿಂದ ಬೇರೆ ಆದುದು. ಪಟ ಗಗನಾದಿರೂಪವಾದುದು ಅನುಭವ ಸಿದ್ಧವು. ಇಲ್ಲಿ ತು ಶಬ್ದದಿಂದ ಅಂಶಿಯನ್ನಂಗೀಕರಿಸದವರನ್ನು ನಿರಾಕರಿಸುತ್ತಾರೆ. ತಂತುವನ್ನು ಬಿಟ್ಟು ಬೇರೆ ಪಟದ ಅಂಶಗಳು ಬೇರೆ ಇಲ್ಲ ಎನ್ನಬಾರದು. ಗೇಣು, ಮೊಳ, ಇವೇ ಮೊದಲಾದ ಪರಿಮಿತಿ ರೂಪಗಳಾದ ಅವಯವಗಳು ಪ್ರತ್ಯಕ್ಷ ಸಿದ್ಧವಾಗಿರುವುದರಿಂದ ಅಪಲಾಪಿಸಲಾಗುವುದಿಲ್ಲ ಬಟ್ಟೆಗೆ ಉಪಾದಾನಕಾರಣಗಳಾದ ತಂತುಗಳೂ ಎಂದನ್ನಬಾರದು. ಅನುಭವ ವಿರೋಧ ಬರುತ್ತದೆ. ತಂತುವಿನ ಅನ್ವಯವ್ಯತಿರೇಕ(ಇರುವಿಕೆ ಇಲ್ಲದಿರುವಿಕೆ) ಇದರಿಂದಲೇ ಬಟ್ಟೆ ಇರುವಿಕೆ ಇಲ್ಲದಿರುವಿಕೆ ವಿಹಿತವಾಗಿರುವುದರಿಂದ, ಹಾಗೆಂದರೆ ತಂತುಗಳಿಗೆ ಪಟಾವಯವ ಕಾರಣತೆ ಅಂಶಗಳಿಗೆ ಪಟಕಾರಣತೆ ಹೇಳೋಣವೇ ಎಂದರೆ ಹಾಗೂ ಹೇಳಬಾರದು.

**ಯಾವದವಯವ ಉತ್ಪತ್ತ್ಯನಂತರಂ ಪಟೋತ್ಪತ್ತೇಃ ಅದರ್ಶನಾತ್। ಅನ್ಯಥಾ ಪಟಸ್ಯ ಕಂಥಾತ್ವಾಪತ್ತೇಃ । ನಚ ತಂತೂನಾಂ ಪಟೋಪಾದಾನತ್ವೇ ಅವಯವಾನಾಂ ನಿರುಪಾದಾನತ್ವ ಪ್ರಸಂಗಃ ಇತಿ ವಾಚ್ಯಂ । ಅಂಶ ವಿಶಿಷ್ಟ ಪಟಸ್ಯೈವತಂತು ಜನ್ಯತ್ವಾಂಗೀಕಾರಾತ್ ।**

ಎಲ್ಲೂ ಅವಯವಗಳು ಹುಟ್ಟಿದ ನಂತರವೇ ಪಟ ಹುಟ್ಟುವುದು ಕಂಡಿಲ್ಲವಾದ್ದರಿಂದ ಹಾಗಿಲ್ಲವಾದರೆ ಪಟಕ್ಕೆ ಕಾದೀ(ಕಂಥ) ಕಂಥಾತೆ ಬರಬೇಕಾಗುತ್ತದೆ. ತಂತುಗಳಿಗೆ ಪಟೋಪಾದಾನಕತೆ ಹೇಳಿದರೆ ಅವಯವಗಳಿಗೆ ನಿರುಪಾದಾನಕತೆ ಪ್ರಸಂಗವಿಲ್ಲ ಎನ್ನಬಾರದು. ಅಂಶ ವಿಶಿಷ್ಟ ಬಟ್ಟೆಗೆ ತಂತುವಿನಿಂದ ಹುಟ್ಟುವಿಕೆಯನ್ನು ಒಪ್ಪಿರುವುದರಿಂದ,

**ನಚೈವಂತಂತುಷು ಪಟ ತದವಯುವಯೋಃ ಉಭಯೋರಪಿ ಸತ್ವಾಪತ್ತಿಃ। ತಂತು ಜನ್ಯತ್ವಾವಿಶೇಷಾತ್ ಇತಿ ವಾಚ್ಯಂ। ಇಷ್ಟಾಪತ್ತೇಃ। ಮೂರ್ತಾನಾಮೇಕತ್ರ ಸತ್ವಸ್ಯ ಉಭಯೋರಭೇದೇನ ವಿಶಿಷ್ಟ ಪ್ರಕರಣ ಏವೋಪಪಾದಿತತ್ವಾತ್ ಅವಯುವ್ಯೈಃ ಅಭಿನ್ನಸ್ಯಪಟಸ್ಯತಂತು ವೃತ್ತಿತ್ವೇ ಬಾಧಕಾಭಾವಾತ್। ತದುಕ್ತಂ ತತ್ವವಿವೇಕೇ। ತಥೈವಾಂಶಾಂಶಿನೋರಪೀತಿ। ತಟ್ಟೀಕಾಚ।**

ತಂತುಗಳಲ್ಲಿ ಪಟದವಯುವತೆ ಎರಡರ ಇರುವಿಕೆಯಾಗಲಿ, ಎರಡೂ ತಂತು ಜನ್ಯಗಳೇ ಆಗಿರುವುದರಿಂದ ಹಾಗನ್ನಬೇಡಿ, ಏಕೆಂದರೆ ಇದು ಅಪಾದನೆ(ದೋಷವೇ) ಅಲ್ಲವಾದ್ದರಿಂದ ಇಷ್ಟಾಪತ್ತಿಯನ್ನೇ ಹೇಳುತ್ತೇವೆ. ಮೂರ್ತ ಪದಾರ್ಥಗಳಿಗೆ ಏಕತ್ರ ಇರುವಿಕೆ. ಅಂಶಗಳ ಅಭೇದ ಇವುಗಳನ್ನು ನಾವು ವಿಶಿಷ್ಟ ಪ್ರಕರಣದಲ್ಲಿ ಉಪಪಾದಿಸಿದ್ದೇವೆ ಆದ್ದರಿಂದ ಅವಯುವಗಳಿಂದ ಅಭಿನ್ನವಾದ ಪಟಕ್ಕೆ ತಂತುಉತ್ಪತ್ತಿ ಹೇಳಿದರೆ ಭಾದಕವಿರುವುದಿಲ್ಲ.

ಇದನ್ನೇ,ತತ್ವವಿವೇಕದಲ್ಲಿ ಹೇಳಿರುತ್ತಾರೆ. ಹಾಗೆ ಅಂಶಗಳಿಗೆ ಎಂದು ಅದರ ಟೀಕೆಯಲ್ಲೂ ಸಹ ಅಲ್ಲಿ ಏವಕಾರಣಾತಿರಿಕ್ತ ಅಂಶವಿಲ್ಲವಾದ್ದರಿಂದ ಇದನ್ನು ಪ್ರತ್ಯೇಕ ತೆಗೆದುಕೊಳ್ಳುವುದೇಕೆ ?

**ಏವಕಾರಃ ಕಾರಣಾತಿರಿಕ್ತಾಂಶಾಭಾವಾತ್ಕಿಮಸ್ಯ ಪೃಥಗ್ಗ್ರಹಣೇನೇತ್ಯಸ್ಯಾಪಾಕರಣಾರ್ಥಃ। ಪ್ರತ್ಯಕ್ಷತ ಏವ ಪಟಾದ್ಯಂಶಿನಾಂತಂತ್ವಾದಿ ವ್ಯತಿರಿಕ್ತಾಂಶ ಪ್ರತೀತೇರಿತಿ। ತತ್ವನಿರ್ಣಯ ಟೀಕಾಯಾಮಪಿ। ಉಪಾದಾನ ವ್ಯತಿರಿಕ್ತೋಪ್ಯೇಕದೇಶೋಸ್ಮನ್ಮತೇಂಗೀಕ್ರಿಯತೇ। ಪಟಸ್ಯೋಪಾದಾನಂ ತಂತುವಸ್ತದ್ವ್ಯತಿರಿಕ್ತಾ ಹಸ್ತವಿತಸ್ತ್ಯಾದಿ ಪರಿಮಿತಾ ಏಕದೇಶಾ ಇತಿ। ಸುಧಾಯಾಮಪಿ। ತಂತವ ಏವ ವ್ಯತಿಷಂಗ ವಿಶೇಷ ವಿಶಿಷ್ಟಾಃ ಪಟಾತ್ಮನಾ ಪರಿಣಮಂತ ಇತಿ। ಆಕಾಶಾದೌತ್ವನಾರಂಭಕಾಂಶಾಸ್ಸಂತಿ। ಅತೋಂಶ್ಯಾಕಾಶಃ।**

ಹೀಗೆ ಅಪಾಕರಣಾರ್ಥವಾಗಿ ಎಂದು ಪಟಾದಿ ಅಂಶಗಳಿಗೆ ತತ್ವಾದಿಗಳಿಂದ ಪ್ರತ್ಯೇಕ ವ್ಯವಹಾರ ಪ್ರತ್ಯಕ್ಷ ಸಿದ್ಧವಾಗಿರುತ್ತದೆ. ತತ್ವನಿರ್ಣಯ ಟೀಕೆಯಲ್ಲಿಯೂ ಅಂಶವು ಉಪಾದಾನದಿಂದ ಬೇರೆ ಎಂದೂ ನಮ್ಮಮತದಿಂದ ಅಂಗೀಕೃತವಾಗಿರುತ್ತದೆ. ಏಕೆಂದರೆ ಪಟೋಪಾದಾನವು ತಂತುಗಳು, ಅದರಿಂದ ಬೇರೆಯೇ ಬಟ್ಟೆಯ ಜೋಟು, ಗೇಣು, ಮೊಳಗಳು ಅದರಿಂದ ಬೇರೆ ಏಕದೇಶಗಳೇ ಆಗಿರುತ್ತವೆ. ಹೀಗೆಂದು ಹೇಳಿದೆ ಸುಧಾದಲ್ಲಿಯೂ ತಂತುಗಳೇ ಅತಿನಿಕಟ ಸಂಬಂಧದಿಂದ ಬಟ್ಟೆಯಾಗಿ ಪರಿಣಮಿಸುತ್ತದೆ. ಬಟ್ಟೆ ಹರಿದರೆ ಅಂಶಗಳಿದ್ದೇಯಿರುತ್ತವೆ. ಆಕಾಶದಲ್ಲಿ ಅನಾರಂಭಿಕಾಂಶಗಳಿರುತ್ತವೆ. ಆದ್ದರಿಂದಲೇ ಆಕಾಶವು ಅನಾರಂಭಕ(ನಿತ್ಯ) ಅಂಶಗಳುಳ್ಳದ್ದೇ ಆಗಿರುತ್ತದೆ.

**ಅನ್ಯಥಾ ಆಕಾಶೇ ವಿಹಗಶರೀರತದಭಾವಯೋಸ್ಸತ್ವಾಭಾವ ಪ್ರಸಂಗಾತ್ ತದುಕ್ತಂ ತತ್ವವಿವೇಕಟೀಕಾಯಾಂ। ತಥಾಹಿತದ್ವಾಕ್ಯಾನಿ। ಆಕಾಶ ಸ್ಯಾಂಶಾಸ್ಸಂಶೀತಿ ಅಂಗೀಕಾರ್ಯಂ। ಅನ್ಯಥಾ ಆಕಾಶೇ ವಿಹಗಶರೀರತದ ಭಾವೌನಸ್ಯಾತಾಂ। ನಚಾಕಾಶಸ್ಯ ಉಪಾದಾನಮಸ್ತಿ। ತಸ್ಮಾತ್ಕಾರ್ಯ ಕಾರಣ ವ್ಯತಿರಿಕ್ತಾವಂಶಾಂಶಿನಾವಂಗೀಕಾರ್ಯಾವಿತಿ।**

ಅಂಶಗಳಿಲ್ಲದ ಪಕ್ಷದಲ್ಲಿ ಆಕಾಶದಲ್ಲಿ ಇಲ್ಲಿ ಪಕ್ಷಿ ಇಲ್ಲ ಎಂಬ ವ್ಯವಹಾರ ಬಾರದೇ ಹೋಗಲಿ, ಆಕಾಶದಲ್ಲಿ ಉಪಾದಾನವಿಲ್ಲವಾದರೂ ಇಲ್ಲಿ ಅಲ್ಲಿ ಎಂಬ ವ್ಯವಹಾರ ಇರುವುದರಿಂದ ಕಾರಣಾತಿರಿಕ್ತ ಅಂಶ ಅಂಶೀ ಎಂಬ ಎರಡನ್ನೂ ಒಪ್ಪಲೇಬೇಕು. ಹೀಗೆ ಹೇಳಿರುತ್ತದೆ.

**ಭಾಷ್ಯೇಪಿ। ಯಥಾಕಾಶಸ್ತ್ವನಂ ತೋಽಪಿ ವ್ಯಾವೋಹಸ್ತಾವಧಿ ಸ್ತಥಾ। ಪ್ರಾದೇಶೋಽಪಿ ಹಿ ಸತ್ಯೇನ ತಥೈತೇಷಾಂಮತಾನಿತ್ವಿತಿ। ತಥಾ ಚ ಆಕಾಶಾದಿ ನಿತ್ಯಾಂಶೀ ಪಟಾದಿರನಿತ್ಯಾಂಶೀತ್ಯಂಶಿ ವಿಭಾಗಸ್ಯ ಸ್ಫುಟತ್ವಾ ನ್ನೋಕ್ತಃ। ಅತ್ರಯದ್ಯಪಿ ಪಟಾದ್ಯಂಶಿನೋ ದ್ರವ್ಯತ್ವಾನ್ನಾಂಶಿನಃ ಪೃಥಕ್ಪದಾರ್ಥತ್ವೇನ ಪರಿಗಣನಂ ಯುಕ್ತಂ। ತಥಾಪಿ ಜ್ಞಾನಾನಂದಬಲ ಕ್ರಿಯಾಶಕ್ತ್ಯಾದೀನಾಂ ಸಾಂಶತ್ವಾತ್ತದಪೇಕ್ಷಯಾ ಪೃಥಗ್ಗ್ರಹಣಂ ಯುಕ್ತಂ ಅಂಶಾತಿರಿಕ್ತೋಂಶೀನಾಸ್ತೀತಿ ಮತನಿರಾಸಾಯ ಪೃಥಗ್ಗ್ರ ಹಣಂ। ಇತ್ಯಂಶಿ ಪ್ರಕರಣಂ।**

ಭಾಷ್ಯದಲ್ಲಿಯೂ, ಆಕಾಶವು ಅನಂತವಾದರೂ ಇಲ್ಲಿ ಅಲ್ಲಿ ಎಂಬುದೇ ದೇಶಾ ವಧಿಯು ಹಾಗೆ ಪ್ರದೇಶವೂ ಸತ್ಯವಾಗಿರುವುದರಿಂದ, ಇದರಲ್ಲಿ ಅಂಶಗಳೆಂಬುದು ಸಮ್ಮತವೆ, ಹೀಗೆಂದು ವ್ಯಕ್ತವಾಗದೇ ಒಟ್ಟಿನಲ್ಲಿ ಆಕಾಶಾದಿಗಳು ನಿತ್ಯಾಂಶಗಳು ಪಟಾದಿಗಳು ಅನಿತ್ಯಾಂಶಿಗಳೆಂದು ಸಿದ್ಧವಾಗಿರುವುದರಿಂದ, ಇಲ್ಲಿ ವಿಭಾಗವನ್ನು ಪ್ರತ್ಯೇಕ ಹೇಳಲಿಲ್ಲ. ಇಲ್ಲಿ ಒಂದು ರೀತಿಯಿಂದ ಪಟಾದಿ ಅಂಶಗಳಿಗೆ ದ್ರವ್ಯದಲ್ಲಿ ಅಂತರ್ಭಾವವಿದ್ದರೂ ಪದಾರ್ಥಾಂತರವಾಗಿ ಪರಿಗಣಿಸುವದೂ ಯುಕ್ತವೇ, ಏಕೆಂದರೆ ಜ್ಞಾನಬಲ ಆನಂದ ಕ್ರಿಯಾದಿಗಳಿಗೆ ಗ್ರಹಣ ಯುಕ್ತವೇ ಆಗಿರುತ್ತದೆ. ಮತ್ತು ಅಂಶಾತಿರಿಕ್ತ ಅಂಶವೇ ಇಲ್ಲಾಂತ ಹೇಳುವ ಮತನಿರಾಕರಣಾರ್ಥವಾಗಿಯೂ ಅಂಶಿಗೆ ಪದಾರ್ಥಾಂತರತೆ ಹೇಳಿರುತ್ತದೆ.

ಹೀಗೆ ಪದಾರ್ಥವೆನಿಸಿದ ಅಂಶಿ ನಿರೂಪಣ ಪ್ರಕರಣ ಕನ್ನಡಾನುವಾದ ದೊಂದಿಗೆ ಸಮಾಪ್ತವಾಯಿತು.

# ೧೦. ಶಕ್ತಿ ಪ್ರಕರಣ

**ಕ್ರಮಪ್ರಾಪ್ತಾಂ ಶಕ್ತಿಂ ವಿಭಜತಿ ।**

ಪ.ಸಂ.—ಶಕ್ತಿಶ್ಚತುರ್ವಿಧಾ । ಅಚಿಂತ್ಯಶಕ್ತಿರಾಧೇಯಶಕ್ತಿಸ್ಸಹಜ ಶಕ್ತಿಃ ಪದಶಕ್ತಿಶ್ಚೇತಿ ।
ತತ್ರ ಅಚಿಂತ್ಯಶಕ್ತಿಃ ಪರಮೇಶ್ವರೇ ಸಂಪೂರ್ಣಾ ॥

**ಅಚಿಂತ್ಯಶಕ್ತೇರಾಶ್ರಯಮಾಹ । ಅಘಟಿತಘಟನಾಪಟೀಯಸ್ಯಚಿಂತ್ಯ ಶಕ್ತಿಃ । ಸಾಪರಮಾತ್ಮನಿ ಲಕ್ಷ್ಮೀಬ್ರಹ್ಮಾದ್ಯಪೇಕ್ಷಯಾ ನಿರವಧಿಕೇತ್ಯರ್ಥಃ । ನಚ ಪರಮಾತ್ಮನ್ಯಚಿಂತ್ಯ ಶಕ್ತ್ಯಾ ಘಟನೀಯ ಕಾರ್ಯಾಭಾವ ಇತಿ ವಾಚ್ಯಂ । ಆಸೀನಸ್ಯೈವ ದೂರಗಮನಂ । ಯುಗಪದೇವ ಅಣುತ್ವ ಮಹತ್ವೇ ಬಹುದಾಮ ಸಂಚಯಾ ಬಾಹ್ಯಸ್ಯೈಕವತ್ಸಪಾಶಬಂಧನಂ ಇತ್ಯಾದೀನಾಂ ವಿರುದ್ಧ ಧರ್ಮಾಣಾಂ ಪ್ರಮಾಣ ಪ್ರಮಿತತ್ವಾತ್ । ತಥಾಹಿ ।**

ಎಂಟನೆಯದಾಗಿ ಕ್ರಮಪ್ರಾಪ್ತ ಪದಾರ್ಥವಾದ ಶಕ್ತಿ ಸಾಮರ್ಥ್ಯವೆಂಬ ಪದಾರ್ಥವನ್ನು ನಿರೂಪಿಸುವವರಾಗಿ ವಿಭಾಗವನ್ನು ಹೇಳುತ್ತಾರೆ.

ಶಕ್ತಿ ಎಂಬುದು ನಾಲ್ಕು ವಿಧಗಳಾಗಿರುತ್ತದೆ. ಅಚಿಂತ್ಯ ಶಕ್ತಿ, ಆಧೇಯ ಶಕ್ತಿ, ಸಹಜ ಶಕ್ತಿ ಹಾಗೂ ಪದವರ್ಣಾದಿ ಶಕ್ತಿ. ಹೀಗೆ ಅಚಿಂತ್ಯ ಶಕ್ತಿಯೂ ಪರಬ್ರಹ್ಮನಲ್ಲೇ ಸಂಪೂರ್ಣವಾಗಿರುತ್ತದೆ ಲಕ್ಷ್ಮಿ ಬ್ರಹ್ಮಾದಿಗಳಲ್ಲಿ ಯಥಾಯೋಗ್ಯವಾಗಿರುತ್ತದೆ. ಅತ್ಯಶಕ್ಯವಾದುದಲ್ಲಿ ಅತಿ ಸುಲಭದಲ್ಲಿ ಶಕ್ಯತೆಯನ್ನು ತೋರುವಿಕೆಯ ಶಕ್ತಿ, ಇಂತಹ ಶಕ್ತಿಯು ಪರಮಾತ್ಮನಲ್ಲಿ ಲಕ್ಷ್ಮೀದೇವಿ, ಬ್ರಹ್ಮಾದಿಗಳಿಗಿಂತಲೂ ಅವಧಿ(ಮಿತಿ) ಇಲ್ಲದೇ ಇರುತ್ತದೆ ಎಂದರ್ಥವು, ಪರಮಾತ್ಮನಲ್ಲಿ ಅಘಟಿತ ಘಟನಾಕಾರ್ಯದಿಂದ ಆಗ ಬೇಕಾದ್ದೇನಿದೆ ಎನ್ನಬಾರದು, ಕೂತಿರುವವನಾಗಿಯೇ ಹೋಗುತ್ತಿರುವಿಕೆ, ಒಂದೇ ಕಾರಣದಲ್ಲಿ ಅತಿಅಣು ಅತಿಮಹತ್ಪರಿಮಾಣ(ಮಿತಿ)ತೋರುವಿಕೆ, ಬಹು ಹಗ್ಗಗಳಿಂದ ಕಟ್ಟಲು ಅಶಕ್ಯನಾಗಿ ಮರುಕ್ಷಣದಲ್ಲಿಯೇ ಸಣ್ಣ ಹಸುವಿನ ಹಗ್ಗದಿಂದ ಕಟ್ಟಿಸಿಕೊಳ್ಳುವಿಕೆ ಇತ್ಯಾದಿಗಳೆಲ್ಲವೂ ಪ್ರಮಾಣಗಳಿಂದ ಪ್ರಸಿದ್ಧಗಳಾಗಿವೆ. ಪ್ರಮಾಣಗಳನ್ನು ಉದಾಹರಿಸುತ್ತಾರೆ.

**ಆಸೀನೋ ದೂರಂ ವ್ರಜತಿ ಶಯಾನೋಯಾತಿ ಸರ್ವತಃ । ದೂರಾದ್ದೂರತರಂಯತ್ತು ತದೇವಾಂತಿಕಮಂತಿಕಾತ್ । ಅಣೋರಣೀಯಾನ್ ಮಹತೋಮಹೀಯಾನ್ ಇತಿ ಕಾಠಕೋಪನಿಷತ್ । ನಚ ಕ್ರಮೇಣೋಭಯೋಃ ಸಂಭವಃ । ತಸ್ಯ ಸರ್ವ ಪುರುಷ ಸಾಧಾರಣತ್ವೇನ ಪರಮಾತ್ಮನಿ**

**ಮಾಹಾತ್ಮ್ಯಪಾದಕತ್ವಾಭಾವಾತ್ । ಆಸೀನೋದೂರಂ ವ್ರಜತೀತಿ- ಲಟೋಭಯೋರೇಕ ಕಾಲೀನತ್ವಾವಗತೇಃ । ಅತೋಽಚಿಂತ್ಯ ಶಕ್ತ್ಯೈ ವೈತದ್ಘಟನೀಯಂ । ತದುಕ್ತಂ ಕಾಠಕಭಾಷ್ಯೇ । ಐಶ್ವರ್ಯಾದೇವ ಆಸೀನೋದೂರಂ ವ್ರಜತೀತ್ಯಾದಿ । ಆಸೀನೋ ದೂರಂ ವ್ರಜತಿಶಯಾ ನೋಯಾತಿ ಸರ್ವತಃ । ಐಶ್ವರ್ಯಾದ್ಭಗವಾನ್ವಿಷ್ಣುಃ ವಿರುದ್ಧಂ ಘಟಯತ್ಯ ಸಾವಿತಿ । ನಿರ್ಣಯೇಽಪಿ ।**

ಕಾಠಕೋಪನಿಷತ್ತಿನಲ್ಲಿ ಕೂತವನೇ ದೂರ ಓಡುತ್ತಿರುತ್ತಾನೆ, ಮಲಗಿದವನೇ ಎಲ್ಲಡೆಯಲ್ಲೂ ಇರುತ್ತಾನೆ, ಅತಿದೂರ ದೂರ ಯಾರೋ ಅವನೇ ಅತಿ ಸಮೀಪ ಸಮೀಪನೆಂದು, ಅತಿ ಸಣ್ಣವನು ಯಾರೋ ಅವನೇ ಅತಿ ದೊಡ್ಡವನು ಹೀಗೆ ಹೇಳುರುತ್ತದೆ. ಕ್ರಮವಾಗಿ ಎಲ್ಲಾ ಪುರುಷರಲ್ಲೂ ಕೂಡುವಿಕೆ ಓಡಾಡುವಿಕೆ ಕಂಡಿರು ವುದರಿಂದ, ಇದೇನು ಪರಮಾತ್ಮನಲ್ಲಿಯು ಮಹಿಮೆ ? ಎನ್ನ ಬಾರದು, ಉಪನಿಷತ್ತಿನಲ್ಲಿ ಲಟ್ (ವರ್ತಮಾನಾರ್ಥಕ) ಪ್ರಯೋಗವಾದ ಕೂತಿರುವಿಕೆ. ಮಲಗಿರುವಿಕೆ, ಓಡಾಡುತ್ತಿರುವಿಕೆ ಏಕಕಾಲದಲ್ಲಿಯೇ ಹೇಳಿರುವುದರಿಂದ ಇದು ಮನುಷ್ಯಾದಿಗಳಲ್ಲಿ ಸಂಭಾವಿತಗಳಾಗದಿರುವುದರಿಂದ ಪರಮಾತ್ಮನಲ್ಲಿ ಈ ತರಹವಾದ ಕ್ರಿಯಾಗಳು ಅದ್ಭುತಗಳಾಗಿ ಅಚಿಂತ್ಯಗಳೇ ಆಗಿರುತ್ತದೆ. ಇದನ್ನು ಕಾಠಕ ಭಾಷ್ಯದಲ್ಲೂ ಹೇಳಿರುತ್ತದೆ. ಪರಮಾತ್ಮನು ಐಶ್ವರ್ಯಾತಿಶಯದಿಂದ ಅದ್ಭುತವಾದ ವಿರುದ್ಧ ಕಾರ್ಯಗಳನ್ನು, ಮಲಗಿ ಸರ್ವತ್ರ ಇರುವಿಕೆ, ಕೂತು ಓಡಾಡುತ್ತಿರುವಿಕೆ ಮುಂತಾದುವುಗಳನ್ನು ಮಾಡಿ ತೋರಿಸುತ್ತಾನೆ. ನಿರ್ಣಯದಲ್ಲಿಯೂ ನಿರೂಪಿತ ವಾಗಿದೆ.

**ಮಾತ್ರೋಪಾಲಬ್ಧ ಈಶೋ ಮುಖ ವಿವೃತಿಮಕರೋತ್ । ನಾಂಬ ವ್ಯದ್ಭಕ್ಷಿತಾಹಂ ಪಶ್ಯೇತ್ಯಾಸ್ಯಾಂತರೇತು ಪ್ರಕೃತಿವಿಕೃತಿಯುಕ್ ಸಾಜಗತ್ಪ ರ್ಯಪಶ್ಯತ್ । ಇತ್ಥಂ ದೇವೋಪ್ಯಚಿಂತ್ಯಾಮಪರದುರಧಿಗಾಂಶಕ್ತಿ ಮುಚ್ಚಾಂ ಪ್ರದರ್ಶ್ಯ ಪ್ರಾಯೋಜ್ಞಾತಾತ್ಮತತ್ವಾಂ ಪುನರಪಿ ಭಗವಾನ್ ಆವೃಣೋದಾತ್ಮ ಶಕ್ತಿಂ ಇತಿ । ತಥಾ ಸಮಸ್ತದಾಮ ಸಂಚಯಃ ಸುಸಂಧಿ ತೋಪ್ಯಪೂರ್ಣತಾಂ । ಯಯಾವನಂತ ವಿಗ್ರಹೇ ಶಿಶುತ್ವ ಸಂಪ್ರದರ್ಶಕೇ ಅಬಂಧಯೋಗ್ಯತಾಂ ಪ್ರಭುಃ ಪ್ರದರ್ಶ್ಯಲೀಲಯಾಪುನಃ । ಸ ಏಕವತ್ಸ ಪಾಶಕಾಂತರಂಗತೋಽಖಿಲಂಭರ ಇತಿ ।**

ತಾಯಿಯಿಂದ ಝುವರಿಸಿ ಕೊಂಡವನಾಗಿ, ಅಮ್ಮಾ ನಾನು ಮಣ್ಣು ತಿಂದಿಲ್ಲ, ನೋಡೆಂದು ಬಾಯಿ ತೆರದು, ಪ್ರಕೃತಿ ಯುಕ್ತವಾದ ಸರ್ವ ಜಗತ್ತನ್ನೇ ತೋರಿದುದನ್ನು ಯಶೋದೆ ನೋಡಿದಳು. ಹೀಗೆ ದೇವತೆಗಳಿಗೂ ತಿಳಿಯಲಶಕ್ಯವಾದ ಅಗಾಧ ಶಕ್ತಿಯನ್ನು ತೋರಿ ತನ್ನ ಶಕ್ತಿಯನ್ನು ತಾಯಿ ತಿಳಿದಳೆಂದು ಪುನಃ ತನ್ನ

ಶಕ್ತಿಯನ್ನು ಮುಚ್ಚಿದನು. ಹಾಗೆ ಸರ್ವಧಾರಕನಾದ ಅನಂತ ವಿಗ್ರಹನಾಗಿ ಬಾಲ ಭಾವವನ್ನು ತೋರುವ ಶ್ರೀಕೃಷ್ಣನು ರಾಶಿ ಹಗ್ಗಗಳಿಂದಲೂ ತನ್ನನ್ನು ಕಟ್ಟುವುದು ಸುತರಾಂ ಅಶಕ್ಯವೆಂದು ತೋರಿ ಮರುಕ್ಷಣದಲ್ಲಿಯೇ ಒಂದು ಸಣ್ಣ ಕರುವಿನ ಹಗ್ಗದಿಂದ ಕಟ್ಟಿಸಿಕೊಳ್ಳತಕ್ಕವನೇ ಆದನು.

ತಥಾ ಚಕ್ರೇ ಸಾರ್ಧ ಮುಹೂರ್ತೇನ ಸಮಾಗಮ್ಯಪುನರ್ಮಖಮಿತಿ ಸಾರ್ಧಮುಹೂರ್ತೇನ ಪಂಚವಿಂಶತ್ ಕೋಟಿದೂರಸ್ಥಾನಂತಾಸನಂಗತ್ವಾ ವಿಪ್ರಸುತಾನಾದಾಯ ಪುನರಾಗಮನಂ ಉಕ್ತಂ ನಿರ್ಣಯೇ । ಇತ್ಯಾದ್ಯನಂತ ಮಾಹಾತ್ಮ್ಯಮೀಶ್ವರೇ ಅಚಿಂತ್ಯಶಕ್ತ್ಯಾತತ್ರತತ್ರೋಕ್ತಾನ್ಯನುಸಂಧೇಯಾನಿ । ಆತ್ಮನಿಚೈವಂ ವಿಚಿತ್ರಾಶ್ಚಹಿ । ವಿಚಿತ್ರ ಶಕ್ತಿಃ ಪುರುಷಃ ಪುರಾಣಃ । ಗುಣಾಃಶ್ರುತಾಸ್ಸು ವಿರುದ್ಧಾಶ್ಚದೇವೇ । ವಿಜ್ಞಾನ ಶಕ್ತಿರಹ-ಮಾಸಮನಂತ ಶಕ್ತೇರಿತ್ಯಾದಿ ಸೂತ್ರ ಶ್ರುತಿ ಸ್ಮೃತಯಃ ಶತಶಸ್ಸಂತಿ । ರಮಾಬ್ರಹ್ಮಾದಾವಪ್ಯಚಿಂತ್ಯ ಶಕ್ತಿಮಾಹ ।

ಮತ್ತೂ ಯಜ್ಞದೀಕ್ಷಿತನಾದ ಶ್ರೀಕೃಷ್ಣನು ಒಂದುವರೆ ಮುಹೂರ್ತದಲ್ಲಿಯೇ ಐವತ್ತು ಕೋಟಿ ಯೋಜನ ದೂರದಲ್ಲಿರುವ ಅನಂತಾಸನಕ್ಕೆ ಹೋಗಿ ಬ್ರಾಹ್ಮಣನ ಮಕ್ಕಳನ್ನು ತಂದು ಪುನಃ ಯಜ್ಞ ಸಮಾಪ್ತಿಸಿದನೆಂದೂ ಹೇಳಿದೆ. ನಿರ್ಣಯದಲ್ಲಿ ತಿಳಿಸಿದೆ ಇತ್ಯಾದಿ ಅನೇಕ ಅಘಟಿತ ಘಟನಾತ್ಮಕ ಗುಣಗಳನ್ನು ಅನುಸಂಧಾನ ಮಾಡಿಕೊಳ್ಳಬೇಕು. "ಆತ್ಮನಿಚೈವ ವಿಚಿತ್ರಾಹಿ" ಎಂಬ ಸೂತ್ರ 'ವಿಚಿತ್ರ ಶಕ್ತಿಃ ಪುರುಷಃ ಪುರಾಣಃ, ಅತ್ಯಂತ ವಿರುದ್ಧ ಗುಣಗಳೆಲ್ಲವೂ ಪರಮಾತ್ಮನಲ್ಲೇ ಇತ್ಯಾದಿ ಸ್ಮೃತಿಗಳು "ವಿಜ್ಞಾನ ಶಕ್ತಿರಹಮಾಸಮನಂತ ಶಕ್ತಿಃ" ಇತ್ಯಾದಿಗಳು ಹೀಗೆ ಸೂತ್ರ, ಶ್ರುತಿ, ಸ್ಮೃತಿ, ಪುರಾಣ, ಗೀತಾದಿ ಅನಂತ ವಾಕ್ಯಗಳಿರುತ್ತವೆ. ಪರಮಾತ ಅನಂತ್ಯಾದ್ಭುತ ಶಕ್ತಿಯುಳ್ಳವನೆಂಬ ವಿಷಯದಲ್ಲಿ ಹಾಗೂ ರಮಾ ಬ್ರಹ್ಮಾದಿಗಳಲ್ಲೂ ಇತರಾಚಿಂತ್ಯ ಶಕ್ತಿಗಳುಂಟೆಂದು ತಿಳಿಸುತ್ತಾರೆ.

ಪ.ಸಂ —ಅನ್ಯತ್ರಯಥಾಯೋಗ್ಯಾ ।

ಪರಮಾತ್ಮ ಶಕ್ತ್ಯಪೇಕ್ಷಯಾ ಅನಂತಾಂಶನ್ಯೂನಾಲಕ್ಷ್ಮೀ ಶಕ್ತಿಃ । ತಚ್ಛಕ್ತ್ಯಪೇಕ್ಷಯಾ ಕೋಟಿಗುಣನ್ಯೂನಾ ಬ್ರಹ್ಮಣಾಯುಃ ಶಕ್ತಿಃ ಇತ್ಯಾದಿ ತಾರತಮ್ಯಾನುಸಾರೇಣ ಜ್ಞೇಯೇತ್ಯರ್ಥಃ । ತದುಕ್ತಂ ಗೀತಾಭಾಷ್ಯೇ । ಸತ್ಯಂ ಸತ್ಯಂ ಪುನಃ ಸತ್ಯಂ ಶಪಥೈಶ್ಚಾಪಿ ಕೋಟಿಭಿಃ । ವಿಷ್ಣು ಮಾಹಾತ್ಮ್ಯ ಲೇಶಸ್ಯ ವಿಭಕ್ತಸ್ಯಚ ಕೋಟಿಧಾ । ಪುನಶ್ಚಾನಂತಧಾತಸ್ಯ ಪುನಶ್ಚಾಪಿ ಅನಂತಧಾ । ನೈಕಾಂಶ ಸಮಮಾಹಾತ್ಮ್ಯಾಃ ಶ್ರೀಶೇಷ ಬ್ರಹ್ಮ ಶಂಕರಾಃ ಇತಿ ।

ಪರಮಾತ್ಮನ ಶಕ್ತಿಗಿಂತಲೂ ಲಕ್ಷ್ಮೀದೇವಿಯು ಅನಂತ ಶಕ್ತಿನ್ಯೂನಳು, ಲಕ್ಷ್ಮಿ ಕ್ಕಿಂತಲೂ ಕೋಟಿಗುಣದಿಂದ ನ್ಯೂನ ಶಕ್ತರು ಬ್ರಹ್ಮವಾಯುಗಳು. ಈ ರೀತಿಯ ಅನೇಕಾನೇಕ ತಾರತಮ್ಯವು ಸಕಲದೇವಾದಿ ಜೀವರುಗಳಲ್ಲಿ ತಿಳಿಯಬೇಕು. ಇದನ್ನು ಗೀತಾಭಾಷ್ಯದಲ್ಲಿ ಹೇಳಿರುತ್ತದೆ. ಸತ್ಯವು, ಸತ್ಯವು ಮತ್ತೂ ಸತ್ಯ, ಕೋಟಿ ಸಾರಿ ಶಪಥ ಮಾಡಿ ಹೇಳುತ್ತೇನೆ. ವಿಷ್ಣು ಮಾಹಾತ್ಮ್ಯ (ಶಕ್ತಿಲೇಶ)ವನ್ನು ಕೋಟಿರೀತಿ ವಿಭಾಗ ಮಾಡಿ ಅದರೊಳ್ಳೆಂದನ್ನು ಪುನಃ ಅನಂತ ವಿಭಾಗ ಮಾಡಿದರೆ ಅದರಲ್ಲೊಂದು ಅಂಶದ ಕಣವನ್ನೂ ಸಮ ತೂಗದು ಲಕ್ಷ್ಮೀದೇವಿಯ ಮಹಿಮೆ. ಅಂದ ಮೇಲೆ ಬ್ರಹ್ಮವಾಯು ಗರುಡಶೇಷಾದಿಗಳ ಶಕ್ತಿ ಹೇಳುವುದೇನು ! ಎಂದು ಹೇಳಿರುತ್ತದೆ.

**ಅನುವ್ಯಾಖ್ಯಾನೇಪಿ । ಸರ್ವೇಲ್ಪಶಕ್ತಯಶ್ಚೈವ ಪೂರ್ಣಶಕ್ತಿಃ ಪರೋಹರಿಃ ಇತಿ । ಭಾಷ್ಯೇಪಿ । ನಾಹಂ ನಚ ಶಿವೋನ್ಯೇಚ ತಚ್ಛಕ್ತ್ಯೇಕಾಂಶಭಾಗಿನಃ । ಬಾಲಃ ಕ್ರೀಡನಕೈರ್ಯದ್ವತ್ ಕ್ರೀಡತೇಸ್ಮಾಭಿರಚ್ಯುತ ಇತಿ । ದೇವರುಷ್ಯಾದೀನಾಂ ಅಪಿ ಏವಂ ಶಕ್ತಿಯೋ ಜ್ಞಾತವ್ಯಾಃ । ತದುಕ್ತಂ ಭಾಷ್ಯೇ । ಪೃಥಿವ್ಯಾದ್ಯಭಿಮಾನಿನ್ಯೋ ದೇವತಾಃ ಪ್ರಥಿತೌಜಸಃ। ಅಚಿಂತ್ಯಾಃ ಶಕ್ತಯಸ್ತಾಸಾಂ ದೃಶ್ಯಂತೇ ಮುನಿಭಿಶ್ಚತಾಃ । ತಾಶ್ಚಸರ್ವ ಗತಾ ನಿತ್ಯಂ ವಾಸುದೇವೈಕ ಸಂಶ್ರಯಾಃ ಇತಿ ।**

ಅನುವ್ಯಾಖ್ಯಾನದಲ್ಲಿಯೂ, ಬ್ರಹ್ಮಾದಿಗಳೆಲ್ಲರೂ ಅಲ್ಪ ಶಕ್ತರೇ, ಪರಮಾತ್ಮನೊಬ್ಬನೇ ಪೂರ್ಣಶಕ್ತನು ಎಂದು, ಭಾಷ್ಯದಲ್ಲಿಯೂ ಬ್ರಹ್ಮನ ಉಕ್ತಿಯನ್ನು ತಿಳಿಸುತ್ತಾರೆ. ನಾನಾಗಲಿ, ಶಿವನಾಗಲಿ ಎಲ್ಲ ಪರಮಾತ್ಮನ ಶಕ್ತಿಯ ಏಕೈಕ (ಅತ್ಯಲ್ಪ)ಭಾಗವನ್ನೂ ಪಡೆದವರಲ್ಲ ಆದರೂ ಪರಮಾತ್ಮನು ಬಾಲಕರ ಆಟಗಳಂತೇ ನಮ್ಮಗಳೊಂದಿಗೆ ಆಡುತ್ತಾನೆ. ಹೀಗೆಂದು ದೇವ ಋಷ್ಯಾದಿಗಳಲ್ಲಿ ಹೀಗೆ ನ್ಯೂನವಾಗಿ ತಾರತಮ್ಯದಿಂದಲೇ ತಿಳಿಯಬೇಕು. ಇದನ್ನು ಭಾಷ್ಯದಲ್ಲಿ ಹೇಳಿದೆ, ಪೃಥಿವ್ಯಾದ್ಯಭಿಮಾನಿ ದೇವತೆಗಳೂ ಪ್ರಸಿದ್ಧಿ ಪ್ರಕಾಶ ಸ್ವಭಾವ ಉಳ್ಳವರೇ, ಮನುಷ್ಯ ದೃಷ್ಟಿಯಿಂದ ಅಚಿಂತ್ಯ ಶಕ್ತರೇ ಆ ದೇವತೆಗಳಲ್ಲಿ ಇನ್ನೂ ಮುನಿಗಳಲ್ಲಿ ಇರುವ ಶಕ್ತಿಗಳೆಲ್ಲವೂ ಸದಾ ಶ್ರೀವಾಸುದೇವನಲ್ಲಿ ಆಶ್ರಿತರಾಗಿರುವುದರಿಂದಲೇ ಹೀಗೆಂದು ಹೇಳಿದೆ.

**ಅಗಸ್ತ್ಯಾದೀನಾಂ ಸಮುದ್ರಪಾನಾದಿ ಸಾಮರ್ಥ್ಯ ಪುರಾಣಾದೌ ಪ್ರಸಿದ್ಧಂ । ನನ್ವೀಶ್ವರಾದೌ ಬಲಾತಿರಿಕ್ತ ಶಕ್ತಿಸದ್ಭಾವೇಮಾನಾಭಾವ ಇತಿ ಚೇನ್ನ । ಪರಾಸ್ಯಶಕ್ತಿಃ ವಿವಿಧೈವಶ್ರೂಯತೇ ಸ್ವಾಭಾವಿಕೀ ಜ್ಞಾನಬಲ ಕ್ರಿಯಾಚ ಇತಿ ಬಲಸ್ಯ ಪೃಥಗುಕ್ತೇಃ । ನನ್ವೇವಮಪಿ ವಿರುದ್ಧ ಕಾರ್ಯಸ್ಯ ಅಚಿಂತ್ಯ ಶಕ್ತ್ಯೈವೋಪಪತ್ತೌ ವಿಶೇಷಾಂಗೀಕಾರೋವ್ಯರ್ಥಃ । ವಿಶೇಷೇಣೈವ ಸರ್ವನಿರ್ವಾಹೋಪಪತ್ತೌ ಶಕ್ತೇರ್ವಾ ವೈಯರ್ಥ್ಯಮಿತಿ ಚೇನ್ನ ।**

ಅಗಸ್ತ್ಯಾದಿ ಋಷಿಗಳು ಸಮುದ್ರಪಾನಾದಿ ಮಾಡಿರುವುದು ಪುರಾಣಾದಿಗಳಲ್ಲಿ ಪ್ರಸಿದ್ಧವಾಗಿದೆ. ಭಗವದಾಶ್ರಯದಿಂದಲೇ, ಪರಮಾತ್ಮಾದಿಗಳಲ್ಲಿ ಬಲಾತಿಶಯದಿಂದಲೇ ಸಕಲ ಕ್ರಿಯೆಗಳು ಆಗಿರಲಾಗಿ ಪ್ರತ್ಯೇಕ ಶಕ್ತಿ ಎಂಬುದರಲ್ಲಿ ಪ್ರಮಾಣವೇನು ? ಎಂದರೆ ಪರಮಾತ್ಮನ ಶಕ್ತಿಯು ಅನೇಕ ವಿಧವಾಗಿ ಶ್ರುತಿಗಳಲ್ಲಿ ಕೇಳಿಬರುತ್ತದೆ. ಇವುಗಳೆಲ್ಲವೂ ಸ್ವಾಭಾವಿಕವಾದವುಗಳೇ ಜ್ಞಾನ ಬಲ ಕ್ರಿಯಾದಿಗಳೆಲ್ಲವು ಎಂದು ಬಲವನ್ನು ಪ್ರತ್ಯೇಕವಾಗಿ ಹೇಳಿರುತ್ತದೆ. ಆದ್ದರಿಂದ ಬಲ ಬೇರೆ ಶಕ್ತಿ ಬೇರೆ ಎಂದೇ ಒಪ್ಪಬೇಕು.

ಈಶ್ವರನಲ್ಲಿ ವಿರುದ್ಧ ಕಾರ್ಯಗಳು ಅಚಿಂತ್ಯ ಶಕ್ತಿಯಿಂದಾದಲೂ ಒಪ್ಪಿದರೆ ಪ್ರತ್ಯೇಕ ವಿಶೇಷವನ್ನು ಒಪ್ಪುವುದು ಬೇಡ ವ್ಯರ್ಥ. ವಿಶೇಷದಿಂದಲೇ ಸರ್ವನಿರ್ವಾಹವಾಗುತ್ತಿರಲು ಶಕ್ತಿ ಎಂಬುದು ವ್ಯರ್ಥ. ಎರಡರಲ್ಲಿ ಒಂದನ್ನೊಪ್ಪಿದರೂ ಸಾಕು, ಹಾಗೆನ್ನಬಾರದು.

**ಭೇದ ಹೀನೇತ್ಯಪರ್ಯಾಯಃ ಶಬ್ದಾಂತರ ನಿಯಾಮಕಃ ಇತ್ಯಾದಿ ಪ್ರಮಾಣೇನ ವಿಶೇಷಸ್ಯ ಭೇದಪ್ರತಿನಿಧಿತ್ವೇನ ಏವ ಧರ್ಮಿಗ್ರಾಹಕ ಪ್ರಮಾಣಸಿದ್ಧತ್ವಾತ್ । ಅಚಿಂತ್ಯ ಶಕ್ತೇಶ್ಚ ಅಘಟಿತ ಘಟನಾರೂಪತ್ವೇನೈವ ಪ್ರಮಾಣಸಿದ್ಧತ್ವಾತ್ । ಉಭಯೋಃ ಪ್ರಮಾಣ ಸಿದ್ಧತ್ವೇನ ಅನ್ಯತರೇಣ ಅನ್ಯತರಾಪಲಾಪಾಸಂಭವಾತ್ । ಅಸ್ತು ವೋ ಭಾ ಭ್ಯಾ ಮ ಪ್ಯುಭಯ ವ್ಯವಹಾರಃ । ಯದುಕ್ತಂ ಗೀತಾತಾತ್ಪರ್ಯೇ । ಏಕ ರೂಪಂ ಹರೇರ್ನಿತ್ಯಂ ಅಚಿಂತ್ಯೈಶ್ವರ್ಯಯೋಗತಃ । ಬಹುಸಂಖ್ಯಾಗೋಚರಂಚ ವಿಶೇಷಾದೇವ ಕೇವಲಮಿತಿ ।**

ಭೇದವಿಲ್ಲದ ಸ್ಥಳದಲ್ಲಿ ಪರ್ಯಾಯ ಶಬ್ದ ನಿಯಾಮಕವಾದುದು ಪ್ರಮಾಣ ಪ್ರಮಿತವು. ಹಾಗೆ ಪ್ರಮಾಣದಿಂದ ಭೇದ ಪ್ರತಿನಿಧಿಯಾಗಿ ಧರ್ಮಿಜ್ಞಾಪಕವಾದದು ವಿಶೇಷವು. ಅಚಿಂತ್ಯ ಶಕ್ತಿಯು ಅಘಟಿತ ಘಟನಾರ್ಥದಲ್ಲಿಯೇ ಪ್ರಮಾಣ ಪ್ರಮಿತವಾಗಿರುತ್ತದೆ. ವಿಶೇಷ ಶಕ್ತಿ, ಎರಡೂ ಪ್ರಮಾಣ ಪ್ರಮಿತ(ಸಿದ್ಧ)ವಾಗಿರುವುದರಿಂದ, ಒಂದಿರಲಿ, ಎರಡು ಬೇಡ ಎಂದು ಪ್ರಲಾಪ ಮಾಡುವುದು ಸರಿಯಲ್ಲಾ, ಪ್ರಮಾಣ ಸಿದ್ಧವಾದವುಗಳೆರಡೂ ಇರಲಿ. ಗೀತಾತಾತ್ಪರ್ಯದಲ್ಲಿ ಪರಮಾತ್ಮನ ಒಂದು ರೂಪ ಮಹದೈಶ್ವರ್ಯ ಮೂಲಕ ನಿತ್ಯದಲ್ಲೂ ಅಚಿಂತ್ಯವಾದವುಗಳೇ, ವಿಶೇಷವಶಾತ್ ಬಹು ಸಂಖ್ಯಾಗೋಚರವೂ ಎಂದು ಅಚಿಂತ್ಯ ಶಕ್ತಿಬೇರೆ. ವಿಶೇಷಗಳು ಬೇರೆ ಹೀಗೆ ಹೇಳಿರುತ್ತದೆ.

**ಅನ್ಯಥಾ ಚಕ್ಷುರಾದಿ ಪರಮಾತ್ಮೇಂದ್ರಿಯಾಣಾಂ ಸರ್ವೇಷಾಂ ರೂಪ ರಸಾದಿ ಸರ್ವ ವಿಷಯ ಗ್ರಾಹಕತ್ವಸ್ಯ ವಕ್ಷ್ಯಮಾಣತ್ವೇನ ತತ್ರೈಕೈಕ**

**ಮಾತ್ರೇಂದ್ರಿಯ ಸ್ವೀಕಾರಾಪತ್ತ್ಯಾ ಅನೇಕೇಂದ್ರಿಯ ವೈಯರ್ಥ್ಯ ಪ್ರಸಂಗಾದಿತಿದಿಕ್ । ಜಡೇಪಿ ಅಚಿಂತ್ಯ ಶಕ್ತಿಃ ಪ್ರಮಾಣ ಸಿದ್ಧಾ । ಯದಿದಂ ಚಕ್ಷುಷಿ ಸರ್ಪಿರ್ಮೋದಕಂವಾಸಿಂಚತಿವರ್ತ್ಮನೀ ಏವಗಚ್ಛತೀತ್ಯಾದಿ ಸ್ಥಾನ ಶಕ್ತಿರಿತಿ ಭಾಷ್ಯೋಕ್ತೇಃ ।**

ಅಚಿಂತ್ಯ ಶಕ್ತಿ, ವಿಶೇಷ ಎರಡೂ ಒಪ್ಪದ ಪಕ್ಷದಲ್ಲಿ ಪರಮಾತ್ಮನ ಒಂದೇ ಇಂದ್ರಿಯವು ರೂಪರಸಾದಿ ಸಕಲ ವಿಷಯಗಳನ್ನು ವಿಷಯೀಕರಿಸುತ್ತದೆಂದು ಪ್ರಮಾಣಗಳು ಹೇಳುತ್ತವೆ. ಒಂದು ಇಂದ್ರಿಯದಿಂದ ಸಕಲ ವಿಷಯ ಗ್ರಹಣ (ಸಕಲ ವ್ಯವಹಾರ) ಜರಗುತ್ತಿರಲು ಮಿಕ್ಕ ಇಂದ್ರಿಯಗಳು ವ್ಯರ್ಥವಾಗಲಿ ಎಂಬ ಆಕ್ಷೇಪವನ್ನು ವಿಶೇಷದಿಂದಲೇ ಸಂಪಡಿಸಬೇಕಾಗುತ್ತದೆ. ಇತ್ಯಾದಿ ದಿಗ್ದರ್ಶನ ಹಾಗೂ ಹೆಚ್ಚಿನ ವಿಷಯಗಳನ್ನು ಸುಧಾದಿಂದ ತಿಳಿಯಬೇಕು. ಅಚಿಂತ್ಯ ಶಕ್ತಿ ವಿಶೇಷ ಎರಡನ್ನೂ ಪರಮಾತ್ಮನಲ್ಲಿ ಒಪ್ಪಲೇಬೇಕು.

ಜಡ ಪದಾರ್ಥಗಳಲ್ಲೂ ಪ್ರತ್ಯೇಕ ಅಚಿಂತ್ಯಾದ್ಭುತ ಶಕ್ತಿ ಇರುತ್ತದೆ. ಪ್ರಮಾಣ ಸಿದ್ಧವು. ಕಣ್ಣಿನಲ್ಲಿ ತುಪ್ಪವಾಗಲಿ ನೀರಾಗಲಿ ಹಾಕಿದರೆ, ಅದರ ಲೇಪವಿಲ್ಲದೇ ಬದಿಗೆ ಜಾರಿಹೋಗುತ್ತದೆ. ಇದು ಸ್ಥಾನ ಶಕ್ತಿಯೆಂದು ಭಾಷ್ಯದಲ್ಲಿ ಹೇಳಿದೆ.

**ಸೂರ್ಯಾದಿ ಪ್ರತಿಬಿಂಬೇನ ಸೂರ್ಯಕಾಂತಾದೇಃ ಅಗ್ನಿಜನಕತ್ವಂ ಸ್ಥಾನಶಕ್ತ್ಯಾ ಬಿಂಬಶಕ್ತ್ಯಾಚ ಭವತೀತಿ ತತ್ವ ಪ್ರಕಾಶಿಕೋಕ್ತೇಃ । ಶ್ಯಮಂತಕ ಮಣೇಶ್ಯಸ್ಯ ಬಹುಭಾರ ಸುವರ್ಣಪ್ರಾಪಕತ್ವಶಕ್ತೇರ್ಭಾರತಾದೌ ಪ್ರತಿಪಾದನಾತ್ । ಅಕ್ಷಯಪಾತ್ರ ಮೃತಸಂಜೀವಿನೀ ಚಿಂತಾಮಣಿ ಕಾಲ ಕೂಟ ವಿಷಾದೀನಾಂ ಮಹಾಸಾಮರ್ಥ್ಯಸ್ಯ ನಿರ್ಣಯಾದೌ ಪ್ರತಿಪಾದ ನಾತ್ । ಅಯಸ್ಕಾಂತಸ್ಯ ಅಯೋಭ್ರಾಮಕತ್ವ ದರ್ಶನಾಚ್ಚ ।**

ಸೂರ್ಯಕಾಂತಾದಿಮಣಿಗಳಲ್ಲಿ ಸೂರ್ಯನಪ್ರತಿಬಿಂಬ ಮೂಡಿದರೆಅಗ್ನಿ ಹುಟ್ಟುತ್ತದೆ. ಇತ್ಯಾದಿಗಳೂ ಸ್ಥಾನ ಶಕ್ತಿಯೇ ಎಂದು ತತ್ವ ಪ್ರಕಾಶದಲ್ಲಿ ಹೇಳಿದೆ. ಭಾರತಾದಿಗಳಲ್ಲಿ ಶ್ಯಮಂತಕ ಮಣಿಗೆ ಪ್ರತಿನಿತ್ಯ ಅನೇಕ ಭಾರ ಸುವರ್ಣ ಪ್ರಸವಕತೆ ಇತ್ತು ಎಂದು ಹೇಳಿದೆ ಮತ್ತು ಅಕ್ಷಯಪಾತ್ರೆ, ಮೃತಸಂಜೀವಿನಿ, ಚಿಂತಾಮಣಿ, ಕಾಲಕೂಟ ವಿಷ, ಇವುಗಳಿಗೆ ಅತಿಶಯ ಸಾಮರ್ಥ್ಯವು ನಿರ್ಣಯದಲ್ಲೂ ಪ್ರತಿಪಾದಿತ ವಾಗಿದೆ. ಅಯಸ್ಕಾಂತ(ಸೂಜಿಗಲ್ಲು)ಕ್ಕೆ ಕಬ್ಬಿಣವನ್ನು ಚಲಿಸುವಶಕ್ತಿ ಕಂಡಿರುತ್ತದೆ. ಆದ್ದರಿಂದ ಜಡಗಳಲ್ಲೂ ಶಕ್ತಿಯಿದೆ.

**ನಚ ತತ್ರ ತತ್ರ ಜಡೇಷ್ವಭಿಮಾನಿ ದೇವತಾದಿ ಸಾಮರ್ಥ್ಯದೇತದ್ಭವತಿ। ನತು ಶಕ್ತ್ಯಾ । ಔಷಧಾದಿ ಸ್ಥಿತಾ ದೇವಾಃ ಅಜ್ಞೇ ದೃಷ್ಟ ಫಲಪ್ರದಾಃ ಇತಿ ಛಾಂದೋಗ್ಯಭಾಷ್ಯೋಕ್ತೇಃ ಇತಿ ವಾಚ್ಯಂ । ಸ್ಥಾನ ಶಕ್ತೇರಪ್ಯಾವಸ್ಯ**

**ಕತ್ವಾತ್ । ಅನ್ಯಥಾ ತಥಾತ್ಮಾನಃ ತೃಣಕಾಷ್ಠಾತ್ಮ ಸರ್ವೇದಿಷಕ್ಷಯೋಃ ಸ್ವಾಂಪ್ರಕೃತಿಂ ಭಜಂತ ಇತ್ಯೈತರೇಯಭಾಷ್ಯೋಕ್ತೇಃ । ಲೋಷ್ಟಕಾಷ್ಠಾದೀನಾಂ ಅಪಿ ದೇವತಾದ್ಯಭಿಮನ್ಯಮಾನತ್ವೇನ ತೈರಪಿಮಹಾಕಾರ್ಯ ಪ್ರಸಂಗಾತ್ ।**

ಅಲ್ಲಲ್ಲಿ ಜಡಗಳಲ್ಲಿ ಅಭಿಮಾನಿ ದೇವತೆಗಳ ಸಾನ್ನಿಧ್ಯದಿಂದಲೇ ಆ ಅಚಿಂತ್ಯ ಕಾರ್ಯಗಳು, ಜಡಶಕ್ತಿ ಅಲ್ಲ ಎನ್ನುತ್ತೇವೆ. ಏಕೆಂದರೆ ಛಾಂದೋಗ್ಯ ಭಾಷ್ಯದಲ್ಲಿ ಔಷದಾದಿಗಳಲ್ಲಿದ್ದ ದೇವತೆಗಳು (ಅಭಿಮಾನಿ ದೇವತೆಗಳು) ಅಜ್ಞರಿಗೆ ದುಷ್ಟಫಲವನ್ನು ಕೊಡುತ್ತಾರೆ. ಎಂದು ಹೇಳಿರುವುದರಿಂದ, ಹಾಗೆ ಎನ್ನಬಾರದು. ಸ್ಥಾನ ಶಕ್ತಿಯೂ ಅವಶ್ಯಕವೇ ಆಗಿರುವುದರಿಂದ, ಏಕೆಂದರೆ ಐತರೇಯ ಭಾಷ್ಯದಲ್ಲಿ ಕಲ್ಲು ಹುಲ್ಲು ಕಟ್ಟಿಗೆ ಇತ್ಯಾದಿಗಳು(ಅದೃಷ್ಟ) ದೇವತಾ ದೃಷ್ಟಿಕ್ಷಯವಾಗುತ್ತಿರಲು, ತನ್ನ ಸ್ವಭಾವವನ್ನು ಹೊಂದುತ್ತವೆ ಎಂದು ಹೇಳಿರುವುದರಿಂದ ಕಲ್ಲು ಹುಲ್ಲುಗಳೂ ದೇವತಾಭಿಮನ್ಯಮಾನಗಳೇ ಆಗಿರುವುದರಿಂದ ಅವುಗಳ ಸಹಕಾರವೂ ಬೇಕಾದ್ದರಿಂದ ಅವುಗಳಲ್ಲಿ ಶಕ್ತಿಯನ್ನು ಒಪ್ಪಬೇಕು.

**ಪರ್ವತಾಸ್ಸಿಕತಾಶ್ಚೈವ ನದ್ಯಃ ಕೂಪಾಸ್ಸರಾಂಸಿಚ ಹವಿಃ ಕಪಾಲಾಯೂಪಾದ್ಯಾಃ ದೇವತಾ ಏವ ಸರ್ವಶಃ ಇತಿ ಬೃಹದ್ಭಾಷ್ಯೋಕ್ತೇಃ ನಾದೈವಂಕಿಂಚಿದಿಷ್ಯತ ಇತಿ ಛಾಂದೋಗ್ಯಭಾಷ್ಯೋಕ್ತೇಶ್ಚ । ತಸ್ಮಾದಚಿಂತ್ಯ ಶಕ್ತಿಸಿದ್ಧಿಃ ।**

ಬೆಟ್ಟಗಳು ಉಸುಕುಗಳು ನದಿಗಳು ಭಾವಿಗಳು ಸರೋವರಗಳು ಹವಿಸ್ಸು ಕಪಾಲ, ಯೂಪ ಇತ್ಯಾದಿಗಳೆಲ್ಲವೂ ದೇವತೆಗಳೇ ಎಂದು ಬೃಹದ್ಭಾಷ್ಯದಲ್ಲಿ ಹೇಳಿರುತ್ತದೆ. (ಅಭಿಮನ್ಯ ಅಭಿಮಾನಿಗಳಿಗೆ ಅಭೇದ ವ್ಯವಹಾರವಿರುವುದರಿಂದ) ಛಾಂದೋಗ್ಯ ಭಾಷ್ಯದಲ್ಲಿಯೂ ದೈವತಾ ಸಂಬಂಧವಿಲ್ಲದ ವಸ್ತುವು ಸ್ವಲ್ಪವೂ ಇಲ್ಲವೆಂದು ಹೇಳಿರುತ್ತದೆ ಒಟ್ಟಿನಲ್ಲಿ ಅಚಿಂತ್ಯ ಶಕ್ತಿಯು ಸಿದ್ಧಿತವೇ ಆಯಿತು. ಇನ್ನೂ ಸಹಜ ಶಕ್ತಿಯ ರೂಪವನ್ನು ಹೇಳುತ್ತಾರೆ.

**ಸಹಜ ಶಕ್ತಿಂ ನಿರೂಪಯತಿ । ದಂಡಾದಿಷು ಘಟಾದಿ ಕಾರ್ಯಾನುಕೂಲ ಅತೀಂದ್ರಿಯಾ ಶಕ್ತಿರಂಗೀಕರ್ತವ್ಯೇತ್ಯರ್ಥಃ ।**

ಪ.ಸಂ. – ಕಾರ್ಯಮಾತ್ರಾನುಕೂಲಾ ಸ್ವಭಾವರೂಪಾ ಸಹಜಶಕ್ತಿಃ ।

ಕಾರ್ಯಮಾತ್ರಾನುಕೂಲವಾಗಿಯೂ ಸ್ವಭಾವರೂಪವೂ ಆದ ಶಕ್ತಿಯು ಸಹಜ ಶಕ್ತಿಯು, ದಂಡಾದಿಗಳಲ್ಲಿ ಘಟಾದಿ ಕಾರ್ಯಾನುಕೂಲವಾಗಿ ಅತೀಂದ್ರಿಯವೂ ಆದ ಒಂದು ಶಕ್ತಿ ಇದೆ. ಅದೇ ಸಹಜ ಶಕ್ತಿಯು ಎಂದು ಅಂಗೀಕರಿಸಬೇಕು. ಪೂರ್ವಪಕ್ಷವನ್ನು ತೋರುತ್ತಾರೆ.

**ನನು ತತ್ತತ್ಕಾರ್ಯಂ ಪ್ರತಿತತ್ತತ್ಕಾರಣಾನಾಂ ಕಾರಣತ್ವಂ ತಾವತ್ ಸಿದ್ಧಂ । ತಥಾಚತದತಿರಿಕ್ತ ಶಕ್ತಿಸದ್ಭಾವೇ ಮಾನಾಭಾವಃ ಇತಿ ಚೇನ್ನ । ಸ್ಫೋಟಾದಿ ಕಾರ್ಯಜನನಶಕ್ತಿಮಾನಪಿ ದಹನೋದೇಹ ಸಂಯೋಗಾದಿ ಸಹಕಾರಿ ವಿರಹಾನ್ನತಜ್ಜನಯತೀತಿ ವ್ಯಪದೇಶಸ್ಯ ದುರಪನ್ಹವತ್ವಾತ್ । ತತ್ರ ಶಕ್ತಿಶಬ್ದೇನ ನವಹ್ನಿಸ್ವರೂಪಮುಚ್ಯತೇ । ಮತುಪೋನ್ವೈಯರ್ಥ್ಯಾತ್ ನಾಪಿ ವಹ್ನಿತ್ವಂ । ತತ್ ಕಿಂಪ್ರತ್ಯಕ್ಷಮಪ್ರತ್ಯಕ್ಷಂ ವಾ । ನಾದ್ಯಃ । ದಹನ ದರ್ಶನೇ ಸ್ಫೋಟಜನನಶಕ್ತಿ ಜಿಜ್ಞಾಸಾನಸ್ಯಾತ್ । ನ ದ್ವಿತೀಯಃ । ಅಪ ಸಿದ್ಧಾಂತಾತ್ ।**

ಪ್ರತಿಕಾರ್ಯಗಳಲ್ಲಿಯೂ ಕಾರಣಗಳಿವೆ ಅವುಗಳಲ್ಲಿ ಕಾರಣತ್ವವಿದೆ ಎಂದ ಮೇಲೆ ಪ್ರತ್ಯೇಕ ಶಕ್ತಿಯೊಂದನ್ನು ದಂಡಾದಿಗಳಲ್ಲಿದೆ ಎಂಬಲ್ಲಿ ಪ್ರಮಾಣವಿಲ್ಲಾ ಎನ್ನ ಬಾರದು. ಒಂದು ವಸ್ತು(ಬಾಂಬ್)ವಿನಲ್ಲಿ ಸ್ಫೋಟ(ಒಡೆಯೋಣ)ಶಕ್ತಿ ಇದ್ದರೂ, ಅದಕ್ಕೆ ಸ್ಪರ್ಶ ಮಾಡೋಣವೋ, ಉರಿಯೋ ಸಹಕಾರಿ ಇದ್ದರೆ ಸ್ಫೋಟವಾಗುತ್ತದೆ. ಇಲ್ಲವಾದರೆ ಇಲ್ಲ ಎಂಬುದು ಅನಿವಾರ್ಯ ವ್ಯವಹಾರವಿದೆ. ಅಲ್ಲಿ ಸ್ಫೋಟ ಶಕ್ತಿಯಂತೂ ಅದೆ ಆ ಶಕ್ತಿಯು ವಹ್ನಿರೂಪವೆಂದರೆ ಉಳ್ಳದ್ದು ಎಂಬ ಮಾತು ತಪ್ಪಾಗುತ್ತದೆ. ಅದು ವಹ್ನಿತ್ವವೂ ಅಲ್ಲ ಮತ್ತು ಆಶಕ್ತಿಯು ಪ್ರತ್ಯಕ್ಷವೇ ? ಅಪ್ರತ್ಯಕ್ಷವೇ ? ಪ್ರತ್ಯಕ್ಷ ಎನ್ನಲಾಗುವುದಿಲ್ಲ. ಆವಸ್ತು ಸುಡುವುದು ಕಾಣುತ್ತಿರಲು ಸ್ಫೋಟವು ಆಗುವುದೇ ಇಲ್ಲವೆ ಎಂಬ ವಿಚಾರ ಬರುತ್ತದೆ. ಆ ವಿಚಾರ ಬರದೇ ಹೋಗಲಿ ಎಂದೂ ಬರುತ್ತದೆ. ಪ್ರತ್ಯಕ್ಷವಲ್ಲವೆಂದರೆ ಅಪಸಿದ್ಧಾಂತ. (ಕಣ್ಣಿಗೆ ಕಾಣಿಸಿ ಕಿವಿಗೆ ಕೇಳಿಸುವುದನ್ನು ಇಲ್ಲಾ ಎನ್ನಲಾಗುವುದಿಲ್ಲ.)

**ಯೋಗ್ಯವೃತ್ತಿಜಾತೇಃ ಪ್ರತ್ಯಕ್ಷತ್ವಾತ್ । ನಾಪಿ ಕಾರಣತ್ವಂ । ತಸ್ಯ ಕಾರಣಸ್ವರೂಪತ್ವೇನಾತಿರಿಕ್ತತ್ವಾಭಾವಾತ್। ಸ್ವರೂಪಸ್ಯ ಅನ್ವಯವ್ಯತಿರೇಕ ಗಮ್ಯತ್ವಾಭಾವಾಚ್ಚ । ಯದಿ ಕಾರಣತ್ವಂ ಕಾರಣ ಸ್ವರೂಪಾತಿರಿಕ್ತಂ ಅನ್ವಯ ವ್ಯತಿರೇಕಗಮ್ಯಮತೀಂದ್ರಿಯಂ ಅಂಗೀಕ್ರಿಯತೇ ತರ್ಹಿಸಿದ್ಧಂನಃ ಸಮೀಹಿತಂ । ತಸ್ಯೈವ ಶಕ್ತಿಪದಾರ್ಥತ್ವಾತ್ ।**

ಪ್ರತ್ಯಕ್ಷಾದಿ ಯೋಗ್ಯ ವಸ್ತುವಿನಲ್ಲಿರುವ ಧರ್ಮಕ್ಕೆ ಪ್ರತ್ಯಕ್ಷತೆ ಇರುವುದರಿಂದ, ಅದಕ್ಕೆ ಕಾರಣ ಸ್ವರೂಪತೆ ಹೇಳಿದರೆ ಅತಿರಿಕ್ತತೆ ಇಲ್ಲವಾಗುತ್ತದೆ. ಒಂದು ವೇಳೆ (ಒಂದು ಪಕ್ಷದಲ್ಲಿ) ಕಾರಣ ಸ್ವರೂಪಾತಿರಿಕ್ತವಾದ ಅತೀಂದ್ರಿಯವಾದ ಒಂದು ಕಾರಣತ್ವವನ್ನು ಅನ್ವಯವೇತಿರೇಕ ಮೂಲಕವಾಗಿ ಅಂಗೀಕರಿಸುತ್ತೇವೆ ಎಂದರೆ ನಮ್ಮ ಪಕ್ಷವೇ ಆಯಿತು. ಅದೇ ಶಕ್ತಿ ಪದಾರ್ಥವು ಆಗಿರುತ್ತದೆ.

**ಕಿಂಚ ಬೀಜಾದೇಃ ಭರ್ಜನೇ ಬಹುಕಾಲ ವ್ಯವಧಾನ ಸದ್ಭಾವೇಪಿ ಅಂಕುರಜನಕತ್ವಾಪತ್ತಿಃ । ನಿಯತಪೂರ್ವವೃತ್ತಿತ್ವರೂಪ ಕಾರಣತ್ವಸ್ಯ ಅನಪಾಯಾತ್ । ಶಕ್ತಿ ಪಕ್ಷೇಚ ಶಕ್ತೇರ್ವಿನಾಶಾನ್ನಾಂಕುರೋತ್ಪತ್ತಿಃ । ನಚ ಭರ್ಜನಾದೀನಾಂ ಪ್ರತಿಬಂಧಕತ್ವಾನ್ನಾಂಕುರೋತ್ಪತ್ತಿರಿತಿ ವಾಚ್ಯಂ । ತರ್ಹಿ ಪ್ರತಿಬಂಧಕಾಭಾವಸ್ಯಾಪಿ ಕಾರಣತ್ವಾಪತ್ತೇಃ । ನ ಚೇಷ್ಟಾಪತ್ತಿರಿತಿ ವಾಚ್ಯಂ । ಉತ್ಸರ್ಗಾಪವಾದಯೋಃ ಅಭಾವ ಪ್ರಸಂಗಾತ್ । ನಹಿಂಸ್ಯಾದಿ ಉತ್ಸರ್ಗಸ್ಯ ಅಗ್ನೀಷೋಮೀಯಂ ಪಶುಮಾಲಭೇತ ಇತ್ಯಪವಾದಾಭಾವ ಸಾಹಿತ್ಯೇನೈವ ಪ್ರಯೋಜಕತ್ವೇ ಅಪವಾದಸ್ಯ ಪ್ರತಿಬಂಧಕತ್ವಾಭಾವ ಪ್ರಸಂಗಾತ್ । ತಸ್ಮಾತ್ ಕಾರಣತ್ವಾತಿರಿಕ್ತ ಶಕ್ತಿಸಿದ್ಧಿಃ ।**

ಮತ್ತೂ ಬೀಜಾದಿಗಳಿಗೆ ಮೊಳಕೆ ಕಾರಣವಾಗಿದೆ. ಬೀಜಾದಿಗಳನ್ನೂ ಹುರಿದರೆ ಬಹುದಿನಗಳಾದರೂ ಮೊಳಕೆಯಾಗುವುದಿಲ್ಲ ಆಗಲಿ ಎಂದು ಆಕ್ಷೇಪ ಬರುತ್ತದೆ. ಕಾರ್ಯಕ್ಕಿಂತಲೂ ಮೊದಲಿರುವಿಕೆಯೇ ಕಾರಣದ ಲಕ್ಷಣವು ಬೀಜದಲ್ಲಿದೆ. ಆದ್ದರಿಂದ ಅಂಕುರವಾಗಲಿ ಎಂಬ ಆಕ್ಷೇಪ ಬರುತ್ತದೆ. ಶಕ್ತಿಯನ್ನು ಒಪ್ಪಿದರೆ ಆ ಬೀಜದಲ್ಲಿ ಶಕ್ತಿ ನಷ್ಟವಾಗಿರುವುದರಿಂದ ಮೊಳಕೆ ರೂಪ ಕಾರ್ಯವೂ ಆಗುವುದಿಲ್ಲ ಎನ್ನಲು ಬರುತ್ತದೆ

ಶಕ್ತಿಯನ್ನು ಒಪ್ಪುವುದಿಲ್ಲ ಹುರಿಯುವಿಕೆ ಮೊದಲಾದವುಗಳು ಪ್ರತಿಬಂಧಕವಾದ್ದರಿಂದ ಮೊಳಕೆ ಆಗಲಿಲ್ಲ ಎನ್ನುವುದಾದರೆ, ಪ್ರತಿಬಂಧಕದ ಅಭಾವವೇ ಕಾರಣವೆನ್ನಬೇಕಾಗುತ್ತದೆ. ಸಹಜವಾದ ನಿಯಮಗಳಿಗೆ ಅಪವಾದ (ವಿಶೇಷ ವಿರೋಧ)ಗಳು ಇಲ್ಲವಾಗಬೇಕಾಗುತ್ತದೆ. ಹೇಗೆಂದರೆ ಯಾವ ಪ್ರಾಣಿಗಳನ್ನು ಹಿಂಸಿಸಬಾರದು ಎಂಬುದು ಅಪವಾದ(ವಿರೋಧ)ವಿಲ್ಲದೆಯೇ ವರ್ತಿಸುವುದಾದರೆ ಉತ್ಸರ್ಗಾಪವಾದಗಳೇ ಇಲ್ಲದೇ ಹೋಗಬೇಕಾದೀತು. ಆದುದರಿಂದ ಕಾರಣತ್ವಾತಿರಿಕ್ತ ಶಕ್ತಿಯೆಂಬ ಪದಾರ್ಥವನ್ನು ಒಪ್ಪಲೇಬೇಕು.

**ತದುಕ್ತಂ ಅತ್ತೃತ್ವಾಧಿಕರಣ ಸುಧಾಯಾಂ । ತತೋಽತೀಂದ್ರಿಯಮೇವ ಮೃದಾದೀನಾಂ ಕಾರಣತ್ವಂ ಅತಿರಿಕ್ತಂ ಅಂಗೀಕರಣೀಯಂ । ತದೇವ ಶಕ್ತಿರಿತಿ ಶಕ್ತಿವಾದಿಭಿಃ (ಅಂಗೀಕ್ರಿಯತೇ) ಅಭ್ಯುಪೇಯತ ಇತಿ । ತತ್ವನಿರ್ಣಯ ಟೀಕಾಯಾಂ ದ್ವಿತೀಯ ಪರಿಚ್ಛೇದೇಪಿ। ಕಾರ್ಯೋತ್ಪತ್ತ್ಯನುಕೂಲೋಽತೀಂದ್ರಿಯಃ ಕಾರಣ ಧರ್ಮ ವಿಶೇಷಃ ಶಕ್ತಿರಿತಿ । ಅಚಿಂತ್ಯ ಶಕ್ತಿ ಭಿನ್ನಂ ಸಹಜ ಶಕ್ತಿಃ । ಕಾರಣತ್ವ ರೂಪತ್ವಾತ್ । ತಸ್ಯಾಶ್ಚ ಅಘಟಿತ ಘಟಕ ಶಕ್ತಿತ್ವಾತ್ ಇತಿ ।**

ಇದನ್ನೇ ಅತ್ತ್ರ್ಯತ್ತಾಧಿಕರಣ ಸುಧಾದಲ್ಲಿ ಹೇಳಿದ್ದಾರೆ. ಆದ್ದರಿಂದಲೇ ಮೃದಾದಿಗಳಿಗೆ ಕಾರಣತ್ವಾತಿರಿಕ್ತವಾದ ಅತೀಂದ್ರಿಯವಾದ ಒಂದನ್ನು ಒಪ್ಪಲೇಬೇಕು ಅದೇ ಶಕ್ತಿಯು ಶಕ್ತಿವಾದಿಗಳೂ ಇದನ್ನೇ ಅಂಗೀಕರಿಸಿರುತ್ತಾರೆ ತತ್ವನಿರ್ಣಯ ಟೀಕೆಯ ಎರಡನೆಯ ಪರಿಚ್ಛೇದದಲ್ಲೂ ಹೇಳಿರುತ್ತಾರೆ. ಕಾರ್ಯೋತ್ಪತ್ತಿಗೆ ಅನುಕೂಲವಾದ ಕಾರಣ ಧರ್ಮವಿಶೇಷವೇ ಶಕ್ತಿ ಎನಿಸಿರುತ್ತದೆ ಎಂದಿರುತ್ತಾರೆ. ಅಚಿಂತ್ಯ ಶಕ್ತಿಭಿನ್ನವಾದುದೇ ಸಹಜ ಶಕ್ತಿಯು ಹೀಗೆ ಹೇಳಿರುತ್ತದೆ.

**ಸಾ ಕಾರಣ ಶಕ್ತಿಃ ಪಾರಿಮಾಂಡಲ್ಯ ಭಿನ್ನ ಸರ್ವವಸ್ತುನಿಷ್ಠಾ । ತದಾಹುಃ ಪಾರಿಮಾಂಡಲ್ಯ ಭಿನ್ನಾನಾಂ ಕಾರಣತ್ವಮುದಾಹೃತಂ ಇತಿ ತಾರ್ಕಿಕಾಃ । ತಾನ್ ದೂಷಯತಿ ।**

ಪ.ಸಂ. — ಸರ್ವ ಪದಾರ್ಥನಿಷ್ಠಾ । ನಿತ್ಯಾನಿತ್ಯಭೇದೇನ ದ್ವಿವಿಧಾ । ನಿತ್ಯಗತಾ ನಿತ್ಯಾ । ಅನಿತ್ಯಗತಾ ಅನಿತ್ಯಾ ।

**ನಚ ಪರಮಾಣು ಪರಿಮಾಣರೂಪ ಪಾರಿಮಾಂಡಲ್ಯಸ್ಯ ಅಕಾರಣತ್ವಾತ್ ಕಥಂ ತತ್ರ ಕಾರ್ಯಾನುಕೂಲ ಶಕ್ತಿರಿತಿ ವಾಚ್ಯಂ । ಮೃತ್ಪಿಂಡ ಪರಿಮಾಣಸ್ಯ ಘಟ ಪರಿಣಾಮ ಹೇತುತ್ವವತ್ಪರಮಾಣು ಪರಿಮಾಣಸ್ಯಾಪಿ ದ್ವ್ಯಣುಕ ಪರಿಮಾಣ ಹೇತುತ್ವೇ ಬಾಧಕಾಭಾವಾತ್ । ಅನ್ಯಥಾದ್ವ್ಯಣುಕ ಪರಿಮಾಣಸ್ಯ ಆಕಸ್ಮಿಕತ್ವಾಪತ್ತೇಃ । ನಚ ಪರಮಾಣು ಸಂಖ್ಯಾದ್ವ್ಯಣುಕ ಪರಿಮಾಣ ಹೇತುರಿತಿ ವಾಚ್ಯಂ । ದ್ವ್ಯಣುಕ ಸಂಖ್ಯಾಯಾಃ ಆಕಸ್ಮಿಕತ್ವಾಪತ್ತೇಃ । ಗುಣಾನಾಂ ಸ ಜಾತೀಯ ಗುಣ ಜನಕತ್ವ ಸ್ವಾಭಾವ್ಯಾತ್ । ಅನ್ಯಥಾ ಪರಮಾಣೌ ರೂಪಾದ್ಯನೇಕ ಗುಣಾಂಗೀಕಾರೋನಸ್ಯಾತ್ ।**

ಅದೇ ಕಾರಣ ಶಕ್ತಿಯೇ ಪಾರಿಮಾಂಡಲ್ಯ (ಅಳತೆ) ಭಿನ್ನವಾದ ಸರ್ವವಸ್ತುಗಳಲ್ಲಿರುತ್ತದೆ. ತಾರ್ಕಿಕರು ಪಾರಿಮಾಂಡಿಲ್ಯ ಭಿನ್ನವಾದವುಗಳಿಗೆ ಕಾರಣತ್ವವೆಂದು ಹೇಳಿರುತ್ತಾರೆ. ಅದನ್ನು ನಿರಾಕರಿಸುತ್ತಾರೆ ಸರ್ವ ಪದಾರ್ಥಗಳಲ್ಲೂ ಅಕಾರಣತ್ವರೂಪ ಶಕ್ತಿಯು ಇರುತ್ತದೆ. ಪರಮಾಣು ಪರಿಮಾಣರೂಪ ಪಾರಿಮಾಂಡಲ್ಯಕ್ಕೆ ಕಾರ್ಯಾನುಕೂಲರೂಪವಾದ ಶಕ್ತಿಯು ಹೇಗಿರುತ್ತದೆ ಹಾಗೆನ್ನಬಾರದು. ಮಣ್ಣಿನ ಮುದ್ದೆಗೆ ಹೇಗೆ ಘಟಕಾರಣತ್ವವೋ ಹಾಗೆ ಪಾರಿಮಾಂಡಿಲ್ಯಕ್ಕೆ ದ್ವ್ಯಣುಕ ಪರಿಮಾಣ ಕಾರಣತೆಯು ಎಂದರೆ ಬಾಧಕವಿಲ್ಲವು ಹಾಗೊಪ್ಪದಿದ್ದರೆ ದ್ವ್ಯಣುಕ ಪರಿಮಾಣಕ್ಕೆ ಆಕಸ್ಮಿಕತೆ (ಕಾರಣವಿಲ್ಲದೇ ಆಗುವಿಕೆ) ಬರಲಿ. ಪರಮಾಣು ಸಂಖ್ಯಾದ್ವ್ಯಣುಕ ಪರಿಮಾಣ ಕಾರಣವೆನ್ನುತ್ತೀನೆ. ಎನ್ನಬಾರದು ದ್ವ್ಯಣುಕ ಸಂಖ್ಯೆಗೆ ಆಕಸ್ಮಿಕತಾ ಬರಲಿ, ಏಕೆಂದರೆ ಗುಣಗಳಿಗೆ ಸಜಾತೀಯ ಗುಣ ಜನಕತ್ವವು ಸ್ವಾಭಾವಿಕವಾಗಿರುವುದರಿಂದ ಇಲ್ಲವಾದರೆ ಪರಮಾಣುವಿನಲ್ಲಿ ಅನೇಕ ಗುಣಾಂಗೀಕಾರವೇ ಇಲ್ಲವಾಗಬೇಕಾದೀತು.

**ಏಕೇನೈವಗುಣೇನ ದ್ವ್ಯಣುಕಾದಾವನೇಕ ಗುಣೋತ್ಪತ್ತಿ ಸಂಭವಾದಿತ್ಯಲಂ। ಬೀಜಾದಿಗತ ಶಕ್ತೇಃ ಬೀಜನಾಶೇನ ನಾಶಾತ್ ಬೀಜ ಅನಾಶೇಪಿ ಭರ್ಜನಾದಿ ವಿರೋಧಿ ಸಮವಧಾನೇನ ನಾಶಾಚ್ಚೇತಿ ಭಾವಃ। ನ ಚದಾವದಗ್ಧವೇತ್ರ ಬೀಜಸ್ಯಕದಲೀಕಾಂಡ ಜನನಶಕ್ತಿಃ ಅಸ್ತಿ ಸಾಚಾಗಂತುಕಾನ ಸಹಜೇತಿ ವಾಚ್ಯಂ। ವೇತ್ರಬೀಜಜನ್ಯ ಭಸ್ಮನ ಏವ ಜನಕತ್ವೇನ ಬೀಜಸ್ಯ ಅಜನಕತ್ವಾತ್। ತದುಕ್ತಂ ಜಿಜ್ಞಾಸಾಧಿಕರಣ ಸುಧಾಯಾಂ। ನಚ ವಕ್ತವ್ಯಂ ದಾವದಹನ ದಗ್ಧವೇತ್ರಬೀಜಾನಾಂ ಕದಲೀ ಕಾಂಡ ಜನನಂ ಪ್ರತಿ ಸಾಮರ್ಥ್ಯಮುಪಲಬ್ಧಮಿತಿ। ಪಾಕೇನ ದ್ರವ್ಯಾಂತರೋತ್ಪತ್ತೇಸ್ತೇಷಾಮಬೀಜತ್ವಾದಿತಿ। ಆಧೇಯ ಶಕ್ತಿಂ ನಿರೂಪಯತಿ।**

ಪ.ಸಂ.—ಅನ್ಯಾಹಿತಶಕ್ತಿಃ ಆಧೇಯಶಕ್ತಿಃ ಉದಾಹರತಿ। ಸಾಚ ಪ್ರತಿಷ್ಠಾದಿನಾಪ್ರತಿಮಾದೌ।

**ಪ್ರತಿಷ್ಠಿತಂ ಪೂಜಯೇದಿತ್ಯಾದಿನಾ ಪ್ರತಿಷ್ಠಿತಾಯಾಃ ಏವ ಪ್ರತಿಮಾಯಾಃ ಪೂಜಾವಿಹಿತಾ।**

ಒಂದೇ ಸಾರಿಯೇ ಅಲ್ಲಿಯ ಗುಣದಿಂದ ದ್ವ್ಯಣುಕಾದಿಗಳಲ್ಲಿ ಅನೇಕ ಗುಣಗಳಾಗಲಿ ಎಂಬ ಆಕ್ಷೇಪ ಬರುವುದರಿಂದ ಇಷ್ಟೆಸಾಕು ಇತ್ಯಾದ್ಯಾಕ್ಷೇಪಗಳಿಂದ ಪಾರಿಮಾಂಡಿಲ್ಯಕ್ಕೂ ಕಾರಣತೆಯನ್ನು ಒಪ್ಪಬೇಕು. ಇಂತಹ ಸಹಜ ಶಕ್ತಿಯು ಎರಡು ವಿಧ. ನಿತ್ಯ ಹಾಗೂ ಅನಿತ್ಯವೆಂದೂ, ನಿತ್ಯವಸ್ತುಗಳಲ್ಲಿರುವವುಗಳು ನಿತ್ಯವಾದವುಗಳು, ಅನಿತ್ಯ ವಸ್ತುಗಳಲ್ಲಿರುವವುಗಳು ಅನಿತ್ಯಗಳು. ಬೀಜಾದಿಗಳು ನಾಶವಾದರೆ ಭರ್ಜನ (ಹುರಿಯೋಣವೇ ಮೊದಲಾದ ವಿರೋಧ) ಒದಗಿದರೆ ಶಕ್ತಿನಾಶವಾಗುವುದು ಕಂಡಿರುವುದರಿಂದ ಕಾಡಕಿಚ್ಚಿನಿಂದ ಸುಟ್ಟ ಬಿದರಿನ ಬೀಜಕ್ಕೆ ಬಾಳೇಗಿಡ ಹುಟ್ಟಿಸುವ ಶಕ್ತಿ ಇದೆ, ಅದು ಆಗಂತುಕನ ಸಹಜ ಶಕ್ತಿಯಲ್ಲಾ ಎಂಬುದು ಸರಿಯಲ್ಲ. ಬಿದರಿನ ಬೀಜದ ಬೂದಿಗೆ ಬಾಳೇಗಿಡ ಹುಟ್ಟಿಸುವ ಶಕ್ತಿಯಾಗಲಿ ಬೀಜಕ್ಕಿರುವುದಿಲ್ಲವಾದ್ದರಿಂದ, ಇದನ್ನು ಜಿಜ್ಞಾಸಾಧಿಕರಣ ಸುಧಾದಲ್ಲಿ ಹೇಳಿರುತ್ತದೆ. ಕಾಡಕಿಚ್ಚಿನಿಂದ ಸುಟ್ಟ ಬಿದರಿನ ಬೀಜಗಳಿಗೆ ಬಾಳೇಗಿಡ ಹುಟ್ಟಿಸುವ ಶಕ್ತಿಯು ಕಂಡಿದೆ ಎಂದು ಹೇಳಬಾರದು. ಪಾಕಾದಿಗಳಿಂದ ದ್ರವ್ಯಾಂತರ ಹುಟ್ಟಿದರೆ ಪಾಕಾದಿಗಳಿಗೆ ಬೀಜತ್ವವಿರುವುದಿಲ್ಲವಾದ್ದರಿಂದ.

ಆಧೇಯ ಶಕ್ತಿಯನ್ನು ಹೇಳುತ್ತಾರೆ. ಅನ್ಯರಿಂದ ಬಂದ ಶಕ್ತಿಯು ಆಧೇಯ ಶಕ್ತಿಯು. ಉದಾಹರಣ ತೋರುತ್ತಾರೆ. ಆ ಶಕ್ತಿಯು ಪ್ರತಿಷ್ಠಾದಿಗಳಿಂದ ಪ್ರತಿಮಾದಿಗಳಲ್ಲಿ ಪ್ರಸಿದ್ಧವಾಗಿದೆ. ಪ್ರತಿಷ್ಠಿತವಾದುದನ್ನೇ ಪೂಜಿಸಬೇಕು ಎಂಬ ವ್ಯಕ್ತಿಗಳನ್ನನುಸರಿಸಿ ಪ್ರತಿಷ್ಠಿತ ಪ್ರತಿಮೆಗಳನ್ನೇ ಪೂಜಿಸಬೇಕು.

**ತತ್ರ ಪ್ರತಿಷ್ಠಾರೂಪ ಕ್ರಿಯಯಾ ಪ್ರತಿಮಾಯಾಂ ಪೂರ್ವಮವಿದ್ಯಮಾನಮೇವ ದೇವತಾ ಸನ್ನಿಧಾನಂ ಜಾಯತೇ। ತದೇವ ಆಧೇಯ ಶಕ್ತಿರಿತ್ಯರ್ಥಃ। ತದುಕ್ತಂ ತಂತ್ರಸಾರೇ। ಪೂರ್ವೋಕ್ತ ವಿಧಿನಾಽಭ್ಯರ್ಚ್ಯ ಪ್ರತಿಮಾಂ ಶಿಷ್ಯಮೇವವಾ। ಸ್ನಾಪಯೇತ್ಪೂರ್ವಮಂತ್ರಾಯಾಂ ಜಪ್ತೋನೂನಸ್ಸಹಸ್ರತಃ। ಪ್ರತಿಮಾಯಾಂ ಸನ್ನಿಧಿಕೃತ ಶಿಷ್ಯೇಮಾಹಾತ್ಮ್ಯಕೃದ್ಭವೇತ್ ಇತಿ। ಪೂರ್ವಮೀಮಾಂಸಾಯಾಮಪಿ ವ್ರೀಹೀನ್ ಪ್ರೋಕ್ಷತಿ ವ್ರೀಹೀನ್ನವಹಂತಿ। ಪುರೋಡಾಶಂಪರ್ಯಗ್ನೀ ಕರೋತಿ। ಯೂಪಂತಕ್ಷತಿ। ಯೂಪಮಷ್ಟಾಶ್ರೀಕರೋತಿ। ಪದಪಾಂಸುನಾಜಮನಕ್ತೀ। ಸಪ್ತಮಂ ಪದಮಧ್ವರ್ಯುಃ ಅಂಜಲಿನಾಗೃಹ್ಣಾತಿ। ಬರ್ಹಿಷ್ಷಿಹವೀಂಷ್ಯಾಸಾದಯತಿ। ಆಜ್ಯಮುಪ್ಲಾವಯತಿ ಇತ್ಯಾದೀನಾಂ ಸಂಸ್ಕಾರ ಕರ್ಮತ್ವೋಕ್ತೇಃ।**

ಪ್ರತಿಮೆಯಲ್ಲಿ ಪ್ರತಿಷ್ಠೆಕಾರ್ಯದಿಂದ ಮೊದಲ ವಿದ್ಯಮಾನವಾದ ದೇವತಾ ಸಾನ್ನಿಧ್ಯವು ಬರುತ್ತದೆ. ಅದುವೇ ಆಧೇಯ ಶಕ್ತಿಯು ಎನ್ನಿಸುತ್ತದೆ. ಅದನ್ನೇ ತಂತ್ರಸಾರದಲ್ಲಿ ಹೇಳಿರುತ್ತದೆ. ಪ್ರತಿಮೆಯನ್ನಾಗಲಿ ಶಿಷ್ಯನನ್ನಾಗಲಿ ಪೂಜಿಸಿ ಸಹಸ್ರ ಆವರ್ತಿಗೆ ಕಡಿಮೆ ಇಲ್ಲದೇ ಆ ಮಂತ್ರಗಳನ್ನು ಜಪಿಸಿ ಅಭಿಷೇಕ ಮಾಡಬೇಕು. ಹಾಗಾದರೆ ಪ್ರತಿಮೆಯಲ್ಲಿ ಸನ್ನಿಧಾನವು ಶಿಷ್ಯನಲ್ಲಿ ಮಾಹಾತ್ಮ್ಯವು ಉಂಟಾಗುತ್ತದೆ ಎಂದೂ ಮತ್ತೂ ಪೂರ್ವಮೀಮಾಂಸೆಯಲ್ಲಿ ವ್ರೀಹಿಗಳನ್ನು ಪ್ರೋಕ್ಷಿಸುತ್ತಾರೆ. ಯೂಪವನ್ನು ಹೊಡೆಯುತ್ತಾರೆ. ಯೂಪವನ್ನು ಎಂಟುಸಲ ತೊಳೆಯುತ್ತಾರೆ. ಅಧ್ವರ್ಯು ಏಳನೇ ಪದವನ್ನು ಕೈಗಳಲ್ಲಿ ತೆಗೆದುಕೊಳ್ಳುತ್ತಾನೆ. ದರ್ಭೆಗಳಲ್ಲಿ ಹವಿಸ್ಸನ್ನು ತರುತ್ತಾರೆ. ತುಪ್ಪವನ್ನು ಕಲಕುತ್ತಾರೆ. ಇತ್ಯಾದಿಗಳ ಸಂಸ್ಕಾರ ಕರ್ಮಗಳನ್ನು ಹೇಳಿರುತ್ತದೆ

**ಏವಂ ಕಾಮಿನೀ ಚರಣಾಭಿಘಾತ ದೋಹಲಾದಿ ಸಂಬಂಧೇನ ಅಶೋಕ ವೃಕ್ಷೇ ಅಕಾಲಿಕ ಕುಸುಮೋತ್ಪತ್ತಿಃ। ಔಷಧ ಲೇಪನೇನಕಾಂಸ್ಯಪಾತ್ರಸ್ಯ ಧಾವನಂ। ಧೂಮಾದಿ ವಾಸನೇನ ಮಾಲತೀಲತಾಯಾಃ ಕುಸುಮೋತ್ಪತ್ತಿಶ್ಚ ದೃಶ್ಯತೇ। ನಚೈತೇತತ್ತತ್ಪದಾರ್ಥಮಾತ್ರಾದ್ಭವಂತಿ। ಅತ ಆಧೇಯ ಶಕ್ತಿ ಸಿದ್ಧಿಃ। ನಚ ಸರ್ವತ್ರ ಪ್ರತಿಷ್ಠಾದಿಧ್ವಂಸ ಏವಕಾರಣಂ ಅಸ್ತ್ವಿತಿ ವಾಚ್ಯಂ। ಯಾಗಾತ್ಸ್ವರ್ಗ ಇತ್ಯಾದಾವಪಿ ಯಾಗಧ್ವಂಸಸ್ಯೈವ ಕಾರಣತ್ವಾಪತ್ತ್ಯಾ ಅಪೂರ್ವಾಸಿದ್ಧಿ ಪ್ರಸಂಗಾತ್। ನಚ ಯಾಗಾದಿತಿ ಪಂಚಮ್ಯಾ ಸ್ವರ್ಗಸಾಧನತ್ವಮವಗತಂ। ತಸ್ಮಾಶುವಿನಾಶಿನಃ ಕಾರ್ಯಾಂತರ ಕಾಲಾಂತರ ಭಾವಿಸ್ವರ್ಗ ಜನಕತ್ವಾನುಪಪತ್ತ್ಯಾ ಮಧ್ಯೇ ವ್ಯಾಪಾರಃ ಕಲ್ಪನೀಯಃ।**

ಹೀಗೆ ಸುಂದರಿಯಾದವಳು ಕಾಲಿನಿಂದ ಒದೆಯುವಿಕೆ, ದೋಹನಾದಿಗಳಿಂದ ಅಶೋಕ ವೃಕ್ಷದಲ್ಲಿ ಅಕಾಲ ಪುಷ್ಪೋತ್ಪತ್ತಿಯು ಕಂಡಿದೆ. ಔಷಧ ಲೇಪನದಿಂದ ಕಂಚಿನ ಪಾತ್ರೆಯ ಚಲನವು, ಹೊಗೆಯ ಮೊದಲಾದ ವಾಸನೆಯಿಂದ ಮಾಲತೀ ಬಳ್ಳಿಯಲ್ಲಿ ಪುಷ್ಪಗಳ ಉತ್ಪತ್ತಿಯು ಕಾಣುತ್ತದೆ. ಇವುಗಳೆಲ್ಲಾ ಆ ಪದಾರ್ಥಗಳ ಮಾತ್ರದಿಂದಲೇ ಆಗುವುದಿಲ್ಲ, ಆದ್ದರಿಂದ ಆಧೇಯ ಶಕ್ತಿ ಎಂಬುದು ಸಿದ್ಧಿಸುತ್ತದೆ. ಎಲ್ಲಡೆಯಲ್ಲೂ ಪ್ರತಿಷ್ಠಾದಿಗಳ ಧ್ವಂಸ(ಮುಗಿಯೋಣವೇ) ಕಾರಣ ಎನ್ನಬಹುದಲ್ಲವೇ ಎಂದರೆ ಸರಿಯಲ್ಲ, ಹಾಗೆನ್ನಬಾರಲು, ಯಾಗ ಸಮಾಪ್ತಿಗೆ ಸ್ವರ್ಗ ಕಾರಣತೆ ಒಂದು ಅಪೂರ್ವ(ಪುಣ್ಯ ವಿಶೇಷ)ವು ಸಿದ್ಧಿಸದೇ ಹೋಗಲಿ, ಯಾಗಾತ್ ಎಂಬ ಪಂಚಮಿ ಯಿಂದ ಸ್ವರ್ಗಸಾಧನತೆ ಗೊತ್ತಾಗಿದೆ. ಯಾಗಕ್ಕೆ ಜಾಗ್ರತಿ ಧ್ವಂಸ ಹೇಳಿದರೆ, ಜಾಗ್ರತಿ ನಾಶವಾಗುವ ಕಾರಣದಿಂದ ಕಾರ್ಯ ಅಯುಕ್ತವಾಗಿ ಮಧ್ಯದಲ್ಲಿ ಒಂದು ವ್ಯಾಪಾರ ವನ್ನು ಕಲ್ಪಿಸಬೇಕಾಗುತ್ತದೆ.

**ಸಚನ ಧ್ವಂಸಃ । ಪ್ರತಿಯೋಗಿತದಭಾವಯೋಃ ಏಕತ್ರಾಜನಕತ್ವಾತ್। ಅತೋ ಮಧ್ಯೇ ಅಪೂರ್ವಂ ಕಲ್ಪ್ಯತೇ । ಪ್ರತಿಷ್ಠಿತಂ ಪೂಜಯೇದಿತ್ಯತ್ರ ಭೂತಾರ್ಥಕತ್ತಪ್ರತ್ಯಯೇನ ಧ್ವಂಸಸ್ಯೈವ ಕಾರಣತ್ವಾವಗಮಾದಿತಿವಾಚ್ಯಂ ತತ್ವಜ್ಞಾನಾನ್ನಿಶ್ರೇಯಸಾಧಿಗಮಃ ಇತ್ಯಾದೌ ಪಂಚಮ್ಯಾಃ ಪ್ರಯೋಜ ಕತ್ವವತ್ಯಾಗಾತ್ಸ್ವರ್ಗ ಇತ್ಯಾದಾವಪಿ ಪ್ರಯೋಜಕತ್ವೇಪಂಚಮ್ಯುಪ ಪತ್ತೌ ಕಾರಣತ್ವಸ್ಯತದರ್ಥತ್ವಾಸಂಭಾವಾತ್ । ತಥಾ ಚ ಯಾಗಸ್ಯ ಧ್ವಂಸ ಜನಕತ್ವಂ ಧ್ವಂಸಸ್ಯ ಸ್ವರ್ಗಜನಕತ್ವಂ ಅಸ್ತು । ಕಿಂಚ ಭಾವಾಭಾವಯೋಃ ಮಧ್ಯೇಭಾವೋಲಘೀಯಾನಿತಿನ್ಯಾಯೇನ ಭಾವಕಲ್ಪನಮೇವ ಲಘು ।**

ಆ ವ್ಯಾಪಾರವೆಂಬುದು ಧ್ವಂಸವಾಗುವುದಿಲ್ಲ ಅಭಾವಗಳಿಗೆ ಏಕತ್ರ ಜನಕತೆ ಅಸಂಭವವಾದ್ದರಿಂದ. ಮಧ್ಯದಲ್ಲಿ ಒಂದು ಅಪೂರ್ವವನ್ನು ಕಲ್ಪಿಸಬೇಕಾಗುತ್ತದೆ. 'ಪ್ರತಿಷ್ಠಿತಂ ಪೂಜಯೇತ್' ಎಂಬಲ್ಲಿ ಭೂತಾರ್ಥಕತ್ತ ಪ್ರತ್ಯಯದಿಂದ ಧ್ವಂಸಕ್ಕೆ ಕಾರಣತೆ ಗೊತ್ತಾಗುತ್ತದೆ. ಹೀಗೆ ಎನ್ನುತ್ತೇವೆ ಎಂದರೆ ತಪ್ಪು. ಹಾಗೆನಬಾರದು, ತತ್ವಜ್ಞಾನದಿಂದ ಮೋಕ್ಷ ಪ್ರಾಪ್ತಿಯು ಇತ್ಯಾದಿಗಳಲ್ಲಿ ಪಂಚಮೀಗೆ ಪ್ರಯೋಜಕತ್ವ ದಂತೇ ಯೋಗಾತ್ ಸ್ವರ್ಗಃ ಎಂಬಲ್ಲಿಯೂ ಸಹ ಪ್ರಯೋಜಕತ್ವಾರ್ಥದಲ್ಲಿ ಪಂಚಮಿ ಯುಕ್ತವಾಗುತ್ತಿರಲು ಕಾರಣತ್ವಕ್ಕೆ ತದರ್ಥತೆಯು ಅಸಂಭವವಾಗುತ್ತದೆ. ಒಟ್ಟಿನಲ್ಲಿ ಯಾಗಕ್ಕೆ ಧ್ವಂಸ ಜನಕತೆ, ಧ್ವಂಸಕ್ಕೆ ಸ್ವರ್ಗ ಜನಕತೆ, (ಇರಲಿ) ಆದಂತಾಯಿತು ಮತ್ತೂ ಭಾವಾಭಾವಗಳ ಮಧ್ಯದಲ್ಲಿ ಭಾವವೇ ಲಘು ಎಂಬ ನ್ಯಾಯಾನುಸಾರ ಭಾವವನ್ನು ಕಲ್ಪಿಸುವುದೇ ಲಘು.

**ಪ್ರತಿಷ್ಠಿತಮಿತ್ಯತ್ರ ಕ್ತಪ್ರತ್ಯಯಸ್ತು ದೇವತಾ ಸನ್ನಿಧಾನಾತ್ ಪೂರ್ವ ಕಾಲೀನತ್ವಮಾಹ ಪ್ರತಿಷ್ಠಾಯಾಃ। ನತು ಧ್ವಂಸಸ್ಯ ಕಾರಣತ್ವಂ ಅಪಿ। ಅಸಾಮರ್ಥ್ಯಾತ್। ತಸ್ಮಾತ್ ಪ್ರತಿಮಾದೌ ಸನ್ನಿಧಾನರೂಪಾಧೇಯ ಶಕ್ತಿಃ ಸಿದ್ಧಿಃ। ಸನ್ನಿಧಾನಂತು ಸಾಮರ್ಥ್ಯ ವ್ಯಂಜನಂ। ತದುಕ್ತಂ। ಸನ್ನಿಧಾನಂತು ತತ್ಪ್ರೋಕ್ತಂ ಸಾಮರ್ಥ್ಯ ವ್ಯಂಜನಂ ಹರೇರಿತಿ। ಪದಶಕ್ತಿಂ ನಿರೂಪಯತಿ।**

ಪ್ರತಿಷ್ಠಿತಂ ಎಂಬಲ್ಲಿ 'ಕ್ತ' ಪ್ರತ್ಯಯವು ದೇವತಾ ಸನ್ನಿಧಾನಕ್ಕಿಂತಲೂ ಪೂರ್ವಕಾಲವನ್ನು ಹೇಳುತ್ತದೆ, ಆಗಲಿ ಧ್ವಂಸಕ್ಕೆ ಕಾರಣತ್ವವನ್ನು ಹೇಳಲಿಲ್ಲ. ಏಕೆಂದರೆ ಸಾಮರ್ಥ್ಯವಿಲ್ಲವಾದ್ದರಿಂದ, ಆದುದರಿಂದ ಪ್ರತಿಮಾದಿಗಳಲ್ಲಿ ಸನ್ನಿಧಾನ ರೂಪ ಆಧೇಯ ಶಕ್ತಿಯು ಸಿದ್ಧಿಸಿರುತ್ತದೆ. ಸನ್ನಿಧಾನವಾದರೂ ಸಾಮರ್ಥ್ಯ ವ್ಯಂಜಕವೆ ಸನ್ನಿಧಾನವು ಎಂದು.

ಪ.ಸಂ.—ಪದ ಪದಾರ್ಥಯೋಃ ವಾಚ್ಯ ವಾಚಕಭಾವಃ ಸಂಬಂಧಃ ಪದಶಕ್ತಿಃ।

ಪದಶಕ್ತಿಯನ್ನು ನಿರೂಪಿಸುತ್ತಾರೆ. ('ಸುಪ್' ಪ್ರತ್ಯಯಗಳು 'ತಿಂಗ್' ಪ್ರತ್ಯಯಗಳ ಅಂತ್ಯವಾಗುಳ್ಳವುಗಳೇ ಪದಗಳು) ಇಲ್ಲಿ ಶಕ್ತಿಯೆಂದರೆ ಪದಪದಾರ್ಥಗಳ ವಾಚ್ಯ ವಾಚಕ ಭಾವ ಸಂಬಂಧವು.

**ಗವಾದಿಪದಾನಿ ಗವಾದಿರೂಪಾರ್ಥಜ್ಞಾನಜನಕಾನಿದೃಶ್ಯಂತೇ। ಅನ್ಯಥಾ ತತ್ಪದ ಪ್ರಯೋಗವೈಯರ್ಥ್ಯ ಪ್ರಸಂಗಾತ್। ಪರಬೋಧನೇ ಪ್ರಕಾರಾಂತರಾಭಾವಾಚ್ಚ। ಪದೇನ ಪದಾರ್ಥಜ್ಞಾನಂ ಚ ಸಂಬಂಧಂ ವಿನಾ ಅನುಪಪನ್ನಂ। ಅನ್ಯಥಾ ಅತಿಪ್ರಸಂಗಾಪತ್ತೇಃ। ಅತಃ ಪದಾರ್ಥ ಬೋಧಾನುಕೂಲಾವಾಚಕತ್ವಶಕ್ತಿಃ ಪದಪದಾರ್ಥ ಸಂಬಂಧರೂಪಾಗವಾದಿ ಪದೇಷು ಅಂಗೀಕರ್ತವ್ಯೇತ್ಯರ್ಥಃ। ನನು ಅಸ್ಮಾತ್ ಪದಾದಯಮರ್ಥೋ ಬೋದ್ಧವ್ಯಃ ಇತೀಶ್ವರೇಚ್ಛಾರೂಪಾ ಪದೇಷು ಶಕ್ತಿಃ। ನತು ಪದಾರ್ಥಾಂತರಂ ಮಾನಾಭಾವಾದಿತಿ ಚೇನ್ನ।**

ಗೌಃ ಇತ್ಯಾದಿ ಪದಗಳಿಗೆ ಗೋವೇ ಮೊದಲಾದ ಪದಾರ್ಥ ಜ್ಞಾನ ಹುಟ್ಟಿಸುವಿಕೆ ಕಂಡಿರುತ್ತದೆ. ಹಾಗಿಲ್ಲವಾದರೆ ಪದಗಳ ಪ್ರಯೋಗವೇ ವ್ಯರ್ಥವಾಗಬೇಕಾದೀತು ಮತ್ತು ಪರರಬೋಧನೆಗೆ ಪ್ರಕಾರಾಂತವೇ ಇಲ್ಲವಾದ್ದರಿಂದ, ಪದದಿಂದ ಪದಾರ್ಥ ಜ್ಞಾನವು, ಪದ, ಅರ್ಥಗಳಿಗೆ ಸಂಬಂಧವಿಲ್ಲದೇ ಕೊಡುವುದಿಲ್ಲವು. ಇಲ್ಲವಾದರೆ ಅತಿ ಪ್ರಸಂಗ ಒದಗಬೇಕಾಗುತ್ತದೆ. ಆದ್ದರಿಂದ ಪದಪದಾರ್ಥ ಜ್ಞಾನಾನುಕೂಲವಾದ ವಾಚಕತ್ವರೂಪ ಶಕ್ತಿಯನ್ನು ಪದಗಳಲ್ಲಿ ಒಪ್ಪಬೇಕು. ಅದೇ ಪದ ಪದಾರ್ಥ ಸಂಬಂಧ ರೂಪವಾದುದು, ಈಪದವು ಇಂತಹ ಅರ್ಥವನ್ನೂ ಬೋಧಿಸಬೇಕು ಎಂಬ ಈಶ್ವ ರೇಚ್ಛೆಯೇ ಶಕ್ತಿಯು ಇಷ್ಟೇ ಸಕಲ ವ್ಯವಹಾರವನ್ನು ಸಾಗಿಸುತ್ತಿರಲು ಪದಾರ್ಥಾಂತರ ವಾಗಿ ಏಕೆ ಒಪ್ಪಬೇಕು, ಪ್ರಮಾಣವು ಇಲ್ಲವೆಂದುಎನ್ನಬಾರದು.

**ಈಶ್ವರೇಚ್ಛಾಯಾಃ ಕಾರ್ಯಮಾತ್ರ ಸಾಧಾರಣ ಕಾರಣತ್ವೇನಶಾಬ್ದ ಜ್ಞಾನಮಾತ್ರಹೇತು ಜ್ಞಾನ ವಿಷಯ ಶಕ್ತಿತ್ವಾನುಪಪತ್ತೇಃ । ನಚೇಚ್ಛಾ-ತ್ವೇನ ಸಾಮಾನ್ಯ ಕಾರಣತಾ ಶಕ್ತಿತ್ವೇನ ವಿಶೇಷಕಾರಣತೇತಿವಾಚ್ಯಂ। ಅಸ್ಮಾತ್ಪದಾದಯಮರ್ಥೋಬೋದ್ಧವ್ಯ ಇತೀಶ್ವರೇಚ್ಛಾ ವಿಷಯತ್ವವತ್ತ ಜ್ಞಾನ ವಿಷಯತ್ವಸ್ಯಾಪಿ ಶಕ್ತಿತ್ವಾಪತ್ತೇಃ । ಕಾಲಾದೃಷ್ಟಾದೀನಾಂ ಅಪಿ ವಿಶೇಷ ಧರ್ಮೇಣ ಪದಶಕ್ತಿತ್ವಾಪತ್ತೇಶ್ಚ । ನಿರೀಶ್ವರವಾದಿನಾಂ ಶಕ್ತ್ಯಭಾವ ಪ್ರಸಂಗಾಚ್ಚ । ನಚ ತೇಷಾಂ ಅಪಭ್ರಂಶವತ್ ಶಕ್ತಿಭ್ರಮ ಇತಿವಾಚ್ಯಂ। ಭ್ರಾಂತೇರಭ್ರಾಂತಿ ಪೂರ್ವಕತ್ವನಿಯಮೇನ ಶಕ್ತಿ ಪ್ರಮಾಯಾಃ ಕ್ವಾಪ್ಯ-ಭಾವೇತೇಷಾಂ ಶಕ್ತಿಭ್ರಮಾನುಪಪತ್ತೇಃ ।**

ಈಶ್ವರೇಚ್ಛೆಗೆ ಕಾರ್ಯ ಮಾತ್ರ ಸಾಮಾನ್ಯ ಕಾರಣತೆಯಿರುವುದರಿಂದ, ಶಬ್ದ ಜ್ಞಾನ ಮಾತ್ರ ಕಾರಣವಾದ ಜ್ಞಾನ ಇಚ್ಛಾ ವಿಷಯವಾದುದು ಶಕ್ತಿ ಎಂಬುದು ಯುಕ್ತವಾಗುವದಿಲ್ಲ. ಇಚ್ಛಾತ್ವೇನ ಸಾಮಾನ್ಯ ಕಾರಣವು ಶಕ್ತಿತ್ವೇನ ವಿಶೇಷ ಕಾರಣವು ಹೀಗೆನ್ನುತ್ತೇವೆ. ಅಂದರೆ ತಪ್ಪು. ಈ ಪದದಿಂದ ಈ ಅರ್ಥವು ತಿಳಿಯತಕ್ಕದ್ದು ಎಂಬ ಈಶ್ವರೇಚ್ಛಾ ವಿಷಯತ್ವದಂತೇ ಜ್ಞಾನ ವಿಷಯತ್ವಕ್ಕೂ ಶಕ್ತಿತ್ವ ಬರಲಿ ಮತ್ತು ಕಾಲ ಅದೃಷ್ಟಾದಿಗಳಿಗೂ ವಿಶೇಷ ಧರ್ಮದಿಂದ ಪದ ಶಕ್ತಿತ್ವ ಬರಲಿ ಎಂಬ ಆಪತ್ತಿ ಬಂದೇ ಬರುತ್ತದೆ. ನಿರೀಶ್ವರವಾದಿಗಳ ಪಕ್ಷದಲ್ಲಿ ಶಕ್ತಿಯೇ ಇಲ್ಲವಾಗಬೇಕಾಗುತ್ತದೆ. ಅವರಿಗೆ ಅಪಭ್ರಂಶದಂತೇ ಶಕ್ತಿ ಭ್ರಮವೆನ್ನುತ್ತೇವೆ. ಅಂದರೆ ಎನ್ನಬಾರದು (ಭ್ರಾಂತೇರಭ್ರಾಂತಿ ಪೂರ್ವಕತ್ವ) ಅವರ ಮತದಲ್ಲಿ ಭ್ರಾಂತಿಗೆ ಪ್ರಮಾ ಪೂರ್ವಕತೆ ನಿಯಮದಿಂದ ಶಕ್ತಿ ಪ್ರಮಕ್ಕೂ ಎಲ್ಲೂ ಇಲ್ಲದೆ ಅವರಿಗೆ ಶಕ್ತಿ ಭ್ರಮವೂ ಉಪಪನ್ನವಾಗುವುದಿಲ್ಲಾ.

**ತಮೈವಾಶಕ್ತಿರೂಪಾಯಾಂ ಈಶ್ವರೇಚ್ಛಾಯಾಂ ಶಕ್ತಿತ್ವಾರೋಪೇಣ ಭ್ರಾಂತತ್ವ ಸಂಭವಾಚ್ಚ । ನನು ಪದಪದಾರ್ಥಯೋಃ ಯದಿಶಕ್ತಿರೌತ್ಪತ್ತಿಕೀಸ್ಯಾತ್ ತದಾ ಅವಿದಿತ ಶಕ್ತಿಕಸ್ಯಾಪಿ ಪದಾದನ್ವಯ ಬೋಧೋಸ್ಯಾತ್ । ಸ್ವಾಭಾವಿಕ ಶಕ್ತೇರನಪಾಯಾತ್ । ನಹಿ ಅಗ್ನಿಃ ಅವಿದಿತ ಶಕ್ತಿಃ ನದಹತೀತಿ ಚೇನ್ನ । ಧೂಮಸ್ಯವಹ್ನಿನಾ ಸ್ವಾಭಾವಿಕ ಸಂಬಂಧ ಸದ್ಭಾವೇಪಿ ಜ್ಞಾತಸ್ಯೈವ ವಹ್ನಿ ಅನುಮಿತಿಜನಕತ್ವಂ ನಾಜ್ಞಾತಸ್ಯತದ್ವದುಪಪತ್ತೇಃ। ತಸ್ಮಾತ್ಪದ ಪದಾರ್ಥಯೋಃ ಸ್ವಾಭಾವಿಕ ಸಂಬಂಧ ಏವ ಶಕ್ತಿಃ । ತದುಕ್ತಮನುವ್ಯಾಖ್ಯಾನೇ । ನಿತ್ಯಯೋಗೋಪಿಶಬ್ದಾನಾಂ ಅರ್ಥೈರ್ನೈವ ವಿದುಸ್ಮೃತ ಇತಿ । ಪ್ರತ್ಯಕ್ಷವಚ್ಚ ಪ್ರಾಮಾಣ್ಯಂ ಸ್ವತಏವಾಗಮಸ್ಯಹೀತಿ । ಸುಧಾಯಾಂ ಚ । ಸ್ವತ ಏವೇತಿ । ಸ್ವಾಭಾವಿಕೇನೈವ ಸಂಬಂಧೇನೇತ್ಯರ್ಥಃ ।। ಜೈಮಿನಿ**

**ರಪ್ಯಾಹ । ಔತ್ಪತ್ತಿಕಸ್ತು ಶಬ್ದಸ್ಯ ಅರ್ಥೇನ ಸಂಬಂಧಃ ಇತೀತಿ । ತಸ್ಯಾಃ ಸ್ಥಾನಮಾಹ । ಸಾ ಚೇತಿ ।**

ಇಷ್ಟೂ ಈಶ್ವರೇಚ್ಛಾದಲ್ಲಿ ಶಕ್ತಿತ್ವಕಲ್ಪನಾ ಮಾಡುವುದರಿಂದ ಭ್ರಾಂತಿಯು ಸಂಭವಿಸುತ್ತದೆ. ನಿನಗೆ ಪದ ಪದಾರ್ಥಗಳಲ್ಲಿ ಶಕ್ತಿಯನ್ನು ಹೇಳಿದರೆ ತಿಳಿದೇ ಇದ್ದ ಶಕ್ತಿಯುಳ್ಳ ಪದ ಪದಾರ್ಥಗಳಿಗೆ ಅನ್ವಯಜ್ಞಾನವಾಗುತ್ತದೆ ಸ್ವಾಭಾವಿಕ ಶಕ್ತಿಯನ್ನು ಅಲ್ಲಗಳೆಯಲು ಶಕ್ಯವಿಲ್ಲ. ಅಗ್ನಿಯ ಶಕ್ತಿ ಜ್ಞಾನವಿಲ್ಲದವನಿಗೆ ಸುಡುವುದಿಲ್ಲವೇದು ಇಲ್ಲ ಸುಟ್ಟೇಸುಡುತ್ತದೆ. ಹಾಗೆಯೇ ಹೊಗೆಗೆ ಬೆಂಕಿಯಿಂದ ಸ್ವಾಭಾವಿಕ ಸಂಬಂಧ ವಿದ್ದರೂ ಧೂಮ ಜ್ಞಾತವಾದರೆ ಅನುಮಿತಿ ಹುಟ್ಟುತ್ತದೆ. ಹೊಗೆ ತಿಳಿಯದಿದ್ದರೆ ಹೇಗೆ ಅನುಮಿತಿ ಹುಟ್ಟುವುದಿಲ್ಲವೋ ಹಾಗೆ ಪದಪದಾರ್ಥಗಳಿಗೆ ಸಂಬಂಧರೂಪವಾದ ಸ್ವಾಭಾವಿಕ ಶಕ್ತಿಯಿದ್ದೇ ಇರುತ್ತದೆ. ಆದ್ದರಿಂದ ಪದ ಪದಾರ್ಥಗಳಿಗೆ ಸ್ವಾಭಾವಿಕ ಸಂಬಂಧವೇ ಪದ ಶಕ್ತಿಯು ಅನುವ್ಯಾಖ್ಯಾನದಲ್ಲಿ ಪದಪದಾರ್ಥಗಳಿಗಿರುವ ನಿತ್ಯವಾದ ಸಂಬಂಧವು ಎಂದಿಗೂ ದೂಷಿತವಾಗುವುದಿಲ್ಲ. ಆದ್ದರಿಂದಲೇ ಆಗಮುಕ್ತ್ಯಾ ಪ್ರತ್ಯಕ್ಷ ದಂತೇ ಸ್ವತಃ ಪ್ರಾಮಾಣ್ಯತೆ ಹೀಗೆ ಹೇಳಿದೆ. ಸುಧಾದಲ್ಲಿಯೂ ಸ್ವತ ಏವ ಎಂದರೆ ಸ್ವಾಭಾವಿಕ ಸಂಬಂಧದಿಂದಲೇ ಎಂದರ್ಥವು ಎಂದು ಹೇಳಿರುತ್ತದೆ. ಜೈಮಿನಿಯೂ ಹೇಳಿರುತ್ತಾರೆ. ಶಬ್ದಗಳಿಗೆ ಅರ್ಥ ಸಂಬಂಧವು ಔತ್ಪತ್ತಿಕವೇ ಆಗಿರುತ್ತದೆ ಎಂದು ಅವುಗಳ ಸ್ಥಾನವನ್ನು ಹೇಳುತ್ತಾರೆ.

ಪ.ಸಂ.—ಸಾಚ ಸ್ವರ ಧ್ವನಿ ವರ್ಣ ಪದ ವಾಕ್ಯ ಮಾತ್ರಗತಾ ।

ಆ ಶಕ್ತಿಯು ಸ್ವರ, ಧ್ವನಿ, ವರ್ಣಗಳು, ವಾಕ್ಯಗಳು ಹೀಗೆ ನಾಲ್ಕರಲ್ಲಿರುತ್ತದೆ.

**ನನು ವಾಚಕತ್ವಂ ಪದಧರ್ಮಃ ಕಥಂ ಉದಾತ್ತಾದಿ ಸ್ವರಧರ್ಮಃ ಕಥಂವಾ ಭೇರ್ಯಾದಿ ಧ್ವನಿಧರ್ಮ ಇತಿ ಚೇನ್ನ । ಪದವತ್ ಸ್ವರ ವರ್ಣ ಧ್ವನೀನಾಂ ವಾಚಕತ್ವೇ ಬಾಧಕಾಭಾವಾತ್ । ತದುಕ್ತಂ ಋಗ್ಭಾಷ್ಯೇ । ದಾರ್ಢ್ಯಮೇವಾನುದಾತ್ತಾರ್ಥಃ ಉದಾತ್ತಸ್ಯೋಚ್ಚತಾರ್ಥತಾ । ನೀಚತಾ ಸ್ವರಿತಸ್ಯಾರ್ಥಃ ಪ್ರಚಯಸ್ಯ ಯಥಾಸ್ಥಿತಿಃ । ಸಮಾಹಾರೇಽಖಿಲಾ ಅರ್ಥಾಃ ಸ್ವರಾರ್ಥಾನಾಮಿಯಂ ಸ್ಥಿತಿಃ। ಕಂಪೋಽಶೇಷಗ್ರಹೇಕ್ವಾಪಿ ಲಜ್ಜಾಯಾಂವಾ ಪುರಾತನ ಇತಿ । ನನು ಉದಾತ್ತ ಅನುದಾತ್ತಾದಿ ಸ್ವರಾಣಾಂ ವರ್ಣ ಧರ್ಮತ್ವೇನ ಶಬ್ದರೂಪತ್ವಾಭಾವಾತ್ ಕಥಂ ವಾಚಕತ್ವಂ। ಉಕ್ತಂ ಚ ಶಾಬ್ದಿಕೈಃ । ಉದಾತ್ತತ್ವ ಅನುದಾತ್ತತ್ವೇ ವರ್ಣಧರ್ಮಾವಿತೀತಿ ಚೇನ್ನ । ನದೀ ವೃಧ್ಯಾದಿ ಸಂಜ್ಞಾವತ್ ಧ್ವನೀನಾಮೇವೋದಾತ್ತಾದಿ ಸಂಜ್ಞಾ ಕರಣಾತ್ । ಅತ ಏವ ಛಾಂದೋಗ್ಯ ಭಾಷ್ಯೇ ।**

ವಾಚಕತೆ ಪದದ ಧರ್ಮವು. ಇದು ಉದಾತ್ತಾದಿ ಸ್ವರ ಧರ್ಮಗಳಾಗಲಿ ಭೇರ್ಯಾದಿ ಧ್ವನಿಧರ್ಮಗಳಾಗಲಿ ಹೇಗೆ ಆಗುತ್ತದೆ? ತಪ್ಪಲ್ಲವೇ ಎಂದರೆ ತಪ್ಪಾ

ಆಗುವುದಿಲ್ಲ. ಪದದಂತೇ ಸ್ವರವರ್ಣ ಧ್ವನಿಗಳಿಗೂ ವಾಚಕತೆ ಹೇಳಿದರೆ ಬಾಧಕವಿಲ್ಲದಿರುವುದರಿಂದ ಅದನ್ನೇ ಋಗ್ಭಾಷ್ಯದಲ್ಲಿ ಹೇಳಿರುತ್ತಾರೆ. ಅನುದಾತ್ತಾರ್ಥವು ಧಾರಢ್ಯವು, ಉದಾತ್ತಕ್ಕೆ ಉಚ್ಚಾರ್ಥಕತೆಯು, ಸ್ವರಿತಕ್ಕೆ ನೀಚಾರ್ಥವು, ಪ್ರಚಯದರ್ಥವೇ ಯಥಾಸ್ಥಿತಿಯು, ಸಮಾಹಾರಾರ್ಥವು ಎಲ್ಲವನ್ನೂ ತಿಳಿಸುವಿಕೆ, ಹೀಗೆ ಸ್ವರಗಳ ಅರ್ಥವು ಕ್ರಮವಾಗಿರುತ್ತದೆ. ಕಂಪನವಾದುದು ಕೆಲವಡೆ ಶೇಷಾರ್ಥದಲ್ಲಿ ಲಜ್ಜೆಯಲ್ಲಿ ಪುರಾತನವೆಂಬಲ್ಲಿ, ಹೀಗೆ ಹೇಳಿರುತ್ತದೆ. ಸರಿಯೇ ಉದಾತ್ತ ಅನುದಾತ್ತ ಸ್ವರಿತಗಳಿಗೆ ವರ್ಣ ಧರ್ಮತೆಯಿರುವುದರಿಂದ ಶಬ್ದರೂಪತೆ ಇಲ್ಲವಾದ್ದರಿಂದ ಹೀಗೆ ವಾಚಕತೆ ಎಂದರೆ ಶಾಬ್ದಿಕರೇ ಹೇಳಿರುತ್ತಾರೆ. ಉದಾತ್ತನುದಾತ್ತತ್ವಾದಿಗಳನ್ನು ವರ್ಣಧರ್ಮಗಳೆನ್ನಬಾರದು. ನದಿ ವೃಧ್ಯಾದಿಸಂಜ್ಞೆಯಂತೇ ಧ್ವನಿಯೇ ಆಗಿರುತ್ತದೆ. ಸಂಜ್ಞಾ ಮಾತ್ರವೇ ಆಗಿರುತ್ತದೆ.

**ದೇವಾದಿ ಸ್ವರಸ್ಯ ಧ್ವನಿತ್ವಮುಕ್ತಂ। ತಥಾಹಿ। ವಿಷ್ಣೋಃ ಸ್ವರೋ ವೃಷಭವತ್ ಮೇಘನಾದವದೇವವಾ। ಸ್ತ್ರೀ ಪಶು ಸ್ವರವದ್ವಹ್ನೇಃ ಗಂಭೀರೋನುಪಮೋವಿಭೋಃ। ಬ್ರಹ್ಮಣ ಸ್ತ್ವಥಸೋಮಸ್ಯ ಸಾಕ್ಷಾದ್ಘಂಟಾನಿನಾದವತ್। ಮೃದು ಮೇಘ ಸ್ವರೋವಾಯೋಃ ಇಂದ್ರಸ್ಯ ಸ್ತನಮಿತ್ನುವತ್। ಬೃಹಸ್ಪತೇಃ ಕ್ರೌಂಚವಚ್ಚ ವರುಣಸ್ಯತುವಿಸ್ವರಃ। ಏಕಸ್ಯ ಪಾದವರ್ಷಸ್ಯ ಸ್ವರೋ ವಿಷ್ಣೋರುದಾಹೃತಃ। ವಾಯೋರ್ವಿಂಶತಿವರ್ಷಸ್ಯ ಬ್ರಾಹ್ಮಣಸ್ತುತದಂತರೇತಿ। ಅಸ್ತುವಾ ಉದಾತ್ತಾದಿ ಸ್ವರಾಣಾಂ ವರ್ಣಧರ್ಮತ್ವಂ।**

ಛಾಂದೋಗ್ಯ ಭಾಷ್ಯದಲ್ಲಿ ದೇವತೆಗಳ ಸ್ವರಕ್ಕೆ ಧ್ವನಿತ್ವವೂ ಹೇಳಿರುತ್ತದೆ. ವಿಷ್ಣುವಿನ ಸ್ವರವು ಘೂಳಿಯಂತೇ, ಮೇಘ ಧ್ವನಿಯಂತೆಯೂ, ಅಗ್ನಿಯದು ಹೆಣ್ಣು ಪಶುಗಳ ಧ್ವನಿಯಂತೇ, ಅಶದೃಶವಾಗಿ ಗಂಭೀರವಾದುದು. ಬ್ರಹ್ಮನ, ಹಾಗೂ ಚಂದ್ರನದು ಸಾಕ್ಷಾತ್ ಘಂಟಾನಾದದಂತೇ, ವಾಯುವಿನದು ಮೃದುವಾದ ಮೇಘಸ್ವರದಂತೇ, ಇಂದ್ರಗೆ ಮೇಘದಂತೇ, ಬೃಹಸ್ಪತಿಯ ಧ್ವನಿಯು ಕ್ರೌಂಚ ಪಕ್ಷಿಯಂತೇ, ವರುಣಗೆ ವಿಸ್ವರವು, ವಿಷ್ಣುವಿಗೆ ಹದಿನೈದು ತಿಂಗಳ ಕೂಸಿನ ಧ್ವನಿಯೂ ಉಂಟೆನ್ನುತ್ತಾರೆ. ವಾಯುದೇವರಿಗೆ ಇಪ್ಪತ್ತು ವರ್ಷದ ಹುಡುಗನ ಧ್ವನಿಯು ಬ್ರಹ್ಮದೇವರಿಗೆ ದೊಡ್ಡವರ ಧ್ವನಿಯು ಹೇಳಿರುತ್ತದೆ. ಉದಾತ್ತಾದಿ ಸ್ವರಗಳಿಗೆ ವರ್ಣಧರ್ಮತೆಯೂ ಇರಲಿ, ಋಗ್ಭಾಷ್ಯ ಪ್ರಮಾಣ ಬಲದಿಂದ ಇನ್ನೂ ವಾಚಕತೆಯನ್ನು ಅಂಗೀಕರಿಸಬೇಕು.

**ಉದಾಹೃತ ಋಗ್ಭಾಷ್ಯಬಲೇನ ವಾಚಕತ್ವಸ್ಯಾಪ್ಯಂಗೀಕಾರ್ಯತ್ವಾತ್। ಐತರೇಯ ಭಾಷ್ಯೇಪಿ। ಸಮುದ್ರ ಮೇಘ ವೃಕ್ಷ ಪತನ ಭೇರೀಕಾಡನಾದಿ**

**ಸರ್ವ ಘೋಷಾ ಅಪಿ ತಸ್ಯೈವನಾಮಾನೀತಿ ಯಥಾಯೋಗ್ಯಂ ಯೋಜನೀಯಾನಿ। ಹುಂಕಾರೇಣ ಸಹೈವಾಬ್ಧಿಃ ಸರ್ವಾಭಿಭವಶಕ್ತಿತಾಂ। ವಿಷ್ಣೋರ್ವಕ್ತಿ ಯತೋಽಹುಂಹಿ ಪರಾಭಿಭವ ವಾಚಕಃ। ಓಮಿತಿ ಸ್ವನತೇ ನಿತ್ಯಂ ವಾಯುರ್ಮೇಘೇಷು ಸಂಸ್ಥಿತಃ। ಬಲವನ್ನಾದ ಸಂಯುಕ್ತೋಽಹ್ಯಧಿಕೋಚ್ಚತ್ವವೇವತು। ಓಂ ಕಾರಸ್ಯಾರ್ಥ ಉದ್ದಿಷ್ಟಃ ಉಕ್ತಾರ್ಥಾಧಿಕ್ಯವೇವಚ ನಾದೋ ಬಲೀಪ್ರವದತಿ ತಥಾ ಭೇರೀಧ್ವನಿಃ ಪ್ರಭೋಃ।**

ಐತರೇಯ ಭಾಷ್ಯದಲ್ಲಿಯೂ ಸಮುದ್ರ, ಮೇಘ, ವೃಷ್ಟಿ, ಪತನ, ಭೇರೀ ಹೊಡೆತಾದಿಗಳಲ್ಲೂ ಶಬ್ದಗಳೂ ಶ್ರೀ ಹರಿಯನಾಮಗಳೇ ಆಗಿರುತ್ತವೆ. ಯಥಾಯೋಗ್ಯವಾಗಿ ಯೋಜಿಸಬೇಕು. ಹುಂಕಾರ ಹಿಂಕಾರಗಳು ಪರರ ಸೋಲು ಸೂಚಕಗಳಾದ್ದರಿಂದ ಸಮುದ್ರ ರಾಜನು ಸದಾ ಹುಂಕಾರದಿಂದಲೇ ವಿಷ್ಣುವಿಗೆ ಸರ್ವ ಜಯ ಶಕ್ತಿಯನ್ನು ತಿಳಿಸುತ್ತಾನೆ. ವಾಯುದೇವರು ಮೇಘದಲ್ಲಿ ಸನ್ನಿಹಿತನಾಗಿ 'ಓಂ' ಎಂದು ತನ್ನಮನನವನ್ನು ಪ್ರಬಲವಾದ ನಾದ(ಧ್ವನಿ)ಯಿಂದ ಶ್ರೀಹರಿಗೆ ಪರಮೋಚ್ಚತೆಯನ್ನೂ 'ಓಂ'ಕಾರಾರ್ಥವಾದ ಸರ್ವೋಚ್ಚತೆ, ಸರ್ವ ಶಬ್ದಗಳಿಗೆ ಪ್ರಬಲವಾದ ನಾದವು, ಭೇರಿ, ಧ್ವನಿಯು ಪ್ರಭುವಾದ ಪರಮಾತ್ಮನನ್ನೇ ಹೇಳುತ್ತದೆ

**ಅನುದಾತ್ತ ಸ್ವರೂಪತ್ವಾದೌದಾರ್ಯಂ ವದತೀಶಿತುಃ। ತದಪೇಕ್ಷ ಯಾನ್ಯನೀಚತ್ವಂ ಘಂಟಾದ್ಯಾಃ ಸ್ವರಿತಾತ್ಮಕಾಃ। ಉಚ್ಚ ಸ್ಥಿತಿಮುದಾತ್ತಶ್ಚ ಸ್ವರ್ಣಚಂಚ್ವಾದಿಕಃ ಸ್ವರಃ। ವಿಷ್ಣೋರ್ವಕ್ತಿತಥಾಮಂದ್ರಶ್ವಾಸಾದಿಃ ಪ್ರಣವಾತ್ಮಕಃ। ಏಕ ಪ್ರಕಾರತಾಂ ವಿಷ್ಣೋಃ ಸದಾಚಾಲ್ಪಂವದತ್ಯಪಿ। ಇತ್ಯಾದಯಃ ಸರ್ವ (ಶಬ್ದಾಃ) ಘೋಷಾಃ ವಿಷ್ಣೋರೇವ ಗುಣೋನ್ನತಿಂ ವದಂತಿ ಕಿಮುವೇದಾದ್ಯಾಃ ಮಾರ್ಜಾರಾದ್ಯಭಿಧಾಸ್ತಥೇತಿ। ಐತರೇಯ ಭಾಷ್ಯಾಂತೇಪಿ। ಸರ್ವೈಶ್ಚವೈದಿಕಪದೈಃ ಅಪಿ ಲೋಕಶಬ್ದೈಃ ಮೇಘಾಗ್ನಿವಾರಿಧಿತಲಾದಿರವೈಶ್ಚ ಸರ್ವೈಃ। ಏಕೋಽಭಿಧೇಯ ಪರಿಪೂರ್ಣ ಗುಣಃ ಪ್ರಿಯೋಲಂ ನಾರಾಯಣೋ ಮಮಸದೈವ ಸತುಷ್ಟಿಮೇತು ಇತಿ।**

ಅನುದಾತ್ತವು ಪರಮಾತ್ಮಗೆ ಔದಾರ್ಯವನ್ನು ಹೇಳುತ್ತದೆ, ಘಟಾದಿಗಳು ಸ್ವರಿತಾತ್ಮಕಗಳಾಗಿ ಪರತ್ವಾಪೇಕ್ಷಯಾ ಅನ್ಯರಿಗೆ ನೀಚತ್ವವನ್ನು ಹೇಳುತ್ತದೆ. ಉದಾತ್ತವಾದುದು ಪರಮಾತ್ಮಗೆ ಉಚ್ಚತೆಯನ್ನೂ ಹೇಳುತ್ತದೆ. ಬಂಗಾರದ ನಾದ, ಕಂಚಿನ ನಾದ ಹಾಗೆ ಮಂದ ಸ್ವರ, ಪ್ರಣವಾತ್ಮಕವಾದ ಶ್ವಾಸಾದಿಗಳು ಏಕ ಪ್ರಕಾರವಾಗಿ ವಿಷ್ಣುವನ್ನೇ ಹೇಳಿದರೂ ಅಲ್ಪವೇ ಆಗಿರುತ್ತದೆ. ಹೀಗೆ ಹೇಳುತ್ತಿರಲು ಸಕಲ ವೇದಾದಿಗಳು ಸಕಲ ಶಬ್ದಗಳೂ ಶ್ರೀಹರಿಯ ಗುಣೋತ್ಕರ್ಷವನ್ನೇ ಹೇಳುವುದೇನು! ಮಾರ್ಜಾರಾದಿ ಪದಗಳೂ ಪರಮಾತ್ಮನನ್ನೇ ಹೇಳುತ್ತದೆ. ಐತರೇಯ ಭಾಷ್ಯಾಂತ್ಯದಲ್ಲಿ ಶ್ರೀಮದಾಚಾರ್ಯರು ವೈದಿಕ ಪದರಾಶಿಯಿಂದ, ಪೌರುಷೇಯ

ಶಬ್ದಗಳಿಂದ ಮೇಘ ಅಗ್ನಿ ಸಮುದ್ರ ಚಪ್ಪಾಳೆಯೇ ಮೊದಲಾದ ಸರ್ವಶಬ್ದಗಳಿಂದಲೂ ಮುಖ್ಯವಾಗಿ ಸಕಲಗುಣ ಸಂಪೂರ್ಣನಾದ ನಾರಾಯಣನೇ ವಾಚ್ಯನು ಇಂತಹ ಹರಿಯು ಸದಾ ನನಗೆ ಪ್ರಿಯನಾಗಿ ಇಷ್ಟನಾಗಲಿ ಹೀಗೆ ಹೇಳಿರುತ್ತಾರೆ.

ತಾವಾ ಏತಾ ಸರ್ವಾ ಋಚಃ ಸರ್ವೇ ವೇದಾಃ ಸರ್ವೇ ಘೋಷಾಃ ಇತಿ ಶ್ರುತೇಶ್ಚ । ವರ್ಣಾನಾಂ ವಾಚಕತ್ವಂ ಚ ತಂತ್ರಸಾರೇ ಚೋಕ್ತಂ । ಅಹಮೇಕೋ ಅಖಿಲಗುಣೋ ವಾಚಕ ಪ್ರಣವೋ ಮಮ । ಅಕಾರಾದ್ಯತಿಶಾಂತಾಂತಃ ಸೋಽಯಮಷ್ಟಾಕ್ಷರೋ ಮತಃ । ಸವಿಶ್ವತೈಜಸಪ್ರಾಜ್ಞತುರೀಯಾತ್ಮಾಂತರಾತ್ಮನಾಂ । ಪರಮಾತ್ಮ ಜ್ಞಾನಾತ್ಮಯುಜಾಂ ಮದ್ರೂಪಾಣಾಂಚ ವಾಚಕಃ । ತದ್ರೂಪ ಭೇದಾಃ ಪಂಚಾಶತ್ ಮೂರ್ತಯೋ ಮಮ ಚಾಪರಾಃ । ಪಂಚಾಶದ್ವರ್ಣವಾಚ್ಯಾಸ್ತಾ ವರ್ಣಾಸ್ತಾರಾರ್ಣಭೇದಿತಾಃ । ನೃಸಿಂಹಃ ಕ್ಷಸ್ಯದೇವತೇತಿ । ಅನುವ್ಯಾಖ್ಯಾನೇಽಪಿ ।

ಮತ್ತೂ ಶ್ರುತಿಯೂ ಸಹ ಎಷ್ಟೆಷ್ಟು ಋಕ್ಕುಗಳಿವೆಯೋ, ಎಂತೆಷ್ಟು ವೇದಗಳಿವೆಯೋ, ಎಲ್ಲವೂ ಪರಮ ಮುಖ್ಯ ವೃತ್ತಿಯಿಂದ ಶ್ರೀಹರಿಯನ್ನೇ ಹೇಳುತ್ತದೆ ಎಂದು ತಿಳಿಸುತ್ತದೆ. ವರ್ಣಗಳಿಗೆ ಶ್ರೀಹರಿಯ ವಾಚಕತ್ವವನ್ನು ತಂತ್ರಸಾರದಲ್ಲಿ ಹೇಳಿರುತ್ತದೆ. ನಾನೇ ಸರ್ವಗುಣ ಪೂರ್ಣನು 'ಓಂ'ಕಾರವು ನನ್ನನ್ನೇ ಹೇಳುತ್ತದೆ. 'ಓಂ'ಕಾರವು ಅಕಾರ, ಉಕಾರ, ಮಕಾರ, ನಾದ, ಬಿಂದು. ಘೋಷ, ಶಾಂತ, ಅತಿಶಾಂತ ಎಂಬ ಎಂಟು ಮಾತ್ರಗಳೂ ನನ್ನನ್ನೇ ಹೇಳುತ್ತವೆ. ನನ್ನದೇಆದ ವಿಶ್ವ, ತೈಜಸ, ಪ್ರಾಜ್ಞ. ತುರೀಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮಗಳೆಂಬ ನನ್ನ ರೂಪಗಳನ್ನೇ ಹೇಳುತ್ತದೆ. ಆ ರೂಪಗಳ ಭೇದಾತ್ಮಕಗಳಾದವುಗಳೇ ಐವತ್ತು ಅಕಾರಾದಿ ವರ್ಣಗಳಿಂದ ವಾಚ್ಯಗಳಾದ ಐವತ್ತು ರೂಪಗಳು, ಈ ಐವತ್ತು ವರ್ಣಗಳು ಓಂ ಕಾರದ ವರ್ಣಗಳಿಂದ ಅಭಿವ್ಯಕ್ತವಾದವುಗಳೇ ವರ್ಣದ್ವಂದ್ವಾತ್ಮಕವಾದ ಕ್ಷ ಕಾರವು ರೂಪ ದ್ವಂದ್ವತೀತವಾದ ನನ್ನ ನೃಸಿಂಹ ರೂಪವನ್ನು ಹೇಳುತ್ತದೆ. ಅನುವ್ಯಾಖ್ಯಾನದಲ್ಲಿಯೂ,

ವಾಸುದೇವಾದಿರೂಪೇಣ ಚತುರ್ಮೂರ್ತಿಶ್ಚ ಸರ್ವಶಃ । ಅಥವಾ ಪಂಚಮೂರ್ತಿಃ ಸಪ್ರೋಕ್ತೋ ಅಧಿಕರಣಂ ಪ್ರತಿ । ಪ್ರತಿ ಸೂತ್ರಂ ಪ್ರತಿ ಪದಂ ಪ್ರತ್ಯಕ್ಷರಮಥಾಪಿವೇತಿ । ಭಾಷ್ಯೇಽಪಿ । ಅಕಾರಃ ಸರ್ವವಾಗಾತ್ಮಾ ಪರಬ್ರಹ್ಮಾಭಿಧಾಯಕಃ । ತಥೌ ಪ್ರಾಣಾತ್ಮಕೌ ಪ್ರೋಕ್ತೌ ವ್ಯಾಪ್ತಿ ಸ್ಥಿತಿ ವಿಧಾಯಕೌ ಇತಿ । ಅ ಇತಿ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮೇತಿ । ಣಕಾರೋ ಬಲಂ ಪಕಾರಃ ಪ್ರಾಣ ಆತ್ಮೇತ್ಯಾದ್ಯಾಃ ಶ್ರುತಯಃ । ಗೋಽಹಿನಿವೃತಿ ವಾಚಕಃ ಇತಿ ಸ್ಮೃತಿಃ ಚ ಅತ್ರ ಪ್ರಮಾಣಂ । ನನು ಶಕ್ತೇಃ ಪದ

ಧರ್ಮತ್ವಾತ್ ಕಥಂ ವಾಕ್ಯೇ ಶಕ್ತಿರಿತಿಚೇನ್ನ । ಪದವದ್ವಾಕ್ಯಸ್ಯಾಪಿ ವಾಕ್ಯಾರ್ಥೇ ಶಕ್ತಿತ್ವೇ ಬಾಧಕಾಭಾವಾತ್ । ತಥಾಹಿ ಸೂತ್ರಂ ಭಾಷ್ಯಂ ಚ ವಾಕ್ಯಾನ್ವಯಾದ್ವಾಕ್ಯಸ್ಯಾಪಿಏವ ಮನ್ವಯೋ ಯುಜ್ಯತ ಇತಿ । ಸುಧಾಯಾಮಪಿ ದ್ವಿತೀಯಧ್ಯಾಯೇ ।

ವಾಸುದೇವಾದಿರೂಪದಿಂದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಈ ನಾಲ್ಕು ರೂಪಗಳಿಂದ ಸರ್ವತ್ರದಲ್ಲಿ ಸರ್ವಶಬ್ದ ವಾಚ್ಯನಾಗಿದ್ದಾನೆ. ಇನ್ನೂ ಪ್ರತ್ಯಧಿಕರಣಗಳಲ್ಲಿ ಈ ಚತುರ್ಮೂರ್ತಿಯಾದ ನಾರಾಯಣನೇ ಪಂಚರೂಪಗಳಿಂದ ಪ್ರತಿಪಾದಿತನಾಗಿರುತ್ತಾನೆ. ಪ್ರತಿ ಸೂತ್ರ, ಪ್ರತಿ ಪದ, ಪ್ರತ್ಯಕ್ಷರ, ಪ್ರತಿಪಾದ್ಯನಾಗಿದ್ದಾನೆಂದು ಹೇಳಿರುತ್ತದೆ. ಭಾಷ್ಯದಲ್ಲಿಯೂ ಸರ್ವ ವಾಗ್ರೂಪವಾದ ಅಕಾರವು ಪರಬ್ರಹ್ಮನನ್ನೇ ಹೇಳುತ್ತದೆ. 'ತ', 'ಥ' ಈ ಎರಡು ಅಕ್ಷರಗಳು ಪ್ರಾಣದೇವತಾಕವಾಗಿ ಶ್ರೀಹರಿ ಪ್ರಾಣರ, ವ್ಯಾಪ್ತಿ, ಸ್ಥಿತಿಗಳನ್ನು ಹೇಳುತ್ತವೆ. ಅಕಾರವು ವಿಷ್ಣು ವಾಚಕವೆಂದು ಶ್ರುತಿ ಹೇಳುತ್ತದೆ 'ಕಂ' ಎಂಬುದು 'ಖಂ' ಎಂಬುದು ಶ್ರೀಹರಿಯ ಗುಣ ಪೂರ್ಣತೆಯನ್ನು ತಿಳಿಸುತ್ತದೆ. ಎಂದು ಶ್ರುತಿಯು, ಹಾಗೆ 'ಣ'ಕಾರವು ಬಲವನ್ನೂ 'ಪ'ಕಾರವು ಪ್ರಾಣ, ಆತ್ಮ, ಇತ್ಯಾದಿಗಳನ್ನೂ ತಿಳಿಸುತ್ತದೆಂದು ಶ್ರುತಿಯು 'ಣೋ'(ಣಃ) ಎಂಬುದು ನಿರ್ವೃತಿ ವಾಚಕವು ಎಂಬ ಸ್ಮೃತಿಯು ಇತ್ಯಾದಿಗಳೆಲ್ಲವೂ ಶ್ರೀಹರಿ ಸರ್ವ ಶಬ್ದ ವಾಚ್ಯತೆಯಲ್ಲಿ ಪ್ರಮಾಣಗಳಾಗಿರುತ್ತದೆ.

ಶಕ್ತಿಯು ಪದ ಧರ್ಮವು, ವಾಕ್ಯದಲ್ಲಿ ಶಕ್ತಿಯು ಹೇಗೆ? ಎನ್ನಬಾರದು ಪದದಂತೇ ವಾಕ್ಯಕ್ಕೂ ವಾಕ್ಯಾರ್ಥದಲ್ಲಿ ಶಕ್ತಿಯನ್ನು ಹೇಳಿದರೂ ಬಾಧಕವೇನೂ ಬರುವುದಿಲ್ಲಾ, ಸೂತ್ರ ಭಾಷ್ಯದಲ್ಲಿ ಹಾಗೆ ಹೇಳಿರುತ್ತದೆ. ಪದದಂತೇ ವಾಕ್ಯ ಸಂಬಂಧದಿಂದ ವಾಕ್ಯಕ್ಕೂ ಏಕವಾದ ಅನ್ವಯವು ಯುಕ್ತವಾಗುತ್ತದೆ ಎಂದು ಸುಧೆಯು ದ್ವಿತೀಯಾಧ್ಯಾಯದ ಆರಂಭದಲ್ಲಿ ಹೇಳಿರುತ್ತದೆ

ಪರಬ್ರಹ್ಮ ನಾರಾಯಣೇ ಸ್ವರ ವರ್ಣ ವಾಕ್ಯ ಮಹಾವಾಕ್ಯರೂಪಸ್ಯ ಸಮಸ್ತಶಾಸ್ತ್ರಸ್ಯ ಸಾಕ್ಷಾತ್ಪರಮಮುಖ್ಯಯಾವೃತ್ಯಾ ಸಮನ್ವಯಃ ಪ್ರಥಮಾಧ್ಯಾಯೇ ಸಮರ್ಥಿತಃ ಇತಿ । ಅಣುಭಾಷ್ಯೇಪಿ । ಅವ್ಯಕ್ತಃ ಕರ್ಮವಾಕ್ಯೈಶ್ಚ ವಾಚ್ಯ ಏಕೋಮಿತಾತ್ಮಕಃ ಇತಿ । ಪಾಣಿನಿರಪ್ಯಾಹ । ಶ್ರೋತ್ರಿಯಶ್ಛಂದೋಧೀತೇ ವಾಕ್ಯಾರ್ಥೇಚ ಪದ ಸಮನ್ವಯಃ ದೇವಾನಾಂಪ್ರಿಯ ಇತಿ ಚ ಮೂರ್ಖೇಮಸ್ಕರ ಮಸ್ಕರಿಣೌ ವೇಣು ಪರಿವ್ರಾಜಕಯೋಃ ಅನೇಕಮನ್ಯಪದಾರ್ಥ ಇತ್ಯಾದಿ । ತಸ್ಮಾತ್ ಸ್ವರಾದೀನಾಮಪಿ ಪದವದ್ವಾಚಕತ್ವಂ ಸಿದ್ಧಂ ।

ಸ್ವರ, ವರ್ಣ, ವಾಕ್ಯ, ಮಹಾವಾಕ್ಯರೂಪಗಳಾದ ಸಮಸ್ತಶಾಸ್ತ್ರಗಳೂ ಸಾಕ್ಷಾತ್ಪರಮ ಮುಖ್ಯವೃತ್ತಿಯಿಂದ ಪರಬ್ರಹ್ಮನಲ್ಲೇ ಸಮನ್ವಿತಗಳಾಗುತ್ತವೆ ಎಂದು ಪ್ರಥಮಾಧ್ಯಾಯದಲ್ಲಿ ಸಮರ್ಥಿಸಿಕೆಂದು ಅಣುಭಾಷ್ಯದಲ್ಲಿಯೂ ಅವ್ಯಕ್ತ ಸ್ವಭಾವನಾದ (ಕಣ್ಣಿಗೆ ಕಾಣದಿರುವ) ಶ್ರೀಹರಿಯೇ ಕರ್ಮ ಬೋಧಕ ಶಬ್ದ(ಕ್ರಿಯಾ ಪದಗಳು)ಗಳಿಂದಲೂ ಮುಖ್ಯವಾಚ್ಯನಾದವನು, ಮಿತಿಇಲ್ಲದವನು ಹೀಗೆ ಹೇಳಿರುತ್ತದೆ.

ಪಾಣಿನಿಯೂ ಸಹ, ಶ್ರೋತ್ರಿಯನು ವೇದವನ್ನಧ್ಯಯನ ಮಾಡುತ್ತಾನೆ. ಇತ್ಯಾದಿ ವಾಖ್ಯಾರ್ಥದಲ್ಲೇ ಪದಗಳ ಸಮನ್ವಯವು. ದೇವಾನಾಂ ಪ್ರಿಯಃ ಎಂಬುದು ಪದವೇ ಮೂರ್ಖನಲ್ಲಿ ಗಜ ಗಜಿಗಳು ಎಂಬಲ್ಲಿ ಮಲ್ಲ ಮಲ್ಲರೂ ಎಂಬಲ್ಲಿ ವೇಣು ಪರಿವ್ರಾಜಕರಲ್ಲಿ ಹೀಗೆ ಅನ್ಯ ಪದಾರ್ಥಕಗಳು ಅನೇಕಗಳಿರುತ್ತವೆ ಎಂದಿರುತ್ತಾನೆ. ಆದುದರಿಂದ ಸ್ವರಾದಿಗಳಿಗೂ ಪದದಂತೇ ವಾಚಕತೆ ಸಿದ್ಧಿತವಾಗಿದೆ.

ಪ.ಸಂ.— ಪದ ಶಕ್ತೇರ್ವಿಭಾಗೇ ಮಾಹ ಮುಖ್ಯಾಪರಮಮುಖ್ಯಾಚೇತಿ ದ್ವಿವಿಧಾ। ಉಭಯೋಃ ಸ್ಥಾನ ಮಾಹ। ಸರ್ವಶಬ್ದಾನಾಂ ಪರಮಾತ್ಮನಿ ಪರಮಮುಖ್ಯವೃತ್ತಿಃ। ಅನ್ಯತ್ರ ಮುಖ್ಯವೃತ್ತಿಃ।

ಇಂದ್ರಾದಿಶಬ್ದಾನಾಂ ಪುರಂದರಾದೌ ಯೋಗರೂಢಿಭ್ಯಾಂ ವೃತ್ತಿಃ ಮುಖ್ಯಾ। ಪರಮೈಶ್ವರ್ಯರೂಪ ಪ್ರವೃತ್ತಿ ನಿಮಿತ್ತೇನ ಅಜ್ಞ ರೂಢ್ಯಾಚ ಪ್ರವೃತ್ತೇಃ। ಪರಮಾತ್ಮನಿತು ಪರಮೈಶ್ವರ್ಯರೂಪ ಪ್ರವೃತ್ತಿನಿಮಿತ್ತಸ್ಯ ನಿರವಧಿಕತ್ವಾದಿಂದ್ರಾದಿಗತೈಶ್ವರ್ಯ ಸ್ವಾಮಿತ್ವಾದ್ವಿದ್ವದ್ರೂಢಿ ಸದ್ಭಾವಾಚ್ಚ ಪರಮ ಮುಖ್ಯವೃತ್ತಿರಿತ್ಯರ್ಥಃ। ಅತ್ರವಕ್ತವ್ಯಂಯತ್ ತತ್ಸರ್ವಂ ಉತ್ತರತ್ರವಕ್ಷ್ಯಾಮಃ। ॥ ಇತಿ ಶಕ್ತಿ ಪ್ರಕರಣಂ ॥

ಪದಶಕ್ತಿಯು ಮುಖ್ಯ ಪರಮಮುಖ್ಯವೆಂದು ಎರಡು ವಿಧವಾಗಿರುತ್ತದೆ. ಅವುಗಳ ಸ್ಥಾನಗಳೆಂದರೆ ಸರ್ವಶಬ್ದಗಳಿಗೆ ಪರಮ ಮುಖ್ಯ ವೃತ್ತಿ ಪರಮಾತ್ಮನಲ್ಲೇ, ಅವನಿಂದತಿರಿಕ್ತ ಸ್ಥಳಗಳಲ್ಲಿ ಮುಖ್ಯ ವೃತ್ತಿಯು ಪರಮೈಶ್ವರ್ಯ ರೂಪ ಪ್ರವೃತ್ತಿ ನಿಮಿತ್ತವಾದ ಇಂದ್ರ ಶಬ್ದವು ಅಜ್ಞರೂಢಿಯಿಂದ ಪುರಂದರನಲ್ಲಿ ಮುಖ್ಯ ವೃತ್ತಿಯು ಪರಮಾತ್ಮನಲ್ಲಿ ಪರಮೈಶ್ವರ್ಯ ರೂಪ ಪ್ರವೃತ್ತಿ ನಿಮಿತ್ತವಾದುದು ನಿರವಧಿಕವಾಗಿರುವುದರಿಂದ ಇಂದ್ರಾದಿಗಳಲ್ಲಿರುವ ಐಶ್ವರ್ಯ ಸ್ವಾಮಿತ್ವವೂ ಅವನಲ್ಲಿರುವುದರಿಂದ ಪರ ಇಂದ್ರ ಶಬ್ದವು ಪರಮಾತ್ಮನಲ್ಲಿ ಪರಮ ಮುಖ್ಯ ವೃತ್ತಿಯು.

ಇಲ್ಲಿ ಹೇಳಬೇಕಾದ ಅಂಶಗಳು ಅನೇಕವಾಗಿವೆ ಅವುಗಳನ್ನು ಮುಂದೆ ಪ್ರಸಂಗಾನುಸಾರವಾಗಿ ತಿಳಿಸುತ್ತೇವೆ.

ಹೀಗೆ ಶಕ್ತಿ ಪ್ರಕರಣದ ನಿರೂಪಣದ ಕನ್ನಡಾನುವಾದವು ಮುಗಿದುದು.

# ೧೧. ಸಾದೃಶ್ಯ ಪ್ರಕರಣ

**ಕ್ರಮಪ್ರಾಪ್ತಂ ಸಾದೃಶ್ಯಂ ನಿರೂಪಯತಿ ।**

ಪ.ಸಂ.—ಸಾದೃಶ್ಯಂ ಚ ಪದಾರ್ಥಾಂತರಮ್ । ನ ತು ತದ್ಭಿನ್ನತ್ವೇ ಸತಿ ತದ್ಗತ ಭೂಯೋಧರ್ಮವತ್ವಂ ।

**ತಾರ್ಕಿಕಮತಂ ನಿರಾಕರೋತಿ । ನನು ಸಾದೃಶ್ಯಂ ನ ಪದಾರ್ಥಾಂತರಂ । ಗೋಸದೃಶೋ ಗವಯ ಇತ್ಯಾದಿ ಪ್ರತೀತಿ ವ್ಯವಹಾರಯೋಃ ತದ್ಗತ ಭೂಯೋಧರ್ಮವಿಷಯಕತ್ವೋಪಪತ್ತೇಃ ಇತಿಚೇನ್ನ । ಗೋಗತಾನಾಂ ಧರ್ಮಾಣಾಂ ಗವಯೇऽಭಾವೇನ ಸಾದೃಶ್ಯಾಭಾವ ಪ್ರಸಂಗಾತ್ । ನತಾವ ದ್ಗೋತ್ವಂ ಗವಯವೃತ್ತಿ । ಗವಯಸ್ಯಾಪಿ ಗೋತ್ವಾಪತ್ತೇಃ । ನಾಪಿ ಪಶು ತ್ವಾದಿಕಂ । ಉಷ್ಟ್ರಾದಾವಪಿ ಗೋಸಾದೃಶ್ಯ ಪ್ರತೀತಿ ಪ್ರಸಂಗಾತ್ । ನಾಪಿ ಕರಚರಣಾದಿಕಂ । ಭಿನ್ನಭಿನ್ನತ್ವಾತ್ । ಅತೋ ಗೋಗತ ಧರ್ಮಾ ತಿರಿಕ್ತಮೇವ ಗವಯೇಸಾದೃಶ್ಯಂ । ಕಿಂಚ ಗೋಸದೃಶೋಗವಯಃ । ಗವಯ ಸದೃಶೀ ಗೌರಿತಿ ಪರಸ್ಪರ ಪ್ರತಿಯೋಗಿತಾ ಸಾದೃಶ್ಯೇ ಪ್ರತೀಯತೇ । ನಚೋಭಯಗತ ಧರ್ಮಸ್ಯ ಪಶುತ್ವಾದೇಃ ಪರಸ್ಪರ ಪ್ರತಿಯೋಗಿತಾ ಸಂಭವತಿ ।**

ಕ್ರಮಪ್ರಾಪ್ತವಾದ ಸಾದೃಶ್ಯವನ್ನು ನಿರೂಪಣ ಮಾಡುತ್ತಾರೆ. ಸಾದೃಶ್ಯ ವೆಂಬುದು ಪ್ರತ್ಯೇಕ ಪದಾರ್ಥವೇ ಆಗಿರುತ್ತದೆ. ಅದರಿಂದ ಭಿನ್ನವಾಗಿ, ಅದರಲ್ಲಿರುವ ಬಹುಧರ್ಮಗಳಿರುವುದೇ ಸಾದೃಶ್ಯವೆಂದು ಹೇಳುವುದು ತಪ್ಪಾಗುತ್ತದೆ.

ತಾರ್ಕಿಕಮತವನ್ನು ನಿರಾಕರಣ ಮಾಡುತ್ತಾರೆ (ಪೂರ್ವಪಕ್ಷವು). ಸಾದೃಶ್ಯವು ಪದಾರ್ಥಾಂತರವೇ ಗೋವಿಗೆ ಸದೃಶವಾದುದೇ ಗವಯವವು. ಇವೇ ಮೊದಲಾದ ಪ್ರಸಿದ್ಧವಾದ ವ್ಯವಹಾರವಿರುವುದರಿಂದ ಗೋವಿನಲ್ಲಿರುವ ಬಹುಧರ್ಮಗಳ ವಿಷಯ ಗಳು ಗವಯವದಲ್ಲಿ ತೋರುವುದರಿಂದ ಪರಸ್ಪರವಾಗಿರುವ ಅನೇಕ ಧರ್ಮಗಳೇ ಸಾದೃಶ್ಯವೆಂದು ತಾರ್ಕಿಕರು ಹೇಳುವುದು ಅಪದ್ಧವೇ ಆಗಿರುತ್ತದೆ. ಗೋವಿನಲ್ಲಿರುವ ಧರ್ಮಗಳು ಗವಯದಲ್ಲಿ ಇರುವುದಿಲ್ಲ. ಆದ್ದರಿಂದ ಸಾದೃಶ್ಯವು ಕೂಡುವುದಿಲ್ಲ. ಮತ್ತೂ ಗೋವಿನಲ್ಲಿರುವ ಗೋತ್ವಧರ್ಮವು ಗವಯದಲ್ಲಿ ಇರುವುದಿಲ್ಲ, ಹಾಗಿದ್ದರೆ ಗವಯವವು ಗೋತ್ವಧರ್ಮ ಯುಕ್ತವಾಗಬೇಕಾಗಿ ಗವಯವವೇ ಗೋವಾಗ ಬೇಕಾದೀತು. ಮತ್ತು ಪಶುತ್ವಾದಿಗಳು ಸಾದೃಶ್ಯ ಸಾಧಕವಾಗಿ ಧರ್ಮವಾಗುವದಿಲ್ಲ ಪಶುತ್ವವು ಒಂಟೆಯೇ ಮೊದಲಾದವುಗಳಲ್ಲಿ ಇರುವುದರಿಂದ ಗೋಸಾದೃಶ್ಯವು ಬರಬೇಕಾದೀತು. ಇನ್ನೂ ಗೋವಿನ ಕಾಲು ಕೈಗಳು ಗವಯವದಲ್ಲಿ ಇರುವುದಿಲ್ಲ. ಭಿನ್ನ ಭಿನ್ನಗಳೇ ಆಗಿರುವುದರಿಂದ. ಆದುದರಿಂದ ಗೋವಿನಲ್ಲಿರುವ ಧರ್ಮಗಳಿಂದ ಭಿನ್ನವಾದ ಧರ್ಮಗಳೇ ಗವಯದಲ್ಲಿರುವುದರಿಂದ ಸಾದೃಶ್ಯವು ಕೂಡುವುದಿಲ್ಲ. ಮತ್ತು

ಗೋವಿಗೆ ಸಮಾನವಾದುದು ಗವಯುವವು ಗವಯು ಸದೃಶವಾದುದು ಗೋವು ಹೀಗೆ ಪರಸ್ಪರವಾಗಿ ಸಾದೃಶ್ಯ ಪ್ರತಿಯೋಗಿತೆಯು ತೋರುತ್ತದೆ. ಆದರೆ ಗೋವು ಗವಯ ಎರಡರಲ್ಲೂ ಇರುವ ಧರ್ಮವಾದ ಪಶುತ್ವಾದಿಗಳಿಗೆ ಪ್ರತಿಯೋಗಿತೆಯು ತೋರುವದಿಲ್ಲ. ಸಂಭಾವಿತವಾಗುವುದಿಲ್ಲ ಆದ್ದರಿಂದ ಒಂದು ವಸ್ತುವಿನಿಂದ ಭಿನ್ನವಾಗಿ ಅದರಲ್ಲಿರುವ ಧರ್ಮ ವಿಶಿಷ್ಟತೆಯೇ ಸಾದೃಶ್ಯವೆಂಬುದು ತಪ್ಪಾಗುತ್ತದೆ. ಆದ್ದರಿಂದ ಸಾದೃಶ್ಯವೆಂಬ ಪ್ರತ್ಯೇಕ ಪದಾರ್ಥವನ್ನೇ ಒಪ್ಪಬೇಕು.

ಅಪಿ ಚ ಪ್ರತಿಯೋಗಿ ಜ್ಞಾನಾನಂತರಂ ಏವಾಪರತ್ರ ಸಾದೃಶ್ಯಜ್ಞಾನಂ ಜಾಯತೇ । ನ ಚ ಧರ್ಮಜ್ಞಾನಂ ತಥಾ । ನ ಚ ಗೋಧರ್ಮ ಸದೃಶ-ಧರ್ಮವತ್ತ್ವಮೇವ ಗೋಸಾದೃಶ್ಯಮಿತಿವಾಚ್ಯಂ। ಧರ್ಮಯೋಃ ಸಾದೃಶ್ಯಸ್ಯಾಪ್ಯನಿರೂಪಣಾತ್ । ತಸ್ಮಾತ್ ಸಾದೃಶ್ಯಂ ಪದಾರ್ಥಾಂತರಂ । ಪ್ರಭಾಕರಾಸ್ತು । ಸರ್ವೇಷು ಗೋಗವಯಾದಿಷು ಸಾದೃಶ್ಯಮೇಕಮನುಗತಂ। ಅನೇಕತ್ವೇ ಪ್ರಮಾಣಾಭಾವಾತ್ । ಅನಯೋಃ ಸಾದೃಶ್ಯಮಿತ್ಯೇಕತ್ವ ಪ್ರತೀತೇಶ್ಚ । ಏಕತ್ವೇ ಸಂಭವತಿ ನಾನಾತ್ವಸ್ಯ ಗೌರವಪರಾಹತತ್ವಾಚ್ಚೇತ್ಯಾಹುಃ । ತದ್ದೂಷಯತಿ । ಯಮಲಾದಿಷ್ವಿತಿ ।

ಮತ್ತೂ ಪ್ರತಿಯೋಗಿ ಜ್ಞಾನವಾದ ಮೇಲೆಯೇ ಮತ್ತೊಂದು ಕಡೆ ಸಾದೃಶ್ಯ ಜ್ಞಾನವಾಗುತ್ತದೆ. ಧರ್ಮಜ್ಞಾನವೂ ಹಾಗಲ್ಲ. ಗೋಸದೃಶ ಧರ್ಮವತ್ವವೇ ಗೋಸಾದೃಶ್ಯವೆನಲೂ ಬರುವುದಿಲ್ಲ.

ಧರ್ಮಗಳಿಗೆ ಸಾದೃಶ್ಯ ನಿರೂಪಣೆ ಇಲ್ಲವಾದ್ದರಿಂದ, ಅದುದರಿಂದ ಸಾದೃಶ್ಯವು ಪದಾರ್ಥಾಂತರವೇ, ಪ್ರಭಾಕರರು ಮೀಮಾಂಸಕರು ಸರ್ವಗವಯಾದಿಗಳಲ್ಲಿರುವ ಗೋ ಸಾದೃಶ್ಯವು ಒಂದೇ ಎಲ್ಲೆಡೆಯಲ್ಲೂ ಅನುಗತವಾದುದು. ಅನೇಕ ಸಾದೃಶ್ಯಗಳೆಂಬಲ್ಲಿ ಪ್ರಮಾಣವಿಲ್ಲ. ಇವುಗಳಿಗೆ ಸಾದೃಶ್ಯವೆಂದು ಪ್ರತೀತಿ (ವ್ಯವಹಾರ)ಇರುವುದರಿಂದ, ಒಂದಕ್ಕೆ ವ್ಯವಹಾರ ಕೂಡುತ್ತಿರಲು ಅನೇಕಕ್ಕೆ ಒಪ್ಪುವುದು ಗೌರವವಾದ್ದರಿಂದ ಒಂದಕ್ಕೆ ಅನುಗತತ್ವ ಹೇಳಬೇಕು ಎಂದು ಹೇಳುತ್ತಾರೆ, ಅದು ತಪ್ಪೆಂದು ದೂಷಿಸುತ್ತಾರೆ.

ಪ.ಸಂ. — ಯಮಲಾದಿಷು ನಾನಾ । ಏಕನಿರೂಪಿತಂ ಅಪರವೃತ್ತಿ । ನತ್ವನುಗತಂ ।

ನನು ಪೂರ್ವೋಕ್ತ ದೋಷ ಇತ್ಯಾಹ । ಅಯಮಾಶಯಃ । ಅಯಮನೇನ ಸದೃಶಃ ಸೋಮುನಾ ಸದೃಶಃ ಇತಿ ಪರಸ್ಪರ ಪ್ರತಿಯೋಗ್ಯನುಯೋಗಿ ಭಾವೋನುಭೂಯತೇ । ಸ ಚ ಸಾದೃಶ್ಯಸ್ಯ ಅನೇಕತ್ವಂ ವಿನಾನುಪನ್ನಃ । ನಹಿ ಪ್ರತಿಯೋಗ್ಯೇವಾಧಿಕರಣಂ ನವಾಧಿಕರಣಮೇವ ಪ್ರತಿಯೋಗಿ । ಅಭಾವಾದೌ ತಥಾ ದರ್ಶನಾತ್ । ಅತೋಯಮಲಯೋಃ ಸಾದೃಶ್ಯಂ ದ್ವಯಮೇವ । ಅನಯೋಃ ಸಾದೃಶ್ಯಮಿತಿ ಪ್ರತೀತೇಶ್ಚ । ವಿಪ್ರಾಣಾಂ ಭೋಜನಮಿತಿ ಪ್ರತೀತಿವನ್ನಾನಾಸಾದೃಶ್ಯ ವಿಷಯತ್ವೋಪಪತ್ತೇಃ ।

ಪೂರ್ವೋಕ್ತ ದೋಷವೇ ಬರುತ್ತದೆ. ಇದರ ಅಭಿಪ್ರಾಯವು, ಇವನು ಇವನಿಗೆ ಸದೃಶನು, ಅವನು ಇವನಿಂದ ಸದೃಶನು, ಹೀಗೆ ಪರಸ್ಪರವಾಗಿ ಅನುಯೋಗಿ ಪ್ರತಿಯೋಗಿಭಾವವು ತೋರುತ್ತದೆ. ಅದು ಅನೇಕ ಸಾದೃಶ್ಯವಿಲ್ಲದೇ ಕೂಡುವುದಿಲ್ಲ. ಪ್ರತಿಯೋಗಿಯೂ ಅಧಿಕರಣವಲ್ಲ,ಅಧಿಕರಣವೇ ಪ್ರತಿಯೋಗಿ ಅಲ್ಲ,ಅಭಾವಾದಿಗಳಲ್ಲಿ ಹಾಗೆಯೇ ಕಂಡಿರುವುದರಿಂದ, ಆದುದರಿಂದ ಯಮಲ(ಅವಳಿ-ಜವಳಿ)ಮಕ್ಕಳಂತೇ ಸಾದೃಶ್ಯವು ಎರಡೇ ಆಗಿರುತ್ತದೆ. ಇವರಿಬ್ಬರಿಗೆ ಸಾದೃಶ್ಯವೆಂಬ ವ್ಯವಹಾರವೂ ಪ್ರಸಿದ್ಧವು ಬ್ರಾಹ್ಮಣರ ಭೋಜನವು ಎಂಬ ಪ್ರತೀತಿಯಂತೇ ಅನೇಕ ಸಾದೃಶ್ಯತೆ ಯುಕ್ತವಾಗಿರುತ್ತದೆ.

**ತಸ್ಮಾತ್‌ಭಿನ್ನಭಿನ್ನಂ ಸಾದೃಶ್ಯಮಿತಿ ಸಿದ್ಧಂ। ತದುಕ್ತಂ ವೈಶೇಷಿಕಾಧಿಕರಣ ಅನುವ್ಯಾಖ್ಯಾನೇ। ಏತಾದೃಶಂಚ ಸಾದೃಶ್ಯಂ ಪದಾರ್ಥೇಷು ಪೃಥಕ್ ಪೃಥಕ್ ಇತಿ। ಸುಧಾಯಾಂ ಚ। ಅಸ್ತಿತಾವತಾವತ್ಸಾದೃಶ್ಯಂ ನಾಮ ಪದಾರ್ಥಾಂತರಂ। ಗೋಸದೃಶೋಗವಯಃ ಇತಿ ಅಕ್ಷಸಿದ್ಧತ್ವಾತ್ ತೇನೈವ ಚೋಪಪದ್ಯತೇ ವ್ಯುತ್ಪತ್ತ್ಯಾದಿಕಮಿತಿ। ತದ್ವಿಭಾಗಮಾಹ।**

ಪ.ಸಂ.– ತದ್ವಿವಿಧಂ। ನಿತ್ಯಮನಿತ್ಯಂಚ। ನಿತ್ಯಗತಂ ನಿತ್ಯಂ। ಅನಿತ್ಯಗತಂ ಅನಿತ್ಯಂ।

**ಪರಮಾತ್ಮರೂಪಾಣಾಂ ಜೀವಾನಾಂ ಚ ಪರಸ್ಪರ ಸಾದೃಶ್ಯಂ ನಿತ್ಯಂ। ನಾಶಕಾಭಾವಾತ್। ಗೋಗವಯಾದೀನಾಂ ಚ ಸಾದೃಶ್ಯಮನಿತ್ಯಂ। ಆಶ್ರಯ ನಾಶೇನ ತನ್ನಾಶಸಂಭವಾದಿತಿ ಭಾವಃ। ॥ ಇತಿ ಸಾದೃಶ್ಯ ಪ್ರಕರಣಂ ॥**

ಈ ಕಾರಣಗಳಿಂದ ಬೇರೆ ಬೇರೆಗಳಾದವುಗಳೇ ಸಾದೃಶ್ಯವೆಂದು ಸಿದ್ಧವು. ವೈಶೇಷಿಕಾಧಿಕರಣ ಅನುವ್ಯಾಖ್ಯಾನದಲ್ಲಿ ಹೇಳಿರುತ್ತದೆ. ಇಂತಹ ಸಾದೃಶ್ಯವು ಪದಾರ್ಥಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಇರುತ್ತವೆ ಎಂದು ಸುಧಾದಲ್ಲಿಯೂ ಸಾದೃಶ್ಯವೆಂಬ ಪದಾರ್ಥಾಂತರ ಮತ್ತೊಂದು ಪದಾರ್ಥ ಇದೆ, ಗೋವಿಗೆ ಸದೃಶವು ಗವಯವು ಎಂಬ ಪ್ರತ್ಯಕ್ಷವಿರುವುದರಿಂದ. ಆದುದರಿಂದಲೇ ಸಿದ್ಧವಾಗುತ್ತದೆ. ಉತ್ಪತ್ತ್ಯಾದಿಗಳು ಹೀಗೆ ಹೇಳಿರುತ್ತದೆ.

ಸಾದೃಶ್ಯವು ಎರಡು ವಿಧಗಳಾಗಿರುತ್ತದೆ. ನಿತ್ಯ ಸಾದೃಶ್ಯ ಅನಿತ್ಯ ಸಾದೃಶ್ಯಗಳೆಂದು. ಪರಮಾತ್ಮನ ರೂಪಗಳಿಗೆ, ಜೀವರುಗಳಿಗೆ ಪರಸ್ಪರ ಸಾದೃಶ್ಯ ನಿತ್ಯವಾದವುಗಳು ನಾಶವಿಲ್ಲವಾದ್ದರಿಂದ ಗೋವು ಗವಯಾದಿಗಳಿಗಿರುವ ಸಾದೃಶ್ಯವು ಅನಿತ್ಯವು. ಆಶ್ರಯನಾಶದಿಂದ ನಷ್ಟವಾಗುವವುಗಳಾದ್ದರಿಂದ ಎಂದಭಿಪ್ರಾಯವು.

ಹೀಗೆ ಸಾದೃಶ್ಯಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತವಾಯಿತು.

# ೧೨. ಅಭಾವ ಪ್ರಕರಣ

ಅವಶಿಷ್ಟಂ ಅಭಾವಂ ವಿಭಜತಿ ।

ಪ.ಸಂ.—ಅಭಾವಶ್ಚತುರ್ವಿಧಃ । ಪ್ರಾಗಭಾವಃ ಪ್ರಧ್ವಂಸಾಭಾವಃ ಅನ್ಯೋನ್ಯಾಭಾವಃ ಅತ್ಯಂತಾಭಾವಶ್ಚೇತಿ ।

ಪ್ರಥಮ ಪ್ರತಿಪತ್ತೌ ನೇತಿ ಬೋಧ್ಯಮಾನತ್ವಂ ಅಭಾವ ಸಾಮಾನ್ಯ ಲಕ್ಷಣಂ । ಪ್ರಾಗಭಾವ ಸ್ವರೂಪಮಾಹ ।

ಪ.ಸಂ.—ಕಾರ್ಯೋತ್ಪತ್ತೇಃ ಪೂರ್ವ ವಿದ್ಯಮಾನಃ ಅಭಾವಃ ಪ್ರಾಗಭಾವಃ । ಮಹದಾದಿ ಕಾರ್ಯಮಾತ್ರಸ್ಯ ।

ನನು ಪ್ರಾಗಭಾವ ಸದ್ಭಾವೇ ಮಾನಾಭಾವಃ । ಪಟೋತ್ಪತ್ತೇಃ ಪೂರ್ವಂ ಪಟೋನಾಸ್ತೀತಿ ಪ್ರತೀತೇಃ । ಪಟಾತ್ಯಂತಾಭಾವ ವಿಷಯ ಕತ್ವೋಪಪತ್ತೇಃ । ನ ಚ ಆಕಾಶಾದೀನಾಮಪಿ ಉತ್ಪತ್ತಿ ಪ್ರಸಂಗ ಇತಿ ವಾಚ್ಯಂ । ಭಾವರೂಪ ಕಾರಣಾಭಾವಾದೇವ ಉತ್ಪತ್ತ್ಯಭಾವೋಪಪತ್ತೇರಿತಿ ಚೇನ್ನ । ಪಟಾದಿ ಪ್ರಾಗಭಾವಾನಂಗೀಕಾರೇ ಉತ್ಪನ್ನಸ್ಯ ಪಟಸ್ಯ ಪುನರುತ್ಪತ್ತಿ ಪ್ರಸಂಗಾತ್ । ಪ್ರಾಗಭಾವೇತರ ಸಕಲಕಾರಣಸದ್ಭಾವಾತ್ । ಕಿಂಚ ।

ಹತ್ತು ಪದಾರ್ಥಗಳಲ್ಲಿ ಅವಶಿಷ್ಟವಾದ ಅಭಾವವನ್ನು ನಿರೂಪಿಸುತ್ತಾರೆ. ಅಭಾವವು ನಾಲ್ಕು ವಿಧವಾಗಿರುತ್ತದೆ. ಪ್ರಾಗಭಾವ, ಪ್ರಧ್ವಂಸಾಭಾವ, ಅನ್ಯೋನ್ಯಾಭಾವ ಮತ್ತು ಅತ್ಯಂತಾಭಾವ ಎಂದು. ಪ್ರಥಮ ಪ್ರತೀತಿಯಲ್ಲಿ ಇಲ್ಲ ಎಂಬ ಜ್ಞಾನಕ್ಕೆ ವಿಷಯವಾಗುವುದೇ ಅಭಾವ ಸಾಮಾನ್ಯ ಲಕ್ಷಣವು. ಪ್ರಾಗಭಾವ ಸಾಮಾನ್ಯ ಲಕ್ಷಣವನ್ನು ಹೇಳುತ್ತಾರೆ. ಕಾರ್ಯೋತ್ಪತ್ತಿಗೆ ಪೂರ್ವದಲ್ಲಿರುವ ಅಭಾವವೇ ಪ್ರಾಗಭಾವವು. ಪ್ರಾಗಭಾವವು ಮಹದಾದಿ ಮಾತ್ರಕ್ಕೆ ಎಂದರೆ ಅನಿತ್ಯ ಪ್ರತಿಯೋಗಿಕ ವೆಂದರ್ಥವು. ಪೂರ್ವಪಕ್ಷ ಮಾಡುತ್ತಾರೆ. ಪ್ರಾಗಭಾವವಿರುವ ವಿಷಯದಲ್ಲಿ ಪ್ರಮಾಣ ವಿಲ್ಲ,ಪಟ ಹುಟ್ಟುವ ಮೊದಲು ಪಟ ಇಲ್ಲವೆಂದು ಪ್ರತೀತಿ ಇದೆ ಅದು ಅತ್ಯಂತಾಭಾವ ವಿಷಯುವೆಂದು ಕೂಡುತ್ತದೆ. ಆಕಾಶಾದಿಗಳಿಗೆ ಹುಟ್ಟಿನ ಪ್ರಸಂಗ ಬರಲಿ, ಹಾಗೆನ್ನ ಬಾರದು, ಭಾವರೂಪ ಕಾರಣವಿಲ್ಲವಾದ್ದರಿಂದಲೇ ಉತ್ಪತ್ತಿ ಇಲ್ಲವೆಂಬುದು ಉಪಪನ್ನ ವಾಗುತ್ತದೆ ಹೀಗೆನ್ನಬಾರದು. ಪಟಾದಿ ಪ್ರಾಗಭಾವಾಂಗೀಕಾರ ಹುಟ್ಟಿದ ಬಟ್ಟೆಗೆ ಮತ್ತೊಮ್ಮೆ ಹುಟ್ಟಲೆಂಬ ಆಕ್ಷೇಪವು ಬರುತ್ತದೆ. ಪ್ರಾಗಭಾವ ಹೊರತಾಗಿ ಎಲ್ಲಾ ಕಾರಣಗಳಿರುವುದರಿಂದ ಮತ್ತು

ಘಟೋ ಭವಿಷ್ಯತೀತಿ ಪ್ರತ್ಯಯಸ್ಯ ನಿರ್ವಿಷಯತ್ವಾಪತ್ತಿಃ । ನ ಚ ಘಟಾತ್ಯಂತಾಭಾವಸ್ತದ್ವಿಷಯಃ । ತಸ್ಯ ಸರ್ವದಾಸತ್ವೇನ ಘಟೋತ್ಪತ್ತ್ಯನಂತರಮಪಿ ಭವಿಷ್ಯತೀತಿ ಪ್ರತ್ಯಯಾಪತ್ತೇಃ । ಅಪಿ ಚ । ಘಟೇಪಾಕೇನ ರೂಪರಸಾದ್ಯುತ್ಪತ್ತಿರಸ್ತಿ । ತತ್ರ ಘಟಾಗ್ನಿ ಸಂಯೋಗ ಕಾಲಾದಿಕಾರಣಾನಾಂ ರೂಪರಸಾದಿ ಸಾಧಾರಣತ್ವೇನ ಸಾಮಗ್ರೀಭೇದಾಭಾವೇನ ರೂಪರಸಾದೀನಾಂ ಭೇದೋನಸ್ಯಾತ್ ।

ಪ್ರಾಗಭಾವವನ್ನು ಒಪ್ಪದರೆ ಕೊಡ ಹುಟ್ಟುತ್ತದೆ ಎಂಬ ವ್ಯವಹಾರಕ್ಕೆ ನಿರ್ವಿಷಯತೆ ಬರಬೇಕಾದೀತು. ಕೊಡದ ಅತ್ಯಂತಾಭಾವವೇ ಅದರ ವಿಷಯ ಎನ್ನಲಾಗುವುದಿಲ್ಲ. ಅತ್ಯಂತಾಭಾವವು ಸರ್ವದಾ ಇರುವುದರಿಂದ ಘಟ ಹುಟ್ಟಿದ ನಂತರವೂ ಹುಟ್ಟುತ್ತದೆ ಎಂಬ ವ್ಯವಹಾರ ಇರಬೇಕಾದೀತು. ಮತ್ತೂ ಘಟದಲ್ಲಿ ಪಾಕದಿಂದ (ಸುಡುವಿಕೆಯಿಂದ) ರೂಪ ರಸಾದಿಗಳ ಹುಟ್ಟು ಕಾಣುತ್ತದೆ. ಅಲ್ಲಿ ಘಟ ಅಗ್ನಿ ಸಂಯೋಗ ಕಾಲಾದಿ ಕಾರಣಗಳಿಗೆ ರೂಪರಸಾದಿ ಸಾಮಾನ್ಯ ಇರುವುದರಿಂದ ಸಾಮಗ್ರೀಭೇದವಿಲ್ಲವಾದ್ದರಿಂದ ರೂಪರಸಾದಿಗಳಿಗೂ ಭೇದವಿಲ್ಲವಾಗಲಿ. ಅದು ಇಷ್ಟಾಪತ್ತಿ ಎನ್ನಲು ಬರುವುದಿಲ್ಲ.

ಸಾಮಗ್ರೀಭೇದನಿಯತತ್ವಾತ್ಕಾರ್ಯಭೇದಸ್ಯ । ನ ಚ ಪೂರ್ವರೂಪರಸಾದೀನಾಂ ಏವ ಉತ್ತರ ರೂಪ ರಸಾದಿಕಂ ಪ್ರತಿಹೇತುತ್ವಮಿತಿ ವಾಚ್ಯಂ । ತೇಷಾಂ ತೇಜಸ್ಸಂಯೋಗೇನ ಧ್ವಸ್ತತ್ವೇನ ಅಕಾರಣತ್ವಾತ್ । ನ ಚ ಪೂರ್ವರೂಪ ಧ್ವಂಸ ಏವ ಕಾರಣಮಿತಿವಾಚ್ಯಂ । ಧ್ವಂಸಸ್ಯಕ್ವಾಪಿಭಾವ ಕಾರ್ಯಂ ಪ್ರತಿಕಾರಣತ್ವಾನಂಗೀಕಾರಾತ್ । ಪ್ರಾಗಭಾವಾಂಗೀಕಾರೇತು ಪ್ರಾಗಭಾವ ಭೇದಾತ್ ಕಾರ್ಯಭೇದಸ್ಯ ಸಂಭವಾತ್ । ನಚಾದೃಷ್ಟಭೇದಾತ್ಕಾರ್ಯ ಭೇದಃ । ದೃಷ್ಟ ಸಾಮಗ್ರ್ಯೈಕೋನ್ನೇಯತ್ವಾದ ದೃಷ್ಟಸ್ಯ । ತಸ್ಮಾತ್ ಪ್ರಾಗಭಾವ ಸಿದ್ಧಿಃ । ಪ್ರಧ್ವಂಸಾಭಾವ ಸ್ವರೂಪಮಾಹ ।

ಸಾಮಗ್ರಿಭೇದವನ್ನೇ ಅವಲಂಬಿಸಿರುವುದು ಕಾರ್ಯಭೇದವಾದ್ದರಿಂದ ಮೊದಲಿನ ರೂಪರಸಾದಿಗಳೇ ಮುಂದಿನ ರೂಪರಸಾದಿಗಳಿಗೆ ಕಾರಣವೆನ್ನುತ್ತೇವೆ. ಎಂದರೂ ತಪ್ಪೇ, ಅವುಗಳು ಅಗ್ನಿ ಸಂಯೋಗದಿಂದ ಧ್ವಂಸವಾಗಿರುವುದರಿಂದ ಪೂರ್ವರೂಪ ಧ್ವಂಸವೇ ಕಾರಣವೆಂದರೆ ಅದೂ ಕೂಡುವುದಿಲ್ಲ. ಧ್ವಂಸಕ್ಕೆ ಎಲ್ಲೂ ಭಾವ ಕಾರ್ಯಕಾರಣತೆ ಅಂಗೀಕರಿಸಿಲ್ಲವಾದ್ದರಿಂದ ಪ್ರಾಗಭಾವವನ್ನು ಒಪ್ಪಿದರೆ ಪ್ರಾಗಭಾವ ಭೇದದಿಂದ ಕಾರ್ಯಭೇದವೂ ಕೂಡುವುದಿಲ್ಲಾ ಅದೃಷ್ಟಕ್ಕೆದೃಷ್ಟ ಸಾಮಗ್ರಿ ಕಂಡಿರುವುದರಿಂದ, ಆದುದರಿಂದ ಪ್ರಾಗಭಾವಸಿದ್ಧಿಯು. ಪ್ರಧ್ವಂಸಾ(ನಿಯತತೇ) ಭಾವ ಸ್ವರೂಪವನ್ನು ಹೇಳುತ್ತಾರೆ.

ಪ.ಸಂ —ಉತ್ಪತ್ತ್ಯನಂತರಮೇವ ವಿದ್ಯಮಾನೋ ಅಭಾವಃ ಪ್ರಧ್ವಂಸಾಭಾವಃ । ಸೋಽಪಿ ಕಾರ್ಯಮಾತ್ರಸ್ಯ ।

**ಏವಕಾರೋ ಅನ್ಯೋನ್ಯಾಭಾವ ವ್ಯಾವೃತ್ತ್ಯರ್ಥಃ । ಅನ್ಯೋನ್ಯಾಭಾವ ಸ್ವರೂಪಮಾಹ ।**

ಪ.ಸಂ.—ಸಾರ್ವಕಾಲಿಕೋ ಅಭಾವಃ ಅನ್ಯೋನ್ಯಾಭಾವಃ ।

**ಸಾರ್ವಕಾಲಿಕ ಇತ್ಯನೇನ ಉತ್ಪತ್ತೇಃ ಪೂರ್ವಂ ಏವೋತ್ಪತ್ತ್ಯನಂತರಮೇವೇತಿ ನಿಯಮಂ ವ್ಯಾವರ್ತಯತಿ । ನತು ಸರ್ವಕಾಲ ವೃತ್ತಿತ್ವರೂಪಂ ನಿತ್ಯತ್ವಂ । ಘಟನಾಶೇ ತನ್ನಿಷ್ಠ ಪಟಾದಿ ಭೇದನಾಶಾಭ್ಯುಪಗಮಾತ್ । ಯಥಾ ಪ್ರಾಗಭಾವ ಧ್ವಂಸ ಅತ್ಯಂತಾಭಾವಾನಾಂ ಧರ್ಮ್ಯತಿರಿಕ್ತತ್ವಂ ನ ತಥಾ ಅನ್ಯೋನ್ಯಾಭಾವಸ್ಯೇತ್ಯಾಹ ।**

ಪ್ರತಿಯೋಗಿ ಹುಟ್ಟಿದ ನಂತರವೇ ಹುಟ್ಟುವ ಅಭಾವವೇ ಪ್ರಧ್ವಂಸಾಭಾವವು. ಇದು ಕಾರ್ಯ ಮಾತ್ರಕ್ಕೆ ಅಂದರೆ ಅನಿತ್ಯ ಮಾತ್ರ ಪ್ರತಿಯೋಗಿಕವೆಂದರ್ಥವು. ಇಲ್ಲಿ ಏವಕಾರದಿಂದ ಭೇದಾಭಾವ ವ್ಯತಿರೇಕತೆ ತೋರಿಸಲು ಅನ್ಯೋನ್ಯಾಭಾವ ಸ್ವರೂಪವನ್ನು ತೋರಿಸುತ್ತಾರೆ. ಸಾರ್ವಕಾಲಿಕ ಅಭಾವವೇ ಅನ್ಯೋನ್ಯಾಭಾವವು. ಸಾರ್ವಕಾಲಿಕವೆಂದರೆ ಹಿಂದಿನ ಅಭಾವಗಳಂತೇ ಅಲ್ಲಿ ಪ್ರತಿಯೋಗಿ ಹುಟ್ಟುವುದರ ಮೊದಲು ಹುಟ್ಟಿದ ನಂತರವೂ ಇರುವ ಅಭಾವವೆಂದರ್ಥವು. ಸಾರ್ವಕಾಲಿಕ ವೃತ್ತಿತ್ವ ರೂಪವಾದುದು ನಿತ್ಯವೆಂದರ್ಥವಲ್ಲ. ಘಟನಷ್ಟವಾದರೆ ಅದರಲ್ಲಿರುವ ಪಟ ಭೇದವೂ ನಾಶವಾಗುವುದೆಂದು ಒಪ್ಪಿರುವುದರಿಂದ ಮತ್ತು ಹೇಗೆ ಧ್ವಂಸ ಅತ್ಯಂತಾಭಾವಗಳಿಗೆ ಧರ್ಮಿಯಿಂದ (ಅನುಯೋಗಿ) ಅತಿರಿಕ್ತತೆಯೋ ಹಾಗೆ ಅನ್ಯೋನ್ಯಾಭಾವಕ್ಕೆ ಧರ್ಮ ವ್ಯತಿರಿಕ್ತತೆ ಇಲ್ಲ.

ಪ.ಸಂ.—ಪದಾರ್ಥ ಸ್ವರೂಪಮೇವ । ನಿತ್ಯಾತ್ಮಕೋ ನಿತ್ಯಃ । ಅನಿತ್ಯಾತ್ಮಕೋ ಅನಿತ್ಯಃ ।

**ನನು ಭೇದೋನ ಧರ್ಮಿಸ್ವರೂಪಂ । ಘಟನಾಶೇತನ್ನಿಷ್ಠಪಟಾದಿ ಭೇದಸ್ಯಾಪಿ ನಾಶಪ್ರಸಂಗಾತ್ । ನ ಚೇಷ್ಟಾಪತ್ತಿಃ । ಘಟ ಪಟಯೋಃ ಅಭೇದ ಪ್ರಸಂಗಾತ್ ।**

ಅನ್ಯೋನ್ಯಾಭಾವವು ಪದಾರ್ಥ ಸ್ವರೂಪವೇ ಆಗಿರುತ್ತದೆ. ನಿತ್ಯ ಪದಾರ್ಥಗಳಲ್ಲಿರುವ ಭೇದ ನಿತ್ಯಾತ್ಮಕವಾಗಿ ನಿತ್ಯವೇ ಆಗಿರುತ್ತದೆ. ಅನಿತ್ಯ ಪದಾರ್ಥಗಳಲ್ಲಿರುವ ಭೇದ ಅನ್ಯೋನ್ಯಾಭಾವವು ಅನಿತ್ಯವೇ ಆಗಿರುತ್ತದೆ. ಭೇದವನ್ನು ಧರ್ಮಿ (ಅನುಯೋಗಿ) ಸ್ವರೂಪವೆಂದು ಏಕೆ ಒಪ್ಪಬೇಕು. ಘಟನಾಶವಾದರೆ ಅದರಲ್ಲಿದ್ದ ಪಟಾದಿ ಭೇದಕ್ಕೂ ನಾಶಬರುವುದಿಲ್ಲವೇ ಎಂದರೆ, ಇದು ಇಷ್ಟವಲ್ಲ ಘಟ ನಷ್ಟದಿಂದ

ಪಟ ಭೇದ ನಷ್ಟವಾದರೆ, ಭೇದ ನಷ್ಟವಾದ್ದರಿಂದ ಘಟ ಪಟಗಳಿಗೆ ಅಭೇದ ಬರಲಿ ಎಂದು ಆಕ್ಷೇಪ ಬರುತ್ತದೆ.

**ಭೇದಾಭಾವೇ ಅಭೇದಸ್ಯ ನ್ಯಾಯಪ್ರಾಪ್ತತ್ವಾತ್ । ನಷ್ಟಾನಾಮಪಿ ವಸ್ತೂನಾಂ ಭೇದೋನೈವ ವಿನಶ್ಯತೀತಿ ತೈತ್ತಿರೀಯಭಾಷ್ಯ ವಿರೋಧ ಪ್ರಸಂಗಾಚ್ಚ । ಇತಿ ಚೇದುಚ್ಯತೇ । ಘಟ ಪಟಯೋರ್ಭೇದಸ್ತಾವನ್ನೈಕಃ ಕಿಂತು ಘಟ ಪ್ರತಿಯೋಗಿಕಃ ಪಟಾಧಿಕರಣಭೇದಃ । ತಥಾ ಪಟ ಪ್ರತಿಯೋಗಿಕಃ ಘಟಾಧಿಕರಣ ಭೇದಃ ಅಪರಃ । ತಥಾ ಚ ಘಟನಾಶೇನ ಘಟಾಧಿಕರಣಕ ಪಟ ಪ್ರತಿಯೋಗಿಕ ಭೇದ ನಾಶೇಽಪಿ ಘಟ ಪ್ರತಿಯೋಗಿಕ ಪಟಾಧಿಕರಣಕ ಭೇದಸ್ಯ ಅನಾಶಾತ್ । ಏವಂ ಚ ಘಟನಾಶೇಸತಿ ಪಟಸ್ಯಸತ್ವೇನ ತತ್ರ ನಷ್ಟ ಘಟ ಭೇದಸ್ಯಾಪಿ ಸತ್ವೇನ ಘಟಾಭೇದಾನುಪಪತ್ತೇಃ ।**

ಭೇದವಿಲ್ಲ ಎಂಬಲ್ಲಿ ಅಭೇದವೇ ಎಂಬ ನ್ಯಾಯ(ನಿಯಮ)ವಿರುವುದರಿಂದ ತೈತ್ತಿರೀಯ ಭಾಷ್ಯದಲ್ಲಿ ವಸ್ತುಗಳು ನಷ್ಟವಾದರೂ ಭೇದನಾಶವಾಗುವುದಿಲ್ಲ ಎಂದು ಹೇಳಿರುವುದರಿಂದ ಭೇದನಾಶವೆಂದರೆ ಇದರ ವಿರೋಧವು ಬರುತ್ತದೆ. ಎಂದರೆ ವಸ್ತುಸ್ಥಿತಿಯನ್ನು ಹೇಳುತ್ತಾರೆ. ಘಟಪಟಗಳ ಭೇದವೂ ಒಂದೇ ಅಲ್ಲಾ, ಆದರೆ ಘಟ ಪ್ರತಿಯೋಗಿಕ ಪಟಾಧಿಕರಣಕ(ಅನುಯೋಗಿಕ) ಒಂದು ಇದರಂತೇ ಪಟ ಪ್ರತಿಯೋಗಿಕ ಘಟಾಧಿಕರಣ ಬೇರೆ, ಹೀಗೆಂದ ಮೇಲೆ ಘಟನಾಶದಿಂದ ಘಟಾಧಿಕರಣಕ ಪಟಪ್ರತಿಯೋಗಿಕ ಭೇದ ನಷ್ಟವಾದರೂ ಘಟಪ್ರತಿಯೋಗಿಕ ಪಟಾಧಿಕರಣಕ ಭೇದ ನಾಶವಾಗುವುದೇ ಇಲ್ಲ. ಆದುದರಿಂದ ಘಟನಾಶವಾದರೂ ಪಟವಿರುವುದರಿಂದ ಅಲ್ಲಿ ನಷ್ಟವಾದ ಘಟದ ಭೇದವೂ ಇರುವುದರಿಂದ ಪಟಕ್ಕೆ ಘಟಾಭೇದ ಸ್ವರೂಪತೆ ಹೇಳಿದರೆ ಬಾಧಕ ಬರುವುದಿಲ್ಲ. ಆದುದರಿಂದಲೇ ಭೇದವು ಅಧಿಕರಣ ಸ್ವರೂಪವೇ.

**ಘಟಸ್ಯಚ ನಷ್ಟತ್ವೇನ ಪಟಭೇದಾಪಾದಾನ ಅಸಂಭವಾಚ್ಚ । ಯದಪಿ ಚೋಕ್ತಂ ನಷ್ಟಾನಾಮಪಿ ವಸ್ತೂನಾಂ ಇತ್ಯಾದಿ ಭಾಷ್ಯವಿರೋಧಃ ಇತಿ । ತನ್ನ । ತಸ್ಯ ಅಜ್ಞಾನಿಯತತ್ವೇನ ಜ್ಞಾನಿಮತತ್ವಾಭಾವಾತ್ । ಜ್ಞಾನಿಮತೇತು ಭೇದಸ್ಯ ವಿನಾಶ ಏವ । ತದುಕ್ತಂ ತೈತ್ತಿರೀಯಭಾಷ್ಯೇ । ಇತ್ಯಾಹುಃ ಕೇಚಿದಜ್ಞಾನಾತ್ ತತ್ರಾಹುಃ ಸೂಕ್ಷ್ಮದರ್ಶಿನಃ । ಸತ್ಯಂ ಭೇದಸ್ತು ವಸ್ತೂನಾಂ ಸ್ವರೂಪಂ ನಾತ್ರ ಸಂಶಯಃ । ತಸ್ಮಾದ್ವಸ್ತು ವಿನಾಶೇತು ತದ್ಭೇದೋ ನಾಸ್ತಿಕುತ್ರಚಿತ್ । ಅವಿನಷ್ಟಸ್ಯತಸ್ಮಾತ್ತು ಭೇದೋಽಸ್ತ್ಯೇವ ಸ್ವರೂಪತಃ । ಏವಂ ಭಾವಾದಭಾವಸ್ಯ ಭೇದೋಭಾವರೂಪವಾನಿತ್ಯಾದಿ ।**

ಘಟ ನಷ್ಟವಾದ ಮೇಲೆ ಅಲ್ಲಿ ಪಟ ಭೇದವಿದೆ ಎಂಬುದು ಅಸಂಭಾವಿತವೇ ಆಗುತ್ತದೆ. ವಸ್ತು ನಷ್ಟವಾದರೂ ಭೇದ ನಷ್ಟವಾಗುವದಿಲ್ಲವೆಂದು ಭಾಷ್ಯ ವಿರೋಧ ವೆಂದು. ಅದು ಸುಳ್ಳು ವಿರೋಧ ಬರುವುದಿಲ್ಲ. ಅಜ್ಞಜನರ ಮತವಾಗಿ

ಅನುವಾದಿಸಿರುವುದೇ ಆಗಲಿ ಜ್ಞಾನಿಗಳ ಮತವಲ್ಲವು. ಜ್ಞಾನಿಗಳ ಮತದಲ್ಲಿ ಭೇದಕ್ಕೆ ವಿನಾಶವೇ, ಅದೇ ತೈತ್ತಿರೀಯ ಭಾಷ್ಯದಲ್ಲಿ ಹೀಗೆ ಹೇಳಿರುತ್ತಾರೆ. ಅಜ್ಞಾನಿಗಳು ಕೆಲವರು ಭೇದಕ್ಕೆ ನಾಶವಿಲ್ಲವೆನ್ನುತ್ತಾರೆ. ಸೂಕ್ಷ್ಮದರ್ಶಿಗಳು ವಸ್ತುಗಳ ಭೇದವು ಸತ್ಯವು ಅದು ವಸ್ತು ಸ್ವರೂಪವು ಹೌದು ಸಂಶಯವಿಲ್ಲ. ಆದ್ದರಿಂದ ವಸ್ತುನಾಶ ವಾದರೆ ಅದರ ಭೇದವು ಎಲ್ಲೂ ಇರುವುದಿಲ್ಲ, ನಷ್ಟವಾಗದಿರುವುದಕ್ಕೆ ಮತ್ತೊಂದರಿಂದ ಭೇದವು ಸ್ವರೂಪತಃ ಇದ್ದೇ ಇದೆ. ಈ ರೀತಿ ಇರುವುದರಿಂದ ಅಭಾವದ ಭೇದವು ಭಾವರೂಪವೇ ಆಗಿರುತ್ತದೆಂದು ಹೇಳಿರುತ್ತದೆ.

ನನ್ವೇವಮಪಿ ಭೇದಸ್ಯನಾಶಾಂಗೀಕಾರೇ ಪಂಚಭೇದಸ್ಯ ನಿತ್ಯತ್ವ ಪ್ರತಿಪಾದಕ ಪ್ರಮಾಣ ವಿರೋಧಃ । ತಥಾಹಿ ನಿರ್ಣಯೇ । ಜೀವೇಶಯೋರ್ಭಿದಾ ಚೈವ ಜೀವಭೇದಃ ಪರಸ್ಪರಂ । ಜಡೇಶಯೋಃ ಜಡಾನಾಂ ಚ ಜಡಜೀವಭಿದಾತಥಾ । ಪಂಚ ಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ನಿತ್ಯಶಃ ಇತಿ । ತತ್ವ ನಿರ್ಣಯೇಪಿ । ಜೀವೇಶ್ವರ ಭಿದಾಚೈವ ಜಡೇಶ್ವರ ಭಿದಾ ತಥಾ । ಜೀವ ಭೇದೋ ಮಿಥಃ ಚೈವ ಜಡ ಜೀವಭಿದಾತಥಾ । ಮಿಥಶ್ಚ ಜಡಭೇದೋಯಂ ಪ್ರಪಂಚೋ ಭೇದ ಪಂಚಕಃ । ಸೋಯಂ ಸತ್ಯೋ ಅನಾದಿಶ್ಚ ಸಾದಿಶ್ಚೇನ್ನಾಶಮಾಪ್ನುಯಾತ್ । ನ ಚ ನಾಶಂ ಪ್ರಯಾತ್ಯೇಷಃ ನಚಾಸೌ ಭ್ರಾಂತಿಕಲ್ಪಿತಃ ಇತಿ ।

ಹಿಂದೆ ಹೇಳಿದಂತೆ ಭೇದಕ್ಕೆ ನಾಶವನ್ನೂ ಒಡಂಬಟ್ಟರೆ, ಪಂಚಭೇದಗಳಿಗೆ ನಿತ್ಯತೆ ಹೇಳುವ ಪ್ರಮಾಣಗಳಿಗೆ ವಿರೋಧ ಬರುವುದಿಲ್ಲವೇ? ನಿರ್ಣಯದಲ್ಲಿ ಜೀವೇಶರ ಭೇದವು ಹಾಗೆ ಜೀವರುಗಳ ಭೇದವು. ಜಡೇಶ್ವರರಿಗೆ ಜಡಗಳಿಗೆ ಹಾಗೂ ಜಡ ಜೀವರ ಭೇದವು. ಹೀಗೆ ಪ್ರಪಂಚವು ಐದುವಿಧ ಭೇದ ಉಳ್ಳದ್ದು ಎಂದು ಹೇಳಿದೆ. ತತ್ವನಿರ್ಣಯದಲ್ಲಿಯೂ ಜೀವೇಶ್ವರ ಭೇದವು, ಜಡೇಶ್ವರ ಭೇದವು, ಹಾಗೆ ಪರಸ್ಪರ ಜೀವರುಗಳ ಭೇದವು, ಹಾಗೆ ಜಡ ಜೀವರ ಭೇದವು, ಪ್ರಪಂಚವು ಐದುವಿಧ ಭೇದಉಳ್ಳದ್ದು ಈ ಐದು ವಿಧ ಭೇದಗಳು ಸತ್ಯವಾದವುಗಳು, ಅನಾದಿಗಳು ಎಂದೆಂದಿಗೂ ನಾಶ ಹೊಂದುವುಗಳಲ್ಲಾ, ನಾಶಹೊಂದುವುದಿಲ್ಲಾ ಇದು ಭ್ರಾಂತಿ ಕಲ್ಪಿತವೂ ಅಲ್ಲಾ ಎಂದು ನಿರೂಪಿಸಲ್ಪಟ್ಟಿದೆ.

ತಥಾ ಚ ಭೇದಸ್ಯನ ನಾಶಃ ಇತಿ ಚೇದುಚ್ಯತೇ । ನತಾವತ್ ಪಂಚ ಭೇದಾ ಇಮೇ ನಿತ್ಯಾಃ ಇತಿ ನಿತ್ಯಪದಾದ್ಭೇದಸ್ಯ ಉತ್ಪತ್ತಿವಿನಾಶಾಭಾವ ಸಿದ್ಧಿಃ । ಇಮೇಽನಿತ್ಯಾಃ ಸತ್ಯಾಃ ನತು ಮಿಥ್ಯಾಭೂತಾಃ । ಯದ್ವಾ ನಿತ್ಯಾಃ ಸ್ವಾಭಾವಿಕಾಃ ನತು ಔಪಾಧಿಕಾಃ ಇತಿ ವ್ಯಾಖ್ಯಾನ ಸಂಭವಾತ್ ।

ಹೀಗೆ ಹೇಳಿರುವುದರಿಂದ ಭೇದಕ್ಕೆ ನಾಶವಿಲ್ಲವೆಂದರೆ ಹೇಳುತ್ತೇವೆ. ಈ ಪಂಚ ಭೇದಗಳು ನಿತ್ಯಗಳೆಂದರೆ ಉತ್ಪತ್ತಿನಾಶಗಳಿಲ್ಲವೆಂದರ್ಥವಲ್ಲಾ, ಇವು ನಿತ್ಯಗಳೆಂದರೆ ಸತ್ಯವಾದವುಗಳೆಂದೇ ಅಗಲಿ ಮಿಥ್ಯಾಗಳಲ್ಲವೆಂದರ್ಥವು. ಅಥವಾ ನಿತ್ಯಗಳೆಂದರೆ ಸ್ವಾಭಾವಿಕಗಳೆಂದರ್ಥವು. ಔಪಾಧಿಕಗಳಲ್ಲವೆಂದೂ ವ್ಯಾಖ್ಯಾನವು ಯುಕ್ತವಾಗುತ್ತದೆ.

**ಸತ್ಯನಿತ್ಯ ಶಬ್ದಯೋಃ ಏಕಾರ್ಥತ್ವಸ್ಯ ಆಚಾರ್ಯೈರೇವ ಉಕ್ತತ್ವಾತ್ ಮೃತ್ತಿಕೇತ್ಯೇವ ಸತ್ಯಂ ಇತ್ಯತ್ರಮೃತ್ತಿಕೇತಿ ಸಂಸ್ಕೃತಂ ಪದಂ ನಾಮ ಸತ್ಯಂ ನಿತ್ಯಂ ಇತ್ಯರ್ಥಃ ಇತಿ । ಕಿಂಚ । ನಿರ್ಣಯ ಏವೈತತ್ಪೂರ್ವತ್ರ ಸತ್ಯಾ ವಿಷ್ಣೋರ್ಗುಣಾಃ ಸರ್ವೇ ಸತ್ಯಾ ಜೀವೇಶಯೋರ್ಭಿದಾ । ಸತ್ಯೋಮಿಥೋ ಜೀವ ಭೇದಃ ಸತ್ಯಂ ಚ ಜಗದೀದೃಶಂ । ಜಗತ್ಪ್ರವಾಹಃ ಸತ್ಯೋಯಂ ಪಂಚ ಭೇದ ಸಮನ್ವಿತಃ । ಇತಿ ಪಂಚಭೇದಸ್ಯ ಸತ್ಯತ್ವಂ ಅಭಿಧಾಯ ತತ್ರ ಜೀವೇಶ್ವರ ಭಿದಾಚೈವೇತಿ ಪ್ರಮಾಣೋದಾಹರಣಮಿತ್ಯಭಿಪ್ರಾಯ ಕಲ್ಪನಾತ್ । ನ ಚ ಪೂರ್ವತ್ರ ಪರಮಾತ್ಮಗುಣಾನಾಂ ಪಂಚಭೇದಾನಾಂ ಚ ಸತ್ಯತ್ವಮಭಿಧಾಯೋತ್ತರತ್ರ ನಿತ್ಯತ್ವಮುಚ್ಯತ ಇತ್ಯಭಿಪ್ರಾಯ ಏವಾಸ್ತ್ವಿತಿ ವಾಚ್ಯಂ। ಅಥಾಪಿನಿತ್ಯ ಪದೇನ ನಿತ್ಯಗತ ಭೇದ ಪರತಯಾತೇಷಾಂ ನಿತ್ಯತ್ವೋಪಪತ್ತೇಃ ।**

ಸತ್ಯ ನಿತ್ಯ ಶಬ್ದಗಳಿಗೆ ಒಂದೇ ಅರ್ಥವೆಂಬುದನ್ನು ಆಚಾರ್ಯರೇ ಹೇಳಿರುತ್ತಾರೆ. "ಮೃತ್ತಿಕೇತ್ಯೇವ ಸತ್ಯಂ" ಎಂಬ ವೇದವಾಕ್ಯದಲ್ಲಿ ಮೃತ್ತಿಕೆ ಎಂಬ ಸಂಸ್ಕೃತ ಭಾಷಾ ಪದವು ಸತ್ಯವು ನಿತ್ಯವು ಎಂದರ್ಥವೆಂದಿರುತ್ತಾರೆ ಮತ್ತು ನಿತ್ಯ ಸತ್ಯ ಪದಗಳ ಅರ್ಥ ಸಮತೆಯು ಪೂರ್ವದಲ್ಲಿ ನಿರ್ಣೀತವಾಗಿರುವುದೇ, ವಿಷ್ಣುವಿನ ಗುಣಗಳು ಸತ್ಯವಾದವುಗಳು ಸರ್ವ ಜೀವೇಶ್ವರ ಭೇದವೂ ಸತ್ಯವೇ, ಪರಸ್ಪರ ಜೀವರುಗಳ ಭೇದವು ಜಗತ್ತು ಈ ರೀತಿಯಾಗಿ ಸತ್ಯವಾದುದೇ ಜಗತ್ಪ್ರವಾಹವು ಸತ್ಯವಾದುದು ಪಂಚಭೇದಯುಕ್ತವು. ಹೀಗೆ ಪ್ರಪಂಚಕ್ಕೂ ಪಂಚಭೇದಗಳಿಗೂ ಸತ್ಯತೆಯನ್ನು ಹೇಳಿ ಅಲ್ಲಿ ಜೀವೇಶ್ವರರ ಭೇದವೂ ಹಾಗೆ ಎಂದು ಪ್ರಮಾಣದ ಉದಾಹರಣಾರ್ಥವೆಂದು ಅಭಿಪ್ರಾಯ ಕಲ್ಪಿಸಲೂ ಬರುತ್ತದೆ. ಮೊದಲು ಪರಮಾತ್ಮನ ಗುಣಗಳಿಗೆ ಪಂಚಭೇದಗಳಿಗೆ ಸತ್ಯತೆಯನ್ನು ಹೇಳಿ ಮುಂದೆ ನಿತ್ಯತೆಯನ್ನು ಹೇಳುತ್ತಾರೆ. ಭೇದಗಳಿಗೆ ಈ ಅಭಿಪ್ರಾಯವೆಂದು ಏಕೆ ಎನ್ನಬಾರದು ? ಎಂದರೆ ಹಾಗೆನ್ನಬಾರದು. ಆದರೂ ನಿತ್ಯಪದಕ್ಕೆ ನಿತ್ಯವೆಂದು (ತ್ರಿಕಾಲಾವಿನಾಶಿ) ಅರ್ಥ ಮಾಡುವುದಾದರೂ ನಿತ್ಯ ಪದಾರ್ಥದಲ್ಲಿರುವ ಭೇದಾದಿಗಳೂ ನಿತ್ಯವೆಂದು ಅರ್ಥವು.

**ತಥಾಹಿ । ಜೀವೇಶ್ವರಭೇದೋ ನಿತ್ಯಃ । ಜೀವಾನಾಂ ಪರಸ್ಪರಂ ಭೇದೋ ನಿತ್ಯಃ । ಪ್ರಕೃತಿ ಅವ್ಯಾಕೃತಾಕಾಶ ವರ್ಣಾನಾಂ ಪರಸ್ಪರಂ**

ಭೇದೋ ನಿತ್ಯಃ । ಪ್ರಕೃತ್ಯಾದಿ ಜಡೇಭ್ಯಃ ಪರಮಾತ್ಮನಿಷ್ಠ ಭೇದೋ ನಿತ್ಯಃ ಪ್ರಕೃತ್ಯಾದಿಭ್ಯೋಽಜೀವನಿಷ್ಠ ಭೇದೋ ನಿತ್ಯಃ । ಏತಾವತಾಪಿ ಪಂಚಾನಾಂ ಭೇದಾನಾಂ ನಿತ್ಯತ್ವೋಪಪತ್ತೇಃ ನಾನಿತ್ಯಘಟಾದಿನಿಷ್ಠ ಭೇದ ನಿತ್ಯತ್ವ ಸಿದ್ಧಿಃ ।

ಭೇದಕ್ಕೆ ನಿತ್ಯತೆ ಹೇಳಿದ್ದಾರೆ. ನಿತ್ಯವಸ್ತುಗತ ಭೇದಗಳಿಗೆ ನಿತ್ಯತೆಯಲ್ಲಿ ತಾತ್ಪರ್ಯವು. ಜೀವೇಶ್ವರಭೇದವೂ ನಿತ್ಯವೇ, ಜೀವರುಗಳ ಪರಸ್ಪರ ಭೇದವೂ ನಿತ್ಯವೇ, ಪ್ರಕೃತಿ ಅವ್ಯಾಕೃತಾಕಾಶ ವರ್ಣಗಳ ಭೇದವೂ ನಿತ್ಯವೇ, ಪ್ರಕೃತ್ಯಾದಿ ಜಡಗಳಿಂದ ಪರಮಾತ್ಮ ಭೇದವೂ ನಿತ್ಯವೇ. ಪ್ರಕೃತ್ಯಾದಿ ಜಡಗಳಿಂದ ಜೀವರುಗಳ ಭೇದವೂ ನಿತ್ಯವೇ ಹೀಗೆ ಐದು ಭೇದಗಳಿಗೆ ನಿತ್ಯತೆ ಇದ್ದರೂ ಅನಿತ್ಯವಾದ ಘಟಾದಿ ನಿಷ್ಠ(ಘಟಾದಿಗಳಲ್ಲಿರುವ) ಭೇದಕ್ಕೆ ನಿತ್ಯತೆ ಏನೂ ಸಿದ್ಧಿಸಿರುವುದಿಲ್ಲ ಅನಿತ್ಯ ವಸ್ತುಗಳಲ್ಲಿಯ ಭೇದಗಳೂ ಅನಿತ್ಯಗಳೇ ಹೀಗೆ.

ತದುಕ್ತಂ ಪ್ರಕೃತ್ಯಧಿಕರಣ ಸುಧಾಯಾಂ । ಅತಃ ಪ್ರಪಂಚೋ ಭೇದಪಂಚಕಃ । ಸ ಚ ಜೀವೇಶ್ವರ ಪ್ರಕೃತ್ಯಾದಿ ನಿತ್ಯ ಸ್ವರೂಪಭೂತೋ ನಾದಿ ನಿತ್ಯ ಏವೇತಿ ನೋಕ್ತದೋಷಃ ಇತಿ । ನಾಪಿ ಸೋಽಯಂ ಸತ್ಯೋ ಅನಾದಿಶ್ಚ ಸಾದಿಶ್ಚೇನ್ನಾಶಮಾಪ್ನುಯಾತ್ ಇತಿ ತತ್ವನಿರ್ಣಯೋದಾಹೃತ ಪ್ರಮಾಣ ಬಲೇನ ಸರ್ವಸ್ಯಾಪಿ ಭೇದಸ್ಯ ನಿತ್ಯತ್ವ ಸಿದ್ಧಿಃ । ತಸ್ಯ ನಿತ್ಯಗತ ಭೇದ ವಿಷಯತ್ವೇನಾಪ್ಯುಪಪತ್ತೇಃ । ಅಧಿಕಂತು ಸುಧಾಯಾಂ । ತತ್ವ ನಿರ್ಣಯಟೀಕಾಯಾಂ ಚ ದ್ರಷ್ಟವ್ಯಂ । ತಸ್ಮಾನ್ನಿತ್ಯಗತೋ ಭೇದಃ ನಿತ್ಯಃ । ಅನಿತ್ಯಗತೋಽಸ್ತ್ವನಿತ್ಯ ಏವ ಇತಿ ಸಿದ್ಧಂ ।

ಪ್ರಕೃತ್ಯಧಿಕರಣ ಸುಧಾದಲ್ಲಿ, ಆದುದರಿಂದಲೇ ಪ್ರಪಂಚವು ಐದುವಿಧ ಭೇದ ಉಳ್ಳದ್ದು, ಆ ಜೀವೇಶ್ವರ ಪ್ರಕೃತ್ಯಾದಿ ನಿತ್ಯ ಸ್ವರೂಪವಾದವುಗಳು ಅನಾದಿ ನಿತ ಗಳೇ ಎಂಬಲ್ಲಿ ಯಾವ ದೋಷವೂ ಬರುವುದಿಲ್ಲ. ಹೀಗೆ ಹೇಳಿದೆ. ಆ ಈ ಭೇದವು ನಿತ್ಯವು ಅನಾದಿಯೂ ಸಹ, ಸಾದಿಯಾದರೆ ನಾಶವಾಗಬೇಕಾದೀತು. ಹೀಗೆ ತತ್ವ ನಿರ್ಣಯದ ಮಾತಿಗೆ ನಿತ್ಯ ವಸ್ತುವಿನಲ್ಲಿಯ ಭೇದವು ನಿತ್ಯ ದೃಷ್ಟಿಯಿಂದ ಎಂದು ಯುಕ್ತವಾಗುತ್ತದೆ. ಇನ್ನೂ ಹೆಚ್ಚಿನ ವಿಷಯವನ್ನು ಸುಧಾ ತತ್ವನಿರ್ಣಯ ಟೀಕಾಗಳಲ್ಲಿ ನೋಡಬಹುದು. ಆದುದರಿಂದ ನಿತ್ಯವಸ್ತುವಿನಲ್ಲಿರುವ ಭೇದ ನಿತ್ಯವೇ ಅನಿತ್ಯದಲ್ಲಿಯ ಭೇದ ಅನಿತ್ಯವೇ ಎಂದು ಸಿದ್ಧವು.

ಧರ್ಮಿಸ್ವರೂಪತ್ವೇ ಭೇದಸ್ಯ ಪ್ರಮಾಣಾನಿತು । ಪದಾರ್ಥ ಸ್ವರೂಪ ತ್ವಾದ್ಭೇದಸ್ಯೇತಿ ತತ್ವನಿರ್ಣಯೋಕ್ತಿಃ । ಭಾವಾಭಾವ ಸ್ವರೂಪತ್ವಾನ್ನಾ ನ್ಯೋನ್ಯಾಭಾವತಾ ಪೃಥಕ್ ಇತಿ ತತ್ವ ವಿವೇಕೋಕ್ತೇಃ । ಭೇದಸ್ತು ಸರ್ವ

ವಸ್ತೂನಾಂ ಸ್ವರೂಪಂ ನೈಜಮವ್ಯಯಂ ಇತಿ ತೈತ್ತಿರೀಯಭಾಷ್ಯಂ। ಸಂಯೋಗಶ್ಚ ವಿಭಾಗಶ್ಚ ಭೇದಶ್ಚೈವ ಪೃಥಕ್ ಪೃಥಕ್ ಇತ್ಯನುವ್ಯಾಖ್ಯಾನಂ। ಘಟಪಟಾದಿ ಭೇದಾನಾಂ ಅನನುಗತತ್ವೇ ಪ್ರಮಾಣಂ। ಪದ್ಮನಾಭತೀರ್ಥಚರಣಾಸ್ತು। ನಿತ್ಯಾನಿತ್ಯ ವಸ್ತುಗತಾನಾಂ ಸರ್ವೇಷಾಮಪಿ ಭೇದಾನಾಂ ನಿತ್ಯತ್ವಮಾಹುಃ। ತದುಪಪಾದಿತಂ ಪ್ರಕೃತ್ಯಧಿಕರಣಸುಧಾಯಾಂ। ತಥಾಹಿತದ್ವಾಕ್ಯಾನಿ। ಟೀಕಾಕಾರಾಸ್ತು ಮನ್ಯಂತೇ। ಭೇದೋನಾಮ ಅನ್ಯೋನ್ಯಾಭಾವಃ।

ಭೇದವು ಧರ್ಮಿಸ್ವರೂಪ ಎಂಬಲ್ಲಿ ಪ್ರಮಾಣಗಳನ್ನೂ ತಿಳಿಸುತ್ತಾರೆ. ತತ್ವನಿರ್ಣಯದಲ್ಲಿ ಭೇದಕ್ಕೆ ಧರ್ಮಿಸ್ವರೂಪತೆ ಎಂದಿದ್ದಾರೆ. ಅನ್ಯೋನ್ಯಾಭಾವವು ಭಾವ ಅಭಾವ ಎರಡೂ ಸ್ವರೂಪವಾದ್ದರಿಂದ ಇದು ಧರ್ಮಿಯಿಂದ ಭಿನ್ನವಲ್ಲವು. ಹೀಗೆ ತತ್ವವಿವೇಕದಲ್ಲಿ ಹೇಳಿದೆ. ತೈತ್ತಿರೀಯ ಭಾಷ್ಯದಲ್ಲಿ ಭೇದವಾದುದು ವಸ್ತುಸ್ವರೂಪವಾದುದು ಸಹಜವಾಗಿ ನಿತ್ಯವಾದುದು ಹೀಗೆ ಹೇಳಿದೆ, ಸಂಯೋಗ, ವಿಭಾಗ, ಭೇದ, ಇವುಗಳು ಪ್ರತ್ಯೇಕ ಪ್ರತ್ಯೇಕಗಳಾಗಿರುತ್ತವೆ. ಹೀಗೆ ಅನುವ್ಯಾಖ್ಯಾನದಲ್ಲಿ ಘಟಪಟಾದಿಗಳ ಭೇದಗಳು ಅನನುಗತಗಳಾಗಿರುವವುಗಳೇ ಎಂಬಲ್ಲಿ ಪದ್ಮನಾಭತೀರ್ಥಶ್ರೀಚರಣರು ಹೇಳುತ್ತಾರೆ. ಯದ್ಯಪಿ ನಿತ್ಯಾನಿತ್ಯ ವಸ್ತುಗತವಾದ ಸರ್ವಭೇದಗಳಿಗೆ ನಿತ್ಯತ್ವವನ್ನು ಹೇಳಿದರು, ಆದರೆ ಪ್ರಕೃತ್ಯಧಿಕರಣ ಸುಧಾದಲ್ಲಿ ಉಪಪಾದಿತವಾಗಿದೆ. ಅದರ ವಾಕ್ಯಗಳು ಹೀಗಿವೆ. ಟೀಕಾಕಾರರು ತಿಳಿಸುತ್ತಾರೆ. ಭೇದವೆಂದರೆ ಅನ್ಯೋನ್ಯಾಭಾವವು.

ಸಚ ಅನ್ಯೋನ್ಯತಾದಾತ್ಮ್ಯಾಪತ್ತ್ಯೈವನಿವರ್ತನೀಯಃ। ಪ್ರತಿಯೋಗ್ಯಾಪತ್ತೇರೇವ ಅಭಾವ ನಿವರ್ತಕತ್ವಸ್ಯ ಪ್ರಾಗಭಾವೇ ದೃಷ್ಟತ್ವಾತ್। ನಚ ಕದಾಪಿ ಪದಾರ್ಥಾನಾಮನ್ಯೋನ್ಯತಾದಾತ್ಮ್ಯಮಸ್ತೀತ್ಯನಿತ್ಯಾನಾಮಪಿ ಭೇದೋ ನಿತ್ಯ ಏವೇತ್ಯಾಹುಃ ಇತಿ। ಪ್ರಕೃತ್ಯಧಿಕರಣ ನ್ಯಾಯರತ್ನಾವಲ್ಯಾಮಪಿ। ವಿನಾಶಿನೋಪಿ ಘಟಾದೇಃ ಧರ್ಮರೂಪೋಭೇದಃ ಪರವಾದ್ಯಭ್ಯುಪಗತ ಘಟತ್ವಾದಿ ಜಾತಿವನ್ನಿತ್ಯೋಭ್ಯುಪಗಂತವ್ಯಃ। ಕಾಲತ್ರಯೇಪಿ ವಸ್ತ್ವಂತರತಾಪತ್ಯಭಾವಾದಿತಿ।

ಆ ಅನ್ಯೋನ್ಯಾಭಾವವು ಏಕೀಭಾವದಿಂದಲೇ ನಿವರ್ತ್ಯ (ಇಲ್ಲವೆನ್ನಲು ಶಕ್ಯ) ಇಂತಹ ಪ್ರತಿಯೋಗಿ ಇರುವಿಕೆಯಿಂದಲೇ ಅಭಾವ ನಿವರ್ತಕತೆ ಪ್ರಾಗಭಾವಾದಿಗಳಲ್ಲಿ ಕಂಡಿದೆ. (ಪ್ರತಿಯೋಗಿಯಾದ ಘಟವಿದ್ದಲ್ಲಿ ಪ್ರಾಗಭಾವವಾಗಲಿ ಪ್ರಧ್ವಂಸವಾಗಲಿ ಅತ್ಯಂತಾಭಾವವಾಗಲಿ ಇರುವುದಿಲ್ಲ. ಅಭಾವಕ್ಕೆ ಪ್ರತಿಯೋಗಿಯಿಂದ ವಿರೋಧ ನಿಯಮದ್ದಿಂದ) ಎಂದಿಗೂ ಪ್ರತಿಯೋಗಿ ಸ್ಥಾನೀಯವಾದ, ತಾದಾತ್ಮ್ಯವು ಯಾವ ವಸ್ತುವಿನಲ್ಲೂ ಇಲ್ಲವಾದ್ದರಿಂದ ನಿತ್ಯ ಅನಿತ್ಯ ಸಕಲ ವಸ್ತುಗಳಲ್ಲಿರುವ

ಭೇದವೂ ನಿತ್ಯಗಳೇ ಎಂದು ಹೇಳುತ್ತಾರೆ. ಸಾಸ್ಯಾಯರತ್ನಾವಳಿಯಲ್ಲೂ ಪ್ರಕೃತ್ಯಧಿಕರಣದಲ್ಲಿ ವಿನಾಶ ಉಳ್ಳ ಘಟಾದಿಧರ್ಮಿ ಸ್ವರೂಪವೇ ಆಗಿರುವುದರಿಂದ ಪರಾಭಿಮತ ಘಟತ್ವಾದಿ ಜಾತಿಯಂತೆ ಭೇದವೂ ನಿತ್ಯವೆಂದೇ ಒಪ್ಪಬಹುದು. ಕಾಲತ್ರಯದಲ್ಲೂ ವಸ್ತು ಇರಲೆಂಬ ಆಪತ್ತಿ ಬರುವುದಿಲ್ಲವಾದ್ದರಿಂದ.

**ನನ್ವೇವಂ ಭೇದಸ್ಯ ವಸ್ತುಸ್ವರೂಪತ್ವಾಂಗೀಕಾರೇ ಪ್ರಾಗಭಾವ ಪ್ರಧ್ವಂಸಾಭಾವಯೋಃ ಅಪಿವಸ್ತುಸ್ವರೂಪತ್ವಾಪತ್ತಿಃ । ತಯೋರಪಿ ಧರ್ಮಿಗತತ್ವಾವಿಶೇಷಾದಿತಿ ಚೇದುಚ್ಯತೇ । ಅನಾದಿ ಪ್ರಾಗಭಾವಸ್ಯ ಸಾದಿನಾ ತಂತ್ವಾದಿನಾ ಅಭೇದೋ ಅನುಪಪನ್ನಃ। ನ ಚ ಪ್ರಾಗಭಾವಸ್ಯಾಪಿ ಸಾದಿತ್ವಮಿತಿ ವಾಚ್ಯಂ । ಘಟಪ್ರಾಗಭಾವೋತ್ಪತ್ತೇಃ ಪೂರ್ವಂ ಘಟೋನಾಸ್ತಿ ಘಟೋ ಭವಿಷ್ಯತೀತ್ಯಾದೇಃ ನಿರ್ವಿಷಯತ್ವಾಪತ್ತೇಃ । ಕಿಂಚ ।**

ಭೇದಕ್ಕೆ ವಸ್ತುಸ್ವರೂಪತೆ ಒಪ್ಪಿದರೆ ಪ್ರಾಗಭಾವ ಪ್ರಧ್ವಂಸಾಭಾವಗಳಿಗೂ ವಸ್ತು ಸ್ವರೂಪತೆ ಒಪ್ಪಿರಿ ಎನ್ನಬಹುದಲ್ಲವೇ ? ಏಕೆಂದರೆ ಅವುಗಳಿಗೂ ಧರ್ಮಿಯಲ್ಲಿರುವಿಕೆ ಸಮವಾಗಿರುವುದರಿಂದ, ಹೀಗೆಂದರೆ ಅನಾದಿಯಾದ ಪ್ರಾಗಭಾವಕ್ಕೆ ಸಾದಿಯಾದ ತಂತುಗಳಿಂದ ಅಭೇದ ಪ್ರತ್ಯಕ್ಷ ವಿರೋಧವೇ ಯುಕ್ತವಾಗುವುದಿಗಿ. ಪ್ರಾಗಭಾವಕ್ಕೂ ಸಾದಿತ್ವವೇ ಎನ್ನಬಾರದು. ಏಕೆಂದರೆ ಘಟ ಹುಟ್ಟುವ ಮೊದಲು ಘಟವಿಲ್ಲ ಘಟವಾಗುತ್ತದೆ ಇತ್ಯಾದಿ ವ್ಯವಹಾರಗಳಿಗೆ ವಿಷಯವೇ ಇಲ್ಲವಾಗಬೇಕಾದೀತು ಮತ್ತು,

**ತಂತೂತ್ಪತ್ತೇಃ ಪೂರ್ವಂ ಘಟ ಪ್ರಾಗಭಾವಸ್ಯ ಕಾಲ ಪ್ರಕೃತ್ಯಾದಿವೃತ್ತಿತ್ವಂ ಸ್ಯಾತ್ । ನ ಚೇಷ್ಟಾಪತ್ತಿರಿತಿ ವಾಚ್ಯಂ । ಕಾಲಾದಿನಾ ಪ್ರಾಗಭಾವಸ್ಯ ಅಭೇದಾಪತ್ತೇಃ । ತಂತುನೈವಾಭೇದೋಕಾಲಾದಿನೇತ್ಯತ್ರ ನಿಯಾಮಕಾಭಾವಾತ್ । ಅತೋ ಅಧಿಕರಣಾತಿರಿಕ್ತ ಏವ ಪ್ರಾಗಭಾವಃ। ಏವಂ ಪಟಧ್ವಂಸಸ್ಯಾಪಿನತಂತ್ವಾತ್ಮಕತ್ವಂ । ತಂತುನಾಶೇತದ್ರೂಪಾದಿನಾಶವಧ್ವಂಸಸ್ಯಾಪಿ ನಾಶಾಪತ್ಯಾ ಪಟೋನ್ಮಜ್ಜನ ಪ್ರಸಂಗಾತ್ ।**

ತಂತು ಹುಟ್ಟುವುದರ ಮೊದಲು ಪ್ರಾಗಭಾವಕ್ಕೆ ಕಾಲಾದಿ ಪ್ರಕೃತ್ಯಾದಿಗಳಲ್ಲಿ ಇರುವಿಕೆ ಬರಲಿ, ಇಷ್ಟವೆಂದು ಹೇಳಲಾಗುವುದಿಲ್ಲ, ಕಾಲಾದಿಗಳಿಂದ ಪ್ರಾಗಭಾವಕ್ಕೆ ಅಭೇದ ಬರಬೇಕಾಗುವುದು. ತಂತುಗಳಿಂದಲೇ ಅಭೇದವು ಕಾಲಾದಿಗಳಿಂದಲ್ಲವೆನ್ನಲು ನಿಯಾಮಕವಿಲ್ಲವಾದ್ದರಿಂದ. ಆದ್ದರಿಂದ ಧರ್ಮಿ(ಅಧಿಕರಣ)ಯಿಂದ ಬೇರೆಯೇ ಪ್ರಾಗಭಾವವು. ಹೀಗೆ ಪಟಧ್ವಂಸಕ್ಕೂ ತಂತ್ವಾತ್ಮಕತೆ ಬರುವುದಿಲ್ಲ. ತಂತುನಾಶವಾದರೆ ಅದರ ರೂಪಾದಿಗಳ ನಾಶದಂತೇ ಧ್ವಂಸಕ್ಕೂ ನಾಶಬಂದು ಪಟವೇ ಇಲ್ಲವೆಂಬ ಅವಸ್ಥಾ ಬರಬೇಕಾದೀತು.

ಪ್ರಾಗಭಾವಾದಿವದನ್ಯೋನ್ಯಾಭಾವಸ್ಯ ನಪ್ರತಿಯೋಗಿ ನಿಯಮಃ ಇತ್ಯಾಹ ।

ಪ.ಸಂ —ಭಾವಾಭಾವಾಸತ್ಪ್ರತಿಯೋಗಿಕಶ್ಚ ।

ಭಾವ ಪ್ರತಿಯೋಗಿಕಾನ್ಯೋನ್ಯಾಭಾವೋ ಅಭಾವೇ ಅಸತಿ ಚ । ಅಭಾವ ಪ್ರತಿಯೋಗಿಕಾನ್ಯೋನ್ಯಾಭಾವೋಭಾವೇ ಅಸತಿಚ । ಅಸತ್ ಪ್ರತಿಯೋಗಿಕಾನ್ಯೋನ್ಯಾಭಾವಶ್ಚ ಭಾವಾಭಾವಯೋರಿತಿ ವಿವೇಕಃ । ನನು ತತ್ವವಿವೇಕೇ ಪ್ರಾಕ್‌ಪ್ರಧ್ವಂಸ ಸದಾತ್ವೇನ ತ್ರಿವಿಧೋಽಭಾವ ಇಷ್ಯತ ಇತಿ ಅನ್ಯೋನ್ಯಾಭಾವಃ ಬಹಿರ್ಭಾವೇನೈವ ಅಭಾವಸ್ಯ ತ್ರಿತ್ವಮುಕ್ತಂ । ಕಥ ಮತ್ರ ಚಾತುರ್ವಿಧ್ಯಮುಕ್ತಮಿತಿ ಚೇದಯಮಾಶಯಃ । ಅನ್ಯೋನ್ಯಾಭಾವ ಸ್ವರೂಪಮೇವ ನಾಸ್ತೀತ್ಯಭಿಪ್ರಾಯೇಣ ತತ್ವವಿವೇಕೇ ತ್ರೈವಿಧ್ಯಕಥನ ಮಿತಿ । ಕಿಂತು ತಸ್ಯ ಧರ್ಮಿತೋಽಭಿನ್ನತ್ವಾಭಾವಾಭಿಪ್ರಾಯೇಣೈವ । ಅನ್ಯಥಾ ಪುನಃ ಭಾವಾಭಾವ ಸ್ವರೂಪತ್ವಾನ್ನಾನ್ಯೋನ್ಯಾಭಾವತಾ ಪೃಥ ಗಿತಿತಸ್ಸ್ವರೂಪಮಂಗೀಕೃತ್ಯ ಗುಣಕ್ರಿಯಾದಿವದ್ಧರ್ಮಿ ಸ್ವರೂಪತ್ವಕಥನ ಮುತ್ತರತ್ರಾಸಂಗತಂಸ್ಯಾತ್ । ಅತ್ರತು ಗುಣ ಕ್ರಿಯಾದಿವತ್ ಪೃಥಕ್ ನಿರೂಪ್ಯ ಪಶ್ಚಾದ್ಧರ್ಮಿ ಸ್ವರೂಪತ್ವಮುಕ್ತಮಿತಿ ಫಲತೋ ನ ಕಶ್ಚಿದ್ವಿ ಶೇಷಃ ।

ಭಾವ ಪ್ರತಿಯೋಗಿಕಾನ್ಯೋನ್ಯಾಭಾವವು. ಅಭಾವದಲ್ಲಿ ಅಸತ್ತಿನಲ್ಲಿದೆ. ಅಭಾವ ಪ್ರತಿಯೋಗಿಕಾನ್ಯೋನ್ಯಾಭಾವವು ಭಾವದಲ್ಲಿ ಅಸತ್ತಿನಲ್ಲಿದೆ. ಅಸತ್ ಪ್ರತಿಯೋಗಿಕಾನ್ಯೋನ್ಯಾಭಾವವು. ಭಾವಾಭಾವದಲ್ಲಿದೆ. ಹೀಗೆ ತಿಳಿಯಬೇಕು. ತತ್ವವಿವೇಕದಲ್ಲಿ 'ಪ್ರಾಕ್ ಪ್ರಧ್ವಂಸ ಸದಾತ್ವೇನ', ಪ್ರಾಗಭಾವ ಪ್ರಧ್ವಂಸಾಭಾವ ಸದಾ ಭಾವ(ಅತ್ಯಂತಾಭಾವ) ಹೀಗೆ ಮೂರೇ ಅಭಾವಗಳೆಂದು ಹೇಳಿರುತ್ತದೆ. ನೀವು ಅಭಾವವು ನಾಲ್ಕು ವಿಧವೆಂದು ಹೇಗೆ ಹೇಳಿದಿರಿ. ಅಂದರೆ ತಪ್ಪಲ್ಲಾ ತತ್ವವಿವೇಕದಲ್ಲಿ ಧರ್ಮಿರೂಪವಲ್ಲದ ಅಭಾವಗಳು ಮೂರು ಎಂಬಲ್ಲಿ ಅಭಿಪ್ರಾಯವಾಗಲಿ ಅನ್ಯೋನ್ಯಾ ಭಾವವೇ ಇಲ್ಲಾ ಎಂಬ ಅಭಿಪ್ರಾಯವಲ್ಲ, ಇಲ್ಲವಾದರೆ ಮುಂದೆ ಭಾವಾ ಭಾವ ಸ್ವರೂಪವಾದ ಅನ್ಯೋನ್ಯಾಭಾವವು ಬೇರೆ ಎಂದು ಅದರ ಸ್ವರೂಪವನ್ನಂಗೀಕರಿಸಿ ಗುಣ ಕ್ರಿಯಾದಿಗಳಂತೆ ಧರ್ಮಿ ಸ್ವರೂಪತೆ ಹೇಳುವುದು ಅನುಗತವಾಗಬೇಕಾದೀತು. ಇಲ್ಲಿ ಗುಣಕ್ರಿಯಾದಿಗಳಂತೇ ಪ್ರತ್ಯೇಕವಾಗಿ ನಿರೂಪಿಸಿ ಧರ್ಮಿ ಸ್ವರೂಪತೆ ಹೇಳಿತು. ಅಷ್ಟೆ ಆಗಲಿ ಏನೂ ವಿರೋಧವಿಲ್ಲವು. ಅನುವಾದ ವಿಶೇಷ(ವ್ಯತ್ಯಾಸ) ಮಾತ್ರವೇ ಆಗಿರುತ್ತದೆ.

ಹೊಂದಲರ್ಹವಾದುದೇ ದ್ರವ್ಯವು. ವೇಗದ ಅಭಿಸಂಧಾನ (ಪ್ರವೃತ್ತಿ) ಇರುವುದರಿಂದ ಆಕಾಶವು ಪ್ರದೇಶತಃ ಪ್ರಾಪ್ತಲರ್ಹವೇ ಆಗಿರುತ್ತದೆ ಎಂದು. ಹೀಗೆ ಹೇಳಿರುವುದರಿಂದ ಅತ್ಯಂತ ವ್ಯಾಪ್ತವಾದ ಆಕಾಶ, ಪ್ರಕೃತಿ, ಕಾಲ, ವರ್ಣಗಳು ಇವುಗಳ ಪ್ರಾಪ್ತಿಯೇ ಅಸಂಭಾವಿತವಾಗಿ ಲಕ್ಷಣವು ಅವ್ಯಾಪ್ತವಾಯಿತು, ಎಂಬ ಶಂಕೆಯು ನಿರಸ್ತವಾಯಿತು ಏಕೆಂದರೆ ಏಕದೇಶದಿಂದ ಸಂಬಂಧವಿದ್ದರೂ ದೇಶಾಂತರ ವ್ಯಕ್ತ್ಯಂತರ ಪ್ರಾಪ್ತವಾಗುವುದ ರಿಂದ ಮತ್ತೊಂದು ಲಕ್ಷಣವನ್ನು ಹೇಳುತ್ತಾರೆ. ಉಪಾದಾನಕಾರಣತೆಯೇ ದ್ರವ್ಯದ ಲಕ್ಷಣವು.

ವಾಶಬ್ದೋ ವ್ಯವಸ್ಥಿತ ವಿಕಲ್ಪಾರ್ಥಃ ।

ಪ.ಸಂ.—ಉಪಾದಾನತ್ವಂ ಚ ಪರಿಣಾಮೋ ಅಭಿವ್ಯಕ್ತಿಶ್ಚೇತಿ ದ್ವಿವಿಧಂ ।

ಅತ್ರ ಪ್ರಕೃತಿಮಾರಭ್ಯ ಬ್ರಹ್ಮಾಂಡ ಪರ್ಯಂತಂ ತಥಾ ಅವಿದ್ಯಾ ಕಾಲ ಅಂಧಕಾರ ವಾಸನಾ ಪ್ರತಿಬಿಂಬಾನಾಂಚ ಪರಿಣಾಮಃ । ತತ್ರಾಪಿ ಪ್ರಕೃತೇಃ ಮಹದಾದ್ಯಾತ್ಮನಾಪರಿಣಾಮಃ । ಸ್ವಯಂ ಚ ನಾನ್ಯೇನ ಪರಿಣತಾ । ಮಹದಾದೇಸ್ತು ಸ್ವಯಂ ಪರಿಣತತ್ವಮಹಂಕಾರಾದಿ ಪರಿಣಾಮ ಹೇತುತ್ವಂಚ । ಬ್ರಹ್ಮಾಂಡಸ್ಯ ಪರಿಣತತ್ವಮಾತ್ರಂ । ಅವಿದ್ಯಾಯಾಃ ಉಭಯಂ । ಅಂಧಕಾರ ವಾಸನಾಕಾಲ ಪ್ರತಿಬಿಂಬಾನಾಂ ಚ ಪರಿಣತತ್ವಮಿತಿ ಬೋಧ್ಯಂ । ಪರಮಾತ್ಮ ಲಕ್ಷ್ಮೀ ಜೀವ ಅವ್ಯಾಕೃತಾಕಾಶ ವರ್ಣಾನಾಮಭಿವ್ಯಕ್ತಿರಿತಿ ವ್ಯವಸ್ಥೇತ್ಯರ್ಥಃ ।

ವಿಕಲ್ಪಾರ್ಥಕ ವಾ ಶಬ್ದವು ಈ ಸ್ಥಳದಲ್ಲಿ ವ್ಯವಸ್ಥಿತಾರ್ಥವನ್ನು ಹೇಳುತ್ತದೆ. ಉಪಾದಾನ ಕಾರಣತೆಯೆಂದರೆ ವಿಕಾರ(ರೂಪಾಂತರ) ಕಾರಣತೆಯೆಂದು ಅಭಿವ್ಯಕ್ತಿ (ಸೂಕ್ಷ್ಮವಾದದ್ದರ ಸ್ಪಷ್ಟತೆ) ಕಾರಣತೆಯೆಂದು ಉಪಾದಾನಪದವು ವಿಕಾರ ಅಭಿವ್ಯಕ್ತಿ ಎರಡು ಅರ್ಥಗಳನ್ನು ತಿಳಿಸುತ್ತದೆ. ವಿಕಾರಕಾರಣತೆಯೆಂದರೆ ಮಣ್ಣಿನಿಂದ ಗಡಿಗೆ ಯಾಗುತ್ತದೆ. ಗಡಿಗೆಗೆ ಮಣ್ಣು ವಿಕಾರಕಾರಣವು. ಹಾಗೆಯೇ ಹಾಲಿನಿಂದ ಮೊಸರು ಆಗುತ್ತದೆ. ಮೊಸರಿಗೆ ಹಾಲು ವಿಕಾರ(ಉಪಾದಾನ)ಕಾರಣವೆನಿಸುತ್ತದೆ. ಪರಮಾತ್ಮನೆ ಮೊದಲಾದ ಪ್ರತಿಬಿಂಬಾಂತ ಇಪ್ಪತ್ತು ದ್ರವ್ಯಗಳಲ್ಲಿ ಪ್ರಕೃತಿಯಿಂದ ಆರಂಭಿಸಿ ಬ್ರಹ್ಮಾಂಡ ಪರ್ಯಂತವಾದ (1) ಪ್ರಕೃತಿಯು, (2) ಗುಣತ್ರಯಗಳು (3) ಮಹತ್ತತ್ವ (4) ಅಹಂಕಾರತತ್ವ (5) ಬುದ್ಧಿ ತತ್ವ (6) ಮನಸ್ಸು (7) ಹತ್ತುಇಂದ್ರಿಯಗಳು (8) ಐದು ರೂಪಾದಿ ಮಾತ್ರಾಗಳು (ವಿಷಯಗಳು) (9) ಪೃಥ್ವಿಯಾದಿ ಪಂಚಮಹಾಭೂತಗಳು ಮತ್ತು (10) ಬ್ರಹ್ಮಾಂಡ—ಈ ಹತ್ತು ಪದಾರ್ಥಗಳಿಗೆ ದ್ರವ್ಯವೇ ಉಪಾದಾನ ಕಾರಣವು. ಮತ್ತು 1 ಅವಿದ್ಯಾ 2 ಕಾಲ 3 ಅಂಧಕಾರ 4 ವಾಸನಾ 5 ಪ್ರತಿಬಿಂಬ ಇವುಗಳಿಗೂ ದ್ರವ್ಯದಿಂದಲೇ ಪರಿಣಾಮವು.

ಇದರಲ್ಲಿಯೂ ಪ್ರಕೃತಿಗೆ ಮಹತ್ತತ್ವಾದಿ ರೂಪಗಳಾದ ಪರಿಣಾಮವು. ಸ್ವಯಂ ದ್ರವ್ಯವಾದುದು ಯಾವುದರಿಂದಲೂ ಪರಿಣಿತವಾಗುವುದಿಲ್ಲ. ಹೀಗೆ ಹದಿನೈದು ಪದಾರ್ಥಗಳಿಗೆ ಪರಿಣಾಮ(ಉಪಾದಾನ) ಕಾರಣವಾದ ದ್ರವ್ಯವು 1. ಪರಮಾತ್ಮ 2. ಲಕ್ಷ್ಮೀ 3. ಜೀವ 4. ಅವ್ಯಾಕೃತಾಕಾಶ 5. ವರ್ಣಗಳು—ಈ ಐದು ದ್ರವ್ಯ(ಪದಾರ್ಥ)ಗಳಿಗೆ ಪರಿಣಾಮವಿಲ್ಲವಾದ ಕಾರಣ ದ್ರವ್ಯವೇ ಅಭಿವ್ಯಕ್ತಿ ಕಾರಣವಾಗುತ್ತದೆ. ಸೂಕ್ಷ್ಮವಾಗಿದ್ದ ವಸ್ತುವನ್ನು ಸ್ಪಷ್ಟವಾಗಿ(ಅಭಿವ್ಯಕ್ತಿ)ಗೊಳಿಸುವುದೇ ಅಭಿವ್ಯಕ್ತಿ ಕಾರಣತೆಯು. ಹೇಗೆಂದರೆ, ಸೂಕ್ಷ್ಮನಾದ ಪರಮಾತ್ಮನು ಅವತಾರಗಳಿಂದ ಸ್ಪಷ್ಟವಾಗಿ ಕಾಣುವುದು. ಅತೀಂದ್ರಿಯವಾದ ಜೀವನು ದೇಹದಿಂದ ಸ್ಪಷ್ಟ ತೋರುವುದು. ಇದಕ್ಕೆ ಅಭಿವ್ಯಕ್ತಿ ಕಾರಣವೆನ್ನುತ್ತಾರೆ.

ಪರಮಾತ್ಮನಃ ಅನಂತಾವತಾರ ಅಭಿವ್ಯಂಜಕತ್ವಂ। ಲಕ್ಷ್ಮ್ಯಾಃ ಅಪಿ ಸೀತಾರುಕ್ಮಿಣ್ಯಾದ್ಯನಂತಾವತಾರ ಅಭಿವ್ಯಕ್ತಿಮತ್ವಂ। ಜೀವಾನಾಂ ಸಾಂಶಾನಾಂ ಅಂಶಾಭಿ ವ್ಯಂಜಕತ್ವಂ। ನಿರಂಶಾನಾಂ ಪರಾಧೀನ ಶರೀರಾದಿಭಿರಭಿವ್ಯಕ್ತಿಮತ್ವಂ। ಅವ್ಯಾಕೃತಾಕಾಶಸ್ಯ ಪರಾಧೀನ ಮೂರ್ತ ಸಂಬಂಧರೂಪ ವಿಶೇಷವತ್ವೇನ ಅಭಿವ್ಯಕ್ತತ್ವಂ। ಏತಚ್ಚ ಪ್ರಥಮಭಾಗವತೇ ಸ್ಪಷ್ಟಂ। ಏತನ್ನಾನಾವತಾರಾಣಾಂ ವಿಧಾನಂ ಬೀಜಮವ್ಯಯಂ ಇತಿ। ಏತಚ್ಚ ವಿಯದಧಿಕರಣ ಸುಧಾ ಅನುವ್ಯಾಖ್ಯಾನಯೋರಪಿ ಸ್ಪಷ್ಟಂ। ವರ್ಣಾನಾಮಪಿ ವರ್ಣಾಂತರಾಭಿವ್ಯಂಜಕತ್ವಂ। ತದುಕ್ತಂ ತಂತ್ರಸಾರೇ। ಪಂಚಾಶದ್ವರ್ಣವಾಚ್ಯಾಃ ಸ್ತ್ಯಾವರ್ಣಾಸ್ತ್ವಾರ್ಣ ಭೇದಿತಾಃ। ನಾರಾಯಣಾಷ್ಟಾಕ್ಷರಾಚ್ಚ ವ್ಯಾಹೃತಿಭ್ಯಸ್ತಥೈವಚ। ವಿಭೇದೋ ದ್ವಾದಶಾರ್ಣಾನಾಂ ಕೇಶವಾದ್ಯಾಶ್ಚ ದೇವತಾಃ ನಾರಾಯಣಾಷ್ಟಾಕ್ಷರಾಚ್ಚ ವ್ಯಾಹೃತಿತ್ರಿಗುಣಾತ್ಮನಃ। ವೇದಮಾತಾತು ಗಾಯತ್ರೀ ದ್ವಿಗುಣಾ ದ್ವಾದಶಾಕ್ಷರಾದಿತಿ।

ಪರಮಾತ್ಮನೇ ಮೊದಲಾದ ಪ್ರತಿಬಿಂಬಾಂತ ದ್ರವ್ಯಗಳಲ್ಲಿ ಹದಿನೈದು ಪರಿಣಾಮಾತ್ಮಕ(ವಿಕಾರಾತ್ಮಕ)ಗಳು, ಉಳಿದು ಅಭಿವ್ಯಕ್ತಿ(ದ್ರವ್ಯ)ರೂಪಗಳೆಂದು ಹೇಳಿತು. ಅಭಿವ್ಯಕ್ತಿ ದ್ರವ್ಯಗಳನ್ನು ಸ್ಪಷ್ಟಪಡಿಸುತ್ತಾರೆ. ಪರಮಾತ್ಮನಿಗೆ ಅನಂತ ರೂಪಗಳಿಂದ ಅಭಿವ್ಯಕ್ತಿಯು ಲಕ್ಷ್ಮೀದೇವಿಗೆ ಸಹ ಸೀತಾ, ರುಕ್ಮಿಣ್ಯಾದಿ ರೂಪಗಳಿಂದ ಅಭಿವ್ಯಕ್ತಿತ್ವವು. ಜೀವರುಗಳಲ್ಲಿ, ಸಾಂಶರು, ನಿರಂಶರೆಂದು ಎರಡುವಿಧವು. ಸಾಂಶ ಜೀವರುಗಳಿಗೆ ತನ್ನ ಅಂಶಗಳಿಂದ ಅನೇಕ ದೇಹಗಳ ಅಭಿವ್ಯಕ್ತಿಯು. (ಸೌಭರಿಗಳು ತಮ್ಮ ಅಂಶಗಳಿಂದ ನಲವತ್ತೊಂಬತ್ತು ದೇಹಗಳನ್ನು ಹೊಂದಿಐವತ್ತು ದೇಹಗಳಿಂದ ಮಾಂಧಾತನ ಪುತ್ರಿಯರಿಂದ ಸಂಸಾರ ಹೊಂದಿದುದು) ನಿರಂಶರಾದ ಜೀವರುಗಳು ಭಗವದಧೀನವಾದ ಶರೀರಗಳಿಂದ ಅಭಿವ್ಯಕ್ತಿಗೊಳ್ಳುವುದು. ಅವ್ಯಾಕೃತಾಕಾಶಕ್ಕೆ ಪರಾಧೀನವಾದ ಮೂರ್ತ(ಪೃಥ್ವಿ, ಅಪ್ಪು, ತೇಜಸ್ಸು)ಸಂಬಂಧದಿಂದ ವಿಶೇಷತೆಯನ್ನು

ತಾಳುವಿಕೆ. (ವ್ಯಾಕೃತಾಕಾಶವೆನಿಸುವಿಕೆ) ಇಂತಹ ಅಭಿವ್ಯಕ್ತಿಯು ಈ ತರಹದ ಅಭಿವ್ಯಕ್ತಿಯನ್ನೇ ಭಾಗವತ ಪ್ರಥಮಸ್ಕಂದದಲ್ಲಿ ವರಾಹಾದಿ ಅನಂತ ಅವತಾರಗಳಿಗೆ ಪದ್ಮನಾಭ ರೂಪವೇ ಬೀಜಭೂತವಾಗಿ ಅಭಿವ್ಯಂಜಕವಾಗಿದೆ ಎಂದು ಸ್ಪಷ್ಟವಾಗಿದೆ. ಇದೇ ವಿಷಯವನ್ನೇ ಆಕಾಶಾಧಿಕರಣ ಸುಧಾ ಹಾಗೂ ಅನುವ್ಯಾಖ್ಯಾನಾದಿಗಳಲ್ಲೂ ಸ್ಪಷ್ಟ ಪಡಿಸಿದೆ, ವರ್ಣಗಳಿಗೆ ವರ್ಣಾಂತರಗಳ ಅಭಿವ್ಯಂಜಕತ್ವವು. ಈ ವಿಷಯವನ್ನು ತಂತ್ರಸಾರದಲ್ಲಿ ಓಂ ಕಾರದ ಎಂಟು ಮಾತ್ರಾ(ವರ್ಣಗಳು)ಗಳಿಂದಲೇ ಐವತ್ತನಾಲ್ಕು ವರ್ಣಗಳು, ನಾರಾಯಣಅಷ್ಟಾಕ್ಷರವು, ವ್ಯಾಹೃತಿಗಳೂ, ವ್ಯಾಹೃತಿಗಳಿಂದ ಹನ್ನೆರಡು ಕೇಶವಾದಿ ಭಗವನ್ನಾಮಗಳೂ ಮತ್ತು ನಾರಾಯಣಾಷ್ಟಾಕ್ಷರ ಮಂತ್ರವು ವ್ಯಾಹೃತಿಯ ಮೂರು ಸಲ ಆವರ್ತನೆಯಿಂದ ವೇದಗಳಿಗೆ ಮಾತೃಸ್ಥಾನೀಯವಾದ ಇಪ್ಪತ್ತನಾಲ್ಕು ಅಕ್ಷರಗಳುಳ್ಳ ಗಾಯತ್ರಿಯು, ಹೀಗೆ ದ್ರವ್ಯವಾದ ವರ್ಣಗಳ ಅಭಿವ್ಯಕ್ತಿಯು.

ಅತ್ರಾಯಂಸಂಪ್ರದಾಯಃ । ಪ್ರಳಯಕಾಲೇ ಸರ್ವೇಽಪಿವರ್ಣಾಃ ಪರಸ್ಪರಂ ನಿಬಿಡತಯಾ ಸಂಬದ್ಧಾಃ । ನಾನಾದೀಪಾಲೋಕವತ್ । ಸೃಷ್ಟಿಕಾಲೇಪ್ರಾಪ್ತೇಽಪರಮಾತ್ಮಾತತ್ತದ್ವರ್ಣಾನುಚ್ಚಾರೇಣ ವಿಭಜತಿ। ತತ್ರತಾರಾ ಅಷ್ಟಾಕ್ಷರ ವಿಭಾಗಕಾಲೇ ನಾರಾಯಣಾಷ್ಟಾಕ್ಷರ ಸಂಭದ್ಧಾಂಸ್ತಾರಾಷ್ಟಾಕ್ಷರಾನುಚ್ಚಾರೇಣವಿಭಜತಿ । ತತಃ ತಾರಾಷ್ಟಾಕ್ಷರೇಭ್ಯೋ ನಾರಾಯಣಾಷ್ಟಾಕ್ಷರಾನ್ ಉಚ್ಚಾರೇಣ ಉದ್ಧರತಿ' ಏವಂ ನಾರಾಯಣಾಷ್ಟಾಕ್ಷರಾದಪಿ। ತದುಕ್ತ ತಂತ್ರಸಾರೇ । ವರ್ಣಾನಾಂ ದೇವತಾನಾಂಚ ನಿತ್ಯತ್ವಾನ್ನಕ್ರಮಸ್ವತಃ । ವ್ಯಕ್ತಿಕ್ರಮಂ ಬ್ರಹ್ಮಬುದ್ಧಾವಪೇಕ್ಷ್ಯಕ್ರಮ ಉಚ್ಯತೇ ಇತಿ ।

ವರ್ಣಗಳ ಅಭಿವ್ಯಕ್ತಿಕ್ರಮವನ್ನು ಶಾಸ್ತ್ರ ಅವಿರುದ್ಧವಾಗಿ ಹೀಗೆ ಹೇಳುವುದೂ ಸಂಪ್ರದಾಯವು. ಪ್ರಳಯಕಾಲದಲ್ಲಿ ಯಾವತ್ತೂ ವರ್ಣಗಳು ಪರಸ್ಪರ ನಿಬಿಡಗಳಾಗಿ ಸಂಬದ್ಧಗಳಾಗಿ ಅನೇಕ ದೀಪಗಳ ಒಂದೇ ಪ್ರಕಾಶದಂತೇ ಇರುತ್ತದೆ ಸೃಷ್ಟಿಕಾಲದಲ್ಲಿ ಪರಮಾತ್ಮನು ಆಯಾವರ್ಣಗಳ ಉಚ್ಚಾರಣೆಯಿಂದ ವಿಭಾಗಮಾಡಿ ಅಭಿವ್ಯಕ್ತಿಗೊಳಿಸುತ್ತಾನೆ. ಮೊದಲು ಓಂಕಾರವು. ಅದರ ಎಂಟು–ಅಕಾರ, ಉಕಾರ, ಮಕಾರ, ನಾದ, ಬಿಂದು, ಘೋಷ, ಶಾಂತ, ಅತಿಶಾಂತ ಎಂಬ ಮಾತ್ರಾಗಳಿಂದ ನಾರಾಯಣಾಷ್ಟಾಕ್ಷರ ಮಂತ್ರವು. ನಾರಾಯಣಾಷ್ಟಾಕ್ಷರದಿಂದಲೂ, ಓಂಕಾರಾಷ್ಟಾಕ್ಷರದಿಂದಲೂ, ದೀಪದಿಂದ ದೀಪಾಂತರಗಳಂತೆ, ವ್ಯಾಹೃತಿ ಗಾಯತ್ರ್ಯಾದಿಗಳನ್ನು ಅಭಿವ್ಯಕ್ತಿಗೊಳಿಸುತ್ತಾನೆ. ಅಂತೆಯೇ ತಂತ್ರಸಾರದಲ್ಲಿ ವರ್ಣಗಳೂ ವರ್ಣಪ್ರತಿಪಾದ್ಯ ಭಗವದ್ರೂಪಗಳೂ ನಿತ್ಯವಾಗಿರುವುದರಿಂದ ಇವುಗಳಿಗೆ ಸ್ವತಃ ಕ್ರಮವಿಲ್ಲ. ಆದರೆ ಉಚ್ಚರಿಸುವ ಪರಮಾತ್ಮನ ಬುದ್ಧ್ಯಸ್ತವಾದ ವರ್ಣಗಳ ಕ್ರಮವನ್ನು ಅಪೇಕ್ಷಿಸಿಯೇ ವರ್ಣಗಳ ಕ್ರಮವೆಂದು ಹೇಳಿರುತ್ತದೆ. ಹೀಗೆ ದ್ರವ್ಯಪ್ರಕರಣವು ಮುಗಿಯಿತು.

# ೧೪. ಪರಮಾತ್ಮ ಪ್ರಕರಣ

**ತತ್ರಾದೌ ಸರ್ವೋತ್ತಮತ್ವೇನ ಪ್ರಧಾನಂ ಪರಮಾತ್ಮಾನಂ ನಿರೂಪಯತಿ ।**

ಪ.ಸಂ.—ತತ್ರ ಪರಮಾತ್ಮಾ ಅನಂತಗುಣಪರಿಪೂರ್ಣಃ ।

**ಪರಮಾತ್ಮನಃ ದ್ರವ್ಯತ್ವಂ ಚೋಪಾಸನಾಪಾದೀಯಾನುವ್ಯಾಖ್ಯಾನೇ ಗುಣಸಾಮಾನ್ಯತೋರುದ್ರೋ ದ್ರವ್ಯ ಸಾಮಾನ್ಯತಃ ಪರಃ ಇತ್ಯುಕ್ತಂ । ದ್ರವ್ಯಂ ಭಗವಾನಿತಿ ಸುಧಾ ಚ । ಅತ್ರ ಪರಿಪೂರ್ಣ ಪದಸ್ಯ ಆದಾವಪಿ ಸಂಬಂಧಃ । ತಥಾ ಚ ಪರಿಪೂರ್ಣಾನಂತಗುಣಪರಿಪೂರ್ಣತ್ವಂ ಪರಮಾತ್ಮನೋಲಕ್ಷಣಂ ಇತ್ಯರ್ಥಃ । ಅನಂತಾನಾಮಪಿ ಗುಣಾನಾಂ ಪರಿಪೂರ್ಣತ್ವಂಚ ಪ್ರತ್ಯೇಕಂ ನಿರವಧಿಕತ್ವಂ । ನಿರತಿಶಯತ್ವಂಚ । ಲಕ್ಷ್ಮ್ಯಾದಿಗತ ಜ್ಞಾನಾದ್ಯಪೇಕ್ಷಯಾ ಪರಮಾತ್ಮಗತ ಜ್ಞಾನಾನಂದಾದಿಕಂ ಅನಂತಗುಣಿತಂ ಏಕೈಕಮಪ್ಯನಂತಮಿತಿ ಸಜಾತೀಯಾನಂತ್ಯಂ । ತಥಾ ಜ್ಞಾನಾನಂದ ಬಲ ಶಕ್ತ್ಯಾದೀನಾಮಪಿ ಆನಂತ್ಯಮಿತಿ ವಿಜಾತೀಯಾನಂತ್ಯಂಚ ವಿವಕ್ಷಿತಂ । ತದುಕ್ತಂ ಷಷ್ಟಭಾಗವತೇ ನಿರ್ಣಯೇಚ ।**

ಹೀಗೆ ವಿಕಾರ, ಅಭಿವ್ಯಕ್ತಿ ಅರ್ಥಕಗಳಾದ ಉಪಾದಾನ ಶಬ್ದಾರ್ಥದೊಂದಿಗೆ ಉಪಾದಾನ ಕಾರಣತೆಯೇ ದ್ರವ್ಯದ ಲಕ್ಷಣಾಂತರವೆಂದು ಹೇಳಿ ಇಪ್ಪತ್ತು ದ್ರವ್ಯಗಳಲ್ಲಿ ಪರಮಾತ್ಮ ದ್ರವ್ಯನಾಗಿರುವುದರಿಂದಲೂ, ವಿಭಕ್ತ ದ್ರವ್ಯಗಳಲ್ಲಿ ಸರ್ವೋತ್ತಮನು ಅತ್ಯಂತ ಪ್ರಧಾನನೂ ಆಗಿರುವುದರಿಂದ ಮೊದಲು ಪರಮಾತ್ಮನನ್ನು ನಿರೂಪಿಸುತ್ತಾರೆ. ಜ್ಞಾನಕ್ಕೆ ಆಶ್ರಯ(ಅಧಿಕರಣ)ವಾದವುಗಳಿಗೆ ಆತ್ಮನೆನ್ನುತ್ತಾರೆ. ಅದರಲ್ಲಿ ಎರಡು ವಿಧವು ಆತ್ಮ, ಪರಮಾತ್ಮನೆಂದು ಕಿಂಚಿತ್ ಜ್ಞಾನಾಶ್ರಯ ಜೀವರುಗಳಿಗೆ ಆತ್ಮರೆಂದು, ಅಸದೃಶ ನಿರವಧಿಕ ಜ್ಞಾನಾಶ್ರಯನಾದ ಶ್ರೀಹರಿಗೆ ಪರಮಾತ್ಮನೆಂದೂ ಶಾಸ್ತ್ರ ವ್ಯವಹಾರವು. ಅಂತಹಪರಮಾತ್ಮನ ಲಕ್ಷಣವನ್ನು ಹೇಳುತ್ತಾರೆ. ಪರಮಾತ್ಮನಿಗೆ ದ್ರವ್ಯತ್ವವು (ದ್ರವ್ಯಪದಾರ್ಥಾಂತರ್ಭಾವವು) ಅನುವ್ಯಾಖ್ಯಾನದ ಉಪಾಸನಾಪಾದದಲ್ಲಿ ದ್ರವ್ಯ ಸಾಮಾನ್ಯನೇ ಪರನೆಂದು ಹೇಳಿದೆ. ಸುಧಾದಲ್ಲಿಯೂ ಮುಖ್ಯ ದ್ರವ್ಯನೇ ಭಗವಂತನೆಂದು ಹೇಳಿದೆ. ಅನಂತಗುಣ ಪರಿಪೂರ್ಣತ್ವವೇ ಪರಮಾತ್ಮನ ಲಕ್ಷಣವು. ಪರಿಪೂರ್ಣ ಪದವು ಗುಣದಲ್ಲಿಯೂ ಅನಂತದಲ್ಲಿಯೂ ಸಂಬಂಧವು ಅಂದರೆ ಪರಿಪೂರ್ಣ ಆನಂದ ಪರಿಪೂರ್ಣ ಗುಣಗಳಿಂದ ಪರಿಪೂರ್ಣತೆಯೇ ಪರಮಾತ್ಮನ ಲಕ್ಷಣವೆಂದರ್ಥವು. ಅನಂತಗುಣಗಳಿಗೆ ಪರಿಪೂರ್ಣತೆಯೆಂದರೆ ಒಂದೊಂದು ಗುಣ

**ಭಾವಃ । ಇತ್ಯಾಹುಃ । ನನು ತರ್ಹಿ ಘಟೋನಾಸ್ತೀತಿ ಪ್ರತೀತೇಃಕಾಗತಿಃ ಇತ್ಯತ ಆಹ ।**

ಪ.ಸಂ.— ಘಟಾದ್ಯಭಾವಸ್ತು ಯಥಾಯಥಂ ಪ್ರಾಗಭಾವಾದಿರೂಪ ಏವ ।

ಅಥವ ದೋಷಭಿನ್ನತ್ವವೇ ನಿರ್ದೋಷತೆ ಅದು ಜೀವಾದಿಗಳಲ್ಲಿಲ್ಲ, ಆದ್ದರಿಂದ ಅತಿವ್ಯಾಪ್ತಿ ಬರುವುದಿಲ್ಲ. ಕೆಲವರು ಹೇಳುತ್ತಾರೆ, ಸ್ವಸಂಸರ್ಗಿ ದೋಷಾಭಾವತೆ, ಏನಿದೋಷತೆ, ಪರಮಾತ್ಮನಲ್ಲಿ ಸ್ವಸಂಸರ್ಗಿ ದೋಷವಿಲ್ಲವಾದ್ದರಿಂದ ನಿರ್ದೋಷತ್ವ ಲಕ್ಷಣ ಬಂದಿತು ಎನ್ನುತ್ತಾರೆ. ಜೀವನಲ್ಲಿ ಸ್ವಸಂಸರ್ಗಿ ದೋಷ ಪ್ರಮಾಣಿಕವಾಗಿರುವುದರಿಂದ ಲಕ್ಷಣವಿಲ್ಲಾ ಅತಿವ್ಯಾಪ್ತಿ ಇಲ್ಲಾ, ಹೀಗೆ ಹೇಳುತ್ತಾರೆ. ಹಾಗಾದರೆ ಘಟೋನಾಸ್ತಿ ಎಂಬ ಪ್ರತೀತಿಗೆ ಗತಿ ಏನು ಎಂದರೆ ಘಟಾಭಾವ ಪ್ರಸಂಗಾನುಸಾರವಾಗಿ ಪ್ರಾಗಭಾವಾದಿಗಳಲ್ಲಿ ಸೇರುತ್ತದೆ.

**ಘಟೋತ್ಪತ್ತೇಃ ಪೂರ್ವಂ ಘಟೋನಾಸ್ತೀತಿ ಪ್ರತೀತೇಃ ಘಟಪ್ರಾಗ-ಭಾವ ವಿಷಯಕತ್ವಂ । ಧ್ವಂಸಾನಂತರಂಚ ಧ್ವಂಸ ವಿಷಯಕತ್ವಂ । ಘಟ ಸತ್ತಾಕಾಲೇತು ಘಟೋನಾಸ್ತೀತಿ ಪ್ರತೀತಿರೇವನಾಸ್ತೀತ್ಯರ್ಥಃ । ನನು ಘಟಸತ್ತಾಕಾಲ ಏವಾಯಂ ಘಟೋತ್ರ ಭೂತಲೇ ನಾಸ್ತೀತಿ ಪ್ರತೀತೇಃ ಅನುಭವ ಸಿದ್ಧತ್ವಾತ್ತಸ್ಯಾಃ ಕಾಗತಿಃ ಇತಿಚೇನ್ನ । ಏತದ್ಭೂತಲ ಸಂಸರ್ಗಾವಚ್ಛಿನ್ನ ಘಟ ಪ್ರತಿಯೋಗಿಕಾಭಾವವಿಷಯತ್ವಾತ್ । ಏತದ್ಭೂತಲ ಘಟ ಸಂಸರ್ಗಶ್ಚ ಅಪ್ರಾಮಾಣಿಕಃ। ಅತಸ್ತದವಚ್ಛಿನ್ನ ಘಟೋಪ್ಯಪ್ರಾಮಾಣಿಕ ಇತಿನದೋಷಃ । ಅತ ಏವ ಸಂಸರ್ಗಾವಚ್ಛಿನ್ನ ಪ್ರತಿಯೋಗಿಕೋಭಾವೋ ಅತ್ಯಂತಾಭಾವ ಇತಿ ಪ್ರವಾದಃ ।**

ಘಟೋತ್ಪತ್ತಿಗೆ ಪೂರ್ವದಲ್ಲಿಯ ಘಟಇಲ್ಲ ಎಂಬ ಪ್ರತೀತಿಯು ಘಟ ಪ್ರಾಗಭಾವ ವಿಷಯಕ, ಧ್ವಂಸ ವಿಷಯಕ, ಘಟಸತ್ತಾಕಾಲದಲ್ಲಿ ಘಟಾಭಾವ ಪ್ರತೀತಿಯೇ ಬರೋದಿಲ್ಲ, ಘಟಸತ್ತಾ ಕಾಲದಲ್ಲಿಯೇ ಈ ಘಟವು ಭೂತಲದಲ್ಲಿಲ್ಲಾ ಎಂಬ ಅನುಭವಕ್ಕೆ ಗತಿ ಏನು ? ಎಂದರೆ ಈ ಭೂ ಸಂಸರ್ಗ ಸಾಮಾನ್ಯ ಪ್ರತಿಯೋಗಿಕಾಭಾವ ವಿಷಯತೆ ಹೇಳುತ್ತೇವೆ. ಈ ಭೂಘಟ ಸಂಸರ್ಗವೂ ಅಪ್ರಮಾಣಿಕ ಈ ಸಂಸರ್ಗ ಘಟವೂ ಅಪ್ರಮಾಣಿಕವೇ, ಒಟ್ಟಿನಲ್ಲಿ ಅತ್ಯಂತಾಭಾವವು ಅಪ್ರಮಾಣಿಕ(ಅಸತ್) ಪ್ರತಿಯೋಗಿಕವೇ ಸಂಸರ್ಗಾವಚ್ಛಿನ್ನ ಪ್ರತಿಯೋಗಿಕಾಭಾವವೇ ಅತ್ಯಂತಾಭಾವವು.

**ನಚೈವಂ ಘಟಸಂಸರ್ಗೋನಾಸ್ತೀತಿ ಪ್ರತೀತ್ಯಾಪತ್ತ್ಯಾ ಘಟೋ ನಾಸ್ತೀತಿ ಪ್ರತೀತಿಃ ಕ್ವಾಪಿನಸ್ಯಾದಿತಿ ವಾಚ್ಯಂ । ಘಟಸಂಸರ್ಗೋನಾಸ್ತೀತಿ ಪ್ರತೀತೇಃಸಂ ಸರ್ಗಸಂಸರ್ಗಾಭಾವವಿಷಯಕತ್ವೇನ ಕೇವಲ ಸಂಸರ್ಗಾಭಾವ**

ವಿಷಯತ್ವಾಭಾವಾತ್ । ಅತ್ಯಂತಾಭಾವಸ್ಯ ಪ್ರಸಜ್ಯ ಪ್ರತಿಷೇಧರೂಪ ತ್ವಾತ್ । ನನ್ವೇವಮನ್ಯೋನ್ಯಾಭಾವಸ್ಯಾಪಿತಾದಾತ್ಮ್ಯಾವಚ್ಛಿನ್ನ ಪ್ರತಿ ಯೋಗಿಕಾಭಾವತ್ವೇನ ಘಟೆ ಪಟಾದಿತಾದಾತ್ಮ್ಯಸ್ಯಾತ್ಯಂತಾ ಸತ್ವಾದನ್ಯೋ ನ್ಯಾಭಾವೋಽಪಿ ಅಪ್ರಾಮಾಣಿಕ ಪ್ರತಿಯೋಗಿಕ ಏವಾಸ್ತ್ವಿತಿ ಚೇತ್ಸತ್ಯಂ । ಘಟಾದಿ ಪ್ರತಿಯೋಗಿಕಾತ್ಯಂತಾಭಾವಸ್ಯ ಅಂಗೀಕಾರೇ ಅತ್ಯಂತಾಸತ್ವಾ ಪಾದಾನವಘ್ಘಟಾದಿ ಪ್ರತಿಯೋಗಿಕಾನ್ಯೋನ್ಯಾಭಾವಾಂಗೀಕಾರೇ ಅತ್ಯಂತಾ ಸತ್ವಾಪಾದಾನ ರೂಪ ದೋಷಾಭಾವಾತ್ ಕೇವಲ ಘಟಪ್ರತಿಯೋಗಿಕೋ ಪ್ಯನ್ಯೋನ್ಯಾಭಾವಃ ।

ಹಾಗಾದರೆ ಘಟ ಸಂಸರ್ಗವಿಲ್ಲಾಂತಲೇ ಎಲ್ಲಡಿಯಲ್ಲೂ ಪ್ರತೀತಿ ಬಂದು ಘಟವಿಲ್ಲಾ ಎಂಬ ಪ್ರತೀತಿಯೇ ಎಲ್ಲೂ ಇಲ್ಲವಾಗಲಿ, ಹೀಗೆನ್ನಬಾರದು, ಘಟ ಸಂಸರ್ಗವಿಲ್ಲ ಎಂಬ ಪ್ರತೀತಿ(ವ್ಯವಹಾರ)ಗೆ ಸಂಸರ್ಗ ಸಂಸರ್ಗದ ಅಭಾವದ ವಿಷಯತೆ ಇದ್ದು ಕೇವಲ ಸಂಸರ್ಗಾಭಾವ ವಿಷಯತೇ ಇಲ್ಲವಾದ್ದರಿಂದ ಅತ್ಯಂತಾ ಭಾವವನ್ನೂ ಪ್ರಸಕ್ತಿಸಿ ನಿಷೇಧಿಸುವದಾದ್ದರಿಂದ,

ಮತ್ತೂ ಅನ್ಯೋನ್ಯಾಭಾವವು ತಾದಾತ್ಮ್ಯಾವಚ್ಛಿನ್ನ ಪ್ರತಿಯೋಗಿಕವಾದರೆ ಘಟ ಪಟಾದಿತಾದಾತ್ಮ್ಯವು ಅಪ್ರಮಾಣಿಕವಾದ್ದರಿಂದ, ಅತ್ಯಂತಾ ಅಸತ್ವವಾದ್ದರಿಂದ ಅನ್ಯೋನ್ಯಾಭಾವವು ಸಹ ಅಪ್ರಮಾಣಿಕ ಪ್ರತಿಯೋಗಿಕವೇ ಆಗಲಿ ಎಂದರೆ ಸತ್ಯಂ ನಿಜವೇ ತಾದಾತ್ಮ್ಯಪ್ರತಿಯೋಗಿ ಆದಾಗ ಅಪ್ರಮಾಣಿಕ ಪ್ರತಿಯೋಗಿ ಅಸತ್ಪ್ರತಿ ಯೋಗಿ ಆದುದರಿಂದ ತಾದಾತ್ಮ್ಯ ಪ್ರತಿಯೋಗಿಕತೆ ಒಪ್ಪುವುದಿಲ್ಲಾ ಅತ್ಯಂತಾಭಾವಕ್ಕೆ ಘಟಪ್ರತಿಯೋಗಿಕತೆ ಒಪ್ಪಿದರೆ ಹೇಗೆ ಅಸತ್ ಪ್ರತಿಯೋಗಿಕತೆಯೋ ಹಾಗೆ ಅನ್ಯೋನ್ಯಾಭಾವಕ್ಕೆ ಘಟಪ್ರತಿಯೋಗಿಕತೆ ಹೇಳಿದರೆ ಅಸತ್ ಪ್ರತಿಯೋಗಿಕತೆ ಬರುವುದಿಲ್ಲ.

ತಥಾಚ ಘಟಃ ಪಟೋನಭವತೀತ್ಯತ್ರೋಭಯತಾದಾತ್ಮ್ಯಾವಚ್ಛಿನ ಪ್ರತಿಯೋಗಿಕ ಏಕೋ ಅನ್ಯೋನ್ಯಾಭಾವಃ । ಘಟತ್ವಾವಚ್ಛಿನ್ನ ಪ್ರತಿ- ಯೋಗಿಕೋ ಅನ್ಯೋನ್ಯಾಭಾವಃ ಅಪರಃ । ಘಟೋನಾಸ್ತೀತಿ ಅತ್ಯಂತಾ ಭಾವ ಪ್ರತೀತಿಸ್ಥಳೇತು ಸಂಸರ್ಗಾವಚ್ಛಿನ್ನ ಘಟ ಪ್ರತಿಯೋಗಿಕ ಏಕ ಏವಾತ್ಯಂತಾಭಾವಃ ಇತಿ ವಿವೇಕಃ । ಅತ್ರ ಧ್ವಂಸಸ್ಯಕಾರ್ಯತ್ವಾತ್ ನಿರುಪಾದಾನಕ ಸೃಷ್ಟೇರಭಾವಾತ್ ಧ್ವಂಸೋ ಪಾದಾನಂ ನಾಸ್ಮಾಭಿರ್ಭ ದ್ಧಂ । ಮಹಾಂತಃ ಪ್ರಷ್ಟವ್ಯಾಃ । ತಮೋಗುಣೇನನಾಶ ಇತಿ ಭಾಗವ ತಾದಾವುಕ್ತೇಃ । ಸರ್ವತ್ರ ತಮೋಗುಣಮೇವ ಧ್ವಂಸೋಪಾದಾನಮಿತಿ ಕೇಚಿದಾಹುಃ । ಇತಿ ಶ್ರೀವೇದಗರ್ಭಕುಲೀನ ಪದ್ಮನಾಭಸೂರಿ ವಿರಚಿತೇ

ಪದಾರ್ಥಸಂಗ್ರಹವ್ಯಾಖ್ಯಾನೇ ಶ್ರೀಮನ್ಮಧ್ವಸಿದ್ಧಾಂತಸಾರೇ ಪದಾರ್ಥ ನಿರೂಪಣಂ ಸಮಾಪ್ತಂ ।

ಒಟ್ಟಿನಲ್ಲಿ ಘಟಪಟವಾಗೋದಿಲ್ಲಾ ಹೀಗೆ ತಾದಾತ್ಮ್ಯಾವಚ್ಛಿನ್ನ ಪ್ರತಿಯೋಗಿ ಅನ್ಯೋನ್ಯಾಭಾವವು ಒಂದು (ಇದು ಅಸತ್ ಪ್ರತಿಯೋಗಿಕಾನ್ಯೋನ್ಯಾ ಭಾವವು) ಘಟತ್ವಾವಚ್ಛಿನ್ನ (ಯುಕ್ತ) ಘಟಪ್ರತಿಯೋಗಿಕ ಅನ್ಯೋನ್ಯಾಭಾವ ಎರಡನೆಯದು. (ಇದು ಪ್ರಾಮಾಣಿಕ ಪ್ರತಿಯೋಗಿಕ ಭೇದ) ಘಟೋನಾಸ್ತಿ ಎಂಬಲ್ಲಿ ಘಟ ಸಂಸರ್ಗ ಪ್ರತಿಯೋಗಿಕ ಅತ್ಯಂತಾಭಾವ ಅಪ್ರಮಾಣಿಕ ಪ್ರತಿಯೋಗಿಕ ಹೀಗೆ ತಿಳಿಯಬೇಕು.

ಧ್ವಂಸವಾದುದು ಕಾರ್ಯವು, ಉಪಾದಾನಕಾರಣವಿಲ್ಲದ ಕಾರ್ಯವಿಲ್ಲ, ಧ್ವಂಸಕ್ಕೆ ಉಪಾದಾನಕಾರಣ ಯಾವುದು,ನಮ್ಮ ಬುದ್ಧಿಗೆ ತಿಳಿಯದು,ಮಹನೀಯರು ತಿಳಿಸಬೇಕು. ಎಲ್ಲಿ ಧ್ವಂಸ (ನಾಶಗಳಿಗೆ) ತಮೋಗುಣವೇ ಉಪಾದಾನ ಕಾರಣವೆಂದು ಭಾಗವತದಲ್ಲಿರುವುದರಿಂದ ತಮೋಗುಣವೇ ಉಪಾದಾನಕಾರಣವೆನ್ನುತ್ತಾರೆ.

ಹೀಗೆ ಶ್ರೀವೇದಗರ್ಭ ಕುಲೀನ ಪಂಡಿತರಾದ ಪದ್ಮನಾಭಾಚಾರ್ಯರಿಂದ ವಿರಚಿತ ಪದಾರ್ಥಸಂಗ್ರಹದ ಟೀಕಾ ಶ್ರೀಮಧ್ವಸಿದ್ಧಾಂತಸಾರದಲ್ಲಿ ಪದಾರ್ಥ ನಿರೂಪಣವೆಂಬ ಅಭಾವ ಪ್ರಕರಣವು ಕನ್ನಡಾನುವಾದದೊಂದಿಗೆ ಮುಗಿದುದು.

---

ಸ್ವತಂತ್ರಮಸ್ವತಂತ್ರಂಚ ದ್ವಿವಿಧಂ ತತ್ವಮಿಷ್ಯತೇ ।
ಸ್ವತಂತ್ರೋಭಗವಾನ್ ವಿಷ್ಣುಃ ಭಾವಾಭಾವೌ ದ್ವಿಧೇತರತ್ ॥
ಪ್ರಾಕ್ಪ್ರಧ್ವಂಸಸದಾತ್ವೇನ ತ್ರಿವಿಧೋಽಭಾವ ಇಷ್ಯತೇ ।

— ತತ್ವಸಂಖ್ಯಾನೇ

ಸ್ವತಂತ್ರಂ ಪರತಂತ್ರಂ ಚ ಪ್ರಮೇಯಂ ದ್ವಿವಿಧಂ ಮತಮ್ ।
ಸ್ವತಂತ್ರೋ ಭಗವಾನ್ ವಿಷ್ಣುಃ ನಿರ್ದೋಷಾಖಿಲ ಸದ್ಗುಣಃ ॥
ದ್ವಿವಿಧಂ ಪರತಂತ್ರಂಚ ಭಾವೋಽಭಾವ ಇತೀರಿತಃ ।
ಪೂರ್ವಾಪರಸದಾತ್ವೇನ ತ್ರಿವಿಧೋಽಭಾವ ಇಷ್ಯತೇ ।
ಭಾವಾಭಾವ ಸ್ವರೂಪತ್ವಾನ್ನಾನ್ಯೋನ್ಯಾಭಾವತಾ ಪೃಥಕ್ ।

—ತತ್ವವಿವೇಕೇ

---

# ೧೩. ದ್ರವ್ಯ ಪ್ರಕರಣ

**ಪೂರ್ವಂ ಸೂಚೀಕಟಾಹನ್ಯಾಯೇನ ಕರ್ಮಸಾಮಾನ್ಯಾದೇಃ ನಿರೂಪಿತತ್ವಾದವಶಿಷ್ಟ ದ್ರವ್ಯಗುಣಯೋಃ ವಿಶೇಷಾಕಾರೇಣ ನಿರೂಪಣಂ ಚಿಕೀರ್ಷುಃ ಗುಣಾಶ್ರಯತ್ವೇನ ದ್ರವ್ಯಸ್ಯ ಪ್ರಾಧಾನ್ಯಾದಾದೌ ದ್ರವ್ಯ ಲಕ್ಷಣಮಾಹ ॥**

**ಪ.ಸಂ.**—ದ್ರವಣಪ್ರಾಪ್ಯತ್ವಂ ದ್ರವ್ಯಸಾಮಾನ್ಯ ಲಕ್ಷಣಂ। ದ್ರವಣಂ ಚ ಗಮನಂ।

ಗ್ರಂಥಾರಂಭದಲ್ಲಿ (ಸೂಚೀಕಟಾಹನ್ಯಾಯ) ಸಣ್ಣ ವಿಷಯವನ್ನು ಆರಂಭಿಸಿ ದೊಡ್ಡ ವಿಷಯಗಳನ್ನು ತಿಳಿಸುವ ಕ್ರಮದಂತೆ ಹತ್ತು ಪದಾರ್ಥಗಳಲ್ಲಿ ಕರ್ಮಾದಿ ಎಂಟು ಪದಾರ್ಥಗಳನ್ನು ಸಾಮಾನ್ಯವಾಗಿ ಲಕ್ಷಣ ವಿಭಾಗಗಳಿಂದ ನಿರೂಪಿಸಿ, ದ್ರವ್ಯ ಗುಣಗಳನ್ನು ವಿಶೇಷವಾಗಿ ನಿರೂಪಿಸುವವರಾಗಿ ಗುಣಗಳಿಗೆ ಆಶ್ರಯವಾದುದೇ ದ್ರವ್ಯವಾದ್ದರಿಂದ ದ್ರವ್ಯ ಪದಾರ್ಥವನ್ನು ವರ್ಣಿಸುತ್ತಾರೆ. ಮೊದಲು ಲಕ್ಷಣವನ್ನು ಹೇಳಿ ವಿಭಾಗಿಸುವ ಕ್ರಮದಲ್ಲಿ ಲಕ್ಷಣವನ್ನು ಹೇಳುತ್ತಾರೆ.

ದ್ರವಣದಿಂದ ಹೊಂದಲು ಯೋಗ್ಯವಾದುದು ದ್ರವ್ಯದ ಸಾಮಾನ್ಯಲಕ್ಷಣವು. ಅದಕ್ಕೆ ದ್ರವ್ಯವೆಂದು ಹೆಸರು. ದ್ರವಣವೆಂದರೆ ಗಮನವು.

**ಅಹಂ ಪೂರ್ವಮಹಂ ಪೂರ್ವಮಿತಿ ವಿವದಮಾನಯೋಃ ಪುರುಷಯೋಃ ಯದ್ಧಾವನ ಪ್ರಾಪ್ಯಂ ತದ್ರವ್ಯಮಿತ್ಯರ್ಥಃ । ತದುಕ್ತಂ ದ್ವಿತೀಯಸ್ಕಂಧ ತಾತ್ಪರ್ಯೇ।ದ್ರವ್ಯಂತು ದ್ರವಣ ಪ್ರಾಪ್ಯಂ ದ್ವಯೋಃವಿವದಮಾನಯೋಃ ಪೂರ್ವಂ ವೇಗಾಭಿ ಸಂಬಂಧಾದಾಕಾಶಸ್ತು ಪ್ರದೇಶತಃ ಇತಿ । ಅನೇನ ಅವ್ಯಾಕೃತಾಕಾಶ ಪ್ರಕೃತಿ ಕಾಲ ವರ್ಣಾನಾಂ ವ್ಯಾಪ್ತಾನಾಂ ಅಪಿ ಪ್ರದೇಶತೋ ಗಮನ ಪ್ರಾಪ್ಯತ್ವಮಿತಿನಾವ್ಯಾಪ್ತಿಃ ಇತಿ ಬೋಧ್ಯಮ್ । ಲಕ್ಷಣಾಂತರಮಾಹ ।**

**ಪ.ಸಂ.**—ಉಪಾದಾನಕಾರಣತ್ವಂ ವಾ ದ್ರವ್ಯತ್ವಮ್ ।

ಜೀವರು ನಾಮುಂಚೆ ನಾನುಮುಂಚೆ ಎಂದು ದೇಹದಿಂದಲೂ ಮನಸ್ಸಿನಿಂದಲೂ ಧಾವಿಸಿ(ಓಡಿ) ಹೊಂದಲು ಅರ್ಹವಾದುದು ಎಂದು ಅರ್ಥವು. ಇದೇ ದ್ರವ್ಯಲಕ್ಷಣವನ್ನೇ ಶ್ರೀಮದಾಚಾರ್ಯ ಮಧ್ವರು ಭಾಗವತ ತಾತ್ಪರ್ಯ ದ್ವಿತೀಯ ಸ್ಕಂಧದಲ್ಲಿ ಹೀಗೆ ಹೇಳಿರುತ್ತಾರೆ. ವಿವಾದವುಳ್ಳ ಇರ್ವರಲ್ಲಿ ಧಾವನ(ಓಡುವಿಕೆ)ಯಿಂದ

**ಇದಾನೀಂ ಅತ್ಯಂತಾಭಾವ ಸ್ವರೂಪಂ ನಿರೂಪಯತಿ ।**

ಪ.ಸಂ. —ಅಪ್ರಾಮಾಣಿಕ ಪ್ರತಿಯೋಗಿಕಾಭಾವೋಽತ್ಯಂತಾಭಾವಃ ।

**ಅತ್ಯಂತಾ ಸತ್ಪ್ರತಿಯೋಗಿಕಾಭಾವ ಇತ್ಯರ್ಥಃ । ನನ್ವತ್ಯಂತಾಭಾವೋನ ಶಶಶೃಂಗಾದತ್ಯಂತಾ ಸತ್ಪ್ರತಿಯೋಗಿಕಃ । ತಥಾತ್ವೇ ಅತ್ಯಂತಾಭಾವ ಜ್ಞಾನ ಮೇವನಸ್ಯಾತ್ ಪ್ರತಿಯೋಗಿನಿಶಶಶೃಂಗಾದೌ ಪ್ರಮಾಣ ಪ್ರವೃತ್ತೇರ ಭಾವೇನ ಪ್ರತಿಯೋಗಿಜ್ಞಾನಾಭಾವಾದಿತಿಚೇನ್ನ ।**

ಅತ್ಯಂತಾಭಾವವನ್ನು ನಿರೂಪಿಸುತ್ತಾರೆ. ಅಪ್ರಾಮಾಣಿಕ ಪ್ರತಿಯೋಗಿಕಾ ಭಾವವೇ ಅತ್ಯಂತಾಭಾವವು. ಅಸತ್ ಪ್ರತಿಯೋಗಿಕಾಭಾವವೆಂದು ಅರ್ಥವು. ಶಶಶೃಂಗ ಪ್ರತಿಯೋಗಿಕಾತ್ಯಂತಾಭಾವವೇ ಅಪ್ರಾಮಣಿಕವು. ಶಶಶೃಂಗವು ಯಾವ ಪ್ರಮಾಣದಿಂದ ಸಿದ್ಧವಿಲ್ಲ. ಅದರ ಅಭಾವವೆಂದರೆ ಪ್ರತಿಯೋಗಿ ಜ್ಞಾನವೇ ಇಲ್ಲದೆ ಅಭಾವ ಜ್ಞಾನವು ಅಸಂಭಾವಿತವೆಂದರೆ, ಹಾಗೆನ್ನಬಾರದು.

**ಶಶಶೃಂಗಮಿತ್ಯಾದಿ ಶಬ್ದೇನ ಶಶಶೃಂಗಸ್ಯಾಪಿ ಜ್ಞಾನ ಸಂಭವಾತ್ । ತದುಕ್ತಂ । ಅತ್ಯಂತಾಸತ್ಯಪಿಹ್ಯರ್ಥೇ ಜ್ಞಾನಂ ಶಬ್ದಃ ಕರೋತಿ ಹೀತಿ । ಅನ್ಯಥಾ ಘಟಪಟಾದಾವಸದ್ವೈಲಕ್ಷಣ್ಯ ಜ್ಞಾನಾಭಾವಪ್ರಸಂಗಾತ್ । ಶಶಶೃಂಗಾದೌ ಸದ್ವೈಲಕ್ಷಣ್ಯ ಜ್ಞಾನಾಭಾವ ಪ್ರಸಂಗಾಚ್ಚ । ತದುಕ್ತಮನು ವ್ಯಾಖ್ಯಾನೇ । ಅಸದ್ವಿಲಕ್ಷಣ ಜ್ಞಪ್ತ್ಯೈ ಜ್ಞಾತವ್ಯಮಸದೇವಹಿ । ತಸ್ಮಾದ ಸತ್ಪ್ರತೀತಿಶ್ಚ ಕಥಂತೇನನಿವಾರ್ಯತ ಇತಿ । ತತ್ವನಿರ್ಣಯೇಪಿ । ಅಸತಃ ಖ್ಯಾತ್ಯಯೋಗಾದಿತಿವದತೋ ಸತಃ ಖ್ಯಾತಿರಭೂನ್ನವಾ । ಯದಿನಾ ಭೂತ್ ನತತ್ಖ್ಯಾತಿ ನಿರಾಕರಣಂ । ಯದ್ಯಭೂತ್ತಥಾಪೀತಿ । ನನು ಭೂತಲೇಘಟೋ ನಾಸ್ತೀತಿ ಪ್ರತೀತ್ಯಾ ಘಟಾದಿ ಪ್ರಮಾಣಿಕ ಪ್ರತಿಯೋ- ಗಿಕಾತ್ಯಂತಾಭಾವಸ್ಯಾಪಿ ಸತ್ವಾತ್ ಕಥಮಪ್ರಮಾಣಿಕ ಪ್ರತಿಯೋಗಿಕೋ ಅತ್ಯಂತಾಭಾವ ಇತ್ಯತ ಆಹ ।**

ಶಶಶೃಂಗಂ ಎಂಬ ಶಬ್ದದಿಂದಲೇ ಶಶಶೃಂಗ (ಮೊಲದ ಕೋಡು) ಎಂಬ ಜ್ಞಾನ ವಾಗುತ್ತಿದೆ ವಸ್ತು ಅತ್ಯಂತಾ ಸತ್ತಾದರೂ ಜ್ಞಾನವು ಶಬ್ದದಿಂದಲೇ ಆಗುತ್ತದೆ ಎಂದಿರುತ್ತದೆ. ಹಾಗಿಲ್ಲವಾದರೆ ಘಟಪಟಾದಿಗಳಲ್ಲಿ ಅಸದ್ವೈಲಕ್ಷಣ್ಯಜ್ಞಾತವೇ ಆಗದೇ ಹೋಗಬೇಕಾದೀತು. ಹೀಗೆ ಶಶಶೃಂಗಾದಿಗಳಲ್ಲಿ ಸದ್ವೈಲಕ್ಷಣ್ಯ(ಸದ್ಭಿನ್ನ)ಜ್ಞಾನವೇ ಇಲ್ಲದೇ ಹೋಗಬೇಕಾದೀತು. ಅನುವ್ಯಾಖ್ಯಾನದಲ್ಲಿ ಅಸದ್ವಿಲಕ್ಷಣ ಜ್ಞಾನಕ್ಕಾಗಿ ಅಸತ್ ಜ್ಞಾತವೇ ಆಗಬೇಕೆಂದು, ಆದ್ದರಿಂದ ಅಸತ್ಪ್ರತೀತಿಯೂ ಯಾರಿಂದ ಹೇಗೆ ತಡಗಟ್ಟಲು ಆಗುತ್ತದೆ. ಎಂದು ತತ್ವ ನಿರ್ಣಯದಲ್ಲಿಯೂ, ಅಸತ್ತಿಗೆ ಖ್ಯಾತಿ(ಜ್ಞಾನ ವಿಷಯತೆ) ಇಲ್ಲಾ ಅನ್ನುವವನನ್ನು ಕೇಳಬೇಕು. ಸತ್ತಿಗೆ ಖ್ಯಾತಿ ಇದೆಯೇ ಇಲ್ಲವೇ,

ಇದೆ ಎಂದರೆ ಖ್ಯಾತಿ ನಿರಾಕರಣವಾಗಲಿಲ್ಲ. ಇಲ್ಲ ಎಂದರೆ ಅದರ ನಿರಾಕರಣವೇ ಆಯಿತು ಸತ್ತಿಗೂ ಅಸತ್ತಿಗೂ ಶಬ್ದಮಾತ್ರದಿಂದ ಖ್ಯಾತಿ ಜ್ಞಾನ ವಿಷಯತೆ ಒಪ್ಪಲೇ ಬೇಕು.

ಭೂಮಿಯಲ್ಲಿ ಘಟವಿಲ್ಲಾ ಎಂಬ ಪ್ರತೀತಿಯಲ್ಲಿ ಪ್ರಾಮಾಣಿಕ ಘಟ ಪ್ರತಿಯೋಗಿಕ ಅತ್ಯಂತಾಭಾವವಿರಲು ಅತ್ಯಂತಾಭಾವ ಅಪ್ರಮಾಣಿಕವೇ ಎನ್ನುವಿರಿ ಎಂದರೆ ಹೇಳುತ್ತಾರೆ.

ಸಂ.ಸಂ.—ನತು ಪ್ರಾಮಾಣಿಕ ಪ್ರತಿಯೋಗಿಕಃ । ಸಚ ನಿತ್ಯಃ ।

ಅತ್ಯಂತಾಭಾವವು ಪ್ರಮಾಣಿಕ ಪ್ರತಿಯೋಗಿಕವಲ್ಲಾ ಅದು ನಿತ್ಯವೂ ಆಗಿರುತ್ತದೆ.

**ಅಯಂ ಭಾವಃ । ಘಟಾದೇರತ್ಯಂತಾಭಾವ ಇತ್ಯಸ್ಯಕೋರ್ಥಃ । ನಾಸ್ತಿನಾಸೀನ್ನಭವಿಷ್ಯತೀತಿ ತ್ರೈಕಾಲಿಕ ನಿಷೇಧೋವಾ ನಿಷೇಧಮಾತ್ರಂ ವಾ । ನಾಂತ್ಯಃ । ಇಷ್ಟಾಪತ್ತೇಃ । ಅನ್ಯೋನ್ಯಾಭಾವಾದೇಃ ಸ್ವೀಕೃತತ್ವಾತ್ । ನಾದ್ಯಃ । ಘಟಾದೇಃ ಅತ್ಯಂತಾ ಸತ್ವಾಪತ್ತೇಃ । ತ್ರೈಕಾಲಿಕ ನಿಷೇಧ ಪ್ರತಿಯೋಗಿತ್ವಾತಿರಿಕ್ತಸ್ಯ ಅತ್ಯಂತಾ ಸತ್ವಸ್ಯ ಶಶಶೃಂಗಾದಾವಭಾವಾತ್ । ನ ಚ ತ್ರೈಕಾಲಿಕ ನಿಷೇಧೋ ಅತ್ಯಂತಾಭಾವಃ ।**

ಅಭಿಪ್ರಾಯವು ಹೀಗಿರುತ್ತದೆ. ಘಟಾದಿಗಳ ಅತ್ಯಂತಾಭಾವವೆಂಬುದಕ್ಕೆ ಅರ್ಥವೇನು ? ಹಿಂದಿರಲಿಲ್ಲ, ಈಗೂ ಇಲ್ಲ, ಮುಂದೂ ಇರೋಲ್ಲ. ಮೂರು ಕಾಲದಲ್ಲೂ ಇಲ್ಲವೆಂದಾ ? ಸಾಮಾನ್ಯ ಇಲ್ಲವೆಂದಾ ? ಕೊನೆಯದು ಇಷ್ಟವೇ ಅದನ್ನು ಭೇದಾದಿಗಳಲ್ಲೂ ಒಪ್ಪಿರುತ್ತೇವೆ. ಮೊದಲನೆಯದೂ ಅಲ್ಲ. ಘಟಾದಿಗಳಿಗೆ ಅತ್ಯಂತ ಅಸತ್ವವೇ ಬರಬೇಕಾಗುತ್ತದೆ. ಏಕೆಂದರೆ ಮೂರುಕಾಲದ ನಿಷೇಧಾತಿರಿಕ್ತ ಪ್ರಯೋಗಿಕತೆ ಮೊಲದ ಕೊಡಿನಲ್ಲಿಲ್ಲ, ತ್ರೈಕಾಲಿಕ ನಿಷೇಧವೇ ಅತ್ಯಂತಾ ಸತ್ವವಲ್ಲಾ ತ್ರೈಕಾಲಿಕ ಸತ್ವನಿಷೇಧವೇ ಅತ್ಯಂತಾ ಸತ್ವ ಎನ್ನುತ್ತೇವೆ ಎಂದರೆ,

**ತ್ರೈಕಾಲಿಕ ಸತ್ವನಿಷೇಧಸ್ತ್ವತ್ಯಂತಾಸತ್ವಮಿತಿ ವಾಚ್ಯಂ । ದೇಶ ಕಾಲ ಸಂಬಂಧಾತಿರಿಕ್ತ ಸತ್ವಸ್ಯೈವಾನಿರೂಪಣಾತ್ । ನ ಚ ಸತ್ತಾ ಜಾತಿರೇವ ಸತ್ವಮಿತಿ ವಾಚ್ಯಂ । ಸಾಮಾನ್ಯಾಭಾವಾದೀನಾಂ ಸತ್ವಾಭಾವ ಪ್ರಸಂಗಾತ್ ಸಾಮಾನ್ಯಾದಿಕಂ ನಿಸ್ಸಾಮಾನ್ಯಮಿತ್ಯಂಗೀಕಾರಾತ್ । ನ ಚ ಸಾಮಾನ್ಯಾದೌ ದೇಶ ಕಾಲ ಸಂಬಂಧಿತ್ವಮೇವ ಸತ್ವಮಿತಿ ವಾಚ್ಯಂ । ತರ್ಹಿ ದ್ರವ್ಯ ಗುಣಾದಿಷ್ವಪಿ ದೇಶಕಾಲ ಸಂಬಂಧಿತ್ವರೂಪ ಸತ್ವೇನೈವ ಪ್ರತೀತಿ ವ್ಯವಹಾರಯೋಃ ಉಪಪತ್ತೌ ಸತ್ತಾಜಾತಿ ಸ್ವೀಕಾರಾನುಪಪತ್ತೇಃ । ತ್ರೈಕಾಲಿಕ**

**ನಿಷೇಧ ಪ್ರತಿಯೋಗಿತ್ವಸ್ಯೈವ ಸರ್ವತ್ರಾತ್ಯಂತಾ ಸತ್ವರೂಪತ್ವೋಪಪತ್ತೌ ಸತ್ವನಿಷೇಧಸ್ಯ ಗೌರವೇಣ ಅಪ್ರಯೋಜಕತ್ವಾತ್ ।**

ಹಾಗೆನ್ನಬಾರದು, ದೇಶಕಾಲ ಸಂಬಂಧಾತಿರಿಕ್ತ ಸತ್ವವು ಅಸಂಭಾವಿತವೇ ಆಗಿರುವುದರಿಂದ ಸತ್ತಾಜಾತಿಯೇ ಸತ್ವವೆಂದೆನ್ನಬಾರದು. ಸಾಮಾನ್ಯ ಅಭಾವಗಳಿಗೂ ಸತ್ವವಿಲ್ಲದೆ ಹೋಗಬೇಕಾದೀತು. ಸಾಮಾನ್ಯಾದಿಗಳು ಸಾಮಾನ್ಯವೆಂದು ಅಂಗೀಕರಿಸಿರುವುದರಿಂದ ಸಾಮಾನ್ಯಾದಿಗಳಲ್ಲಿ ದೇಶಕಾಲ ಸಂಬಂಧಿತ್ವವೇ ಸತ್ವವೆಂಕಲೂ ಎನ್ನಬಾರದು. ಹಾಗಾದರೆ ದ್ರವ್ಯಗುಣಾದಿಗಳಲ್ಲೂಸಹ ದೇಶ ಕಾಲ ಸಂಬಂಧ ರೂಪ ಸತ್ವದಿಂದಲೇ ಪ್ರತೀತಿ ವ್ಯವಹಾರಗಳು ಕೂಡುತ್ತಿರಲು ಸಾತ್ತಾಜಾತಿ ಒಪ್ಪುವುದು ಬೇಕಾಗುವುದಿಲ್ಲ. ತ್ರೈಕಾಲಿಕ ನಿಷೇಧ ಪ್ರತಿಯೋಗಿತ್ವಕ್ಕೆ ಅತ್ಯಂತಾಸತ್ವತೆಯುಕ್ತವಾಗುತ್ತಿರಲು ಪ್ರತ್ಯೇಕ ಸತ್ವ ನಿಷೇಧಕ್ಕೆ ಅಸತ್ವತೆ ಬರುವುದರಿಂದ ಅಪ್ರಯೋಜಕವಾಗುತ್ತದೆ.

**ತದುಕ್ತಮನುವ್ಯಾಖ್ಯಾನೇ । ದೇಶಕಾಲಾನಪೇಕ್ಷಾಹಿನ ಸತ್ವಾಕ್ವಾಪಿ ದೃಶ್ಯತ ಇತಿ । ತಸ್ಮಾದತ್ಯಂತಾ ಸತ್ಪ್ರತಿಯೋಗಿಕ ಏವ ಅತ್ಯಂತಾಭಾವಃ । ತದುಕ್ತಂ ತತ್ವನಿರ್ಣಯಟೀಕಾಯಾಂ । ಅಸ್ಯ ಪಟಸ್ಯೈತತ್ತಂತು ನಿಷ್ಠಾತ್ಯಂತಾಭಾವ ಪ್ರತಿಯೋಗಿತ್ವ ಸಾಧನಮಪ್ಯತ್ಯಂತಾಭಾವಸ್ಯ ನಿಷ್ಪ್ರತಿಯೋಗಿತ್ವೇನಭಾಧಿತಮಿತಿ । ನ್ಯಾಯಾಮೃತೇಪಿ । ತ್ರಿಕಾಲ ಸರ್ವದೇಶಿಯ ನಿಷೇಧಾ ಪ್ರತಿಯೋಗಿತಾ । ಸತ್ವೋಚ್ಯತೇ ಅಧ್ಯಸ್ತತುಚ್ಛೇತಂ ಪ್ರತಿ ಪ್ರತಿಯೋಗಿನೀ ಇತಿ ।**

ಅನುವ್ಯಾಖ್ಯಾನದಲ್ಲಿ ಹೇಳಿದೆ ದೇಶಕಾಲಗಳ ಅಪೇಕ್ಷೆ ಇಲ್ಲದೆ ಸತ್ತಾ ಎಲ್ಲೂ ಕಾಣುವದಿಲ್ಲವೆಂದು. ಆದುದರಿಂದ ಅತ್ಯಂತಾಭಾವವು, ಅಸತ್ಪ್ರತಿಯೋಗಿಕವೇ ಆಗಿರುತ್ತದೆ. ತತ್ವನಿರ್ಣಯದಲ್ಲಿಯೂ, ಈ ಪಟತಂತುವಿನಲ್ಲಿರುವ ಅತ್ಯಂತಾಭಾವ ಪ್ರತಿಯೋಗವೆಂದರೆ ಅತ್ಯಂತಾಭಾವವು ಅಪ್ರತಿಯೋಗಿಕವೇ ಆಗುತ್ತದೆ. ಆದ್ದರಿಂದ ಭಾದಿತವಾಗುತ್ತದೆ. ನ್ಯಾಯಾಮೃತದಲ್ಲೂ ಸಹ ಮೂರು ಕಾಲ ನಿಷೇಧ ಅಪ್ರತಿಯೋಗಿಸತ್ತಾ ಎನಿಸುತ್ತದೆ. ಪ್ರತಿಯೋಗಿಯೇ ಆದುದು ಅಧ್ಯಸ್ತವಾದ್ದರಿಂದ ಅಪ್ರಾಮಾಣಿಕವೇ.

**ಸುಧಾಚಂದ್ರಿಕಾದಾವಪಿ ಸರ್ವತ್ರ ತ್ರೈಕಾಲಿಕ ನಿಷೇಧ ಪ್ರತಿಯೋಗಿತ್ವಂ ಮಿಥ್ಯಾತ್ವಂ ಇತ್ಯಂಗೀಕಾರೇ ಅತ್ಯಂತಾಸತ್ವಾಪಾದನಮುಕ್ತಂ ।**

ತ್ರೈಕಾಲಿಕ ನಿಷೇಧ ಪ್ರತಿಯೋಗಿತ್ವವೇ ಮಿಥ್ಯಾ ಎಂದರೆ ಸುತರಾಂ ಅತ್ಯಂತ ಅಸತ್ವವೇ ಬರುತ್ತದೆ ಎಂದು ಸುಧಾದಲ್ಲಿಯೂ, ಚಂದ್ರಿಕಾದಲ್ಲಿಯೂ ಹೇಳಿರುತ್ತದೆ.

**ತರ್ಕ ಕಾಂಡವೇಪಿ । ಗಗನಾದೇರತ್ಯಂತಾಭಾವ ಪ್ರತಿಯೋಗಿತ್ವರೂಪಾ ವೃತ್ತಿತ್ವಾಂಗೀಕಾರೇ ಅತ್ಯಂತಾಸತ್ವಾಪತ್ತಿರಿತಿ ದೂಷಣಮುಕ್ತಂ । ನನ್ವತ್ಯಂತಾ ಭಾವಸ್ಯ ಅಪ್ರಾಮಾಣಿಕ ಪ್ರತಿಯೋಗಿಕತ್ವೇ ನಿರ್ದೋಷತ್ವಂ ಪರಮಾತ್ಮ ಲಕ್ಷಣಂ ನಸ್ಯಾತ್ । ಅಪ್ರಾಮಾಣಿಕ ದೋಷಾತ್ಯಂತಭಾವಸ್ಯ ಜೀವೇಪಿ ಸತ್ವಾತ್ । ಜೀವಗತ ದೋಷಾಣಾಂಚ ಸತ್ವೇನ ಅತ್ಯಂತಾಭಾವಾ ಪ್ರತಿಯೋಗಿತ್ವಾದಿತಿ ಚೇನ್ನ । ಜೀವೇ ಪ್ರಾಮಾಣಿಕ ದೋಷವತ್ಯ ಪ್ರಾಮಾಣಿಕ ದೋಷಾತ್ಯಂತಾಭಾವಸ್ಯ ಅಭಾವಾತ್ । ಅತ್ಯಂತಾಭಾವಸ್ಯ ಪ್ರತಿಯೋಗಿ ಪ್ರಧಾನೇನೈವ ವಿರೋಧಾಂಗೀಕಾರಾತ್ । ಪ್ರತಿಯೋಗಿ ಸದೃಶಂ ತಥ್ಯವಸ್ತು ಪ್ರಧಾನಮಿತ್ಯುಚ್ಯತೇ । ತಥಾ ಚ ಜೀವೇ ಅಪ್ರಮಾಣಿಕ ದೋಷಾತ್ಯಂತಾಭಾವ ವಿರೋಧಿನೋ ದೋಷಸ್ಯ ಸತ್ವಾನ್ನದೋಷಾತ್ಯಂತಾಭಾವಃ । ಪರಮಾತ್ಮನಿತು ದೋಷಾಭಾವೇನ ವಿರೋಧ್ಯಭಾವಾನ್ನಿರ್ದೋಷತ್ವಸಿದ್ಧಿಃ ।**

ತರ್ಕಕಾಂಡವದಲ್ಲಿ ಗಗನಾದಿಗಳಿಗೆ ಅತ್ಯಂತಾಭಾವ ಪ್ರತಿಯೋಗಿತ್ವರೂಪ ವೃತ್ತಿತ್ವವನ್ನೂ ಒಪ್ಪದರೆ ಗಗನಾದಿಗಳಿಗೆ ಅತ್ಯಂತಾಸತ್ವ ಬರಲಿ ಎಂಬ ದೂಷಣವು ಹೇಳಿತು, ಅತ್ಯಂತಾಭಾವಕ್ಕೆ ಪ್ರಮಾಣ ಪ್ರತಿಯೋಗಿಕತ್ವ ಹೇಳಿದರೆ ನಿರ್ದೋಷತ್ವವು ಪರಮಾತ್ಮನ ಲಕ್ಷಣವಾಗದೇ ಹೋಗಲಿ, ಅಪ್ರಮಾಣಿಕ ದೋಷವು, ಜೀವನಲ್ಲೂ ಇರುವುದರಿಂದ ಜೀವನಲ್ಲಿ ದೋಷಗಳು ಪ್ರಾಮಾಣಿಕವಾಗಿರುವುದರಿಂದ ಅತ್ಯಂತಾಭಾವ ಪ್ರತಿಯೋಗಿತ್ವವೇ ಆಗಿರುವುದರಿಂದ ಹೀಗನ್ನಬಾರದು. ಜೀವನಲ್ಲಿ ಪ್ರಾಮಾಣಿಕ ದೋಷಗಳಿರುವುದರಿಂದ ಅಪ್ರಮಾಣಿಕ ದೋಷಾತ್ಯಂತಾಭಾವ ಬರುವುದಿಲ್ಲಾ ಏಕೆಂದರೆ ಅಭಾವಕ್ಕೆ ಪ್ರತಿಯೋಗಿಯಿಂದ ಹೀಗೆ ವಿರೋಧವೂ ಹಾಗೆ. ಪ್ರತಿಯೋಗಿ ಪ್ರಧಾನದಿಂದಲೂ ವಿರೋಧ ನಿಯಮವಾದ್ದರಿಂದ ಪ್ರಧಾನರೂಪವಾದ ಪ್ರಮಾಣಿಕ ದೋಷಗಳಿರುವುದರಿಂದ ಅಪ್ರಮಾಣಿಕ ದೋಷಾತ್ಯಂತಾ ಭಾವವು ಬರುವುದಿಲ್ಲ. ಪ್ರಧಾನವೆಂದರೆ ಸದೃಶವಾದ ಯಥಾರ್ಥ ವಸ್ತುವು. ಒಟ್ಟಿನಲ್ಲಿ ಜೀವನಲ್ಲಿ ಪ್ರಧಾನವಾದ ಪ್ರಮಾಣಿಕ ದೋಷಗಳಿರುವುದರಿಂದ ದೋಷಾತ್ಯಂತಾಭಾವರೂಪ ಪರಮಾತ್ಮ ಲಕ್ಷಣಕ್ಕೆ ಅತಿವ್ಯಾಪ್ತಿ ಬರುವುದಿಲ್ಲಾ, ಪರಮಾತ್ಮನಲ್ಲಿ ವಿರೋಧರೂಪ ಪ್ರಮಾಣಿಕ ದೋಷಗಳಿಲ್ಲವಾದ್ದರಿಂದ ದೋಷಾತ್ಯಂತಾಭಾವ ಲಕ್ಷಣವು ಸಮನ್ವಿತವಾಗುತ್ತದೆ.

**ಯದ್ವಾ ದೋಷಭಿನ್ನತ್ವಂ ನಿರ್ದೋಷತ್ವಂ । ತಚ್ಚ ಜೀವಾದೌ ನಾಸ್ತೀತಿ ನಾತಿವ್ಯಾಪ್ತಿಃ । ಕೇಚಿತ್ತು । ಸ್ವಸಂಸರ್ಗಿದೋಷಾತ್ಯಂತಾಭಾವತ್ವಂ ನಿರ್ದೋಷತ್ವಂ । ಪರಮಾತ್ಮ ನಿಸ್ವಸಂಸರ್ಗಿದೋಷಸ್ಯ ಅಪ್ರಮಾಣಿಕತ್ವಾತ್ತದಭಾವಃ । ಜೀವೇತು ಸ್ವಸಂಸರ್ಗಿ ದೋಷಸ್ಯ ಪ್ರಮಾಣಕತ್ವಾನ್ನತದ**

ಗಳಿಗೂ ನಿರವಧಿಕತೆ, ನಿರತಿಶಯತೆ ಎಂದರ್ಥವು. ಅಂದರೆ ಒಂದೊಂದು ಗುಣಗಳಿಗೂ
ಮತ್ತೊಂದು ಹೆಚ್ಚಾದ ಅತಿಶಯವಾದ ಗುಣಗಳು ಬೇರೊಂದಿಲ್ಲವೆಂದರ್ಥವು.
ಲಕ್ಷ್ಮ್ಯಾದಿಗಳಲ್ಲಿರುವ ಜ್ಞಾನಾನಂದಾದಿ ಗುಣಗಳಕ್ಕಿಂತಲೂ ಪರಮಾತ್ಮನಲ್ಲಿರುವ
ಜ್ಞಾನಾನಂದಾದಿ ಗುಣಗಳು ಅನಂತಗುಣಿತಗಳಾಗಿ ಒಂದೊಂದು ಗುಣವೂ ಅನಂತ
ಗಳಾಗಿ ಸಜಾತೀಯ ಅನಂತ(ಸಂಖ್ಯಾರಹಿತ)ಗಳಾಗಿರುತ್ತವೆ. ಹಾಗೆಯೇ ವಿಜಾತೀಯ
ಗಳಾದ ಜ್ಞಾನ, ಆನಂದ, ಬಲ, ಶಕ್ತ್ಯಾದಿ ಗುಣಗಳೂ ಅನಂತಗಳಾಗಿರುತ್ತವೆ. ಈ
ವಿಷಯವನ್ನೇ ಷಷ್ಠಸ್ಕಂದ ಭಾಗವತದಲ್ಲಿಯೂ ಮತ್ತು ನಿರ್ಣಯದಲ್ಲಿಯೂ
ಹೇಳಿರುತ್ತಾರೆ.

ವ್ಯೈಯ್ಯನಂತಗುಣೇನಂತೇ ಗುಣತೋನಂತವಿಗ್ರಹೇ । ಷಷ
ತಾತ್ಪರ್ಯೇಪಿ । ಗುಣತೋನಂತೇ । ಪ್ರತ್ಯೇಕಶೋಗುಣಾನಾಂತು ನಿಸ್ಸೀ
ಮತ್ವಮುದೀರ್ಯತೇ । ಯದಾನಂತ್ಯಂತು ಗುಣತಸ್ತೇಚಾನಂತಾಹಿ
ಸಂಖ್ಯಯಾ । ಅತೋನಂತಗುಣೋವಿಷ್ಣುಃಗುಣತೋನಂತ ಏವ ಚ ಇತಿ ।
ಭಾಷ್ಯಾದಾವಪಿ । ಗುಣಾಶ್ರುತಾಃ ಸುವಿರುದ್ಧಾಶ್ಚ ದೇವೇ ಸಂತ್ಯಶ್ರುತಾ
ಅಪೀತ್ಯನೇನ ವಿಜಾತೀಯಾನಂತ್ಯಮಪಿ । ಪರಮಾತ್ಮಜ್ಞಾನಸ್ಯ ಲಕ್ಷ್ಮ್ಯಾದಿ
ಜ್ಞಾನಾಪೇಕ್ಷಯಾ ಅಪರಿಮಿತತ್ವಂ ಚೋತ್ಕ್ರಾಂತಿಪಾದೀಯ ಅನು-
ವ್ಯಾಖ್ಯಾನೇ ಪ್ರತಿಪಾದಿತಂ । ಬಹುಲಾ ಚ ಅತಿವಿಶದಾಸ್ಪಷ್ಟಾಚೈವ ಶ್ರಿಯೋ
ಮತಿಃ । ಮಹಾಶುದ್ಧ ಚಿತಿತ್ವೇನ ತತೋಪ್ಯತಿ ಮಹಾಚಿತಿಃ । ಅಶೇಷೋರು
ವಿಶೇಷಾಣಾಮತಿಸ್ಪಷ್ಟತಯಾದೃಶಿಃ । ನಿತ್ಯಮೇಕಪ್ರಕಾರಾಚ ನಾರಾಯಣ
ಮತಿಃಪರ । ಸೂರ್ಯಪ್ರಭಾವದಖಿಲಂ ಭಾಸಯಂತೀನಿರಂತರಾ ।
ನಿರ್ಲೇಪವೀತ ದೋಷಾಚ ನಿತ್ಯಮೇವಾವಿಕಾರಿಣೀ । ವಿಶೇಷಾಂಸ್ತದ್ಗತಾಂ
ಸ್ತ್ಯಕ್ತ್ವಾಪ್ರಾಯಸ್ತಲ್ಲಕ್ಷಣಾಶ್ರಿಯಃ ।

ಒಂದು ಪ್ರಸಂಗದಲ್ಲಿ ಶ್ರೀಹರಿಯೇ ಅನಂತಗುಣಪೂರ್ಣನಾದ ಅನಂತ
ಅವತಾರಗಳುಳ್ಳ ನನ್ನಲ್ಲಿ ಎಂದಿರುತ್ತಾನೆ. ಹಾಗೂ ಭಾಗವತಷಷ್ಠತಾತ್ಪರ್ಯದಲ್ಲಿ
ಗುಣಗಳಿಂದ ಅವತಾರಗಳಿಂದ ಅನಂತನು ನಾನೇ ಎಂದಿರುತ್ತಾನೆ. ಪ್ರತ್ಯೇಕವಾಗಿ
ಅನಂತ ಗುಣಗಳಿಗೂ ನಿಸ್ಸೀಮತೆಯು ಹೇಳಿರುತ್ತಾರೆ. ಇನ್ನು ಯಾವ ಹರಿಯ
ಅಸಂಖ್ಯಾತ ಗುಣಗಳಲ್ಲಿ ಒಂದೊಂದು ಗುಣಗಳಲ್ಲಿಯೂ ಪರಿಮಿತಿಯಿಲ್ಲ ಎಂದಿರು
ತ್ತಾರೆ. ಆದ್ದರಿಂದಲೇ ಅನಂತ ಗುಣಪರಿಪೂರ್ಣನಾದ ವಿಷ್ಣುವು ಒಂದೊಂದು ಗುಣ
ಗಳಿಂದಲೂ ಅನಂತನೇ ಎಂದಿರುತ್ತದೆ. ಬ್ರಹ್ಮಸೂತ್ರಭಾಷ್ಯದಲ್ಲಿಯೂ ಪರಮಾತ್ಮನ
ಗುಣಗಳು ಲಕ್ಷ್ಮೀದೇವಿಯಿಂದಲೂ ಅಶ್ರುತವಾದ ಅನಂತಗುಣಗಳು ಪರಸ್ಪರ
ಅವಿರುದ್ಧವಾದವುಗಳು ಮತ್ತು ವಿರುದ್ಧವಾದವುಗಳು ಸಹ ಶ್ರುತಗಳಾಗಿರುತ್ತದೆ
ಎಂದಿರುತ್ತದೆ. ಇದರಿಂದ ಸಜಾತೀಯ ವಿಜಾತೀಯ ಅನಂತಗುಣಪೂರ್ಣನೆಂದು

ತಿಳಿಸಿರುತ್ತದೆ. ಉತ್ಕ್ರಾಂತಿಪಾದೀಯ ಅನುವ್ಯಾಖ್ಯಾನದಲ್ಲಿ ಲಕ್ಷ್ಮೀಜ್ಞಾನದ ಕ್ಕಿಂತಲೂ ವಿಷ್ಣುವಿನ ಜ್ಞಾನವು ಅಪರಿಮಿತವಾದವು, ಅತಿವಿಶದವಾದವು ಸ್ಪಷ್ಟವಾದವು. ಪರಮಾತ್ಮನ ಜ್ಞಾನದಿಂದ ಲಕ್ಷ್ಮೀಜ್ಞಾನವು ಮಿತವಾದವು ಅತಿಶುದ್ಧವಾದ ನಿರ್ದುಷ್ಟವಾದುದೇ ಆದರೂ ಲಕ್ಷ್ಮೀಜ್ಞಾನವು ಅದರಕ್ಕಿಂತಲೂ ಪರಮಾತ್ಮನ ಜ್ಞಾನ ಮತ್ತಷ್ಟು ಶ್ರೇಷ್ಠತಮವಾದುದು. ಅಶೇಷ ವಿಶೇಷಗಳಿಂದ ಸ್ಪಷ್ಟತಮಗಳಾದವು ನಿತ್ಯವಾದವುಗಳು ಏಕ ಪ್ರಕಾರವಾದವು. ಸೂರ್ಯನ ಪ್ರಕಾಶದಂತೆ ನಿರಂತರದಲ್ಲಿಯೂ ಅಖಿಲಪ್ರಕಾಶವಾದವುಗಳು. ಸುತರಾಂ ದೋಷ ಗಳಿಂದ ನಿರ್ಲಿಪ್ತವಾದವು ಪ್ರಾಯಃ ಭಗವಲ್ಲಕ್ಷಣಗಳನ್ನೇ ಆಶ್ರಯಿಸಿರುವುಗಳು.

ತಥೈವ ಸ್ಪಷ್ಟತಾಭಾವಾತ್ ತತ್ತಂತ್ರತ್ವಾಚ್ಚ ಕೇವಲಂ । ನತಾದೃಶೀ ಬ್ರಹ್ಮಣಸ್ತು ಪ್ರಾಯ ಏವಂ ಶ್ರಿಯೋಯಥಾ । ಮುಕ್ತಾನಾಂತು ತದನ್ಯೇಷಾಂ ಸಮುದ್ರ ತರಲೋಪಮಾ । ಅಗ್ನಿಜ್ವಾಲಾವದೇವಸ್ಯಾತ್ ಶ್ರುತಿಗಾನಾಂ ದೃಶೋಭವ ಇತಿ । ತಥಾ ಜ್ಞಾನಪಾದೀಯ ಅನು-ವ್ಯಾಖ್ಯಾನೇಪಿ । ಸುಸೂಕ್ಷ್ಮೈರಪ್ಯಶೇಷೈಶ್ಚ ವಿಶೇಷೈಸ್ಸಹ ಪಶ್ಯತಿ । ಸ್ವಾತ್ಮಾನಂ ಭಗವಾನ್ ವಿಷ್ಣುಃ ಸರ್ವರೂಪೋಽಪಿ ಸರ್ವದಾ । ಸರ್ವತ್ರ ಚಾನ್ಯದಪ್ಯೇವಂ ತೇನಾದೃಷ್ಟಂ ನಹಿ ಕ್ವಚಿತ್ । ಸರ್ವತ್ರ ಸರ್ವೇ ದೇವೇ ಶಂ ಪಶ್ಯತ್ಯೇವ ರಮಾಪಿತು । ನತು ಸರ್ವೈರ್ವಿಶೇಷೈಸ್ತಂ ಪಶ್ಯಂತ್ಯಪ್ಯ ನ್ಯತೋಧಿಕಮ್ । ಸ್ವಾತ್ಮಾನಮನ್ಯಚ್ಚಾಶೇಷಂ ಪಶ್ಯತ್ಯೇವಹಿ ಸರ್ವದೇತಿ। ಏವಮಾನಂದಾದೀನಾಂ ಅಪ್ಯಮಿತತ್ವಂ ತದುಕ್ತಂ ನಿರ್ಣಯೇ । ಕ್ಷೀರಾಬ್ಧೌ ನಾಗಭೋಗೇಶಯಿತ ಮನುಪಮಾನಂದಸಂದೋಹ ದೇಹಂ। ಊಚುಃಪರಂ ಪುರುಷಮೇಕಮನಂತಶಕ್ತಿಂ ಸೂಕ್ತೇನ ತೇಬ್ಜಜಮುಖಾ ಅಪಿ ಪೌರುಷೇಣ ಇತಿ ।

ಲಕ್ಷ್ಮೀಜ್ಞಾನವು ಪರಮಾತ್ಮನಧೀನವಾದ್ದರಿಂದಲೇ ಅಷ್ಟು ಸ್ಪಷ್ಟತೆಯಿರುವು ದಿಲ್ಲ. ಚತುರ್ಮುಖ ಬ್ರಹ್ಮನಿಗಾದರೂ ಲಕ್ಷ್ಮಿಯಷ್ಟು ಸ್ಪಷ್ಟತೆಯಿರುವುದಿಲ್ಲ. ಬ್ರಹ್ಮಭಿನ್ನರಾದ ಮುಕ್ತ ಜೀವಗಳಾದರೂ ಸಮುದ್ರದ ಅಲೆಗಳಂತೆ ಭಗವದ್ಜ್ಞಾನ ಉನ್ನಾಹಾನುನ್ನಾಹಗಳನ್ನು ಹೊಂದಿರುತ್ತದೆ. ಅಮುಕ್ತಮುಕ್ತಿಯೋಗ್ಯ ಸುಸಾರಿಗಳ ಜ್ಞಾನವಾದರೂ ಅಗ್ನಿಜ್ವಾಲೆಯಂತೆಯಿರುತ್ತದೆ ಈ ವಿಷಯವನ್ನೇ ಜ್ಞಾನಪಾದೀಯ ಅನುವ್ಯಾಖ್ಯಾನದಲ್ಲಿ ಜ್ಞಾನಿಗಳು ಅತಿ ಸೂಕ್ಷ್ಮಗಳಾದ ಅಶೇಷವಿಶೇಷಗಳಿಂದ ಪರಮಾತ್ಮನನ್ನು ತಿಳಿಯುತ್ತಾರೆ. ಪರಮಾತ್ಮನಾದರೋ ತನ್ನ ಸರ್ವರೂಪಗಳಿಂದಲೂ ಸರ್ವಕಾಲಗಳಿಂದಲೂ ಸರ್ವದೇಶಗಳಿಂದಲೂ ತಿಳಿಯದಿರುವುದೇಯಿಲ್ಲವೆಂದಿರುತ್ತಾನೆ. ಲಕ್ಷ್ಮೀದೇವಿಯಾದರೋ ಸಾಮಾನ್ಯಾಕಾರವಾಗಿ ಪರಮಾತ್ಮನನ್ನು ಸರ್ವದೇಶಕಾಲ ಗಳಿಂದ ನೋಡುತ್ತಿರುವಳೇ ಆಗಿರುತ್ತಾಳೆ. ಬ್ರಹ್ಮಾದಿ ದೇವತೆಗಳಿಕ್ಕಿಂತಲೂ

ವಿಶೇಷಗಳಿಂದ ಅಧಿಕವಾಗಿ ಕಾಣುತ್ತಿರುತ್ತಾಳೆ. ಹಾಗೂ ತನ್ನನ್ನು ಬ್ರಹ್ಮಾದಿದೇವತೆಗಳನ್ನು ಸರ್ವದಾ ಅಶೇಷ ವಿಶೇಷಗಳಿಂದ ಕಾಣುತ್ತಿರುತ್ತಾಳೆ. ಹೀಗೆ ಜ್ಞಾನದಂತೆ ಆನಂದಾದಿಗಳು ಅಮಿತತ್ವವೇ ಆಗಿರುತ್ತದೆ. ಈ ವಿಷಯವನ್ನು ನಿರ್ಣಯದಲ್ಲಿ ಹೇಳಿರುತ್ತಾರೆ. ಕ್ಷೀರ ಸಮುದ್ರದಲ್ಲಿ ಶೇಷಶಾಯಿಯಾದ ಅಸದೃಶ ಆನಂದಾದಿ ಸ್ವರೂಪನಾದ ಪರಮಾತ್ಮನನ್ನು, ಲಕ್ಷ್ಮೀದೇವಿಯೂ, ಚತುರ್ಮುಖ ಬ್ರಹ್ಮನೇ ಮೊದಲಾದವರು ಪೌರುಷೇಯಾದಿ ಸೂಕ್ತಗಳಿಂದ ಸ್ತುತಿಸುತ್ತಿರುತ್ತಾರೆ ಹೀಗೆಂದು,

ಲಕ್ಷಣಾಂತರಮಾಹ ।

ಪ.ಸಂ.—ಸೃಷ್ಟ್ಯಾದ್ಯಷ್ಟಕರ್ತಾ ।

ಜಗತ ಇತಿ ಶೇಷಃ । ತದುಕ್ತಂ ಭಾಷ್ಯೇ । ಉತ್ಪತ್ತಿಸ್ಥಿತಿ ಸಂಹಾರಾ ನಿಯತಿರ್ಜ್ಞಾನಮಾವೃತಿಃ । ಬಂಧಮೋಕ್ಷೌ ಚ ಪುರುಷಾದ್ಯಸ್ಮಾತ್ಸಹರಿರೇಕರಾಡಿತಿ । ತತ್ವಸಂಖ್ಯಾನೇಽಪಿ । ಸೃಷ್ಟಿಃ ಸ್ಥಿತಿಃ ಸಂಹೃತಿಶ್ಚ ನಿಯಮೋ ಅಜ್ಞಾನ ಬೋಧನೇ । ಬಂಧೋಮೋಕ್ಷಃ ಸುಖಂದುಃಖಮಾವೃತಿಃ ಜ್ಯೋತಿರೇವಚ ಇತಿ । ಅನುವ್ಯಾಖ್ಯಾನೇ । ಸೃಷ್ಟಿಃ ಸ್ಥಿತಿಶ್ಚ ಸಂಹಾರೋ ನಿಯತಿರ್ಜ್ಞಾನ ಮಾವೃತಿಃ । ಬಂಧಮೋಕ್ಷಾವಪಿಹ್ಯಾಸು ಶ್ರುತಿಷೂಕ್ತಾ ಹರೇಸ್ಸದೇತಿ ।

ಒಂದು ವಸ್ತುವಿಗೆ ಎಷ್ಟೆಷ್ಟು ನಿರ್ದುಷ್ಟ ಲಕ್ಷಣಗಳನ್ನು ಹೇಳಿದರೆ ಅಷ್ಟಷ್ಟು ಆವಸ್ತುವಿನ ಸ್ಪಷ್ಟತೆ ಸುಸ್ಪಷ್ಟವಾಗಿ ದೃಷ್ಟವಾಗಿರುತ್ತದೆ. ಆದುದರಿಂದ ಪರಮಾತ್ಮನ ಅನಂತ ಪರಿಪೂರ್ಣಗುಣಸ್ವರೂಪ ಒಂದು ಲಕ್ಷಣವನ್ನು ಹೇಳಿ, ಇದರ ದಾರ್ಢ್ಯತೆಗೆ ಕಾರಣವಾದ ಇನ್ನೊಂದು ಲಕ್ಷಣವನ್ನು ಹೇಳುತ್ತಾರೆ. ಜಗತ್ತಿನ ಸೃಷ್ಟ್ಯಾದಿ ಅಷ್ಟಕರ್ತೃತ್ವವೇ ಪರಮಾತ್ಮನ ಲಕ್ಷಣವು, ಇದನ್ನು ಭಾಷ್ಯದಲ್ಲಿ ಹೇಳಿರುತ್ತಾರೆ. ಜಗತ್ತಿಗೆ ಮೊದಲನೆಯದಾಗಿ ಹುಟ್ಟು(ಸೃಷ್ಟಿ), ಹುಟ್ಟಿದವುಗಳಿಗೆ ಬಾಳು (ಸ್ಥಿತಿ), ಅಂತ್ಯದಲ್ಲಿ ಸಂಹೃತಿ (ನಾಶ), ಸ್ಥಿತಿಲಯಗಳ ಮಧ್ಯದಲ್ಲಿ ನಿಯಮನ (ಆಜ್ಞೆ), ಅಜ್ಞಾನ, ಜ್ಞಾನ, ಬಂಧ, ಮೋಕ್ಷ ಇವುಗಳು ಹರಿಯಿಂದಲೇ ಎಂದು ಸ್ಕಾಂದೋಕ್ತವಾದುದನ್ನು ಹೇಳಿರುತ್ತಾರೆ. ತತ್ವಸಂಖ್ಯಾನದಲ್ಲಿಯೂ ಸೃಷ್ಟಿಯೇ ಮೊದಲಾದ ಎಂಟು ವಿಧವಾದ ವಿಕಾರಗಳು ಜಗತ್ತಿನಲ್ಲಿ ಜೀವರಾಶಿಗಳಿಗೆ ಹರಿಯಿಂದಲೇ ಎಂದು ಹೇಳಿರುತ್ತದೆ. ಅನುವ್ಯಾಖ್ಯಾನದಲ್ಲಿಯೂ ಜಗತ್ತಿಗೆ ಜೀವರಾಶಿಗಳಿಗೆ ಸೃಷ್ಟ್ಯಾದಿ ಅಷ್ಟಕಗಳು ಪ್ರವಾಹತಃ ಪರಮಾತ್ಮನಿಂದಲೇ ಆಗುವವುಗಳೆಂದು ಶ್ರುತಿಗಳಲ್ಲಿ ಸ್ಪಷ್ಟವಾಗಿರುತ್ತದೆ ಎಂದು ಹೇಳಿರುತ್ತಾರೆ.

ಅರ್ಥಾತ್ ಓಂ ಜನ್ಮಾದ್ಯಸ್ಯಯತಃ ಓಂ ಎಂಬ ಬ್ರಹ್ಮಮೀಮಾಂಸಾಸೂತ್ರದಲ್ಲಿಯ ಜನ್ಮಾಧಿಕರಣದಂತೆ, ಸೃಷ್ಟ್ಯಾದಿ ಅಷ್ಟಕರ್ತೃತ್ವವು ಬ್ರಹ್ಮನ (ಪರಮಾತ್ಮನ) ಲಕ್ಷಣವೆಂದಾಗಿದೆ. ಆದರೇ ಪರಮಾತ್ಮನು ದ್ರವ್ಯಪದಾರ್ಥವೆಂದು (ದ್ರವ್ಯರಾಶಿಯಲ್ಲಿ ಸೇರಿದವನೆಂದು) ಹೇಳಿಕು. ದ್ರವ್ಯಲಕ್ಷಣವು 'ಪರಿಣಾಮಿಕಾರತ್ವಂ' ಎಂದು ಹೇಳಿರುವುದರಿಂದ, ಪರಮಾತ್ಮನಿಗೆ ಜಗದ್ರೂಪವಾಗಿ ಪರಿಣಾಮ (ವಿಕಾರತ್ವ) ಹೇಳಿದಂತಾಗಿ ವಿಶಿಷ್ಟಾದ್ವೈತ ಮತವನ್ನು ಒಪ್ಪಿದಂತಾಗುವುದಲ್ಲವೆಂದರೇ, ಹಾಗಾಗುವುದಿಲ್ಲ. ಪರಮಾತ್ಮ ದ್ರವ್ಯನೇ ಆದರೂ ಪರಿಣಾಮಿರೂಪ ಉಪಾದಾನಕಾರಣವಲ್ಲ. ಅಭಿವ್ಯಕ್ತಿರೂಪವು ಸಾಧಾರಣಕಾರಣವೆಂದು ಒಪ್ಪಿರುವುದರಿಂದ, ಪರಮಾತ್ಮನಿಗೆ ಜಗತ್ತಿನ ಸೃಷ್ಟಿಕಾರಣತ್ವ ಲಕ್ಷಣ ಹೇಳಿದರೂ ವಿಕಾರಾದಿ ದೋಷ ಪ್ರಸಕ್ತಿ ಬರುವುದಿಲ್ಲ.

**ಸೃಷ್ಟ್ಯಾದಿ ಅಷ್ಟಕರ್ತೃತ್ವಂ ಸರ್ವಜ್ಞಾನಂವಿನಾ ಅನುಪಪನ್ನಂ ಇತ್ಯತ ಆಹ ।**

**ಪ.ಸಂ.**—ಸರ್ವಜ್ಞಃ ।

**ಯಃ ಸರ್ವಜ್ಞಃ ಸರ್ವವಿತ್ ಇತ್ಯಾದ್ಯಾಃ ಶ್ರುತಯೋಽತ್ರಮಾನಂ । ನನು ಪರಮಾತ್ಮನಃ ಸಕಲ ಗುಣಪರಿಪೂರ್ಣತ್ವಂ ಕಥಂ ಘಟತ ಇತ್ಯತ ಆಹ ।**

**ಪ.ಸಂ.**— ಪರಮಮುಖ್ಯಯಾವೃತ್ಯಾ ಸಕಲಶಬ್ದವಾಚ್ಯಃ ।

**ತಥಾ ಚ ಸರ್ವೇಷಾಂ ಶಬ್ದಾನಾಂ ಪರಮಾತ್ಮನಿ ಮಹಾಯೋಗವೃತ್ತ್ಯೈವ ಪ್ರವರ್ತಮಾನತ್ವೇನ ಸಕಲ ಪದ ಪ್ರವೃತ್ತಿನಿಮಿತ್ತತ್ವಾತ್ ಗುಣಪರಿಪೂರ್ಣಃ ಇತಿ ಭಾವಃ । ತದುಕ್ತಂ ಅಣುಭಾಷ್ಯೇ । ಅವಾಂತರಂ ಕಾರಣಂ ಚ ಪ್ರಕೃತಿಃ ಶೂನ್ಯಮೇವಚ ಇತ್ಯಾದ್ಯನ್ಯತ್ರ ನಿಯತೈರಪಿ ಮುಖ್ಯತಯೋದಿತಃ । ಶಬ್ದೈರತೋಽನಂತ ಗುಣೋಯಚ್ಛಬ್ದಾ ಯೋಗವೃತ್ತಯಃ ಇತಿ । ನನುನಪರಮಾತ್ಮನಃ ಅನಂತಗುಣಪರಿಪೂರ್ಣತ್ವಂ ಯುಕ್ತಂ । ತಸ್ಯ ಅಲ್ಪಗುಣ ಜೀವಾ ಅಭಿನ್ನತ್ವಾತ್ ಇತ್ಯತ ಆಹ ।**

**ಪ.ಸಂ.** —ಜಡಜೀವಪ್ರಕೃತಿಭ್ಯೋ ಅತ್ಯಂತ ವಿಲಕ್ಷಣಃ ॥

ಶ್ರೀಹರಿಗೆ ಸರ್ವ ಜಗತ್ತಿನ ಸೃಷ್ಟ್ಯಾದಿ ಅಷ್ಟಕರ್ತೃತ್ವ ಲಕ್ಷಣವು ಸರ್ವವಿಷಯಕ ಜ್ಞಾನವಿಲ್ಲದೇ ಸರ್ವಕರ್ತೃತ್ವವು ಯುಕ್ತವಾಗುವುದಿಲ್ಲ. ಹೀಗೆ ಶಂಕೆ ಬಂದರೆ ಹೇಳುತ್ತಾರೆ. ಅವನೇ ಸರ್ವಜ್ಞನು ನಿರವಧಿಕ ಜ್ಞಾನಪೂರ್ಣನು ಈ ವಿಷಯದಲ್ಲಿ ಯಾವನು ಸರ್ವಜ್ಞನೋ ಅವನೇ ಸರ್ವವನ್ನು ತಿಳಿದವನು ಇತ್ಯಾದಿ ಅರ್ಥವನ್ನು ತಿಳಿಸುವ ಶ್ರುತಿಗಳೇ ಪ್ರಮಾಣವು. ಪರಮಾತ್ಮನಿಗೆ ಸಕಲಗುಣ ಪರಿಪೂರ್ಣತ್ವವಾದರೂ ಹೇಗೆ ಯುಕ್ತವಾಗುತ್ತದೆ ಎಂದರೆ ಹೇಳುತ್ತಾರೆ. ಮಹಾಯೋಗರೂಢಿ

ವೃತ್ತಿಗಳಿಂದ ಸಕಲ ಶಬ್ದವಾಚ್ಯನು ಅವನೇ ಆಗಿರುವುದರಿಂದ, ಪ್ರಪಂಚದಲ್ಲಿ ಧ್ವನ್ಯಾತ್ಮಕ, ವರ್ಣಾತ್ಮಕ ಶಬ್ದಗಳಾಗಿ (ಅತ್ರಪ್ರಸಿದ್ಧ, ಅತ್ರೈವ ಪ್ರಸಿದ್ಧ, ಅನ್ಯತ್ರ ಪ್ರಸಿದ್ಧ, ಉಭಯತ್ರ ಪ್ರಸಿದ್ಧ) ಯೋಗ, ಮಹಾಯೋಗ ರೂಢಿ ಲಕ್ಷಣಾದಿ ಸಕಲ ಶಬ್ದಗಳ ಪ್ರವೃತ್ತಿಗೆ ನಿಮಿತ್ತನು ಅವನೇ ಆಗಿ ಇರುವುದರಿಂದ ಸಕಲಗುಣಪರಿ ಪೂರ್ಣನು ಅವನೇ ಆಗಿರುತ್ತಾನೆ. ಇದನ್ನೇ ಅಣುಭಾಷ್ಯದಲ್ಲಿ ಅವಾಂತರ ಕಾರಣ ಗಳಾದ ಪ್ರಕೃತಿ ಶೂನ್ಯಾದಿ ಶಬ್ದಗಳಿಂದಲೂ ಮುಖ್ಯತಯಾ ಅವನೇ ವಾಚ್ಯನು. ಆದ್ದರಿಂದಲೇ ಸಕಲಶಬ್ದವಾಚ್ಯನು. ಯೋಗ ರೂಢ್ಯಾದಿ ಸಕಲ ಶಬ್ದಗಳ ಪ್ರವೃತ್ತಿಗೆ ಅವನೇ ಮುಖ್ಯಕಾರಣನು ಎಂದು ಹೇಳಿರುತ್ತಾರೆ.

ಪರಮಾತ್ಮನಿಗೆ ಅನಂತಗುಣ ಪರಿಪೂರ್ಣತೆಯು (ಯೋಗ್ಯವು) ಯುಕ್ತವೂ ಆಗಿರುವುದಿಲ್ಲ. ಏಕೆಂದರೆ ಅಲ್ಪಗುಣಗಳುಳ್ಳ ಜೀವರುಗಳಿಂದ ಅಭಿನ್ನನಾಗಿ ಅವನೂ ಓರ್ವ ಚೇತನನೇ ಆಗಿರುವುದರಿಂದ, ಹೀಗೆ ಪೂರ್ವಪಕ್ಷ ಬಂದರೆ ಹೇಳುತ್ತಾರೆ. ಶ್ರೀ ಹರಿಯು ಜೀವರಾಶಿಗಳಿಂದಲೂ ಜಡಪದಾರ್ಥಗಳಿಂದಲೂ ಪ್ರಕೃತಿಯಿಂದಲೂ ಅತ್ಯಂತ ಭಿನ್ನನು. ಅವುಗಳಿಂದ ವಿಲಕ್ಷಣನೂ ಆಗಿರುತ್ತಾನೆ.

ಜಡಂ ಪ್ರಕೃತ್ಯಾದಿ । ಬ್ರಹ್ಮಾದಯೋ ಜೀವಾಃ । ಪ್ರಕೃತಿಃ ಮಹಾಲಕ್ಷ್ಮೀಃ । ತೇಭ್ಯೋ ಅತ್ಯಂತ ವಿಲಕ್ಷಣಃ ಪರಮಾತ್ಮಾ ಇತ್ಯರ್ಥಃ । ಅತ್ರ ಪ್ರಮಾಣಂತು । ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವಚ । ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ । ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮಾ ಇತ್ಯುದಾಹೃತಃ ಇತಿ ಗೀತಾ । ತಥಾ ಬ್ರಹ್ಮಾಶಿವಃ ಸುರೇಶಾದ್ಯಾಃ ಶರೀರ ಕ್ಷರಣಾತ್ಕ್ಷರಾಃ । ಲಕ್ಷ್ಮೀರಕ್ಷರದೇಹತ್ವಾದಕ್ಷರಾ-ತತ್ಪರೋ ಹರಿಃ ಇತಿ ತತ್ತ್ವನಿರ್ಣಯೋದಾಹೃತ ಶ್ರುತಿಶ್ಚ ತತ್ರ ಕ್ಷರಾಕ್ಷರ ಪದಾಭ್ಯಾಂ ಜಡಮುಪ್ಯುಪ ಲಕ್ಷ್ಯತೇ । ನನು ಪರಮಾತ್ಮನೋ ಜಗತ್ಕರ್ತೃತ್ವಂ ನ ಯುಕ್ತಂ । ಶರೀರಾಭಾವಾತ್ । ಶರೀರವತ್ವೇ ಅನಿತ್ಯತ್ವಾಪತ್ತಿಃ ಇತ್ಯತ ಆಹ ।

ಪ.ಸಂ.—ಜ್ಞಾನಾನಂದಾದ್ಯಾತ್ಮಕ ಕಲ್ಯಾಣವಿಗ್ರಹವಾನ್

ಜಡ ಪ್ರಕೃತ್ಯಾದಿ ಜಡ ಪದಾರ್ಥಗಳು, ಬ್ರಹ್ಮಾದಿ ಜೀವರಾಶಿಗಳು, ಪ್ರಕೃತಿ ಶಬ್ದವಾಚ್ಯಳಾದ ಲಕ್ಷ್ಮೀದೇವಿಯು—ಇವೆಲ್ಲವುಗಳಿಂದಲೂ ಅತ್ಯಂತ ವಿಲಕ್ಷಣನು (ಭಿನ್ನನು) ಪರಮಾತ್ಮನೆ ಆಗಿರುತ್ತಾನೆ. ಅಂತೆಯೇ ಸಕಲಗುಣಪರಿಪೂರ್ಣತ್ವವು ಯುಕ್ತವೇ ಆಗಿರುತ್ತದೆ. ಈ ವಿಷಯದಲ್ಲಿ ಅನಂತ ಶ್ರುತಿಗಳು ಇನ್ನೂ ಸುಸ್ಪಷ್ಟವಾಗಿ ಭಗವದ್ಗೀತೆಯಲ್ಲಿ ಜಗತ್ತು ಕ್ಷರವೆಂದೂ, ಅಕ್ಷರವೆಂದೂ ಎರಡುರೀತಿಯಾಗಿ ವಿಭಕ್ತ ಗಳಾಗಿದೆ, ಕ್ಷರವೆಂದರೆ ದೇಹನಾಶವುಳ್ಳ ಬ್ರಹ್ಮಾದಿ ಸಕಲ ಜೀವರಾಶಿಯು, ಅಕ್ಷರವೆಂದರೆ

ದೇಹ ನಾಶರಹಿತಳಾದ ನಿರ್ವಿಕಾರಳಾದ ಲಕ್ಷ್ಮೀದೇವಿಯು. ಈ ಎರಡರಿಂದಲೂ ಉತ್ತಮನಾಗಿ ಇವೆಲ್ಲವುಗಳಲ್ಲಿಯೂ ಅಂತಸ್ಥನಾಗಿ ಪ್ರೇರಕನಾಗಿರುವುದರಿಂದ ನನ್ನನ್ನು ಶ್ರುತಿಗಳು ಪರಮಾತ್ಮನೆನ್ನುತ್ತವೆ. ಹೀಗೆ ಕೃಷ್ಣನೇ ಹೇಳಿರುತ್ತಾನೆ ಮತ್ತು ಬ್ರಹ್ಮಾದಿ ದೇವತೆಗಳು ಶರೀರನಾಶವುಳ್ಳವರು ಕ್ಷರರು. ಲಕ್ಷ್ಮೀದೇವಿಯು ದೇಹನಾಶರಹಿತಳು. ಅಂತೆಯೇ ಅಕ್ಷರಳು. ಈರ್ವರಿಂದಲೂ ಶ್ರೇಷ್ಠನು ಪರಮಾತ್ಮನು. ಹೀಗೆ ಶ್ರುತಿ ಹೇಳುವುದರಿಂದ ಪರಮಾತ್ಮನು ಜಡ ಪದಾರ್ಥದಿಂದಲೂ ಸುತರಾಂ ಭಿನ್ನನೆಂದು ಸ್ಪಷ್ಟವಾಗಿ ಉಪಲಕ್ಷಿತವಾಗುತ್ತದೆ. ಹೀಗೆ ತತ್ವನಿರ್ಣಯದಲ್ಲಿ ಹೇಳಿರುತ್ತಾರೆ.

ಹೀಗಿದ್ದರೂ ಪರಮಾತ್ಮನಿಗೆ ಜಗತ್ತಿನ ಸೃಷ್ಟ್ಯಾದಿ ಅಷ್ಟಕರ್ತೃತ್ವ ಕೂಡುವುದಿಲ್ಲ ಏಕೆಂದರೆ ಶರೀರವಿಲ್ಲವಾದುದರಿಂದ. ಶರೀರವಿರುವುದಾದರೆ ಶ್ರೀಹರಿಗೆ ಅನಿತ್ಯತೆ ಬರಬೇಕಾಗುವುದು. ಹೀಗೆ ಶಂಕೆ ಬಂದರೆ ಹೇಳುತ್ತಾರೆ. ಶ್ರೀ ಪರಮಾತ್ಮನು ನಾಶರಹಿತವಾದ ಜ್ಞಾನ ಆನಂದಾದಿ ಸ್ವರೂಪ ದೇಹದವನು, ಪರಮ ಕಲ್ಯಾಣ ಗುಣಗಳ ಮೂರ್ತಿಯು ಆಗಿರುತ್ತಾನೆ.

ತಥಾ ಚ ಶರೀರವಾನೇವ ಭಗವಾನ್ । ನ ಚ ಅನಿತ್ಯತ್ವಾಪತ್ತಿಃ । ಜ್ಞಾನಾನಂದಾದ್ಯಾತ್ಮಕ ಶರೀರವತ್ವಾತ್ । ಪ್ರಾಕೃತ ದೇಹಸ್ಯೈವ ವಿನಾಶವತ್ವಾತ್ । ನನು ಜ್ಞಾನಾನಂದಾದಿ ದೇಹವತ್ವೇಽಪಿ ಅಂಧಪಂಗ್ವಾದಿತ್ವೇನ ಸರ್ವಕರ್ತೃತ್ವಾನುಪಪತ್ತಿಃ ಇತ್ಯತ ಆಹ । ಕಲ್ಯಾಣೇತಿ । ಸಕಲೇಂದ್ರಿಯ ಪಾಟವವಾನಿತ್ಯರ್ಥಃ । ಅತ್ರ ಪ್ರಮಾಣಂ ತು । ತಸ್ಮಾದಾನಂದ ಚಿದ್ದೇಹಂ ಚಿದಾನಂದ ಶಿರೋ ಮುಖಂ ಚಿದಾನಂದ ಭುಜಂ ಜ್ಞಾನ ಸುಖೈಕ ಪದ ಸಾಂಗುಲಿಂ। ಆಕೇಶಾದಾನಖಾಗ್ರೇಭ್ಯಃ ಪೂರ್ಣಚಿತ್ಸುಖ ಶಕ್ತಿಕಂ ಇತಿಬೃಹದ್ಭಾಷ್ಯಂ । ಸದ್ ಜ್ಞಾನಾನಂದ ಶೀರ್ಷೋಽಸೌ ಸದ್‌ಜ್ಞಾನಾನಂದ ಬಾಹುಕಃ । ಸದ್ ಜ್ಞಾನಾನಂದದೇಹಶ್ಚ ಸದ್ ಜ್ಞಾನಾನಂದ ಪಾದವಾನ್ ಇತಿ ಈಶಾವಾಸ್ಯ ಭಾಷ್ಯಂತಥಾ ತಾನಿ ರೂಪಾಣಿ ಸರ್ವಾಣಿ ಪೂರ್ಣಾನಂದ ಮಯಾನಿತು । ಚೇತೋ ಮುಖಾನಿ ಸರ್ವಾಣಿ ಪೂರ್ಣಜ್ಞಾನ ಸ್ವರೂಪತಃ ಮುಖ ಶಬ್ದಸ್ತು ಸರ್ವಸ್ಯ ದೇಹಸ್ಯಾಪ್ಯುಪ ಲಕ್ಷಕಃ ಇತಿ ಮಾಂಡೂಕ್ಯ ಭಾಷ್ಯಂ । ವಿಷ್ಣೋರ್ನಿರ್ಮುಕ್ತನಾಯೋಽಶ್ಚ ಲೋಮಾದ್ಯಂತು ಚಿದಾತ್ಮಕಂ ಇತಿ ಐತರೇಯಭಾಷ್ಯಂ । ಬ್ರಹ್ಮರುದ್ರಾದಿವದಸ್ಯ ನ ಪರಾಧೀನತ್ವಂ ಇತ್ಯಾಹ ।

ಪ.ಸಂ.—ಸರ್ವಸ್ವತಂತ್ರಃ ।

ಪರಮಾತ್ಮನು ಕರಚರಣಾದಿ ಶರೀರವುಳ್ಳವನೇ ಆದರೆ ಅನಿತ್ಯತ್ವ ಪ್ರಸಕ್ತಿಯು ಇರುವುದಿಲ್ಲ. ಅವನ ದೇಹವು ಅಪ್ರಾಕೃತ ಜ್ಞಾನ ಆನಂದಾದಿ ಸ್ವರೂಪವೇ ಆಗಿರುವುದರಿಂದ ಪ್ರಾಕೃತ ದೇಹಗಳಿಗೇನೇ ಅನಿತ್ಯತ್ವ ವಿನಾಶತ್ವಾದಿಗಳು. ಪರಮಾತ್ಮನದೇಹವು

ಜ್ಞಾನಾನಂದ ಸ್ವರೂಪವಾದರೂ ಇಂದ್ರಿಯಗಳ ಜೀರ್ಣತೆಯಿಂದ ಕುಂಟು, ಕುರುಡು ತನಗಳು ಬರುವುದರಿಂದ ಸರ್ವಕರ್ತೃತ್ವವು ಕೂಡುವುದಿಲ್ಲ ಅಲ್ಲವೇ ! ಎಂದರೆ ಹೇಳುತ್ತಾರೆ—ಕಲ್ಯಾಣಮೂರ್ತಿಯಾದವನು ಸಕಲೇಂದ್ರಿಯ ವಿಶಿಷ್ಟ ಪಾಟವ ಉಳ್ಳವನೇ ಎಂದರ್ಥವು. ಈ ವಿಷಯದಲ್ಲಿ ಆನಂದ ಚಿದ್ದೇಹವುಳ್ಳವನು. ಆನಂದ ಸನ್ಮುಖನು ಚಿದಾನಂದಭುಜನು. ಜ್ಞಾನಮುಖ್ಯೈಕ ಪಾದಾಂಗುಲಿಗಳುಳ್ಳವನು. ಅವನ ಕೇಶ ನಖಾಗ್ರಗಳೂ ಸಹ ಪೂರ್ಣ ಸುಖ ಶಕ್ತ್ಯಾತ್ಮಕಗಳು ಹೀಗೆ ಬೃಹದ್ಭಾಷ್ಯಪ್ರಮಾಣವು. ಮತ್ತು ಈಶಾವಾಸ್ಯೋಪನಿಷತ್ ಭಾಷ್ಯದಲ್ಲಿಯೂ ಅವನ ಸಕಲ ಜ್ಞಾನಕರ್ಮ ಇಂದ್ರಿಯಗಳು ಚಿದಾನಂದಾತ್ಮಕಗಳೇ ಎಂದು ಹೇಳಿದೆ. ಮಾಂಡೂಕ್ಯಭಾಷ್ಯದಲ್ಲಿಯೂ ಸಹ ಅವನ ರೂಪಗಳೂ ಚಿದಾನಂದಾತ್ಮಕಗಳೇ ಎಂದು ಹೇಳಿರುತ್ತದೆ. ಐತರೇಯ ಭಾಷ್ಯದಲ್ಲಿ ಪರಮಾತ್ಮನ ಹಾಗೂ ಮುಕ್ತ ವಾಯುವಿನ ಲೋಮಾದ್ಯಂತ ದೇಹವು ಜ್ಞಾನಾನಂದಾತ್ಮಕವೇ ಎಂದು ಹೇಳಿರುತ್ತದೆ ಮತ್ತು ಬ್ರಹ್ಮರುದ್ರಾದಿಗಳಂತೆ ಪರಮಾತ್ಮನು ಪರಾಧೀನನೂ ಆಗಿರುವುದಿಲ್ಲ. ಸರ್ವಸ್ವತಂತ್ರನೇ ಆಗಿರುತ್ತಾನೆ.

**ಅತ್ರಮಾನಂತು ಸ್ವಾತಂತ್ರ್ಯ ಪಾರತಂತ್ರ್ಯಾಭ್ಯಾಂ ಸಂಭೋಗೋನೇಶ ಜೀವಯೋಃ ಇತಿ ಭಾಷ್ಯಂ । ಸ್ವತಂತ್ರೋ ಭಗವಾನ್ವಿಷ್ಣುಃ ಇತಿ ತತ್ತ್ವ ಸಂಖ್ಯಾನಂ । ಪರಮಾತ್ಮಸಮೋ ಅಧಿಕೋವಾ ಅನ್ಯೋನಾಸ್ತೀತ್ಯಾಹ ।**

**ಪ.ಸಂ —ಏಕಏವ ॥**

ಸ್ವಾತಂತ್ರ್ಯ ಪಾರತಂತ್ರ್ಯಗಳಿಂದ ಈಶಜೀವರುಗಳಿಗೆ ಸಮಭೋಗವಿರುವುದಿಲ್ಲ. ಸ್ವಾತಂತ್ರ್ಯವಿರುವುದರಿಂದ ಅಸದೃಶ ಸುಖಾದಿಭೋಗಿಯು ಪರಮಾತ್ಮನು ಅಸ್ವತಂತ್ರರಾದುದರಿಂದ ಅಲ್ಪಭೋಗಿಗಳು ಜೀವರುಗಳು ಹೀಗೆ ಸೂತ್ರಭಾಷ್ಯದಲ್ಲಿ ತಿಳಿಸಿರುತ್ತಾರೆ ಮತ್ತು ತತ್ವಸಂಖ್ಯಾನದಲ್ಲಿ ಸ್ವರೂಪಾದಿ ಮೂರು ಬಗೆಯ ಸತ್ತೆಯಲ್ಲಿ ಪರರ ಅಪೇಕ್ಷೆ ಇಲ್ಲದೇ, ಷಡ್ಗುಣೈಶ್ವರ್ಯ ಸಂಪನ್ನನಾದವನೇ ವಿಷ್ಣುವು ಎಂದು ಹೇಳಿರುತ್ತಾರೆ.

ಪರಮಾತ್ಮನಿಗೆ ಸಮರಾಗಲೀ ಅಧಿಕರಾಗಲೀ ಇರಬಹುದಲ್ಲವೆ, ಎಂದರೆ ಏಕಏವ ಇವನೊಬ್ಬನೆ ಸಮಾಧಿಕರಹಿತನು.

**ಏಕಮೇವಾದ್ವಿತೀಯಂಬ್ರಹ್ಮ ಇತಿ ಶ್ರುತಿಸ್ತತ್ರಮಾನಂ । ತಥಾ ಕೇಶವಸ್ಯ ಸಮೋಽಸ್ತೀತಿ ಕೇಶವೋಽಸ್ಮ್ಯಹಮಿತ್ಯಪಿ । ತಸ್ಯಾಪಿ ಪರತಂತ್ರತ್ವ ವಿಜ್ಞಾನಂ ಚ ತದುತ್ತಮಃ । ಅಸ್ತೀತಿ ಯೋಮತಿಸ್ತಸ್ಯ ವಶಾದನ್ಯಸ್ಯ ಕಸ್ಯಚಿತ್ । ಅಸ್ತೀತಿ ಭಾವನೇತ್ಯಾದ್ಯಾ ಅವಜ್ಞಾ ಸಂಪ್ರಕೀರ್ತಿತಾ ಇತಿ । ನಹರೇಃ ಈಶ್ವರಃ ಕಶ್ಚಿತ್ ಕದಾಚಿತ್ ಕ್ವಾಪಿ ವಿದ್ಯತೇ । ನಾನಾಮಾನವಿರುದ್ಧಂ ಹಿ ಸ್ವಾತಂತ್ರ್ಯಂ ಜಗತಃ ಸದಾ । ಸ್ವತಂತ್ರೋಭಗವಾನ್ ವಿಷ್ಣುಃ ಏಕ ಏವ**

ನ ಸಂಶಯಃ ಇತಿ ಏಕಾದಶ ತಾತ್ಪರ್ಯೇ । ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ಇತಿ ಗೀತಾ । ತಾತ್ಪರ್ಯನಿರ್ಣಯೇಪಿ ।

"ಏಕಮೇವಾದ್ವಿತೀಯಂ ಬ್ರಹ್ಮ" ಇತ್ಯಾದಿ ಶ್ರುತಿಗಳು ಪರಮಾತ್ಮನ ಅಸದೃಶತ್ವದಲ್ಲಿ ಪ್ರಮಾಣಗಳಾಗಿರುತ್ತವೆ. ಕೇಶವನಿಗೆ ಸಮನಿರುತ್ತಾನೆ ಎಂದೂ, ಕೇಶವನೇ ನಾನೆಂದು, ಅವನಿಗೆ ಪರತಂತ್ರತೆ ಉಂಟೆಂದು, ಅವನಿಗೆ ವಶವಿಲ್ಲದ ವಸ್ತುಗಳುಂಟೆಂದು ಈ ಪ್ರಕಾರವಾಗಿ ಹರಿಯನ್ನು ತಿಳಿಯುವುದು ಶ್ರೀಹರಿಯಲ್ಲಿ ಮಾಡುವ ದ್ರೋಹವೆಂದೂ ಹೇಳಿರುತ್ತದೆ. ಶ್ರೀ ಹರಿಗೆ ಎಂದಿಗೂ ಹೇಗೂ ಶ್ರೇಷ್ಠ ವಸ್ತು ಇರುವುದಿಲ್ಲವೆಂದು, ಭಗವದತಿರಿಕ್ತ ಜಗತ್ತಿಗೆ ಸ್ವಾತಂತ್ರ್ಯವು ಅನೇಕ ಪ್ರಮಾಣ ವಿರುದ್ಧವೆಂದೂ, ಸರ್ವತಂತ್ರ ಸ್ವತಂತ್ರನು ವಿಷ್ಣು ಒಬ್ಬನೇ ಈ ವಿಷಯದಲ್ಲಿ ಸಂಶಯ ವಿಲ್ಲವೆಂದೂ ಭಾಗವತ ಏಕಾದಶ ಸ್ಕಂಧತಾತ್ಪರ್ಯದಲ್ಲಿ ಉಕ್ತವಾಗಿದೆ. ಮತ್ತು ಶ್ರೀಕೃಷ್ಣಪರಮಾತ್ಮನೇ ಹೇ ಅರ್ಜುನನೇ "ನನ್ನಕ್ಕಿಂತಲೂ ಶ್ರೇಷ್ಠವಾದುದು ಯಾವುದೂ ಇರುವುದಿಲ್ಲ"ವೆಂದು ಗೀತೆಯಲ್ಲಿ ಹೇಳಿರುತ್ತಾನೆ ಮತ್ತು ತಾತ್ಪರ್ಯ ನಿರ್ಣಯದಲ್ಲಿಯೂ.

ಸಾಮ್ಯಂ ನ ಚಾಸ್ಯ ಪರಮೇಣ ಚ ಕೇನ ಚಾಪ್ಯಂ ಮುಕ್ತೇನ ಚ ಕ್ವಚಿದತಸ್ತ್ವಭಿದಾ ಕುತೋಽಸ್ಯ । ಪ್ರಾಪ್ಯೇತ ಚೇತನಗಣೈಃ ಸತತಾಃ ಸ್ವತಂತ್ರ್ಯೈಃ ನಿತ್ಯಸ್ವತಂತ್ರವಪುಷಃ ಪರಮಾತ್ಪರಸ್ಯ । ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ । ಯಸ್ಮಿನ್ ಪರೇನ್ಯೇಪ್ಯಜಜೀವಕೋಶಾನಾಹಂ ಪರಾಯಃ ನಮರೀಚಿ ಮುಖ್ಯಾಃ । ಜಾನಂತಿ ಯದ್ಗುಣಗಣಾನ್ನ ರಮಾದಯೋಽಪಿ ನಿತ್ಯಃ ಸ್ವತಂತ್ರ ಉತಕೋಽಸ್ತಿ ತದನ್ಯ ಈಶಃ । ಬಲಮಿಂದ್ರಸ್ಯ ಗಿರಿಶೋ ಗಿರಿಶಸ್ಯ ಬಲಂ ಮರುತ್ । ಬಲಂ ತಸ್ಯ ಹರಿಃ ಸಾಕ್ಷಾನ್ನ ಹರೇಃ ಬಲಮನ್ಯತಃ ಇತ್ಯಾದಿ । ದ್ವಾದಶ ಸ್ತೋತ್ರೇಽಪಿ । ಹರಿರೇವ ಪರೋ ಹರಿರೇವ ಗುರುಃ ಹರಿರೇವ ಜಗತ್ಪಿತೃ ಮಾತೃಗತಿಃ । ನತತೋಸ್ತ್ಯ ಪರಂ ಜಗತೀಡ್ಯತಮಂ ಪರಮಾತ್ಪರತಃ ಪುರುಷೋತ್ತಮತಃ ಇತ್ಯಾದಿ । ನಿರಂಶ ಜೀವವದೇಕರೂಪೋ ನ ಕಿಂತು ಬಹುರೂಪ ಇತ್ಯಾಹ ।

ಪ.ಸಂ.—ನಾನಾರೂಪಃ ॥

ಪರಮಾತ್ಮನಿಂದ ಯಾವ ಮುಕ್ತರಿಂದಲೂ ಎಂದಿಗೂ ಸಾಮ್ಯವನ್ನು ಹೊಂದಲು ಶಕ್ಯವಿಲ್ಲ. ಆದ್ದರಿಂದ ಅನ್ಯರಿಗೆ ಸ್ವತಂತ್ರರೆಂಬ ಹೆಸರು ಹೇಗೆ ಒಪ್ಪುತ್ತದೆ. ನಿರಂತರ ದಲ್ಲಿಯೂ ಅಸ್ವತಂತ್ರರಾದ ಬ್ರಹ್ಮಾದಿ ಚೇತನರಿಂದ ಸುತರಾಂ ಸ್ವಾತಂತ್ರ್ಯವು ಪರಮಾತ್ಮನಿಗೇ ಎಂದಿರುತ್ತದೆ. ನಾರಾಯಣನಿಗೆ ಸಮವಾದ ವಸ್ತು ಹಿಂದೂ ಮುಂದೂ ಇಂದೂ ಎಂದೆಂದಿಗೂ ಇರುವುದಿಲ್ಲ. ಚತುರ್ಮುಖ ಬ್ರಹ್ಮಾದಿ ಜೀವ

ಸಮುದಾಯವು ಪರಾಯುಷ್ಯಗಳಲ್ಲ ಪರಮಾತ್ಮನ ಆಯುಷ್ಯವನ್ನು ನಾವೇ ತಿಳಿದಿರುವವನಲ್ಲ ಎಂದ ಮೇಲೆ ಮರೀಚಿಯೇ ಮೊದಲಾದ ಪ್ರಜಾಪತಿಗಳು ತಿಳಿದಿಲ್ಲವೆಂದು ಹೇಳುವುದೇನು ! ಪರಮಾತ್ಮನ ಗುಣರಾಶಿಯನ್ನು ಲಕ್ಷ್ಮೀ ದೇವಿಯೇ ಸಾಕಲ್ಯೇನ ತಿಳಿದವಳಾಗಿರುವುದಿಲ್ಲ, ಎಂದ ಮೇಲೆ ಸ್ವತಂತ್ರನಾದ ವಿಷ್ಣುವಿನಕ್ಕಿಂತಲೂ ಒಡೆಯನಾದವನು ಎಲ್ಲಿರುತ್ತಾನೆ, ಎಂದಿರುತ್ತಾನೆ. ಇಂದ್ರನಿಗೆ ಬಲದಾಯಕನು ಮಹೇಶನು, ಮಹೇಶನಿಗೆ ಬಲಪ್ರದನು ವಾಯು ದೇವರು, ವಾಯುವಿಗೆ ಬಲದಾಯಕನು ಸಾಕ್ಷಾತ್ತಾಗಿ ಶ್ರೀಹರಿಯೇ, ಶ್ರೀಹರಿಗೆ ಬಲದಾಯಕನು ಯಾರೂ ಇರುವುದಿಲ್ಲ. ಹೀಗೂ ಶ್ರುತಿಗಳು ಹೇಳುತ್ತವೆ. ಶ್ರೀಮದಾಚಾರ್ಯರು ಹರಿಯೇ ಪರನು, ಹರಿಯೇ ಗುರುವು. ಅವನೇ ಜಗತ್ತಿಗೆ ಮಾತಾಪಿತೃಸ್ಥಾನೀಯನು, ಗತಿದಾಯಕನೂ ಆಗಿರುತ್ತಾನೆ. ಅಂತಹ ಪರಮಾತ್ಮನಿಂದ ಭಿನ್ನನಾದ ಜಗತ್ತಿನಲ್ಲಿ ಸ್ತುತ್ಯನಾದ ಪುರುಷೋತ್ತಮನು ಯಾರೂ ಇರುವುದಿಲ್ಲ—ಹೀಗೆ ದ್ವಾದಶ ಸ್ತೋತ್ರದಲ್ಲಿ ಹೇಳಿರುತ್ತಾರೆ. ಇಂತಹ ಪರಮಾತ್ಮನು ನಿರಂಶ ಜೀವರಂತೆ ಏಕರೂಪನಲ್ಲ. ಬಹುರೂಪಗಳುಳ್ಳವನು ಎಂದು ತಿಳಿಸುತ್ತಾರೆ.

**ಅತ್ರಪ್ರಮಾಣಂತು ವಾಸುದೇವಃ ಸಂಕರ್ಷಣಃ ಪ್ರದ್ಯುಮ್ನಃ ಅನಿರುದ್ಧೋಽಹಂ ಮತ್ಸ್ಯಃಕೂರ್ಮೋ ವರಾಹೋನಾರಸಿಂಹೋವಾಮನೋ ರಾಮೋರಾಮಃ ಕೃಷ್ಣೋಬುದ್ಧಃ ಕಲ್ಕಿರಹಂ ಶತಧಾ ಸಹಸ್ರಧಾಹಂ ಅಮಿತೋಽಹಮನಂತೋಽಹಂನೈವೇತೇ ಜಾಯಂತೇ ನಮ್ರಿಯಂತೇ ನೈಷಾಮನುಜ್ಞಾನ ಬಂಧೋನಮುಕ್ತಿಃ ಸರ್ವಏತೇ ಪೂರ್ಣಾಃ ಅಜರಾಃ ಅಮೃತಾಃ ಪರಮಾಃ ಪರಾನಂದಾಃ ಇತಿ ಭಾಷ್ಯೋದಾಹೃತಶ್ರುತಿಃ ।**

ಪರಮಾತ್ಮನು ಅನೇಕರೂಪವುಳ್ಳವನು ಎಂಬ ವಿಷಯದಲ್ಲಿ ಪ್ರಮಾಣಗಳಾದರೂ, ನಾನೇವಾಸುದೇವನು, ಸಂಕರ್ಷಣನು ನಾನೇ, ಪ್ರದ್ಯುಮ್ನನುನಾನೇ, ಮತ್ಸ್ಯಕೂರ್ಮ ವರಾಹ ನಾರಸಿಂಹ ವಾಮನ ದಾಶರಥಿರಾಮ ಪರಶುರಾಮ ಕೃಷ್ಣ ಬುದ್ಧ ಈ ಹತ್ತು ಅವತಾರದವನು ನಾನೇ—ಹೀಗೆ ನೂರಾಗಿ, ಸಹಸ್ರಗಳಾಗಿ ನಾನೇ ಅನಂತಗಳಾದ ರೂಪಗಳುಳ್ಳವನು, ನನ್ನ ರೂಪಗಳಿಗೆ ಹುಟ್ಟು ಇರುವುದಿಲ್ಲ, ನಾಶವೂ ಇರುವುದಿಲ್ಲ, ಅಜ್ಞಾಪಕರೂ ಇರುವುದಿಲ್ಲ, ಬಂಧಮೋಕ್ಷಗಳೂ ಇರುವುದಿಲ್ಲ ಎಲ್ಲರೂಪಗಳೂ ಪೂರ್ಣವಾದವುಗಳೇ ಜರಾದಿರಹಿತವಾದವುಗಳು, ಅಮೃತಗಳಾದವುಗಳು, ಶ್ರೇಷ್ಠ ಆನಂದಮಯವಾದವುಗಳು ಹೀಗೆ ಅರ್ಥ ಹೇಳುವ ಭಾಷ್ಯೋದಾಹೃತ ಅನೇಕ ಶ್ರುತಿಗಳೇ ಆಗಿರುತ್ತದೆ.

**ಗೀತಾಭಾಷ್ಯಮಪಿ । ಅನಂತಪಾದಂ ತಮನಂತಬಾಹುಂ ಅನಂತವಕ್ತ್ರಂ ಪುರುರೂಪಮೇಕಂ । ಏಕತ್ರತ್ವನಂತಾನ್ಯಸ್ಯ ರೂಪಾಣೀತ್ಯನಂತರೂಪಃ । ಪರಾತ್ಪರಂ ಯನ್ಮಹತೋ ಮಹಾಂತಂ । ಯದೇಕಮವ್ಯಕ್ತ**

ಮನಂತ ರೂಪಂ। ಅಸಂಖ್ಯಾತಾ ಜ್ಞಾನಕಾಸ್ತಸ್ಯದೇಹಾಃ ಸರ್ವೇ ಪರಿಮಾಣ ವಿವರ್ಜಿತಾಶ್ಚ ಇತಿ। ಬೃಹದ್ಭಾಷ್ಯಮಪಿ। ಸ ಏವ ದಶಧಾ ಪ್ರೋಕ್ತೋ ವಿಷ್ಣುಃ ಮತ್ಸ್ಯಾದಿ ರೂಪಕಃ ಶತಂ ನಾರಾಯಣಾದ್ಯಾತ್ಮಾ ವಿಶ್ವಾದ್ಯಾತ್ಮಾ ಸಹಸ್ರಕಃ। ಪರಾದಿರೂಪೋ ಬಹುಧಾಸೋಽನಂತಾತ್ಮಾ ಅಜಿತಾದಿಕಃ ಇತಿ। ಗೀತಾಪಿ। ವೇತ್ತಾಸಿವೇದ್ಯಂ ಚ ಪರಂಚ ಧಾಮತ್ವಯಾ ತತಂ ವಿಶ್ವಮನಂತರೂಪಂ ಇತಿ। ಇಂದ್ರಾರ್ಜುನಾದಿವತ್ ಭಗವದ್ರೂಪಾಣಾಂ ನ ಕಿಂತು ವಿಶೇಷಃ ಇತ್ಯಾಹ।

ಪ.ಸಂ.—ಸರ್ವಾಣ್ಯಪಿ ರೂಪಾಣಿ ಪೂರ್ಣಾನಿ॥

ಗೀತಾಭಾಷ್ಯದಲ್ಲಿಯೂ ಮುಖ್ಯವಾಗಿ ಒಬ್ಬನೇ ಆದ ಪರಮಾತ್ಮನೇ ಅನಂತ ಪಾದನು, ಅನಂತ ಬಾಹುವು, ಅನಂತ ಮುಖನು, ಅನಂತರೂಪನು ಇವನು ಅನಂತ ರೂಪಗಳು ಏಕತ್ರದಲ್ಲಿಯೇ ಅನಂತಗಳಾಗಿರುತ್ತದೆ. ಉತ್ತಮ ಪದಾರ್ಥಗಳಿಂದಲೂ ಉತ್ತಮೋತ್ತಮನು, ಮಹತ್‌ಪದಾರ್ಥಗಳಿಂದ ಮಹತ್ತಮನು, ಅವನದೇ ಒಂದೇ ರೂಪವಾದರೂ ಅವ್ಯಕ್ತ ಅನಂತರೂಪಗಳಾಗಿರುತ್ತವೆ. ಅಸಂಖ್ಯಾತವಾದ ಆನಂದ ಜ್ಞಾನಾತ್ಮಕವೇ ಇವನ ದೇಹಗಳು. ಸರ್ವವೂ ಪರಿಮಾಣ(ಮಿತಿ)ಗಳಿಂದ ವರ್ಜಿತ ಗಳೇ ಆಗಿರುತ್ತವೆ. ಹೀಗೆ ಹೇಳಿರುತ್ತದೆ. ಬೃಹದ್ಭಾಷ್ಯದಲ್ಲಿಯೂ ಮತ್ಸ್ಯಾದಿ ದಶ ರೂಪನು, ನಾರಾಯಣಾದಿ ಶತರೂಪನು, ವಿಶ್ವಾದಿ ಸಹಸ್ರರೂಪನು, ಪರಾದಿ ಬಹು ರೂಪನು, ಅಜಾದಿ ಅನಂತಾತ್ಮಕನಾದವನು ಎಂದು ಹೇಳಿರುತ್ತದೆ. ಅರ್ಜುನನು ಶ್ರೀಕೃಷ್ಣನನ್ನು ಕುರಿತು ಪ್ರತ್ಯಕ್ಷವಾಗಿ ತಿಳಿಸುವವನು ನೀನೇ, ತಿಳಿಯುವವನು ನೀನೇ, ಶ್ರೇಷ್ಠನು ನೀನೇ, ಆಶ್ರಯನೂ ನೀನೇ, ಜಗತ್ತನ್ನು ವ್ಯಾಪಿಸಿರುವವನೂ ನೀನೇ ಅನಂತರೂಪನೂ ನೀನೇ— ಹೀಗೆ ಗೀತೆಯಲ್ಲಿ ಪ್ರಾರ್ಥಿಸಿರುತ್ತಾನೆ. ಈ ಅನಂತ ರೂಪಗಳು ಇಂದ್ರ ಅರ್ಜುನಾದಿಗಳಂತೆ ತಾರತಮ್ಯವುಳ್ಳವುಗಳಲ್ಲ. ಆದರೆ ವಿಶಿಷ್ಟ ವಿಶೇಷ(ವೈಶಿಷ್ಟ್ಯ)ವುಳ್ಳವುಗಳೇ ಆಗಿರುತ್ತವೆ ಎಂದು ತಿಳಿಸುತ್ತಾರೆ. ಪರಮಾತ್ಮನ ಅನಂತರೂಪಗಳು ಪರಿಪೂರ್ಣಗಳೇ ಆಗಿರುತ್ತವೆ.

ತದುಕ್ತಂ ಬೃಹದ್ಭಾಷ್ಯೇ। ವಿಷ್ಣೋಃ ಸರ್ವಗುಣೈಃ ಪೂರ್ತಿಃ ಅಪಿ ಮತ್ಸ್ಯಾದಿ ರೂಪಿಣಃ। ಅಜೇಯತ್ವಮಭೇದ್ಯತ್ವಂ ಅಚ್ಛೇದ್ಯತ್ವಂಚ ಸರ್ವಶಃ। ಸರ್ವಾವತಾರ ರೂಪಾಣಾಮಪಿ ಚಿತ್ ಸುಖರೂಪತಾ। ಅವ-ತಾರಾಹಿ ವಿಷ್ಣೋಶ್ಚ ಸರ್ವೇ ಪೂರ್ಣಾಃ ಪ್ರಕೀರ್ತಿತಾಃ। ಪೂರ್ಣೇಚ ತತ್ಪರಂರೂಪಂ ಪೂರ್ಣಾತ್ ಪೂರ್ಣಾಃ ಸಮುದ್ಗತಾಃ। ನ ದೇಶಕಾಲ ಸಾಮರ್ಥ್ಯೈಃ ಪಾರಾವರ್ಯಂ ಕಥಂಚನೇತಿ। ಪ್ರಥಮ ಸ್ಕಂಧ ತಾತ್ಪರ್ಯೇಽಪಿ ಸರ್ವೇ ಸರ್ವಗುಣೈಃ ಪೂರ್ಣಾಃ ಸರ್ವೇ ಭೇದವಿವರ್ಜಿತಾಃ। ಅನ್ಯೂನಾ

ನಧಿಕಾಶ್ಚೈವ ಗುಣೈಃ ಸರ್ವೈಶ್ಚ ಸರ್ವತಃ ಇತಿ । ಕಾಠಕಭಾಷ್ಯೇಽಪಿ ಮೂಲ ರೂಪಶ್ಚ ಯೋ ವಿಷ್ಣೋಃ ಪ್ರಾದುರ್ಭಾವಾದಿಕಶ್ಚ ಸಃ । ಗುಣತಃ ಸ್ವರೂಪ ತೋವಾಪಿವಿಶೇಷಂ ಯೋಽತ್ರಪಶ್ಯತಿ । ಅತ್ಯಲ್ಪಮಪಿಮತ್ವಾತ್ಸತಮೋಽಂ ಧಂ ಯಾತ್ಯಸಂಶಯಮಿತಿ । ಅನುವ್ಯಾಖ್ಯಾನೇಽಪಿ । ಅಂಶಿನೋ ಯತ್ತು ಸಾಮರ್ಥ್ಯಂಯತ್ಸ್ವರೂಪಂ ಯಥಾಸ್ಥಿತಿಃ । ಸ ಏವ ಚೇತ್ ಸ್ವರೂಪಾಂಶಃ ಪ್ರಾದುರ್ಭಾವಾಹರೇಃ ಯಥೇತಿ । ಅತೋ ಅನಂತಗುಣಾತ್ಮೈಕೋ ಭಗವಾ ನೇಕ ಏವತು । ಉಚ್ಯತೇ ಸರ್ವವೇದೈಶ್ಚ ತೇಚಾಖಿಲ ವಿಲಕ್ಷಣಾಃ । ಸರ್ವೇ ಸರ್ವಗುಣಾತ್ಮಾನಃ ಸರ್ವಕರ್ತಾರ ಏವಚ । ತಥಾಪಿ ಸವಿಶೇಷಾಶ್ಚ ವಿದ್ವ-ದ್ವ್ಯುತ್ಪತ್ತಿ ತೋಽಪಿಚೇತಿ । ಆನಂತ್ಯಂ ಚ ದೇಶತಃ ಕಾಲತೋ ಗುಣತಶ್ಚ ತದುಕ್ತಂ ತ್ರಿತೀಯ ಸ್ಕಂಧ ತಾತ್ಪರ್ಯೇ । ಕಾಲ ಕೋಟಿ ವಿಹೀನತ್ವಂ ಕಾಲಾನಂತ್ಯಂ ವಿದುರ್ಬುಧಾಃ । ದೇಶಕೋಟಿ ವಿಹೀನತ್ವಂ ದೇಶಾನಂತ್ಯಂ ತಥೈವಚ । ಗುಣಾನಾಮಪ್ರಮೇಯತ್ವಂ ವಸ್ತ್ವಾನಂತ್ಯಂ ವಿದೋವಿದುಃ । ಆನಂತ್ಯಂ ತ್ರಿವಿಧಂ ನಿತ್ಯಂ ಹರೇರ್ನಾನ್ಯಸ್ಯ ಕಸ್ಯಚಿತ್ । ತಸ್ಯ ಸರ್ವಸ್ಯ ರೂಪೇಷ್ವಪ್ಯಾನಂತ್ಯಂತು ತ್ರಿಲಕ್ಷಣಂ । ತಥಾಪಿ ದೇಶತಃ ತಸ್ಯ ಪರಿಚ್ಛೇ ದೋಽಪಿ ವಿದ್ಯತೇ । ಗುಣತಃ ಕಾಲತಃಶ್ಚೈವ ಪರಿಚ್ಛೇದೋ ನಕುತ್ರಚಿದಿತಿ ।

ಬೃಹದ್ಭಾಷ್ಯದಲ್ಲಿ ಹೇಳಿರುತ್ತದೆ. ಪರಮಾತ್ಮನ ಸರ್ವಗುಣಗಳಿಂದ ಪೂರ್ಣತೆಯು ಮತ್ಸ್ಯಾದಿರೂಪಗಳಿಗೂ ಇರುತ್ತದೆ. ಯಾರಿಂದಲೂ ಜಯಿಸಲು ಅಶಕ್ಯ ಭೇದಿಸಲು ಅಶಕ್ಯತೆ, ಸರ್ವತೋಮುಖವಾಗಿ ಭೇದಿಸಲು ಅಶಕ್ಯತೆಯು ಸರ್ವಾವತಾರಗಳಿಗೂ ಇರುತ್ತದೆ. ಎಲ್ಲ ಅವತಾರ ರೂಪಗಳು ಜ್ಞಾನಾನಂದರೂಪಗಳೇ ಆಗಿರುವುದರಿಂದ. ವಿಷ್ಣುವಿನ ಅವತಾರಗಳೆಲ್ಲವೂ ಪೂರ್ಣಗಳಾದ ರೂಪಗಳು ಉಗಮಿಸುವುದರಿಂದ ದೇಶ ಕಾಲಮಾನ ಮೂಲಕವಾದ ಸಾಮರ್ಥ್ಯಗಳಿಂದ ಅನಂತ ರೂಪಗಳಲ್ಲಿ ಉತ್ಕೃಷ್ಟಾನುಕೃಷ್ಟತೆಯು (ನೀಚೋಚ್ಚತೆ) ಇರುವುದಿಲ್ಲ. ಮತ್ತು ಪ್ರಥಮಸ್ಕಂಧ ತಾತ್ಪರ್ಯದಲ್ಲಿಯೂ ಇದನ್ನೇ ಹೇಳಿರುತ್ತದೆ. ಸರ್ವರೂಪಗಳು ಪೂರ್ಣಗಳಾದ ಗುಣಗಳಿಂದ ಪೂರ್ಣಗಳಾದವುಗಳು. ಸ್ವಗತಭೇದರಹಿತವಾದವುಗಳು. ಸರ್ವಮುಖ ವಾಗಿಯೂ ನ್ಯೂನಾಧಿಕ್ಯತೆ ಇಲ್ಲವಾದವುಗಳು ಎಂದು. ಕಾಠಕಭಾಷ್ಯದಲ್ಲಿಯೂ ಹೇಳಿರುತ್ತದೆ. ಪರಮಾತ್ಮನ ಮೂಲರೂಪವು ಪ್ರಾದುರ್ಭಾವಾದಿ ರೂಪಗಳಿಂದ ಸಮವಾದವುಗಳು. ಈ ರೂಪಗಳಲ್ಲಿ ವ್ಯತ್ಯಾಸವನ್ನು ಯಾವನು ತಿಳಿಯು ತ್ತಾನೆಯೋ ಅವನು ಅಲ್ಪಜ್ಞನು ತಮೋಭಾಗಿಯು. ಈ ವಿಷಯದಲ್ಲಿ ಸಂಶಯವಿಲ್ಲ. ಹೀಗೆಂದು ಹೇಳಿರುತ್ತದೆ. ಅನುವ್ಯಾಖ್ಯಾನದಲ್ಲಿಯೂ ಶ್ರೀಹರಿಯ ಅಂಶಗಳಿಗೆ ಯಾವ ಸಾಮರ್ಥ್ಯವೋ ಅಷ್ಟೇ ಸಾಮರ್ಥ್ಯವು ಮತ್ಸ್ಯಾದಿ ಅಂಗಿಗಳಿಗೂ ಸ್ವರೂಪಾಂಶಗಳೇ ಅಂದ ಮೇಲೆ ಪ್ರಾದುರ್ಭಾವಗಳಿಂದ ಭೇದಗಳಾದರೂ ಹೇಗಿರುತ್ತದೆ, ಇರುವುದಿಲ್ಲ.

ಆದ್ದರಿಂದಲೇ ಅನಂತಗುಣಾತ್ಮಕನು ಪರಮಾತ್ಮನು. ಅಖಿಲ ವಿಲಕ್ಷಣನು, ಹೀಗೆ ಸರ್ವವೇದಗಳಿಂದ ಹೇಳಿಸಿಕೊಂಡಿರುತ್ತಾನೆ. ಸರ್ವಗುಣಾತ್ಮಕನಾದುದರಿಂದ ಸರ್ವ ಕರ್ತನೂ ಹೌದು, ಸವಿಶೇಷನೂ ಹೌದು. ಪರಮಾತ್ಮನಲ್ಲಿ ದೇಶ ಕಾಲ ಗುಣದಿಂದ ಆನಂತ್ಯವೆಂದರೇನು ಎಂದರೆ ತೃತೀಯಸ್ಕಂಧ ತಾತ್ಪರ್ಯದಲ್ಲಿ ಹೀಗೆ ಹೇಳಿರುತ್ತಾರೆ. ಕಾಲಕೋಟ್ಯಾದಿರಾಹಿತ್ಯವೇ ಕಾಲಾನಂತ್ಯವು, ದೇಶಕೋಟಿರಾಹಿತ್ಯವೇ ದೇಶಾನಂತ್ಯತೆಯು. ಗುಣಗಳಿಗೆ ಅಪ್ರಮೇಯತ್ವವೇ ಗುಣಾನಂತ್ಯವು, ಹೀಗೆ ಆನಂತ್ಯವು ತ್ರಿವಿಧವಾಗಿ ಪರಮಾತ್ಮನಲ್ಲಿಯೇ ಹೊರತು ಮತ್ತ್ಯಾರಲ್ಲಿಯೂ ಹೀಗಿರುವುದಿಲ್ಲವೆಂದು ಜ್ಞಾನಿಗಳು ತಿಳಿಯುತ್ತಾರೆ. ಹೀಗೆ ಮೂರು ವಿಧವಾದ ಅಪರಿಚ್ಛಿನ್ನತೆ ಪರಮಾತ್ಮನಲ್ಲಿದ್ದರೂ ದೇಶತಃ ಕಿಂಚಿತ್ ಪರಿಚ್ಛೇದವು ಉಂಟೆಂದು ತಿಳಿಸುತ್ತಾರೆ. ಗುಣತಃ ಕಾಲತಃ ಸ್ವಲ್ಪವಾದರೂ ಪರಿಚ್ಛೇದವಿರುವುದಿಲ್ಲ. ಸುತರಾಂ ಅಪರಿಚ್ಛಿನ್ನನೇ ಆಗಿರುತ್ತಾನೆ.

**ನನು ರಾಮಾವತಾರೇ ಬಲಸ್ಯ ಕಥಂ ಪರಿಚ್ಛೇದಃ । ತಥಾಹಿ ನಿರ್ಣಯೇ। ಯಾವದ್ಬಲೇನಸ್ಯಹನತ್‌ಖರಾದಿಕಾನ್ ನತಾವತೈವ ನ್ಯಪತತ್ಸರಾಕ್ಷಸಃ । ಅಥ ಪ್ರಹಸ್ಯಾತ್ಮಬಲೈಕದೇಶಂ ಪ್ರದರ್ಶಯನ್ಬಾಣವರಾನ್ಮುಮೋಚೇತಿ । ಅತ್ರ ಖರದೂಷಣಾದಿ ವಧೇ ಪ್ರಯುಕ್ತಸ್ಯ ಬಲಸ್ಯ ಕುಂಭಕರ್ಣವಧ ಸಾಮರ್ಥ್ಯಾಭಾವಃ ಪ್ರತೀಯತೇ । ಅತೋ ಬಲಸ್ಯ ಅಪೂರ್ಣತ್ವಮಿತಿ ಚೇನ್ನ । ಅಲ್ಪ ಬಲೇ ಅಲ್ಪಬಲಂ ಪ್ರಯೋಕ್ತವ್ಯಂ । ನತ್ವಧಿಕ ಬಲಂ । ಅವಿವೇಕಿತ್ವಾಪತ್ತೇಃ । ಅತಃ ಖರಾದಿ ಹನನಂ ಯಾವತ್ಬಲ ಪ್ರಯೋಗೇನ ಅಲಂ ತಾವತ್ಪೂರ್ವಂ ಪ್ರಯುಕ್ತಂ । ಕುಂಭಕರ್ಣ ಹನನೇ ತ್ವಧಿಕಂ ಪ್ರಯೋಕ್ತವ್ಯಂ ತಾವತಾ ಪೂರ್ವಪ್ರಯುಕ್ತ ಬಲಸ್ಯ ನಾಸಾಮರ್ಥ್ಯಂ । ತಥೈವೇಶ್ವರ ಸಂಕಲ್ಪತ್ವಾನ್ನದೋಷಃ ।ಪಟಾದಿಭಿಃ ಪಟಾದ್ಯವಯವ ಗುಣ ಕ್ರಿಯಾಣಾಂ ಯಥಾ ಭೇದೋ ನ ತಥಾ ಭಗವದವಯವಾದೀನಾಂ ಭಗವತಿ ಇತ್ಯಾಹ ।**

ಷ.ಸಂ.—ಸ್ವರೂಪಗುಣಾವಯವ ಕ್ರಿಯಾದಿಭಿಃ ಅತ್ಯಂತಾಭಿನ್ನಃ ॥

ಆದರೆ ರಾಮಾವತಾರದಲ್ಲಿ ಬಲದ ಪರಿಚ್ಛೇದವು(ನ್ಯೂನತೆಯು) ಕಂಡುಬಂದಿದೆಯಲ್ಲ, ಏಕೆಂದರೆ ನಿರ್ಣಯದಲ್ಲಿ ಶ್ರೀರಾಮಚಂದ್ರನು ಖರಾದಿ ರಾಕ್ಷಸರನ್ನು ಎಷ್ಟು ಬಲದಿಂದ ವಧಿಸಿದನೋ ಅಷ್ಟೇ ಸಾಮರ್ಥ್ಯದಿಂದ ಕುಂಭಕರ್ಣಾದಿ ರಾಕ್ಷಸರು ಹತರಾಗಲಿಲ್ಲ. ರಾಮಚಂದ್ರನು ನಕ್ಕು ಪುನಃ ಸ್ವಲ್ಪಬಲವನ್ನು ತೋರಿಸಿ ಬಾಣಗಳನ್ನು ಬಿಟ್ಟನು ಎಂದು ಹೇಳಿದೆ. ಖರದೂಷಣಾದಿಗಳಲ್ಲಿ ಬಿಟ್ಟ ಸಾಮರ್ಥ್ಯವು ಕುಂಭಕರ್ಣನ ವಧೆಯಲ್ಲಿ ಸಾಕಾಗಲಿಲ್ಲ ಎಂದು ಹೇಳಿದ ಮೇಲೆ ರಾಮನ ಬಲಕ್ಕೆ ಅಪೂರ್ಣತೆಯು ಬರಲಿಲ್ಲವೇ ಎಂದರೆ, ಇಲ್ಲ ಅಲ್ಪರಲ್ಲಿ ಅಲ್ಪಬಲವೇ, ಅಧಿಕರಲ್ಲಿ

ಅಧಿಕಬಲವೇ ಎಂಬ ವಿವೇಕವನ್ನು ತೋರಲು ಖರಾದಿಗಳ ವಧಾಕ್ಕೆ ಎಷ್ಟು ಸಾಮಾರ್ಥ್ಯವೋ, ಕುಂಭಕರ್ಣಾದಿಗಳ ವಧಾಕ್ಕೆ ಎಷ್ಟಧಿಕ ಸಾಮರ್ಥ್ಯವು ಎಂದು ತೋರಲು ಹೊರತು ಪರಮಾತ್ಮನಿಗೆ ಅಸಾಮರ್ಥ್ಯಾದಿಗಳಿರುವುದಿಲ್ಲ. ಹಾಗೆಯೇ ಹರಿಯು ಸಂಕಲ್ಪವಾದುದರಿಂದ ಯಾವದೋಷವೂ ಬರುವುದಿಲ್ಲ.

ಬಟ್ಟೆಗಳಿಂದ ಅದರ ಅವಯುವವಾದ ಎಳೆಗಳ ಕ್ರಿಯಗುಣಗಳಿಂದ ಹೇಗೆ ಭೇದವೋ ಹಾಗೇ ಭಗವಂತನ ಅವಯುವಾದಿಗಳಿಂದ ಆ ಕ್ರಿಯಾ ಗುಣಗಳಿಂದಲೂ ಭೇಧವಿರುವುದಿಲ್ಲವೆಂದು ತಿಳಿಸುತ್ತಾರೆ. ಅವನು ಸ್ವರೂಪವು ಜ್ಞಾನ ಗುಣ, ಕ್ರಿಯಾದಿಗಳಿಂದ ಅತ್ಯಂತ ಅಭಿನ್ನನೇ ಆಗಿರುತ್ತಾನೆ.

**ಪರಮಾತ್ಮನೋಮತ್ಸ್ಯಕೂರ್ಮಾದಿ ಸ್ವಾವತಾರೈಃ ಕರಚರಣಾದ್ಯವಯುವೈರ್ಜ್ಞಾನಾನಂದಾದಿ ಗುಣೈಃ ಜಗತ್ಸರ್ಜನಾದಿ ಕ್ರಿಯಾಚ್ಚಾತ್ಯಂತಾಭೇಧ ಇತ್ಯರ್ಥಃ । ಅತ್ರ ಪ್ರಮಾಣಂತು। ವಿಷ್ಣೋರೇವ ಸ್ವರೂಪಾಣಾಂ ತದ್ಗುಣಾನಾಂ ತಥೈವಚ । ತಸ್ಯೈಯ ಶಿರ ಆದೀನಾಂ ನೈವಭೇದೋಽಸ್ತಿ ಕಶ್ಚನ । ವಿಷ್ಣೋಃಕ್ರಿಯಾಶ್ಚ ಯಾಃ ಕಾಶ್ಚಿದಭೇಧಸ್ತೈರಪಿ ಧೃವಮಿತಿ ಬೃಹದ್ಭಾಷ್ಯಂ ಮತ್ಸ್ಯಕೂರ್ಮಾದಿರೂಪಾಣಾಂ ಗುಣಾನಾಂ ಕರ್ಮಣಾಮಪಿ । ತಥೈವಾವಯವಾನಾಂಚ ಭೇದಂ ಪಶ್ಯತಿ ಯಃ ಕ್ವಚಿತ್ । ಭೇಧಾಭೇದೌಚಯಃ ಪಶ್ಯೇತ್ಸಯಾತಿ ತಮಏವತು । ಪಶ್ಯೇದಭೇದಮೇವೈಷಾಂ ಬುಭೂಷುಃ ಪುರುಷಸ್ತತಃ । ಸರ್ವತಃ ಪಾಣಿ ಪಾದಾದಿರ್ಯತಃ ಪಾಣ್ಯಾದಿ ಶಕ್ತಿಮಾನ್। ಕೇಶವಾದಿಷ್ವಪಿ ಸರ್ವತ್ರ ಕೃಷ್ಣಕೇಶೋಹಿ ಯಾದವಃ । ಅಣೋರಣುತರೈಃ ಪಾಣಿಪಾದಾದಿ ಸಂಯುತೈಃ । ಸರ್ವತ್ರ ಸಂಸ್ಥಿತತ್ವಾದ್ವಾಸರ್ವತಃ ಪಾಣಿ ಪಾದಾವಾನಿತಿ ಗೀತಾತಾತ್ಪರ್ಯಂ । ಇತಿ ಪರಮಾತ್ಮ ಪ್ರಕರಣಂ ।**

ಪರಮಾತ್ಮನಿಗೆ ತನ್ನ ಮತ್ಸ್ಯಕೂರ್ಮಾದ್ಯವತಾರಗಳಿಂದ ಕರಚರಣಾದ್ಯವಯುವಗಳಿಂದಲೂ, ಜ್ಞಾನಾನಂದಾದಿ ಗುಣಗಳಿಂದಲೂ ಜಗತ್ಸೃಜ್ಜನಾದಿ ಕ್ರಿಯಾಗಳಿಂದಲೂ (ಜಗತ್‌ಸೃಷ್ಟಿ ಕ್ರಿಯಾಗಳಿಂದಲೂ) ಸುತರಾಂ ಅಭೇದಯಿರುತ್ತದೆ. ಈ ವಿಷಯದಲ್ಲಿ ಬೃಹದ್ಭಾಷ್ಯವು ಹೀಗೆ ಪ್ರಮಾಣವಾಗಿರುತ್ತವೆ. ವಿಷ್ಣುವಿಗೇ ತನ್ನ ರೂಪಗಳಿಂದ ಗುಣಗಳಿಂದಲೂ ಶಿರಾದಿ ಅವಯುವಗಳಿಂದಲೂ ಎಂದಿಗೂ ಹೇಗೂ ಭೇದಗಳಿರುವುದಿಲ್ಲ. ವಿಷ್ಣುವಿನ ಯಾವ ಯಾವ ಕ್ರಿಯೆಗಳೊ ಅವುಗಳೆಲ್ಲವೂ ಅಭಿನ್ನಗಳೇ ಎಂದು ಹೇಳುತ್ತದೆ. ಮತ್ತು ಪರಮಾತ್ಮನ ಮತ್ಸ್ಯಕೂರ್ಮಾದಿ ರೂಪಗಳಿಗೆ ಅವನ ಗುಣಗಳಿಗೆ ಕ್ರಿಯಾಗಳಿಗೆ ಅವಯುವಗಳಿಗೆ ಭೇದವನ್ನಾಗಲೀ ಭೇದಾಭೇದವನ್ನಾಗಲೀ ಯಾವೋನು ತಿಳಿಯುತ್ತಾನೆಯೋ ಅವನು ಘೋರ ನರಕವನ್ನೇ (ತಮಸ್ಸನ್ನೇ) ಹೊಂದುತ್ತಾನೆ. ಇದು ಸತ್ಯವು ಎಂದೆದೂ ಹರಿಯನ್ನು ಅರಿಯುವ ಮನುಷ್ಯನು

ಶ್ರೀಹರಿಯ ಸರ್ವತೋ ರೀತಿಯಾಗಿ ಪಾಣಿ ಪಾದಾದಿಗಳಲ್ಲಿ ಸಮಶಕ್ತಿಯನ್ನು, ಕೇಶವಾದಿ ರೂಪಗಳಲ್ಲಿ ಕೃಷ್ಣ ಕೇಶಾವೇಶವನ್ನು ತಿಳಿಯಬೇಕು. ಪಾಣಿಪಾದಾದಿಗಳಿಂದ ಯುಕ್ತವಾದ ಅವನ ರೂಪಗಳು ಅಣುಗಳಿಗೆ ಅಣುತರವಾದವುಗಳು, ಮಹತ್ ಪದಾರ್ಥಗಳಲ್ಲಿ ಮಹತ್ತರಗಳಾದವುಗಳು. ಸರ್ವತ್ರದಲ್ಲಿ ವ್ಯಾಪ್ತವಾದವುಗಳು. ಅಂತೆಯೇ ಸರ್ವತಃ ಪಾಣಿಪಾದವಾನ್ ಎನಿಸಿಕೊಂಡಿರುತ್ತಾನೆ. ಹೀಗೆ ಗೀತಾಭಾಷ್ಯದಲ್ಲಿ ಹೇಳಿರುತ್ತದೆ.

ಹೀಗೆ "ಪದಾರ್ಥ ಸಂಗ್ರಹ"ದಲ್ಲಿ ಹಾಗೂ "ಮಧ್ವಸಿದ್ಧಾಂತಸಾರ"ದಲ್ಲಿ ಪರಮಾತ್ಮ ಪ್ರಕರಣವು.

---

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂಜಗತ್ ತತ್ವತೋ ।
ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚ ಭಾವಂಗತಾಃ ॥
ಮುಕ್ತಿರ್ನೈಜ ಸುಖಾನುಭೂತಿರಮಲಾಭಕ್ತಿಶ್ಚ ತತ್ಸಾಧನಂ ।
ಹ್ಯಕ್ಷಾದಿ ತ್ರಿತಯಂ ಪ್ರಮಾಣಮಖಿಲಾಮ್ನಾಯೈಕ ವೇದ್ಯೋಹರಿಃ ॥

# ೧೪. ಲಕ್ಷ್ಮೀ ಪ್ರಕರಣ

ಪ.ಸಂ :— ಪರಮಾತ್ಮಭಿನ್ನಾ ತನ್ಮಾತ್ರಾಧೀನಾ ಲಕ್ಷ್ಮೀಃ ॥

ತಸ್ಯಾಃ ದ್ರವ್ಯತ್ವಂಚ ವೈಶೇಷಿಕಾಧಿಕರಣ ಸುಧಾಯಾಮುಕ್ತಂ । ಈಶ್ವರ ಇತಿ ಪರಮ ಮಹತ್ವಾಶ್ರಯ ದ್ರವ್ಯ ಉಪಲಕ್ಷಣಂ ಇತಿ । ಪರಮಾತ್ಮ ಭಿನ್ನತ್ವೇಸತಿ ಪರಮಾತ್ಮ ಮಾತ್ರಾಧೀನತ್ವಂ ಮಹಾಲಕ್ಷ್ಮ್ಯಾಃ ಲಕ್ಷಣಂ । ಪರಮಾತ್ಮನೋಽಪಿ ಪರಮಾತ್ಮಾಧೀನತ್ವಾತ್ ತತ್ರ ಅತಿವ್ಯಾಪ್ತಿ ವಾರಣಾಯ ಪರಮಾತ್ಮೇತಿ । ತಾವನ್ಮಾತ್ರಸ್ಯ ಬ್ರಹ್ಮಾದಾವತಿವ್ಯಾಪ್ತಿ ರಿತ್ಯತ ಉಕ್ತಂ ತನ್ಮಾತ್ರಾಧೀನತ್ವಮಿತಿ । ಬ್ರಹ್ಮಾದೇಃ ಲಕ್ಷ್ಮೀಪರಮಾತ್ಮೋಭಯಾಧೀನತ್ವೇನ ಪರಮಾತ್ಮ ಮಾತ್ರಾಧೀನತ್ವಾಭಾವಾನ್ನಾತಿವ್ಯಾಪ್ತಿಃ । ನನು ಬ್ರಹ್ಮಾದೇರಸ್ವತಂತ್ರತ್ವಾತ್ ಪರಮಾತ್ಮಾಧೀನತ್ವಮಸ್ತು । ನ ತು ಲಕ್ಷ್ಮ್ಯಧೀನತ್ವಮಪಿ । ಮಾನಾಭಾವಾದಿತಿಚೇನ್ನ । ಲಕ್ಷ್ಮ್ಯಧೀನ ಪದವತ್ವಾತ್ ಪುತ್ರತ್ವೇನ ತದವರತ್ವಾತ್ ಪ್ರಳಯೇ ತಲ್ಲಯತ್ವಾಚ್ಚ ತದಧೀನತ್ವಾತ್ । ಲಕ್ಷ್ಮ್ಯಧೀನ ಪದವತ್ವೇ ಪ್ರಮಾಣಂತು । ಯಂ ಕಾಮಯೇ ತಂತಮುಗ್ರಂ ಕೃಣೋಮಿ ತಂಬ್ರಹ್ಮಾಣಂ ತಂ ಋಷಿಂ ತಂಸುಮೇಧಾಮಿತಿ ಶ್ರುತಿಃ । ದ್ವಾದಶಸ್ತೋತ್ರಂಚ । ವಿಶ್ವಸ್ಥಿತಿಪ್ರಳಯಸರ್ಗ ಮಹಾವಿಭೂತಿವೃತ್ತಿಪ್ರಕಾಶ ನಿಯಮಾವೃತಿ ಬಂಧಮೋಕ್ಷಾಃ । ಯಸ್ಯಾ ಅಪಾಂಗಲವಮಾತ್ರತ ಊರ್ಜಿತಾಸಾ ಶ್ರೀರ್ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ । ಬ್ರಹ್ಮೇಶ ಶಕ್ರ ರವಿ ಧರ್ಮಶಶಾಂಕಪೂರ್ವ ಗೀರ್ವಾಣ ಸಂತತಿರಿಯಂ ಯದಪಾಂಗಲೇಶಮ್ । ಆಶ್ರಿತ್ಯವಿಶ್ವವಿಜಯಂ ವಿಶೃಜತ್ಯಚಿಂತ್ಯಾ ಶ್ರೀರ್ಯತ್ ಕಟಾಕ್ಷ ಬಲವತ್ಯಜಿತಂ ನಮಾಮಿ । ಶೇಷಾಹಿವೈರಿ ಶಿವಶಕ್ರ ಮನುಪ್ರಧಾನ ಚಿತ್ರೋರು ಕರ್ಮರಚನಂ ಯದಪಾಂಗಲೇಶಮ್ ಆಶ್ರಿತ್ಯ ವಿಶ್ವಮಖಿಲಂ ವಿದಧಾತಿ ಧಾತಾ ಶ್ರೀರ್ಯತ್ ಕಟಾಕ್ಷ ಬಲವತ್ಯಜಿತಂ ನಮಾಮೀತಿ ।

ಪರಮಾತ್ಮನಿಂದ ಭಿನ್ನಳು, ಪರಮಾತ್ಮ ಮಾತ್ರಾಧೀನಳು ಆಗಿರುವಿಕೆಯೇ ಲಕ್ಷ್ಮೀದೇವಿಯ ಲಕ್ಷಣವು ಲಕ್ಷ್ಮೀದೇವಿಗೆ ದ್ರವ್ಯ ಪದಾರ್ಥಾಂತರಭಾವವು ವೈಶೇಷಿಕಾಧಿಕರಣಸುಧೆಯಲ್ಲಿ ಸ್ಪಷ್ಟ ಉಕ್ತವಾಗಿದೆ. ಈಶ್ವರನಂತೆ ಪರಮ ಮಹತ್ವಾಶ್ರಯಳಾಗಿರುವುದು ದ್ರವ್ಯತೆಗೆ ಉಪಲಕ್ಷಣವು ಹೀಗೆಂದು ಉಕ್ತವಾಗಿದೆ. ಪರಮಾತ್ಮ

ಅಧೀನತ್ವಂ ಇಷ್ಟೆ ಅಂದರೆ ಪರಮಾತ್ಮನು ತನಗೆ ತಾನೇ ಅಧೀನನಾಗಿರುವುದರಿಂದ ಈ ಲಕ್ಷಣವು ಅತಿವ್ಯಾಪ್ತವಾಗುವುದರಿಂದ ಪರಮಾತ್ಮ ಭಿನ್ನತ್ವಂ ಎಂದಿರುತ್ತಾರೆ. ಇಷ್ಟೇ ಹೇಳಿದರೆ ಬ್ರಹ್ಮಾದಿಗಳಲ್ಲಿ ಅತಿವ್ಯಾಪ್ತಿಯು ಆದುದರಿಂದ ಪರಮಾತ್ಮ ಭಿನ್ನಳು ಪರಮಾತ್ಮ ಮಾತ್ರಾಧೀನಳು ಆಗಿರುವಿಕೆಯೇ ಲಕ್ಷ್ಮೀದೇವಿಯ ಲಕ್ಷಣವು. ಬ್ರಹ್ಮಾದಿಗಳು ಅಸ್ವತಂತ್ರರಾಗಿ ಲಕ್ಷ್ಮೀದೇವಿಗೂ ಅಧೀನರಾಗಿರುವುದರಿಂದ ಪರಮಾತ್ಮ ಮಾತ್ರಾಧೀನತೆಯು ಅವರಿಗಿಲ್ಲವಾದ್ದರಿಂದ ಲಕ್ಷಣವು ಅತಿವ್ಯಾಪ್ತವಾಗುವುದಿಲ್ಲ. ಬ್ರಹ್ಮಾದಿ ದೇವತೆಗಳು ಲಕ್ಷ್ಮೀದೇವಿಯ ಅಧೀನರು ಏಕೆಂದರೆ ಸತ್ಯಲೋಕ ಕೈಲಾಸಾದಿ ಸ್ಥಾನ ಪ್ರಾಪ್ತಿಯು ಬ್ರಹ್ಮಾದಿಗಳಿಗೆ ಲಕ್ಷ್ಮೀ ಅಧೀನವೇ ಆಗಿರುವುದರಿಂದ. ಅಂಭರಣಿ ಸೂಕ್ತದಲ್ಲಿ ಲಕ್ಷ್ಮೀದೇವಿಯೇ ಸ್ಪಷ್ಟವಾಗಿ ಯಾರನ್ನು ನಾನು ಬಯಸಿದರೆ ಅವನನ್ನು ಸತ್ಯಲೋಕಾಧಿಪತಿಯಾದ ಬ್ರಹ್ಮನನ್ನು ಮಾಡಬಲ್ಲೆನು, ರುದ್ರಾದಿಗಳಿಗೆ ಕೈಲಾಸಾಧಿಪತ್ಯ ಅವನಿಂದ ಅವಾಂತರ ಪ್ರಳಯದಲ್ಲಿ ಸರ್ವ ನಾಶ ಮಾಡಿಸಲು ಪಿನಾಕಾದಿ ಧನಸ್ಸನ್ನು ಕೊಡುವವಳು ನಾನು. ಹೀಗೆ ಹೇಳಿಕೊಂಡಿರುವುದೇ ಪ್ರಮಾಣವಾಗಿದೆ ಶ್ರೀಮದಾಚಾರ್ಯರು ಸಪ್ತಮದ್ವಾದಶಸ್ತೋತ್ರದಲ್ಲಿ ಲಕ್ಷ್ಮೀದೇವಿಯು ವಿಶ್ವದ ಸ್ಥಿತಿ, ಪ್ರಳಯ ಸೃಷ್ಟ್ಯಾದಿ ಅಷ್ಟಕಗಳನ್ನು ಯಾವನ ಕಡಗಣ್ಣೋಟದಿಂದಲೇ ಮಾಡುವವಳಾಗಿದ್ದಾಳೆಯೋ ಎಂತಲೂ, ಬ್ರಹ್ಮ ಶಂಭು, ಇಂದ್ರ, ಸೂರ್ಯ ಧರ್ಮರಾಜ, ಚಂದ್ರನೇ ಮೊದಲಾದ ದೇವತೆಗಳ ಸಮುದಾಯವು ಯಾರ ಕಡಗಣ್ಣೋಟವನ್ನಾಶ್ರಯಿಸಿಯೇ ತಮ್ಮ ತಮ್ಮ ಯೋಗ್ಯವಾದ ವಿಶ್ವವಿಜಯಾದಿಗಳನ್ನು ಹೊಂದುತ್ತಾರೆಯೋ, ಅಂತಹ ಲಕ್ಷ್ಮೀದೇವಿಯು ಯಾವನ ಕಡಗಣ್ಣೋಟದಿಂದಲೇ ಇಂಥ ಮಹಿಮೆಯನ್ನು ಪಡೆಯುವವಳಾಗಿದ್ದಾಳೆಯೋ ಶೇಷ, ಗರುಡ, ಶಿವ, ಇಂದ್ರ, ಮನುವೇ ಪ್ರಧಾನವಾಗಿವುಳ್ಳವರುಗಳು ಯಾವಳ ಕಡಗಣ್ಣೋಟದಿಂದಲೇ ಚಿತ್ರ ವಿಚಿತ್ರ ಕರ್ಮಗಳನ್ನು ಮಾಡುವರಾಗುತ್ತಾರೆಯೋ, ಚತುರ್ಮುಖ ಬ್ರಹ್ಮನು ಅಖಂಡ ಬ್ರಹ್ಮಾಂಡವನ್ನು ಯಾವಳ ಅನುಗ್ರಹದಿಂದಲೇ ಸೃಷ್ಟಿಸುತ್ತಾನೆಯೋ ಅಂತಹ ಮಹಾತ್ಮ್ಯೆಯುಳ್ಳವಳು ಲಕ್ಷ್ಮೀದೇವಿಯೆಂದು ಹೇಳಿರುತ್ತಾರೆ. ಆದುದರಿಂದ ಬ್ರಹ್ಮಾದಿ ಸರ್ವದೇವತೆಗಳು ಲಕ್ಷ್ಮೀ ಅಧೀನರೇ ಆಗಿರುತ್ತಾರೆ.

ಬೃಹದ್ಭಾಷ್ಯಮಪಿ । ಹಿರಣ್ಯಗರ್ಭಾಯೇತೀತಾಯೇಭಾವ್ಯಾ ಯಷ್ಟ ವರ್ತತೇ ಸರ್ವೇ ವಿಷ್ಣುವಶಾ ನಿತ್ಯಂ ವಿಮುಕ್ತೇರಸ್ಯನಂತರಂ ತೇಭ್ಯಃ ಶ್ರೀಸು ವಿಮುಕ್ತೇಭ್ಯೋ ಗುಣೈಃ ಕೋಟಿ ಗುಣೋತ್ತರಾ । ವಿಷ್ಣೋಃ ಪ್ರಿಯತ್ವೇತದ್ಭಕ್ತೌತಜ್ಞಾನೇಚ ಶ್ರಿಯಸ್ತುತೇ। ಮುಕ್ತಾ ಅಪ್ಯವರಾ ನಿತ್ಯಂ ಸರ್ವೇ ಕೋಟಿಗುಣೇನಚೇತಿ ಲಕ್ಷ್ಮ್ಯಾವರತ್ವೇ ಮಾನಂ । ಬ್ರಹ್ಮಾದೀನಾಂ ಲಕ್ಷ್ಮ್ಯಧೀನತ್ವೇ ಪ್ರಮಾಣಂತು ತೃತೀಯ ಸ್ಕಂಧ ತಾತ್ಪರ್ಯೇ । ಯಮಃ ಕಾಲೋ ಮನುಷ್ಯಾಣಾಂ ತಸ್ಯ ಕಾಲಃ ಸುದರ್ಶನಃ ತಸ್ಯಾಪಿ

**ರುದ್ರಃ ತತ್ಕಾಲೋ ಬ್ರಹ್ಮಾ ದುರ್ಗಾಪಿ ತಸ್ಯಚ । ಸಾ ಬ್ರಹ್ಮ ಪ್ರಳಯೇ ದೇವೀ ವರ್ತತೇ ಚಕ್ರರೂಪಿಣೀ ಇತಿ । ಪ್ರಾಣಃ ತೇಜಸಿ ತೇಜಃ ಪರಸ್ಯಾಂ ದೇವತಾಯಾಂ ಇತಿ ಶ್ರುತಿಃ ॥**

ಬೃಹದ್ಭಾಷ್ಯದಲ್ಲಿಯೂ ಹಿಂದೆ ಆಗಿ ಹೋದ (ಮುಕ್ತರಾದ) ಚತುರ್ಮುಖ ಬ್ರಹ್ಮರುಗಳು ಮುಂದಾಗುವ ಬ್ರಹ್ಮರುಗಳು, ಎಲ್ಲ ಬ್ರಹ್ಮರುಗಳು ಪರಮಾತ್ಮನಿಗೆ ನಿತ್ಯದಲ್ಲೂ ವಶರೇ ಆಗಿರುತ್ತಾರೆ. ಮುಕ್ತ್ಯನಂತರವೂ ಭಗವದಧೀನರೇ ಆಗಿರುತ್ತಾರೆ. ಇಂತಹ ಬ್ರಹ್ಮರುಗಳಕ್ಕಿಂತ ಕೋಟಿ ಗುಣಾಧಿಕಳು ಲಕ್ಷ್ಮೀದೇವಿ. ಪರಮಾತ್ಮನ ಪ್ರೀತಿ ಪಾತ್ರತೆಯಲ್ಲಿ ಅವನ ಭಕ್ತಿಯಲ್ಲಿ ಅವನ ಜ್ಞಾನದಲ್ಲಿ ಲಕ್ಷ್ಮೀದೇವಿಯು ನಿರಂತರವಾಗಿ ಕೋಟಿಗುಣಗಳಿಂದ ಅಧಿಕಳು ಎಂದು ಹೇಳಿರುತ್ತದೆ. ಬ್ರಹ್ಮಾದಿಗಳೆಲ್ಲರೂ ಲಕ್ಷ್ಮೀ ದೇವಿಗೆ ಸುತರಾಂ ಅಧೀನರೇ ಆಗಿರುತ್ತಾರೆ. ಮತ್ತು ಪ್ರಳಯಕಾಲದಲ್ಲಿ ಬ್ರಹ್ಮ ದೇವರಿಗೆ ಲಕ್ಷ್ಮೀಯಲ್ಲಿಯೇ ಲಯವೆಂದು ತೃತೀಯ ಸ್ಕಂಧ ತಾತ್ಪರ್ಯದಲ್ಲಿಯೂ ಹೇಳಿರುತ್ತಾರೆ. ಇನ್ನೂ ಮನುಷ್ಯರುಗಳಿಗೆ ಯಮನು ಮಾರಕನು (ಮೃತ್ಯು ಪ್ರೇರಕನು) ಯಮನಿಗೆ ಸುದರ್ಶನನು ಕಾಲನು. ಸುದರ್ಶನನಿಗೆ ರುದ್ರನು ಕಾಲನು (ಮೃತ್ಯುಪ್ರೇರಕನು), ರುದ್ರದೇವರಿಗೆ ಚತುರ್ಮುಖ ಬ್ರಹ್ಮನು ಕಾಲನು. ಬ್ರಹ್ಮ ದೇವರಿಗೆ ದುರ್ಗಾರೂಪಳಾದ ಲಕ್ಷ್ಮೀಯು ಅಂತಹ ದುರ್ಗಾದೇವಿಯು ಪ್ರಳಯ ಕಾಲದಲ್ಲಿಯೂ ಚಕ್ರರೂಪಳಾಗಿ ಇದ್ದೇ ಇರುತ್ತಾಳೆ. ಪ್ರಾಣನು ತೇಜೋರೂಪಳಾದ ಲಕ್ಷ್ಮೀದೇವಿಯಲ್ಲಿ ಆ ತೇಜೋರೂಪಳಾದ ಲಕ್ಷ್ಮೀಯು ಪರಮಾತ್ಮನೊಂದಿಗೆ ಎಂದು ಶ್ರುತಿ ಹೇಳಿರುತ್ತದೆ.

**ಪ್ರಾಣಸ್ಯ ತೇಜಸಿ ಲಯೋ ಮಾರ್ಗಮಾತ್ರಮುದಾಹೃತಂ ಇತಿ ಭಾಷ್ಯೇ । ಬ್ರಹ್ಮಣೋ ಲಕ್ಷ್ಮೀ ಪುತ್ರತ್ವೇ ಮಾನಂತು । ನಾರಾಯಣಾಖ್ಯಃ ಪರಮಃ । ಶೇತೇ ಲಕ್ಷ್ಮ್ಯಾನ್ವಿತೋಲಯೇ । ಸ ಏವ ಪುರುಷಾಖ್ಯಂತು ದ್ವಿತೀಯಂ ರೂಪಮಾತ್ಮನಃ । ಕೃತ್ವಾ ರಮಾಯಾಂ ಪುರುಷ ನಾಮಾನಂ ಚ ಚತುರ್ಮುಖಂ ಇತಿ ಏಕಾದಶ ತಾತ್ಪರ್ಯಂ । ವ್ಯೂಢಶ್ಚತುರ್ಧಾ ಭಗವಾನ್ ಸ ಏಕೋ ಮಾಯಾಂ ಶ್ರಿಯಂ ಸೃಷ್ಟಿ ವಿಧಿತ್ಸಯಾರ ॥ ರೂಪೇಣ ಪೂರ್ವೇಣ ಸ ವಾಸುದೇವ ನಾಮ್ನಾ ವಿರಿಂಚಂ ಶುಷುವೇಽಥ ಸಾತ ಇತ್ಯಾದಿ ನಿರ್ಣಯೇ । ನನು ಬ್ರಹ್ಮಾದಿವಲ್ಲಕ್ಷ್ಮ್ಯಾಃ ಪರಮಾತ್ಮಾ ಧೀನತ್ವೇ ಸಂಸಾರಿತ್ವಾಪತ್ತಿಃ ಇತ್ಯಥ ಆಹ ।**

ಪ.ಸಂ.—ಪರಮಾತ್ಮವನ್ನಿತ್ಯಮುಕ್ತಾ ತದ್ಭಾರ್ಯಾನಾನಾರೂಪಾ ।

ಭಾಷ್ಯದಲ್ಲಿಯೂ ಪ್ರಾಣನಿಗೆ ಲಕ್ಷ್ಮೀದೇವಿಯಲ್ಲಿ ಲಯದ ಮಾರ್ಗವು ಹೇಳಿ ರುತ್ತದೆ ಮತ್ತು ಚತುರ್ಮುಖಬ್ರಹ್ಮದೇವರಿಗೆ ಲಕ್ಷ್ಮೀ ಪುತ್ರತ್ವವು ನಾರಾಯಣಾಖ್ಯ ಪರಮಾತ್ಮನು ಲಕ್ಷ್ಮೀಯುಕ್ತನಾಗಿಯೂ ಪ್ರಳಯ ಕಾಲದಲ್ಲಿ

ಶೇಷಪರ್ಯಂಕದಲ್ಲಿ ಪವಳಿಸಿದ್ದನು, ಅವನೇ ಪುರುಷಾಖ್ಯವಾದ ಮತ್ತೊಂದು ರೂಪವನ್ನು ತಾಳಿ ಲಕ್ಷ್ಮೀದೇವಿಯಲ್ಲಿ ಪುರುಷಾಖ್ಯನಾದ ಚತುರ್ಮುಖನನ್ನು ಉತ್ಪಾದಿಸಿದನು. ಹೀಗೆ ಏಕಾದಶ ತಾತ್ಪರ್ಯದಲ್ಲಿ ಹೇಳಿರುತ್ತದೆ.

ಶೇಷಶಾಯಿಯಾದ ನಾರಾಯಣನೇ ಸೃಷ್ಟಿಮಾಡಲು ಮನ ಮಾಡಿ ಅನಿರುದ್ಧ ಪ್ರದ್ಯುಮ್ನ, ಸಂಕರ್ಷಣ ವಾಸುದೇವಗಳೆಂಬ ನಾಲ್ಕು ರೂಪಗಳನ್ನು ತಾಳಿ, ವಾಸುದೇವ ರೂಪದಿಂದ ಮಾಯಾ ರೂಪಳಾದ ಲಕ್ಷ್ಮೀಯುಕ್ತನಾಗಿ ವಿರಿಂಚನೆಂಬ ಚತುರ್ಮುಖ ಬ್ರಹ್ಮನನ್ನು ಪಡೆದನು. ಹೀಗೆ ನಿರ್ಣಯದಲ್ಲಿ ಹೇಳಿರುತ್ತದೆ.

ಲಕ್ಷ್ಮೀದೇವಿಯು ಬ್ರಹ್ಮಾದಿಗಳಂತೆ ಪರಾಧೀನಳೇ ಆದ ಪಕ್ಷದಲ್ಲಿ ಅವಳಿಗೂ ಸಂಸಾರಿಕತ್ವ(ಜನನ, ಮರಣ ರೂಪ ಪ್ರವಾಹವು)ಬಂದಿತಲ್ಲವೇ ಎಂದರೆ ಬರುವುದಿಲ್ಲ. ಪರಮಾತ್ಮನಂತೆ ನಿತ್ಯ ಮುಕ್ತಳು. ನಿತ್ಯ ಅವ್ಯಕ್ತಭಾರ್ಯಳು, ನಾನಾ ರೂಪಗಳುಳ್ಳವಳೂ ಆಗಿರುತ್ತಾಳೆ.

**ನನು ಪರಮಾತ್ಮನಃ ನಿತ್ಯಮುಕ್ತತ್ವನ್ನಾಮ ಕಿಂ । ತತ್ರ ಪ್ರಮಾಣಂ ವಾ ಕಿಮಿತಿ ಚೇದುಚ್ಯತೇ । ಅವಿದ್ಯಾ ಚೈವ ವಿದ್ಯಾಚ ಗುಣಾ ಸತ್ವಾದಿಕಾ ಅಪಿ । ದೇಹೋತ್ಪತ್ತಿಃ ಸುಖಂ ದುಃಖಂ ಸರ್ವಮೇತತ್ ಮದಿಚ್ಛಯಾ । ಅತೋಽಹಂ ಬಂಧಮೋಕ್ಷಾಭ್ಯಾಂ ರಹಿತೋ ನಿತ್ಯ ಏವತು । ಮುಕ್ತಶಬ್ದೋದಿತೋ ಬಂಧ ರಾಹಿತ್ಯಾನ್ನವಿಮೋಕ್ಷತಃ । ಮುಕ್ತಶ್ಚತು ನಮೋ ಮೋಕ್ಷೋ ಬಂಧಾಭಾವಾತ್ ಕಥಂಚನ । ಮುಕ್ತ ಇತ್ಯಪಿ ನಾಮ್ನೈತತ್ ದೀಪ್ಯತೇ ಸಾ ದಿವಾಕರಃ । ನಿತ್ಯ ಮುಕ್ತತ್ವತೋ ವಿಷ್ಣುರ್ಮುಕ್ತನಾಮಾಸದೋದಿತಃ। ಅಬದ್ಧತ್ವಾದಮೋಕ್ಷೋಽಪಿ ದೀಪ್ಯತೇಽಸೌ ರವಿರ್ಯಥೇತಿ ಏಕಾದಶ ತಾತ್ಪರ್ಯಂ ।**

ಪರಮಾತ್ಮನು ನಿತ್ಯಮುಕ್ತನು ಎಂಬ ವಿಷಯದಲ್ಲಿ ಪ್ರಮಾಣವೇನು? ನಿತ್ಯಮುಕ್ತನೆಂದರೆ ಅರ್ಥವಾದರೂ ಏನು ಎಂದರೆ ಏಕಾದಶ ತಾತ್ಪರ್ಯದಲ್ಲಿ ಹೇಳಿರುತ್ತಾರೆ. ಅವಿದ್ಯೆ ಹಾಗೂ ವಿದ್ಯೆ ಸತ್ವಾದಿ ಗುಣತ್ರಯಗಳ ಸಂಪರ್ಕ ದೇಹದ ಉತ್ಪತ್ತಿ, ಸುಖ ದುಃಖ ಇವೆಲ್ಲವೂ ಪರಮಾತ್ಮನಿಗೆ ಇರುವುದಿಲ್ಲ. ಆದ್ದರಿಂದಲೇ ಪರಮಾತ್ಮನಿಗೆ ಬಂಧಮೋಕ್ಷಗಳಿಂದ ರಾಹಿತ್ಯವೇ ನಿತ್ಯಮುಕ್ತತೆಯು. ಮುಕ್ತ ಶಬ್ದಾರ್ಥವೇ ಬಂಧ ರಾಹಿತ್ಯವು ನಿತ್ಯಬಂಧರಹಿತನೇ ಆದ ಪರಮಾತ್ಮನ ಸ್ವರೂಪವೇ ನಿತ್ಯ ಮುಕ್ತತೆಯು ಅಂತೆಯೇ ಅವನ ಹೆಸರೂ 'ಮುಕ್ತ'ನೆಂದೇ ಸೂರ್ಯನಂತೆ ನಿತ್ಯ ಪ್ರಕಾಶಕತೆ ಅವನ ಮುಕ್ತತೆಯು. ಆದುದರಿಂದಲೇ ನಿತ್ಯ ಮುಕ್ತರಿಗೂ ಆಶ್ರಯನಾದವನು. ಬಂಧರಹಿತನೇ ಆದ ಪರಮಾತ್ಮನಿಗೆ ಮುಕ್ತಶಬ್ದವಾದರೂ (ಮೋಕ್ಷ) ಔಪಚಾರಿಕವಾದುದು,

**ಲಕ್ಷ್ಮ್ಯಾಃ ನಿತ್ಯಮುಕ್ತತ್ವೇತು ಭಾಷ್ಯಂ ಪ್ರಮಾಣಂ। ಯಥಾ ಶ್ರೀರ್ನಿತ್ಯಮುಕ್ತಾಪಿ ಪ್ರಾಪ್ತಕಾಮಾಪಿ ಸರ್ವದಾ। ಉಪಾಸ್ತೇ ನಿತ್ಯಶೋ ವಿಷ್ಣುಂ ಏವಂ ಭಕ್ತ್ಯೋ ಹರೇಃ ಭವೇದಿತಿ। ಅನಾದಿ ಕಾಲೇ ಭಗವತ್ ಸಂಬಂಧಿತ್ವಾದ್ಯುಜ್ಯತೇ ನಿತ್ಯಮುಕ್ತತ್ವಂ ತಸ್ಯಾಃ। ದ್ವಾವೇತಾವನಾದಿನಿತ್ಯಾ ವನಾದಿಯುಕ್ತೌ ನಿತ್ಯಮುಕ್ತಾವನಾದಿ ಕೃತಾ ಇತ್ಯಾದಿ। ಸಂಸಾರಾನುಪಕ್ರಮಾತ್ ಸ್ವತಯೇವಾಮ್ಯತತ್ವಂ ತಸ್ಯಾಃ। ದ್ವಾವಾವ ಸೃತ್ಯನುಪಕ್ರಮೌ ಪ್ರಕೃತಿಶ್ಚ ಪರಮಶ್ಚ ದ್ವಾವೇತೌ ನಿತ್ಯಮುಕ್ತೌ ನಿತ್ಯೌಚ ಸರ್ವಗತೌಚ ತೌಜ್ಞಾತ್ವಾ ವಿಮುಚ್ಯತ ಇತಿ।**

ಲಕ್ಷ್ಮೀದೇವಿಯು ಹರಿಯಂತೆ ನಿತ್ಯಮುಕ್ತಳೇ, ಎಂಬ ವಿಷಯದಲ್ಲಿ ಭಾಷ್ಯದಲ್ಲಿ ಲಕ್ಷ್ಮೀ ದೇವಿಯು ನಿತ್ಯ ಮುಕ್ತಳು ಪ್ರಾಪ್ತಸರ್ವಕಾಮಳು. ಆದರೂ ಸರ್ವದಾ ಪರಮಾತ್ಮನನ್ನು ಉಪಾಸಿಸುತ್ತಲೇ ಇರುತ್ತಾಳೆ. ಇದೆ ಪರಮಾತ್ಮನಲ್ಲಿಯ ವಿಲಕ್ಷಣ ಭಕ್ತಿ ಲಕ್ಷಣವು ಆಗಿರುತ್ತದೆ. ಲಕ್ಷ್ಮೀದೇವಿಯು ಅನಾದಿಕಾಲದಿಂದಲೂ ಭಗವಂತನಿಂದ ನಿತ್ಯಾಭಿಯುಕ್ತಳೇ ಆಗಿರುವುದರಿಂದ ನಿತ್ಯಮುಕ್ತತೆಯು ಯುಕ್ತವೇ ಆಗಿರುತ್ತದೆ. ಮತ್ತು ಲಕ್ಷ್ಮೀನಾರಾಯಣರೀರ್ವರೂ ಅನಾದಿ ನಿತ್ಯರು ಅನಾದಿ ಯುಕ್ತರು. ಅನಾದಿ ಮುಕ್ತರು ಎಂದು ಹೇಳಿರುತ್ತದೆ. ಲಕ್ಷ್ಮೀದೇವಿಗೆ ಸಂಸಾರವೇ ಇಲ್ಲವೆಂದಮೇಲೆ ನಿತ್ಯಮುಕ್ತತೆಯು ಸಹಜವೇ ಆಗರುತ್ತದೆ. ಲಕ್ಷ್ಮೀನಾರಾಯಣರು ಪ್ರಕೃತಿ ಪರಮ ಶಬ್ದಗಳಿಂದ ವಾಚ್ಯರಾಗಿರುತ್ತಾರೆ ಎಂದು ತಿಳಿಯುವುದೇ ಮೋಕ್ಷ ಸಾಧನವು.

**ನನುಲಕ್ಷ್ಮ್ಯಾಃ ಸ್ತ್ರೀತ್ವಾತ್ಕಃ ಪತಿಃ ಪರಮಾತ್ಮನೋವಾಪುಂಸ್ತ್ವಾತ್ಕಾಭಾರ್ಯೇತ್ಯತ ಆಹ। ಪರಮಾತ್ಮೇತಿ। ತದುಕ್ತಂ ಗೀತಾತಾತ್ಪರ್ಯೇ। ಉಪಸೇತಾಸಾಮುಕ್ತಿದಾಸದ್ಯ ಏವ ಸರ್ವಸ್ಯೇಶಾನಾಜಗತೋ ವಿಷ್ಣುಪತ್ನೀ। ಯಾಶ್ರೀಃ ಲಕ್ಷ್ಮೀಶ್ಚ ಪಲಾಚಾಂಬಿಕೇತಿಹ್ರೀಶ್ಚೇತ್ಯುಕ್ತಾಸಂವಿದಗ್ರ್ಯಾಸು ವಿದ್ಯೇತಿ। ಗೀತಾಭಾಷ್ಯೇಪಿ। ಪ್ರಕೃತೀದ್ವೇತುದೇವಸ್ಯ ಜಡಾಚೈವಾಜಡಾತಥಾ। ಅವ್ಯಕ್ತಾಖ್ಯಾ ಜಡಾಸಾಚ ಸೃಷ್ಟ್ಯಾ ಭಿನ್ನಾಷ್ಟಧಾ ಪುನಃ। ಅವರಾಸಾ ಜಡಾಶ್ರೀಶ್ಚ ಪರೇಯಂ ಧಾರ್ಯತೇತಯಾ। ಚಿದ್ರೂಪಾಸಾತ್ವನಂತಾಚ ಅನಾದಿ ನಿಧನಾಪರಾ। ನಾರಾಯಣಸ್ಯ ಮಹಿಷೀ ಮಾತಾ ಸಾ ಬ್ರಹ್ಮಣೋಪಿಹೀತಿ। ಭಾಷ್ಯೇಪಿ। ಶ್ರೀಶ್ಚತೇ ಲಕ್ಷ್ಮೀಶ್ಚಪತ್ನ್ಯೌ ಅಹೋರಾತ್ರೇ ಪಾರ್ಶ್ವೇ ನಕ್ಷತ್ರಾಣಿ ರೂಪಮಿತಿ।**

ಲಕ್ಷ್ಮೀದೇವಿಯು ಹೆಣ್ಣಾದ ಕಾರಣ ಇವಳ ಗಂಡನಾರು ? ಪುರುಷನಾದ ಪರಮಾತ್ಮನಿಗೆ ಹೆಂಡತಿ ಯಾರು ? ಹೀಗೆಂದರೆ ಗೀತಾ ತಾತ್ಪರ್ಯದಲ್ಲಿ ಹೇಳುತ್ತಾರೆ.

ಯಾವಳೇ ಉಪಾಸನಾದಿಂದ ಮುಕ್ತಿದಾತಳೋ ಜಗತ್ತಿಗೆ ಒಡೆಯಳೋ ಶ್ರೀಶ್ಚಪಲಾ ಅಂಬಿಕಾ, ಹ್ರೀಃ, ಸಂವಿತ್, ಅಗ್ರ್ಯಾ, ಸುವಿದ್ಯಾ ಇತ್ಯಾದಿ ನಾಮಗಳಿಂದ ವಾಚ್ಯಳೋ ಅವಳೇ ವಿಷ್ಣುವಿನ ಪತ್ನಿ ಎಂದು ಗೀತಾಭಾಷ್ಯದಲ್ಲಾದರೂ ಪರಮಾತ್ಮನ ಅಧೀನವಾದ ಪ್ರಕೃತಿಯು ಜಡ, ಅಜಡ ಎಂಬುದಾಗಿ ಎರಡು ವಿಧ. ಅಜಡಾಖ್ಯಳಾದವಳೇ ಅವ್ಯಕ್ತಳು, ಸೃಷ್ಟಿರಹಿತಳಾದವಳು. ಜಡವಾದ ಪ್ರಕೃತಿಯನ್ನು ಇವಳೇ ಧರಿಸಿರುತ್ತಾಳೆ. ಚಿದ್ರೂಪಳಾದವಳು ಅನಂತರೂಪಳು ಪರಾ ಶಬ್ದವಾಚ್ಯಳು ನಾರಾಯಣನಿಗೆ ಪಟ್ಟದ ರಾಣಿಯು, ಬ್ರಹ್ಮದೇವರಿಗೆ ಮಾತೃಸ್ಥಾನೀಯಳು. ಹೀಗೆ ಹೇಳಿರುತ್ತದೆ. ಬ್ರಹ್ಮಸೂತ್ರಭಾಷ್ಯದಲ್ಲಿಯೂ ಅಹೋ ರಾತ್ರಿಗಳಂತೆ ಶ್ರೀಃ ಲಕ್ಷ್ಮೀಃ ಎಂಬುದಾಗಿ ಉಭಯ ಪತ್ನಿಯರು, ನಕ್ಷತ್ರಗಳೇ ರೂಪಗಳು ಎಂದು ಹೇಳಿದೆ. ಅಂದರೆ ಲಕ್ಷ್ಮೀದೇವಿಯೇ ಬಹು ಶೃಂಗಾರದಿಂದ ಅಕ್ಕಪಕ್ಕದಲ್ಲಿ ಶ್ರೀ ಲಕ್ಷ್ಮೀ ರೂಪಗಳಿಂದಲೂ, ಕೃಷ್ಣಾವತಾರದಲ್ಲಿ ರುಕ್ಮಿಣೀ ಸತ್ಯಾ ರೂಪಗಳಿಂದಲೂ ಇರುವಳೆಂದು ತಾತ್ಪರ್ಯ.

ನನು ಲಕ್ಷ್ಮೀ ಪರಮಾತ್ಮನೋರ್ನಿತ್ಯ ಮುಕ್ತತ್ವೇನ ಪರಸಂಭೋಗೇನ ಸುಖಾಭಿವ್ಯಕ್ತೇರಭಾವಾತ್ಪತಿ ಭಾರ್ಯಾರೂಪತ್ವಮಯುಕ್ತಂ । ಪರಮಾತ್ಮನಃ ಸ್ವರಮಣತ್ವಾಚ್ಚೇತಿಚೇದುಚ್ಯತೇ । ಪರಮಾತ್ಮನಃ ಸ್ವರಮಣತ್ವೇಪಿ ಲಕ್ಷ್ಮ್ಯಾಮನುಗ್ರಹೇಣ ಸ್ವಸ್ತ್ರೀ ರೂಪೇಣ ತತ್ರಪ್ರವಿಶ್ಯ ರೂಪಾಂತರೇಣ ರತಿಃ ಸಂಭವತ್ಯೇವ । ತದುಕ್ತಮೈತರೇಯಭಾಷ್ಯೇ । ಪ್ರಾದುರ್ಭಾವ ಸ್ಥಿತಂ ರೂಪಂ ಯಚ್ಚ ಭೂಮೌ ಪುಮಾತ್ಮಕಂ । ವಿಷ್ಣೋಸ್ತದಪಿ ದೇವೀಷು ಸ್ಥಿತಂ ಸ್ತ್ರೀ ರೂಪಕಾತ್ಮನಾ । ಏವಮನ್ಯೋನ್ಯತೋ ವಿಷ್ಣುರತಃ ಸ್ವಸ್ಮಿನ್ನವಾನ್ಯತಃ । ರಮಯಾರಮಮಾಣೋಪಿತತ್ಸ್ಥೇನೈವ ಸ್ತ್ರೀಯಾತ್ಮನಾ । ರಮತೇ ನಾನ್ಯತಃ ಕ್ವಾಪಿರತಿರ್ವಿಷ್ಣೋಃ ಸುಖಾತ್ಮನಃ । ರಮಯಾ ರಮಣಂ ತಸ್ಮಾದ್ರಮಾಯಾರತಿ ಪಾತ್ರತಾ । ನೈವಾಸ್ಯಾರತಿದಾತೃತ್ವಂ ವಿಷ್ಣೋರ್ನಹ್ಯನ್ಯತೋರತಿರಿತಿ । ಲಕ್ಷ್ಮೀಃ ಪರಮಾತ್ಮವದ್ಬಹುರೂಪೇತ್ಯಾಃ ನಾನಾರೂಪೇತಿ । ತದುಕ್ತಂ ಬೃಹದ್ಭಾಷ್ಯೇ ।

ಲಕ್ಷ್ಮೀ ನಾರಾಯಣರಿಗೆ ದಾಂಪತ್ಯವು ಯುಕ್ತವಾಗುವುದಿಲ್ಲ. ಉಭಯರು ನಿತ್ಯ ಮುಕ್ತರೇ ಆಗಿರುವುದರಿಂದ, ಸಮಭೋಗದಿಂದ ಸುಖಾಭಿವ್ಯಕ್ತಿಯೂ ಆಗುವುದಿಲ್ಲ. ಪರಮಾತ್ಮನು ಸ್ವರಮಣನೂ ಆಗಿರುವುದರಿಂದ, ಹೀಗೆ ಶಂಕೆ ಬಂದರೆ ಹೇಳುತ್ತಾರೆ. ಪರಮಾತ್ಮನು ಸ್ವರಮಣನಾದರೂ ಲಕ್ಷ್ಮೀದೇವಿಯಲ್ಲಿ ವಿಲಕ್ಷಣ ಅನುಗ್ರಹಾರ್ಥವಾಗಿಯೇ ತನ್ನ ಸ್ತ್ರೀರೂಪವನ್ನು ಲಕ್ಷ್ಮೀದೇವಿಯಲ್ಲಿರಿಸಿ ರತಿಪ್ರದನಾಗುತ್ತಾನೆ. ಈ ವಿಷಯವನ್ನು ಐತರೇಯ ಭಾಷ್ಯದಲ್ಲಿ ಹೀಗೆ ಹೇಳಿರುತ್ತಾರೆ. ಪರಮಾತ್ಮನ ಪ್ರಾದುರ್ಭಾವದಲ್ಲಿ ಭೂಮಿಯಲ್ಲಿ ಪುರುಷಾತ್ಮಕವಾಗಿ ಇರುವ ಪರಮಾತ್ಮನ ರೂಪವು ಲಕ್ಷ್ಮೀದೇವಿಯಲ್ಲಿ ಸ್ತ್ರೀ ರೂಪವಾಗಿರುತ್ತದೆ. ಹೀಗೆ

ಪರಸ್ಪರವಾಗಿ ರಮಿಸುತ್ತಾರೆ. ಈ ಸಂಭೋಗಕ್ಕೆ ಲಕ್ಷ್ಮೀದೇವಿಯು ಪಾತ್ರಳಾದ್ದರಿಂದಲೇ 'ರಮಾ' ಎಂಬ ಹೆಸರು ಅವಳಿಗೆ ಅನ್ವರ್ಥಕವಾಗಿದೆ. ಸುಖಾತ್ಮಕನಾದ ಪರಮಾತ್ಮಗೆ ರಮಾ ರೂಪದಲ್ಲಿಯೇ ತನ್ನ ರಮಣವಾಗಲೀ ಅನ್ಯತ್ರದಲ್ಲಿ ರಮಿಸುವುದಿಲ್ಲ. ಲಕ್ಷ್ಮೀ ವಿನಹ ಅನ್ಯರಿಗೆ ಪರಮಾತ್ಮನು ಎಂದೆಂದಿಗೂ ರತಿಸುಖವನ್ನು ಕೊಡುವುದಿಲ್ಲ.

ಲಕ್ಷ್ಮೀದೇವಿಗೂ ಪರಮಾತ್ಮನಂತೆ ಬಹುರೂಪಗಳುಂಟು. ಆದ್ದರಿಂದ ನಾನಾ ರೂಪಳೆನಿಸುತ್ತಾಳೆ. ಈ ವಿಷಯವನ್ನೇ ಬೃಹದ್ಭಾಷ್ಯದಲ್ಲಿಯೂ ಹೇಳಿರುತ್ತಾರೆ.

**ಶ್ರೀರ್ಭೂರ್ದುರ್ಗಾಂಭೃಣೀಹ್ರೀಶ್ಚ ಮಹಾಲಕ್ಷ್ಮೀಶ್ಚ ದಕ್ಷಿಣಾ । ಸೀತಾ ಜಯಂತೀ ಸತ್ಯಾ ಚ ರುಕ್ಮಿಣೀತ್ಯಾದಿಭೇದಿತೇತಿ । ತತ್ರ ದಕ್ಷಿಣಾ ಮೂರ್ತೌ ಸುಖೇವಿಶೇಷೋಽಸ್ತಿ । ತದುಕ್ತಮೇಕಾದಶತಾತ್ಪರ್ಯೇ । ಸರ್ವವೇದಾಭಿಮಾನಿನ್ಯೋದೇವ್ಯೋ ಲಕ್ಷ್ಮೀ ಸ್ತತೋಧಿಕಾ । ವೇದಾಭಿಮಾನಿನೀ ಸಾಕ್ಷಾತ್ ಸಾವಿಷ್ಣೋರೂರ್ವವಸ್ಥಿತಾ । ಯಜ್ಞಾಖ್ಯಾಸ್ಯೈವ ವಿಷ್ಣೋಸ್ತು ಯಾತೂರಸ್ಥಲಮಾಶ್ರಿತಾ । ಹರಿಣಾರತಿಯೋಗಸ್ಥಾ ದಕ್ಷಿ. ಣಾಖ್ಯಾಪಿಸ್ಯೈವತು । ಉತ್ತರೋತ್ತರತಃ ಸಾತು ವಿಶಿಷ್ಟಾ ದಕ್ಷಿಣಾಸುಖ ಇತಿ । ನಿರ್ಣಯೇಽಪಿ ।**

ಶ್ರೀ ಭೂ ದುರ್ಗಾ ಅಂಭೃಣೀ ಹ್ರೀ ಮಹಾಲಕ್ಷ್ಮೀ ದಕ್ಷಿಣಾ ಸೀತಾ ಜಯಂತೀ ಸತ್ಯಾ ರುಕ್ಮಿಣೀ ಇತ್ಯಾದಿ ನಾಮಗಳಿಂದ ಪ್ರಸಿದ್ಧಳು. ಈ ರೂಪಗಳಲ್ಲಿ ದಕ್ಷಿಣಾ ರೂಪದಲ್ಲಿ ಪರಮಾತ್ಮನ ಸುಖ ವಿಶೇಷವು ಇರುತ್ತದೆ. ಇದನ್ನು ಏಕಾದಶ ತಾತ್ಪರ್ಯದಲ್ಲಿ ಹೇಳಿರುತ್ತಾರೆ. ಸರ್ವ ವೇದಾಭಿಮಾನಿನಿಯಾದ ಲಕ್ಷ್ಮೀ ದೇವಿಯು ವಿಷ್ಣುವಿನ ತೊಡೆಯಲ್ಲಿ ಕೂತು ಯಜ್ಞಾನಾಮಕಳಾಗುತ್ತಾಳೆ. ಅವಳೇ ವಿಷ್ಣುವಿನ ವಕ್ಷಸ್ಥಳವನ್ನಾಶ್ರಯಿಸಿ 'ಶ್ರೀ' ಎನಿಸುತ್ತಾಳೆ. ಪರಮಾತ್ಮನಿಂದ ರತಿ ಪಾತ್ರಳಾಗಿ ದಕ್ಷಿಣಾ ಎನಿಸುತ್ತಾಳೆ. ವಿಶಿಷ್ಟವಾದ ದಕ್ಷಿಣಾರೂಪದಿಂದಲೇ ಹೀಗೆ ಹೇಳಿರುತ್ತಾರೆ. ಹೆಚ್ಚು ಹೆಚ್ಚಾಗಿ ಸುಖಭೋಗಿಯಾಗುತ್ತಾಳೆ.

**ಬ್ರಹ್ಮಾಣಮೇವೋತ್ತಮಮಾಹಸೋಽಪಿ ವೇದಾತ್ಮಿಕಾಂ ಪ್ರಕೃತಿಂ ವಿಷ್ಣು ಪತ್ನೀಂ । ಸೈಕಾದೇವೀ ಬಹುರೂಪಾಬಭಾಷೇಯುಕ್ತಾ ಯದಾಹಂ ಜ್ಞೇನನಾರಾಯಣೇನ । ಯಜ್ಞಕ್ರಿಯಾಮಾನಿನೀ ಯಜ್ಞನಾಮ್ನೀ ತದೋತ್ತಮಾತತ್ ಪ್ರವೇಶಾತ್ತುತಸ್ಯಾಃ । ವಿಷ್ಣ್ವಾವಿಷ್ಟಾಯಜ್ಞನಾಮ್ನಾ ತದಂಕಸ್ಥಿತಾ ಸೋ ಚೇಕೇಶವೋಽಹ್ಯುತ್ತಮೋಽಲಂ । ನತತ್ಸಮಶ್ಚಾಭ್ಯಧಿಕಃ ಕುತಃ ಸ್ಯಾದ್ವೃಷೇಸತ್ಯಂ ನಾನ್ಯಥೇತಿಸ್ಮ ಭೂಪಾಃ । ತತೋಕ್ತೋಽಹಂ ನಾವತಾರೇಷು**

**ಕಸ್ಮಿದ್ವಿಶೇಷ ಇತ್ಯೇವಮುದುಪ್ರವೀರಂ । ಸರ್ವೋತ್ತಮೋ ಸೀತ್ಯವದಂಸ ಚಾಹಂ ನಕೇವಲಂಮೇಂಕಗಾಯಾಃಶ್ರಿಯೋಹಂ। ತದೋತ್ತಮಃ ಕಿಂತು ಯದಾತುಸಾಮೇವಾಮಾರ್ಧರೂಪಾದಕ್ಷಿಣಾನಾಮಧೇಯಾ । ಯಸ್ಮಾದಸ್ಯಾದಕ್ಷಿಣತಃ ಸ್ಥಿತೋಹಂತಸ್ಮಾನ್ನಾಮ್ನಾದಕ್ಷಿಣೇತ್ಯೇವಸಾಸ್ಯಾತ್ । ವಾಮಾರ್ಧೋನೇತತ್ ಪ್ರವಿಷ್ಟೋಯತೋಹಿತತೋಹಂ ಸ್ಯಾಮರ್ಧನಾರಾಯಣಾಖ್ಯಃ । ಇತ್ಯೋವಾದೀದ್ದಕ್ಷಿಣಾಭಿಸ್ಸಹೇತಿ 'ಸರ್ವೋತ್ತಮತ್ವಂ ದಕ್ಷಿಣಾನಾಂ ಸ್ಮರನ್ ಸ ಇತಿ । ಐತರೇಯ ಭಾಷ್ಯೇಪಿ ।**

ಶ್ರೀಮದಾಚಾರ್ಯರು ನಿರ್ಣಯ ಗ್ರಂಥದಲ್ಲಿ, ಈ ವಿಷಯದಲ್ಲಿ ನಾರದ ಕೃಷ್ಣ ಸಂವಾದಾತ್ಮಕವಾದ ಆಖ್ಯಾಯಿಕವನ್ನು ಹೇಳಿರುತ್ತಾರೆ. ಸರ್ವ ಜೀವರುಗಳಲ್ಲಿ ಬ್ರಹ್ಮನೇ ಸರ್ವೋತ್ತಮನೆಂದು ಹೇಳಿದೆ. ಆ ಬ್ರಹ್ಮ ದೇವರು ವೇದಾಭಿಮಾನಿನಿಯಾದ ಪ್ರಕೃತಿ ವಾಚ್ಯಳಾದ ವಿಷ್ಣುಪತ್ನಿಯೇ ಸರ್ವೋತ್ತಮಳೆಂದರು. ಆ ಬಹುರೂಪಳಾದ ಲಕ್ಷ್ಮೀದೇವಿಯು "ನಾನು ಯಾವಾಗಲೂ ಸರ್ವಜ್ಞನಾದನಾರಾಯಣನಿಂದ ಯುಕ್ತಳಾಗಿಯೇ ಯಜ್ಞಕ್ರಿಯಾ ಅಭಿಮಾನಿಯಾಗಿ ಯಜ್ಞನಾಮಕಳಾಗಿ ಉತ್ತಮಳೆನಿಸುತ್ತೇನೆ. ಪರಮಾತ್ಮನಿಂದ ಅವಿಷ್ಟಳಾಗಿ ಅವನ ಅಂಕಸ್ಥಿತಳಾಗಿ ಶ್ರೇಷ್ಠಳೆನಿಸುತ್ತೇನೆ. ನನಗಿಂತಲೂ ಉತ್ತಮನಾದವನು ಕೇಶವನು. ಅವನಿಗೆ ಸಮರಾಗಲಿ, ಅಧಿಕರಾಗಲಿ ಯಾರೂ ಇರುವುದಿಲ್ಲ ಎಂದಳು." ಹೇ, ನಾರದರೇ ! ಇದು ಸತ್ಯವಾದುದು. ನಂತರ ನಾರದರು ಶ್ರೀ ಹರೇ ಕೃಷ್ಣ ನೀನೇ ಸರ್ವೋತ್ತಮನಾಗಿರುತ್ತೀಯ ಎನಲಾಗಿ ಆಗ ಕೃಷ್ಣನು ನಾನು ಸರ್ವೋತ್ತಮನಾದರೂ ತೊಡೆಯ ಮೇಲೆ ಕುಳಿತ ಲಕ್ಷ್ಮೀಯಿಂದ ಯುಕ್ತನಾಗಿಯೇ ಉತ್ತಮನೆನಿಸುತ್ತೇನೆ. ನನ್ನ ಎಡ ತೊಡೆಯ ಮೇಲೆ ಕುಳಿತ ನನ್ನರ್ಧ ರೂಪದಂತಿರುವ ದಕ್ಷಿಣಾ ಎನಿಸಿಕೊಳ್ಳುವ ಲಕ್ಷ್ಮೀಯಿಂದ ಯುಕ್ತನಾಗಿ ಉತ್ತಮನೆನಿಸುತ್ತೇನೆ. ಯಾವ ಕಾರಣದಿಂದ ಲಕ್ಷ್ಮೀದೇವಿಯ ದಕ್ಷಿಣ ಭಾಗದಲ್ಲಿ ನಾನು ಇರುತ್ತೇನೆಯೋ, ಆ ಕಾರಣದಿಂದಲೇ ಅವಳಿಗೆ ದಕ್ಷಿಣಾ ಎಂಬ ಹೆಸರು. ನನ್ನ ವಾಮಾರ್ಧ ಭಾಗದಲ್ಲಿ ಲಕ್ಷ್ಮೀ ಇರುವುದರಿಂದಲೇ ಅರ್ಧನಾರಾಯಣನೆನಿಸಿರುತ್ತೇನೆ. ಇಷ್ಟು ಅಭಿಪ್ರಾಯದಿಂದಲೇ "ದಕ್ಷಿಣಾಭಿಸ್ಸಾಕಂ, ಸರ್ವೋತ್ತಮೋಹಂ" ಎಂದನು. ಹೀಗೆ ತಿಳಿಸಿರುತ್ತಾರೆ. ಇದೇ ವಿಷಯವನ್ನು ಐತರೇಯ ಭಾಷ್ಯದಲ್ಲಿಯೂ ಹೇಳಿರುತ್ತಾರೆ.

**ದಕ್ಷಿಣಾಭಿಸ್ಸಹೈವೈತನ್ಮದಧಸ್ತಾಜ್ಜಗತ್ಸದಾ । ಧನ್ಯಾಶ್ಚಯೋಹಮೇವೈಕೋ ಮಿತ್ರಂಮೇದಕ್ಷಿಣಾರಮಾ । ಇತ್ಯವಾದೀದ್ಧರಿರ್ಭೂಪಾಧನ್ಯೋಸೀತ್ಯುದಿತೋಮಯೇತಿ ನಾರದವಚನಮಿತಿ ॥ ಅತ್ರಾಯಂ ಸಂಪ್ರದಾಯಃ। ಪರಮಾತ್ಮ ಸಂಭೋಗೇನಾದೌ ಸುಖಾಭಿವ್ಯಕ್ತಿರ್ದಕ್ಷಿಣಾಯಾಂ।**

**ತತಃ ಸರ್ವಸಾಮನುಭವಃ । ಅತ ಆದೌಸುಖಾಭಿವ್ಯಕ್ತಿ ಸ್ಥಾನತ್ವಾದ್ವಿಶಿಷ್ಟಾ ದಕ್ಷಿಣಾ ಸುಖ ಇತ್ಯುಕ್ತಿಃ ಇತಿ । ಪರಮಾತ್ಮ ಪತ್ನೀತ್ವೇಽಪಿಜಾಂಬವತ್ಯಾದೀನಾಂ ಜಡದೇಹವತ್ತ್ವಾಲ್ಲಕ್ಷ್ಮ್ಯಾಃ ಅಪಿ ಜಡ ದೇಹೋಸ್ತ್ವಿತಿ ನೇತ್ಯಾಹ ।**

ದಕ್ಷಿಣಾ ನಾಮಕಳಾದ ಲಕ್ಷ್ಮಿಯಿಂದಯುಕ್ತನಾಗಿ ಶ್ರೇಷ್ಠನಾದವನು, ನನ್ನ ಕೆಳಗೆ ಯಾವತ್ತೂ ಜಗತ್ತು, ಧನ್ಯತಮನಾದವನೂ ಆಶ್ಚರ್ಯ ತಮನಾದವನೂ ನಾನೊಬ್ಬನೇ, ನನಗತ್ಯಂತ ಮಿತ್ರಳು ದಕ್ಷಿಣಾ ವಾಚ್ಯಳಾದ ಲಕ್ಷ್ಮೀ ದೇವಿಯು ಹೀಗೆ ಶ್ರೀಹರಿ ಹೇಳಿದನು. ಅಲ್ಲಿ ನೆರೆದ ರಾಜರುಗಳೆಲ್ಲರೂ ಶ್ರೀಕೃಷ್ಣನನ್ನು "ಧನ್ಯನಾಗಿರುವೆ, ಧನ್ಯನಾಗಿರುವೆ" ಎಂದು ಹೊಗಳಿದರು.

ಇಲ್ಲಿ ಸಂಪ್ರದಾಯೋಕ್ತಿಯು ಈ ಕ್ರಮವಾಗಿರುತ್ತದೆ. ಪರಮಾತ್ಮನ ಸಂಭೋಗದಿಂದ ಮೊದಲು ದಕ್ಷಿಣಾವಾಚ್ಯಳಾದ ರಮಾದೇವಿಯಲ್ಲಿ ಸುಖಾಭಿವ್ಯಕ್ತಿಯು, ನಂತರ ಭಾರತೀವಾಯುವಾದಿಗಳಿಂದ ಎಲ್ಲರಿಗೂ ಸುಖಾನುಭವವು. ಆದ್ದರಿಂದಲೇ ಮೊದಲು ಸುಖಾಭಿವ್ಯಕ್ತಿ ಸ್ಥಾನನು ದಕ್ಷಿಣಾ ವಾಚ್ಯಳಾದ ಲಕ್ಷ್ಮೀ ದೇವಿಯು ಸುಖರೂಪಳು ಎಂದು.

ಪ.ಸಂ :—ಪರಮಾತ್ಮವಜ್ಜಡದೇಹರಹಿತಾ ।

**ನ ಚ ಪರಮಾತ್ಮನ ಏವ ಜಡ ದೇಹಾಭಾವೇ ಪ್ರಮಾಣಾಭಾವಃ । ಅತಃ ಕಥಮತಿದೇಶೋಲಕ್ಷ್ಮ್ಯಾಃ ಇತಿ ವಾಚ್ಯಂ। ಬಹೂನಾಂ ಪ್ರಮಾಣಾನಾಂ ಸದ್ಭಾವಾತ್ । ತಥಾಹಿ ಪ್ರಥಮಸ್ಕಂಧ ತಾತ್ಪರ್ಯಂ । ನ ತಸ್ಯ ಪ್ರಾಕೃತಾಮೂರ್ತಿರ್ಮಾಂಸಮೇದೋಽಸ್ಥಿ ಸಂಭವಾ । ಸರ್ವೇ ನಿತ್ಯಾಃ ಶಾಶ್ವತಾಶ್ಚದೇಹಾಸ್ತಸ್ಯಪರಾತ್ಮನಃ । ಹಾನೋಪಾದಾನರಹಿತಾ ನ ಚ ಪ್ರಕೃತಿಜಾಃ ಕ್ವಚಿದಿತಿ ।**

ಪರಮಾತ್ಮನ ಪತ್ನಿತ್ವ ಲಕ್ಷ್ಮೀ ದೇವಿಗಿದ್ದರೂ ಜಾಂಬವತ್ಯಾದಿಗಳಂತೆ ಜಡ ದೇಹ ಉಂಟೆಂದು ಯಾಕೆ ಹೇಳಬಾರದು ಎಂದರೆ ಹೇಳುತ್ತಾರೆ. ಪರಮಾತ್ಮನಂತೆ ಜಡದೇಹರಹಿತಳು, ಪರಮಾತ್ಮನಿಗೊಬ್ಬನಿಗೇ ಜಡ ದೇಹವಿಲ್ಲವೆಂದು ಪ್ರಮಾಣವು. ಇದು ಲಕ್ಷ್ಮಿಗೂ ಹೇಗೆ ಕೂಡುತ್ತದೆ ಎನ್ನಬಾರದು. ಬಹು ಪ್ರಮಾಣಗಳು ನಾರಾಯಣನಂತೆ ಲಕ್ಷ್ಮಿಗೂ ಜಡದೇಹವಿಲ್ಲವೆಂದು ಹೇಳಿರುವುದರಿಂದ.

ಪ್ರಥಮ ಸ್ಕಂಧತಾತ್ಪರ್ಯದಲ್ಲಿಯೂ, ಪರಮಾತ್ಮನ ಲಕ್ಷ್ಮೀದೇವಿಯ ದೇಹಗಳು ಪ್ರಾಕೃತವಾದವುಗಳಲ್ಲ, ಮಜ್ಜಾ ಮೇಧಸ್ಸು ಅಸ್ತಿಯಾದಿ ಧಾತುಗಳುಳ್ಳವುಗಳಲ್ಲ, ನಿತ್ಯವಾದವುಗಳು ಶಾಶ್ವತವಾದವುಗಳು ಹಾನೋಪಾದಾನ ರಹಿತವಾದವುಗಳು ಎಂದಿಗೂ ಪ್ರಾಕೃತವಾದವುಗಳಲ್ಲ ಹೀಗೆ ಹೇಳಿರುತ್ತದೆ.

**ಚತುರ್ಥ ಸ್ಕಂಧ ತಾತ್ಪರ್ಯೇsಪಿ । ಪಂಚಭೂತಾತ್ಮಕಂ ದೇಹಂ ವಿಷ್ಣೋಃ ಪಶ್ಯಂತ್ಯಯೋಗಿನಃ । ತಥಾನಯೋಗಿರಾಧ್ಧಾಂತೋ ಜ್ಞಾನ ದೇಹೋಯಂತೋ ಹರಿರಿತಿ । ನಿರ್ಣಯೇsಪಿ । ಪ್ರಾದುರ್ಭಾವಾಹರೇಃ ಸರ್ವೇನೈವ ಪ್ರಾಕೃತದೇಹಿನ ಇತಿ। ಐತರೇಯಭಾಷ್ಯೇsಪಿ ಸ್ಥಂಭಾದ್ವಾನರ ದೇಹಾದ್ವಾನತಸ್ಯ ಪ್ರಾಕೃತೀತನುರಿತಿ । ಲಕ್ಷ್ಮ್ಯಾಃ ಪ್ರಕೃತದೇಹರಾಹಿತ್ಯ ಮುಕ್ತಂ ತತ್ವನಿರ್ಣಯೇ । ಬ್ರಹ್ಮಾಶಿವಃಸುರೇಶಾದ್ಯಾಃ ಶರೀರಕ್ಷರಣಾತ್ ಕ್ಷರಾಃ । ಲಕ್ಷ್ಮೀರಕ್ಷರ ದೇಹತ್ವಾದಕ್ಷರಾ ತತ್ಪರೋಹರಿಃ ಇತಿ । ಗೀತಾ ತಾತ್ಪರ್ಯೇsಪಿ । ಬ್ರಹ್ಮರುದ್ರಾದಯಃ ಸರ್ವೇಶರೀರಕ್ಷರಣಾತ್ ಕ್ಷರಾಃ । ಶ್ರೀರಕ್ಷರಾತ್ಮೇ ತ್ಯುದಿತಾನಿತ್ಯಚಿದ್ದೇಹಕಾಯತ ಇತಿ। ನನು ಕೃಷ್ಣಾವತಾರೇ ಪ್ರಾಕೃತದೇಹಂ ಪರಿತ್ಯಜ್ಯ ವೈಕುಂಠ ಗಮನಸ್ಯ ಪುರಾಣಾದಾವುಕ್ತೇಃ ಪ್ರತ್ಯಕ್ಷಸಿಧ್ಧತ್ವಾಚ್ಚೇದಮಯುಕ್ತಮಿತಿ ಚೇನ್ನ । ತಚ್ಛರೀರಸ್ಯಾಸುರಮೋಹ ನಾಯ ತದಾನೀಂ ಕಲ್ಪಿತತ್ವೇನ ಕೃಷ್ಣದೇಹತ್ವಾಭಾವಾತ್ ।**

ವಿಷ್ಣುವಿಗೆ ಯಾರು ಪಂಚಭೂತಾತ್ಮಕ ದೇಹವನ್ನು ತಿಳಿಯುತ್ತಾರೆಯೋ ಅವರು ಅಯೋಗಿಗಳೆನಿಸುತ್ತಾರೆ. ಹರಿಯು ಜ್ಞಾನಾನಂದದೇಹವುಳ್ಳವನೆಂದೂ ಯೋಗಿಗಳ ಸಿದ್ಧಾಂತವು. ಹೀಗೆ ಚತುರ್ಥಸ್ಕಂಧ ತಾತ್ಪರ್ಯವು ನಿರ್ಣಯದಲ್ಲಿಯೂ ಪರಮಾತ್ಮನ ಪ್ರಾದುರ್ಭಾವಗಳು (ಅವತಾರಗಳು) ಪ್ರಾಕೃತರಹಿತವಾದವುಗಳೆಂದು ಹೇಳಿರುತ್ತದೆ. ಐತರೇಯ ಭಾಷ್ಯದಲ್ಲಿಯೂ ಸ್ತಂಭದಿಂದಾಗಲಿ ಮನುಷ್ಯ ದೇಹ ದಿಂದಾಗಲಿ ಹೊರ ಬೀಳುವ ಪರಮಾತ್ಮನ ದೇಹವು ಅಪ್ರಾಕೃತ ದೇಹವೇ ಎಂದು. ಲಕ್ಷ್ಮೀದೇವಿಯ ದೇಹವೂ ಅಪ್ರಾಕೃತವೇ ಎಂದು ತತ್ವನಿರ್ಣಯದಲ್ಲಿ ಹೀಗೆ ಹೇಳಿರುತ್ತದೆ. ಬ್ರಹ್ಮಶಿವಾದಿ ದೇವತೆಗಳ ದೇಹಗಳು ಕ್ಷಯ ಹೊಂದುವಂತಹವು. ಅಂತೆಯೇ ಅವರಿಗೆ ಕ್ಷರರೆಂದು ಹೆಸರು. ಲಕ್ಷ್ಮೀ ದೇಹವು ಎಂದಿಗೂ ಕ್ಷಯ ಹೊಂದು ವುದಿಲ್ಲವಾದ್ದರಿಂದ ಅವಳಿಗೆ ಅಕ್ಷರಳೆಂದು ಹೆಸರು. ಗೀತಾ ತಾತ್ಪರ್ಯದಲ್ಲಿಯೂ ಇದೇ ಅರ್ಥವನ್ನೇ ಹೇಳುತ್ತಾ ದೇವತೆಗಳೆಲ್ಲರೂ ಕ್ಷರರು ಲಕ್ಷ್ಮೀದೇವಿಯೊಬ್ಬಳೇ ಅಕ್ಷರಳಾದ ಚಿದ್ದೇಹ ಉಳ್ಳವಳು.

ಭಗವಂತನು ಕೃಷ್ಣಾವತಾರದಲ್ಲಿ ದೇಹವನ್ನು ಬಿಟ್ಟು ವೈಕುಂಠಗಮನ ಮಾಡಿದನೆಂದು ಪುರಾಣಗಳ ಉಕ್ತಿಯು, ಪ್ರತ್ಯಕ್ಷ ಸಿದ್ಧವಾದ ಈ ವಿಷಯದಲ್ಲಿ ಯುಕ್ತಿಯೇನು ಎಂದರೆ ಅಸುರಜನ ಮೋಹನಾರ್ಥವಾಗಿ ಆ ಶರೀರ ತ್ಯಾಗದಂತೆ ನಟಿಸಿರುತ್ತಾನೆ. ಆ ದೇಹವು ತತ್ಕಾಲದಲ್ಲಿ ನಿರ್ಮಿತವಾದ ಪ್ರಾಕೃತದೇಹವೇ ಆಗಲಿ ಕೃಷ್ಣನ ದೇಹವಲ್ಲವಾದ್ದರಿಂದ, ಪರಮಾತ್ಮನ ದೇಹವು ಅಪ್ರಾಕೃತವಾದ ನಾಶರಹಿತ ವಾದ ಚಿದಾನಂದಾತ್ಮಕ ದೇಹವೇ ಆಗಿರುತ್ತದೆ.

**ತದುಕ್ತಮೈತರೇಯ ಭಾಷೇ । ಕೃಷ್ಣೋಹ್ಯತ್ಯಕ್ತದೇಹೋಪಿ ತ್ಯಕ್ತ ದೇಹವದೇವಚ । ಲೋಕಾನಾಂ ದರ್ಶಯಾಮಾಸಸ್ವರೂಪ ಸದೃಶಾ**

ಕೃತಿಂ । ಯೇನ ರೂಪೇಣಕಂಸಾದೀಜ್ಘಘ್ನೇ ತದ್ರೂಪವೇವಹಿ । ಪೂಜ್ಯತೇಽದ್ಯಾಪಿಶಾರ್ವಾದ್ಯೈರ್ನಿರ್ವಿರ್ಶಾಯಾಽವಾಕೃತಿಃ । ಸ್ವರ್ಗಾರೋಹಣಕಾಲೇsತ್ರಜನಾಸ್ತೇನೈವಮೋಹಿತಾ ಇತಿ । ನಿರ್ಣಯೇಪಿ । ಮೋಹಯಿತ್ವಾ ಸುರಾನಂಧಂತಮಃ ಪ್ರಾಪಯಿತುಂ ಪ್ರಭುಃ । ಚಿದಾನಂದೈಕದೇಹೋಽಪಿ ತ್ಯಕ್ತ್ವಂ ದೇಹಮಿವಾಪರಂ । ಸೃಷ್ಟ್ವಾವ ಸ್ವದೇಹೋಪಮಿತಂ ಶಯಾನಂ ಭುವ್ಯಗಾದ್ದಿವಮಿತಿ ।

ಐತರೇಯ ಭಾಷ್ಯದಲ್ಲಿಯೂ ಶ್ರೀಕೃಷ್ಣನು ದೇಹತ್ಯಾಗ ಮಾಡದೇ ಇದ್ದರೂ ತನ್ನ ದೇಹ ಸಮಾನವಾಗಿ ತೋರುವ ಪ್ರಾಕೃತ ದೇಹವನ್ನು ಸೃಜಿಸಿ ತ್ಯಜಿಸಿದನು. ಯಾವ ದೇಹದಿಂದ ಕಂಸಾದಿಗಳನ್ನು ವಧಿಸಿದನೋ ಅದೇ ದೇಹದಿಂದಲೇ ವೈಕುಂಠಕ್ಕೆ ತೆರಳಿದನು. ಇಂದಿಗೂ ಯಮುಕುಲ ತಿಲಕನಾಗಿ ತೋರಿಸಿದ ಕೃಷ್ಣರೂಪವನ್ನೇ ರುದ್ರಾದಿ ದೇವತೆಗಳೂ ಪೂಜಿಸುತ್ತಿದ್ದಾರೆ. ಸ್ವರ್ಗಾರೋಹಣ ಕಾಲದಲ್ಲಿ ಜನರುಗಳು ಮೋಹಿತರಾದರು. ಹೀಗೆ ಹೇಳಿದೆ, ನಿರ್ಣಯದಲ್ಲಿಯೂ ಶ್ರೀಕೃಷ್ಣ ಪರಮಾತ್ಮನು ಅಸುರರನ್ನು ಮೋಹಿಸಿ ಅಂಧಃತಮಸ್ಸನ್ನು ಹೊಂದಿಸಲು ತಾನು ಚಿದಾನಂದ ದೇಹ ಉಳ್ಳವನಾದರೂ ಸಮಾನವಾದ ಪ್ರಾಕೃತ ದೇಹವನ್ನು ನಿರ್ಮಿಸಿ ಭೂಮಿಯಲ್ಲಿ ಬಿಟ್ಟು ಸ್ವರ್ಗ ಲೋಕವನ್ನು ಕುರಿತು ಹೋದನು ಎಂದು ಹೇಳಿದೆ.

ನನ್ವೇವಂ ಪರಮಾತ್ಮನಃ ಪ್ರಾಕೃತ ದೇಹ ಸಂಬಂಧೋಽವರ್ಜನೀಯಃ । ನಿಯಾಮಕತ್ವೇನ ಬ್ರಹ್ಮಾದಿ ಶರೀರೇಷು ವಿದ್ಯಮಾನತ್ವಾತ್ । ಅನ್ಯಥಾತತ್ಸೃಷ್ಟ್ವಾ ತದೇವಾನುಪ್ರಾವಿಶದಿತ್ಯಾದಿ ಶ್ರುತಿವಿರೋಧಾದಿತಿ ಚೇನ್ನ । ಅನ್ಯಾಭಿಮಾನ ರಹಿತೇ ಪ್ರಾಕೃತ ಶರೀರೇಽವಸ್ಥಾನಾಭಾವಸ್ಯ ವಿವಕ್ಷಿತತ್ವಾತ್ । ಬ್ರಹ್ಮಾದಿ ಶರೀರೇ ಶರೀರಾಭಿಮಾನಿನಾಂ ಬ್ರಹ್ಮರುದ್ರಾದಿಜೀವಾನಾಂ ಸದ್ಭಾವಾತ್ । ಅತೋಽನವಿರೋಧಃ ।

ಇಷ್ಟು ಪ್ರಮಾಣಗಳಿದ್ದರೂ ಪರಮಾತ್ಮನಿಗೆ ಪ್ರಾಕೃತ ದೇಹ ಇರುವಿಕೆ ಅನಿವಾರ್ಯವೇ ಆಗಿದೆ. ಏಕೆಂದರೆ ನಿಯಾಮಕ ರೂಪನಾಗಿ ಬ್ರಹ್ಮಾದಿದೇವತೆಗಳ ದೇಹಗಳಲ್ಲಿ ಇರುವುದರಿಂದ, ಹಾಗಿಲ್ಲದ ಪಕ್ಷದಲ್ಲಿ ಪರಮಾತ್ಮನು ಚೇತನಾಚೇತನಾತ್ಮಕವಾದ ಜಗತ್ತನ್ನು ಸೃಷ್ಟಿ ಮಾಡಿ ಅವುಗಳಲ್ಲಿ ಪ್ರವಿಷ್ಟನಾಗಿ ಅವುಗಳನ್ನು ಕ್ರಿಯಾ ವಿಶಿಷ್ಟಗಳನ್ನಾಗಿ ಮಾಡಿದನು, ಎಂದು ಹೇಳುವ ಶ್ರುತಿಯ ವಿರೋಧವು ಬರುತ್ತದಲ್ಲ ಎಂದರೆ ವಿರೋಧವು ಬರುವುದಿಲ್ಲ. ಪರಮಾತ್ಮಗೆ ಪ್ರಾಕೃತ ದೇಹ ಪ್ರಸಕ್ತಿಯು ಇರುವುದಿಲ್ಲ. ಅನ್ಯರ ಅಭಿಮಾನ ರಹಿತವಾದ ಶರೀರದಲ್ಲಿ ಭಗವದಧಿಷ್ಠಾನತೆಯು ವಿವಕ್ಷಿತವಾಗಿರುವುದಿಲ್ಲ. ಬ್ರಹ್ಮಾದಿ ಶರೀರದಲ್ಲಿ ಸ್ವಶರೀರಾಭಿಮಾನಿಗಳಾದ ಬ್ರಹ್ಮಾದಿ ಜೀವರುಗಳಿಗೆ ಆ ದೇಹಗಳಲ್ಲಿ ಸ್ಥಿತಿ ಇರುವುದರಿಂದ ದೇಹ ನಿಮಿತ್ತಿಕ ವಿಕಾರಗಳು

ಅಭಿಮಾನ ಮೂಲಕವೇ ಆಗಿರುವುದರಿಂದ ಪ್ರಾಕೃತ ದೇಹಗಳಲ್ಲಿದ್ದರೂ ತನ್ನಿಮಿತ್ತಕ ವಿಕಾರವು ಬರುವುದಿಲ್ಲ. ಆದ್ದರಿಂದ ವಿರೋಧವು ಬರುವುದಿಲ್ಲ.

**ತದುಕ್ತಮೇಕಾದಶ ತಾತ್ಪರ್ಯೇ । ಅನ್ಯಾಭಿಮತ ದೇಹೇಷು ಪ್ರವಿಷ್ಟಃ ಸರ್ವದಾ ಹರಿಃ । ನಾನ್ಯಾನಭಿಮತೋ ದೇಹೋ ವಿಷ್ಣೋರಸ್ತಿ ಕದಾಚನ । ಅನ್ಯಾಹಂಭಾವಯುಗ್ದೇಹ ಏವಾಸೌ ಹರಿರಾಸ್ಥಿತಃ ॥ ನತದನ್ಯೇಷು ದೇಹೇಷು ಕ್ವಚಿತ್ತಸ್ಯ ಪ್ರವೇಶನಮಿತಿ। ಸಪ್ತಮ ತಾತ್ಪರ್ಯೇಽಪಿ ಜೀವಾನಭಿಮತೇ ದೇಹೇ ನ ವಿಷ್ಣುರ್ಜೀವವತ್‌ಸ್ಥಿತಃ । ಅತಶ್ಚಾದೇಹ ಉದ್ದಿಷ್ಟಃ ಪರಮಾತ್ಮಾ ಸನಾತನ ಇತಿ । ಅತ ಏವಾನ್ಯಾನಭಿಮತ ಶರೀರ ಪ್ರವೇಶೋನ ಸೀತಾಯಾಃ। ಸ್ವಸೃಷ್ಟ ಪ್ರತಿಕೃತೌ ಶ್ವಾಂಶಸ್ಯ ಪ್ರವೇಶಾರ್ಥಂ ಶಕ್ರಸ್ಯ ಪ್ರವೇಶಿತತ್ವಾತ್। ತದುಕ್ತಂ ನಿರ್ಣಯೇ। ಸೃಷ್ಟ್ವಾತ್ಮನಃ ಪ್ರತಿಕೃತಿಂ ಪ್ರಯಯೌಚ ಶೀಘ್ರಂ ಕೈಲಾಸಮರ್ಚಿತಪದಾ ನ್ಯವಸತ್ ಶಿವಾಭ್ಯಾಂ । ತಸ್ಯಾಸ್ತು ತಾಂ ಪ್ರತಿಕೃತಿಂ ಪ್ರವಿವೇಶ ಶಕ್ರೋ ದೇವ್ಯಾಶ್ಚ ಸನ್ನಿಧಿಯುತಾಂ ವ್ಯವಹಾರ ಸಿದ್ಧ್ಯೈ ಇತಿ। ಲಕ್ಷ್ಮ್ಯಾಃ ಗುಣ ಪರಿಪೂರ್ಣತ್ವ ಸಿದ್ಧಯೇ ಪರಮಾತ್ಮವತ್ ಸರ್ವ ಶಬ್ದವಾಚ್ಯತ್ವಂ ಅತಿದಿಶತಿ ।**

ಪ.ಸಂ.—ತದ್ವತ್ ಸರ್ವಶಬ ವಾಚ್ಯಾ ।

ಏಕಾದಶ ತಾತ್ಪರ್ಯದಲ್ಲಿ ಶ್ರೀ ಹರಿಯು ಅನ್ಯ ಜೀವರುಗಳ ಅಭಿಮನ್ಯವಾದ ದೇಹಗಳಲ್ಲಿ ಸರ್ವದಾ ಪ್ರವಿಷ್ಟನೇ ಆಗಿರುತ್ತಾನೆ. ಅನಭಿಮತವಾದ ದೇಹಗಳಲ್ಲಿ ಪರಮಾತ್ಮನು ಇಂದಿಗೂ ವಿವಿಕ್ಷಿತನಲ್ಲ. ಬ್ರಹ್ಮಾದಿ ಜೀವರುಗಳಿಗೆ ಅಹಂಭಾವಯುಕ್ತವಾದ ದೇಹಗಳಲ್ಲಿಯೇ ಅವರ ಪ್ರವೇಶವು. ಅಭಿಮಾನರಹಿತ ದೇಹಗಳಲ್ಲಿ ಪರಮಾತ್ಮನ ಪ್ರವೇಶವಿರುವುದಿಲ್ಲ. ಹೀಗೆ ಹೇಳಿದೆ. ಸಪ್ತಮ ತಾತ್ಪರ್ಯದಲ್ಲಿಯೂ ಜೀವಅನಭಿಮತ ದೇಹದಲ್ಲಿ ವಿಷ್ಣುವು ಜೀವನಂತೆ ಇರುವುದಿಲ್ಲ. ಅಭಿಮಾನ ವಿಶಿಷ್ಟ ಸನಾತನನಾದ ಪರಮಾತ್ಮನ ಸ್ತುತಿಯು ಆದುದರಿಂದಲೇ ಸೀತಾದೇವಿಯು ತನ್ನ ಪ್ರತಿಕೃತಿಯನ್ನು (ಶರೀರಾಂತರವನ್ನು) ಸೃಷ್ಟಿ ಮಾಡಿ ತಾನು ಪ್ರವಿಷ್ಟಳಾಗಲಿಲ್ಲ. ತನ್ನ ಪ್ರವೇಶಾರ್ಥವಾಗಿ ಇಂದ್ರನನ್ನು ಮೊದಲು ಪ್ರವೇಶಗೊಳಿಸುವವಳಾದಳು. ಇದನ್ನು ಇನ್ನೂ ಸ್ಪಷ್ಟವಾಗಿ ನಿರ್ಣಯದಲ್ಲಿ ಹೀಗೆ ಹೇಳಿರುತ್ತದೆ. ಸೀತಾದೇವಿಯು ತನ್ನ ಪ್ರತಿ ಆಕೃತಿಯನ್ನು ಸೃಷ್ಟಿ ಮಾಡಿ, ಪಾರ್ವತೀ ಪರಮೇಶ್ವರರಿಂದ ಪೂಜಿತಳಾಗಿ ಕೈಲಾಸವನ್ನು ಸೇರಿದಳು. ಆ ದೇಹದಲ್ಲಿ ಸೀತಾದೇವಿಯು ವ್ಯವಹಾರಾರ್ಥವಾಗಿ ತನ್ನ ಸಾನ್ನಿಧ್ಯವನ್ನಿರಿಸಲು ಇಂದ್ರನು ಪ್ರವೇಶಿಸಿದನು. ಹೀಗೆ ಹೇಳಿರುತ್ತದೆ. ಆದ್ದರಿಂದ ಪ್ರಾಕೃತ ದೇಹಗಳಲ್ಲಿ ಜೀವರುಗಳೇ ಅಭಿಮಾನಿಗಳಾಗಿರುವುದರಿಂದ ಪ್ರಾಕೃತ ದೇಹದಲ್ಲಿದ್ದರೂ

ಲಕ್ಷ್ಮೀ ನಾರಾಯಣರಿಗೆ ಪ್ರಾಕೃತ ದೇಹವಿರುವಿಕೆ ಇಲ್ಲ. ತನ್ಮೂಲಕವಾದ ವಿಕಾರವೂ ಇರುವುದಿಲ್ಲ.

ಲಕ್ಷ್ಮೀದೇವಿಗೆ ಪರಮಾತ್ಮನಂತೆ ಯಥಾಯೋಗ್ಯ ಗುಣಪೂರ್ಣತೆಗೋಸ್ಕರ ವಾಗಿ ಸರ್ವ ಶಬ್ದವಾಚ್ಯತೆಯು ಇರುವುದೆಂದು ಹೇಳುತ್ತಾರೆ. ಪರಮಾತ್ಮನಂತೆ ಸರ್ವಶಬ್ದವಾಚ್ಯಳೂ ಆಗಿರುತ್ತಾಳೆ.

**ಪರಮಾತ್ಮನ್ಯೇವಪ್ರಸಿದ್ಧನಾರಾಯಣಾದಿಶಬ್ದಾನ್ವಿಹಾಯ ಸರ್ವ ಶಬ್ದ ವಾಚ್ಯೇತ್ಯರ್ಥಃ । ತದುಕ್ತಮೈತರೇಯ ಭಾಷ್ಯೇ । ಶ್ರೀರಪ್ಯಖಿಲ ಶಬ್ದೋಕ್ತಾ ವಿಷ್ಣುವನ್ನತುಮುಖ್ಯತಃ । ತಸ್ಮಾದಮಿತನಾಮಾನಾ ವಮಿತಾ ಮಿತ ನಾಮವತ್ । ಶ್ರೀಶ್ಚ ವಾಯುಶ್ಚ ವಿಷ್ಣುಸ್ತುಮುಖ್ಯೋಕ್ತೇ ರಮಿತಾಭಿಧ ಇತಿ । ಋಗ್ಭಾಷ್ಯೇಪಿ । ದೇವತಾ ಸರ್ವವಿದ್ಯಾನಾಂ ಸ್ವಯಂ ನಾರಾಯಣಃ ಪ್ರಭುಃ। ಋತೇತತ್ರ ಪ್ರಸಿದ್ಧಾಶ್ಚದೇವತಾ ಶ್ರೀಸ್ತಥಾತ್ರಚ । ಋತೇ ಪ್ರಸಿದ್ಧಾ ಬ್ರಹ್ಮೈವತತಸ್ತೇನ ಕ್ರಮೇಣ ಚ । ಪೂರ್ವ ಪ್ರಸಿದ್ಧ ವರ್ಜಂತು ಶಕ್ರಾಂತಾದೇವತಾಮತಾ ಇತಿ । ನನು ಲಕ್ಷ್ಮ್ಯಾಃ ಪೂರ್ಣ ಗುಣತ್ವೇ ಪರಮಾತ್ಮನಾತ್ಯಂತ ಸಾಮ್ಯಾಪತ್ತಿರಿತ್ಯಾಶಂಕ್ಯ ದೇಶಕಾಲಾಭ್ಯಾ ಮೇವಪೂರ್ಣತ್ವಂ ನತುಗುಣತ ಇತ್ಯಾಹ । ದೇಶಕಾಲಾಭ್ಯಾಮಿತಿ ।**

ಪ.ಸಂ.—ದೇಶಕಾಲಾಭ್ಯಾಮೇವ ಪರಮಾತ್ಮನಾ ಸಮವ್ಯಾಪ್ತಾ ।

ಪರಮಾತ್ಮನಲ್ಲಿ ಅತ್ಯಂತ ಪ್ರಸಿದ್ಧವಾದ ನಾರಾಯಣಾದಿ ಶಬ್ದಗಳ ವಿನಹ ಸರ್ವಶಬ್ದವಾಚ್ಯಳೆಂದು ಅರ್ಥ. ಐತರೇಯ ಭಾಷ್ಯದಲ್ಲಿ ಹೀಗೆ ಹೇಳಿರುತ್ತದೆ. ಅಖಿಲ ಶಬ್ದಗಳು ಲಕ್ಷ್ಮೀದೇವಿಯ ವಾಚಕಗಳೇ, ವಿಷ್ಣುವಿನಂತೆ ಮುಖ್ಯಗಳಾಗಿ ಅಲ್ಲ. ಆದ್ದರಿಂದಲೇ ಲಕ್ಷ್ಮೀ ದೇವಿಯು ಮಿತಾಮಿತ ಶಬ್ದವಾಚ್ಯಳು. ಲಕ್ಷ್ಮೀದೇವಿ, ವಾಯುದೇವರು, ವಿಷ್ಣು ಮೂವರೂ ಮುಖ್ಯಾಮುಖ್ಯ ಭೇದದಿಂದ ಸರ್ವ ಶಬ್ದ ವಾಚ್ಯರುಗಳೇ ಆಗಿರುತ್ತಾರೆ ಋಗ್ಭಾಷ್ಯದಲ್ಲಿಯೂ ಸಹ ದೇವತಾದಿ ಸರ್ವಶಬ್ದಗಳಿಗೆ ಸರ್ವಪ್ರಭುವಾದ ನಾರಾಯಣನೇ ಮಹಾಯೋಗ ರೂಢಿ ವೃತ್ತಿಗಳಿಂದ ಸ್ವಯಂ ವಾಚ್ಯನು ಅವನಲ್ಲೇ ಸುತರಾಂ ಪ್ರಸಿದ್ಧಗಳಾದ ಶಬ್ದಗಳ ವಿನಃ ಮಿಕ್ಕೆಲ್ಲ ಶಬ್ದಗಳಿಂದ ಕ್ರಮವಾಗಿ ಲಕ್ಷ್ಮೀ ವಾಯುಗಳು ವಾಚ್ಯರಾಗಿರುತ್ತಾರೆ. ಪೂರ್ವ ಪ್ರಸಿದ್ಧ ಶಬ್ದ ಗಳನ್ನು ಬಿಟ್ಟು ಯಥಾಯೋಗ್ಯವಾಗಿ ಇಂದ್ರಾಂತ ದೇವತೆಗಳು ವಾಚ್ಯರಾಗಿರುತ್ತಾರೆ.

ಹೀಗೆ ಲಕ್ಷ್ಮೀಗೂ ಸರ್ವಶಬ್ದ ವಾಚ್ಯತೆ ಬಂದರೆ ಸಕಲ ಗುಣ ಪೂರ್ಣತೆಯು ಬಂದು ಪರಮಾತ್ಮನಿಂದ ಅತ್ಯಂತ ಸಾಮ್ಯತೆ ಒದಗುತ್ತದಲ್ಲವೆ ಎಂದರೆ, ಹಾಗಲ್ಲ, ದೇಶ ಕಾಲಗಳಿಂದ ಸಾಮ್ಯಳಾದರೂ ಪೂರ್ಣಳಾದರೂ ಗುಣಗಳಿಂದ ಸಾಮ್ಯಳಾಗುವುದಿಲ್ಲ. ಅದನ್ನೇ ಹೇಳುತ್ತಾರೆ. ದೇಶಕಾಲಗಳಿಂದ ಲಕ್ಷ್ಮೀದೇವಿಯು ಪರಮಾತ್ಮನಿಂದ ಸಮ ವ್ಯಾಪ್ತಳೇ ಆಗಿರುತ್ತಾಳೆ

ಏವಕಾರೇಣ ಗುಣತೋ ವ್ಯಾಪ್ತತ್ವಂ ನಿರಾಚಷ್ಟೇ । ತದುಕ್ತಂಸೂತ್ರ ಭಾಷ್ಯೇ ಚ । ಓಂ ಸಮನಾಚಾಸ್ಯೃತ್ಯುಪಕ್ರಮಾದಮೃತತ್ವಂಚಾನುಪೋಷ್ಯ ಓಂ। ದೇಶತಃ ಕಾಲತಶ್ಚ ವ್ಯಾಪ್ತ್ಯಾಸಮೋ ನಾಪರಮ ಪುರುಷೋ ಯಸ್ಯಾ ಸ್ಸಾಸಮನೇತಿ । ಗೀತಾ ತಾತ್ಪರ್ಯೆಽಪಿ । ದೇಶತಃ ಕಾಲತಶ್ಚೈವ ಗುಣತ ಶ್ಚತ್ರಿಧಾತತಿಃ । ಸಾಸಮಸ್ತಾಹರೇರೇವನಹ್ಯನ್ಯೇ ಪೂರ್ಣಸದ್ಗುಣಾ ಇತಿ । ದಶಮ ತಾತ್ಪರ್ಯೇಽಪಿ । ದ್ವಾವೇವ ನಿತ್ಯಮುಕ್ತೌತುಪರಮಃ ಪ್ರಕೃತಿ ಸ್ತಥಾ । ದೇಶತಃ ಕಾಲತಶ್ಚೈವ ಸಮವ್ಯಾಪ್ತಾವುಭಾವಜೌ । ತಾಭ್ಯಾ ಮುಭಯಯೋಗಾಭ್ಯಾಂಜಾಯಂತೇ ಪುರುಷಃ ಪರಃ ಇತಿ ।

ಇಲ್ಲಿ ಏವಕಾರದಿಂದ ಲಕ್ಷ್ಮೀದೇವಿಗೆ ಪರಮಾತ್ಮನಿಂದ ಗುಣದಿಂದ ವ್ಯಾಪ್ತತ್ವವು (ಪೂರ್ಣತೆಯು) ನಿರಾಕೃತವಾಗಿದೆ ಇದನ್ನೇ ಸೂತ್ರಭಾಷ್ಯದಲ್ಲಿ ಹೇಳಿರುತ್ತಾರೆ. "ಓಂ ಸಮನಾಚಾಸ್ಯೃತ್ಯುಪಕ್ರಮಾದಮೃತತ್ವಂ ಚಾನುಪೋಷ್ಯ ಓಂ" ಎಂಬ ಸೂತ್ರಾ ಧಿಕರಣದಲ್ಲಿ ಲಕ್ಷ್ಮೀದೇವಿಯು ದೇಶಕಾಲಗಳಿಂದ ಸಮಳೇ ಪರಮ ಪುರುಷನಿಂದ, ಗುಣಗಳಿಂದ ಸಮಳಲ್ಲವು ಎಂದು, ಗೀತಾ ತಾತ್ಪರ್ಯದಲ್ಲಿಯೂ ವ್ಯಾಪ್ತಿಯು ದೇಶ ಕಾಲ ಗುಣ ಹೀಗೆ ಮೂರು ವಿಧವಾದುದು. ಈ ಮೂರು ವಿಧವಾದ ವ್ಯಾಪ್ತಿಯು ಹರಿಯಲ್ಲಿಯೇ, ಎರಡು ವ್ಯಾಪ್ತಿಯೇ ಲಕ್ಷ್ಮೀದೇವಿಯಲ್ಲಿ ಎಂದು ಹೇಳಿದೆ. ದಶಮ ತಾತ್ಪರ್ಯದಲ್ಲಿಯೂ ಸಹ ಜಗತ್ತಿನಲ್ಲಿ ಪರಮನು ಪ್ರಕೃತಿಯು (ಲಕ್ಷ್ಮೀ ನಾರಾಯಣರು) ಈರ್ವರೇ ನಿತ್ಯಮುಕ್ತರು. ದೇಶಕಾಲಗಳಿಂದ ಸಮ ವ್ಯಾಪ್ತರು ಜನ್ಮ ರಹಿತರು. ಇವರೀರ್ವರ ಯೋಗದಿಂದಲೇ ಪುರುಷ ವಾಚ್ಯ ಚತುರ್ಮುಖ ಬ್ರಹ್ಮನು ಹುಟ್ಟುತ್ತಾನೆ.

ನನ್ವೇವಂ ಪರಮಾತ್ಮನೋ ಮಹತೋಮಹತ್ವಂ ನಸ್ಯಾತ್ । ಲಕ್ಷ್ಮ್ಯಾಃ ದೇಶಕಾಲಾಭ್ಯಾಂ ಪರಮಾತ್ಮನಾ ಸಮಪರಿಮಾಣತ್ವೇನ ತದಪೇಕ್ಷಯಾ ಮಹತ್ಪರಿಮಾಣಸ್ಯ ಪರಮಾತ್ಮನಿ ಅಸಂಭವಾತ್ । ತಥಾಚ ಮಹತೋಮಹೀಯಾನಿತಿ ಶ್ರುತಿ ವಿರೋಧಃ । ನ ಚ ಗುಣೈರೇವ ಮಹತೋಮಹತ್ವಂ ಅಸ್ತ್ವಿತಿವಾಚ್ಯಂ । ತರ್ಹ್ಯಣೋರಣೀಯಾನಿತ್ಯ ತ್ರಾಪಿ ಗುಣತಏವಾಲ್ಪತ್ವ ಪ್ರಸಂಗಾತ್ । ಅತೋ ಅಣೋರಣುತ್ವಂ ಮಹತೋ ಮಹತ್ವಂ ಚ ಪರಿಮಾಣತ ಏವೇತಿ ವಾಚ್ಯಂ । ತತ್ಕಥಂ ಪರ-ಮಾತ್ಮನ ಇತಿ ಚೇದುಚ್ಯತೇ । ಪರಮಾತ್ಮನೋ ಲಕ್ಷ್ಮ್ಯಾವ್ಯಾಕೃತಾಕಾಶಾ-ಪೇಕ್ಷಯಾಪಿ ಮಹತ್ವಮಸ್ತ್ಯೇವ । ನ ಚ ಲಕ್ಷ್ಮ್ಯಾಃ ಸಮವ್ಯಾಪ್ತತ್ವ ವಿರೋಧಃ । ಅವ್ಯಾಕೃತಾಕಾಶ ವ್ಯಾಪ್ತೇಃ ಸಮತ್ವೇಽಪಿ ತತೋಧಿಕ ಮಹತ್ವ ಸ್ಯ ಸ್ವಸ್ಮಿನ್ನೇವ ಸತ್ವಾತ್ । ಗೇಹವ್ಯಾಪ್ತ ಪ್ರಕಾಶವತೋಽಪಿ ದೀಪಸ್ಯಘಟ ಪ್ರಕ್ಷೇಪೇಣ ಅಲ್ಪ ಪ್ರಕಾಶೇ ಸ್ವರೂಪೇ ವ್ಯಾಪ್ತತ್ವವತ್।ತಥಾ ಹಿ ಶ್ರುತಿಃ।

**ಕಸ್ಮಿನ್ ಭಗವಃ ಪ್ರತಿಷ್ಠಿತ ಇತಿ । ಸ್ವೇಮಹಿಮ್ನೀತಿ ಹೋವಾಚೇತಿ । ತೈತ್ತಿರೀಯ ಭಾಷ್ಯೇಪಿ । ಸ್ವವ್ಯಾಪ್ತೇಚ ಜಗದ್ವ್ಯಾಪ್ತೇ ನಿತ್ಯೈಶ್ವರ್ಯಾತ್ ಸ ಈಶ್ವರಃ ಇತಿ । ಇತಿ ಲಕ್ಷ್ಮೀ ಪ್ರಕರಣಂ ।**

ದೇಶಕಾಲಗಳಿಂದ ಲಕ್ಷ್ಮೀ ದೇವಿಯು ಸಮಳಾದರೇ ಪರಮಾತ್ಮಗೆ ಮಹತೋ ಮಹತ್ವ ಪರಿಮಾಣವು ಇಲ್ಲದೇ ಹೋಗಲಿ, ಹಾಗಾದರೇ "ಮಹತೋಮಹೀಯಾನ್" ಎಂಬ ಶ್ರುತಿ ವಿರೋಧವು ಬರುತ್ತದೆ. ಗುಣಗಳಿಂದ ಮಹತ್ವವನ್ನು ಹೇಳುತ್ತೇವೆ ಎಂದರೇ ಯುಕ್ತವಲ್ಲ. ಏಕೆಂದರೇ "ಅಣೋರಣೀಯಾನ್" ಎಂಬ ಶ್ರುತಿಯಲ್ಲಿ ಗುಣಗಳಿಂದಲೂ ಅಲ್ಪತೆ ಹೇಳುವ ಪ್ರಸಂಗವು ಒದಗುತ್ತದೆ. ಆದುದರಿಂದ ಶ್ರುತ್ಯುಕ್ತಗಳಾದ ಅಣು ಮಹತ್ ಶಬ್ದಗಳಿಗೆ ಪರಿಮಾಣಾರ್ಥಕವೇ ಹೇಳಬೇಕಾಗುವುದು, ಎಂದ ಮೇಲೆ ಪರಮಾತ್ಮನಿಗೆ ಮಹತೋ ಮಹತ್ವವು ಹೇಗೆ ಕೂಡುತ್ತದೆ ಎಂದರೆ ತಿಳಿಸುತ್ತಾರೆ. ಪರಮಾತ್ಮನಿಗೆ ಲಕ್ಷ್ಮೀ ಅವ್ಯಾಕೃತಾಕಾಶಗಳಗಿಂತಲೂ ಮಹತ್ವವು ಇದ್ದೇ ಇರುತ್ತದೆ. ಇಷ್ಟರಿಂದ ಲಕ್ಷ್ಮೀ ದೇವಿಯ ಸಮವ್ಯಾಪ್ತತ್ವ ವಿರೋಧವು ಬರುವುದಿಲ್ಲ. ಅವ್ಯಾಕೃತಾಕಾಶ ಸಮತ್ವವಿದ್ದರೂ ಅವಕ್ಕೂ ಅಧಿಕವಾದ ಮಹತ್ವವು ತನ್ನಲ್ಲೇ ಇರುವುದರಿಂದ.

ಹೇಗೆಂದರೆ ಮನೆಯಲ್ಲಿ ತುಂಬಿದ ದೀಪಪ್ರಕಾಶವು ಒಂದು ಪಾತ್ರೆಯಲ್ಲಿಟ್ಟರೆ ತನ್ನ ಪ್ರಕಾಶವು ತನ್ನಲ್ಲಿಯೇ ವ್ಯಾಪ್ತವಾಗಿ ಇದ್ದೇ ಇರುತ್ತದೆ. ಹಾಗೆಯೇ ಪರಮಾತ್ಮನ ಪರಮಾಣು ವ್ಯಾಪ್ತಿಯು, ಹೀಗೆ ಐತರೇಯ ಶ್ರುತಿಯಲ್ಲಿ ಪರಮಾತ್ಮನು ಎಲ್ಲಿ ಪ್ರತಿಷ್ಠಿತನಾಗಿದ್ದಾನೆ ಎಂಬ ಪ್ರಶ್ನೆಗೆ ತನ್ನ ಮಾಹಾತ್ಮೆಯಲ್ಲಿಯೇ ಪ್ರತಿಷ್ಠಿತನಾಗಿರುತ್ತಾನೆ ಎಂಬ ಉತ್ತರವು ಹೇಳಿರುತ್ತದೆ. ಹಾಗೂ ತೈತಿರೀಯ ಭಾಷ್ಯದಲ್ಲಿಯೂ ಹೌದು ನಿತ್ಯೈಶ್ವರ್ಯ ಸ್ವರೂಪನಾದವನು ಈಶ್ವರನು ಹೀಗೆ ಹೇಳಿರುತ್ತದೆ.

ಹೀಗೆ "ಲಕ್ಷ್ಮೀ ಪ್ರಕರಣವು" ಕನ್ನಡಾನುವಾದದೊಂದಿಗೆ ಸಮಾಪ್ತಗೊಂಡಿತು.

# ೧೫. ಜೀವ ಪ್ರಕರಣ

ಇದಾನೀಂ ಜೀವ ಸ್ವರೂಪಂ ನಿರೂಪಯತಿ ।

ಪ.ಸಂ. —ಅಜ್ಞಾನಾದಿದೋಷಯುಕ್ತಾಃ ಸಂಸಾರಿಣೋ ಜೀವಾಃ ॥

**ಆದಿಶಬ್ದೇನ ದುಃಖ, ಭಯ, ಮೋಹಾದಿ ಪರಿಗ್ರಹಃ । ತಥಾಚ ಅಜ್ಞಾನಾದಿ ದೋಷಯುಕ್ತತ್ವಂ ಏಕಂ ಲಕ್ಷಣಂ । ಸಂಸಾರಿತ್ವಮಪರಂ ಲಕ್ಷಣಂ । ನನು ಬ್ರಹ್ಮವಾಯ್ವೋಃ ಕಥಂ ಅಜ್ಞಾನಾದಿ ದೋಷಃ । ತಸ್ಮಾದೇಕೋ ವಾಯುರೇವ ಧರ್ಮೇ ಭಾಗವತೇ ಸ್ಥಿತಃ । ಲಕ್ಷ್ಮ್ಯೇಃ ಸರಸ್ವತೀ ಚೇತಿ ಪರಶುಕ್ಲತ್ರಯಂ ಸ್ಮೃತಂ । ಭೀಮಃ ಸಮಸ್ತಂ ಪ್ರತಿಭಾ ಬಲೇನ ಜಾನನ್ ಸ್ನೇಹಂ ತ್ವದ್ವಿತೀಯಂ ಕನಿಷ್ಟಃ । ಇತಿ ನಿರ್ಣಯ ವಿರೋಧಾತ್ । ತಥಾ ಏವಂ ಪ್ರಳಯಕಾಲೇಪಿ ಪ್ರತಿಭಾತ ಪರಾವರಃ । ಮುಖ್ಯ ವಾಯು ನಿತ್ಯಸಮಃ । ಇತಿ ಅನುವ್ಯಾಖ್ಯಾನ ವಿರೋಧಾತ್ । ಅತಿರೋಹಿತ ವಿಜ್ಞಾನಾತ್ ವಾಯುರಪ್ಯಮೃತಃ ಸ್ಮೃತಃ। ಇತಿ ಈಶಾವಾಸ್ಯ ಭಾಷ್ಯ ವಿರೋಧಾತ್ । ವಿರಿಂಚೇತರೇಷಾಂ ತಿರೋಹಿತ ಲಾಭೋವೇತಿ ಟೀಕಾವಾಕ್ಯ ವಿರೋಧಾತ್ । ಅಜ್ಞಾನಾಭಿಭವಾತ್ ಸ್ಪೃಷ್ಟೌ ವಾಯು ನಾರಾಯಣಶ್ಚ ತೌ। ತದನ್ಯೇ ಚೇತನಾಃ ಸರ್ವೇ ಪ್ರಾಣಾಶ್ಚ ಆತ್ಮಾನಏವಚ ಅಜ್ಞಾನಾಭಿಭವ ಸ್ಪೃಷ್ಟಾಃ ತಸ್ಮಾತ್ತೇ ಹ್ಯಧಮಾಸ್ಮೃತಾಃ। ಇತಿ ಐತರೇಯ ಭಾಷ್ಯ ವಿರೋಧಾತ್ ।**

ಆದಿ ಪದದಿಂದ ದುಃಖ ಭಯ ಮೋಹಾದಿಗಳನ್ನು ಗ್ರಹಿಸಬೇಕು. ಒಟ್ಟಿನಲ್ಲಿ ಅಜ್ಞಾನಾದಿ ದೋಷಯುಕ್ತತೆಯೇ ಜೀವ ಸಾಮಾನ್ಯ ಲಕ್ಷಣವು ಮತ್ತು ಸಂಸಾರಿತ್ವವೇ ಎರಡನೆಯ ಲಕ್ಷಣವು ಎಂದಂತಾಯಿತು. ಹೀಗೆಂದರೇ ಬ್ರಹ್ಮವಾಯುಗಳಿಗೆ ಅಜ್ಞಾನಾದಿ ದೋಷಗಳು ಇಲ್ಲವಾದ್ದರಿಂದ ಈ ಲಕ್ಷಣವು ಅವ್ಯಾಪ್ತವಾಯಿತು. ವಾಯುದೇವರೊಬ್ಬರೇ ಸದಾ ಸರ್ವರೀತಿಯಿಂದಲೂ ಶುದ್ಧ ಭಾಗವತ ಧರ್ಮದಲ್ಲಿ ಇರುವರೆಂದು ಲಕ್ಷ್ಮೀ ಸರಸ್ವತೀ ಇವರೀರ್ವರೂ ಪರಶುಕ್ಲತ್ರಯರೆಂದೂ ಸ್ಮೃತವಾಗಿರುವುದರಿಂದ ನಿರ್ಣಯದಲ್ಲಿ ಭೀಮಸೇನನು ತನ್ನ ಬುದ್ಧಿ ಪ್ರತಿಭೆಯಿಂದ ಸರ್ವವನ್ನೂ ತಿಳಿದವನಾಗಿ ಸ್ನೇಹವು ಕನಿಷ್ಟವೆಂದು ತ್ಯಜಿಸಿದವನಾಗಿದ್ದನು. ಎಂಬ ವಾಕ್ಯ ವಿರೋಧವು ಮತ್ತು ವಾಯುದೇವರು ಪ್ರಳಯಕಾಲದಲ್ಲೂ ಹೊಳೆಯಲ್ಪಟ್ಟ ಸಕಲ ವಿಷಯಕ ಜ್ಞಾನವುಳ್ಳವರೆಂದು ಮತ್ತು ಅನುವ್ಯಾಖ್ಯಾನದಲ್ಲಿ ಮುಖ್ಯ ವಾಯುವು ನಿತ್ಯಸಮನೆಂದೂ ಹೇಳುವ ಪ್ರಮಾಣಗಳ ವಿರೋಧವು ಬರುತ್ತದೆ. ಈಶಾವಾಸ

ಭಾಷ್ಯದಲ್ಲಿ ತಿರೋಧಾನವಿಲ್ಲದ ವಿಜ್ಞಾನವುಳ್ಳವನಾದ್ದರಿಂದ ವಾಯು ದೇವರು ಮುಕ್ತಪ್ರಾಯರೇ ಎಂದು ಹೇಳಿರುವುದರಿಂದ, ಅದೇ ಟೀಕೆಯಲ್ಲಿ ಬ್ರಹ್ಮೇತರ ದೇವತೆಗಳಿಗೆ ತಿರೋಹಿತಜ್ಞಾನ ಅಭಿಭವವು(ಪ್ರಕಾಶವು) ಅಜ್ಞಾನದ ಕತ್ತಲೆಯಿಂದ ಅಸ್ಪೃಷ್ಟರೇ ಆದವರೆಂದರೇ ಬ್ರಹ್ಮ ನಾರಾಯಣರೀರ್ವರೇ. ಈ ಈರ್ವರಿಂದ ಭಿನ್ನರಾದ ಸರ್ವಜೀವರೂ ಅಜ್ಞಾನ ಕತ್ತಲೆಗೆ ಒಳಪಟ್ಟವರಾದ್ದರಿಂದ ಅಧಮರೇ ಆಗಿರುವರು. ಹೀಗೆ ಹೇಳುವ ಐತರೇಯ ಭಾಷ್ಯ ವಿರೋಧವು ಬರುವುದರಿಂದ ಜೀವ ಲಕ್ಷಣವು ಬ್ರಹ್ಮ ವಾಯುಗಳಲ್ಲಿ ಅವ್ಯಾಪ್ತಗಳೇ ಆಗಿರುತ್ತದೆ.

ಬ್ರಹ್ಮಾ ತು ನಿರಭಿಮಾನಾಚ್ಛರೀರ್ಯಪ್ಯಶರೀರವಾನ್। ಅನಾದಿ ಕಾಲತಸ್ಸರ್ವ ದೋಷಹೀನೌ ಗುಣಾಧಿಕೌ। ಇತ್ಯಾದಿ ಬೃಹದ್ಭಾಷ್ಯ ವಿರೋಧಾತ್ ಕಿಂ ಚ ಅಸುರಾವೇಶ ನಿಬಂಧನಾಃ ಸರ್ವೇ ದೋಷಾಃ। ಬ್ರಹ್ಮವಾಯ್ವೋಸ್ತು ನಾಸುರಾವೇಶಃ। ತದುಕ್ತಮೇಕಾದಶ ತಾತ್ಪರ್ಯೇ। ದೇವಾನಾಂ ಪುಣ್ಯಪಾಪಾಭ್ಯಾಂ ಸುಖಮೇವೋತ್ತರೋತ್ತರಂ। ತೇಷಾಂ ದುಃಖಾದಿಕಂ ಕಿಂಚಿತ್ ಅಸುರಾವೇಶತೋ ಭವೇತ್। ಪ್ರಾಣಸ್ಯ ನಾಸುರಾವೇಶಃ ಅಖಣಾಶ್ಮಸಮೋಹಿ ಸ ಇತಿ। ತಥಾ ದಶಮ ತಾತ್ಪರ್ಯೇ। ಅತ್ಯಲ್ಪಸ್ತು ಅಸುರಾವೇಶೋ ದೇವಾನಾಂ ಚ ಭವಿಷ್ಯತಿ। ಪ್ರಾಣಮೇಕಂ ವಿನಾಸೌಹಿ ಹ್ಯಾಖಣಾಶ್ಮಸಮಃಸ್ಮೃತಃ ಇತಿ। ತಥಾ ಛಾಂದೋಗ್ಯ ಭಾಷ್ಯೇಪಿ। ಯದಾ ವಿದಧ್ವಸುಃ ಪ್ರಾಣಂ ವಿಧ್ವಸ್ತಾಸ್ತೇ ತಥಾಸುರಾಃ। ಅಖನ್ಯಾಸ್ಥಾನಮೇವಾಪ್ಯಲೋಷ್ಟೋ ವಿಧ್ವಂಸತೇ ಯಥೇತಿ। ಬೃಹದ್ಭಾಷ್ಯೇಪಿ ದೈತ್ಯಾಸ್ತಂ ವೇದ್ಧುಮೀಪ್ಸಂತೇ ಧ್ವಸ್ತಾನೇಶುಶ್ಚ ಸರ್ವಶಃ। ಪಾಂಶುಪಿಂಡೋ ಯಥಾ ವಜ್ರಶಿಲಾಂ ಪ್ರಾಪ್ಯೈವ ನಶ್ಯತಿ। ತಸ್ಮಾದಖಂಡ ಶಕ್ತಿಸ್ಸಮುಖ್ಯವಾಯುರುದಾಹೃತಃ ಇತಿ। ತಥೈತರೇಯ ಭಾಷ್ಯೇಪಿ। ಪ್ರಾಣಸ್ಯ ನಾಸುರಾವೇಶ ಅಖಣಾಸ್ಮಸಮೋಹಿಸ ಇತಿ। ತಸ್ಮಾದಜ್ಞಾನಾದಿ ದೋಷಯುಕ್ತ ಲಕ್ಷಣಂ ಬ್ರಹ್ಮವಾಯ್ವೋರವ್ಯಾಪ್ತಮಿತಿ ಚೇತ್ ಉಚ್ಯತೇ।

ಚತುರ್ಮುಖ ಬ್ರಹ್ಮದೇವರು ದೇಹಾಭಿಮಾನರಹಿತರಾದ್ದರಿಂದ ದೇಹ ಉಳ್ಳವರಾದರೂ, ದೇಹರಹಿತರೇ ಎನಿಸುತ್ತಾರೆ. ಬ್ರಹ್ಮವಾಯುಗಳು ಅನಾದಿಕಾಲದಿಂದಲೂ ದೋಷರಹಿತರೂ, ಗುಣಗಳಿಂದ ಅಧಿಕರೂ ಹೌದು ಇತ್ಯಾದಿ ಬೃಹದ್ಭಾಷ್ಯ ವಿರೋಧ ಬರುವುದರಿಂದಲೂ ಮತ್ತು ಅಸುರಾವೇಶ ನಿಮಿತ್ತವಾದ ದೋಷಗಳು, ವಾಯು ಬ್ರಹ್ಮರಿಗೆ ಅಸುರಾವೇಶವೇ ಇಲ್ಲವಾದ್ದರಿಂದ ದೋಷಪ್ರಸಕ್ತಿಯೇ ಇರುವುದಿಲ್ಲ, ದೇವತೆಗಳಿಗೆ ಕ್ರಮವಾಗಿ ಪುಣ್ಯಪಾಪಗಳಿಂದಲೇ ಸುಖಾದಿ ಭೋಗವು, ಅವರಿಗೆ

ಅಸುರಾವೇಶದಿಂದಲೇ ಅಧಿಕ ದುಃಖವು ಆಗುತ್ತದೆ. ಪ್ರಾಣದೇವರಿಗೆ ಅಸುರಾವೇಶ ವಿರುವುದಿಲ್ಲ ಅಖಣಾಶ್ಮಸಮರಾದ್ದರಿಂದ—ಹೀಗೆ ಏಕಾದಶ ತಾತ್ಪರ್ಯ ಹೇಳಿರು ವುದರಿಂದ.

ಇದೇ ವಿಷಯವೇ ದಶಮ ತಾತ್ಪರ್ಯದಲ್ಲಿಯೂ, ಎಲ್ಲಾ ದೇವತೆಗಳಿಗೂ ಸ್ವಲ್ಪವಾಗಿ ಅಸುರಾವೇಶ ಇರುತ್ತದೆ. ವಾಯುದೇವರು ಅಖಣಾಶ್ಮರಾದ್ದರಿಂದ ಎಂದಿಗೂ ಹೇಗೂ ಅಲ್ಪವೂ ಅಸುರಾವೇಶವಿರುವುದಿಲ್ಲ—ಹೀಗೆ ಹೇಳಿರುತ್ತದೆ. ಅಸುರರೆಲ್ಲರೂ ಪ್ರಾಣನನ್ನು ಪ್ರವೇಶಿಸಲು (ಮನ ಕೆಡಿಸಲು) ಬಹು ಪ್ರಯತ್ನ ಮಾಡುವವರಾಗಿ ಅವರು ಭ್ರಷ್ಟರಾದರು. ಪ್ರಾಣನು ಅಖಣಾಶ್ಮ(ದೃಢ ಭಕ್ತಿಯಿಂದ ಯಾರಿಗೂ ಮಣಿಯದವ) ಆದ್ದರಿಂದ ಹೀಗೆ ಛಾಂದೋಗ್ಯ ಭಾಷ್ಯದಲ್ಲಿ ಹೇಳಿದೆ. ಇನ್ನು ಬೃಹದಾರಣ್ಯಭಾಷ್ಯದಲ್ಲಿಯೂ. ದೈತ್ಯರೆಲ್ಲರೂ ಪ್ರಾಣನನ್ನು ಬಾಧಿಸಲು ಪ್ರಯತ್ನಿಸಿದರು. ಆದರೆ, ಅವರೇ ಮಣ್ಣು ಹೆಂಟೆಮೇಲೆ ವಜ್ರಾಯುಧಘಾತವಾದರೆ ಹೇಗೆ ಪುಡಿ ಆಗಬೇಕೋ ಹಾಗೆ ನಷ್ಟರೇ ಆದರು ಎಂದು ಹೇಳಿರುತ್ತದೆ. ಆದುದರಿಂದ ವಾಯುದೇವರು ಅಖಂಡ ಶಕ್ತಿ ಪೂರ್ಣರೂ, ದೋಷಗಳಿಂದ ರಹಿತರೂ ಆಗಿರುತ್ತಾರೆ. ಹಾಗೆ ಐತರೇಯ ಭಾಷ್ಯದಲ್ಲಿಯೂ, ಅಖಣಾಶ್ಮರಾದ್ದರಿಂದ ವಾಯುದೇವರಿಗೆ ಅಸುರಾವೇಶವಿಲ್ಲ ಅಜ್ಞಾನಾದಿ ದೋಷಗಳೂ ಇಲ್ಲವೆಂದು ಹೇಳಿದೆ. ಹೀಗೆ ಅನೇಕ ಪ್ರಮಾಣಗಳಿರುವುದರಿಂದ ಪರಶುಕ್ಲತ್ರಯರಲ್ಲೊಂದಾಗಿರುವುದರಿಂದ, ಬ್ರಹ್ಮವಾಯು ಸರಸ್ವತೀ ಭಾರತೀ ಇವರಲ್ಲಿ ಅಜ್ಞಾನಾದಿ ದೋಷ ಯುಕ್ತತೆ ಎಂಬ ಜೀವಲಕ್ಷಣವು ಅವ್ಯಾಪ್ತವಾಯಿತು ಎಂದರೆ ಹೇಳುತ್ತಾರೆ.

**ಅಜ್ಞಾನಂ ಚ ಚತುರ್ವಾರಂ ದ್ವಿವಾರಂ ಭಯಮೇವ ಚ। ಶೋಕೋ ಹಿತಾವಾನ್ನಾನ್ಯತ್ರ ಕದಾಚಿತ್ ಬ್ರಹ್ಮಣೋ ಭವೇತ್ । ಯತ್ರ ವಾಯೂದ ಪದ್ಮಾದಿ ರೂಪೇಣ ಪ್ರಕೃತಿಃ ಸ್ಥಿತಾ। ಏಕಸ್ತತ್ರಾಬಿಭೇದ್ ಬ್ರಹ್ಮವಿಚಾರ್ಯ ಭಯಮತ್ಯಗಾತ್ । ಕಾಲೋಽಂತಕಃ ಪ್ರಧಾನಂ ಚ ಮೃತ್ಯುರವ್ಯಕ್ತ ಮಿತ್ಯಪಿ। ಉಚ್ಯತೇ ಪ್ರಕೃತಿಃ ಸೂಕ್ಷ್ಮಾ ಶ್ರೀರ್ಭೂರ್ದುರ್ಗೇತಿನಾಮಭಿಃ । ಸೈವ ಬ್ರಹ್ಮಾದಿ ಭಯದಾ ವಿಷ್ಣೋಶ್ಚ ವಶವರ್ತಿನೀತಿ । ಷಷ್ಠ ತಾತ್ಪರ್ಯೇಽ ಜ್ಞಾನಭಯಾದೇರುಕ್ತತ್ವಾತ್ । ತಥೈತರೇಯಭಾಷ್ಯೇಽಪಿ। ಸುಪ್ತಾಸ್ತತ್ರ ಯತೋ ಜೀವಾಃ ಸರ್ವೇ ಬ್ರಹ್ಮ ಶಿವಾದಿಕಾಃ । ಅಸುಪ್ತಾಃ ಶ್ರೀಶ್ಚ ಮುಕ್ತಾ ಶ್ಚೇತ್ಯಜ್ಞಾನ ಕಾರ್ಯಸ್ಯ ಸ್ವಾಪಸ್ಯೋಕ್ತೇಃ ।**

ಬ್ರಹ್ಮದೇವರ ವಿಷಯದಲ್ಲಿ ‘ಅಜ್ಞಾನಂ ತು ಚತುರ್ವಾರಂ ದ್ವಿವಾರಂ ಭಯ ಮೇವ ಚ’ ಎಂಬ ಪ್ರಮಾಣಾನುಸಾರವಾಗಿ ಬ್ರಹ್ಮದೇವರಲ್ಲಿ ಸ್ವಲ್ಪವೂ ಶೋಕ ವಿರುವುದಿಲ್ಲ ಆದರೆ ಭಯವು ಇದೆ ಎಂದಿರುವುದರಿಂದ.

ಪ್ರಕೃತಿ(ಲಕ್ಷ್ಮೀದೇವಿ) ಎಲ್ಲಿ ಗಾಳಿ, ನೀರು, ಪದ್ಮರೂಪದಿಂದ ಇದ್ದಾಳೋ, ಅಲ್ಲಿ ಆಗ ಬ್ರಹ್ಮದೇವರು ಹುಟ್ಟಿ ಆ ಪ್ರಳಯಕಾಲದ ಆಂದೋಲನದಿಂದ ಭಯಗೊಂಡರು. ಪುನಃ ವಿಚಾರ ಮಾಡಿಕೊಂಡು ಭಯವನ್ನು ನಿವಾರಿಸಿಕೊಂಡರು ಎಂತಲೂ ಪ್ರಕೃತಿ ಶಬ್ದವಾಚ್ಯಳಾದ ಲಕ್ಷ್ಮೀದೇವಿಯೇ ಕಾಲ, ಅಂತಕ, ಪ್ರಧಾನ, ಮೃತ್ಯು, ಅವ್ಯಕ್ತ ಇತ್ಯಾದಿ ಶಬ್ದವಾಚ್ಯಳಾಗಿ ಸೂಕ್ಷ್ಮರೂಪದಿಂದ ಬ್ರಹ್ಮಾದಿಗಳಿಗೆ ಭಯ ಕೊಡುವವಳಾಗಿರುತ್ತಾಳೆ. ಅವಳಿಗೆ ಶ್ರೀ, ಭೂಃ ದುರ್ಗಾದಿ ನಾಮಗಳೆಂದು ಷಷ್ಠ ತಾತ್ಪರ್ಯದಲ್ಲಿ ಹೇಳಿರುವುದರಿಂದ ಬ್ರಹ್ಮ ದೇವರಿಗೆ ಭಯ ಉಂಟೆಂದು ಹೇಳಿರುವುದರಿಂದ ಲಕ್ಷಣವು ಅವ್ಯಾಪ್ತವಾಗುವುದಿಲ್ಲ. ಹಾಗೇ ಐತರೇಯ ಭಾಷ್ಯದಲ್ಲಿಯೂ ಬ್ರಹ್ಮಾದಿ ಸರ್ವಜೀವರೂ ನಿದ್ರಾಉಳ್ಳವರು, ಲಕ್ಷ್ಮೀದೇವಿ ಮುಕ್ತರು ಮಾತ್ರವೇ ನಿದ್ರಾರಹಿತರು—ಹೀಗೆ ಹೇಳಿರುವುದರಿಂದ ಅಜ್ಞಾನ ಕಾರ್ಯವಾದ ಸುಷುಪ್ತಿ ಬ್ರಹ್ಮಾದಿಗಳಿಗೆ ಹೇಳಿರುವುದರಿಂದ ಅಜ್ಞಾನಾದಿ ದೋಷ ವಿಶಿಷ್ಟತೆರೂಪವಾದ ಜೀವ ಸಾಮಾನ್ಯ ಲಕ್ಷಣವು ಬ್ರಹ್ಮಾದಿಗಳಲ್ಲಿ ಅವ್ಯಾಪ್ತವಾಗುವುದಿಲ್ಲ.

ತಥಾ ಇಚ್ಛತೋ ವಿಷ್ಣುಯಜನಂ ಬ್ರಹ್ಮಣಃ ಸಾಧನಾಸ್ಮೃತೇಃ । ಶ್ರಮಾತ್ತಾಪಾಚ್ಚ ಸಂದೇಹಂ ತ್ಯಕ್ತುಮಿಚ್ಛಾ ಬಭೂವ ಹ । ಬ್ರಹ್ಮಣೋ ಭಾಣಿತಿವಚೋನಿಃಸೃತಂ ಭಯತೋ ಮುಖಾದಿತಿ ಬೃಹದ್ಭಾಷ್ಯೇಽಜ್ಞಾನ ಭಯಾದ್ಯುಕ್ತೇಃ। ಸರ್ವೇ ವಿಮೋಹಿತಧಿಯಃ ತವ ಮಾಯಯೈವ ಬ್ರಹ್ಮಾದಯಸ್ತನುಭೃತೋ ಬಹಿರರ್ಥಭಾವಾಃ ಇತ್ಯೇಕಾದಶಸ್ಕಂಧ ಭಾಗವತೇ ಮೋಹಾದ್ಯುಕ್ತೇಃ । ದುಃಖಸ್ಪೃಷ್ಟಂ ತದಸ್ಪೃಷ್ಟಮಿತಿ ದ್ವೇಧೈವ ಚೇತನಂ। ನಿತ್ಯಾದುಃಖಾರಮಾನ್ಯೇತು ಸ್ಪೃಷ್ಟದುಃಖಾಸ್ಸಮಸ್ತಶಃ ಇತಿ ತತ್ತ್ವ ಸಂಖ್ಯಾನೇ ದುಃಖಿತ್ವೋಕ್ತೇಃ ॥

ಬ್ರಹ್ಮದೇವರು ಒಮ್ಮೆ ವಿಷ್ಣು ಆರಾಧನಾ ಹೆಚ್ಚಾಗಿ ಮಾಡಲು ಇಚ್ಛಿಸಿದರು. ಸಾಧನವು ಸ್ಮೃತಿಗೆ ಬರಲಿಲ್ಲ. ಆದಕಾರಣ ಶ್ರಮದಿಂದಲೂ, ತಾಪದಿಂದಲೂ, ತನ್ನ ದೇಹವನ್ನೇ ಬಿಡಲು ಇಚ್ಛಿಸಿದವರಾಗಿ ಮುಖದಿಂದ ಗಟ್ಟಿಯಾಗಿ ಚೀರಿದನು. ಜುಗುಪ್ಸೆಯಿಂದ ಹೀಗೆ ಬೃಹದ್ಭಾಷ್ಯದಲ್ಲಿ ಅಜ್ಞಾನ ಭಯಾದಿಗಳು ಉಕ್ತವಾಗಿರುತ್ತದೆ ಇನ್ನು ದೇಹಧಾರಿಗಳಾದ ಬ್ರಹ್ಮಾದಿಗಳು ಬಹಿರರ್ಥ ಭಾವನಾ ಉಳ್ಳವರಾಗಿ ನನ್ನ ವಿಷಯದಲ್ಲಿ ಮೋಹ (ಅಜ್ಞಾನ) ಉಳ್ಳವರೇ ಆಗಿರುತ್ತಾರೆ. ಹೀಗೆ ಏಕಾದಶ ಸ್ಕಂಧ ಭಾಗವತದಲ್ಲಿ ಬ್ರಹ್ಮಾದಿಗಳಿಗೆ ಮೋಹಾದಿಗಳನ್ನು ಹೇಳಿರುವುದರಿಂದಲೂ ಮತ್ತು ದ್ವಿವಿಧಚೇತನರು ದುಃಖ ಸ್ಪೃಷ್ಟರು ದುಃಖಾಸ್ಪೃಷ್ಟರು, ಜೀವರಾಶಿಗಳಲ್ಲಿ ನಿತ್ಯದಲ್ಲೂ ದುಃಖಾಸ್ಪೃಷ್ಟಳು ರಮಾದೇವಿಯು, ಮಿಕ್ಕವರೆಲ್ಲರೂ ದುಃಖಸ್ಪೃಷ್ಟರೇ ಹೀಗೆ ತತ್ತ್ವ ಸಂಖ್ಯಾನದಲ್ಲಿಹೇಳಿರುವುದರಿಂದ.

**ಅತೋಽಜ್ಞಾನಾದಿ ದೋಷಯುಕ್ತತ್ವ ಲಕ್ಷಣಸ್ಯ ಬ್ರಹ್ಮಾದೌ ನಾವ್ಯಾಪ್ತಿಃ । ತರ್ಹಿ ಭಯಾದ್ಯಭಾವ ಪ್ರತಿಪಾದಕ ಪ್ರಮಾಣ ವಿರೋಧ ಇತಿ ಚೇನ್ನ । ತೇಷಾಂ ರುದ್ರಾದೌ ಯಥಾ ಭಯಾದಿಕಂ ಸ್ಥಿರಂ ನ ತಥಾ ಬ್ರಹ್ಮಣೀತಿ ಸ್ಥೈರ್ಯಾಭಾವ ಪ್ರತಿಪಾದಕತ್ವಾತ್ । ತಥಾಹ್ಯುಕ್ತಂ ಷಷ್ಠ ತಾತ್ಪರ್ಯ ಏವ ।**

ಆದುದರಿಂದಲೇ ಅಜ್ಞಾನಾದಿ ದೋಷಯುಕ್ತತೆ ಎಂಬ ಜೀವ ಲಕ್ಷಣವು ಬ್ರಹ್ಮಾದಿಗಳಲ್ಲಿ ಅವ್ಯಾಪ್ತವಾಗುವುದಿಲ್ಲ. ಹಾಗಾದರೆ, ಭಯಾದಿಗಳಿಲ್ಲವೆಂದು ಹೇಳಿದ ಬಹು ಪ್ರಮಾಣ ವಿರೋಧ ಬರುವುದಲ್ಲವೇ ? ಎಂದರೆ ಬರುವುದಿಲ್ಲ—ಅವುಗಳಿಗೆ ಅರ್ಥವೇನೆಂದರೆ–ರುದ್ರಾದಿಗಳಿಗೆ ಭಯಾದಿಗಳು ಹೇಗೆಯೋ ಹಾಗೆ ಬ್ರಹ್ಮಾದಿಗಳಲ್ಲಿ ಸ್ಥಿರವಾಗಿರುವುದಿಲ್ಲ ಎಂದರ್ಥವು, ಹಾಗೆಯೇ ಷಷ್ಠ ತಾತ್ಪರ್ಯದಲ್ಲಿ ಹೇಳಿರುತ್ತದೆ.

**ಜ್ಞಾನಾದಿ ಗುಣಪೂರ್ಣಸ್ಯ ಬ್ರಹ್ಮಣೋಽಪಿ ಕ್ಷಣಾರ್ಧಗಾಃ । ಭಯಾದಿಕಾ ಭವಂತೀವ ಕಥಂ ತಸ್ಮಿನ್ ಸ್ಥಿರಾಲಯಾಃ । ಭಗವತ್ಪ್ರೀತಯೇ ನಿತ್ಯಂ ಬ್ರಹ್ಮಣೋ ಯೇ ಭಯಾದಯಃ । ನ ವೃಥಾ ತಸ್ಯಭಾವಃ ಸ್ಯಾತ್ ಕಸ್ಮಿಂಶ್ಚಿತ್ತೇಽಪಿ ಕ್ಷಣಾರ್ಧಗಾಃ । ಬ್ರಹ್ಮಣೋಽಪಿ ಅಲ್ಪದುಃಖಸ್ಯಾತದಪ್ಯನಭಿಮಾನತಃ । ನ ತು ಆತ್ಮ ಸಂಬಂಧಿತಯಾ ಭೋಗಾಭಾವಾತ್ ಕಥಂಚನೇತಿ ತಥಾ ಅದೋಷಃ ಪ್ರಾಯಶೋ ಬ್ರಹ್ಮಾ ದೋಷವಂತಃ ಕ್ರಮಾತ್ಪರ ಇತಿ ಋಗ್ಭಾಷ್ಯೇ ಪ್ರಾಯಃ ಶಬ್ದೇನ ಅಲ್ಪದೋಷೋಕ್ತೇಶ್ಚ । ಋಜೂನಾಮೇಕ ಏವಾಸ್ತಿ ಪರಮೋತ್ಸಾಹವರ್ಜನಂ । ಸಗುಣಾಲ್ಪತ್ವ ಮಾತ್ರತ್ವಾನ್ನ ರ್ಜುತ್ವೇನ ವಿರುಧ್ಯತ ಇತಿ ಅನುವ್ಯಾಖ್ಯಾನೇ ಮೋಕ್ಷಾರ್ಥಂ ಪರಮೋತ್ಸಾಹ ವರ್ಜನಾದಿ ದೋಷಾಣಾಂ ಗುಣಾಲ್ಪತ್ವಮಾತ್ರೋಕ್ತೇಃ ॥**

ಜ್ಞಾನಾದಿ ಗುಣಗಳಿಂದ ಪೂರ್ಣನಾದ ಬ್ರಹ್ಮದೇವರಿಗೂ ಭಯಾದಿಗಳು ಕ್ಷಣಾರ್ಧಗಳಾಗುತ್ತವೆ. ಅವನಲ್ಲಿ ಸ್ಥಿರಗಳು ಹೇಗೆ ಆದಾವು ? ಕ್ಷಣಾರ್ಧಗಳಾದರೂ ಭಯಾದಿಗಳು ಕೇವಲ ಭಗವಂತನ ಪ್ರೀತಿಗೋಸ್ಕರವೇ. ಆದರೆ, ಅದು ವ್ಯರ್ಥಗಳಾಗುವುದಿಲ್ಲ. ಬ್ರಹ್ಮದೇವರಿಗೆ ಅತ್ಯಲ್ಪ ದುಃಖವಾಗುತ್ತದೆ. ಆದಾದರೂ, ದೇಹಾಭಿಮಾನ ರಾಹಿತ್ಯದಿಂದಲೇ, ದೇಹಾಭಿಮಾನ ಎಂದಿಗೂ ಇರುವುದಿಲ್ಲ. ಆದ್ದರಿಂದ ಹೀಗೆ ಹೇಳಿದೆ. ಮತ್ತೂ ಬ್ರಹ್ಮನು ಪ್ರಾಯಶಃ ದೋಷರಹಿತನು, ಅವನ ನಂತರ ಎಲ್ಲರೂ ದೋಷಿಗಳೇ ಹೀಗೆ ಋಗ್ಭಾಷ್ಯದಲ್ಲಿ ಪ್ರಾಯಃ ಎಂಬ ಪದವಿರುವುದರಿಂದ ಅಲ್ಪದೋಷ ಬ್ರಹ್ಮನಲ್ಲಿ ಕಾಣುತ್ತದೆ. ಇನ್ನು ಋಜುಗಳಿಗೆ ಪರಮ ಉತ್ಸಾಹರಾಹಿತ್ಯ ಒಂದೇ ಇರುತ್ತದೆ. ಅನೇಕ ಗುಣಗಳುಳ್ಳವರಾಗಿ, ಅತ್ಯಲ್ಪದೋಷದಿಂದ ಋಜುತ್ವಹಾನಿಯು ಬರುವುದಿಲ್ಲ–ಹೀಗೆ ಅನುವ್ಯಾಖ್ಯಾನದಲ್ಲಿದೆ.

**ಅಜ್ಞಾನ ಸಂಬಂಧೋಽಪಿನ ಸರ್ವದಾ । ಕಿಂತು ಚತುರ್ಮುಖ ಶರೀರ ಸ್ಪರ್ಶ ಮಾತ್ರೇಣ ಬಹಿರ್ನಿರ್ಗಮನಮೇವ । ನತು ರುದ್ರಾದಿವತ್ತತ್ರಸ್ಥಿತಿಃ। ತದುಕ್ತಂ ತೃತೀಯ ಸ್ಕಂಧ ತಾತ್ಪರ್ಯೇ । ಪಂಚಪರ್ವಾತ್ಮವಿದ್ಯಾತು ಭೂತೇಭ್ಯೋ ಹರಿಣಾಪುರಾ । ಉದ್ಧೃತ್ಯ ಬ್ರಹ್ಮಣಿ ಕ್ಷಿಪ್ತಾ ಸಾ ಪುನಃ ತೇನ ನಿಃಸೃತೇತಿ । ಮೋಹೋಽಪಿ ಬ್ರಹ್ಮಣೋ ನಿಯತಾಪರೋಕ್ಷಜ್ಞಾನಾಭಾವ ಏವ । ನ ತು ಮಿಥ್ಯಾಜ್ಞಾನಂ ।**

ಅಜ್ಞಾನ ಸಂಬಂಧವೂ ಸರ್ವದಾ ಇರುವುದಿಲ್ಲ, ಆದರೆ, ಚತುರ್ಮುಖ ಬ್ರಹ್ಮನ ದೇಹ ಸ್ಪರ್ಶ ಮಾಡುವುದು ಹೊರಗೆ ಹೊರಡುವುದು ಮಾತ್ರ, ರುದ್ರಾದಿಗಳ ದೇಹಗಳಂತೆ ದೇಹದಲ್ಲಿ ಇರುವಿಕೆ ಇಲ್ಲ. ಇದನ್ನು ತೃತೀಯ ಸ್ಕಂಧ ತಾತ್ಪರ್ಯದಲ್ಲಿ ಹೇಳಿದೆ. ಪಂಚಪರ್ವಾತ್ಮಕವಾದ ಆ ವಿದ್ಯೆಯನ್ನು ಭೂತಗಳಿಂದ ಶ್ರೀಹರಿಯು ತೆಗೆದು, ಬ್ರಹ್ಮನ ದೇಹದಲ್ಲಿಟ್ಟು ಪುನಃ ಹೊರ ಹೊರಡಿಸಿದನು. ಮೋಹವು ಬ್ರಹ್ಮನಲ್ಲಿದೆ. ಭಗವಂತನ ವಿಶಿಷ್ಟಾಪರೋಕ್ಷಾಭಾವರೂಪವಾದುದು. ಅಜ್ಞಾನ (ಮಿಥ್ಯಾಜ್ಞಾನ)ರೂಪವಾದುದಲ್ಲ.

**ತದುಕ್ತಂ ಏಕಾದಶತಾತ್ಪರ್ಯೇ । ಸರ್ವೇಷಾಂ ಬ್ರಹ್ಮ ಪದವೀಯೋಗ್ಯಾನಾಂ ಪೂರ್ವಮೇವ ತು । ಅಭಾವಸ್ತ್ವಪರೋಕ್ಷಸ್ಯ ಮೋಹೋಜ್ಞಾನಾಸ್ಯ ಭಣ್ಯತೇ । ಬ್ರಹ್ಮಣಸ್ತು ಅಂಶರೂಪೇಷು ಭಾರತ್ಯಾಜ್ಞಾನ ವರ್ಜನಂ । ಕ್ವಚಿತ್ ಕ್ವಚಿತ್ ಸರಸ್ವತ್ಯಾ ಅಂಶಾವತರಣೇಷ್ವಪೀತಿ । ಸಂಸಾರಿತ್ವ ಲಕ್ಷಣಮಪಿ "ಭೂತ ಬಂಧಸ್ತು ಸಂಸಾರೋ ಮುಕ್ತಿಃ ತೇಭ್ಯೋ ವಿಮೋಚನಮಿತಿ ಬ್ರಹ್ಮಾದಿ ಜೀವ ಸಾಧಾರಣಂ । ಸರ್ವಂ ಪಂಚಭಿರಾರಬ್ಧಂ ಭೂತೈರೀಶ್ವರ ಬುದ್ಧಿಜೈರಿತಿಭಾಷ್ಯೋಕ್ತೇಃ । ನನು ಸತ್ತ್ವ ಸತ್ತ್ವ ಮಹಾಸತ್ತ್ವ ಸೂಕ್ಷ್ಮ ಸತ್ತ್ವಶ್ಚತುರ್ಮುಖ" ಇತಿ ಗೀತಾತಾತ್ಪರ್ಯೇ ಚತುರ್ಮುಖ ಶರೀರಸ್ಯ ಶುದ್ಧ ಸಾತ್ವಿಕತ್ವೋಕ್ತೇಃ ಪಾಂಚ ಭೌತಿಕತ್ವಾಭಾವಾತ್ ಬ್ರಹ್ಮವಾಯ್ವೋರವ್ಯಾಪ್ತಮಿತಿ ಚೇನ್ನ ।**

ಬ್ರಹ್ಮಪದವಿಯೋಗ್ಯ(ಋಜುತ್ವ)ರಿಗೆ ಪದವೀಕ್ಕಿಂತಲೂ ಮೊದಲು ಅಂತಹ ಅಪರೋಕ್ಷವಿಲ್ಲದಿರುವಿಕೆಗೆ ಅಜ್ಞಾನವೆನ್ನುವರು. ಪದವೀ ಪಡೆದ ಬ್ರಹ್ಮನಿಗೆ ಅಂಶರೂಪವಾಗಿ ಸರಸ್ವತೀ ಭಾರತೀಯರಿಗೆ ಅಂಶಾವತರಣಗಳಲ್ಲಿ, ಜ್ಞಾನಾಭಾವರೂಪ ಅಜ್ಞಾನವು ಇರುವುದರಿಂದ ಪ್ರಥಮ ಜೀವಲಕ್ಷಣಕ್ಕೆ ಎಲ್ಲಿಯೂ ಅವ್ಯಾಪ್ತಿ ಇರುವುದಿಲ್ಲ

ಸಂಸಾರವೆಂಬ ಎರಡನೆಯ ಲಕ್ಷಣವೂ ಬ್ರಹ್ಮಾದಿಗಳಲ್ಲಿ ಅವ್ಯಾಪ್ತವಾಗುವುದಿಲ್ಲ ಭೂತಬಂಧವೇ ಸಂಸಾರವು ಅವುಗಳಿಂದ ಬಿಡುಗಡೆಯೇ ಮೋಕ್ಷವೆಂದು ಹೇಳಿರುವು

ದರಿಂದ ಸರ್ವಜೀವರೂ ಈಶ್ವರ ಬುದ್ಧಿಯಿಂದ ಭೂತಗಳಿಂದ ಬದ್ಧರೆಂತಲೂ ಇರುವುದ ರಿಂದ ಸೂಕ್ಷ್ಮಸ್ಥೂಲ ಭೇದದಿಂದ ಬ್ರಹ್ಮಾದಿಗಳು ಭೂತ ಬಂಧರೂಪ ಸಂಸಾರಿಗಳೇ ಆಗಿರುತ್ತಾರೆ. ಗೀತಾತಾತ್ಪರ್ಯದಲ್ಲಿ ಸತ್ವ ಸತ್ವ ಮಹಾಸತ್ವ ಸೂಕ್ಷ್ಮಸತ್ವವು ಚತುರ್ಮುಖನ ದೇಹವೆಂದು ಹೇಳಿರುವುದರಿಂದ ಶುದ್ಧ ಸತ್ವಾತ್ಮಕ ದೇಹವುಳ್ಳ ಬ್ರಹ್ಮ ವಾಯುಗಳಿಗೆ, ಪಂಚಭೂತ ಸಂಬಂಧವಿಲ್ಲದಿರುವುದರಿಂದ ಭೂತ ಸಂಬಂಧರೂಪ ಸಂಸಾರಿತ್ವ ಲಕ್ಷಣವು ಬ್ರಹ್ಮವಾಯುಗಳಲ್ಲ ಅವ್ಯಾಪ್ತವೇ ಆಯಿತಲ್ಲವೇ ? ಅಲ್ಲ—

**ಪಂಚಭೂತ ಸಮೂಹೇನ ಜಾತಃ ಪೂರುಷ ಉಚ್ಯತೇ । ಬಹುತ್ವಾತ್ತತ್ರ ಭೂತಾನಾಂತಾವತ್ವಾತ್ ತತ್ವಮೇಕಜಮಿತಿ ದ್ವಿತೀಯ ತಾತ್ಪರ್ಯೋಕ್ತೇ ಪುರುಷಾಖ್ಯ ಬ್ರಹ್ಮ ಶರೀರಸ್ಯ ಪಾಂಚಭೌತಿಕತ್ವೋಕ್ತೇಃ । ನ ಚ ಪುರುಷ ಶ್ಚತುರ್ಮುಖಾದನ್ಯ ಏವ ಇತಿ ವಾಚ್ಯಂ । ಮಹದಾದ್ಯಂಡಪರ್ಯಂತಃ ಸರ್ಗೋಂಡೇ ಬ್ರಹ್ಮಣಸ್ತುಯಃ । ಅನುಸರ್ಗ ಇತಿ ಪ್ರೋಕ್ತಃ ಪೌರುಷ ಶ್ಚೇತಿಕಥ್ಯತ ಇತಿ ಪೂರ್ವಶ್ಲೋಕೇ ಪುರುಷ ಶಬ್ದೇನ ಬ್ರಹ್ಮಣ ಏವ ಉಕ್ತತ್ವಾತ್। ಬ್ರಹ್ಮಸೃಷ್ಟೇ ಪೂರ್ವಂ ಪುರುಷಾಂತರಸ್ಯ ಸೃಷ್ಟ್ಯಭಾವಾಚ್ಚ।**

ಪಂಚಭೂತಗಳ ಸಮೂಹದಿಂದ ಹುಟ್ಟಿದುದಕ್ಕೆ ಪುರುಷ ಎನ್ನುತ್ತಾರೆ. ದ್ವಿತೀಯ ಸ್ಕಂಧ ತಾತ್ಪರ್ಯದಲ್ಲಿ ಹೇಳಿರುವಂತೆ, ತತ್ವಗಳು ಬಹುವಾದ್ದರಿಂದ ಒಂದು ತತ್ವದಿಂದ ಹುಟ್ಟಿದುದೂ ಪುರುಷವೇ ಎಂದು ಹೇಳಿರುವುದರಿಂದ ಪುರಷಾಖ್ಯ ಬ್ರಹ್ಮನ (ಚತುರ್ಮುಖ) ದೇಹಕ್ಕೆ ಚಾತುಕತ್ವವು ಉಕ್ತವೇ ಆಗಿರುತ್ತದೆ. ಪುರುಷವಾಚ್ಯನು ಚತುರ್ಮುಖನಿಂದ ಬೇರೆ ಮತ್ತೊಬ್ಬನು ಎನ್ನಬಹುದಲ್ಲವೆ ? ಅಂದರೆ, ಯುಕ್ತವಲ್ಲ —ಏಕೆಂದರೆ, ಮಹತ್ತತ್ವವನ್ನಾರಂಭಿಸಿ ಬ್ರಹ್ಮಾಂಡ ಸೃಷ್ಟಿಪರ್ಯಂತ ಸೃಷ್ಟಿಗೆ ಅನುಸರ್ಗವೆನ್ನುತ್ತಾರೆ. ಆ ಸೃಷ್ಟಿಯಲ್ಲಿ ಚತುರ್ಮುಖ ಬ್ರಹ್ಮನಿಗೆ ಪುರುಷನೆಂದು ಹೇಳಿದೆ. ಇನ್ನು ಪೂರ್ವ ಶ್ಲೋಕದಲ್ಲಿ ಬ್ರಹ್ಮನಿಗೆ ಪುರುಷನೆಂದು ಇನ್ನೂ ಸ್ಪಷ್ಟವಾಗಿ ಹೇಳಿರುತ್ತದೆ. ಮತ್ತು ಚತುರ್ಮುಖನ ಸೃಷ್ಟಿಗಿಂತಲೂ ಪೂರ್ವದಲ್ಲಿ ಪುರುಷನ ವಿನಃ ಬೇರೆ ಇನ್ನೊಬ್ಬರ ಸೃಷ್ಟಿಯು ಹೇಳಿರುವುದಿಲ್ಲ ಆದುದರಿಂದ.

**ನ ಚ ಗೀತಾತಾತ್ಪರ್ಯ ವಿರೋಧ ಇತಿ ವಾಚ್ಯಂ । ಪಂಚಭೂತಗತ ಶುದ್ಧ ಸತ್ವ ಭಾಗವಿಷಯತ್ವೋಪಪತ್ತೇಃ । ತದುಕ್ತಂ ತೃತೀಯಸ್ಕಂಧ ತಾತ್ಪರ್ಯೇ । ಭೌತಿಕೇನ ತು ಸತ್ವೇನ ಗೂಢಂ ಬ್ರಹ್ಮಣ ಅಂಡಜಂ । ರೂಪಂ ತತ್ಪ್ರಾಪಿತು ತಮಃ ಶತಾಂಶೇನ ಪ್ರಕೀರ್ತಿತಂ । ತಜ್ಜೋರುದ್ರಸ್ತತಸ್ತ್ವೇವಮಿಂದ್ರಾದೀನಾಂ ಪುನರ್ಜನಿರಿತಿ । ಏಕಾದಶತಾತ್ಪರ್ಯೇಽಪಿ । ಚಿದಾನಂದ ಶರೀರಸ್ತು ಪ್ರವಿಷ್ಟೋಂಡೇ ಹರಿಃ ಸ್ವಯಂ । ತನ್ನಾಭೇರ್ಭೂತ ದೇಹೋಭೂತ್ ಪದ್ಮಾದಪಿ ಚತುರ್ಮುಖ ಇತಿ। ನನ್ವೇವಂ ಬ್ರಹ್ಮಾಂಡಾ**

**ದ್ಧಹಿರ್ವಿದ್ಯಮಾನಯೋರ್ಮಹತ್ತತ್ತ್ವಾಭಿಮಾನಿನೋರವ್ಯಾಪ್ತಿಃ । ತದ್ದೇಹಸ್ಯ ಪಂಚಭೂತೋತ್ಪತ್ತೇಃ ಪ್ರಾಗೇವ ಮಹತ್ತತ್ತ್ವಾಜ್ಜಾತತ್ವಾದಿತಿ ಚೇನ್ನ ।**

ಬ್ರಹ್ಮನಿಗೆ(ದೇಹಕ್ಕೆ) ಪಾಂಚಭೌತಿಕತೆ ಹೇಳಿದರೆ, ಶುದ್ಧಸತ್ತ್ವಾತ್ಮಕ ದೇಹವೇ ಎಂದು ಹೇಳಿದ ಗೀತಾತಾತ್ಪರ್ಯ ವಿರೋಧ ಬರುವುದಿಲ್ಲವೇ ? ಎಂದರೆ, ವಿರೋಧ ಬರುವುದಿಲ್ಲ. ಪಂಚಭೂತಗಳಲ್ಲಿರುವ ಶುದ್ಧ ಸತ್ತ್ವವೇ ಅಲ್ಲಿ ಹೇಳಿರುವುದೆಂದರೆ, ವಿರೋಧ ಪರಿಹಾರವಾಗುತ್ತದೆ.

ಇದನ್ನೇ ತೃತೀಯ ಸ್ಕಂಧ ತಾತ್ಪರ್ಯದಲ್ಲಿ ಹೇಳಿರುತ್ತದೆ. ಬ್ರಹ್ಮನ ದೇಹವು ಭೂತಗತ ಶುದ್ಧ ಸತ್ತ್ವದಿಂದಲೇ ಎಂದು ಅಲ್ಲಿಯೇ ಸಮಸ್ತತತ್ತ್ವವಾದರೂ ನೂರನೇ ಒಂದಂಶದಿಂದ ಎಂದು ಹೇಳಿದೆ. ಅದರಿಂದಲೇ ರುದ್ರನು, ಅದರಿಂದಲೇ ಇಂದ್ರಾದಿಗಳ ಜನ್ಮವು ಹೀಗೆ ಹೇಳಿದೆ. ಏಕಾದಶ ತಾತ್ಪರ್ಯದಲ್ಲಿಯೂ ಚಿತ್ ಆನಂದ ಸ್ವರೂಪನಾದ ಪರಮಾತ್ಮನು ಸ್ವಯಂ ಅಂಡದಲ್ಲಿ ಪ್ರವಿಷ್ಟನಾಗಿ ತನ್ನ ನಾಭಿಯಿಂದ ಪದ್ಮವನ್ನು ಸೃಜಿಸಿದನು. ಅದರಲ್ಲಿಯೇ ಚತುರ್ಮುಖ ಬ್ರಹ್ಮನು ಹುಟ್ಟಿದನು ಎಂದು ಹೇಳಿದೆ. ಆದರೂ ಬ್ರಹ್ಮಾಂಡದ ಹೊರಗಿರುವ ಮಹತ್ತತ್ತ್ವಾಭಿಮಾನಿಗಳಾದವರಲ್ಲಿ ಅವ್ಯಾಪ್ತಿ ಬರುತ್ತದೆ. ಅವರ ದೇಹಗಳು ಪಂಚಭೂತಗಳು ಹುಟ್ಟುವಕ್ಕಿಂತ ಮೊದಲೇ ಮಹತ್ತತ್ತ್ವದಿಂದ ಹುಟ್ಟಿರುವುದರಿಂದ, ಎಂದರೆ—ಅವ್ಯಾಪ್ತಿ ಬರುವುದಿಲ್ಲ.

**ಸ್ಥೂಲ ಶರೀರಸ್ಯ ತಥಾತ್ವೇಽಪಿ ಲಿಂಗಶರೀರೇ ಭೂತ ಸೂಕ್ಷ್ಮಾಣಾಂ ಸತ್ತ್ವಾತ್ । ಯದ್ವಾ ಪ್ರಕೃತಿಬಂಧ ಏವ ಸಂಸಾರಃ । ಸ ಚ ಬ್ರಹ್ಮಾದಿ ಸರ್ವ ಜೀವ ಸಾಧಾರಣ ಇತಿ ನ ಕೋಽಪಿ ದೋಷಃ। ನ ಚೈವಂ ಮುಕ್ತಜೀವೇಷ್ವವ್ಯಾಪ್ತಿರಿತಿ ವಾಚ್ಯಂ । ತೇಷಾಮಪಿ ಪೂರ್ವಂ ಪ್ರಕೃತಿ ಬಂಧತ್ವಾತ್ । ಅತೋ ನಾವ್ಯಾಪ್ತಿಃ । ತೇ ಚ ಜೀವಾಃ ಕತೀತ್ಯಾಕಾಂಕ್ಷಾಯಾಮಾಹ ।**

ಪ.ಸಂ.— ಅಸಂಖ್ಯಾಕಾಃ ಇತಿ ।

ಸ್ಥೂಲ ಶರೀರ ಭೂತ ಸಂಪರ್ಕವಿಲ್ಲವಾದರೂ ಲಿಂಗ ಶರೀರದಲ್ಲಿ ಭೂತ ಸೂಕ್ಷ್ಮಗಳು ಇದ್ದೇ ಇರುವುದರಿಂದ ಅವ್ಯಾಪ್ತಿ ಬರುವುದಿಲ್ಲ. ಅಥವಾ ಪ್ರಕೃತಿ ಸಂಬಂಧವೇ ಸಂಸಾರವು. ಇದು ಬ್ರಹ್ಮಾದಿ ಸರ್ವ ಜೀವ ಸಾಧಾರಣವೇ ಆಗಿದೆ ಆದುದರಿಂದ, ಸಂಸಾರಿತ್ವ ಎಂಬ ಜೀವ ಸಾಮಾನ್ಯ ಲಕ್ಷಣವು ನಿರ್ದುಷ್ಟವೇ ಆಗಿರುತ್ತದೆ. ಮುಕ್ತ ಜೀವರಲ್ಲಿ ಅವ್ಯಾಪ್ತಿ ಬಂದೇ ಬರುತ್ತದೆ. ಆದರೂ ಮುಕ್ತಿ ಪೂರ್ವದಲ್ಲಿ ಪ್ರಕೃತಿ ಸಂಬಂಧವಿರುವುದರಿಂದ (ಪ್ರಕೃತಿ ಸಂಬಂಧವಿಲ್ಲದಿರುವುದರಿಂದ ಅಂದರೆ ತಪ್ಪು) ಅವ್ಯಾಪ್ತಿ ಬರುವುದಿಲ್ಲ. ಅಂಥಾ ಜೀವರು ಎಷ್ಟು ಎಂದು ಶಂಕಿಸಿದರೆ ಹೇಳುತ್ತಾರೆ. ಜೀವರು ಅಸಂಖ್ಯಾತರೇ ಆಗಿರುತ್ತಾರೆ. ಅವರ ಸಂಖ್ಯೆ ಎಲ್ಲಿಯೂ ಹೇಳಿರುವುದಿಲ್ಲ.

ತೇನೈಕ ಜೀವವಾದಿನೋ ನಿರಾಕೃತಾಃ । ಅತ್ರ ಪ್ರಮಾಣಂ ತು । ಅನಾಗತಾ ಅತೀತಾಶ್ಚ ಯಾವಂತಃ ಸಹಿತಾಃ ಕ್ಷಣಾಃ । ಅತೀತಾನಾಗತಾಶ್ಚೈವ ಯಾವಂತಃ ಪರಮಾಣವಃ । ತತೋಽಪ್ಯನಂತ ಗುಣಿತಾಃ ಜೀವಾನಾಂ ರಾಶಯಃ ಪೃಥಕ್ । ಪರಮಾಣು ಪ್ರದೇಶೇಽಪಿ ಹ್ಯನಂತಾಃ ಪ್ರಾಣಿರಾಶಯ ಇತಿ ತತ್ವ ನಿರ್ಣಯೋಕ್ತೇಃ । ನ ಕೇವಲಂ ಸರ್ವೇಽಪಿ ಮಿಲಿತ್ವಾನಂತಾಃ । ಕಿಂತು ಗಣಶೋಽಪೀತ್ಯಾಹ ।

ಪ.ಸಂ.—ಗಣಶೋಽಪ್ಯನಂತಾಃ ।

ಹೀಗೆ ಹೇಳಿರುವುದರಿಂದ ಏಕ ಜೀವ(ಅ ದ್ವೈತ)ವಾದವು ನಿರಾಕೃತವಾಯಿತು. ಈ ವಿಷಯದಲ್ಲಿ ಪ್ರಮಾಣಗಳು, ಸೃಷ್ಟಿಯಲ್ಲಿ ಹಿಂದೆ ಆಗಿ ಹೋದ, ಮುಂದೆ ಆಗುವ, ಜೀವರ ಗಣಗಳೆಷ್ಟೋ ಎಂದು, ಹಾಗೆ ಅತೀತ ಅನಾಗತ ಭೂತ ಪರಮಾಣುಗಳೆಷ್ಟೋ ಎಂದು ಹೇಳಿರುತ್ತದೆ. ಪ್ರತ್ಯೇಕ ಪ್ರತ್ಯೇಕ ಜೀವರಾಶಿಗಳು ಎಣಿಸಲು ಅನಂತಗಳಾಗಿವೆ. ಪರಮಾಣು ಪ್ರದೇಶದಲ್ಲಿಯೂ ಅನಂತಾನಂತ ಪ್ರಾಣಿರಾಶಿಗಳು ಹೀಗೆ ತತ್ವನಿರ್ಣಯದಲ್ಲಿ ಹೇಳಿದೆ. ಅಸಂಖ್ಯಾತ ಜೀವರಲ್ಲಿ ಕೇವಲ ಎಲ್ಲರೂ ಕಲೆತು ಅಲ್ಲ. ಒಂದೊಂದು ಗಣಗಣಗಳಿಂದಲೂ ಅನಂತಗಳಾಗಿರುತ್ತದೆ ಎಂದು ತಿಳಿಸುತ್ತಾರೆ. ಅಸಂಖ್ಯಾತ ಜೀವರ ಒಂದೊಂದು ಗಣವೂ ಅನಂತವೇ ಆಗಿರುತ್ತದೆ.

ಬ್ರಹ್ಮ ಪದಯೋಗ್ಯಾಃ ಋಜವೋ ನಾಮ ಜೀವಾ ಅನಂತಾಃ । ಏವಂ ಗರುಡ ರುದ್ರಾದಿ ಪದಯೋಗ್ಯಾ ಅಪಿ ಜೀವಾ ಅನಂತಾಃ । ಏವಂ ಕಲಿಕಾಲನೇಮಿ ವಿಪ್ರಚಿತ್ತ್ಯಾದಿ ಪದಯೋಗ್ಯಾ ಅಸುರಾಃ ಅಪಿ ಪ್ರತ್ಯೇಕಮನಂತಾ ಇತ್ಯರ್ಥಃ । ತದುಕ್ತಂ ನಿರ್ಣಯೇ । ಬ್ರಹ್ಮತ್ವಯೋಗ್ಯಾ ಋಜವೋ ನಾಮ ದೇವಾಃ ಪೃಥಗ್ಗಣಾಃ । ತೈರೇವಾಪ್ಯಂತತ್ಪದಂತು ನೈವಾ. ನ್ಯೈಃಸಾಧನೈಃ ಅಪಿ। ಏವಂ ಸರ್ವಪದಾನಾಂ ತು ಯೋಗ್ಯಾಃ ಸಂತಿ ಪೃಥಗ್ಗಣಾಃ। ಅಸುರಾಃ ಕಲಿಪರ್ಯಂತಾ ಏವಂ ದುಃಖೋತ್ತರೋತ್ತರಾಃ। ಕಲಿಃ ದುಃಖಾಧಿಕಃ ತೇಷು ತೇಷ್ವೇವಂ ಬ್ರಹ್ಮವದ್ಗಣಾಃ ತಥಾನ್ಯೇಽಪ್ಯಸುರಾಃ ಸರ್ವೇ ಗಣಾಯೋಗ್ಯತಯಾಸದಾ ಇತಿ । ಅನಂತಾನಾಮಪಿ ಜೀವಾನಾಂ ವಿಭಾಗಮಾಹ । ತ್ರಿವಿಧಾನ್ನಿರ್ದಿಶತಿ ।

ಪ.ಸಂ.—ತೇ ಚ ತ್ರಿವಿಧಾಃ ।

ಬ್ರಹ್ಮಪದವಿಯೋಗ್ಯ ಜೀವರು ಅನಂತಋಜುಗಳೂ ಎನ್ನುತ್ತಾರೆ. ಹಾಗೆಯೇ ಗರುಡರುದ್ರ ಪದಯೋಗ್ಯ ಜೀವರೂ ಅನಂತರೇ, ಹೀಗೆಯೇ ಕಲಿ ಕಾಲ ನೇಮಿ ವಿಪ್ರಚಿತ್ತಿ ಆದಿ ಪದಯೋಗ್ಯ ಅಸುರರು ಸಹಾ ಪ್ರತ್ಯೇಕ ಅನಂತರೇ ಆಗಿರುತ್ತಾರೆ. ಇದನ್ನು ನಿರ್ಣಯದಲ್ಲಿ ಹೇಳಿರುತ್ತಾರೆ. ಬ್ರಹ್ಮತ್ವ ಯೋಗ್ಯ ಋಜುಗಣವೇ ಬೇರೆ. ಅವರಿಗೇ ಆಪದವು ಮಿಕ್ಕವರೆಷ್ಟು ಸಾಧನಾದಿಗಳನ್ನು ಮಾಡಿದರೂ

ಆ ಪದವಿ ಸಿಕ್ಕುವುದಿಲ್ಲ. ಹೀಗೆ ಆ ಪದಯೋಗ್ಯಗಣಗಳೇನಿವೆ-ಅನಂತಗಳಾಗಿಯೇ ಪ್ರತ್ಯೇಕಗಳಾಗಿವೆ. (ಅಯಾಜೀವರಿಗೆ ಆ ಪದವಿಗಳು) ಹೀಗೆ ಅಸುರರಲ್ಲಿಯೂ ಕಲಿ ಪರ್ಯಂತವಾಗಿ ದುಃಖವನ್ನು ಉತ್ತರೋತ್ತರವಾಗಿ ಅನುಭವಿಸುತ್ತಾರೆ. ಅವರಲ್ಲಿ ಕಲಿ ಅತಿದುಃಖಾಧಿಕನು ದೇವತೆಗಳಲ್ಲಿ ಬ್ರಹ್ಮನು ಅತಿ ಅಧಿಕ ಆನಂದ ಉಳ್ಳವನು. ದೇವತೆಗಳಲ್ಲಿ ಪದಯೋಗ್ಯ ಅನಂತ ಗಣಗಳು. ಹಾಗೆ ಅಸುರರಲ್ಲಿಯೂ ಅನಂತ ಪದಯೋಗ್ಯಗಣಗಳು, ದೇವತೆಗಳಲ್ಲಿ ಸುಖ ತಾರತಮ್ಯ, ಅಸುರರಲ್ಲಿ ದುಃಖತಾರತಮ್ಯ ಹೀಗಿರುವ ಅನಂತ ಜೀವರಾಶಿಗಳಲ್ಲಿ ಮೂರು ವಿಧಗಳಾದ ಜೀವರು ಇದ್ದಾರೆಂದ ವಿಭಾಗ ತಿಳಿಸುತ್ತಾರೆ.

ಪ.ಸಂ.—ಮುಕ್ತಿಯೋಗ್ಯಾನಿತ್ಯಸಂಸಾರಿಣಃ ತಮೋಯೋಗ್ಯಾಶ್ಚೇತಿ ।

**ನನು ಮುಕ್ತಿಂಗತಾನಾಂ ಪ್ರಾಪ್ತಾಂಧತಮಸಾನಾಂ ಚ ಯೋಗ್ಯತ್ವಾಭಾವಾದ್ವಿಭಾಗ ನ್ಯೂನತೇತಿ ಚೇನ್ನ । ಯೋಗ್ಯತಾಯಾಜನಿತ ಫಲೇ ಜನಿಷ್ಯಮಾಣ ಫಲೇಽಪಿ ಸತ್ತ್ವೇನಾಧಿಕ್ಯಾಸಂಭವಾತ್ । ಮುಕ್ತಿಯೋಗ್ಯ ವಿಭಾಗಮಾಹ ।**

ಮುಕ್ತಿಯೋಗ್ಯರು, ನಿತ್ಯ ಸಂಸಾರಿಗಳು ಮತ್ತು ತಮೋಯೋಗ್ಯರೆಂದು ಮೂರು ವಿಧ. ಮುಕ್ತರಾದವರಲ್ಲಿ ಅಂಧತ್ತಮಸ್ಸನ್ನು ಹೊಂದಿದವರಲ್ಲಿ ಯೋಗ್ಯತೆಯೇ ಇಲ್ಲ ವಾದುದರಿಂದ ವಿಭಾಗದಲ್ಲಿ ನ್ಯೂನತೆ ಬರಲಿಲ್ಲವೇ ಎಂದರೆ. ನ್ಯೂನತೆ ಬರುವುದಿಲ್ಲ. ಯೋಗ್ಯತೆ ಎಂಬುದು ಹುಟ್ಟಿದ ಕಾರ್ಯದಲ್ಲಿಯೂ ಹುಟ್ಟುವ ಕಾರ್ಯದಲ್ಲಿಯೂ ಇರುವುದರಿಂದ ಅದಕ್ಕೆ ಪ್ರತ್ಯೇಕ ಆಧಿಕ್ಯವಿಲ್ಲವಾದ್ದರಿಂದ ವಿಭಾಗ ನ್ಯೂನತೆ ಬರುವುದಿಲ್ಲ. ಮುಕ್ತಿ ಯೋಗ್ಯರು ಐದು ವಿಧರೆಂದು ವಿಭಾಗಿಸುತ್ತಾರೆ.

ಪ.ಸಂ.— ತತ್ರಮುಕ್ತಿಯೋಗ್ಯಾಃ ಪಂಚವಿಧಾಃ ।

ದೇವರ್ಷಿಪಿತೃಚಕ್ರವರ್ತಿಮನುಷ್ಯೋತ್ತಮಭೇದಾತ್ । ಬ್ರಹ್ಮವಾಯ್ವಾದಯೋ ದೇವಾಃ । ಋಷಯೋ ನಾರದಾದ್ಯಾಃ । ಪಿತರಶ್ಚಿರಾಃ । ರಘ್ವಂಬರೀಷಾದಯಶ್ಚಕ್ರವರ್ತಿನಃ ಮನುಷ್ಯೋತ್ತಮಾಸ್ತು ದ್ವಿವಿಧಾಃ ।

ಆ ಮುಕ್ತಿ ಯೋಗ್ಯರಲ್ಲಿ ದೇವ, ಋಷಿ, ಪಿತೃ ಚಕ್ರವರ್ತಿ, ಮನುಷ್ಯೋತ್ತಮ ರೆಂಬ ಭೇದದಿಂದ ಐದು ವಿಧದಲ್ಲಿದೆ. ಬ್ರಹ್ಮವಾಯ್ವಾದಿಗಳು ದೇವತೆಗಳು ನಾರದಾದಿ ಋಷಿಗಳು ಚಿರರು ಪಿತೃಗಳು. ರಘು ಅಂಬರೀಷಾದಿಗಳು ಚಕ್ರವರ್ತಿಗಳು ಮತ್ತು ಮನುಷ್ಯೋತ್ತಮರು. ಮನುಷ್ಯೋತ್ತಮರಲ್ಲಿ ಎರಡು ವಿಧರು.

**ನನು ಗಂಧರ್ವಾದೀನಾಮಪಿ ಮುಕ್ತಿಯೋಗ್ಯಾನಾಂ ಸದ್ಭಾವಾತ್ ಕಥಂ ಪಾಂಚವಿಧ್ಯಮಿತಿ ಚೇನ್ನ । ತೇಷಾಂ ಉಕ್ತೇಷ್ವಂತರ್ಭಾವಾತ್ ।**

**ತಥಾಹಿ । ಗಂಧರ್ವಾ ದ್ವಿವಿಧಾಃ । ದೇವ ಗಂಧರ್ವಾ ಮನುಷ್ಯ ಗಂಧರ್ವಾಶ್ಚೇತಿ । ತತ್ರ ದೇವಗಂಧರ್ವಾ ದೇವ ಶಬ್ದೇನ ಗೃಹೀತಾಃ । ಮನುಷ್ಯ ಗಂಧರ್ವಾ ಮನುಷ್ಯಪದೇನ ಗೃಹೀತಾಃ । ಊರ್ವಶ್ಯಾದ್ಯಪ್ಸರಸಃ ಚಾರಣಾದಯೋಽಪಿ ದೇವ ಶಬ್ದೇನ ಗೃಹೀತಾ ಇತಿ ನ ವಿರೋಧಃ । ಅತ್ರ ದೇವ ಋಷಿ ಪಿತೃ ಪ ನರಾಃ ಇತಿ ಮುಕ್ತಾಸ್ತು ಪಂಚಧಾ ಇತಿ ತತ್ತ್ವಸಂಖ್ಯಾನಂ ತಟ್ಟೀಕಾ ಚ ಮಾನಂ । ಜೀವಾನಾಂ ತ್ರಿತ್ವೇತು ದೇವಮಾನುಷದಾನವಾಃ। ತತ್ರದೇವಾ ಮುಕ್ತಿಯೋಗ್ಯಾ ಮಾನುಷೇಷೂತ್ತಮಾಸ್ತಥಾ । ಮಧ್ಯಮಾ ಮಾನುಷಾಯೇತುಸ್ಸೃತಿಯೋಗ್ಯಾಃ ಸದೈವ ಹಿ। ಅಧಮಾ ನಿರಯಾಯೈವ ದಾನವಾಸ್ತುತಮೋ ಲಯಾಃ ಇತಿ ನಿರ್ಣಯೋಕ್ತಿರ್ಮಾನಂ ।**

ಗಂಧರ್ವರೂ ಮುಕ್ತಿಯೋಗ್ಯರಾಗಿ ಇರುವರೆಂದು ತಿಳಿಸಿ, ಮುಕ್ತಿಯೋಗ್ಯರು ಐದು ವಿಧರೆಂದು ಹೇಗೆ ವಿಭಾಗ ಮಾಡಿದಿರಿ ?—ಎಂದರೆ, ಅವರಿಗೆ ಮುಕ್ತರಲ್ಲಿ ಅಂತರ್ಭಾವವಿರುತ್ತದೆ.ಹೇಗೆಂದರೆ, ಗಂಧರ್ವರು 2 ವಿಧರು. ದೇವಗಂಧರ್ವರು ಮತ್ತು ಮನುಷ್ಯಗಂಧರ್ವರು. ದೇವಗಂಧರ್ವರು ದೇವತೆಗಳಲ್ಲಿ ಮನುಷ್ಯಗಂಧರ್ವರು ಮನುಷ್ಯೋತ್ತಮರಲ್ಲಿ ಊರ್ವಶಿ ಆದಿ ಅಪ್ಸರ ಸ್ತ್ರೀಯರು,ಚಾರಣಾದಿಗಳು ದೇವ ಶಬ್ದದಿಂದ ಗೃಹೀತರು ಆದ್ದರಿಂದ ವಿರೋಧವಿಲ್ಲ. ಈ ವಿಷಯದಲ್ಲಿ ದೇವ, ಋಷಿ, ಪಿತೃ ಪ ನರಾ ಇತಿ ಮುಕ್ತಾಸ್ತು ಪಂಚಧಾ ಎಂದು ಹೇಳಿರುವ ತತ್ತ್ವಸಂಖ್ಯಾನವೇ ಪ್ರಮಾಣವು. ಅದೇ ಟೀಕೆಯಲ್ಲಿಯೂ ಅದನ್ನೇ ಐದು ವಿಧ ಮುಕ್ತರೆಂದು ಹೇಳಿರುತ್ತಾರೆ.

ಜೀವ ತ್ರೈವಿಧ್ಯ ವಿಷಯದಲ್ಲಿ ನಿರ್ಣಯದಲ್ಲಿ ಜೀವ ಸಮುದಾಯವು ದೇವ ಮಾನುಷ ದಾನವರೆಂದು ತ್ರಿವಿಧರು. ಇವರಲ್ಲಿ ದೇವತೆಗಳು, ಮನುಷ್ಯೋತ್ತಮರು ಮುಕ್ತಿಯೋಗ್ಯರು, ಮಧ್ಯಮ ಮನುಷ್ಯರು—ನಿತ್ಯ ಸಂಸಾರಿಗಳು, ಅಧಮ ಮನುಷ್ಯರು—ನರಕ ಭಾಗಿಗಳು,ಅಸುರರು ತಮೋಭಾಗಿಗಳು ಹೀಗೆ ಹೇಳಿರುತ್ತಾರೆ.

**ಗೀತಾತಾತ್ಪರ್ಯಮಪಿ । ಸ್ವಭಾವತಸ್ತ್ರಿಧಾ ಜೀವಾ ಉತ್ತಮಾಧಮ ಮಧ್ಯಮಾಃ । ಉತ್ತಮಾಸ್ತತ್ರ ದೇವಾದ್ಯಾ ಮರ್ತ್ಯಾ ಮಧ್ಯಾಸ್ತು ಮಧ್ಯಮಾಃ । ಅಧಮಾ ಅಸುರಾದ್ಯಾಶ್ಚ ನೈಷಾಮಸ್ತ್ಯನ್ಯಥಾ ಭವಃ । ಉತ್ತಮಾ ಮುಕ್ತಿಯೋಗ್ಯಾಸ್ತು ಸೃತಿಯೋಗ್ಯಾಸ್ತು ಮಧ್ಯಮಾಃ । ಅಪರೇಂಧತಮೋ ಯೋಗ್ಯಾಃ ಪ್ರಾಪ್ತಿಃ ಸಾಧನ ಪೂರ್ತಿತ ಇತಿ ।**

ಗೀತಾ ತಾತ್ಪರ್ಯದಲ್ಲಿಯೂ ಸಹ ಜೀವರು ಸ್ವಭಾವತಃ ಉತ್ತಮರು, ಮಧ್ಯಮರು, ಅಧಮರೆಂದು ಹೇಳಿದ್ದಾರೆ ಉತ್ತಮರೆಂದರೆ, ದೇವತಾದಿಗಳು ಮಧ್ಯಮರೆಂದರೆ ಮನುಷ್ಯರು, ಅಧಮರೆಂದರೆ ಅಸುರರು. ಈ ತ್ರಿವಿಧರಿಗೆ ತ್ರಿವಿಧ ಜನ್ಮವು, ಎಂದಿಗೂ ವಿಪರೀತ ಜನ್ಮ ಇರುವುದಿಲ್ಲ. ಉತ್ತಮರೇ ಮುಕ್ತಿ ಯೋಗ್ಯರು,

ಮಧ್ಯಮರೇ ನಿತ್ಯ ಸಂಸಾರಿಗಳು, ಅಧಮರೇ ತಮೋಯೋಗ್ಯರು ಎಲ್ಲರಿಗೂ ಸ್ವ ಸ್ವಯೋಗ್ಯ ಸಾಧನೆಗಳಿವೆ. ಸಾಧನೆಯು ಪೂರ್ತಿಯಾಗಿ ಆಯಾ ಸ್ಥಾನಗಳನ್ನು ಹೊಂದುತ್ತಾರೆ.

**ನನು ಏಕಗುಣೋಪಾಸಕಾನಾಂ ತೃಣಜೀವಾನಾಂ ಮುಕ್ತಿಯೋಗ್ಯತ್ವಾತ್ ಕುತ್ರ ಅಂತರ್ಭಾವಃ ಇತ್ಯಾಶಂಕ್ಯ ಮನುಷ್ಯೋತ್ತಮೇಷು ಅಂತರ್ಭಾವ ಇತಿ ವಕ್ತುಂ ಮನುಷ್ಯೋತ್ತಮ ವಿಭಾಗಮಾಹ । ಮನುಷ್ಯೋತ್ತಮಾಸ್ತು ಇತಿ । ನ ಚೈಕಗುಣೋಪಾಸಕ ಸದ್ಭಾವೇ ತಸ್ಯ ಮನುಷ್ಯೋತ್ತಮತ್ವೇ ತೃಣಜೀವತ್ವೇ ಚ ನ ಪ್ರಮಾಣಮಿತಿವಾಚ್ಯಂ । ಬಹೂನಾಂ ಸದ್ಭಾವಾತ್ । ತಥಾಹಿ । ಆತ್ಮೇತ್ಯೇವ ಪರಂ ದೇವಂ ಉಪಾಸ್ಯ ಹರಿಮವ್ಯಯಂ । ಕೇಚಿದತ್ರೈವಮುಚ್ಯಂತೇ ನೋತ್ಕ್ರಾಮಂತಿ ಕದಾಚನೇತಿ ಭಾಷ್ಯಂ । ತಥಾ । ಕೇಚಿತ್ತು ಮಾನುಷಾಮುಕ್ತಿಮನುತ್ಕ್ರಮ್ಯ ಏವ ದೇಹತಃ ।**

ಏಕ ಗಣೋಪಾಸಕ, ಮುಕ್ತಿಯೋಗ್ಯ ತೃಣಜೀವರಿಗೆ ಎಲ್ಲಿ ಅಂತರ್ಭಾವ ಎಂದರೆ—ಮನುಷ್ಯೋತ್ತಮರಲ್ಲಿಯೇ ಅಂತರ್ಭಾವವು ಎಂದು ಹೇಳಲು, ಮನುಷ್ಯೋತ್ತಮರ ವಿಭಾಗವನ್ನು ಹೇಳುತ್ತಾರೆ. ಏಕಗುಣೋಪಾಸಕ ಮನುಷ್ಯೋತ್ತಮರಿದ್ದಾರೆ. ಅವರಿಗೆ ತೃಣ ಜೀವಿಗಳು ಅನ್ನುತ್ತಾರೆ ಎಂಬ ವಿಷಯದಲ್ಲಿ ಪ್ರಮಾಣವೇ ಇಲ್ಲ ಎನ್ನಬಾರದು ಅನೇಕ ಪ್ರಮಾಣಗಳಿವೆ.

ಭಾಷ್ಯದಲ್ಲಿಯೇ 'ಕೆಲವರು ಪರಮಾತ್ಮನನ್ನು ನಾಶರಹಿತನಾದ ಆತ್ಮಾ-ಅಂತರ್ನಿಯಾಮಕ ಹರಿಯು(ಬಿಂಬನು) ಹೀಗೆ ಉಪಾಸನೆ ಮಾಡಿ, ಇಲ್ಲಿಯೇ (ಭೂಲೋಕದಲ್ಲಿ) ಮುಕ್ತರಾಗುತ್ತರೆ. ಅವರಿಗೆ ಎಂದಿಗೂ ಉತ್ಕ್ರಾಂತಿ (ಸೋತ್ತಮರಲ್ಲಿ ಲಯ) ಇರುವುದಿಲ್ಲ' ಹೀಗೆ ಹೇಳಿದೆ. ಮತ್ತು ಬೃಹದ್ಭಾಷ್ಯದಲ್ಲಿ ಕೆಲವರು ಇದೇ ದೇಹದಿಂದಲೇ ಉತ್ಕ್ರಾಂತಿ ಇಲ್ಲದೆ ಮುಕ್ತರಾಗುತ್ತಾರೆ ಎಂದು ಹೇಳಿದೆ.

**ದೇಹಪಾತೇತು ದೇಹಸ್ಯ ದೋಷಾನ್ ಭುಕ್ತ್ವೈವ ಸರ್ವಶಃ । ಮರಣೋಚ್ಛ್ವನತಾದೀಂಶ್ಚ ಸ್ವಕೀಯಾರಬ್ಧ ಕರ್ಮಜಾನ್ । ದೇಹೇ ಕ್ಷೀಣೇತು ಗಚ್ಛಂತಿ ದೃಷ್ಟ್ವಾ ವಿಷ್ಣುಮನುಜ್ಞಯಾ । ಪುನರತ್ರೈವ ತಿಷ್ಠಂತಿ ನಿತ್ಯಾನಂದೈಕ ಭಾಗಿನಃ ಇತಿ ಬೃಹದ್ಭಾಷ್ಯಂ । ಆ ಬ್ರಹ್ಮಸ್ತಂಬ ಪರ್ಯಂತ ಮಸಾರಂ ಚಾಪ್ಯನಿತ್ಯಕಮಿತಿ ಭಾಷ್ಯೇ ಸ್ತಂಬ ಶಬ್ದ ಸ್ತೃಣಜೀವವಾಚಕಃ । ಅವ್ಯಕ್ತಾದಿ ತೃಣಾಂತಾಸ್ತು ವಿಪ್ರುಡಾನಂದ ಭಾಗಿನಃ ಇತಿ ಚ ಭಾಷ್ಯಂ ।**

ಪ.ಸಂ.—ಚತುರ್ಗುಣೋ ಪಾಸಕಾ ಏಕಗಣೋಪಾಸಕಾಶ್ಚೇತಿ । ತೃಣ ಜೀವಾಃ ಏಕಗುಣೋಪಾಸಕಾಃ ! ತದ್ವ್ಯತಿರಿಕ್ತಾಃ ಚತುರ್ಗುಣೋಪಾಸಕಾಃ ಇತಿ ।

ದೇಹಪಾತವಾದರೂ ದೇಹ ನಿಮಿತ್ತಕ ದೋಷಗಳನ್ನು ಎಲ್ಲವನ್ನು ಉಂಡೇ ಸ್ವಕೀಯವಾದ ಆರಬ್ಧಕರ್ಮ ಮುಗಿಯುವತನಕ ಜನನ ಮರಣಗಳನ್ನು ಹೊಂದುತ್ತಾ ಶ್ರೀ ವಿಷ್ಣು ಆಜ್ಞಾನುಸಾರ ಪುನಃ ಭೂಲೋಕದಲ್ಲಿ ನಿತ್ಯಾನಂದ ಭಾಗಿಗಳಾಗಿ ಇರುತ್ತಾರೆ. ಹೀಗೆ ಬೃಹದ್ಭಾಷ್ಯದಲ್ಲಿ ಹೇಳಿದೆ. ಅಬ್ರಹ್ಮಸ್ತಂಬ ಪರ್ಯಂತಂ ಎಂಬ ಭಾಷ್ಯದಲ್ಲಿ ಸ್ತಂಬ ಶಬ್ದಕ್ಕೆ ತೃಣ ಜೀವಿಗಳೆಂದೇ ಅರ್ಥವು ಮತ್ತು ಅವ್ಯಕ್ತ ಬ್ರಹ್ಮನಿಂದಾರಂಭಿಸಿ ತೃಣಾಂತರಾದವರು ತಾರತಮ್ಯ ಆನಂದ ಭಾಗಿಗಳು ಹೀಗೆಯೂ ಭಾಷ್ಯದಲ್ಲಿ ಹೇಳಿದೆ.

ಮುಕ್ತಿಯೋಗ್ಯರಲ್ಲಿ ಏಕ ಗುಣೋಪಾಸಕರು, ಚತುರ್ಗುಣೋಪಾಸಕರು ಹೀಗೆ ಎರಡು ವಿಧ. ತೃಣಜೀವರು ಏಕ ಗುಣೋಪಾಸಕರು. ಉಳಿದವರೆಲ್ಲರೂ ಚತುರ್ಗುಣೋಪಾಸಕರು.

**ಅತ್ರ ಆನಂದೋಜ್ಞಃ ಸದಾತ್ಮೇತಿ ಹಿ ಉಪಾಸ್ಯೋ ಮಾನುಷ್ಯೈರ್ಹರಿಃ ಇತಿ ನಿರ್ಣಯೋಕ್ತಿಃ ಮಾನಂ । ಸಚ್ಚಿದಾನಂದ ಆತ್ಮೇತಿ ಮಾನುಷ್ಯೈಸ್ತು ಸುರೇಶ್ವರೈಃ ಇತಿ ಅಣುಭಾಷ್ಯಮಪಿ । ನಿತ್ಯ ಸಂಸಾರಿ ಸ್ವರೂಪಮಾಹ ।**

ಈ ವಿಷಯದಲ್ಲಿ ಆನಂದ ಜ್ಞಾನಮಯ ಸತ್ಯ ಆತ್ಮಾ ಹೀಗೆ ಮನುಷ್ಯರಿಂದ ಉಪಾಸ್ಯನು. ಹೀಗೆ ಹೇಳುವ ನಿರ್ಣಯ ವಾಕ್ಯವೇ ಪ್ರಮಾಣವು (ಅಣುಭಾಷ್ಯ ದಲ್ಲಿಯೂ) ಸತ್, ಆನಂದ, ಆತ್ಮ ಹೀಗೆ ಮನುಷ್ಯರಿಂದಲೂ, ದೇವತೆಗಳಿಂದಲೂ, ಹೆಚ್ಚಿನ ಪದಾಧಿಕಾರಿಗಳಾದ ಇಂದ್ರಾದಿಗಳಿಂದ ಇನ್ನೂ ಹೆಚ್ಚಿನ ಗುಣಗಳಿಂದಲೂ, ಬ್ರಹ್ಮದೇವರಿಂದ ಅನಂತ ಗುಣಗಳಿಂದಲೂ ಉಪಾಸ್ಯನು, ಪರಮಾತ್ಮನು ಎಂದು ಹೇಳುವ ಅಣುಭಾಷ್ಯವೂ ಪ್ರಮಾಣಗಳಾಗಿರುತ್ತವೆ.

ನಿತ್ಯ ಸಂಸಾರಿ ಸ್ವರೂಪವನ್ನು ಹೇಳುತ್ತಾರೆ.

**ಪ.ಸಂ.**—ನಿತ್ಯಂ ಸುಖದುಃಖಮಿಶ್ರಾಃ ನಿತ್ಯ ಸಂಸಾರಿಣಃ ।

**ತದುಕ್ತ ನಿರ್ಣಯೇ । ಮಧ್ಯಮಾ ಮಾನುಷಾಯೇತು ಸೃತಿ ಯೋಗ್ಯಾಃ ಸದೈವ ಹಿ ಇತಿ । ಮನುಷ್ಯೇಷು ನಿತ್ಯಸಂಸಾರಿವತ್ ದೈತ್ಯಾ ದಿಷು ಅಸ್ತಿ ಕಿಂನೇತ್ಯಾಹ ।**

ಪ.ಸಂ.—ತೇ ಚ ಮಧ್ಯಮ ಮನುಷ್ಯಾ ಏವ ಸಂಖ್ಯಾತಾಃ । ಸರ್ವದಾ ಸ್ವರ್ಗ ಭೂ ನಿರಯ ಚಾರಿಣಃ ।

**ಭಾಷ್ಯಾದೌ ಸರ್ವತ್ರ ಮನುಷ್ಯೇಷು ಏವ ನಿತ್ಯ ಸಂಸಾರಿಣಾಂ ಮುಕ್ತ ತ್ವೇನಾಸುರಾದಾವನುಕ್ತೇರಿತಿ ಭಾವಃ । ಚೋಷ್ಯೂಯತೇವಿಶ ಇಂದ್ರೋ ಮನುಷ್ಯಾನಿತಿ ಶ್ರುತೇಶ್ಚ । ತನೋ ಯೋಗ್ಯಾನ್ ವಿಭಜತಿ ।**

ನಿತ್ಯಸಂಸಾರಿಗಳು ನಿರಂತರದಲ್ಲೂ ಸುಖದುಃಖಗಳನ್ನು ಮಿಶ್ರವಾಗಿ ಅನುಭವಿಸುತ್ತಾರೆ. ಎಡಬಿಡದೆ ಸುಖದನಂತರ ದುಃಖ, ದುಃಖಾನಂತರ ಸುಖ ಹೀಗೆ ನಿರ್ಣಯದಲ್ಲಿ ಜೀವರಲ್ಲಿ ಮಧ್ಯಮರಾದ ಮನುಷ್ಯರು ಎಂದಿಗೂ ಸಂಸಾರಯೋಗ್ಯರೇ ಎಂದಿರುತ್ತಾರೆ.

ಮನುಷ್ಯರಲ್ಲಿ ನಿತ್ಯಸಂಸಾರಿಗಳಂತೇ ದೈತ್ಯರಲ್ಲಿಯೂ ಇದ್ದಾರೆಯೇ ? ಎಂದರೆ ಇರುವುದಿಲ್ಲ. ಮಧ್ಯಮ ಜೀವರೆಂದರೆ ಮನುಷ್ಯರೇ ಅವರೂ ಅಸಂಖ್ಯಾತರಾಗಿರುತ್ತಾರೆ. ನಿತ್ಯ ಸಂಸಾರಿಗಳೆಂದರೆ ಸ್ವರ್ಗ, ಭೂ, ನರಕಗಳಲ್ಲಿ ಸದಾ ಸಂಚರಿಸುತ್ತಿರುವುದೇ (ಆಗಲಿ) ಇವರಿಗೆ ಎಂದಿಗೂ ಮುಕ್ತಿ ಇರುವುದಿಲ್ಲ.

ಭಾಷ್ಯದಲ್ಲಿಯೂ ಇನ್ನು ಇತರ ಗ್ರಂಥಗಳಲ್ಲಿಯೂ ಅಸುರರಿಗೆ ನಿತ್ಯಸಂಸಾರಿತ್ವವನ್ನಾಗಲಿ, ಆನಂದ ಮುಕ್ತತೆ ಆಗಲಿ ಹೇಳಿರುವುದಿಲ್ಲ, ದೇವದಾನವರಿಗೆ ಒಡೆಯನಾದ ಶ್ರೀಹರಿಯು ಯೋಗ್ಯತೆಮೀರಿ ಹೋಗುವ ದೇವತೆಗಳನ್ನೂ ದಾನವರನ್ನೂ ಶಿಕ್ಷಿಸುತ್ತಾನೆ ಎಂದು ಹೇಳುವ ಶ್ರುತಿಯೇ ಪ್ರಮಾಣವು. ತಮೋಯೋಗ್ಯರ ವಿಭಾಗವನ್ನು ಹೇಳುತ್ತಾರೆ.

ಪ.ಸಂ.—ತಮೋಯೋಗ್ಯಾಸ್ತು ಚತುರ್ವಿಧಾಃ । ದೈತ್ಯಾ ರಾಕ್ಷಸಾ ಪಿಶಾಚಾ ಮನುಷ್ಯಾಧಮಾಶ್ಚೇತಿ ।

**ಅತ್ರ ದೈತ್ಯರಕ್ಷಃ ಪಿಶಾಚಕಾಃ । ಮರ್ತ್ಯಾಧಮಾಶ್ಚತುರ್ಥೈವ ತಮೋಯೋಗ್ಯಾ ಪ್ರಕೀರ್ತಿತಾ ಇತಿ ತತ್ವಸಂಖ್ಯಾನಂ ಮಾನಂ । ಮಾಯಾವಾದಿನಸ್ತು ಸರ್ವೇऽಪಿ ಜೀವಾಃ ಪರಸ್ಪರಂ ಪರಮಾತ್ಮನಾ ಚಾಭಿನ್ನಾಃ । ಭೇದ ಪ್ರತ್ಯಯಸ್ತು ಭ್ರಮ ಇತಿ ಮನ್ಯಂತೇ । ತನ್ನಿರಾಕರೋತಿ ।**

ಪ ಸಂ.—ಸರ್ವೇऽಪಿ ಜೀವಾಃ ಪರಸ್ಪರಂ ಪರಮಾತ್ಮನಾ ಚ ಭಿನ್ನಾಃ ।

ತಮೋಯೋಗ್ಯರೂ ನಾಲ್ಕು ವಿಧದವರಾಗಿರುತ್ತಾರೆ. ದೈತ್ಯರು ರಾಕ್ಷಸರು ಪಿಶಾಚಿಗಳು ಮತ್ತು ಮನುಷ್ಯಾಧಮರು. ಈ ವಿಷಯದಲ್ಲಿ ದೈತ್ಯ ರಾಕ್ಷಸ ಪಿಶಾಚ ಮನುಷ್ಯಾಧಮರೆಂಬ ನಾಲ್ಕು ವಿಧರು ತಮೋ ಯೋಗ್ಯರು ಎಂದು ಹೇಳುವ ತತ್ವಸಂಖ್ಯಾನೋಕ್ತಿಯೇ ಪ್ರಮಾಣವು.

ಮಾಯಾವಾದಿಗಳು ಸರ್ವ ಜೀವರು ಪರಸ್ಪರವಾಗಿ ಪರಮಾತ್ಮನಿಂದ ಅಭಿನ್ನರೇ ಎಂದು ಹೇಳುತ್ತಾರೆ. ಭೇದ ಜ್ಞಾನವಾದರೂ ಭ್ರಮ ಮೂಲಕವೇ ಎನ್ನುತ್ತಾರೆ. ಅದನ್ನು ನಿರಾಕರಿಸಲು ಸರ್ವ ಜೀವರು ಪರಮಾತ್ಮನಿಂದ ಸುತರಾಂ ಭಿನ್ನರೇ ಆಗಿರುತ್ತಾರೆ ಎಂದು ಹೇಳುತ್ತಾರೆ.

**ಪರಮಾತ್ಮನೇತ್ಯುಪಲಕ್ಷಣಂ । ಲಕ್ಷ್ಮ್ಯಾಃ ಜಡೇಭ್ಯಶ್ಚೇತಿ ದ್ರಷ್ಟವ್ಯಂ। ಅಭೇದಸ್ತು ಪ್ರಮಾಣಾಭಾವಾತ್ ಪ್ರಮಾಣ ವಿರುದ್ಧತ್ವಾತ್ ಚ ಅಯುಕ್ತ**

**ಏತಿ ಭಾವಃ । ಅಧಿಕಂತು ಸುಧಾನ್ಯಾಯಾಮೃತಾದೌದ್ರಷ್ಟವ್ಯಂ । ರಾಮಾನುಜಾಸ್ತು । ಬ್ರಹ್ಮಾದಿ ಜೀವಾನಾಂ ತಾರತಮ್ಯಂ ಸಂಸಾರ ಏವ । ಮುಕ್ತೌ ತು ಸರ್ವೇ ಪರಸ್ಪರಂ ಪರಮಾತ್ಮನಾ ಚ ಸಮಾಃ । ನಿರಂಜನಃ ಪರಮಂ ಸಾಮ್ಯಮುಪೈತಿ ಇತಿ ಶ್ರುತೇರಿತ್ಯಾಹುಃ। ತಾರ್ಕಿಕಾಸ್ತು ಮುಕ್ತ್ಯನಂತರಂ ಸರ್ವೇಽಪಿ ಜೀವಾಃ ಸಮಾಃ । ಇತ್ಯಾಹುಃ । ಏಕ ವಿಂಶತಿ ದುಃಖಧ್ವಂಸರೂಪ ಮುಕ್ತೌ ವಿಶೇಷಾಭಾವಾತ್ । (ಮತತ್ರಯಮಪ್ಯಯುಕ್ತಂ)। ಪರಮಾತ್ಮಾ ತು ಸರ್ವಕರ್ತಾ । ಸರ್ವಜ್ಞಃ । ಅತಃ ಸರ್ವೋತ್ತಮಃ ಇತ್ಯಾಹುಃ ।**

ಪ,ಸಂ.—ಸಂಸಾರೇ ಮುಕ್ತೌ ಚ ತಾರತಮ್ಯೋಪೇತಾಃ ।

ಸಂಸಾರಾವಸ್ಥೆಯಲ್ಲಿಯೂ, ಮುಕ್ತಾವಸ್ಥೆಯಲ್ಲಿಯೂ, ಪರಮಾತ್ಮನಿಂದಲೂ, ಲಕ್ಷ್ಮೀದೇವಿಯಿಂದಲೂಜಡಪದಾರ್ಥಗಳಿಂದಲೂ ಸರ್ವಜೀವರು ತಾರತಮ್ಯ ಉಳ್ಳವರೇ ಆಗಿರುತ್ತಾರೆ.

ಅಭೇದವೆಂಬುದಕ್ಕೆ ಪ್ರಮಾಣವಿಲ್ಲದಿರುವುದರಿಂದಲೂ, ಪ್ರಮಾಣ ವಿರುದ್ಧವಾದುದರಿಂದಲೂ ಅಯುಕ್ತವೇ ಆಗಿರುತ್ತದೆ. ಹೆಚ್ಚಿನ ವಿಷಯವನ್ನು ಶ್ರೀಸುಧಾನ್ಯಾಯಾಮೃತಾದಿಗಳಲ್ಲಿ ಕಾಣತಕ್ಕದ್ದು. ರಾಮಾನುಜರಾದರೋ ಬ್ರಹ್ಮಾದಿ ಜೀವರ ತಾರತಮ್ಯವು ಸಂಸಾರದಲ್ಲಿಯೇ, ಮುಕ್ತಿಯಲ್ಲಿ ಸರ್ವಜೀವರು ಪರಮಾತ್ಮನಿಂದ ಸಮರೇ ಎಂದು ಹೇಳುತ್ತಾರೆ. ಜೀವರು ದೋಷರಹಿತರಾಗಿ ಪರಮಾತ್ಮನ ಸಮರಾಗುತ್ತಾರೆಂದು ಶ್ರುತಿ ಇರುವುದರಿಂದ ಎಂದು ಹೇಳುತ್ತಾರೆ. ತಾರ್ಕಿಕರು ಮುಕ್ತ ನಂತರ ಸರ್ವ ಜೀವರೂ ಸಮರೇ ಎಂದು ಹೇಳುತ್ತಾರೆ. ಅದು ಅಪದ್ಧವು. ಇಪ್ಪತ್ತೊಂದು ದುಃಖಧ್ವಂಸರೂಪ ಮುಕ್ತಿಯಲ್ಲಿ ಏನೂ ವಿಶೇಷವಿಲ್ಲವಾದ್ದರಿಂದ ಪರಮಾತ್ಮನು ಸದಾ ಸರ್ವಕರ್ತನು, ಸರ್ವಜ್ಞನು, ಸರ್ವೋತ್ತಮನು ಎಂದು ತಿಳಿಸುತ್ತಾರೆ.

ಸಂಸಾರದಲ್ಲಿಯೂ, ಮುಕ್ತಿಯಲ್ಲಿಯೂ ಸರ್ವಜೀವರೂ ಸದಾ ತಾರತಮ್ಯ ಉಳ್ಳವರೇ ಆಗಿರುತ್ತಾರೆ.

**ತದುಕ್ತಂ ನಿರ್ಣಯೇ । ಮುಕ್ತಾನಾಂ ಚ ನ ಹೀಯಂತೇ ತಾರತಮ್ಯಂ ಚ ಸರ್ವದಾ ಇತಿ । ನಿರ್ದೋಷತ್ವಂ ತಾರತಮ್ಯಂ ಮುಕ್ತಾನಾಮಪಿ ಚೋಚ್ಯತ ಇತಿ ಚ । ಬೃಹದ್ಭಾಷ್ಯೇಽಪಿ । ಮಾನುಷಾದಿ ವಿರಿಂಚಾಂತಂ ಸುಖಂ ಮುಕ್ತೌ ಶತೋತ್ತರಮಿತಿ । ಷಟ್‌ಪ್ರಶ್ನಭಾಷ್ಯೇಽಪಿ । ವಿಷ್ಣೋಃ ಪ್ರಾಣಸ್ತತಃ ಶ್ರದ್ಧಾ ಇತ್ಯಾರಭ್ಯ ತತಃ ತನಿಃ ಪೃಥಿವ್ಯಾತ್ಮಾ ಕರ್ಮಾತ್ಮಾ ಪುಷ್ಕರಸ್ತತಃ । ಕ್ರಮಾತ್ ಪ್ರತ್ಯವರಾ ಏತೇ ಮುಕ್ತಾಃ ಸರ್ವಗುಣೈರಪೀತಿ । ಈಶಾವಾಸ್ಯಭಾಷ್ಯೇಽಪಿ। ಮಾನುಷಾದಿ ವಿರಿಂಚಾಂತಂ ತಾರತಮ್ಯಂ**

**ವಿಮುಕ್ತಿಗಮಿತಿ । ತೈತ್ತಿರೀಯಭಾಷ್ಯಮಪಿ । ಕಾಮಃ ಸಂಕಲ್ಪ ಆನಂದೋ ಮುಕ್ತಾನಾಂ ತಾರತಮ್ಯತ ಇತಿ ।**

ಮುಕ್ತರಲ್ಲಿ ತಾರತಮ್ಯವು ಎಂದಿಗೂ ನಷ್ಟವಾಗುವುದಿಲ್ಲ. ಮುಕ್ತರಲ್ಲಿ ನಿರ್ದೋಷತೆ ಹಾಗೂ ತಾರತಮ್ಯವುಎಂದುನಿರ್ಣಯದಲ್ಲಿ ಹೇಳಿರುತ್ತದೆ. ಬೃಹದ್ಭಾಷ್ಯ ದಲ್ಲಿಯೂ ಸಹ ಮುಕ್ತಿಯಲ್ಲಿ ಮನುಷ್ಯರ ಆನಂದದಿಂದ, ಬ್ರಹ್ಮ ಪರ್ಯಂತವಾಗಿ ಆನಂದವು ನೂರು ನೂರು ಭಾಗ ಅಧಿಕವಾಗಿರುತ್ತದೆ ಎಂದು ಹೇಳಿದೆ. ಷಟ್‌ಪ್ರಶ್ನ ಭಾಷ್ಯದಲ್ಲಿಯೂ, ಮುಖ್ಯ ವಿಷ್ಣುವು ನಂತರ ಪ್ರಾಣ, ತರುವಾಯ ಶ್ರದ್ಧಾ, ನಂತರ ಶನೇಶ್ವರ ಪೃಥಿವೀ ಕರ್ಮಾಭಿಮಾನಿ ಪುಷ್ಕರ ಹೀಗೆ ಕ್ರಮವಾಗಿ ಮೋಕ್ಷದಲ್ಲಿ ಅವರರು (ಆನಂದದಿಂದ ಅಲ್ಪರು) ಗುಣಗಳಿಂದಲೂ ಅವರರು ಹೀಗೆ ಹೇಳಿದೆ. ಈಶಾವಾಸ್ಯಭಾಷ್ಯದಲ್ಲಿಯೂ ಮುಕ್ತಿಯಲ್ಲಿ ಮನುಷ್ಯೋತ್ತಮರಿಂದ ಆರಂಭಿಸಿ, ಬ್ರಹ್ಮ ಪರ್ಯಂತವಾದ ತಾರತಮ್ಯವು ನಿಶ್ಚಿತವಾದುದೇ ಎಂದು ಹೇಳಿದೆ. ಇನ್ನೂ ತೈತ್ತಿರೀಯ ಭಾಷ್ಯದಲ್ಲಿ ಸಹ ಮುಕ್ತರಲ್ಲಿ ಇಚ್ಛಾ ಸಂಕಲ್ಪ, ಆನಂದ ಎಲ್ಲಾ ತಾರತಮ್ಯಾನುಸಾರವಾಗಿಯೇ ಎಂದು ಹೇಳಿದೆ.

**ಅನುವ್ಯಾಖ್ಯಾನಮಪಿ । ಮುಕ್ತಾನಾಂ ತಾರತಮ್ಯಂ ಚ ಮಾನೈರು ಕ್ತೈರ್ನ ಚಾಲ್ಯತೇ । ತಾರತಮ್ಯಂತು ಮುಕ್ತೌ ತು ತೇನೈವಾಧ್ಯವ ಸೀಯತೇ । ತಾರತಮ್ಯಂ ನ ಚೇನ್ಮುಕ್ತೌ ಕುತಃ ಕುರ್ಯುಃ ಶುಭಂ ಪುನರಿತಿ । ಯೋಗಿನಾಂ ಭಿನ್ನಲಿಂಗಾನಾಮಭಿಭೂತ ಸ್ವರೂಪಿಣಾಂ । ಪ್ರಾಪ್ತಾನಾಂ ಪರಮಾನಂದಂ ತಾರತಮ್ಯಂ ಸದೈವಹೀತಿ ಗೀತಾಭಾಷ್ಯಂ । ಮುಕ್ತಾಃ ಪ್ರಾಪ್ಯ ಪರಂ ವಿಷ್ಣುಂ ತದ್ದೇಹಂ ಸಂಶ್ರಿತಾ ಅಪಿ । ತಾರ-ತಮ್ಯೇನ ತಿಷ್ಠಂತಿ ಗುಣೈರಾನಂದ ಪೂರ್ವಕೈಃ । ಮುಕ್ತಾವಪಿ ತದನ್ಯೇ ಯೇ ಭೂಪಾಚ್ಛತಗುಣಾವರಾಃ ಇತಿ ಗೀತಾ ತಾತ್ಪರ್ಯಂ ।**

ಪ್ರಸಿದ್ಧ ಪ್ರಮಾಣಗಳಿಂದ ಮುಕ್ತಿಯಲ್ಲಿ ತಾರತಮ್ಯವು ಇಲ್ಲವೆನ್ನಲು ಶಕ್ಯವೇ ಇಲ್ಲ. ಮುಕ್ತಿಯಲ್ಲಿ ತಾರತಮ್ಯವಿಲ್ಲದ ಪಕ್ಷದಲ್ಲಿ ಸಾಧನೆಯಲ್ಲಿ ವ್ಯತ್ಯಾಸವೇಕೆ ಬರುತ್ತಿತ್ತು ? ಹೀಗೆ ಅನುವ್ಯಾಖ್ಯಾನದಲ್ಲಿ ಹೇಳಿದೆ. ಗೀತಾಭಾಷ್ಯದಲ್ಲಿಯೂ ಲಿಂಗ ಭಂಗಉಳ್ಳವರಾಗಿ ಆನಂದಾಭಿವ್ಯಕ್ತಿಉಳ್ಳ ಯೋಗಿಗಳಲ್ಲಿ ಪರಮಾನಂದ ತಾರತಮ್ಯ ಇದ್ದೇ ಇದೆ ಎಂದು ಹೇಳಿದೆ. ಗೀತಾತಾತ್ಪರ್ಯದಲ್ಲಿಯೂ ವಿಷ್ಣುವನ್ನು ಹೊಂದಿ ಸ್ವರೂಪದೇಹವನ್ನು ಪಡೆದವರಾದರೂ, ಆನಂದಾದಿ ಗುಣಗಳಿಂದ ತಾರತಮ್ಯ ಯುಕ್ತರೇ ಆಗಿರುತ್ತಾರೆ. ಅಲ್ಲಿಯೂ ಪದಸ್ಥರಾಗಿದ್ದ ದೇವತೆಗಳಿಗಿಂತಲೂ ರಾಜರು ಋಷಿಗಳು ನೂರುಗುಣಗಳಿಂದ ಅವರರೇ ಆಗಿರುತ್ತಾರೆ.

ಪರಮಂ ಸಾಮ್ಯಮುಪೈತೀತಿ ಉಕ್ತೇರ್ಗತಿರುಕ್ತಾ ಗೀತಾಭಾಷ್ಯೇ । ಸಾಮ್ಯ ವಚನಂ ತು ಪ್ರಾಚುರ್ಯವಿಷಯಂ ದುಃಖಾಭಾವವಿಷಯಂ ಚ । ತಥಾಚೋಕ್ತಂ । ದುಃಖಾಭಾವಃ ಪರಾನಂದೋ ಲಿಂಗಭೇದಃ ಸಮಾ-ಮತಾಃ । ತಥಾಪಿ ಪರಮಾನಂದೋ ಜ್ಞಾನ ಭೇದಾತ್ತು ಭಿದ್ಯತ ಇತಿ । ಬೃಹದ್ಭಾಷ್ಯೇಪಿ । ಆನಂದೇನ ವಿನಾನ್ಯೈವ ಭೋಗೇನ ವಿಷಯೇಣ ಚ । ಸರ್ವೇ ತೇ ಬ್ರಹ್ಮಣಸ್ತುಲ್ಯಾ ಆಧಿಪತ್ಯೇನ ಚೈವಹಿ ಇತಿ । ಆಧಿಪತ್ಯಮೃತೇ ಚೈವ ಆನಂದೇನ ಚ ಕರ್ಮಣಾ । ಸರ್ವೇ ತೇ ಬ್ರಹ್ಮಣಸ್ತುಲ್ಯಾ ಭೋಗೇನ ವಿಷಯೇಣ ಚ ।

ರಾಮಾನುಜರು, ದೋಷರಹಿತರಾಗಿ ಜೀವರು ಬ್ರಹ್ಮನಿಗೆ ಸಮರಾಗುತ್ತಾರೆ ಎಂದು ಶ್ರುತಿ ಉದಾಹರಿಸಲು, ಅದರ ಗತಿಏನೆಂದು ಗೀತಾಭಾಷ್ಯದಲ್ಲಿ ಹೇಳಿದೆ. ಶ್ರುತಿಯಲ್ಲಿರುವ ಸಾಮ್ಯ ಶಬ್ದವು ಆನಂದ ಪ್ರಾಚುರ್ಯಾರ್ಥಕವು. ದುಃಖಾಭಾವ ವಿಷಯವೂ ಆಗಿರುತ್ತದೆ. ಮುಕ್ತರಲ್ಲಿ ಸಮತೆ ಎಂದರೆ, ಲಿಂಗಭಂಗದಲ್ಲಿಯೂ ದುಃಖಾಭಾವದಲ್ಲಿ ಸಮರೆಂದರ್ಥವು. ಆದರೆ, ಪರಮಾನಂದ ಜ್ಞಾನದಲ್ಲಿ ಭೇದ (ತಾರತಮ್ಯ) ಇದ್ದೇ ಇರುತ್ತದೆ. ಎಂದು ಹೇಳಿದೆ.

ಬೃಹದ್ಭಾಷ್ಯದಲ್ಲಿಯೂ ಸಹ ಮುಕ್ತರಲ್ಲಿ ವಿಷಯ ಭೋಗ ಸಾಮಾನ್ಯದಲ್ಲಿ ಬ್ರಹ್ಮನಿಂದ ಸಾಮ್ಯವೇ. ಆದರೆ, ಆನಂದಾತಿಶಯ ಆಧಿಪತ್ಯ ಹೊರತಾಗಿ ಸಾಮ್ಯವು. ಎಲ್ಲರಿಗೂ ಮುಕ್ತಿಯಲ್ಲಿ ಸಾಮ್ಯವೆಂದರೆ ಕೇವಲ ವಿಷಯಭೋಗ ಮಾತ್ರದಲ್ಲಿಯೇ ಎಂದು ಹೇಳಿರುತ್ತದೆ.

ಭಾಷ್ಯಮಪಿ । ಬಹವಃ ಸೂರ್ಯಕಾರ್ಯದ್ವತ್ ಸೂರ್ಯಸ್ಯ ಸದೃಶಾಜಲೇ । ಏವಮೇವಾತ್ಮಕಾಲೋಕೇ ಪರಾತ್ಮ ಸದೃಶಾಮತಾ ಇತಿ ।

ಅನುವ್ಯಾಖ್ಯಾನೇಪಿ । ಜೀವಸ್ಯ ತಾದೃಶತ್ವಂ ಚ ಚಿತ್ತ್ವಮಾತ್ರಂ ನ ಚಾಪರಂ । ತಾವನ್ಮಾತ್ರೇಣ ಚಾಭಾಸೋ ರೂಪಮೇಷಾಂ ಚಿದಾತ್ಮನಾ ಮಿತಿ ।

ಭಾಷ್ಯದಲ್ಲಿ, ಜಲದಲ್ಲಿ ಸೂರ್ಯನ ಅನೇಕ ಪ್ರತಿಬಿಂಬಗಳು ಸೂರ್ಯನಂತೆ ಹೇಗೆ ಕಾಣುವವೋ ಹಾಗೆ ಸಕಲಲೋಕಗತ ಜೀವರು ಪರಮಾತ್ಮನ ಪ್ರತಿಬಿಂಬ ಗಳಾಗಿ ಪರಮಾತ್ಮನಂತೆ ತೋರುತ್ತಾರೆ ಎಂದು ಹೇಳಿದೆ.

ಅನುವ್ಯಾಖ್ಯಾನದಲ್ಲಿಯೂ ಜೀವರಿಗೆ (ಮುಕ್ತರಾದವರಿಗೆ) ಪರಮಾತ್ಮನ ಸಾಮ್ಯತೆ ಚಿನ್ಮಾತ್ರದಲ್ಲಿಯೇ, ಆನಂದಾದಿಗಳಲ್ಲಿ ಸಾಮ್ಯವಿಲ್ಲ. ಚಿನ್ಮಾತ್ರದಿಂದಲೇ ಪ್ರತಿಬಿಂಬರೂಪತೆಯು, ಚಿದಾತ್ಮರಾದ್ದರಿಂದ ಹೀಗೆ ಹೇಳಿರುತ್ತದೆ. ಆದುದರಿಂದ ಮೋಕ್ಷದಲ್ಲಿಯೂ ತಾರತಮ್ಯವು ಪ್ರಮಾಣ ಪ್ರಮಿತವೇ ಆಗಿದೆ.

ಪ.ಸಂ.—ಜೀವಾಭಿಮಾನಿನೋ ಬ್ರಹ್ಮಾದಯಃ ।

ಮುಕ್ತಿಯೋಗ್ಯ ಜೀವಾಭಿಮಾನೀ ಚತುರ್ಮುಖಃ । ನಿತ್ಯ ಸಂಸಾರಿ ಜೀವಾಭಿಮಾನೀ ಪುರಂಜನಃ ತಮೋಯೋಗ್ಯ ಜೀವಾಭಿಮಾನೀ ಕಲಿರಿತ್ಯರ್ಥಃ । ತದುಕ್ತಂ ಚತುರ್ಥ ಸ್ಕಂಧ ತಾತ್ಪರ್ಯೇ । ದೇವ ಜೀವಾಭಿಮಾನೀ ತು ಬ್ರಹ್ಮೈವ ತು ಚತುರ್ಮುಖಃ । ಮಾನುಷಾಣಾಂ ತು ಜೀವಾನಾಮಭಿಮಾನೀ ಪುರಂಜನಃ । ಸ ತು ರಾಜಾಹರೇಃ ಪುತ್ರಶ್ಚಾಸುರಾಣಾಂ ಕಲಿಃ ಸ್ವಯಮಿತಿ । ಇತಿ ಜೀವಪ್ರಕರಣಂ ॥

ತ್ರಿವಿಧ ಜೀವರಿಗೂ ಬ್ರಹ್ಮಾದಿಗಳೇ ಅಭಿಮಾನಿಗಳು, ಮುಕ್ತಿಯೋಗ್ಯ ಜೀವರಿಗೆ ಬ್ರಹ್ಮದೇವರು ಅಭಿಮಾನಿಗಳು, ನಿತ್ಯಸಂಸಾರಿ ಜೀವರಿಗೆ ಪುರಂಜನನೇ ಅಭಿಮಾನಿಯು, ತಮೋಯೋಗ್ಯ ಜೀವರಿಗೆ ಕಲಿ ಅಭಿಮಾನಿಯು ಚತುರ್ಥಸ್ಕಂಧ ತಾತ್ಪರ್ಯದಲ್ಲಿ ಇದನ್ನೇ ಹೇಳಿರುತ್ತಾರೆ. ಚತುರ್ಮುಖನೇ ದೇವಗಳ ಹಾಗೂ ಜೀವರಿಗೆ ಅಭಿಮಾನಿಯು, ಪುರಂಜನನು ಮನುಷ್ಯ ಜೀವಾಭಿಮಾನಿಯು ಆ ಪುರಂಜನನು ಕ್ಷತ್ರಿಯ ರಾಜನು ಶ್ರೀಹರಿಯ ಮಗನು. ಅಸುರರಿಗೆಲ್ಲಾ ಕಲಿಯೇ ಅಭಿಮಾನಿಯು.

ಹೀಗೆ "ಜೀವ ಪ್ರಕರವು" ಕನ್ನಡಾನುವಾದದೊಂದಿಗೆ ಸಮಾಪ್ತಗೊಂಡಿತು.

---

ಸ್ಪೃಷ್ಟದುಃಖಾ ವಿಮುಕ್ತಾಶ್ಚ ದುಃಖಸಂಸ್ಥಾ ಇತಿ ದ್ವಿಧಾ ।
ದುಃಖಸಂಸ್ಥಾ ಮುಕ್ತಿಯೋಗ್ಯಾ ಅಯೋಗ್ಯಾ ಇತಿ ಚ ದ್ವಿಧಾ ॥
ದೇವರ್ಷಿ ಪಿತೃ ಪ ನರಾ ಇತಿ ಮುಕ್ತಾಸ್ತು ಪಂಚಧಾ ।
ಏವಂ ವಿಮುಕ್ತಿಯೋಗ್ಯಾಶ್ಚ, ತಮೋಗಾಃ ಸೃತಿಸಂಸ್ಥಿತಾಃ ।
ಇತಿ ದ್ವಿಧಾ ಮುಕ್ತ್ಯಯೋಗ್ಯಾಃ ದೈತ್ಯ ರಕ್ಷಃ ಪಿಶಾಚಕಾಃ ॥
ಮರ್ತ್ಯಾಧಮಾಶ್ಚತುರ್ಧೈವ ತಮೋಯೋಗ್ಯಾ ಪ್ರಕೀರ್ತಿತಾಃ ।
ತೇಚ ಪ್ರಾಪ್ತಾಂಧತಮಸಃ ಸೃತಿಸಂಸ್ಥಾ ಇತಿ ದ್ವಿಧಾ ॥

—ತತ್ವಸಂಖ್ಯಾನಮ್

# ೧೬. ಅವ್ಯಾಕೃತಾಕಾಶ ಪ್ರಕರಣ

**ಇದಾನೀಂ ಅವ್ಯಾಕೃತಾಕಾಶಂ ನಿರೂಪಯತಿ ।**

ಪ.ಸಂ.—ಸೃಷ್ಟಿಪ್ರಲಯೋರ್ವಿಕಾರಶೂನ್ಯ ದಿಗವ್ಯಾಕೃತಾಕಾಶಂ ।

**ಆಕಾಶಸ್ಯ ಯಥಾ ದ್ರವ್ಯತ್ವಂ ತಥೋಕ್ತಮಧಸ್ತಾತ್ । ಅತ್ರ ದಿಗ್ರೂಪತ್ವಮವ್ಯಾಕೃತಾಕಾಶಸ್ಯ ಲಕ್ಷಣಂ । ಸೃಷ್ಟಿಪ್ರಲಯಯೋರಿತ್ಯಾದಿ ತು ತತ್ಸ್ವರೂಪಕಥನಂ । ಸೃಷ್ಟಿಕಾಲೇ ವಿಕಾರಃ ಪ್ರಲಯಕಾಲೇ ವಿನಾಶಶ್ಚ ನಾಸ್ತಿ । ಅತಏವಾವ್ಯಾಕೃತಮಿತಿ ನಾಮೇತ್ಯರ್ಥಃ । ಯದ್ಯಪಿ ಪರಾಧೀನ ವಿಶೇಷಾವಾಪ್ತಿ ಲಕ್ಷಣೋತ್ಪತ್ತಿಃ ಪ್ರಲಯೇ ತನ್ನಾಶಶ್ಚಾವ್ಯಾಕೃತಾಕಾಶಸ್ಯಾಪಿ ವಿಯದಧಿಕರಣಾನುವ್ಯಾಖ್ಯಾನೇ ಪ್ರತಿಪಾದಿತಂ । ತಥಾಪಿ ಮೂರ್ತ ಸಂಬಂಧಪರತಂತ್ರ ವಿಶೇಷಯುಕ್ । ಖಮೇವೋತ್ಪತ್ತಿಮನ್ನಾವೇತಿ । ತಥಾಪಿ ಪ್ರಕೃತ್ಯಾದಿವದನ್ಯಾಕಾರೇಣ ವಿಕಾರೋಽನಾಸ್ತಿ । ಆಕಾಶೋ ನೀಲಿಮೋದೇತಿ ನ ಪ್ರದೇಶಃ ಕಥಂಚನೇತಿ ಶ್ರುತೇಃ ।**

ಕ್ರಮಪ್ರಾಪ್ತವಾದ ಅವ್ಯಾಕೃತಾಕಾಶವನ್ನು ನಿರೂಪಿಸುತ್ತಾರೆ.

ಉತ್ಪತ್ತಿ ನಾಶರಹಿತವಾದ್ದರಿಂದ ಸೃಷ್ಟಿ, ಲಯಕಾಲಗಳಲ್ಲಿ ವಿಕಾರ ರಹಿತವಾದುದೇ ಅವ್ಯಾಕೃತಾಕಾಶವು. ಆಕಾಶಕ್ಕೆ ದ್ರವ್ಯ ಪದಾರ್ಥತೆಯನ್ನೂ ಹಿಂದೆ ಉಪಪಾದಿಸಿದೆ. ದಿಗ್ರೂಪತೆಯೇ ಅವ್ಯಾಕೃತಾಕಾಶ ಲಕ್ಷಣವು. ಸೃಷ್ಟಿ ಪ್ರಳಯಗಳಲ್ಲಿ ವಿಕಾರವಿಲ್ಲದಿರುವಿಕೆ ಎಂಬುದು ಸ್ವರೂಪ ನಿರೂಪಣೆಯು. ಆ ಆಕಾಶಕ್ಕೆ ಸೃಷ್ಟಿ ವಿಕಾರ ಪ್ರಳಯ ನಾಶವಿಲ್ಲದಿರುವುದರಿಂದಲೇ ಅವ್ಯಾಕೃತ ಆಕಾಶವೆಂದು ಹೆಸರು. ಆದರೆ ವಿಯದಧಿಕರಣ ಅನುವ್ಯಾಖ್ಯಾನದಲ್ಲಿ ಪರಾಧೀನ ವಿಶೇಷಾವಾಪ್ತಿ ಲಕ್ಷಣ ಸೃಷ್ಟಿಯು ಪ್ರಳಯಕಾಲದಲ್ಲಿ ತನ್ನಾಶವು ಪ್ರತಿಪಾದಿತವಾಗಿದೆ. ಆದರೂ ಮೂರ್ತ (ಪೃಥಿವೀ, ಅಪ್, ಅಗ್ನಿ) ಸಂಬಂಧ ಪರತಂತ್ರರೂಪ ವಿಶೇಷ ಯುಕ್ತತೆಯೇ ಆಗಿರುತ್ತದೆ. (ಖಂ)ಭೂತಾಕಾಶವು ಉತ್ಪತ್ತಿ ಇರುವುದೇ ಆಗಿದೆ. ಆದರೆ ಪ್ರಕೃತಿಯಂತೆ ಬೇರೆ ಆಕಾರತಾಳುವಿಕೆ ಇರುವುದಿಲ್ಲ.

ಆಕಾಶದಲ್ಲಿ ನೀಲಿಮೆ ಕಾಣುತ್ತದೆ. ಪ್ರದೇಶಗಳಲ್ಲಿಲ್ಲ ಎಂಬ ಶ್ರುತಿಯಿಂದ ಅವ್ಯಾಕೃತಾಕಾಶ ಭೂತಾಕಾಶಗಳೆಂಬ ಎರಡು ಆಕಾಶಗಳು ಸಿದ್ಧಿಸುತ್ತವೆ.

**ತಥಾಽವ್ಯಾಕೃತಂ ಹಿ ಗಗನಂ ಸಾಕ್ಷಿಗೋಚರಂ । ಪ್ರದೇಶ ಇತಿ ವಿಜ್ಞೇಯೋ ನಿತ್ಯಂ ನೋತ್ಪದ್ಯತೇ ಹಿ ತದಿತ್ಯನುವ್ಯಾಖ್ಯಾನೋಕ್ತೇಶ್ಚ । ಅತ**

**ಏವ ದಿಗ್ರೂಪತ್ವಮಪ್ಯೇತತ್ಪ್ರಮಾಣಸಿದ್ಧಂ । ತಥಾ ಪ್ರಕೃತ್ಯಧಿಕರಣ ಸುಧಾಯಾಮಪಿ । ಸಾಕ್ಷಿ ಸಿದ್ಧಮೇವ ಗಗನಂ ತದ್ಭಾಗಾ ಏವ ದಿಶೋ ನದ್ರವ್ಯಾಂತರಮಿತ್ಯುಕ್ತೇಃ । ನನ್ವಾಕಾಶಾದಿ ಪಂಚ ಭೂತಸ್ಯತಾಮಸಾಹಂಕಾರ ಕಾರ್ಯತ್ವಾನ್ನವಿಕಾರಾಭಾವಃ ಇತ್ಯತ ಆಹ ।**

ಪ.ಸಂ. – ಭೂತಾಕಾಶ ಭಿನ್ನಂ । ಏಕಂ ನಿತ್ಯಂ ವ್ಯಾಪ್ತಂ ಸ್ವಗತಂ ಚ ।

ಹಾಗೆಯೇ ಅನುವ್ಯಾಖ್ಯಾನದಲ್ಲಿ ಸಾಕ್ಷಿಗೋಚರವಾದದ್ದು ಅವ್ಯಾಕೃತಾಕಾಶವು ಪ್ರದೇಶರೂಪವಾದುದು, ನಿತ್ಯವಾದುದು, (ಇದು) ಹುಟ್ಟಿದುದು ಅಲ್ಲ ಎಂದು ಹೇಳಿರುತ್ತದೆ. ಆದುದರಿಂದಲೇ ಇದಕ್ಕೆ ದಿಗ್ರೂಪತೆಯೂ ಪ್ರಮಾಣಸಿದ್ಧವು! ಹೀಗೆಯೇ ಪ್ರಕೃತ್ಯಧಿಕರಣ ಸುಧಾದಲ್ಲಿಯೂ ಸಾಕ್ಷಿ ಸಿದ್ಧವಾದುದು ಅವ್ಯಾಕೃತಾಕಾಶವು ಅದರ ಭಾಗಗಳೇ ದಿಕ್ಕುಗಳು, ಅದು ದ್ರವ್ಯಾಂತರವಲ್ಲ ಎಂದು ಹೇಳಿರುತ್ತಾರೆ. ಆಕಾಶಾದಿ ಪಂಚಮಹಾಭೂತಗಳು ತಾಮಸಾಹಂಕಾರ ಕಾರ್ಯವಾಗಿರುವುದರಿಂದ ವಿಕಾರವಿಲ್ಲ ಅನ್ನುವುದು ಹೇಗೆ ಅಂದರೆ ಹೇಳುತ್ತಾರೆ. ಪಂಚಮಹಾಭೂತಗಳೊಳ್ಳೊಂದಾದ ಆಕಾಶವು ಅವ್ಯಾಕೃತಾಕಾಶಭಿನ್ನವು.

ಅವ್ಯಾಕೃತಾಕಾಶವು ಭೂತಾಕಾಶದಿಂದ ಭಿನ್ನವು, ಒಂದೇ, ನಿತ್ಯವು, ವ್ಯಾಪ್ತವು, ಸ್ವಗತವು ಆಗಿರುತ್ತದೆ.

**ತಥಾ ಚ ಆತ್ಮನ ಆಕಾಶಃ ಸಂಭೂತ ಇತ್ಯಾದಿ ಉತ್ಪತ್ತಿ ವಾಕ್ಯಸ್ಯ ಭೂತಾಕಾಶವಿಷಯತ್ವಮೇವ ನಾವ್ಯಾಕೃತಾಕಾಶ ವಿಷಯತ್ವಮುಕ್ತ ಪ್ರಮಾಣಾದೇವ ಇತಿ ಭಾವಃ । ಪುನಃ ತತ್ಸ್ವರೂಪಮಾಹ । ಏಕಮಿತ್ಯಾದಿ। ನನ್ವಾಕಾಶಸ್ಯ ಸ್ವಗತತ್ವಮಯುಕ್ತಂ । ಆತ್ಮಾಶ್ರಯ ಪ್ರಸಂಗಾದಿತಿ ಚೇನ್ನ। ಪ್ರಮೇಯತ್ವೇ ಪ್ರಮೇಯತ್ವವತ್ಸ್ವಗತತ್ವಸ್ಯೇಹ ಗಗನಮಿತಿ ಪ್ರತ್ಯಯ ಸಿದ್ಧತ್ವಾತ್ । ತದುಕ್ತಂ ಅನುವ್ಯಾಖ್ಯಾನೇ । ಈಶೋದೇಶಶ್ಚ ಕಾಲಶ್ಚ ಸ್ವಗತಾ ಏವ ಸರ್ವದಾ ಇತಿ । ದಿಶಃ ಪ್ರಾಚ್ಯಾದಿ ವ್ಯವಹಾರ ಆದಿತ್ಯೋದಯೋಪಾಧಿಕಃ । ನತು ಸ್ವಾಭಾವಿಕ ಇತಿ ತಾರ್ಕಿಕಾಃ । ತಾನ್ನಿರಾಕರೋತಿ।**

ಪ.ಸಂ. —ಪ್ರಾಚ್ಯಾದಿ ಸ್ವಾಭಾವಿಕಾವಯವೋಪೇತಂಚ ।

ಪರಮಾತ್ಮನಿಂದ ಆಕಾಶ ಹುಟ್ಟಿತು ಎಂಬ ಶ್ರುತಿಯು ಹುಟ್ಟು ಪದಕ್ಕೆ ಭೂತಾಕಾಶವೇ ವಿಷಯವು. ಅವ್ಯಾಕೃತಾಕಾಶವಲ್ಲ ಎನ್ನುವುದು ಅನೇಕ ಪ್ರಮಾಣಗಳಿಂದ ಸಿದ್ಧವು. ಪುನಃ ಅದರ ಸ್ವರೂಪವನ್ನು ತಿಳಿಸುತ್ತಾರೆ. ಅವ್ಯಾಕೃತಾಕಾಶವು ಒಂದೇ, ನಿತ್ಯವು, ವ್ಯಾಪ್ತವು, ಸ್ವಗತವೂ ಆಗಿರುತ್ತದೆ.

ಅವ್ಯಾಕೃತಾಕಾಶಕ್ಕೆ ಸ್ವಗತತ್ವವನ್ನು ಹೇಳಿದರೆ ಆತ್ಮಾಶ್ರಯ ಪ್ರಸಂಗವಲ್ಲವೇ? ಎಂದರೆ ದೋಷ ಬರುವುದಿಲ್ಲ. ಪ್ರಮೇಯತ್ವದಲ್ಲಿ ಪ್ರಮೇಯತ್ವದಂತೆ ಇಲ್ಲಿ ಆಕಾಶವು ಹೀಗೆ ವ್ಯವಹಾರ ಪ್ರಸಿದ್ಧವಾಗಿರುವುದರಿಂದ, ಇದನ್ನೇ ಅನುವ್ಯಾಖ್ಯಾನದಲ್ಲಿ ಈಶನು,

ದೇಶವು, ಕಾಲವು ಇವು ಸರ್ವದಾ ಸ್ವಗತಗಳೇ (ತನ್ನಲ್ಲಿ ತಾನೇ) ಇರುತ್ತವೆ ಎಂದು ಹೇಳುತ್ತಾರೆ.

ತಾರ್ಕಿಕರು ಆಕಾಶದ ಪೂರ್ವಾದಿ ದಿಕ್ ವ್ಯವಹಾರವು ಸೂರ್ಯಾದಿ ಉಪಾಧಿಕವು(ನಿಮಿತ್ತವು) ಸ್ವಾಭಾವಿಕವಲ್ಲ ಎನ್ನುತ್ತಾರೆ. ಅದನ್ನು ನಿರಾಕರಿಸಲು ಹೇಳುತ್ತಾರೆ. ಅವ್ಯಾಕೃತಾಕಾಶಕ್ಕೆ ಪೂರ್ವಾದಿ ಅವಯವ(ಭಾಗ)ಗಳು ಸ್ವಾಭಾವಿಕವಾದವುಗಳೇ ಆಗಲಿ ಸೂರ್ಯೋದಯಾದಿ ನಿಮಿತ್ತಗಳಾದವುಗಳಲ್ಲ.

**ನನು ದಿಶಃ ಪ್ರಾಚ್ಯಾದಿತ್ವಂ ಸ್ವಾಭಾವಿಕಂ । ಅನ್ಯಥಾಯಸ್ಯದಿಕ್ ಪ್ರಾಚೀ ಸಾ ದಿಗಂತರಗತಸ್ಯಾಪಿ ಪ್ರಾಚೀ ಸ್ಯಾತ್ । ಸ್ವಾಭಾವಿಕಸ್ಯ ಅನಪಾಯಾತ್ । ತಥಾ ಚ ಆದಿತ್ಯೋದಯೇನೈವ ಪ್ರಾಚ್ಯಾದಿತ್ವಮಿತಿ ಚೇನ್ನ । ತಸ್ಯ ಸ್ವಾಭಾವಿಕತ್ವಾತ್ । ತಥಾಹಿ । ಕಿಂ ದಿಕ್‌ಸ್ವರೂಪಮೇವ ಆದಿತ್ಯೋದಯಾದಿ ಉಪಾಧಿಕೃತಂ ಉತ ಪ್ರಾಚ್ಯಾದಿಕಂ ಅಥ ಪ್ರಾಚೀತ್ವಾದಿಕಂ ಕಿಮಾಂ ಪ್ರಾಚ್ಯಾದಿ ವ್ಯವಹಾರಃ । ನಾದ್ಯಃ। ಅಂಧಕಾರೇ ದಿಕ್‌ಪ್ರತೀತೇಃ । ತತ್ರಾದಿತ್ಯೋದಯ ರೂಪೋಪಾಧೇಃ ಅಭಾವಾತ್ । ನ ದ್ವಿತೀಯಃ । ಅಂಧಕಾರೇಪಿ ದಿಗ್‌ವಿಶೇಷಪ್ರತೀತೇಃ । ಅನ್ಯಥಾ ಮುಹೂರ್ತಾಂತರಾವಷ್ಟಬ್ಧ ಭಾಗ ಪರಿತ್ಯಾಗೇನ ಭಾಗಾಂತರೇ ಕರ ಪ್ರಸಾರಣಾದಿಕಂ ನ ಕುರ್ಯಾತ್ । ನ ತೃತೀಯಃ । ಪ್ರಾಚ್ಯಾದಿತ್ವಸ್ಯ ದಿಕ್‌ಸ್ವರೂಪತ್ವೇನ ಅಂಧಕಾರೇ ದಿಗ್ ವಿಶೇಷಪ್ರತೀತೌ ಪ್ರಾಚ್ಯಾದಿತ್ವಸ್ಯ ಅಪಿ ಭಾನಾತ್ । ನ ಚತುರ್ಥಃ । ಆದಿತ್ಯೋದಯಾದ್ಯುಪಾಧ್ಯಭಾವೇಽಪಿ ಬಹುಷು ಪ್ರಾಚ್ಯಾದಿ ವ್ಯವಹಾರಸ್ಯ ದರ್ಶನಾತ್ ।**

ದಿಕ್ಕಿನ ಪೂರ್ವಾದಿ ಭಾಗಗಳು ಸ್ವಾಭಾವಿಕವಾದವುಗಳೇ, ಹಾಗಿಲ್ಲದಪಕ್ಷದಲ್ಲಿ ಯಾವುದಕ್ಕೆ ಯಾವುದು ಪ್ರಾಚಿಯೋ, ಆ ದಿಕ್ಕಿನಲ್ಲಿರುವವುಗಳಿಗೆಲ್ಲಾ ಪ್ರಾಚೀತ್ವ (ಪ್ರಾಚೀ ಎಂಬ ವ್ಯವಹಾರ) ಬರಬೇಕಾದೀತು. ಸ್ವಾಭಾವಿಕವಾದುದನ್ನು ಕಳೆಯ್ಯುವಂತಿಲ್ಲವಾದ್ದರಿಂದ ಒಟ್ಟಿನಲ್ಲಿ ಸೂರ್ಯೋದಯದಿಂದಲೇ ಪೂರ್ವಾದಿಯು ಎಂಬುದು ಸರಿಯಲ್ಲ, ಆಕಾಶಕ್ಕೆ ಪೂರ್ವಾದಿ ಅವಯವಗಳು ಸ್ವಾಭಾವಿಕವಾದವೇ, ಸೂರ್ಯೋದಯ ನಿಮಿತ್ತವೇಕೆ ಆಗಬಾರದು ? ಎಂದರೆ,

1. ದಿಕ್ ಸ್ವರೂಪವೇ ಸೂರ್ಯೋದಯ ಉಪಾಧಿಕವೋ (ನಿಮಿತ್ತವೋ) ?
2. ದಿಕ್ ವಿಶೇಷಗಳು ಸೂರ್ಯೋದಯ ನಿಮಿತ್ತವೋ ?
3. ಪ್ರಾಚೀತ್ವಾದಿ ಧರ್ಮಗಳು ಸೂರ್ಯೋದಯ ನಿಮಿತ್ತವೋ ?
4. ಪ್ರಾಚ್ಯಾದಿ ವ್ಯವಹಾರ ಸೂರ್ಯೋದಯ ನಿಮಿತ್ತವೋ ?

ಮೊದಲನೆಯದು ಸೂರ್ಯೋದಯವಿಲ್ಲದೇ ನಿಮಿತ್ತ(ಉಪಾಧಿ) ಇಲ್ಲದೇ ಕತ್ತಲೆಯಲ್ಲೂ ದಿಕ್ಕಿನ ಜ್ಞಾನವಾಗುವುದರಿಂದ ಸರಿ ಇಲ್ಲ. ಎರಡನೆಯದು ಕತ್ತಲೆಯಲ್ಲಿಯೂ ಪ್ರಾಚ್ಯಾದಿ ವಿಶೇಷಜ್ಞಾನವಾಗುವುದರಿಂದ ಕತ್ತಲೆಯಲ್ಲಿ ಪ್ರತಿಬಂಧಕವಿಲ್ಲದೆಡೆ ಕೈ ಚಾಚುವಿಕೆ ಇರುವುದರಿಂದ ಸರಿ ಇಲ್ಲ. ಮೂರನೇ ಪಕ್ಷವು ಕತ್ತಲೆಯಲ್ಲಿಯೂ ದಿಕ್ ಜ್ಞಾನವಾಗುತ್ತಿರಲು ಅದರಲ್ಲಿಯ ಧರ್ಮವೂ ಜ್ಞಾತವಾಗುವುದರಿಂದ ಸರಿ ಇಲ್ಲ. ನಾಲ್ಕನೇ ಪಕ್ಷವೂ ಸೂರ್ಯೋದಯವೇ ಇಲ್ಲದ ಲೋಕಗಳಲ್ಲಿಯೂ ದಿಕ್ಕಿನ ವ್ಯವಹಾರ ಇರುವುದರಿಂದ ಸರಿ ಇಲ್ಲ. ಎಲ್ಲಿ ಅಂದರೆ,

**ವೈಕುಂಠ ಅನಂತಾಸನಗತ ಪರಮಾತ್ಮ ಪುರಯೋಃ ಪ್ರಾಚ್ಯಾದಿ ಭಾಗೇಷು ಜಯಾದ್ಯಾಃ ಪ್ರಾಣಾದ್ಯಾಶ್ಚ ದ್ವಾರಪಾಃ ಶ್ರೂಯಂತೇ। ತತ್ರಾದಿತ್ಯೋದಯಾಭಾವಾತ್ । ತದುಕ್ತಂ ಛಾಂದೋಗ್ಯ ಭಾಷ್ಯೇ । ಪ್ರಾಣಾಭಿಮಾನೀ ಚಕ್ಷುಶ್ಚ ಸೂರ್ಯ ಏವ ಹ್ಯುದಾಹೃತಃ । ತೇಜೋನ್ನಾದ್ಯಭಿಮಾನೀ ಚ ಪ್ರಾಗ್‌ದ್ವಾರಾಧಿಪತಿರ್ಹರೇಃ । ದಕ್ಷಿಣಾಧಿಪತಿಃ ಸೋಮೋ ವ್ಯಾನಃ ಶ್ರೋತ್ರಾಭಿಮಾನವಾನ್ । ಯಶೋಲಾವಣ್ಯರೂಪಶ್ಚ ಪಶ್ಚಿಮ ದ್ವಾರಪಸ್ತಥಾ । ವಾಗಪಾನಾತ್ಮಕೋ ವಹ್ನಿರ್ಬ್ರಹ್ಮ ತೇಜೋನ್ನದೇವತಾ । ಉತ್ತರದ್ವಾರಪಸ್ತ್ವಿಂದ್ರಃ ಸಮಾನೋ ಮನ ಆತ್ಮಕಃ । ಕೀರ್ತ್ಯೈಶ್ವರ್ಯಾತ್ಮಕೋ ನಿತ್ಯಮೂರ್ಧ್ವದ್ವಾರಪ ಏವ ಚ । ಪರಸ್ಯ ಬ್ರಹ್ಮಣಸ್ತ್ವೇತೇ ದ್ವಾರಪಾಃ ಪಂಚಕೀರ್ತಿತಾಃ ।**

ವೈಕುಂಠ ಅನಂತಸನಾದಿ ಪರಮಾತ್ಮನ ಪಟ್ಟಣಗಳಲ್ಲಿ ಜಯಾದಿಗಳು ಪ್ರಾಣಾದಿಗಳು ದ್ವಾರಪಾಲಕರೆಂದು ಹೇಳಿದೆ. ಅಲ್ಲಿ ಸೂರ್ಯೋದಯವೇ ಇರುವುದಿಲ್ಲ ಆದುದರಿಂದ ಸೂರ್ಯೋದಯೋಪಾಧಿ(ನಿಮಿತ್ತ)ದಿಗಾದಿ ವ್ಯವಹಾರ ಅನ್ನುವ ಪಕ್ಷ ಸರಿ ಇಲ್ಲ. ವೈಕುಂಠದಲ್ಲಿ ದ್ವಾರಪಾಲಕರನ್ನು ಛಾಂದೋಗ್ಯ ಭಾಷ್ಯದಲ್ಲಿ ಹೀಗೆ ಹೇಳಿರುತ್ತದೆ. ತೇಜಸ್ಸು ಅನ್ನಾದಿಗಳಿಗೆ ಅಭಿಮಾನಿಯಾದ ಪ್ರಾಣನು, ಚಕ್ಷುರಭಿಮಾನಿ ಸೂರ್ಯನು ಪೂರ್ವದಿಕ್ಕಿಗೆ ಪಾಲಕರು. ಶ್ರೋತ್ರಾಭಿಮಾನಿ ವ್ಯಾನಸೋಮರೇ ದಕ್ಷಿಣ ದಿಕ್‌ಪಾಲಕರು ಯಶೋಲಾವಣ್ಯರೂಪನಾದ ನಾಗಾತ್ಮಕನಾದ ಬ್ರಹ್ಮ ತೇಜಸ್ಸು ಅನ್ನಕ್ಕೆ ದೇವತೆಯಾದ ವಹ್ನಿಯು ಪಶ್ಚಿಮ ದಿಕ್ಪಾಲಕನು, ಇಂದ್ರನು ಉತ್ತರ ದ್ವಾರಪಾಲಕನು ನಿತ್ಯದಲ್ಲಿಯೂ ಕೀರ್ತಿ ಐಶ್ವರ್ಯ ಸ್ವರೂಪನಾದ ಸಮಾನನು ಊರ್ಧ್ವಲೋಕ ದ್ವಾರಪಾಲಕನು, ಹೀಗೆ ಐದು ಜನರೂ ಪರಬ್ರಹ್ಮನ ದ್ವಾರಪಾಲಕರೆಂದು ಪ್ರಸಿದ್ಧರಾಗಿರುತ್ತಾರೆ.

**ದ್ವಾರಪಾ ಹೃದಯೇ ಚೈವ ವಿಷ್ಣು ಲೋಕೇ ಚ ಸರ್ವದಾ । ಅಂತರ ದ್ವಾರಪಾಹ್ಯೇತೇ ಜಯಾದ್ಯಾ ಬಾಹ್ಯತಃ ಸ್ಮೃತಾಃ ಇತಿ । ನ ಚ ವೈಕುಂಠ**

ಲೋಕಾದೌ ಅಪಿ ಸೂರ್ಯೋದಯೋಸ್ತಿ ಏವ ! ಅನ್ಯಥಾ ಅಂಧಕಾರೇಣ ಗಮನಾದ್ಯನುಪಪತ್ತೇಃ । ಅತಃ ಸೂರ್ಯೋದಯ ನಿಮಿತ್ತಮೇವ ಪ್ರಾಚೀತ್ವಾದಿಕಮಿತಿ ವಾಚ್ಯಂ । ಸಕೃದ್ದಿವಾಹಾಸ್ಯ ಭವತೀತಿ ಶ್ರುತಿ ವಿರೋಧ ಪ್ರಸಂಗಾತ್ । ಏತಾಂ ವಿದ್ಯಾಂತು ಯೋ ವೇದ ನಿತ್ಯಮಸ್ಯ ದಿವಾ ಭವೇತ್ ವೈಕುಂಠಧಾಮಸಂಸ್ಥಸ್ಯ ಮುಕ್ತಸ್ಯ ಅನುದಯಾಸ್ತಕಮಿತಿ ಛಾಂದೋಗ್ಯ ಭಾಷ್ಯ ವಿರೋಧಾಚ್ಚ । ನ ಚ ತತ್ರ ಕಥಮಂಧಕಾರನಿವೃತ್ತಿರಿತಿವಾಚ್ಯಂ ।

ಇವರು ವಿಷ್ಣುಲೋಕದಲ್ಲಿಯೂ, ಹೃದಯದಲ್ಲಿಯೂ ದ್ವಾರಪಾಲಕರಾಗಿರುತ್ತಾರೆ. ಈ ಐವರು ಅಂತಃ ದ್ವಾರಪಾಲಕರು ಜಯಾದಿಗಳು ಬಹಿಃ ದ್ವಾರಪಾಲಕರು ಹೀಗೆ ಸ್ಮೃತರಾಗಿರುತ್ತಾರೆ.

ವೈಕುಂಠಲೋಕದಲ್ಲಿಯೂ ಸೂರ್ಯೋದಯವಿರಲಿಕ್ಕೇಬೇಕು ಇಲ್ಲವಾದರೆ ಕತ್ತಲೆಯಿಂದ ಗಮನಾದಿ ವ್ಯವಹಾರ ಅಭಾವ ಪ್ರಸಂಗ ಅನಿವಾರ್ಯ. ಆದುದರಿಂದ ಸೂರ್ಯೋದಯ ನಿಮಿತ್ತವೇ ಪೂರ್ವಾದಿವ್ಯವಹಾರವು ಎಂಬುದು ತಪ್ಪೇ ಆಗಿದೆ. 'ಸಕೃದ್ದಿವಾಹಾಸ್ಯಭವತಿ' ವೈಕುಂಠದಲ್ಲಿ ಹಗಲೊಂದೇ ಎಂಬ ಶ್ರುತಿ ವಿರೋಧ ಬರುತ್ತದೆ. ಈ ವಿದ್ಯೆಯನ್ನು ಯಾವನು ತಿಳಿಯುತ್ತಾನೆಯೋ ಅವನಿಗೆ ನಿತ್ಯದಲ್ಲಿಯೂ ಹಗಲೇ ಇರುತ್ತದೆ. ಛಾಂದೋಗ್ಯ ಭಾಷ್ಯದಲ್ಲಿ ಮುಕ್ತರಾಗಿ ವೈಕುಂಠದಲ್ಲಿರುವವರೆಗೆ ನಿತ್ಯವೂ ಹಗಲೇ, ಉದಯವೂ ಇಲ್ಲ ಅಸ್ತಮವೂ ಇರುವುದಿಲ್ಲ ಎಂಬ (ಶ್ರುತಿ) ವಿರೋಧ ಬರುವುದರಿಂದ ವೈಕುಂಠದಲ್ಲಿ ಸೂರ್ಯೋದಯಾದಿಗಳಿರುವುದಲ್ಲ. ಹಾಗಾದರೆ ಅಲ್ಲಿ ಬೆಳಕು ಹೇಗೆ ? ಎಂದರೆ ಹೇಳುತ್ತಾರೆ.

ಭಗವತ್ತೇಜಸಾ ಲಕ್ಷ್ಮ್ಯಾತ್ಮಕ ಮಾಣಿಕ್ಯಾದಿ ತೇಜಸಾ ಚ ಸರ್ವದಾ ಪ್ರಕಾಶವತ್ವೇನ ಅಂಧಕಾರ ಪ್ರಸಕ್ತೇರೇವ ಅಭಾವಾತ್ । ಪರಮಾತ್ಮ ಪ್ರಕಾಶಶ್ಚ ಅನಂತ ಸೂರ್ಯ ಪ್ರಕಾಶಾಪೇಕ್ಷಯಾಪ್ಯಧಿಕಃ । ಸಹಸ್ರ ಲಕ್ಷಾಮಿತಭಾನುದೀಧಿತಿರಿತಿ ನಿರ್ಣಯೋಕ್ತೇಃ । ತಥಾ ಮೃಣಾಲ ಗೌರಾಯತ ಶೇಷ ಭೋಗಪರ್ಯಂಕ ಏಕಂ ಪುರುಷಂ ಶಯಾನಂ । ಫಣಾ ಸಹಸ್ರಾಯುತ ಮೂರ್ಧರತ್ನದ್ಯುಭಿರ್ಹತಧ್ವಾಂತ ಯುಗಾಂತತೋಯ ಇತಿ ತೃತೀಯ ಸ್ಕಂಧ ಭಾಗವತೇ ಶೇಷಮೂರ್ಧರತ್ನಸ್ಯ ಪ್ರಕಾಶ ಕತ್ವೋಕ್ತೇಶ್ಚ ।

ಭಗವಂತನ ತೇಜಸ್ಸಿನಿಂದ ಲಕ್ಷ್ಮ್ಯಾತ್ಮಕ ಮಾಣಿಕ್ಯಗಳ ತೇಜಸ್ಸಿನಿಂದಲೂ ಸರ್ವದಾ ಪ್ರಕಾಶಿಸುವುದರಿಂದ ಕತ್ತಲೆಯ ಪ್ರಸಕ್ತಿಯೇ ಇರುವುದಿಲ್ಲ. ಸ್ವತಃ ಪರಮಾತ್ಮನ ಪ್ರಕಾಶವೇ ಅನಂತ ಸೂರ್ಯ ಪ್ರಕಾಶಕ್ಕಿಂತಲೂ ಅತ್ಯಧಿಕವೇ ಆಗಿರುವುದರಿಂದ ಕತ್ತಲೆಯ ಪ್ರಸಕ್ತಿಯೇ ಇರುವುದಿಲ್ಲ. ನಿರ್ಣಯದಲ್ಲಿ ಪರಮಾತ್ಮನು ಸಹಸ್ರಲಕ್ಷ ಮೀರಿದ ಸೂರ್ಯರಕಾಂತಿಯುಳ್ಳವನು ಎಂದು ಹೇಳಿರುತ್ತದೆ.

ಕಮಲದ ದೇಟಿನಲ್ಲಿರುವ ಹತ್ತಿಯಂತೆ ಮೃದುತರವಾಗಿ ಅತಿ ಬಿಳುಪಿನಿಂದ ರಮ್ಯವಾದ ಪುಷ್ಟವಾದ ಶೇಷಪರ್ಯಂಕದಲ್ಲಿ ಪವಳಿಸಿದ ಪರಮಾತ್ಮನನ್ನು ಶೇಷನು ತನ್ನ ಸಹಸ್ರ ಹೆಡೆಯಲ್ಲಿರುವ ರತ್ನಗಳಿಂದ ಸಕಲ ಅಂಧಕಾರವನ್ನೂ ಧ್ವಂಸ ಮಾಡುವನಾಗಿ ಪ್ರಳಯೋದಕದಲ್ಲಿ ತೇಲುತ್ತಿರುತ್ತಾನೆ ಎಂದು, ಅತಿ ಪ್ರಕಾಶವನ್ನು ಉಂಟುಮಾಡಿರುತ್ತಾನೆಯೆಂದ ತೃತೀಯಸ್ಕಂಧ ಭಾಗವತದಲ್ಲಿ ಹೇಳಿರುತ್ತದೆ.

**ಕಿಂ ಚ ಆದಿತ್ಯೋದಯಾದಿ ಅಭಾವೇಽಪಿ ಭಗವಚ್ಛರೀರೇ ಪೂರ್ವಾದಿಭಾಗಸ್ಥ ಕರೇಷು ಚಕ್ರಶಂಖಾದಿ ಧಾರಣಮುಕ್ತಂ ಛಾಂದೋಗ್ಯ ಭಾಷ್ಯೇ। ಪ್ರಾಚೀ ದಿಕ್ ಸಂಸ್ಥಿತಃ ತಸ್ಯ ಬಾಹುಃ ದಕ್ಷಿಣ ಊರ್ಧ್ವಗಃ । ಜುಹೂಃ ಸಹೋಮ ಕರ್ತೃತ್ವಾತ್ ಭುಂಕ್ತೇ ಹ್ಯೇತೇ ನ ಕೇಶವಃ । ದಕ್ಷಿಣಸ್ತು ಅಧರೋ ಬಾಹುರ್ದಕ್ಷಿಣಾ ದಿಕ್‌ಸ್ಥಿತೋ ವಿಭೋಃ । ಸಹಮಾನೇತಿ ಸಂಪ್ರೋಕ್ತೋ ಮಾನಂ ವೇದಾತ್ಮಕಂಯತಃ । ಶಂಖೋವೇದಾತ್ಮಕಃ ಶಂಖ ಸಹಿತೋ ದಕ್ಷಿಣಾಧರಃ । ಬಾಹುರ್ಜುಹೋತಿ ಚಕ್ರೇಣ ಶತ್ರೂನಿತ್ಯಥ ವಾ ಜುಹೂಃ । ಪ್ರತೀಚೀ ದಿಕ್ ಸ್ಥಿತಸ್ತಸ್ಯ ವಾಮಬಾಹುಸ್ತಥೋತ್ತರಃ । ರಾಜೀಯುಕ್ತಗದಾಯುಕ್ತೋ ರಾಜ್ಞೀ ನಾಮ ಪ್ರಕೀರ್ತಿತಃ । ಅಧರೋ ವಾಮಬಾಹುರ್ಯ ಉತ್ತರಾ ದಿಕ್ ಸ್ಥಿತೋ ವಿಭೋರಿತಿ ।**

ಸೂರ್ಯೋದಯವಿಲ್ಲವಾದರೂ ಪರಮಾತ್ಮನ ಶರೀರದಲ್ಲಿಯೇ ಪೂರ್ವಾದಿ ಭಾಗಸ್ಥ ಕೈಗಳಲ್ಲಿ ಶಂಖಚಕ್ರಾದಿಗಳು ಹೇಳಿವೆ. ಛಾಂದೋಗ್ಯ ಭಾಷ್ಯದಲ್ಲಿ, ಪೂರ್ವಾಭಿಮುಖನಾದ ಪರಮಾತ್ಮಗೆ ದಕ್ಷಿಣ (ಬಲಭಾಗ) ಬಾಹುವು ಎತ್ತಲ್ಪಟ್ಟಿದೆ. ಆ ಕೈಯಿಂದಲೇ ಹೋಮಾದಿಗಳು, ಭೋಜನಾದಿಗಳು ಆದ್ದರಿಂದ ಆ ಕೈಗೆ ಜುಹೂಃ ಎಂದು ಹೆಸರು. ಅದೇ ದಕ್ಷಿಣದಲ್ಲಿ ಒಂದು ಬಾಹುವನ್ನು ಕೆಳ ಮಾಡಿರುತ್ತಾನೆ. ಆ ಕೈಯಲ್ಲಿ ವೇದಾಭಿಮಾನಿ ಶಂಖವನ್ನು ಹಿಡಿದಿರುವುದರಿಂದ ಅದಕ್ಕೆ ಸಹಮಾನವೆಂದು ಹೆಸರು. ಪರಮಾತ್ಮನ ಹಿಂಭಾಗವು ಪಶ್ಚಿಮ ದಿಕ್ಕಾಗಿದೆ. ಅವನ ವಾಮಬಾಹುವು ಉತ್ತರ ದಿಕ್ಕಿನಲ್ಲಿದೆ. ಪ್ರಕಾಶಮಾನವಾಗಿ ಸರ್ವಶಾಸಕವೂ ಆದ ಗದೆಯನ್ನು ಹಿಡಿದಿರುವುದರಿಂದ ಉತ್ತರದಲ್ಲೆತ್ತಿದ ಬಾಹುವಿಗೆ ರಾಜ್ಞೀಯಯೆಂದು ಹೆಸರಾಗಿದೆ. ಉತ್ತರದಲ್ಲಿ ಒಂದು ಬಾಹು ಕೆಳಗ ಇರುತ್ತದೆ. ಹೀಗೆ ಸೂರ್ಯೋದಯವಿಲ್ಲದ ವೈಕುಂಠದಲ್ಲಿ ಪರಮಾತ್ಮನ ಅವಯವಗಳಿಗೆ ದಿಕ್ಕುಗಳು ಹೇಳಿರುತ್ತದೆ.

**ನ ಚ ಪರಮಾತ್ಮನ್ಯಪಿ ಆದಿತ್ಯೋದಯಾಪೇಕ್ಷೇತಿ ವಾಚ್ಯಂ । ನ ತತ್ರ ಸೂರ್ಯೋಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋಭಾಂತಿ ಕುತೋಯಮಗ್ನಿರಿತಿ ಶ್ರುತಿ ವಿರೋಧಾತ್ । ಅಪಿ ಚ ಚತುರ್ದಶಭುವನೋತ್ಪತ್ತೇಃ**

**ಪೂರ್ವಮೇವ ಪರಮಾತ್ಮನಾಭಿ ಕಮಲೇಸ್ಥಿತಸ್ಯ ಬ್ರಹ್ಮಣಶ್ಚತುರ್ದಿಕ್ಷು ದರ್ಶನೇನ ಚತುರ್ಮುಖಪ್ರಾಪ್ತಿಃ ಭಾಗವತೇ ಶ್ರೂಯತೇ। ನ ಹಿ ತದಾ ಸೂರ್ಯೋದಯೋಽಸ್ತಿ । ತಸ್ಯ ಅನುತ್ಪತ್ತೇಃ । ತಸ್ಮಾಂ ಸ ಚ ಅಂಬೋರುಹ ಕರ್ಣಿಕಾಯಾಮವಸ್ಥಿತೋ ಲೋಕಮಪಶ್ಯಮಾನಃ । ಪರಿಕ್ರಮನ್ ವ್ಯೋಮ್ನಿವಿವೃತ್ತನೇತ್ರಃ ಚತ್ವಾರಿ ಲೇಭೇನು ದಿಶಂ ಮುಖಾನೀತಿ ।**

ಪರಮಾತ್ಮನಿಗೂ ಸೂರ್ಯೋದಯದ ಅಪೇಕ್ಷೆ ಇದೆ ಅನ್ನಬಾರದು. ಏಕೆಂದರೆ, ವೈಕುಂಠವೆಂಬ ಶ್ರೀಹರಿ ಮಂದಿರವಲ್ಲಿ ಸೂರ್ಯ ಚಂದ್ರರ ಪ್ರಕಾಶವಿಲ್ಲ, ನಕ್ಷತ್ರಗಳಿಲ್ಲ, ಮಿಂಚುಮುಂತಾವುಗಳು ಇಲ್ಲ ಅಂದ ಮೇಲೆ ಅಗ್ನಿ ಇಲ್ಲ ಎನ್ನುವುದೇನು ? ಇವುಗಳ ಅಪೇಕ್ಷೆಯೇ ಅಲ್ಲಿರುವುದಿಲ್ಲ ಎಂಬ ಶ್ರುತಿ ವಿರೋಧ ಬರುವುದು ಮತ್ತೂ ಹದಿನಾಲ್ಕು ಲೋಕಗಳ ಹುಟ್ಟುವ ಮೊದಲು ಪರಮಾತ್ಮನ ನಾಭಿಕಮಲದಲ್ಲಿ ಹುಟ್ಟಿದ ಬ್ರಹ್ಮನಿಗೆ ನಾಲ್ಕು ದಿಕ್ಕುಗಳ ನೋಡುವಿಕೆಯಿಂದಲೇ ನಾಲ್ಕು ಮುಖಗಳಾದವು ಎಂದು ಶ್ರೀಮದ್ಭಾಗವತದಲ್ಲಿದೆ ಆಗ ಸೂರ್ಯೋದಯ ಇರಲಿಲ್ಲ ಸೂರ್ಯನೇ ಹುಟ್ಟಿಲ್ಲ ವಾದ್ದರಿಂದ, ಪ್ರಳಯಕಾಲದಲ್ಲಿ ನಾಭಿಕಮಲದಲ್ಲಿ ಬ್ರಹ್ಮನು ಆಕಾಶದಲ್ಲಿ ಸುತ್ತಲೂ ತಿರುಗಿ ನೋಡುತ್ತಾ ನಾಲ್ಕು ಮುಖಗಳನ್ನು ಪಡೆದನೆಂದು ಹೇಳಿರುತ್ತದೆ.

**ನನು ತರ್ಹಿ ಸೂರ್ಯೋದಯ ನಿರೀಕ್ಷಣಸ್ಯ ಕುತ್ರೋಪಯೋಗ ಇತಿ ಚೇನ್ನ । ಕಾದಾಚಿತ್ಕಸ್ಯ ದಿಗಂತರೇ ದಿಗಂತರ ಭ್ರಮಸ್ಯ ಆದಿತ್ಯೋದಯ ನಿವರ್ತ್ಯತ್ವಾತ್ । ತದುಕ್ತಂ ತತ್ವನಿರ್ಣಯೇ । ಅಂಧಕಾರೇಽಪಿ ದಿಙ್ಮಾತ್ರ ಪ್ರತೀತೇಃ ಕಾದಾಚಿತ್ಕ ಭ್ರಾಂತಿರೇವ । ಆದಿತ್ಯೋದಯ ದರ್ಶನಾನ್ನಿವಾರ್ಯತ ಇತಿ । ನ ಚ ಯಸ್ಯ ಪ್ರಾಚೀ ಸ್ಯಾತ್ ಸಾ ಸರ್ವೇಷಾಮಪಿ ಪ್ರಾಚೀ ಸ್ಯಾದಿತಿ ವಾಚ್ಯಂ । ಪಿತಾ ಪುತ್ರಾದಿ ಭಾವವತ್ ಪ್ರಾಚೀತ್ಯಾದೇಃ ಸಸಂಬಂಧಿಕತ್ವಾತ್ । ನ ಹಿಯೋ ಯಸ್ಯಪಿತಾ ಸ ಸರ್ವಸ್ಯಾಪಿ ಪಿತಾ ।**

ಹಾಗಾದರೆ ಸೂರ್ಯೋದಯ ನಿರೀಕ್ಷಣೆಗೆ ಉಪಯೋಗ ಏನು ? ಎಂದರೆ ಕಥಂಚಿತ್ ಒಂದು ದಿಕ್ಕಿನಲ್ಲಿ ಮತ್ತೊಂದು ದಿಕ್ಕಿನ ಭ್ರಮೆ ಬಂದರೆ ಸೂರ್ಯೋದಯದಿಂದ ಆಭ್ರಮೆ ನಿವಾರಣೆ ಮಾತ್ರವೇ ಆಗಿರುತ್ತದೆ ಒಬ್ಬನಿಗೆ ಒಂದು ಪೂರ್ವವಾದರೆ ಎಲ್ಲರಿಗೂ ಅದೇ ಪೂರ್ವವಾಗಲಿ ಅನ್ನಬಾರದು. ತಂದೆಮಕ್ಕಳ ಸಂಬಂಧದಂತೆ, ಪೂರ್ವಾದಿ ದಿಕ್ಕುಗಳ ಸಂಬಂಧವು. ಒಬ್ಬನಿಗೆ ಒಬ್ಬ ತಂದೆ ಆದರೆ ಅವನು ಎಲ್ಲರಿಗೂ ತಂದೆಯಾಗುತ್ತಾನೆಯೇ ಹಾಗೆಯೇ ದಿಕ್ಸಂಬಂಧವು.

**ಅನ್ಯಥಾದಿತ್ಯೋದಯೋಪಾಧಿಕತ್ವಪಕ್ಷೇಪಿ ದೋಷಾಪರಿಹಾರಾತ್ । ನನು ಭೂತಾಕಾಶವ್ಯತಿರಿಕ್ತಾವ್ಯಾಕೃತಾಕಾಶ ಸದ್ಭಾವಯೇವ ಮಾನಾಭಾವಃ । ಭೂತಾಕಾಶೇನೈವ ಸರ್ವವ್ಯವಹಾರೋಪಪತ್ತೇಃ ಇತ್ಯಾಶಂಕಾಂ ಪರಿಪರತಿ ।**

ಪ.ಸಂ.—ತದಭಾವೇ ಮೂರ್ತಂ ನಿಬಿಡಂ ಜಗತ್ಸ್ಯಾತ್ ।

**ಅಯಮಾಶಯಃ । ಅನಾದಿರ್ವಾ ಅಯಮಾಕಾಶಃ ಆತ್ಮನ ಆಕಾಶ ಸಂಭೂತಃ । ಆಕಾಶೋ ನೀಲಿನೋದೇತಿ ನ ಪ್ರದೇಶಃ ಕಥಂಚನ । ತಾಮಸೋ ಭೂತ ಸೂಕ್ಷ್ಮಾಣಿಯತಃ ಖಂಲಿಂಗಮಾತ್ಮನಃ । ಭೂತಾದಿಸ್ತಾಮಸಃ ಸ್ಮೃತ ಇತ್ಯಾದಿ ವಾಕ್ಯಾನ್ಯಾಕಾಶಸ್ಯೋತ್ಪತ್ತ್ಯನುತ್ಪತ್ತಿ ಪ್ರತಿಪಾದಕಾನಿ ಸಂತಿ । ನ ಚೋತ್ಪತ್ತ್ಯನುತ್ಪತ್ತೀ ಏಕಸ್ಯ ವಕ್ತುಂ ಶಕ್ಯೇ ವಿರೋಧಾತ್ । ನ ಚಾನ್ಯತರಾ ಪ್ರಾಮಾಣ್ಯಂ ವಕ್ತುಂ ಯುಕ್ತಂ । ಅಪೌರುಷೇಯತ್ವಾತ್ । ಅತಃ ತದನ್ಯಥಾನುಪಪತ್ತ್ಯಾಕಾಶ ದ್ವೈತಮಂಗೀಕರ್ತವ್ಯಂ ।**

ಸೂರ್ಯನ ಉದಯ ನಿಮಿತ್ತವೇ ದಿಕ್ಕುಗಳೆಂದರೆ, ಬಹುದೋಷವೂ, ಬಹು ಪ್ರಮಾಣ ವಿರೋಧವೂ ಬರುತ್ತದೆ. ಸರಿಯೇ, ಭೂತಾಕಾಶಾತಿರಿಕ್ತವಾದ ಅವ್ಯಾಕೃತಾಕಾಶವನ್ನು ಏಕೆ ಒಪ್ಪಬೇಕು ? ಭೂತಾಕಾಶದಿಂದಲೇ ಎಲ್ಲಾ ಕಾರ್ಯ ನಿರ್ವಾಹವಾಗುತ್ತಿರಲು ಎಂದು ಶಂಕಿಸಿದರೆ ಹೇಳುತ್ತಾರೆ. ಅವ್ಯಾಕೃತಾಕಾಶವಿಲ್ಲವಾದರೆ ಜಗತ್ತು (ಮೂರ್ತ) ಪೃಥಿವೀ, ಜಲ, ತೇಜಸ್ಸಿನಿಂದಲೇ ತುಂಬಿ ಹೋಗಬೇಕಾದೀತು. ಇದರಲ್ಲಿ ಅಭಿಪ್ರಾಯವೇನೆಂದರೆ, ಆಕಾಶವು ಅನಾದಿಯಾದುದು ಎಂದು ಒಂದು ಪ್ರಮಾಣವು. ಆತ್ಮನಿಂದ ಆಕಾಶವು ಹುಟ್ಟಿತು ಎಂದು ಒಂದು ಪ್ರಮಾಣವಿದೆ. ಆಕಾಶವು ನೀಲಿಯಾಗಿ ಹುಟ್ಟುತ್ತದೆ ಎಂದೂ, ತಾಮಸತತ್ವದಿಂದ ಭೂತಸೂಕ್ಷ್ಮಗಳು, ಆತ್ಮನಿಂದ ಆಕಾಶವು ಹೀಗೆ ಆಕಾಶಕ್ಕೆ ಉತ್ಪತ್ತಿ, ಅನುತ್ಪತ್ತಿ, ಎರಡೂ ಹೇಳುವ ಪ್ರಮಾಣಗಳಿವೆ. ವಿರುದ್ಧ ಧರ್ಮಗಳು ಒಂದರಲ್ಲಿ ಕೂಡುವುದಿಲ್ಲ, ಆದುದರಿಂದ ಆಕಾಶದ ಎರಡನ್ನೂ ಒಪ್ಪಬೇಕು. ಒಂದು ಪ್ರಮಾಣ, ಒಂದು ಅಪ್ರಮಾಣ ಅನ್ನೋಣವೇ ಎಂದರೆ, ಎರಡೂ ಭೇದಗಳೇ ಆಗಿರುವುದರಿಂದ ಅಪೌರುಷೇಯ ವೇದವಾಕ್ಯಗಳಿಗೆ ಅಪ್ರಾಮಾಣ್ಯತೆ ಹೇಳಲು ಬರುವುದಿಲ್ಲ. ಪ್ರಮಾಣಗಳ ಬಲದಿಂದ ಅವ್ಯಾಕೃತ ಭೂತಗಳೆಂಬ ಎರಡು ಆಕಾಶಗಳನ್ನು ಒಪ್ಪಲೇ ಬೇಕು.

**ಕಿಂಚಾವ್ಯಾಕೃತಾಕಾಶಸ್ಯೋತ್ಪತ್ತ್ಯನಂಗೀಕಾರೇ ತದುತ್ಪತ್ತೇಃ ಪೂರ್ವ ಪ್ರದೇಶಾಭಾವೇ ಮೂರ್ತ ಪದಾರ್ಥ ನಿಬಿಡತಾ ಸ್ಯಾತ್ । ಅತೋ ಭೂತಾಕಾಶೋತ್ಪತ್ತೇಃ ಪೂರ್ವಮವ್ಯಾಕೃತಾಕಾಶಮಸ್ತೀತಿ ಅಂಗೀಕರ್ತವ್ಯಂ । ತತ್ರ ಪ್ರಮಾಣಂ ತು ಸಾಕ್ಷೀತಿ ಸಾಕ್ಷಿ ನಿರೂಪಣಾವಸರೇ ವಕ್ಷ್ಯಾಮಃ । ಕಿಂ ಚ ರೂಪಿತ್ವಾರೂಪಿತ್ವ ವ್ಯಾಕೃತತ್ವಾವ್ಯಾಕೃತತ್ವ ಪರಿಚ್ಛಿನ್ನತ್ವಾಪರಿಚ್ಛಿನ್ನತ್ವಾದಿ ಶ್ರುತೀನಾಂ ಸತ್ತ್ವೇನ ವಿರುದ್ಧ ಧರ್ಮಾಣಾಮೇಕತ್ರ ಸಮಾವೇಶಾಯೋಗೇನ ಆಕಾಶದ್ವೈವಿಧ್ಯಸ್ಯ ಸ್ವೀಕರ್ತವ್ಯತ್ವಾತ್ । ತದುಕ್ತಂ ವಿಯತ್ವಾ**

**ದೀಯಾನುವ್ಯಾಖ್ಯಾನೇ । ಯದ್ಯನಾಕಾಶತಾ ಪೂರ್ವಂ ಕಿಂ ಮೂರ್ತ ನಿಬಿಡಂ ಜಗತ್ । ಮೂರ್ತ ಸಂಪೂರ್ಣತಾ ಚೈವ ಯದ್ಯನಾಕಾಶತಾ ಭವೇದಿತಿ ।**

ಮತ್ತು ಅವ್ಯಾಕೃತಾಕಾಶಕ್ಕೆ ಉತ್ಪತ್ತಿ (ಹುಟ್ಟು) ಒಪ್ಪಿದರೆ, ಇದು ಹುಟ್ಟಿದ ಪೂರ್ವದಲ್ಲಿ ಪ್ರದೇಶವಿಲ್ಲವಾದ್ದರಿಂದ ಪ್ರಪಂಚವು ಮೂರ್ತ ಪದಾರ್ಥಗಳಿಂದ ತುಂಬಿ ಹೋಗಬೇಕಾಗಿದ್ದಿತು. ಆದುದರಿಂದ ಭೂತಾಕಾಶ ಹುಟ್ಟುವುದರ ಮೊದಲು ಅವ್ಯಾಕೃತಾಕಾಶವಿತ್ತೆಂದೇ ಒಪ್ಪಬೇಕು. ಅವ್ಯಾಕೃತಾಕಾಶದ ನಿತ್ಯತೆ ವಿಷಯದಲ್ಲಿ ಸಾಕ್ಷಿಯೇ ಸಾಕ್ಷಿಯೆಂದ ಸಾಕ್ಷಿ ನಿರೂಪಣದಲ್ಲಿ ತೋರಿಸುತ್ತೇವೆ ಮತ್ತೂ ರೂಪಿತ್ವ-ಅರೂಪಿತ್ವ, ವ್ಯಾಕೃತತ್ವ-ಅವ್ಯಾಕೃತತ್ವ, ಪರಿಚ್ಛಿನ್ನತ್ವ-ಅಪರಿಚ್ಛಿನ್ನತ್ವ ಆದಿ ಬೋಧಕ ವೇದಗಳಿರುವುದರಿಂದ ಪರಸ್ಪರ ವಿರುದ್ಧ ಧರ್ಮಗಳಿಗೆ ಒಂದೆಡೆ ಸಮಾವೇಶ ಕೂಡುವುದಿಲ್ಲವಾದ್ದರಿಂದ ಎರಡು ಆಕಾಶಗಳನ್ನು ಒಪ್ಪಲೇಬೇಕು.

ಇದನ್ನೇ ವಿಯದಧಿಕರಣ ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ಸೃಷ್ಟಿಗೆ ಮೊದಲು ಆಕಾಶವಿಲ್ಲದಿದ್ದರೆ. ಜಗತ್ತೇ ಮೂರ್ತ(ಪೃಥಿವೀ ಜಲ, ಅಗ್ನಿ)ದಿಂದ ಜಗತ್ತು ತುಂಬಬೇಕಿತ್ತು. (ಆಕಾಶ)ಅವಕಾಶವೇ ಇಲ್ಲದಿದ್ದರಿಂದ —ಹೀಗೆ ಆಕ್ಷೇಪೋಕ್ತಿಯನ್ನು ತಿಳಿಸಿರುತ್ತಾರೆ.

**ಸುಧಾಯಾಮಪಿ । ರೂಪಿತ್ವಾರೂಪಿತ್ವ ವ್ಯಾಕೃತತ್ವಾವ್ಯಾಕೃತತ್ವ ಶ್ರುತೀನಾಂ ಸತ್ತ್ವಾತ್ । ಕಿಂ ಚೋತ್ಪತ್ತ್ಯನುತ್ಪತ್ತಿ ಶ್ರುತ್ಯೋರ್ವಿರೋಧೋಪ್ಯಾಕಾಶ ದ್ವೈತಮವಗಮಯತೀತ್ಯುಕ್ತಂ । ಚಂದ್ರಿಕಾಯಾಂ ತು। ನಚಾಕಾಶದ್ವಿತ್ವೇ ಮಾನಾಭಾವಃ । ಭೂತಾಕಾಶಾತಿರಿಕ್ತಾಯಾ ದೇಶಕಾಲ ಪರಿಚ್ಛಿನ್ನಾಯಾಸ್ತಾರ್ಕಿಕಾದ್ಯಭಿಮತದಿಶ ಏವ ಅಸ್ಮಾಕಮವ್ಯಾಕೃತಾಕಾಶತ್ವಾತ್ । ಪ್ರಾಚ್ಯಾದಯೋ ದಿಗ್ವಿಶೇಷಾಃ ತದ್ಭಾಗಾಃ ।**

ಸುಧಾದಲ್ಲಿಯೂ ಆಕಾಶಕ್ಕೆ ರೂಪ ಇರುವಿಕೆ ಇಲ್ಲದಿರುವಿಕೆ, ವಿಶಾಲತೆ ಸಂಕುಚಿತೆ, ಹೇಳುವ ವೇದಗಳಿರುವುದರಿಂದಲೂ ಮತ್ತು ಉತ್ಪತ್ತಿ-ಅನುತ್ಪತ್ತಿ ಶ್ರುತಿಗಳಿರುವುದರಿಂದಲೂ ಆಕಾಶ ದ್ವೈವಿಧ್ಯತೆ ತಿಳಿದು ಬರುತ್ತದೆ ಎಂದು ಹೇಳಿದೆ. ಚಂದ್ರಿಯಲ್ಲಿಯೂ ಎರಡಾಕಾಶ ವಿಷಯದಲ್ಲಿ ಪ್ರಮಾಣವಿಲ್ಲ ಎನ್ನಬಾರದು. ತಾರ್ಕಿಕಾದಿಗಳಿಂದಲೂ ಒಪ್ಪಿರುವ ದೇಶ, ಕಾಲಾದಿಗಳ ಅತ್ಯಂತ ವಿಶಲತೆಯೇ ಅವ್ಯಾಕೃತಾಕಾಶವಾಗಿರುವುದರಿಂದ ಪೂರ್ವಾದಿ ದಿಕ್ಕುಗಳು ಅವ್ಯಾಕೃತಾಕಾಶದ ಅವಯವಗಳೇ ಆಗಿರುತ್ತವೆ.

**ಉಕ್ತಂ ಹಿ ಟೀಕಾಕಾರೈಃ । ಅವಕಾಶಮಾತ್ರಂ ಹಿ ದಿಗುಚ್ಯತೇ । ಅವಕಾಶ ಭಾಗಾ ಏವ ದಿಗ್ವಿಶೇಷಾ ಇತಿ । ಕಿಂ ಚ ಪ್ರದೇಶ ರೂಪಾಕಾಶೋ ನೀರೂಪಃ ಸಾಕ್ಷಿ ಸಿದ್ಧಶ್ಚ । ಅನ್ಯಥಾವಕಾಶವತಿಗೇಹೇ ಅಂಧಕಾರಾದೌ ಹಸ್ತಚಲನಾದಿಕಂ ನ ಸ್ಯಾತ್ । ಭೂತಾಕಾಶಂತು ಭೂತಮಪ್ಯಸಿತಂ ದಿವ್ಯ ದೃಷ್ಟಿಗೋಚರಮೇವ ಚೇತ್ಯಾದಿ ಶ್ರುತ್ಯಾರೂಪೀ । ಪ್ರತ್ಯಕ್ಷಂ ಚ ।**

ಟೀಕಾಕೃತ್ಪಾದರಿಂದ ಹೇಳಲ್ಪಟ್ಟಿದೆ. ಅವಕಾಶ (ಪ್ರದೇಶ) ಮಾತ್ರವೇ ದಿಕ್ ಎನಿಸಿಕೊಳ್ಳುತ್ತದೆ. ಅವಕಾಶದ ಭಾಗಗಳೇ ದಿಗ್ವಿಶೇಷಗಳು (ಪೂರ್ವಾದಿಗಳು) ರೂಪರಹಿತವಾದ ಅವಕಾಶವೇ ಅವ್ಯಾಕೃತಾಕಾಶವು, ಇದು ಸಾಕ್ಷಿಸಿದ್ಧವೆಂದು ಅವ್ಯಾಕೃತಾಕಾಶಕ್ಕೆ ಅನಾದಿ ನಿತ್ಯತೆ ಒಪ್ಪದಿದ್ದರೆ, ಅವಕಾಶವಿರುವ ಕತ್ತಲೆ ಮನೆ ಯಲ್ಲಿ ಕೈ ಚಾಚುವಿಕೆ ಮೊದಲಾದವು ಇಲ್ಲವಾಗಬೇಕಾದೀತು ಮತ್ತು ಪ್ರದೇಶ ರೂಪಾಕಾಶಃ (ಅವ್ಯಾಕೃತಾಕಾಶ) ರೂಪ ರಹಿತವಾಗಿ ಸಾಕ್ಷಿ ಸಿದ್ಧವೂ ಹೌದು. ಭೂತಾಕಾಶವು ಭೂತಗಳೆಲ್ಲವೂ ದೃಷ್ಟಿ ಗೋಚರವೇ ಎಂದು ಹೇಳುವ ಶ್ರುತಿಗಳಿಂದ ರೂಪವುಳ್ಳದ್ದೂ ಆಗಿದೆ ಪ್ರತ್ಯಕ್ಷವೂ ಆಗಿದೆ.

**ಕಿಂ ಚ । ಭೂತಾಕಾಶಂ ಸರ್ವಂ ಪಂಚಭಿರಾವಿಷ್ಟಂ ಭೂತೈರೀಶ್ವರ ಬುದ್ಧಿಜೈಃ । ಪಂಚಭೂತಾತ್ಮಕೇ ದೇಹೇ ಇತ್ಯಾದಿ ಸ್ಮೃತಿಭಿಃ ದೇಹಾ ಕಾರೇಣ ವಿಕಾರಿ । ಅವಕಾಶಂಸ್ತು ಕೂಟಸ್ಥೋ ನಿತ್ಯತ್ವೇನ ಸಾಕ್ಷಿ ಸಿದ್ಧಶ್ಚ । ನ ಚ ಸರ್ವಾಧಾರ ಭೂತೌ ದೇಶಕಾಲೌ ಕಿಂಚಿದ್ದ್ರವ್ಯಾತ್ಮನಾ ವಿಕುರುತಃ। ಕಿಂ ಚ ಅವಕಾಶೋ ಅನಾದಿಃ । ಅನಾದಿರ್ವಾ ಅಯಮಾಕಾಶ ಇತ್ಯಾದಿ ಶ್ರುತೇಃ । ನ ತು ತಾಮಸಾಹಂಕಾರ ಕಾರ್ಯಃ ।**

ಮತ್ತು ಭೂತಾಕಾಶವು ಸರ್ವವೂ ಪಂಚಭೂತಗಳಿಂದ ವಿಶಿಷ್ಟವೇ, ಈಶ್ವರ ಬುದ್ಧಿಯಿಂದ ಹುಟ್ಟಿದವಾದ್ದರಿಂದ ಎಂಬ ಪ್ರಮಾಣಾನುಸಾರವಾಗಿ ಪಂಚಭೂತಾತ್ಮಕ ದೇಹದಲ್ಲಿ ದೇಹಾಕಾರವಾಗಿ ವಿಕೃತವೇ ಆಗಿರುತ್ತದೆ. ಅವಕಾಶ ರೂಪಾಕಾಶವು ನಿರ್ವಿಕಾರವು (ಕೂಟಸ್ಥವು) ನಿತ್ಯವಾಗಿ ಸಾಕ್ಷಿ ಸಿದ್ಧವೂ ಆಗಿದೆ. ಸರ್ವಾಧಾರಗಳಾದ ದೇಶಕಾಲಗಳು ಸ್ವಲ್ಪದ್ರವ್ಯ ಸ್ವರೂಪಗಳಾಗಿ ವಿಕಾರ ಹೊಂದುವುದಿಲ್ಲ ಅಂತ ಇಲ್ಲ. ಅವಕಾಶವು ಅನಾದಿಯೂ ಆಗಿರುತ್ತದೆ. ಈ ಆಕಾಶವು ಅನಾದಿಯೂ ಹೌದು ಎಂಬ ಶ್ರುತಿಯು ಇರುತ್ತದೆ. ಅವ್ಯಾಕೃತಾಕಾಶವು ತಾನು ಸಾಹಂಕಾರ ಕಾರ್ಯವೂ ಅಲ್ಲ.

**ನ ಹಿ ಪೂರ್ವಂ ಅವಕಾಶೋನಾಸೀತ್ ಕಿಂತು ಸರ್ವತ್ರ ಕುತ್ರಚಿತ್ ವಾಘನೀಭಾವ ಏವ ಆಸೀದಿ ತಿಧೀಯರ್ುಕ್ತಾ । ಸರ್ವತ್ರೇತ್ಯಾದಿನೈವಾ. ವಕಾಶ ನಿರ್ದೇಶಾತ್ । ಭೂತಂ ತು ಆತ್ಮನ ಆಕಾಶಃ ಸಂಭೂತ ಇತ್ಯಾದಿ**

**ಶ್ರುತಿಭಿಃ ತಾಮಸಾಚ್ಚ ವಿಕುರ್ವಾಣಾತ್ ಭಗವದ್ವೀರ್ಯ ಚೋದಿತಾತ್। ಶಬ್ದ ಮಾತ್ರಮಭೂತ್ ತಸ್ಮಾತ್‌ನಭಃ ಶ್ರೋತ್ರಂತು ಶಬ್ದಗಂ ಇತ್ಯಾದಿ ಸ್ಮೃತಿಭಿಶ್ಚ ತಾಮಸಾಹಂಕಾರಂ ಕಾರ್ಯಂ।**

ಪೂರ್ವದಲ್ಲಿ ಆಕಾಶವೇ (ಪ್ರದೇಶವೇ) ಇರಲಿಲ್ಲ. ಆದರೆ ಎಲ್ಲಡೆಯಲ್ಲೂ ಘನೀಭಾವವೇ ಇತ್ತು ಎಂಬುದು ಯುಕ್ತವಾಗುವುದಿಲ್ಲ. ಸರ್ವತ್ರದಲ್ಲಿ ಎಂಬ ಶಬ್ದದಿಂದಲೇ ಪ್ರದೇಶವು ತೋರುವುದರಿಂದ ಭೂತಾಕಾಶವಾದರೋ ಆಕಾಶವು ಹುಟ್ಟಿತು ಎಂಬ ಶ್ರುತಿಯಿಂದಲೂ ಭಗವದಿಚ್ಛೆಯಿಂದ ತಮೋಗುಣವನ್ನು ವಿಕಾರಗೊಳಿಸುವುದರಿಂದ ಹುಟ್ಟಿತು ಆಕಾಶವು ಎಂಬ ಪ್ರಮಾಣದಿಂದ, ಶಬ್ದಮಾತ್ರವು ಹುಟ್ಟಿತು. (ಸೃಷ್ಟಿಕಾಲದಲ್ಲಿ) ಆ ಶಬ್ದದಿಂದ ಆಕಾಶಶ್ರೋತ್ರೇಂದ್ರಿಯಗಳು ಹುಟ್ಟಿದವು ಎಂಬ ಸ್ಮೃತಿಯಿಂದ ಭೂತಾಕಾಶವು ತಾಮಸಾಹಂಕಾರದಿಂದ ಹುಟ್ಟಿದುದು ಎಂದು ಸಿದ್ಧವು.

**ಕಿಂ ಚ । ಏಕ ದಂಡಂ ವಿಶೇಷಾಖ್ಯಂ ಕ್ರಮಾದ್ವೃದ್ಧೈರ್ದಶೋತ್ತರೈಃ ತೋಯಾದಿಭಿಃ ಪರಿವೃತಮಿತ್ಯಾದಿ ಸ್ಮೃತಿಭಿರೇಕಮವಿಭು । ಅನ್ಯದ್ವಿಭು । ಆಕಾಶವತ್ಸರ್ವಗತಶ್ಚ ನಿತ್ಯಃ । ಸೋ ಅನಂತೋಯಥಾನಂತೋಯಮಾಕಾಶಃ ಇತಿ । ಕಿಂ ಚ ಮೃತಿಕಾಲೇ ಜಹತ್ಯೇನಂ ಪ್ರಾಣಾಭೂತಾನಿ ಪಂಚ ಚ । ಭಾಗಶೋ ಭಾಗತಸ್ತ್ವೇನಮನುಗಚ್ಛಂತಿ ಸರ್ವಶ ಇತ್ಯಾದಿ ಸ್ಮೃತಿಭಿಃ ಭೂತಾಕಾಶೋ ಗತ್ಯಾದಿಯೋಗ್ಯ ಭಾಗವಾನ್ । ನಹಿ ಪ್ರದೇಶ ವಿಶೇಷ ಏತದ್ದೇಶವಿಹಾಯ ಪ್ರದೇಶಾಂತರಂಗಚ್ಛತಿ । ಕಿಂ ಚ ತತ್ರ ದೇಶೋನಾಸ್ತಿ ಇತಿ ಇತ್ಯೇತದಿದಾನೀಂ ಕಾಲೋನಾಸ್ತೀತಿವದ್ವಿರುದ್ಧಂ । ತಸ್ಮಾದಾಕಾಶ ದ್ವಿತ್ವಂ ಪ್ರಾಮಾಣಿಕಮಿತಿ ಸುಧೋಕ್ತಯುಕ್ತಿಃ ಸಮ್ಯಗುಪಪಾದಿತೇತಿ ಸಂಕ್ಷೇಪಃ ।**

ಮತ್ತು ಈ ಬ್ರಹ್ಮಾಂಡ ವಿಶೇಷವು ಕ್ರಮವಾಗಿ ಹತ್ತರಷ್ಟು ಅಭಿವೃದ್ಧ ಪಂಚ ಭೂತಗಳಿಂದ ಸುತ್ತುಗಟ್ಟಿಸಿಕೊಂಡಿರುವುದಾಗಿ ನೀರಿನಿಂದ ಪರಿವೃತವಾಗಿದೆ ಎಂಬುದೇ ಮೊದಲಾದ ಸ್ಮೃತಿಗಳಿಂದ ಒಂದು ಅವಿಭು ಆದ ಆಕಾಶವು ಮತ್ತು ಕ್ರಮವಾಗಿ ಸುತ್ತುವರೆದು ನಿತ್ಯವಾಗಿದೆ ಎಂಬ ಒಂದು ಪ್ರಮಾಣವು ಅದು ಅನಂತವಾಗಿದೆ. ಆಕಾಶವು ಅನಂತವಾದುದು (ವ್ಯಾಪ್ತ) ವಿಭು ಆಕಾಶವು ಎಂದು ಮತ್ತು ಮರಣ ಕಾಲದಲ್ಲಿ ಪಂಚಭೂತಗಳು ಜೀವನನ್ನು ಬಿಡುತ್ತದೆ. ಆದರೆ ಒಂದು ಭಾಗದಿಂದ ಬಿಟ್ಟು ಮತ್ತೊಂದು ಭಾಗದಿಂದ ಜೀವನನ್ನು ಹಿಂಬಾಲಿಸುತ್ತದೆ. ಇತ್ಯಾದಿ ಸ್ಮೃತಿಗಳಿಂದ ಭೂತಾಕಾಶವು ಗಮನ ಆಗಮನಾದಿ ಯೋಗ್ಯತೆವುಳ್ಳದ್ದು ಎಂದು ತಿಳಿಯುತ್ತದೆ.

ಈ ಪ್ರದೇಶವು ಈ ಸ್ಥಳ(ಭಾಗ)ವನ್ನು(ಬಿಟ್ಟು)ಇನ್ನೊಂದು ಕಡೆ ಹೋಗುತ್ತದೆ ಎಂಬುದಿಲ್ಲ ಮತ್ತೂ ಈಗ ಕಾಲವೇ ಇಲ್ಲ ಎಂಬುದು ಹೇಗೆ ಪ್ರಮಾಣವಿರುದ್ಧವೇ ಆದುದರಿಂದ ಆಕಾಶದ ಎರಡನ್ನೂ ಒಪ್ಪಲೇಬೇಕೆಂಬ ಸುಧಾಯುಕ್ತಿಯು ಬಹು ಚೆನ್ನಾಗಿ ಉಪಪಾದಿತವಾಗಿದೆ. ಹೀಗೆ ಆಕಾಶದ್ವಿತ್ವ ವಿಷಯದಲ್ಲಿ ಸಂಕ್ಷೇಪವು.

**ನನು ಅವ್ಯಾಕೃತಾಕಾಶಾಭಿಮಾನೀ ನ ಬ್ರಹ್ಮಾ । ತಸ್ಯ ಪ್ರಳಯ ಕಾಲೇ ಅಭಾವಾತ್ । ಆಕಾಶಸ್ಯ ಚ ನಿತ್ಯತ್ವಾತ್ । ನಾಪಿ ಪರಮಾತ್ಮಾ । ತಸ್ಯ ಕ್ವಾಪ್ಯಭಿಮಾನಿತ್ವಾಭಾವಾತ್ । ಅಭಿಮಾನಿನಂ ವಿನಾ ಅಭಿಮನ್ಯ ಮಾನ ಪದಾರ್ಥಸ್ಯೈವಾಭಾವಾದಿತ್ಯತ ಆಹ ।**

ಪ.ಸಂ.—ಲಕ್ಷ್ಮೀಸ್ತಸ್ಯಾಭಿಮಾನಿನೀ ।

**ಅಭಿಮನ್ಯಮಾನಾಭಿಮಾನಿನೋ ರ್ವ್ಯಾಪ್ತತ್ವಾತ್ಪ್ರಕೃತಿಕಾಲವದಾ-ಕಾಶಮಪಿ ಲಕ್ಷ್ಮ್ಯಧೀನಮಿತಿ ಭಾವಃ । ತದುಕ್ತಂ ಮಾಂಡೂಕ ಭಾಷ್ಯೇ । ಕಾಲಶ್ಚೈವ ದಿಶೋವೇದಾಃ ಪ್ರಕೃತ್ಯಾತ್ಮಾನ ಈರಿತಾ ಇತಿ ।**

ಅವ್ಯಾಕೃತಾಕಾಶಭಿಮಾನಿ ಬ್ರಹ್ಮನಂತೂ ಅಲ್ಲ. ಅವನು ಪ್ರಳಯಕಾಲದಲ್ಲಿ ಇರುವುದಲ್ಲವಾದುದರಿಂದ, ಆಕಾಶ ನಿತ್ಯವಾಗಿರುವುದರಿಂಗ ಪರಮಾತ್ಮನಿಗಂತೂ ಯಾವ ಪದಾರ್ಥದ ಅಭಿಮಾನಿತ್ವವೂ ಇರುವುದಿಲ್ಲ. ಅಭಿಮಾನಿ ಇಲ್ಲದೇ, ಅಭಿಮನ್ಯವಾದುದು ಪದಾರ್ಥವು ಯಾವುದೂ ಇರುವುದಿಲ್ಲವಾದ್ದರಿಂದ ಅಭಿಮಾನಿ ಯಾರು ? ಅಂದರೆ ಲಕ್ಷ್ಮೀದೇವಿಯೇ ಅಭಿಮಾನಿಯು. ಅಭಿಮಾನಿ ಅಭಿಮನ್ಯ ಪದಾರ್ಥಗಳಿಗೆ ವ್ಯಾಪ್ತತೆ ಇರುವುದರಿಂದ ಪ್ರಕೃತಿ ಕಾಲಗಳಿಗಿರುವಂತೆ ಅವ್ಯಾಕೃತಾಕಾಶಕ್ಕೂ ಲಕ್ಷ್ಮೀದೇವಿಯೇ ಅಭಿಮಾನಿಯು ಇದನ್ನೇ ಮಾಂಡೂಕ್ಯ ಭಾಷ್ಯದಲ್ಲಿ ಹೇಳಿರುತ್ತಾರೆ. ಕಾಲ ದಿಕ್ಕು ಪ್ರಕೃತಿ ವೇದಗಳು ಇವುಗಳಭಿಮಾನಿ ಲಕ್ಷ್ಮೀದೇವಿಯೇ ಎಂದು.

**ಅವಾಂತರ ದಿಗಭಿಮಾನಿನೋಽಪಿ ಷಟ್‌ಪ್ರಶ್ನಭಾಷ್ಯೋಕ್ತಾ ಜ್ಞಾತವ್ಯಾಃ । ತಥಾ ಹಿ । ಪ್ರಾಚ್ಯಾಃ ಪ್ರಾಣಾಸ್ತಥೇಂದ್ರಾದ್ಯಾ ದಕ್ಷಿಣಾಸ್ತು ಯಮಾದಯಃ । ಪ್ರತೀಚ್ಯಾ ವರುಣಾದ್ಯಾಸ್ತು ಸೋಮಾದ್ಯಾಶ್ಚೋತ್ತರಾಃ ಸ್ಮೃತಾಃ । ಶೇಷ ಮಿತ್ರಾವ ವಾಚೀನೌ ವೀಂದ್ರ ಕಾಮಾವುದಕ್ತನೌ । ಸಭಾರ್ಯಾಃ ಕೋಣಪೈಃ ಸಾರ್ಧಂ ಚತ್ವಾರೋದಿಶಿ ದಿಶ್ಯಪೀತಿ । ಮಿತ್ರೋ ಯಮಶ್ಚ ವರುಣಃ ಕುಬೇರಶ್ಚ ದಿಗೀಶ್ವರಾ ಇತ್ಯೈತರೇಯ ಭಾಷ್ಯಂ ಚಾತ್ರಮಾನಂ । ಇತ್ಯವ್ಯಾಕೃತಾಕಾಶ ಪ್ರಕರಣಮ್ ।**

ಅವಾಂತರ ದಿಗಭಿಮಾನಿಗಳನ್ನು ಷಟ್‌ಪ್ರಶ್ನೆ ಭಾಷ್ಯದಲ್ಲಿ ಹೇಳಿರುತ್ತಾರೆ. ಪೂರ್ವದಿಕ್ಕಿಗೆ ಪ್ರಾಣ ಇಂದ್ರಾದಿಗಳು, ದಕ್ಷಿಣಕ್ಕೆ ಯಮಾದಿಗಳು, ಪಶ್ಚಿಮಕ್ಕೆ

ವರುಣಾದಿಗಳು,ಉತ್ತರಕ್ಕೆ ಚಂದ್ರಾದಿಗಳು, ಪಶ್ಚಿಮದ ಎರಡುಬದಿಯ ಕೋಣಗಳು ನಿರರುತಿ ವಾಯುವ್ಯಗಳಿಗೆ ಶೇಷ ಮಿತ್ರರು ಈಶಾನ್ಯ ಆಗ್ನೇಯಗಳಿಗೆ ಮಿಂದ್ರಕಾಮರು ಹೀಗೆ ನಾಲ್ಕು ದಿಕ್ಕು ನಾಲ್ಕು ಕೋಣಗಳಿಗೆ ತಮ್ಮ ತಮ್ಮ ಪತ್ನಿಯರಿಂದೊಡಗೂಡಿ ನಾಲ್ಕು ನಾಲ್ವರೂ ಅವಾಂತರ ದಿಗಭಿಮಾನಿಗಳು ಹೀಗೆಂದು ಮತ್ತು ಮಿತ್ರವರುಣ ಯಮಕುಬೇರ ಇವರು ದಿಗಭಿಮಾನಿಗಳು ಹೀಗೆ ಐತರೇಯ ಭಾಷ್ಯದಲ್ಲಿ ಹೇಳಿರುವುದು ಪ್ರಮಾಣವು.

ಹೀಗೆ "ಅವ್ಯಾಕೃತಾಕಾಶ" ಕನ್ನಡಾನುವಾದದೊಂದಿಗೆ ಸಮಾಪ್ತಗೊಂಡಿತು.

## ೧೭. ಪ್ರಕೃತಿ ಪ್ರಕರಣ

**ಕ್ರಮಪ್ರಾಪ್ತಾಂ ಪ್ರಕೃತಿಂ ನಿರೂಪಯತಿ ।**

ಪ.ಸಂ.—ಸಾಕ್ಷಾತ್ಪರಂಪರಯಾ ವಾ ವಿಶ್ವೋಪಾದಾನಂ ಪ್ರಕೃತಿಃ ।

**ಸಾಕ್ಷಾತ್ ಕಾಲಸ್ಯ ತ್ರಿಗುಣಸ್ಯ ಚ ಉಪಾದಾನಂ । ಮಹದಾದಿಕಂ ಪ್ರತಿ ಚ ಪರಂಪರಯೋಪಾದಾನಮಿತ್ಯರ್ಥಃ । ಪ್ರಕೃತೇರ್ದ್ರವ್ಯತ್ವಂ ಚ ದ್ರವ್ಯಂ ಕರ್ಮ ಚ ಕಾಲಶ್ಚೇತ್ಯನುವ್ಯಾಖ್ಯಾನ ಸುಧಾಯಾಂ ದ್ರವ್ಯಂ ಪ್ರಕೃತ್ಯಾದೀತ್ಯುಕ್ತ್ವಾ ಸನ್ನ್ಯಾಯರತ್ನಾವಲ್ಯಾಂ ದ್ರವ್ಯಂ ಪ್ರಧಾನಾದೀತ್ಯುಕ್ತ್ವಾ ಚ ಸಿದ್ಧಂ । ಸಾಕ್ಷಾತ್ಕಾಲೋಪಾದಾನತ್ವಂ ಚ ಪ್ರಕೃತೇಃ ಕಾಲ ಪ್ರಕರಣೇ ವಕ್ಷ್ಯಾಮಃ । ಉಪಾದಾನಮಿತ್ಯನೇನೋಪಾದಾನ ಕಾರಣತ್ವಂ ದ್ರವ್ಯ ಲಕ್ಷಣಮಸ್ತ್ಯೇವೇತಿ ಸೂಚಿತಂ ।**

ಕ್ರಮ ಪ್ರಾಪ್ತವಾದ ಪ್ರಕೃತಿಯನ್ನು ನಿರೂಪಿಸುತ್ತಾರೆ. ಸಾಕ್ಷಾತ್ತಾಗಿಯೂ ಪರಂಪರೆಯಾಗಿಯೂ ವಿಶ್ವೋಪಾದಾನ ಕಾರಣವಾಗಿರುವುದೇ ಪ್ರಕೃತಿಯು.

**ಕಾಲ ತ್ರಿಗುಣಗಳಿಗೆ ಸಾಕ್ಷಾತ್ ಉಪಾದಾನ ಕಾರಣವು, ಮಹತ್ತತ್ವಾದಿಗಳಿಗೆ ಪರಂಪರೆಯಾಗಿ ಉಪಾದಾನ ಕಾರಣವು ಎಂದರ್ಥವು. ಪ್ರಕೃತ ದ್ರವ್ಯವೇಕೆ ಎಂದರೆ ಅನುವ್ಯಾಖ್ಯಾನದ 'ದ್ರವ್ಯಂ ಕರ್ಮ ಚ ಕಾಲಶ್ಚ' ಎಂಬಲ್ಲಿ ಸುಧಾದಲ್ಲಿ ದ್ರವ್ಯವೆಂದರೆ ಪ್ರಕೃತಿಯು ಎಂದು ತಿಳಿಸಿರುತ್ತಾರೆ. ಮತ್ತು ಸನ್ನ್ಯಾಯರತ್ನಾವಳಿಯಲ್ಲಿ**

ದ್ರವ್ಯಂ ಪ್ರಧಾನಾದಿ ಎಂದು ಹೇಳಿರುವುದರಿಂದಲೂ ಪ್ರಕೃತಿಯು ದ್ರವ್ಯವೆಂದು ಸಿದ್ಧ ವಾಗುತ್ತದೆ. ಅರ್ಥಾತ್ ಉಪಾದಾನ ಕಾರಣತ್ವವೇ ದ್ರವ್ಯ ಲಕ್ಷಣವೆಂದು ಸಿದ್ಧ ವಾಗುತ್ತದೆ.

ಪ್ರಕೃತಿ ಸದ್ಭಾವೇ ತಸ್ಯಾ ಜಗದುಪಾದಾನತ್ವೇ ಚ ಪ್ರಮಾಣಂ ತು ಭಗವತ್ತಂತ್ರತಾಯುಸ್ಯಾಸ್ತದ್ಭಾರ್ಯಾತ್ವಂ ಸುರೂಪತಾ । ಉಚ್ಯತೇ ಮಾಯಾ ಸಾ ತು ಶ್ರೀ ದೋಷಯುಕ್ತಾ ಜಡಾಸ್ಮೃತಾ । ಪರಿಣಾಮಿ. ನೀಚಯುಸ್ಯಾಸ್ತು ದೋಷಾಶ್ಚೇತನತಾ ತಥಾ ಇತಿ ತೃತೀಯ ಸ್ಕಂಧ ತಾತ್ಪರ್ಯಂ। ದ್ವಿತೀಯಾ ಪ್ರಕೃತಿಃ ಪ್ರೋಕ್ತಾ ತದ್ರೂಪಾ ಹಿ ಗುಣಾಸ್ತ್ರಯ ಇತಿ ದ್ವಿತೀಯ ಸ್ಕಂಧ ತಾತ್ಪರ್ಯಂ । ಸತ್ತ್ವಂರಜಸ್ತಮ ಇತಿ ಗುಣಾಃ ಪ್ರಕೃತಿ ಸಂಭವಾ ಇತಿ ಗೀತಾ । ಸಸರ್ಜ ಭಗವಾನಾದೌತ್ರೀನ್ ಗುಣಾನ್ ಪ್ರಕೃತೇಃ ಪರಃ ಇತಿ ಮಣಿಮಂಜರೀ । ತ್ರಿಗುಣಾ ಪ್ರಕೃತಿರ್ಮಾಯಾ ಪಶ್ಯೇತ್ತನ್ಮಾತ್ರಕಂ ಜಗತ್ । ನಿರ್ಮಿಮೀತೇ ಜಗತ್ಸರ್ವಮತೋ ಮಾಯೇತಿ ಸಾ ಸ್ಮೃತಾ ಇತಿ ಏಕಾದಶ ತಾತ್ಪರ್ಯಂ ।

ಪ್ರಕೃತಿ ಇದೇ ಎಂಬ ವಿಷಯದಲ್ಲಿ, ಜಗತ್ತಿಗೆ ಉಪಾದಾನ ಕಾರಣವೆಂಬಲ್ಲಿ, ಪ್ರಮಾಣಗಳು ತೃತೀಯ ಸ್ಕಂಧ ತಾತ್ಪರ್ಯದಲ್ಲಿ ಉಕ್ತವಾಗಿದೆ. ಭಗವದಧೀನಳಾಗಿ ಪರಮ ಸುಂದರಿ ಭಾರ್ಯೆ ಆದವಳೇ ಮಾಯೆ, ಅವಳೇ ಶ್ರೀ ಶಬ್ದವಾಚ್ಯಳು, ಗುಣತ್ರಯಯುಕ್ತವಾದ ಜಡ ಪ್ರಕೃತ್ಯಭಿಮಾನಿನಿ ಆದವಳು. ಪರಿಣಾಮವುಳ್ಳದ್ದು ಅದರಲ್ಲಿರುವ(ದೋಷ)ಗುಣತ್ರಯಗಳೇ ಅದಕ್ಕೆ ಚೈತನ್ಯತೆಯನ್ನು ಕೊಡುವುದು ಎಂದು ಹೇಳಿದೆ. ದ್ವಿತೀಯ ಸ್ಕಂಧ ತಾತ್ಪರ್ಯದಲ್ಲಿ ಎರಡನೆಯವಳೇ ಲಕ್ಷ್ಮೀ ಅವಳಿಂದ ಅಭಿಮನ್ಯವಾದುದೇ ಪ್ರಕೃತಿ, ಅದರ ಮೂರು ರೂಪಗಳೇ ಸತ್ವಾದಿ ಗುಣ ತ್ರಯಗಳು ಎಂದು ಹೇಳಿದೆ. 'ಸತ್ವಂರಜಸ್ತಮ ಇತಿ ಗುಣಾಃ ಪ್ರಕೃತಿ ಸಂಭವಾಃ' ಹೀಗೆ ಗೀತಾದಲ್ಲಿದೆ. ಭಗವಂತನು ಪ್ರಕೃತಿಯಿಂದ ಮೂರುಗುಣಗಳನ್ನು ಸೃಜಿಸಿದನು ಎಂದು ಮಣಿಮಂಜರಿಯು, ಏಕಾದಶ ತಾತ್ಪರ್ಯದಲ್ಲಿಯೂ ಲಕ್ಷ್ಮೀದೇವಿಯು ತನ್ನಿಂದಭಿಮನ್ಯವಾದ ತ್ರಿಗುಣಾತ್ಮಕ ಪ್ರಕೃತಿಯಿಂದ ತನ್ಮಯವಾದ ಜಗತ್ತನ್ನು ದೃಷ್ಟಿ ಮಾತ್ರದಿಂದಲೇ ಸೃಜಿಸಿದಳು, ಆದುದರಿಂದಲೇ ಲಕ್ಷ್ಮೀದೇವಿಗೆ ಮಾಯಾ ಎಂದು ಹೆಸರು ಬಂತು ಎಂದು ಹೇಳಿದೆ.

ಪ್ರದರ್ಶಯಿತ್ವಾಹ್ಯಾತ್ಮಾನಂ ಪ್ರಕೃತಿಸ್ತೇಷು ಸರ್ವಶಃ । ಪುರುಷಾನ್ಯ ಬಹುತ್ವೇನ ಪ್ರತೀತಾ ನ ಪ್ರವರ್ತತೇ । ಪ್ರವರ್ತತಿ ಪುನಃಸರ್ಗೇ ತೇಷಾಂ ಸಾ ನ ಪ್ರವರ್ತತೇ । ಸಂಯೋಗಃ ಪ್ರಕೃತೇರ್ನೈವ ಮುಕ್ತಾನಾಂ ತತ್ವ

**ದರ್ಶನಾದಿತಿ ಬೃಹದ್ಭಾಷ್ಯ ಛಾಂದೋಗ್ಯಭಾಷ್ಯೇ । ಜಗತ್ಯಾಂ ಪ್ರಕೃತಾವಿತಿ ಈಶಾವಾಸ್ಯ ಭಾಷ್ಯಂ । ತೃತೀಯಸ್ಕಂಧ ಭಾಗವತಂ ಚ । ಯತ್ತತ್ತ್ರಿಗುಣಮವ್ಯಕ್ತಂ ನಿತ್ಯಂ ಸದಸದಾತ್ಮಕಂ ।**

ಪ್ರಕೃತಿ ವಾಚ್ಯಳಾದ ಲಕ್ಷ್ಮೀದೇವಿಯು ತನ್ನ ಅಭಿಮಾನವನ್ನು ಪ್ರಕೃತಿಯಲ್ಲಿ ತೋರಿ, ಹಿಗ್ಗಿಸುವವಳಾದಳು. ಬ್ರಹ್ಮಾದಿ ಅನೇಕ ಪುರುಷ ಅಭಿಮನ್ಯತೆ(ಅವಾಂತರ) ನೋಡಿ ತಟಸ್ಥಳಾದಳು. ಪುನಃ ಸೃಷ್ಟಿಗೆ ಮೊದಲು ಪ್ರವರ್ತಕಳು(ಕಾರ್ಯಕಾರೀ) ಆಗುತ್ತಾಳೆ. ಮುಕ್ತರಿಗೆ ಪರಮಾತ್ಮನ ದರ್ಶನವಿರುವುದರಿಂದ ಪ್ರಕೃತಿಯ ಸಂಯೋಗವಿರುವುದಿಲ್ಲ ಹೀಗೆ ಬೃಹದ್ಭಾಷ್ಯ ಛಾಂದೋಗ್ಯ ಭಾಷ್ಯಗಳಲ್ಲಿ ಹೇಳಿದೆ. ಈಶಾವಾಸ್ಯ ಭಾಷ್ಯದಲ್ಲಿ ಜಗತ್ಯಾಂ ಶಬ್ದಕ್ಕೆ ಪ್ರಕೃತಿಯಲ್ಲಿ ಎಂದು ಹೇಳಿರುತ್ತದೆ. ತೃತೀಯ ಸ್ಕಂಧ ಭಾಗವತದಲ್ಲಿಯೂ ಯಾವ ಪ್ರಸಿದ್ಧವಾದ ಮೂರು ಗುಣಗಳಿಂದ ಯುಕ್ತವಾದ ಅವ್ಯಕ್ತವೆಂದು ಪ್ರಸಿದ್ಧವಾದ ಪ್ರಕೃತಿಯು ನಿತ್ಯವಾದುದು ಸದಸದಾತ್ಮಕವಾದುದು ಎಂದಿದೆ

**ಪ್ರಧಾನಂ ಪ್ರಕೃತಿಂ ಪ್ರಾಹುರವಿಶೇಷಂ ವಿಶೇಷವತ್ । ಪಂಚಭಿಃ ಪಂಚಭಿರ್ಬ್ರಹ್ಮ ಚತುರ್ಭಿರ್ದಶಭಿಸ್ತಥಾ । ಏತಚ್ಚತುರ್ವಿಂಶತಿಕಂ ಗಣಂ ಪ್ರಾಧಾನಿಕಂ ವಿದುರಿತಿ । ಏತೇನ ಗುಣತ್ರಯಾತಿರಿಕ್ತ ಪ್ರಕೃತಿರ್ನಾಸ್ತೀತಿ ಮತಮಪಾಸ್ತಂ । ನನು ಅಸ್ತು ಲಕ್ಷ್ಮೀರೇವ ಪ್ರಕೃತಿ ಶಬ್ದ ವಾಚ್ಯಾ ನತು ಮೂಲ ಪ್ರಕೃತಿರಿತ್ಯತ ಆಹ ।**

ಮ.ಸಂ.—ಜಡರೂಪಾ । ನಿತ್ಯಾವ್ಯಾಪ್ತಾ ಚ ।

**ದೋಷಯುಕ್ತಾ ಜಡಾ ಸ್ಮೃತಾ । ಪರಿಣಾಮಿನೀತಿ ತೃತೀಯ ತಾತ್ಪರ್ಯೋಕ್ತೇಃ । ಪ್ರಕೃತೇರ್ನಿತ್ಯತ್ವಂ ಮಹಾಪ್ರಲಯಾನಂತರಂ ಪುನಃ ಸೃಷ್ಟ್ಯಾ ಉಪಾದಾನತ್ವಾತ್ । ವ್ಯಾಪ್ತಕ್ಷಣ ಲವಾದಿ ಕಾಲೋಪಾದಾನತ್ವಾತ್ ವ್ಯಾಪ್ತತ್ವಂ ಬೋಧ್ಯಂ ।**

ಪ್ರಕೃತಿಯನ್ನೇ ಪ್ರಧಾನವೆನ್ನುತ್ತಾರೆ. ಅವಿಶೇಷವೂ ಹೌದು, ವಿಶೇಷವುಳ್ಳದ್ದೂ ಹೌದು, ಐದು ಐದು ಹಾಗೂ ಹದಿನಾಲ್ಕು ಹೀಗೆ ಒಟ್ಟು ಇಪ್ಪತ್ನಾಲ್ಕು ಭಾಗವಾದುದು ಪ್ರಧಾನವು ಎಂದು ಹೇಳಿದೆ. ಹೀಗೆ ಹೇಳುವುದರಿಂದ ತ್ರಿಗುಣಾತಿರಿಕ್ತ ಪ್ರಕೃತಿ ಇಲ್ಲ ಅನ್ನುವವರ ಮತ ನಿರಾಕೃತವಾಯಿತು. ಲಕ್ಷ್ಮೀದೇವಿಯೆ ಪ್ರಕೃತಿ ಶಬ್ದವಾಚ್ಯಳು. ಮೂಲಪ್ರಕೃತಿ ಅಲ್ಲ. ಜಡವಾದ ಕಾರಣವೆಂದು ಹೇಳುತ್ತಾರೆ. ಜಡರೂಪವೂ, ನಿತ್ಯವೂ, ವ್ಯಾಪ್ತವೂ ಆಗಿರುತ್ತದೆ. ತೃತೀಯ ತಾತ್ಪರ್ಯದಲ್ಲಿ ಪರಿಣಾಮೀ ಅಂತಲೂ ಹೇಳಿರುತ್ತದೆ. ಪ್ರಕೃತಿಗೆ ನಿತ್ಯತೆ ಅಂದರೆ, ಮಹಾಪ್ರಳಯ

ನಂತರ ಪುನಃ ಸೃಷ್ಟಿಯಲ್ಲಿ ಉಪಾದಾನತೆ ಇರುವುದರಿಂದ, ವ್ಯಾಪ್ತತೆ ಅದರೂ ಕ್ಷಣ ಲವಾದಿ ಕಾಲಕ್ಕೆ, ಉಪಾದಾನವಾದುದರಿಂದ.

ಪ.ಸಂ.— ತದಭಿಮಾನಿನೀ ರಮಾ । ಸರ್ವ ಜೀವಲಿಂಗಶರೀರರೂಪಾ । ತದ್ಭಿನ್ನಾ ಚೇತ್ಯನೇಕವಿಧಾ ।

ಪ್ರಕೃತಿರ್ನಾಮ ತತ್ಪತ್ನೀ ಪ್ರಕೃತೇಃ ಅಭಿಮಾನಿನೀ ಇತಿ ಏಕಾದಶ ತಾತ್ಪರ್ಯೋಕ್ತೇಃ ಪುರುಷಾವ್ಯಕ್ತ ಕಾಲಾನಾಂ ರಮೈವ ಏಕಾಭಿಮಾನಿನೀತಿ ವಿಯತ್ಪಾದೀಯಾನುವ್ಯಾಖ್ಯಾನೋಕ್ತೇಶ್ಚ ಇತಿ ಭಾವಃ। ತದ್ವಿಭಾಗಮಾಹ। ಸರ್ವೇಷಾಂ ಜೀವಾನಾಂ ಶರೀರಂ ತಾವದಂಗೀಕರ್ತವ್ಯಂ। ಅನ್ಯಥಾ ಪರಮಾತ್ಮವನ್ನಿತ್ಯಮುಕ್ತತ್ವೇನ ಸೃಷ್ಟ್ಯನುಪಪತ್ತಿ ಪ್ರಸಂಗಾತ್। ಸೃಷ್ಟ್ಯಾದಿ ಪ್ರವಾಹಶ್ಚ ನಿತ್ಯಃ ಅತಃ ಸ್ಥೂಲ ಶರೀರಾಪಾದಕಂ ಸೂಕ್ಷ್ಮಶರೀರಮಂಗೀಕರ್ತವ್ಯಂ। ತದೇವಲಿಂಗ ಶರೀರಂ। ಸಾ ಚ ಪ್ರಕೃತಿರೇವ। ಶಿಷ್ಟಂ ಲಿಂಗ ಶರೀರ ಪ್ರಕರಣೇ ವಕ್ಷ್ಯಾಮಃ। ತದ್ಭಿನ್ನಾ ಚೇತಿ। ಲಿಂಗಶರೀರ ಭಿನ್ನಾ ಗುಣತ್ರಯಾದ್ಯುಪಾದಾನ ಭೂತಾ ಇತ್ಯರ್ಥಃ। ಇತಿ ಮೂಲ ಪ್ರಕೃತಿ ಪ್ರಕರಣಮ್।

ಏಕಾದಶ ತಾತ್ಪರ್ಯದಲ್ಲಿ ಲಕ್ಷ್ಮೀ ಪ್ರಕೃತಿ ನಾಮಕಳು, ಪ್ರಕೃತ್ಯಭಿಮಾನಿನೀ ಪರಮಾತ್ಮನ ಪತ್ನಿ ಎಂದು ಹೇಳಿದೆ. ವಿಯತ್ಪಾದೀಯ ಅನುವ್ಯಾಖ್ಯಾನದಲ್ಲಿ ಪುಂ ಶಕ್ತಿವುಳ್ಳವಳು ಅವ್ಯಕ್ತ ಕಾಲಾಭಿಮಾನಿನೀ ರಮಾ ಎಂದು ಹೇಳಿದೆ. ಪ್ರಕೃತಿ ವಿಭಾಗಗಳಾದರೂ ಸರ್ವಜೀವರ ಲಿಂಗದೇಹಗಳು. ಲಕ್ಷ್ಮೀ ತದ್ಭಿನ್ನಳು ಹೌದು. ಅದು ಯಾವುದೆಂದರೆ, ಸರ್ವ ಜೀವರಿಗೆ ಸ್ಥೂಲ ಶರೀರ ಕಾರಣಗಳಿಂದ ಮತ್ತೊಂದು ಶರೀರವಿರಲೇಬೇಕು. ಹಾಗಿಲ್ಲವಾದರೆ ಪರಮಾತ್ಮನಂತೇ ನಿತ್ಯ ಮುಕ್ತತೆ ಪುನಃ ಸೃಷ್ಟಿ ಇಲ್ಲವಾಗಬೇಕಾದೀತು. ಸೃಷ್ಟಿ ಪ್ರವಾಹವಂತೂ ನಿತ್ಯ. ಯಥಾಪೂರ್ವಮಕಲ್ಪಯತ್ ಎಂಬ ಶ್ರುತಿ ಪ್ರಸಿದ್ಧ, ಅದೇ ಲಿಂಗ ದೇಹವು. ಅದು ಪ್ರಕೃತಿಯೇ ಮಿಕ್ಕ ವಿಷಯಗಳನ್ನು ಲಿಂಗದೇಹ ಪ್ರಕರಣದಲ್ಲಿ ಹೇಳುತ್ತೇವೆ. ಲಿಂಗ ಶರೀರಭಿನ್ನಳು ಗುಣತ್ರಯಗಳಿಗೆ ಉಪಾಧಿರೂಪಳು.

ಹೀಗೆ "ಪ್ರಕೃತಿ ಪ್ರಕರಣ"ವು ಕನ್ನಡಾನುವಾದದೊಂದಿಗೆ ಸಮಾಪ್ತಗೊಂಡಿತು.

# ೧೮. ಗುಣತ್ರಯ ಪ್ರಕರಣ

ಪ.ಸಂ.—ಸತ್ವರಜಸ್ತಮೋನಾಮಕಾನಾಂ ಗುಣಾನಾಂ ಸಮುದಾಯೋ ಗುಣತ್ರಯಮ್ ।

**ನನು ಗುಣತ್ರಯಸ್ಯ ಉಪಾದಾನಂ ಕಿಂ । ಸ್ರಷ್ಟಾ ಚ ಕಃ । ಕದೋ-ತ್ಪದ್ಯತ ಇತ್ಯತ ತತ್ತ್ರಯಮುಪ್ಯಾಹ ।**

ಪ.ಸಂ.—ಸೃಷ್ಟಿಕಾಲೇ ಮೂಲಪ್ರಕೃತೇಃ ಸಕಾಶಾತ್ಪರಮಾತ್ಮನಾ ತ್ರೇಧಾಭಿನ್ನಮ್ ।

**ಮಹಾಸೃಷ್ಟಿಕಾಲ ಇತ್ಯರ್ಥಃ । ಮಹಾಪ್ರಲಯೇ ಪ್ರಕೃತಿ ರೇಕೈವಾಸೀನ್ಮಹದಾದಿಕಂ ಕಿಮಪಿ ನಾಸೀತ್ । ತದಾ ಭಗವಾನ್ ಸಿಸೃಕ್ಷಯಾ ಮೂಲ ಪ್ರಕೃತೇಃ ಸಕಾಶಾತ್ ಸತ್ತ್ವರಾಶಿಂ ರಜೋರಾಶಿಂ ತಮೋರಾಶಿಂ ಚ ಅಸೃಜತ್ । ತದ್ರಾಶಿತ್ರಯಂ ಗುಣತ್ರಯಂ ಇತ್ಯರ್ಥಃ । ತತ್ಕಿಮರ್ಥಂ ವ್ಯಸೃಜದಿತ್ಯತ ಆಹ ।**

ಗುಣತ್ರಯ ಸ್ವರೂಪವನ್ನು ಹೇಳುತ್ತಾರೆ. ಸತ್ವ, ರಜ ಮತ್ತು ತಮಗಳೆಂಬ ಗುಣಗಳಿಗೆ ಗುಣತ್ರಯವೆಂದು ಹೆಸರು. ಈ ಗುಣತ್ರಯಗಳಿಗೆ ಉಪಾದಾನ ಕಾರಣ ಯಾವುದು ? ಸೃಷ್ಟಿ ಮಾಡಿದವರು ಯಾರು ? ಯಾವಾಗ ಹುಟ್ಟಿತು ? ಎಂದು ಮೂರನ್ನೂ ಹೇಳುತ್ತಾರೆ.

ಸೃಷ್ಟಿಕಾಲದಲ್ಲಿ ಮೂಲಪ್ರಕೃತಿ ಉಪಾದಾನಕವಾಗಿ ಪರಮಾತ್ಮನಿಂದ ಮೂರು ರಾಶಿಗಳಾಗಿ ಹುಟ್ಟಿದವು. ಮಹಾಪ್ರಳಯ ಅನಂತರ ಮಹಾಸೃಷ್ಟಿಕಾಲದ ಮೊದಲು ಏನೂ ಇರಲಿಲ್ಲ. ಆಗ ಪರಮಾತ್ಮನು ಸೃಷ್ಟಿಮಾಡಲು ಮನ ಮಾಡಿ ಮೂಲ ಪ್ರಕೃತಿಯಿಂದ ಸತ್ವರಾಶಿ, ರಜೋರಾಶಿ ಮತ್ತು ತಮೋರಾಶಿಗಳನ್ನು ಸೃಜಿಸಿದನು. ಇವೇ ಗುಣತ್ರಯವೆನಿಸಿಕೊಂಡಿತು. ಆ ಗುಣತ್ರಯವನ್ನು ಏಕೆ ಸೃಜಿಸಿದನು ಎಂದರೆ ಹೇಳುತ್ತಾರೆ.

ಪ.ಸಂ.—ಮಹದಾದಿ ಜಗದುಪಾದಾನಮ್ । ತಮೋಗುಣಾಪೇಕ್ಷಯಾ ರಜೋಗುಣೋ ದ್ವಿಗುಣ ಪರಿಮಾಣಯುಕ್ತಃ । ರಜೋಗುಣಾಪೇಕ್ಷಯಾ ಸತ್ತ್ವಗುಣೋ ದ್ವಿಗುಣಪರಿಮಾಣಯುಕ್ತಃ ।

ಮಹತ್ತತ್ವಾದಿ ಜಗತ್ತಿನ ಉಪಾದಾನ (ಪರಿಣಾಮ) ಕಾರಣವಾದುದರಿಂದ ಸೃಜಿಸಿದನು. ಗುಣಗಳ ವಿಭಾಗವನ್ನು ಹೇಳುತ್ತಾರೆ. ತಮೋಗುಣದ ಎರಡರಷ್ಟು ಪರಿಮಿತಿಯಲ್ಲಿ ರಜೋಗುಣ, ಅದಕ್ಕಿಂತಲೂ ಸತ್ವಗುಣ ಎರಡರಷ್ಟು ಪರಿಮಾಣ ಉಳ್ಳದ್ದು.

ತದುಕ್ತಂ ತೃತೀಯ ತಾತ್ಪರ್ಯೇ । ತಮಸೋ ರಜಸ್ತು ದ್ವಿಗುಣಂ ರಜಸಃ ಸತ್ವಮೇವ ಚ ಪರಿಮಾಣತಯ್ವೆವಂ ಸ್ಯುಸ್ತ್ರಯಃ ಪ್ರಕೃತಿಜಾ ಗುಣಾ ಇತಿ । ತಮೋಗುಣಸ್ಯ ಪರಿಮಾಣಂ ತು ಮಹತ್ತತ್ತ್ವಾಪೇಕ್ಷಯಾ ದಶಗುಣಿತಂ ಜ್ಞೇಯಮ್ । ತದುಕ್ತಂ ಸನ್ನ್ಯಾಯರತ್ನಾವಲ್ಯಾಂ । ಗಿರಿಶಗರುಡೌ ತು ಮಹತ್ತತ್ತ್ವಸ್ಯ ಆವರಣೇ ನತದ್ದಶೋತ್ತರೇಣ ತಮೋ ಗುಣೇನ ಪರಿಮಿತದೇಶ ಪರ್ಯಂತಂ ವ್ಯಾಪ್ತಮೇವ ವಿಷ್ಣುಂ ಪಶ್ಯತ ಇತಿ ।

ತೃತೀಯ ಸ್ಕಂಧ ತಾತ್ಪರ್ಯದಲ್ಲಿ ಹೇಳಿದೆ. ತಮೋಗುಣದ ಎರಡರಷ್ಟು ರಜೋಗುಣವು. ಅದರ ಎರಡರಷ್ಟು ಸತ್ವಗುಣವು ಪ್ರಕೃತಿಯಿಂದ ಹುಟ್ಟಿದ ಮೂರು ಗುಣಗಳು ತಮೋಗುಣದಿಂದ ಎರಡರಷ್ಟು ಅಧಿಕವಾಗಿರುತ್ತದೆ. ತಮೋಗುಣದ ಪರಿಮಿತಿ ಅದರೋ, ಮಹತ್ತತ್ವದಕ್ಕಿಂತಲು ಹತ್ತು ಗುಣ ಹೆಚ್ಚೆಂದು ತಿಳಿಯಬೇಕು ಎಂದು ಸನ್ನ್ಯಾಯರತ್ನಾವಳಿಯಲ್ಲಿ ಹೇಳಿದೆ. ಮಹೇಶ ಗರುಡರು ಆವರಣದಿಂದ ಕೂಡಿದ ಮಹತ್ತತ್ತ್ವದಿಂದ ಹತ್ತರಷ್ಟು ತಮೋಗುಣ ಪರಿಮಿತ ದೇಶ ಪರ್ಯಂತ ವ್ಯಾಪ್ತನಾದ ವಿಷ್ಣುವನ್ನು ನೋಡುತ್ತಾರೆ. ಹೀಗೆ ಹೇಳಿದೆ.

ನನ್ವಬಗ್ನೀರನಭೋಹಂಕೃನ್ಮಹತ್ತತ್ವಗುಣತ್ರಯೈಃ ಕ್ರಮಾದ್ದ-ಶೋತ್ತರೈರೇತದಾವೃತಂ ಪರತಸ್ತಥೇತಿ ನಿರ್ಣಯ ವಿರೋಧಃ । ತತ್ರ ಮಹತ್ತತ್ವಾಪೇಕ್ಷಯಾ ಗುಣತ್ರಯಸ್ಯೈವ ದಶೋತ್ತರತ್ವೋಕ್ತೇರಿತಿ ಚೇನ್ನ ಗುಣತ್ರಯ ಪದಸ್ಯ ತಮೋಗುಣಮಾತ್ರ ಪರತ್ವಾಂಗೀಕಾರಾತ್ ನ ಚೈವಂ ಸನ್ನ್ಯಾಯರತ್ನಾವಲೀಸ್ಥ ತಮೋಗುಣ ಪದಸ್ಯೈವ ಗುಣತ್ರಯ ಪರತ್ವಮಸ್ತು ಇತಿ ವಾಚ್ಯಂ । ಗಿರಿಶ ಗರುಡಯೋರ್ಗುಣತ್ರಯಪರ್ಯಂತ ಭಗವದ್ರೂಪಾಪರೋಕ್ಷ ಜ್ಞಾನ ಸಾಮರ್ಥ್ಯ ಪರಿಕಲ್ಪನಾಪತ್ತೇಃ। ಗಿರಿಶೋ ಗರುಡಶ್ಚೈವ ತಮೋಮಾತ್ರಗತಂ ಹರಿಂ । ಪಶ್ಯತಇತ್ಯನುವ್ಯಾಖ್ಯಾನೇ ಮಾತ್ರಪದ ಪ್ರಯೋಗಾಚ್ಚ ।

ಉದಕ, ಅಗ್ನಿ, ಆಕಾಶ, ಅಹಂಕಾರ ತತ್ವ, ಮಹತ್ತತ್ವ ಗುಣತ್ರಯಗಳಿಂದ ಕ್ರಮವಾಗಿ ಹತ್ತರಷ್ಟು ಹೆಚ್ಚು ಹೆಚ್ಚಾಗಿ ಬ್ರಹ್ಮಾಂಡ ಆವೃತವಾಗಿದೆ ಎಂದು ಹೇಳಿದ ತಾತ್ಪರ್ಯ ವಿರೋಧ ಬರುವುದಿಲ್ಲವೇ ? ಎಂದರೆ ಹಿಂದೆ ಗುಣತ್ರಯಕ್ಕೆ ಮಾತ್ರ ಮಹತ್ತತ್ತ್ವದಕ್ಕಿಂತಲೂ ಹತ್ತರಷ್ಟಧಿಕವೆಂದು ಹೇಳಿರುವುದರಿಂದ ಅಂದರೆ ಬಾಧ ಬರುವುದಿಲ್ಲ ತಾತ್ಪರ್ಯದಲ್ಲಿ ಗುಣತ್ರಯ ಪದಕ್ಕೆ ತಮೋಗುಣ ಮಾತ್ರಾರ್ಥ ವಿರುವುದರಿಂದ ಸನ್ನ್ಯಾಯರತ್ನಾವಳಿಯಲ್ಲಿಯೂ ಗುಣತ್ರಯ ಪದಕ್ಕೆ ತಮೋಗುಣ ಮಾತ್ರ ಅರ್ಥಕತೆ ಇರುವುದಿಲ್ಲ ಅನ್ನಬಾರದು. ಇಲ್ಲಿ ಮಾತ್ರ ಪದವಿರುವುದರಿಂದ ಹಾಗಿಲ್ಲವಾದರೆ ಈಶ್ವರ ಗರುಡರಿಗೆ ಗುಣತ್ರಯ ಪರ್ಯಂತ ಭಗವದ್ರೂಪ ಅಪರೋಕ್ಷ ಸಾಮರ್ಥ್ಯ ಪರಿಕಲ್ಪನಾ ಮಾಡಬೇಕಾದೀತು. ಗಿರಿಶ ಗರುಡರಿಗೆ ತಮೋಗುಣ

ಮಾತ್ರ ಶಬ್ದ ಪ್ರಯೋಗಿಸಿರುವುದರಿಂದಲೂ ನಿರ್ಣಯದಲ್ಲಿರುವ ಗುಣತ್ರಯ ಶಬ್ದಕ್ಕೆ ತಮೋಗುಣ ಮಾತ್ರಾರ್ಥಕತೆಯೇ ಇರುವುದರಿಂದ ಯಾವ ವಿರೋಧವೂ ಬರುವುದಿಲ್ಲ.

**ಅತೋ ನಿರ್ಣಯಸ್ಥ ಗುಣತ್ರಯಪದಸ್ಯೈವ ತಮೋಗುಣಪರತ್ವಮಂಗೀ ಕರ್ತವ್ಯಂ ಇತ್ಯಾಹುಃ । ರಜಸ್ತಮಸೋರ್ಮಿಶ್ರೀಭಾವಮಾಹ ।**

ಪ್ರ.ಸಂ.—ಸತ್ತ್ವರಜೋಭ್ಯಾಂ ಮಿಶ್ರಂ ತಮಃ । ತಮಸ್ಸತ್ತ್ವಾಭ್ಯಾಂ ಮಿಶ್ರಂ ರಜಃ ।
ಸತ್ವಂತು ಶುದ್ಧಮೇವ ।

**ಅಯಮತ್ರ ವಿವೇಕಃ । ಮೂಲಪ್ರಕೃತೇಃ ಸಕಾಶಾದ್ಗುಣತ್ರಯೋತ್ಪತ್ತಿ ಕಾಲೇ ಸತ್ತ್ವಗುಣೋ ರಜಸ್ತಮೋಭ್ಯಾಮಮಿಶ್ರಃ ಶುದ್ಧ ಏವೋತ್ಪನ್ನಃ । ರಜೋಗುಣಸ್ತು ಸತ್ತ್ವತಮೋಭ್ಯಾಂ ಮಿಶ್ರ ಏವೋತ್ಪನ್ನಃ । ತತ್ರರಜೋ ಗುಣೇ ರಜೋಗುಣಾಪೇಕ್ಷಯಾ ಸತ್ತ್ವಭಾಗಃ ಶತಾಧಿಕಃ । ರಜೋಗುಣಾಪೇಕ್ಷಯಾ ಶತಾಂಶನ್ಯೂನಂ ತಮಃ । ಏವಂ ರಜೋಗುಣ ಸ್ಥಿತಿಃ । ತಮೋಗುಣೋಽಪಿ ಸತ್ತ್ವರಜೋಭ್ಯಾಂ ಮಿಶ್ರ ಏವೋತ್ಪನ್ನಃ ।**

ರಜೋ ತಮೋಗುಣಗಳ ಮಿಶ್ರಭಾವವನ್ನು ಹೇಳುತ್ತಾರೆ. ಸತ್ವ ರಜೋಗುಣ ಗಳಿಂದ ಮಿಶ್ರವಾದದು ರಜೋಗುಣವು. ಸತ್ವಗುಣ ಶುದ್ಧವಾದುದೇ. ಈ ರೀತಿಯು ಗುಣಗಳ ಮಿಶ್ರೀಕರಣವು ಇಲ್ಲಿ ಈ ರೀತಿ ತಿಳಿಯಬೇಕಾದುದು. ಸೃಷ್ಟಿ ಕಾಲದಲ್ಲಿ ಮೂಲ ಪ್ರಕೃತಿಯಿಂದ ಗುಣಗಳು ಹುಟ್ಟುವ ವೇಳೆ ಸತ್ತ್ವಗುಣ ರಜೋಗುಣ ತಮೋಗುಣಗಳು ಅಮಿಶ್ರಿತಗಳಾಗಿಯೇ ಶುದ್ಧವಾಗಿಯೇ ಹುಟ್ಟಿದವು. ನಂತರ ರಜೋಗುಣವಾದರೋ ಸತ್ತ್ವ ತಮೋಗುಣಗಳಿಂದ ಮಿಶ್ರವಾಗಿ ಹುಟ್ಟಿತು. ಅಲ್ಲಿ ರಜೋಗುಣದಲ್ಲಿ ರಜೋಗುಣದಕ್ಕಿಂತ ಸತ್ತ್ವ ಗುಣಭಾಗವು ನೂರರಷ್ಟು ಅಧಿಕವಾದುದು. ರಜೋಗುಣದಕ್ಕಿಂತಲೂ ನೂರರಷ್ಟು ನ್ಯೂನ ವಾದುದು ತಮೋಗುಣವು. ಹೀಗೆ ರಜೋಗುಣದ ಸ್ಥಿತಿಃ ಸ್ವರೂಪವು. ಆ ತಮೋ ಗುಣವು ಸತ್ತ್ವ—ರಜೋ ಗುಣಗಳಿಂದ ಮಿಶ್ರವಾಗಿಯೇ ಹುಟ್ಟಿದೆ.

**ತತ್ರ ತಮೋ ಭಾಗಾಪೇಕ್ಷಯಾ ಸತ್ತ್ವಂ ದಶೋತ್ತರಮ್ । ತಮೋ ಗುಣಸ್ಯ ದಶಾಂಶ ನ್ಯೂನಂ ರಜಃ । ಏವಂ ತಮೋಗುಣಸ್ಥಿತಿಃ । ನ ಚೈವಂ ಪರಸ್ಪರ ಮಿಶ್ರಿತತ್ವೇ ವಿಶೇಷ ನಿರ್ದೇಶೋ ನಸ್ಯಾದಿತಿ ವಾಚ್ಯಂ । ಪ್ರಾಚುರ್ಯಾಭಿಪ್ರಾಯೇಣೋಪಪತ್ತೇಃ ತದುಕ್ತಂ ತೃತೀಯಸ್ಕಂಧ ತಾತ್ಪರ್ಯೇ। ತತ್ರ ಸತ್ತ್ವಂ ಕೇವಲಂ ಸ್ಯಾದ್ರಜಸ್ಯಪಿ ಶತಾಧಿಕಮ್ । ಸತ್ತ್ವಂ ರಜಃ ಶತಾಂಶಂ ತು ತಮಸ್ತತ್ರ ಪ್ರಕೀರ್ತಿತಂ । ತಮಸ್ಯಪಿ ತಥಾ ಸತ್ತ್ವಂ ತಮಸಸ್ತು ದಶೋತ್ತರಂ । ತದ್ದಶಾಂಶೇನತುರಜ ಇತಿ । ಇಯಂ ಗುಣಾನಾಂ ವಿಷಮಾವಸ್ಥಾ ಸೃಷ್ಟಿರಿತ್ಯುಚ್ಯತೇ । ಸೃಷ್ಟಿಕಾಲೇ ಸತ್ತ್ವಗುಣಸ್ಯ ಮಿಶ್ರತ್ವಾಭಾವಾತ್ । ಸಾಮ್ಯಾವಸ್ಥಾ ತು ಪ್ರಳಯ ಇತ್ಯುತ್ತರತ್ರ ವಕ್ಷ್ಯತೇ ।**

ತಮೋಗುಣದಲ್ಲಿ ತಮೋಗುಣದ ಭಾಗದಕ್ಕಿಂತಲೂ ಸತ್ತ್ವಭಾಗ ಹತ್ತರಷ್ಟು ಹೆಚ್ಚು, ತಮೋಗುಣದ ಹತ್ತು ಅಂಶ ಕಡಿಮೆ ರಜಸ್ಸು, ಹೀಗೆ ತಮೋಗುಣದ ಸ್ಥಿತಿಯು. ಹೀಗೆ ಪರಸ್ಪರ ಮಿಶ್ರಣ ಹೇಳಿದರೆ, ಇಂಥಹ ಗುಣವೆಂಬ ಪ್ರತ್ಯೇಕ ಹೇಳುವಿಕೆ ಹೇಗೆ ಅನ್ನಬಾರದು. ಪ್ರಾಚುರ್ಯ(ಹೆಚ್ಚಿನ ಅಂಶ)ದಿಂದ ವಿಶೇಷಗಳು ಕೊಡುತ್ತವೆ. ಇದನ್ನೇ ತೃತೀಯ ಸ್ಕಂಧ ತಾತ್ಪರ್ಯದಲ್ಲಿ ಹೇಳಿದೆ. ಕೇವಲ ಸತ್ತ್ವವಾದುದು ರಜಸ್ಸಿನಲ್ಲಿ ನೂರುಪಟ್ಟು ಹೆಚ್ಚಾದುದು. ಸತ್ತ್ವ ರಜಸ್ಸು ನೂರರಷ್ಟು ತಮಸ್ಸು ತಮಸ್ಸಿನಲ್ಲಿ ಎಂದು ಹೇಳಲ್ಪಟ್ಟಿದೆ. ತಮಸ್ಸಿನಲ್ಲಿ ಸತ್ತ್ವವೂ ಹಾಗೆ ಸತ್ತ್ವವು ತಮಸ್ಸಿನಕಿಂತಲೂ ಹತ್ತರಷ್ಟು ಹೆಚ್ಚು, ಅದರ ಹತ್ತಂಶದಿಂದ ರಜಸ್ಸು ಹೀಗೆ ಹೇಳಿದೆ. ಗುಣಗಳ ಈ ವಿಷಮಾಸಸಾ ಸೃಷ್ಟಿ ಎನಿಸಿರುತ್ತದೆ. ಸೃಷ್ಟಿ ಕಾಲದಲ್ಲಿ ಸತ್ತ್ವಗುಣ ಮಿಶ್ರತೆ ಇಲ್ಲವಾದ್ದರಿಂದ ಗುಣಗಳ ಸಾಮ್ಯಾವಸ್ಥೆಯೇ ಪ್ರಳಯವೆಂದು ಮುಂದೆ ಹೇಳಲ್ಪಡುತ್ತದೆ.

**ತ್ರಯಾಣಾಂ ಅಪಿ ಗುಣಾನಾಂ ಪ್ರಯೋಜನಮಾಹ ।**

ಪ.ಸಂ.—ತತ್ರ ಶುದ್ಧಸತ್ತ್ವಂ ಮುಕ್ತಾನಾಂ ಲೀಲಾವಿಗ್ರಹಾಯ ಭವತಿ । ರಜೋಗುಣೇನ ಸೃಷ್ಟಿಃ । ರಜೋಗುಣಸ್ಥ ಸತ್ತ್ವೇನ ಸ್ಥಿತಿಃ । ತಮೋಗುಣೇನ ವಿನಾಶಃ ।

**ಮುಕ್ತಾಃ ಪ್ರಾಕೃತದೇಹಂ ಲೀಲಯಾ ಗೃಹೀತ್ವಾ ತದ್ದೇಹೇನ ಯಥೇಷ್ಟ ಭೋಗಾನನುಭೂಯ ತದ್ದೇಹಂ ಸ್ವೇಚ್ಛಯೈವ ತ್ಯಜಂತಿ । ಸ ಚ ದೇಹೋ ನ ರಜಸ್ತಮೋಗುಣ ಮಿಶ್ರಸತ್ತ್ವಾತ್ಮಕಃ । ಬದ್ಧತ್ವಾಪತ್ತೇಃ ಶುದ್ಧ ಸತ್ತ್ವಸ್ಯ ತತ್ರ ಉಪಯೋಗಃ ಇತ್ಯರ್ಥಃ । ತದುಕ್ತಂ ಭಾಷ್ಯೇ ।**

ಮೂರೂ ಗುಣಗಳ ಪ್ರಯೋಜನವನ್ನು ಹೇಳುತ್ತಾರೆ. ಆ ಮೂರೂ ಗುಣಗಳಲ್ಲಿ ಶುದ್ಧ ಸತ್ವಗುಣವಾದದು ಮುಕ್ತರ ವಿಹಾರ ದೇಹ ಉಪಯುಕ್ತವು. ರಜೋಗುಣದಿಂದ ಸೃಷ್ಟಿಯು. ರಜೋಗುಣದಲ್ಲಿಯ ಸತ್ತ್ವಗುಣದಿಂದ ಸ್ಥಿತಿಯು. ತಮೋಗುಣದಿಂದ ವಿನಾಶ. ಮುಕ್ತರು ಪ್ರಾಕೃತ ದೇಹವನ್ನು ಅನಾಯಾಸವಾಗಿ ಸ್ವೇಚ್ಛೆಯಿಂದಲೇ ತೆಗೆದುಕೊಂಡು ಭೋಗಗಳನ್ನು ಅನುಭವಿಸಿ, ಆ ದೇಹವನ್ನು ಸ್ವೇಚ್ಛೆಯಿಂದಲೇ ಬಿಡುತ್ತಾರೆ. ಆ ದೇಹವು ತಮೋ ರಜೋಗುಣಗಳಿಂದ ಮಿಶ್ರಿತ ಸತ್ವಗುಣಾತ್ಮಕವಲ್ಲ, ಬಂಧಕತೇ ಬರಬೇಕಾದೀತು. ಆದ್ದರಿಂದ ಶುದ್ಧ ಸತ್ವಗುಣವೇ ಮುಕ್ತಿಯಲ್ಲಿ ಉಪಯೋಗವಾಗತಕ್ಕದು. ಇದನ್ನು ಭಾಷ್ಯದಲ್ಲಿ ಹೇಳಿದೆ.

**ಸ ವಾ ಏಷ ಏವಂ ವಿತ್ಪರಮಭಿಪಶ್ಯತ್ಯಭಿ ಶೃಣೋತಿ ಜ್ಯೋತಿಷೈವ ರೂಪೇಣಚಿತಾವಾಚಿತಾವಾ ನಿತ್ಯೇನವಾನಿತ್ಯೇನ ವಾ ಅಥಾನಂದೀಹ್ಯೇವೈಷ ಭವತಿ ನಾನಾನಂದ ಕಿಂಚಿದುಪಸ್ಪೃಶತೀತಿ । ಕೇಚಿತ್ತು । ಪಾಂಚಭೌತಿಕ**

ದೇಹೇನಾಪಿ ಮುಕ್ತಾನಾಂ ಭೋಗಃ ಸಂಭವತ್ಯೇವ । ನ ಚೈವಮಸ್ಮದಾದಿವತ್ ಸುಖದುಃಖಯೋರಾಪತ್ತಿರಿತಿ ವಾಚ್ಯಂ । ಕರ್ಮನಿರ್ಮಿತ ದೇಹಸ್ಯೈವ ಬಂಧಕತ್ವೇನ ಸ್ವೇಚ್ಛಯಾ ಗೃಹೀತಸ್ಯ ಬಂಧಕತ್ವಾಭಾವಾತ್ । ವ್ರೀಹ್ಯಾದಿ ಪ್ರವಿಷ್ಟ ಜೀವಾಂತರವತ್ । ತದುಕ್ತಂ ವೈರಾಗ್ಯಪಾದೇ ಅನ್ಯಾಧಿಷ್ಠಿತೇ ಪೂರ್ವವದಭಿಲಾಪಾದಿತ್ಯಧಿಕರಣ ಟೀಕಾಯಾಮಿತ್ಯಾಹುಃ ।

ಯಾವನು ಶ್ರೀಹರಿಯನ್ನು ಹೀಗೆ ತಿಳಿಯುತ್ತಾನೆಯೋ ಅವನು ಪರಮಾತ್ಮನನ್ನು ಕಾಣುತ್ತಾನೆ. ಸಾಕಷ್ಟು ಕೇಳುತ್ತಾನೆ. ತೇಜೋರೂಪದಿಂದ ಜ್ಞಾನಾತ್ಮಕವೋ, ಅಜ್ಞಾನಾತ್ಮಕವೂ, ನಿತ್ಯವೂ ಅನಿತ್ಯವೂ ಆದ ದೇಹದಿಂದ ಆನಂದವನ್ನು ಅನುಭವಿಸುತ್ತಾನೆ ಸ್ವಲ್ಪವಾದರೂ ದುಃಖವನ್ನು ಸ್ಪರ್ಶಿಸುವುದಿಲ್ಲ. ಹೀಗೆ ಹೇಳಿದೆ. ಕೆಲವರು: ಪಾಂಚಭೌತಿಕ ದೇಹದಿಂದಲೂ ಮುಕ್ತರಿಗೆ ಭೋಗವು ಕೂಡುತ್ತದೆ. ನಮ್ಮಗಳಂತೆ ಸುಖದುಃಖಗಳ ಪ್ರಾಪ್ತಿ ಆಗಲೀ ಎಂಬುದು ಬರುವುದಿಲ್ಲ. ಕರ್ಮದಿಂದ ಬಂದ ದೇಹಕ್ಕೆ ಬಂಧಕತೆ ಇರುವುದರಿಂದ ವ್ರೀಹ್ಯಾದಿಗಳಲ್ಲಿ ಪ್ರವಿಷ್ಟ ಜೀವನಂತೆ ಅದೇ ಹೇಳಿದೆ. ವೈರಾಗ್ಯ ಪಾದದಲ್ಲಿ ಆ ಅದಿಕರಣ ಟೀಕಾದಲ್ಲಿಯೂ 'ಅನ್ಯಾದಿಷ್ಠಿತೇ ಪೂರ್ವವದಭಿಲಾಪಾತ್' ಸೂತ್ರಾಧಿಕರಣದಲ್ಲಿಯೂ ಹೀಗೆ ಹೇಳುತ್ತಾರೆ.

ರಜೋಗುಣೇನ ಸೃಷ್ಟಿರಿತಿ । ಜಗತ ಇತಿ ಶೇಷಃ । ಯತ್ರಾಪಿಸಾತ್ವಿಕ ರಾಜಸಾದಿ ವಿಭಾಗಸ್ತತ್ರಾಪಿ ರಜೋಗುಣಸ್ಥ ಸತ್ವಾದ್ಯಪೇಕ್ಷಯೈವ । ತದುಕ್ತಂ ಪ್ರಮೇಯದೀಪಿಕಾಯಾಂ ತೃತೀಯಾಧ್ಯಾಯೇ । ತಥಾ ಹಿ । ಚಾತುರ್ವರ್ಣ್ಯಂ ಮಯಾ ಸೃಷ್ಟಮಿತಿ ಗೀತಾ ಶ್ಲೋಕಸ್ಯ ಭಾಷ್ಯಂ। ಸಾತ್ವಿಕ ರಾಜಸಃ ಕ್ಷತ್ರಿಯಃ । ರಾಜಸೋ ವೈಶ್ಯಃ । ತಾಮಸಃ ಶೂದ್ರ ಇತಿ ಗುಣ ವಿಭಾಗ ಇತಿ । ತಟ್ಟೀಕಾವಾಕ್ಯಂತು ರಾಜಸಸ್ಥ ಸಾತ್ವಿಕೇಷ್ವೇವಾಯಂ ವಿಭಾಗ ಇತಿ ಜ್ಞಾತವ್ಯಮಿತಿ । ಗುಣಾನಾಂ ಸೃಷ್ಟ್ಯಾದಿ ಹೇತುತ್ವೇ ಪ್ರಮಾಣಂ ತು । ಸತ್ವಂ ರಜಸ್ತಮ ಇತಿ ನಿರ್ಗುಣಸ್ಯ ಗುಣಾಸ್ತ್ರಯಃ । ಸ್ಥಿತಿ ಸರ್ಗನಿರೋಧೇಷು ಗೃಹೀತಾ ಮಾಯಯಾ ವಿಭೋಃ । ಇತ್ಯಾದಿ ದ್ವಿತೀಯಸ್ಕಂಧ ಭಾಗವತಂ ।

ರಜೋಗುಣದಿಂದ ಸೃಷ್ಟಿಯು ಜಗತ್ತಿಗೆ ಎಲ್ಲೇ ಆಗಲಿ, ಸಾತ್ವಿಕ ರಾಜಸಾದಿ ವಿಭಾಗವೋ ಅಲ್ಲೆಲ್ಲಾ ರಜೋಗುಣದಲ್ಲಿಯ ಸತ್ವಾದಿಗಳನ್ನು ಅಪೇಕ್ಷಿಸಿಯೋ ಎಂದರ್ಥವು. ಅದನ್ನು ಪ್ರಮೇಯ ದೀಪಿಕಾ ತೃತೀಯಾಧ್ಯಾಯದಲ್ಲಿ ಹೇಳಿದೆ. ಹೀಗೆಂದು 'ಚಾತುರ್ವರ್ಣ್ಯಂ ಮಯಾ ಸೃಷ್ಟಂ' ಎಂಬ ಗೀತಾ ಶ್ಲೋಕದ ಭಾಷ್ಯ ಸಂದರ್ಭದಲ್ಲಿ ಸಾತ್ವಿಕ ರಾಜಸರು ಕ್ಷತ್ರಿಯರು, ರಾಜಸರು ವೈಶ್ಯರು, ತಾಮಸರು ಶೂದ್ರರು ಹೀಗೆ ಗುಣ ವಿಭಾಗವು ಅದರ ಟೀಕೆಯಲ್ಲಿ ರಾಜಸದಲ್ಲಿದ್ದ ಸಾತ್ವಿಕರಲ್ಲಿಯೋ

ಈ ವಿಭಾಗವನ್ನು ತಿಳಿಯಬೇಕು ಹೀಗೆ ಹೇಳಿರುತ್ತದೆ. ಗುಣಾದಿಗಳಿಗೆ ಸೃಷ್ಟ್ಯಾದಿ ಕಾರಣತೆಯಲ್ಲಿ ಪ್ರಮಾಣವಾದರೋ ಸತ್ತ್ವ ರಜ ತಮಗಳೆಂದು ಮೂರು ಗುಣಗಳು ಪರಮಾತ್ಮನ ಇಚ್ಛೆಯಿಂದ ಸ್ಥಿತಿಸೃಷ್ಟಿಲಯಗಳಲ್ಲಿ ಪ್ರಯೋಜನವಾಗಿ ತೆಗೆದುಕೊಂಡ ವುಗಳಾಗಿವೆ ಎಂದು ಭಾಗವತ ದ್ವಿತೀಯ ಸ್ಕಂಧದಲ್ಲಿ ಹೇಳಿರುತ್ತದೆ.

ಏವಂ ಪ್ರವರ್ತತೇ ಸರ್ಗಃ ಸ್ಥಿತಿಃ ಸಂಹಾರ ಏವ ಹಿ । ಗುಣವ್ಯತಿಕರಾ ದ್ರಾಜನ್ ಮಾಯಯಾ ಪರಮಾತ್ಮನ ಇತಿ ಚತುರ್ಥ ಸ್ಕಂಧ ಭಾಗವತಂ । ತಥಾ ಗೀತಾ ತಾತ್ಪರ್ಯವಪಿ । ತಸ್ಯಾಸ್ತು ತ್ರೀಣಿ ರೂಪಾಣಿ ಸತ್ತ್ವಂ ನಾಮ ರಜಸ್ತಮಃ । ಸೃಷ್ಟಿಕಾಲೇ ವಿಭಜ್ಯಂತೇಸತ್ವಂ ಶ್ರೀಃ ಸದ್ಗುಣಪ್ರಭಾ ರಜೋ ರಂಜನ ಕರ್ತೃತ್ವಾತ್‌ಭೂಃ ಸಾಸೃಷ್ಟಿಕರೀಯತಃ । ಜೀವಾನಾಂಗ್ಲ ಪನಾದ್ದುರ್ಗಾತಮ ಇತ್ಯೇವ ಕೀರ್ತಿತೇತಿ । ದಶಮ ತಾತ್ಪರ್ಯೇಽಪಿ । ಜಗತಾಂ ವರ್ಧಯನ್ ಸತ್ತ್ವಂಯದಾರಕ್ಷತಿ ಕೇಶವಃ । ಹಯಗ್ರೀವಾದಿ ರೂಪೇಣ ಶುಕ್ಲವರ್ಣಸ್ತದಾವಿಭುಃ । ವರ್ಧಯಂಸ್ತು ರಜೋ ಯೇನ ಜಗದುತ್ಪಾದಯೇತ್ ಹರಿಃ । ತದ್ರಕ್ತಂ ಜಾಮದಗ್ನ್ಯಾದಿ ರೂಪಂ ಯೇನ ವಿನಾಶಯೇತ್ । ವರ್ಧಯಂಸ್ತು ತಮೋಲೋಕಂ ತತ್ಕೃಷ್ಣಂ ಯಾದವಾದಿಕಮಿತಿ ।

ಚತುರ್ಥಸ್ಕಂಧ ಭಾಗವತದಲ್ಲಿಯೂ 'ಹೇ ಪರೀಕ್ಷಿತನೇ ! ಪರಮಾತ್ಮನ ಇಚ್ಛೆಯಿಂದ, ಗುಣಗಳ ಮೇಲಿನ ವ್ಯತ್ಯಾಸದಿಂದ ಹೀಗೆ ಹುಟ್ಟು, ಬಾಳು, ನಾಶ ಗಳು ಎಂದಿದೆ. ಹಾಗೆಯೇ ಗೀತಾತಾತ್ಪರ್ಯದಲ್ಲಿಯೂ ಲಕ್ಷ್ಮೀದೇವಿಯ ರೂಪ ಗಳೂ ವಿಭಕ್ತಗಳಾಗುತ್ತದೆ. ಸತ್ತ್ವವು ರಜಸ್ಸು ತಮಸ್ಸೆಂದು ಸೃಷ್ಟಿಕಾಲದಲ್ಲಿ ಅಭಿವ್ಯಕ್ತವಾಗುತ್ತದೆ. ಸಕಲಗುಣಗಳಿಂದ ಪ್ರಕಾಶಮಾನವಾದ ಸತ್ವಗುಣಾಭಿಮಾನಿ ಯಾದ ಶ್ರೀಃ ಎಂಬ ರೂಪವು, ರಜೋಗುಣ ರಂಜಕವಾದುದರಿಂದ ತದಭಿಮಾನಿನಿ ಯಾಗಿ ಭೂಃ ವಾಚಕಳಾಗಿ ಸೃಜಿಸುವವಳಾಗುತ್ತಾಳೆ. ಜೀವರಿಗೆ ಗ್ಲಾನಿ(ಸೋಲು) ಕೊಡುವ ತಮೋಭಿಮಾನಿನಿಯಾಗಿ ದುರ್ಗಾ ಎನಿಸಿಕೊಳ್ಳುತ್ತಾಳೆ. ಹೀಗೆ ಪರಮಾತ್ಮನೂ ಎಂದು ದಶಮತಾತ್ಪರ್ಯದಲ್ಲಿ ಕೇಶವ ರೂಪನಾಗಿ ಜಗತ್ತನ್ನು ರಕ್ಷಿಸಬೇಕೆಂದು ಸತ್ತ್ವ ಗುಣವನ್ನು ವರ್ಧಿಸುತ್ತಾನೆ. ಆಗ ಹಯಗ್ರೀವಾದಿ ರೂಪ ಗಳಿಂದ ಶುಕ್ಲವರ್ಣನಾಗುತ್ತಾನೆ. ಜಗದಭಿವೃದ್ಧಿ ಬಯಸುವವನಾಗಿ ಶ್ರೀಹರಿ ಆದಿ ರೂಪನಾಗಿ ರಜೋಗುಣನ್ನು ಉಕ್ಕಿಸುತ್ತಾನೆ. ಆಗ ರಕ್ತ(ಕೆಂಪು)ವರ್ಣನೆನಿಸುತ್ತಾನೆ. ಜಾಮದಗ್ನ್ಯಾದಿ(ಪರಶುರಾಮ) ರೂಪಗಳಿಂದ ಸಂಹಾರ (ಜಗನ್ನಾಶ) ಮಾಡುವವ ನಾಗುತ್ತಾನೆ. ತಮೋಗುಣವನ್ನು ಉಕ್ಕಿಸುವವನಾಗಿ ಕೃಷ್ಣ(ಕಪ್ಪು, ನೀಲಿ) ವರ್ಣದವನೆನಿಸಿ ಯಾದವಾದಿ ವಂಶದಲ್ಲಿ ಕಾಣುತ್ತಾನೆ ಹೀಗೆ ಹೇಳಿರುತ್ತದೆ.

**ತ್ರಯಾಣಾಮಪಿಗುಣಾನಾಂ ಅಭಿಮಾನಿನೀಃ ಅಹ ।**

ಪ.ಸಂ.– ಸತ್ತ್ವಾಭಿಮಾನಿನೀ ಶ್ರೀಃ । ರಜೋಽಭಿಮಾನಿನೀ ಭೂಃ । ತಮೋಭಿಮಾನಿನೀ ದುರ್ಗಾ ರಮೈವ ।

**ತದುಕ್ತಂ ತೃತೀಯಸ್ಕಂಧ ತಾತ್ಪರ್ಯೇ । ಶ್ರೀರ್ಮೂಲಸತ್ತ್ವಂ ವಿಜ್ಞೇಯಾ ಭೂರ್ಮೂಲಂ ರಜ ಉಚ್ಯತೇ । ಮೂಲಂ ತಮಸ್ತಥಾ ದುರ್ಗಾ ಮಹಾಲಕ್ಷ್ಮೀ ಸ್ತ್ರಿಮೂರ್ತಿಕೇತಿ । ನ ಕೇವಲಂ ಲಕ್ಷ್ಮೀಸ್ತದಭಿ ಮಾನಿನೀ ಕಿಂತು ಬ್ರಹ್ಮಾದಯೋಽಪೀತಿ ಅಹ ।**

ಪ.ಸಂ.—ಬ್ರಹ್ಮಾದಯೋಽಪಿ ಗುಣತ್ರಯಾಭಿಮಾನಿನಃ ।

**ತದುಕ್ತಂ ಗೀತಾತಾತ್ಪರ್ಯೇ । ಸರ್ವಾಭಿಮಾನಿನೋ ದೇವಾಃ ಸರ್ವೇಽಪಿ ಹ್ಯುತ್ತರೋತ್ತರಂ । ಆಧಿಕ್ಯಂ ವಕ್ತುಮೇವೈಷಾಂ ಪೃಥಕ್ ಸ್ಥಾನಮುದೀರ್ಯತೇ । ಆಧಿಕ್ಯ ಕ್ರಮ ಏವಾತ್ರ ಶಾಸ್ತ್ರ ತಾತ್ಪರ್ಯ ವಿಷ್ಯತೇ । ಸ್ಥಾನೇಷುತ್ವವರೇಷಾಂ ಚ ಪರೇ ಸಂತಿನಚೇತರೇ । ತಥಾಪಿ ಪಿತುರರ್ಥೋಯಃ ಪುತ್ರಸ್ಯಾಪ್ಯುಪಚರ್ಯತೇ । ಅವ್ಯಕ್ತಾದಿ ಪದಾರ್ಥಾ ನಾಂ ಸರ್ವೇ ತದಭಿಮಾನಿನ ಇತಿ । ಇತಿ ಗುಣತ್ರಯ ಪ್ರಕರಣಮ್ ।**

ಮೂರೂ ಗುಣಗಳ ಅಭಿಮಾನಿಗಳನ್ನು ಹೇಳುತ್ತಾರೆ. ಸತ್ತ್ವಗುಣಕ್ಕೆ ಲಕ್ಷ್ಮೀದೇವಿಯು ಅಭಿಮಾನಿನೀ, ರಜೋಗುಣಾಭಿಮಾನಿನೀ ಭೂದೇವಿ. ತಮೋ ಗುಣಾಭಿಮಾನಿನೀ, ದುರ್ಗಾ ಮೂರೂ ರೂಪಗಳೂ ರಮಾದೇವಿಯದೇ ಆಗಿರುತ್ತದೆ. ತೃತೀಯಸ್ಕಂಧ ತಾತ್ಪರ್ಯದಲ್ಲಿ ಶ್ರೀದೇವಿಯು ಮೂಲ ಸತ್ವಾಭಿಮಾನಿನೀ ಎಂದು ತಿಳಿಯಬೇಕು. ಭೂದೇವಿ ಮೂಲ ರಜೋಭಿಮಾನಿನೀ ಎಂದು ಹೇಳುತ್ತದೆ. ಹಾಗೆಯೇ ಮೂಲ ತಮೋಗುಣಕ್ಕೆ ದುರ್ಗಾದೇವಿಯು ಹೀಗೆ ಲಕ್ಷ್ಮೀದೇವಿಯು ಮೂರು ಮೂರ್ತಿ ಆದವಳು ಎಂದು ಹೇಳಿದೆ. ಕೇವಲ ಲಕ್ಷ್ಮೀದೇವಿಯೇ ಅಭಿಮಾನಿನಿ ಅಲ್ಲ, ಬ್ರಹ್ಮಾದಿದೇವತೆಗಳೂ ಉತ್ತರೋತ್ತರ(ಕ್ರಮ)ವಾಗಿ ಅಭಿಮಾನಿ ಗಳೆನಿಸುತ್ತಾರೆ. ಅವರಿಗೆ ಹೆಚ್ಚಿನತನವನ್ನು ಹೇಳಲು ಪ್ರತ್ಯೇಕ ಸ್ಥಾನಗಳು ಹೇಳಿ ರುತ್ತದೆ. ಅವರ ಆಧಿಕ್ಯ ತಾರತಮ್ಯವೇ ಶಾಸ್ತ್ರದ ಮುಖ್ಯ ದೃಷ್ಟಿ ಆಗಿರುತ್ತದೆ. ಸ್ಥಾನಗಳಲ್ಲಿ ಅವರಿಗಿಂತಲೂ ಕಡಿಮೆಯಾದವರೂ ಇರುತ್ತಾರೆ. ಅಭಿಮಾನಿಗಳ ಹೊರತು ಬೇರೆಯವರು ಇರುವುದಿಲ್ಲ. ಅವ್ಯಕ್ತತತ್ವಾದಿ ಸಕಲ ಪದಾರ್ಥಗಳಿಗೂ ಪ್ರತ್ಯೇಕ ಅಭಿಮಾನಿಗಳಿರುತ್ತಾರೆ.

ಹೀಗೆ "ಗುಣತ್ರಯ ಪ್ರಕರಣ"ವು ಕನ್ನಡಾನುವಾದದೊಂದಿಗೆ ಸಮಾಪ್ತ ಗೊಂಡಿತು.

# ೧೯. ಮಹತ್ತತ್ತ್ವ ಪ್ರಕರಣ

**ಕ್ರಮ ಪ್ರಾಪ್ತಂ ಮಹತ್ತತ್ತ್ವಂ ನಿರೂಪಯತಿ ।**

ಪ.ಸಂ.—ಸಾಕ್ಷಾತ್ ಗುಣತ್ರಯೋಪಾದಾನಕಂ ಮಹತ್ತತ್ತ್ವಂ ।

**ಪರಂಪರಯಾ ಗುಣತ್ರಯೋಪಾದಾನಕೇಽಹಂಕಾರಾದೌ ಅತಿವ್ಯಾಪ್ತಿ ವಾರಣಾಯ ಸಾಕ್ಷಾದಿತಿ । ಸಾಕ್ಷಾದ್ಗುಣತ್ರಯಾಂಶೋಪಾದಾನಕಮಿತ್ಯರ್ಥಃ । ನ ತು ಸರ್ವಮಪಿ ಗುಣತ್ರಯಂ ಮಹದಾತ್ಮನಾಪರಿಣಮತ ಇತ್ಯರ್ಥಃ । ಮಹತ್ತತ್ತ್ವಾಪೇಕ್ಷಯಾ ದಶೋತ್ತರತ್ವಾತ್ । ಬ್ರಹ್ಮಾಂಡಸ್ಯಾವರಣಾಂತರತ್ವಾಚ್ಚ । ಮಹತ್ತತ್ತ್ವೇಽಪ್ಯಸ್ತಿ ಕಶ್ಚಿದ್ವಿಶೇಷಃ ।**

ದ್ರವ್ಯನಿರೂಪಣದಲ್ಲಿ ಕ್ರಮಪ್ರಾಪ್ತವಾದ ಏಳನೆಯ ಮಹತ್ತತ್ತ್ವವನ್ನು ನಿರೂಪಿಸುತ್ತಾರೆ. ಸಾಕ್ಷಾತ್ತಾಗಿ ಸತ್ವಾದಿ ಗುಣತ್ರಯಗಳಿಗೆ ಕಾರಣವಾದುದೇ ಮಹತ್ತತ್ವವು. ಅಹಂಕಾರ ತತ್ವಕ್ಕೆ ಪರಂಪರೆಯಾಗಿ ಉಪಾದಾನ ಕಾರಣವಾಗುತ್ತದೆ. ಅಲ್ಲಿ ಅತಿವ್ಯಾಪ್ತಿ ಪರಿಹಾರಕ್ಕಾಗಿ ಸಾಕ್ಷಾತ್ ಎಂದಿರುತ್ತಾರೆ ಅರ್ಥಾತ್ ಮಹತ್ತತ್ವದ ಲಕ್ಷಣವೆಂದರೆ, ಸಾಕ್ಷಾತ್ತಾಗಿ ಗುಣತ್ರಯಗಳಿಗೆ ಉಪಾದಾನ(ಪರಿಣಾಮ) ಕಾರಣತೆಯೇ ಮಹತ್ತತ್ವದ ಲಕ್ಷಣವು ಆದರೆ, ಸರ್ವಗುಣತ್ರಯವೂ ಮಹತ್ತತ್ವವಾಗುವುದಿಲ್ಲ. ಮಹತ್ತತ್ವದಕ್ಕಿಂತಲೂ ಹತ್ತರಷ್ಟು ಬ್ರಹ್ಮಾಂಡವು ಬೇರೆ ಆವರಣವೂ ಆಗಿರುತ್ತದೆ. ಮಹತ್ತತ್ವದಲ್ಲಿ ಒಂದು ವಿಶೇಷವಿದೆ.

**ಪ್ರಳಯಕಾಲೇ ಮಹತ್ತತ್ತ್ವಸ್ಯ ಗುಣತ್ರಯೇ ಲಯಃ । ತದಾ ಮಹತ್ತತ್ತ್ವಂ ದ್ವಾದಶಧಾ ವಿಭಜ್ಯತೇ । ದಶಭಾಗಾಃ ಶುದ್ಧಸತ್ತ್ವರಾಶೌ ಪ್ರವಿಶಂತಿ । ಏಕೋ ಭಾಗೋ ರಜೋರಾಶೌ ಪ್ರವಿಶತಿ । ಏಕೋಭಾಗಃ ತಮೋರಾಶೌ ಪ್ರವಿಶತಿ । ಪುನಃ ಸೃಷ್ಟಿಕಾಲೇ ಪ್ರಾಪ್ತೇ ಪೂರ್ವಂ ಶುದ್ಧಸತ್ತ್ವೇ ಪ್ರವಿಷ್ಟ ದಶಭಾಗಾ ರಜೋಗುಣ ಪ್ರವಿಷ್ಟ ಏಕೋಭಾಗಶ್ಚ ತಮೋಗುಣೇನ ಸಂಗತಾ ಭವಂತಿ । ತತೋ ಮಹತ್ತತ್ತ್ವಮುತ್ಪದ್ಯತೇ ।**

ಪ್ರಳಯ ಕಾಲದಲ್ಲಿ ಮಹತ್ತತ್ವಕ್ಕೆ ಗುಣತ್ರಯದಲ್ಲಿ ಲಯವು. ಆಗ ಮಹತ್ತತ್ವವು ಹನ್ನೆರಡು ರೀತಿಯಾಗಿ ವಿಭಕ್ತಗಳಾಗುತ್ತದೆ. ಅದರಲ್ಲಿ ಹತ್ತು ಭಾಗ ಶುದ್ಧ ಸತ್ವಗುಣರಾಶಿಯಲ್ಲಿ ಸೇರುತ್ತದೆ. ಒಂದು ಭಾಗ ರಜೋರಾಶಿಯಲ್ಲಿ ಸೇರುತ್ತದೆ. ಇನ್ನೊಂದು ಭಾಗ ತಮೋರಾಶಿಯಲ್ಲಿ ಸೇರುತ್ತದೆ. ಪುನಃ ಸೃಷ್ಟಿ

ಕಾಲದಲ್ಲಿ ಮೊದಲು ಸತ್ತ್ವರಾಶಿಯಲ್ಲಿ ಸೇರಿದ್ದ ಹತ್ತುಭಾಗ, ರಜಸ್ಸಿನಲ್ಲಿ ಸೇರಿದ್ದ ಒಂದು ಭಾಗ ತಮಸ್ಸಲ್ಲಿ ಸೇರಿದ ಒಂದು ಭಾಗ ಹೀಗೆ ಹನ್ನೆರಡು ಭಾಗಗಳು ಒಂದೆಡೆ ಸೇರಿ ಮಹತ್ತತ್ವಕ್ಕೆ ಕಾರಣವಾಗುತ್ತದೆ ಹೇಗೆಂದರೆ,

**ತತ್ರ ರಜೋಭಾಗಾಸ್ತ್ರಯಃ । ಏಕೋಭಾಗಸ್ತಮಃ । ಆಹತ್ಯ ಚತುರ್ಭಾಗಯುಕ್ತಂ ಮಹತ್ತತ್ವಂ । ತದುಕ್ತಂ ತೃತೀಯ ತಾತ್ಪರ್ಯೇ । ಮೂಲಜಂ ಯದ್ರಜಸ್ತುತತ್ । ವಿಲಯೇ ದಶಾಂಶತಃ ಸತ್ತ್ವ ಏಕಾಂಶೇನ ತಮಸ್ಯಪಿ । ಮಿಶ್ರಿತಂ ಭವತಿ ಹ್ಯೇತಾಂ ಸಾಮ್ಯಾವಸ್ಥಾಂ ವಿದುರ್ಬುಧಾಃ ।**

ಆ ಗುಣರಾಶಿಯಲ್ಲಿ ಮೂರು ರಜೋಭಾಗ ಒಂದು ತಮೋಭಾಗ ಇವುಗಳನ್ನು ಕಲಿಸಿ ನಾಲ್ಕು ಭಾಗ ಉಳ್ಳ ಮಹತ್ತತ್ವವಾಗುತ್ತದೆ. ಈ ವಿಷಯವನ್ನು ತೃತೀಯ ತಾತ್ಪರ್ಯದಲ್ಲಿ ಹೇಳಿರುತ್ತಾರೆ. ಮೂಲವಾದ ಯಾವ ರಜಸ್ಸು ಅದು ಪ್ರಳಯ ಕಾಲದ ಹತ್ತುಭಾಗದ ಸತ್ತ್ವ ಒಂದಂಶ ತಮಸ್ಸು ಕಲಿಯುತ್ತದೆ. ಇದನ್ನು ಸಾಮ್ಯಾವಸ್ಥಾ ಅನ್ನುತ್ತಾರೆ.

**ಯದಾತು ತದ್ರಜಸ್ಸರ್ವಂ ತಮಸಾ ಸಹ ಸಂಗತಂ । ತದಾತ್ಮಾ- ಹುರ್ಮಹತ್ತತ್ವಂ ತಚ್ಚತುರ್ಭಾಗಸಂಭವಂ । ತತ್ರತ್ರಿಭಾಗೋ ರಜಸ ಏಕೋಂಶಸ್ತಮಸಸ್ತಥಾ । ಯದ್ರಜೋ ಮೂಲರಜಸಿ ಮೂಲೇ ತಮಸಿಯದ್ರಜಃ । ತಸ್ಮಚ್ಚ ಮೂಲೇ ತಮಸಿ ಮಹತ್ತತ್ವಂ ತದಾತ್ಮಕ ಮಿತಿ ।**

ಯಾವಾಗ ಎಲ್ಲಾ ರಜಸ್ಸು ತಮಸ್ಸಿನಿಂದ ಕೂಡುತ್ತದೆ, ಆಗ ಅದನ್ನು ಮಹತ್ತತ್ವವೆನ್ನುತ್ತಾರೆ. ಅದರಲ್ಲಿ ಮೂರುಭಾಗ ರಜಸ್ಸು (ಅದರ ನಾಲ್ಕನೇ ಒಂದು ಭಾಗವು) ಒಂದು ಭಾಗ ತಮಸ್ಸು ಮೂಲ ರಜಸ್ಸಿನಲ್ಲಿ ರಜಸ್ಸು ಮೂಲತಮಸ್ಸಿನಲ್ಲಿಯೂ ರಜಸ್ಸು ಮೂಲ ತಮಸ್ಸಿನಲ್ಲಿ ಮೂಲ ತಮಸ್ಸು ಹೀಗೆ ಕಲೆತರೆ ಅದು ಮಹತ್ತತ್ವವಾಗುತ್ತದೆ

**ನನ್ವೇವಂ ಮಹತ್ತತ್ವಸ್ಯ ಕೇವಲರಜಃ ತಮೋಗುಣಾಂಶತ್ವಾಪತ್ತ್ಯಾ ಸಾತ್ವಿಕತ್ವಂ ನ ಸ್ಯಾತ್ । ತಸ್ಯ ಚತುರ್ಮುಖದೇಹರೂಪತ್ವೇನ ಶುದ್ಧ ಸಾತ್ವಿಕತ್ವಸ್ಯೈವ ವಕ್ತವ್ಯತ್ವಾದಿತಿ ಚೇನ್ನ । ಮಹತ್ತತ್ವಗತ ರಜೋಂಶೇಷ್ವೇವ ಬಹೂನಾಂ ಸತ್ತ್ವಾಂಶಾನಾಂ ಸದ್ಭಾವಾತ್ । ತಥಾ ಹಿ । ಮಹತ್ತತ್ವೇ ಯೇ ರಜೋಭಾಗಾಃ ತತ್ರದಶಭಾಗಾಃ ಸತ್ತ್ವಗುಣಾಃ । ಏಕೋಂಶೋ ರಜಃ । ತದ್ದಶಾಂಶಂ ತಮಃ । ತದುಕ್ತಂ ತೃತೀಯ ತಾತ್ಪರ್ಯೇ । ದಶಾಂಶಾಸ್ತತ್ರ ಸತ್ತ್ವಾಂಸ್ಯುರೇಕೋಂಶೋ ರಜ ಏವ ಚ । ತದ್ದಶಾಂಶಂ ತಮೋ ಜ್ಞೇಯಂ ಇತಿ ।**

**ಕಿಂಚಾಹಂಕಾರಾದ್ಯಪೇಕ್ಷಯಾ ಶುದ್ಧ ಸಾತ್ತ್ವಿಕತ್ವಂ ಜ್ಞೇಯಂ । ತದುಕ್ತಂ ತೃತೀಯತಾತ್ಪರ್ಯೇ । ತದೇವ ಕೇವಲಂ ಸತ್ತ್ವಮಿತರಾಪೇಕ್ಷಯಾ ಭವೇದಿತಿ ।**

ಮಹತ್ತತ್ತ್ವಕ್ಕೆ ಕೇವಲ ರಜೋತಮಾಂಶಗಳೇ ಬಹು ಆಯಿತೆಂದಮೇಲೆ ಸಾತ್ತ್ವಿಕತೆ ಹೇಗೆ ಮಹತ್ತತ್ತ್ವವು, ಬ್ರಹ್ಮದೇವರ ದೇಹವಾದ್ದರಿಂದ ಶುದ್ಧ ಸಾತ್ತ್ವಿಕತೆ ಹೇಳಬೇಕಲ್ಲವೇ ? ಅಂದರೆ, ಹಾಗೆನ್ನಬಾರದು. ಮಹತ್ತತ್ತ್ವದಲ್ಲಿರುವ ರಜೋಂಶದಲ್ಲಿ ಬಹು ಸತ್ತ್ವಾಂಶಗಳಿರುವುದರಿಂದ. ಹೇಗೆಂದರೆ, ಮಹತ್ತತ್ತ್ವದಲ್ಲಿ ಯಾವ ರಜೋ ಭಾಗಗಳೋ ಅಲ್ಲಿ ಹತ್ತು ಭಾಗಗಳು ಸತ್ತ್ವ ಗುಣಗಳು. ಒಂದು ಅಂಶ ಮಾತ್ರ ರಜಸ್ಸು. ಅದರಲ್ಲಿ ಹತ್ತನೇ ಒಂದು ಭಾಗ ತಮಸ್ಸು. ಇದನ್ನು ತೃತೀಯ ತಾತ್ಪರ್ಯದಲ್ಲಿ ಹೇಳಿದೆ. ಅದೇ ಮಿಕ್ಕವುಗಳಿಗಿಂತ ಕೇವಲ ಸತ್ತ್ವವೆನಿಸಿಕೊಳ್ಳುತ್ತದೆ. ಹೀಗೆ ಮಹತ್ತತ್ತ್ವದಲ್ಲಿ ಹತ್ತು ಅಂಶ(ಭಾಗ)ಸತ್ತ್ವ. ಒಂದು ರಜಸ್ಸು ಅದರಲ್ಲಿ ಹತ್ತನೇ ಒಂದು ಭಾಗ ತಮಸ್ಸೆಂದು ತಿಳಿಯುವುದು. ಮತ್ತು ಮಹತ್ತತ್ತ್ವ ಅಹಂಕಾರತತ್ತ್ವದಕ್ಕಿಂತಲೂ ಶುದ್ಧ ಸತ್ತ್ವ ಎಂದು ತಿಳಿಯುವುದು. ಇದನ್ನು ತೃತೀಯ ತಾತ್ಪರ್ಯದಲ್ಲಿ ಹೇಳಿದೆ. ಇದೇ ಅಹಂಕಾರಾದಿಗಳಿಗಿಂತಲೂ ಕೇವಲ ಸತ್ತ್ವವೆನಿಸಿಕೊಂಡಿದೆ.

**ಮಹತ್ತತ್ತ್ವಪರಿಮಾಣಮಾಹ ।**

ಪ.ಸಂ —ತಮೋಗುಣಾಪೇಕ್ಷಯಾದಶಗುಣ ಪರಿಮಾಣನ್ಯೂನಂ ।

**ಮಹತ್ತತ್ತ್ವಗುಣತ್ರಯ್ಯೈಃ। ಕ್ರಮಾದ್ದಶೋತ್ತರೈರಿತಿ ನಿರ್ಣಯೋಕ್ತೇಃ ತತ್ರಗುಣತ್ರಯಪದಸ್ಯ ಸನ್ನ್ಯಾಯರತ್ನಾವಲೀರೀತ್ಯಾ ತಮೋಗುಣ ಪರತ್ವಸ್ಯ ವ್ಯವಸ್ಥಾಪಿತತ್ವಾದಿತಿ ಭಾವಃ । ತದಭಿಮಾನಿನ ಆಹ ।**

ಪ.ಸಂ.—ಬ್ರಹ್ಮವಾಯೂ ತತ್ಸ್ತ್ರಿಯೌ ಚ ತದಭಿಮಾನಿನಃ ।

**ತದುಕ್ತಂ ತೃತೀಯ ತಾತ್ಪರ್ಯೇ । ತದಾಹುರ್ಬ್ರಹ್ಮಣೋ ರೂಪಂ ಗುಣವೈಷಮ್ಯ ನಾಮಕಂ ಇತಿ ।**

ಮಹತ್ತತ್ತ್ವದ ಪರಿಮಾಣ(ಮಿತಿ)ಯನ್ನು ಹೇಳುತ್ತಾರೆ. ಮಹತ್ತತ್ತ್ವವು ತಮೋ ಗುಣದಕ್ಕಿಂತಲೂ ಹತ್ತರಷ್ಟು ಪರಿಮಾಣ ನ್ಯೂನ(ಕಡಿಮೆ)ಆದುದ್ದು. ನಿರ್ಣಯದಲ್ಲಿ ಮಹತ್ತತ್ತ್ವವೂ ಗುಣತ್ರಯಗಳಿಂದ ಹತ್ತು ಪಟ್ಟು ಕಡಿಮೆಯಾದದ್ದು ಎಂದು ಹೇಳಿದೆ. ಸನ್ನ್ಯಾಯರತ್ನಾವಳಿಯಂತೆ ಗುಣತ್ರಯಕ್ಕೆ ತಮೋಗುಣ ಪಾರಾರ್ಥ ವ್ಯವಸ್ಥಾಪಿಸಿರುವುದರಿಂದ ಯಾವ ಬಾಧವೂ ಬರುವುದಿಲ್ಲ. ತೃತೀಯ ತಾತ್ಪರ್ಯದಲ್ಲಿ ಗುಣ ವೈಷಮ್ಯ ನಾಮಕವಾದುದೇ ಬ್ರಹ್ಮನ ರೂಪವು ಎಂದು ಹೇಳಿದೆ.

**ಮಹತೋ ಬ್ರಹ್ಮವಾಯೂ ಚ ತದ್ಭಾರ್ಯೇಚಾಭಿಮಾನಿನ ಇತಿ । ಮಣಿಮಂಜರ್ಯಾಮಪಿ । ಮಹತ್ತತ್ತ್ವಂ ತತೋ ವಿಷ್ಣುಃ ಸೃಷ್ಟವಾನ್**

**ಬ್ರಹ್ಮಣಸ್ತನುಮಿತಿ । ಕಾಠಕಭಾಷ್ಯೇಽಪಿ । ತಸ್ಯಾ ಬ್ರಹ್ಮಾ ಮಹಾನಾತ್ಮಾ ತತೋ ವ್ಯಕ್ತಾಭಿಧಾರವೋತಿ । ತಂತ್ರಸಾರೇಽಪಿ । ಸರ್ವಾಣ್ಯೇತಾನಿತತ್ವಾನಿ ಬ್ರಹ್ಮಾತು ಪುರುಷಃ ಸ್ಮೃತಃ । ಮಹಾಂಶ್ಚಾವ್ಯಕ್ತನಾಮ್ನೀ ಚ ಬ್ರಹ್ಮಾಣೀ ಸಂಪ್ರಕೀರ್ತಿತಾ । ಏವಂ ವಾಯುರಪಿ ಜ್ಞೇಯೋ ಭಾರತೀ ಚೈವ ತತ್ರಯುಮಿತಿ । ಭಾಷ್ಯೇಽಪಿ । ವಿಜ್ಞಾನತತ್ವಂ ಮಹತಃ ಸಮುತ್ಪನ್ನಂ ಚತುರ್ಮುಖಾದಿತಿ । ಮಹತ್ತತ್ವಸ್ಯ ಮಹತ್ತತ್ವಮಿತಿ ದ್ರವ್ಯ ವಿಶೇಷಸ್ಯ ಸಂಜ್ಞೇತಿ ವೈಶೇಷಿಕಾಧಿಕರಣ ಸುಧೋಕ್ತೇರ್ದ್ರವ್ಯತ್ವಂ ಸಿದ್ಧಂ । ಇತಿ ಮಹತ್ತತ್ವ ಪ್ರಕರಣಮ್ ।**

ಬ್ರಹ್ಮದೇವರು ವಾಯುದೇವರು, ಸರಸ್ವತಿ, ಭಾರತಿದೇವಿ ನಾಲ್ವರೂ ಮಹತ್ತತ್ವಕ್ಕೆ ಅಭಿಮಾನಿಗಳು ಎನಿಸುತ್ತಾರೆ. ಚತುರ್ಮುಖನ ದೇಹವಾದ ಮಹತ್ತತ್ವವನ್ನು ಪರಮಾತ್ಮ ಸೃಷ್ಟಿ ಮಾಡಿದನೆಂದು ಮಣಿಮಂಜರಿಯಲ್ಲೂ ಹೇಳಿರುತ್ತದೆ. ಕಾಠಕಭಾಷ್ಯದಲ್ಲಿಯೂ ಹೇಳಿರುತ್ತದೆ. ಮಹತ್ತತ್ವಾಭಿಮಾನಿಗಳಾದ್ದರಿಂದಲೇ ರಮಾದೇವಿಗೆ ಅವ್ಯಕ್ತಳೆಂದೂ, ಮಹಾನಾತ್ಮನೆಂದೂ ಹೆಸರುಗಳಾಗಿವೆಯೆಂದೂ, ತಂತ್ರಸಾರದಲ್ಲಿ ಎಲ್ಲ ತತ್ವಗಳೂ ದೇವತೆಗಳಿಂದ ಅಭಿಮಾನ್ಯವಾದವುಗಳೇ ಮಹತ್ತತ್ವಾಭಿಮಾನಿಯಾದ ಬ್ರಹ್ಮಗೆ ಪುರುಷನೆಂತಲೂ ಮಹಾನ್ ಎಂತಲೂ, ಅವ್ಯಕ್ತಾ ಬ್ರಹ್ಮಾಣಿಎಂತಲೂ ಪ್ರಸಿದ್ಧವಿರುತ್ತದೆ. ಹೀಗೆ ವಾಯುದೇವರಿಗೂ ತಿಳಿಯಬೇಕು. ಭಾರತಿಯೂ ಹಾಗೆ, ಬ್ರಹ್ಮನ ನಂತರ ವಾಯು ಸರಸ್ವತಿ ಭಾರತಿ ಮೂವರೂ ಅಭಿಮಾನಿಗಳೇ ಭಾಷ್ಯದಲ್ಲಿಯೂ ಚತುರ್ಮುಖನಿಂದ ಮಹತ್ತತ್ವದಿಂದ ವಿಜ್ಞಾನ ತತ್ವವು ಹುಟ್ಟಿತು. ಎಂದು ಹೇಳಿದೆ. ಮಹತ್ತತ್ವಕ್ಕೆ ಮಹತ್ತತ್ವವೆಂದು ದ್ರವ್ಯ ವಿಶೇಷವೆಂಬ ಸಂಕೇತ ವೈಶೇಷಕಾಧಿಕರಣ ಸುಧಾದಲ್ಲಿ ಹೇಳಿದೆ. ಆ ಪ್ರಮಾಣದಿಂದ ಮಹತ್ತತ್ವಕ್ಕೆ ದ್ರವ್ಯತ್ವ ಸಿದ್ಧಿಯು.

ಹೀಗೆ "ಮಹತ್ತತ್ವ ಪ್ರಕರಣ"ವು ಕನ್ನಡಾನುವಾದದೊಂದಿಗೆ ಸಮಾಪ್ತಗೊಂಡಿತು.

# ೨೦. ಅಹಂಕಾರತತ್ತ್ವ ಪ್ರಕರಣ

**ಅಹಂಕಾರತತ್ವಂ ನಿರೂಪಯತಿ ।**

**ಪ.ಸಂ.**—ಮಹತ್ತತ್ತ್ವೋಪಾದಾನಕಮಹಂಕಾರ ತತ್ತ್ವಮ್ ।

**ಅತ್ರಾಪಿ ಸಾಕ್ಷಾನ್ಮಹತ್ತತ್ತ್ವಾಂಶೈರಿತಿಶೇಷಃ । ಅಹಂಕಾರತ್ವೇಽಪಿ ವಿಶೇಷಃ । ಮಹತ್ತತ್ತ್ವಗತತಮೋ ಭಾಗಾದಹಂಕಾರತತ್ವಮುತ್ಪನ್ನಂ । ತತ್ರದಶ ಭಾಗಾಃ ಸತ್ತ್ವಗುಣಾಃ । ಏಕಾಂಶೋರಜಃ । ತದ್ದಶಾಂಶಂ ತಮ ಇತಿ । ತದುಕ್ತಂ ತೃತೀಯ ತಾತ್ಪರ್ಯೇ । ತದ್ದಶಾಂಶಂ ತಮೋ ಜ್ಞೇಯಮಹಂಕಾರಸ್ತದಾತ್ಮಕಃ । ಸರುದ್ರಸ್ತಾಮಸೋ ಜ್ಞೇಯೋ ವಿರಿಂಚಾಪೇಕ್ಷಯೈವ ತು। ಇತರಾಪೇಕ್ಷಯಾ ಸತ್ತ್ವಂ ಸತ್ವಾದ್ಯಾಸ್ತದ್ವದಸ್ಯ ಚೇತಿ । ತದ್ವಿಭಾಗಮಾಹ ।**

**ಪ.ಸಂ.** —ವೈಕಾರಿಕ ತೈಜಸ ತಾಮಸ ಭೇದೇನ ತ್ರಿವಿಧಮ್ ।

ಅಹಂಕಾರ ತತ್ವವನ್ನು ನಿರೂಪಿಸುತ್ತಾರೆ. ಮಹತ್ತತ್ವವೇ ಉಪಾದಾನ(ವಿಕಾರ) ವಾಗಿರುವುದೇ ಅಹಂಕಾರ ತತ್ವವು. ಅದರಲ್ಲೂ ಸಾಕ್ಷಾತ್ ಮಹತ್ತತ್ವಾಂಶಗಳಿಂದಲೇ ಎಂಬುದೊಂದು ವಿಶೇಷವು. ಈ ಅಹಂಕಾರತತ್ವದಲ್ಲೂ ವಿಶೇಷವಿದೆ. ಮಹತ್ತತ್ವ ದಲ್ಲಿಯ ತಮೋಗುಣದಿಂದಲೇ ಅಹಂಕಾರ ತತ್ವವು ಹುಟ್ಟಿತು. ಅಹಂಕಾರತತ್ವದಲ್ಲಿ ಹತ್ತುಭಾಗ ಸತ್ತ್ವಗುಣ ಒಂದಂಶರಜಸ್ಸು ಅದರ ಹತ್ತರಷ್ಟು ತಮಸ್ಸು(ತಮೋಗುಣ) ತೃತೀಯ ತಾತ್ಪರ್ಯದಲ್ಲಿ ಹೇಳಿದೆ. ಮಹತ್ತತ್ವದ ಹತ್ತನೇ ಒಂದು ಭಾಗ ಅಹಂಕಾರ ತತ್ವ, ಅಹಂಕಾರ ತತ್ವನೇ ರುದ್ರ ದೇವ, ಬ್ರಹ್ಮನಿಗಿಂತಲೂ ತಾಮಸನೆಂದು ತಿಳಿಯ ಬೇಕು.ವೈಕಾರಿಕಾದಿಗಳಿಗಿಂತಲೂ ಸತ್ವವಾದುದು. ಸತ್ವಾದಿ ಭಾಗಗಳನ್ನು ಇದರಂತೇ ತಿಳಿಯಬೇಕು ಅದರ ವಿಭಾಗವನ್ನು ಹೇಳುತ್ತಾರೆ. ವೈಕಾರಿಕ, ತೈಜಸ, ಹಾಗೂ ತಾಮಸವೆಂದು ಅಹಂಕಾರತತ್ವವು ಮೂರು ವಿಧ.

**ತದುಕ್ತಂ ತೃತೀಯಸ್ಕಂಧ ಭಾಗವತೇ । ಮಹತ್ತತ್ವಾದ್ವಿಕುರ್ವಾಣಾ ದಹಂ ತತ್ವಮಜಾಯತ । ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿಧೇತಿ । ಅಹಂಕಾರತತ್ವಸ್ಯ ಪರಿಮಾಣಮಾಹ ।**

ಪ.ಸಂ.—ಮಹತ್ತತ್ವಾದ್ದಶಾಂಶ ನ್ಯೂನಮ್ ।

**ಅಬಗ್ನೀರನಭೋಹಂಕೃನ್ಮಹತ್ತತ್ವಗುಣತ್ರಯೈಃ । ಕ್ರಮಾದಶೋತ್ತರೈರಿತಿ ನಿರ್ಣಯೋಕ್ತೇರಿತಿಭಾವಃ । ತದಭಿಮಾನಿನ ಆಹ ।**

ಪ.ಸಂ.—ಗರುಡಶೇಷರುದ್ರಾದಯಃ ತದಭಿಮಾನಿನಃ ।

ತೃತೀಯ ಸ್ಕಂಧ ಭಾಗವತದಲ್ಲಿ ಮಹತ್ವವನ್ನು ಮಥಿಸಲಾಗಿ ಅಹಂಕಾರಿಕ ತತ್ವ ಹುಟ್ಟಿತು. ಅದು ವೈಕಾರಿಕ ತೈಜಸ ತಾಮಸವೆಂದು ಮೂರು ಭಾಗವುಳ್ಳದ್ದೇ ಅಹಂಕಾರ ತತ್ವವು ಎಂದು ಹೇಳಿದೆ. ಅಹಂಕಾರ ತತ್ವದ ಪರಿಮಿತಿಯು ಮಹತ್ತತ್ವದ ದಸೆಯಿಂದ ಹತ್ತು ಅಂಶ ಕಡಿಮೆಯಾದುದು.

ಉದಕ, ಅಗ್ನಿ, ಆಕಾಶ, ಅಹಂಕಾರತತ್ವ, ಮಹತ್ತತ್ವ, ತ್ರಿಗುಣ ಇವು ಕ್ರಮವಾಗಿ ಹತ್ತು ಹತ್ತು ಅಂಶಗಳಿಂದ ಭಾಗಗಳಿಂದ ಹೆಚ್ಚು (ಅಧಿಕ) ಆದವು ಎಂಬ ತಾತ್ಪರ್ಯ ನಿರ್ಣಯದ ಉಕ್ತಿಯಂತೇ ಮಹತ್ತತ್ವದ ಹತ್ತಂಶ ನ್ಯೂನವಾದುದು ಅಹಂಕಾರ ತತ್ವ ಎಂದಿರುತ್ತಾರೆ ಅದರಭಿಮಾನಿಗಳೆಂದರೆ ಗರುಡ ಶೇಷ ರುದ್ರರು.

**ತದುಕ್ತಂ ನಿರ್ಣಯೇ । ತಸ್ಮಾನ್ಮಹಂಕಾರ ತನುಂ ಸ ರುದ್ರಂ ಸಸರ್ಜ ಬುದ್ಧಿಂ ಚ ತದರ್ಧದೇಹಮಿತಿ । ಮಹತ್ತತ್ವಾದಹಂಕಾರಂ ಸಸರ್ಜ ಶಿವ ವಿಗ್ರಹಮಿತಿ ಮಣಿಮಂಜರೀ । ತೃತೀಯ ತಾತ್ಪರ್ಯಮಪಿ । ಅಹಮಃ ಶೇಷವಿಂದ್ರೌ ಚ ರುದ್ರೇಂದ್ರೌ ಕಾಮತಾತ್ಸ್ತ್ರಿಯ ಇತಿ । ಇತಿ ಅಹಂಕಾರ ತತ್ವ ಪ್ರಕರಣಮ್ ।**

ನಿರ್ಣಯದಲ್ಲಿ ಅಹಂಕಾರ ತತ್ವವೇ ದೇಹವಾಗಿ ಉಳ್ಳ ರುದ್ರ ದೇವರನ್ನು ಹುಟ್ಟಿಸಿದನು, ಅದರರ್ಧ ದೇಹ ಉಳ್ಳವಳನ್ನಾಗಿ ಬುದ್ಧಿಯನ್ನು ಸೃಷ್ಟಿ ಮಾಡಿದನು ಎಂದು ಹೇಳಿದೆ. ಮಹತ್ತತ್ವದಿಂದ ಶಿವನ ದೇಹವೆನಿಸುವ ಅಹಂಕಾರ ತತ್ವವನ್ನು ಹುಟ್ಟಿಸಿದನೆಂದು ಮಣಿಮಂಜರಿಯಲ್ಲಿದೆ. ತೃತೀಯ ತಾತ್ಪರ್ಯದಲ್ಲಿ ಮಹತ್ತತ್ವ ಅಹಂಕಾರತತ್ವಗಳಿಗೆ, ಶೇಷ, ಗರುಡ, ರುದ್ರ, ಇಂದ್ರ, ಕಾಮ ಇವರ ಪತ್ನಿಯರು ಇವರೆಲ್ಲರೂ ಅಭಿಮಾನಿಗಳು ಹೀಗೆ ಹೇಳಿದೆ.

ಹೀಗೆ "ಅಹಂಕಾರ ತತ್ವಪ್ರಕರಣ"ವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

# ೨೯. ಬುದ್ಧಿತತ್ತ್ವ ಪ್ರಕರಣ

**ಇದಾನೀಂ ಬುದ್ಧಿತತ್ತ್ವಂ ನಿರೂಪಯಿತುಂ ತದ್ವಿಭಾಗಮಾಹ ।**

ಪ.ಸಂ.—ಬುದ್ಧಿಃ ದ್ವಿವಿಧಾ । ತತ್ತ್ವರೂಪಾಜ್ಞಾನರೂಪಾ ಚೇತಿ । ತತ್ರ ತತ್ತ್ವರೂಪಾ ದ್ರವ್ಯಂ ತತ್ತ್ವರೂಪಾ ಮಹತ್ತತ್ತ್ವಜನ್ಯಾ ।

**ಬುದ್ಧಿಶಬ್ದಸ್ಯ ಯಶ್ಚ ಮೂಢತಮೋಲೋಕೇ ಯಶ್ಚಬುದ್ಧೇಃ ಪರಂಗತಃ । ತಾವುಭೌ ಸುಖಮೇಧೇತೇ ಕ್ಲಿಶ್ಯತ್ಯಂತರಿತೋ ಜನ ಇತಿ ಜ್ಞಾನೇಪಿ ಪ್ರಯೋಗಾದಿತಿ ಭಾವಃ । ಬುದ್ಧಿತತ್ತ್ವಸ್ಯ ಲಕ್ಷಣಮಾಹ । ಮಹತ್ತತ್ವೇತಿ । ವಿಜ್ಞಾನ ತತ್ತ್ವಂ ಮಹತಃ ಸಮುತ್ಪನ್ನಂ ಚತುರ್ಮುಖಾತ್ ವಿಜ್ಞಾನತತ್ವಾಚ್ಚ ಮನೋಮನಸ್ತತ್ವಾಚ್ಚ ಖಾದಿಕಂ । ಏವಂ ಬಾಹ್ಯಾ ಪರಾ ಸೃಷ್ಟಿರಂತಸ್ತದ್ವ್ಯಕ್ತ್ಯಪೇಕ್ಷಯೇತಿ ಭಾಷ್ಯೋಕ್ತೇರಿತಿ ಭಾವಃ ।**

ಬುದ್ಧಿತತ್ತ್ವವನ್ನು ನಿರೂಪಿಸುವವರಾಗಿ ಅದರ ವಿಭಾಗವನ್ನು ತಿಳಿಸುತ್ತಾರೆ. ಬುದ್ಧಿಯು ಎರಡು ಪ್ರಕಾರವಾದುದು. ತತ್ವರೂಪ ಜ್ಞಾನರೂಪವೆಂದು ತತ್ವರೂಪವಾದುದು ದ್ರವ್ಯವು ಮಹತ್ತತ್ವದಿಂದ ಹುಟ್ಟಿದುದು. ಬುದ್ಧಿ ಶಬ್ದಕ್ಕೆ ಜ್ಞಾನದಲ್ಲೂ ವ್ಯವಹಾರ ಕಂಡಿದೆ. 'ಯಶ್ಚ ಮೂಢತಮೋಲೋಕೇಯಶ್ಚ ಬುದ್ಧೇಃ ಪರಂಗತಃ' ಯಾವನು ಅತಿಮೂರ್ಖನೋ ಯಾವನು ಉತ್ತಮ ಬುದ್ಧಿಯ (ಜ್ಞಾನದ) ತುದಿ ಕಂಡವನೋ ಆ ಇಬ್ಬರೂ ಸುಖಭಾಗಿಗಳು, ಎಂಬಲ್ಲಿ ಕಂಡಿರುತ್ತದೆ. ಬುದ್ಧಿತತ್ವದ ಲಕ್ಷಣವನ್ನು ಹೇಳುತ್ತಾರೆ. ವಿಜ್ಞಾನತತ್ವತೆ, ಭಾಷ್ಯದಲ್ಲಿ ಚತುರ್ಮುಖ ಬ್ರಹ್ಮನಿಂದ ಮಹತ್ತತ್ವದಿಂದ ವಿಜ್ಞಾನ ತತ್ವವು ಹುಟ್ಟಿತು. ವಿಜ್ಞಾನ ತತ್ವದಿಂದ ಮನಸ್ತತ್ವವು, ಮನಸ್ಸಿನಿಂದ ಆಕಾಶಾದಿ ತತ್ವಗಳು, ಹೀಗೆ ಹೊರಗೆ ಒಂದು ಸೃಷ್ಟಿ. ಒಳಗೆ ಆ ವ್ಯಕ್ತಿಗಳ ಮೂಲಕವಾದುದು ಬೇರೆ ಎಂದು ಹೇಳಿರುತ್ತದೆ.

**ನನು ತೈಜಸಾತ್ತು ವಿಕುರ್ವಾಣಾತ್ ಬುದ್ಧಿತತ್ತ್ವಮಭೂತ್ಸತೀತಿ ತೃತೀಯಸ್ಕಂಧ ಭಾಗವತೇ ಬುದ್ಧಿ ತತ್ವಸ್ಯ ತೈಜಸಾಹಂಕಾರಕಾರ್ಯತ್ವೋಕ್ತೇಸ್ತದ್ವಿರೋಧ ಇತ್ಯತ ಆಹ ।**

ಪ.ಸಂ.—ತೈಜಸಾಹಂಕಾರೇಣೋಪಚಿತಾ । ಜ್ಞಾನರೂಪಾಬುದ್ಧಿಃ ಜ್ಞಾನ ಪ್ರಕರಣೇ ವಕ್ಷ್ಯತೇ ।

**ತಥಾ ಚ ಉಪಚಯಭಾಗಾಪೇಕ್ಷಯಾ ಭಾಗವತೋಕ್ತಿರಿತಿ ಭಾವಃ । ಅತ ಏವ ಮಹಾನಹಂ । ಬುದ್ಧಿರ್ಮನಃ ಖಾನಿದಶೇತಿ । ತತ್ವಸಂಖ್ಯಾನ**

**ಅಹಂಕಾರ ತತ್ತ್ವಾನಂತರಂ ಬುದ್ಧಿತತ್ತ್ವಸ್ಯ ಪರಿಗಣನಂ ಕೃತಂ । ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾಮಹಾನ್ಪರ ಇತಿ ಕಾಠಕೋಪನಿಷದಿಮಹತ್ತತ್ತ್ವಾನಂತರಮೇವ ಬುದ್ಧಿತತ್ತ್ವೋಕ್ತಿರಿತಿ ದ್ರಷ್ಟವ್ಯಂ । ತದಭಿಮಾನಿನ ಆಹ ।**

ಪ.ಸಂ.—ಬ್ರಹ್ಮಾದಿ ಉಮಾಂತಾಃ ತದಭಿಮಾನಿನಃ ।

ತೃತೀಯ ಸ್ಕಂಧ ಭಾಗವತದಲ್ಲಿ ತೈಜಸತತ್ತ್ವವನ್ನು ಕಡೆಯಲಾಗಿ ಬುದ್ಧಿತತ್ತ್ವ ಹುಟ್ಟಿತು. ಎಂಬ ಹೇಳಿಕೆಗೆ ಮಹತ್ತತ್ತ್ವದಿಂದ ಎಂದು ಹೇಳುವುದು ಭಾಗವತ ವಿರುದ್ಧವಲ್ಲವೇ ? ಎಂದರೆ ತಿಳಿಸುತ್ತಾರೆ. ತೈಜಸಾಹಂಕಾರದಿಂದ ಉಪಚಿತ(ವೃದ್ಧ) ವಾಗಿ ಹುಟ್ಟಿತು. ಒಂದು ಭಾಗವಾದ ಜ್ಞಾನರೂಪ ಬುದ್ಧಿಯು ಎಂದು ಹೇಳಿದುದರಿಂದ ವಿರೋಧವಿಲ್ಲ. ಆದುದರಿಂದಲೇ ಮಹತ್ತತ್ತ್ವದಿಂದ ಅಹಂಕಾರತತ್ತ್ವ ಇದರಿಂದ ಬುದ್ಧಿ ಅದರಿಂದ ಮನಸ್ಸು, ಅದರಿಂದ ಆಕಾಶವೇ ಮೊದಲಾದ ಹತ್ತು ಹೀಗೆ ತತ್ತ್ವ ಸಂಖ್ಯಾನದಲ್ಲಿ ಅಹಂಕಾರತತ್ತ್ವ ಅನಂತರ ಬುದ್ಧಿತತ್ತ್ವದ ಪರಿಗಣನೆ ಆಗಿದೆ. ಕಾಠಕೋಪನಿಷತ್ 'ಮನಸಸ್ತು ಪರಾ ಬುದ್ಧಿಃ ಬುದ್ಧೇರಾಮತ್ಮಾಹಾನ್ಪರಃ' ಹೀಗೆ ಮಹತ್ತತ್ತ್ವಾನಂತರವೇ ಬುದ್ಧಿತತ್ತ್ವವನ್ನು ಹೇಳಿರುವುದೆಂದು ತಿಳಿಯಬೇಕು. ಅವುಗಳ ಅಭಿಮಾನಿಗಳನ್ನು ಹೇಳುತ್ತಾರೆ. ಚತುರ್ಮುಖ ಬ್ರಹ್ಮಾದಿ ಉಮಾಂತ ದೇವತೆಗಳು ಅಭಿಮಾನಿಗಳು.

**ಉತ್ತಮದೇವಾನಾಂ ಅಧಮತತ್ತ್ವಾಭಿಮಾನಿತ್ವಸ್ಯ ಪೂರ್ವಂ ಗೀತಾತಾತ್ಪರ್ಯಪ್ರಮಾಣೇನ ಉಕ್ತತ್ವಾತ್ । ತೇಭ್ಯೋ ಬುದ್ಧಿಂ ಸರಸ್ವತೀತಿ ಕಾಠಕಭಾಷ್ಯೇ । ಸರಸ್ವತ್ಯಾಬುದ್ಧ್ಯಭಿಮಾನಿತ್ವೋಕ್ತೇಃ । ತಸ್ಯಾಮಹಂಕಾರತನುಂ ಸರುದ್ರಂ ಸಸರ್ಜ ಬುದ್ಧಿಂ ಚ ತದರ್ಧದೇಹಾಂ । ಬುದ್ಧ್ಯಾಂ ಮುಮಾಯಾಂ ಸ ಶಿವ ಸ್ತ್ರಿರೂಪೋ ಮನಶ್ಚವೈಕಾರಿಕದೇವಸಂಘಾನಿತಿ ನಿರ್ಣಯೇ ಉಮಾಯಾ ಬುದ್ಧ್ಯಭಿಮಾನಿತ್ವೋಕ್ತೇರಿತಿ ಭಾವಃ । ಇತಿ ಬುದ್ಧಿ ತತ್ತ್ವ ಪ್ರಕರಣಮ್ ।**

ಉತ್ತಮದೇವತೆಗಳಿಗೆ ಅಧಮತತ್ತ್ವಾಭಿಮಾನಿತ್ವವನ್ನು ಹಿಂದೆ ಗೀತಾತಾತ್ಪರ್ಯ ಪ್ರಮಾಣದಿಂದ ಹೇಳಿದೆ ಕಾಠಕೋಪನಿಷತ್ತಿನಲ್ಲಿ 'ತೇಭ್ಯೋ ಬುದ್ಧಿಃ ಸರಸ್ವತೀ' ಸರಸ್ವತೀದೇವಿಗೆ ಬುದ್ಧ್ಯಭಿಮಾನಿತ್ವ ಹೇಳಿರುತ್ತದೆ. ಆ ಸರಸ್ವತಿಯಿಂದ ಅಹಂಕಾರವೇ ದೇಹವಾಗಿವುಳ್ಳ ರುದ್ರನನ್ನು, ಅವನರ್ಧ ದೇಹವುಳ್ಳ ಬುದ್ಧಿಯನ್ನು, ಆ ಬುದ್ಧಿಯಿಂದ (ಆರುದ್ರನು ತ) ಉಮಾನಲ್ಲಿ ತ್ರಿರೂಪನಾದ ಶಿವನು ಮನಸ್ಸು ವೈಕಾರಿಕ ದೇವತೆಗಳ ಗುಂಪು. ಹೀಗೆ ನಿರ್ಣಯದಲ್ಲಿ ಹೇಳಿದೆ. ಇಲ್ಲಿ ಉಮಾದೇವಿಗೂ ಬುದ್ಧಿ ಅಭಿಮಾನಿತ್ವ ಹೇಳಿರುತ್ತದೆ ಎಂದು ಅಭಿಪ್ರಾಯವು.

**ಹೀಗೆ "ಬುದ್ಧಿತತ್ತ್ವಪ್ರಕರಣ"ವು ಕನ್ನಡಾನುವಾದದೊಂದಿಗೆ ಸಮಾಪ್ತಗೊಂಡಿತು.**

# ೨೨. ಮನಸ್ತತ್ವ ಪ್ರಕರಣ

**ಮನಸ್ತತ್ವಂ ನಿರೂಪಯಿತುಂ ತದ್ವಿಭಾಗಮಾಹ ।**

ಪ.ಸಂ.—ಮನಸೋ ದ್ವಿವಿಧಂ ತತ್ವರೂಪಂ ತದ್ಭಿನ್ನಂ ಚೇತಿ ।

**ತತ್ವರೂಪಸ್ಯ ಮನಸೋ ಲಕ್ಷಣಮಾಹ ।**

ಪ.ಸಂ.—ವೈಕಾರಿಕಾಹಂಕಾರೋಪಾದಾನಕಂ ಮನಸ್ತತ್ವಂ ।

**ತದುಕ್ತಂ ತೃತೀಯಸ್ಕಂಧ ಭಾಗವತೇ । ವೈಕಾರಿಕಾದ್ವಿಕುರ್ವಾಣಾನ್ಮನಸ್ತತ್ವಮಜಾಯತೇತಿ । ವೈಕಾರಿಕಾನ್ಮನೋಜಜ್ಞೇ ದೇವಾ ವೈಕಾರಿಕಾ ದಶೇತಿ । ತದಭಿಮಾನಿನ ಆಹ ।**

ಪ.ಸಂ.—ಪೂರ್ವೋಕ್ತದೇವತಾಃ ಇಂದ್ರ ಕಾಮ ಅನಿರುದ್ಧಾಶ್ಚ ತದಭಿಮಾನಿನಃ । ತತ್ವಭಿನ್ನಂ ಮನ ಇಂದ್ರಿಯಂ । ತದ್ವಿವಿಧಂ । ನಿತ್ಯಮನಿತ್ಯಂ ಚೇತಿ ।

ಮನಸ್ತತ್ವವನ್ನು ನಿರೂಪಿಸುವವರಾಗಿ ಅದರ ವಿಭಾಗವನ್ನು ಹೇಳುತ್ತಾರೆ. ಮನಸ್ಸು ಎರಡುವಿಧ ತತ್ವರೂಪವೆಂಬುದು ಹಾಗೂ ಅದರಿಂದ ಭಿನ್ನವಾದುದು (ಇಂದ್ರಿಯ ರೂಪ) ಎಂದು. ತತ್ವರೂಪ ಮನಸ್ಸಿನ ಲಕ್ಷಣವನ್ನು ಹೇಳುತ್ತಾರೆ. ವೈಕಾರಿಕ ಅಹಂಕಾರವೇ ಉಪಾದಾನವಾಗಿರುವುದೇ ತತ್ವರೂಪವಾದ ಮನಸ್ಸು. ಇದನ್ನು ತೃತೀಯ ಸ್ಕಂಧ ಭಾಗವತದಲ್ಲಿ ಹೇಳಿದೆ. ವೈಕಾರಿಕಾಹಂಕಾರವನ್ನು ಕಡೆಯುವಾಗ ಮನಸ್ತತ್ವವು ಹುಟ್ಟಿತು. ಹೀಗೆ ಹೇಳಿದೆ. ಮತ್ತು ವೈಕಾರಿಕ ಅಹಂಕಾರದಿಂದ ಮನಸ್ಸು ಹುಟ್ಟಿತು. ಆ ಮನಸ್ಸಿನಿಂದ ವೈಕಾರಿಕರೆಂದು ಸಂಕೇತವು ಹತ್ತು ದೇವತೆಗಳು ಹುಟ್ಟಿದರು. ಹೀಗೆ ಅವುಗಳ ಅಭಿಮಾನಿಗಳನ್ನು ಹೇಳುತ್ತಾರೆ.

ಹಿಂದೆ ಹೇಳಿದ ಬ್ರಹ್ಮವಾಯು ಸರಸ್ವತೀ ಭಾರತೀ ರುದ್ರ ಪಾರ್ವತಿ ಇಂದ್ರ ಕಾಮ ಅನಿರುದ್ಧ ಇವರ ಪತ್ನಿಯರು ತತ್ವರೂಪ ಮನೋಭಿನ್ನವಾದ ಮನಸ್ಸು ಇಂದ್ರಿಯ, ಅದೂ ಎರಡು ವಿಧ, ನಿತ್ಯ ಹಾಗೂಅನಿತ್ಯ ಎಂದು. ಇದನ್ನು ಷಟ್‌ಪ್ರಶ್ನ ಭಾಷ್ಯದಲ್ಲಿ ಹೇಳಿರುತ್ತದೆ.

**ಅನ್ನಸ್ಯ ದೇವತಾ ಸೋಮೋ ಮನೋಮಾನ್ಯನಿರುದ್ಧಕಃ । ರುದ್ರೋವೀಂದ್ರಃ ಶೇಷಕಾಮೌ ಮನಸಸ್ತ್ವೇವ ದೇವತಾ ಇತಿ । ಬೃಹದ್ಭಾಷ್ಯೇಪಿ । ಯೇನ ಯಜ್ಞಾದಿಕಂ ಕುರ್ಯಾಚ್ಛೇಷರುದ್ರವಿಪಾಸ್ತಥಾ ।**

**ಮನಃ ಸೂಕ್ಷ್ಮಂ ಜ್ಞಾನಯೋಗ್ಯಂ ಶೇಷೋವ್ಯಾಖ್ಯಾನ ಗೋಚರಂ । ರುದ್ರಸ್ತುಮನ ಆಖ್ಯಂ ಚ ಗರುಡೋ ಧ್ಯಾನಗೋಚರಂ । ಬ್ರಹ್ಮಾಸರಸ್ವತೀ ವಾಯುರ್ಮನ ಅಧ್ಯಭಿಮಾನಿನ ಇತಿ । ತೃತೀಯ ತಾತ್ಪರ್ಯೇಪಿ । ಮನಸಸ್ತ್ವನಿರುದ್ಧಶ್ಚ ಚಂದ್ರಶ್ಚಾನ್ಯೇ ಯಥೋದಿತಾ ಇತಿ ।**

ಅನ್ನಕ್ಕೆ ಅಭಿಮಾನಿ ಚಂದ್ರ, ಮನಸ್ಸಿಗೆ ಅಭಿಮಾನಿ ಅನಿರುದ್ಧ, ರುದ್ರ, ವೀಂದ್ರ (ಗರುಡ)ಶೇಷ, ಕಾಮ. ಮನಸ್ತತ್ವಕ್ಕೆ ದೇವತೆಗಳು, ಬೃಹದ್ಭಾಷ್ಯದಲ್ಲಿಯೂ ಯಾವ ಮನಸ್ಸಿನಿಂದಲೇ ಯಜ್ಞಾದಿಗಳನ್ನು ಮಾಡುತ್ತಾರೆಯೋ, ಅಂತಹ ಮನಸ್ಸಿಗೆ ಶೇಷ ರುದ್ರ ಗರುಡರು ಅಭಿಮಾನಿಗಳು ವ್ಯಾಖ್ಯಾನಾದಿ ವಿಷಯವಾದ ಜ್ಞಾನಾಖ್ಯ ಮನಸ್ಸಿಗೆ ಶೇಷ ದೇವರು, ಧ್ಯಾನ ಗೋಚರ(ವಿಷಯ)ವಾದ ಮನಸ್ಸಿಗೆ ರುದ್ರ ಗರುಡರು ಅಭಿಮಾನಿಗಳು ಬ್ರಹ್ಮ ಸರಸ್ವತೀ ವಾಯು ಭಾರತೀಯರು ಸಾಮಾನ್ಯ ಮನಸ್ಸಿಗೆಲ್ಲಾ ಅಭಿಮಾನಿಗಳು. ಹೀಗೆ ಹೇಳಿದೆ. ತೃತೀಯ ತಾತ್ಪರ್ಯದಲ್ಲಿಯೂ ಮನಸ್ಸಿಗೆ ಅನಿರುದ್ಧ ಚಂದ್ರ ಇನ್ನೂ ಉಳಿದ ದೇವತೆಗಳಭಿಮಾನಿಗಳು ಎಂದು ಹೇಳಿದೆ. ಇವರು ಅವಾಂತರಾಭಿಮಾನಿಗಳೆಂದರ್ಥವು.

**ಕಾಠಕ ಭಾಷ್ಯೇಪಿ । ಮನೋಭಿಮಾನಿನೋ ರುದ್ರವೀಂದ್ರಶೇಷಾ ಸ್ತ್ರಯೋಪಿತ್ವಿತಿ । ಐತರೇಯ ಭಾಷ್ಯೇಪಿ । ತತ್ರ ಪ್ರಾಣಾತ್ಮನಾವಾಯು ರ್ಮನೋರೂಪೇಣ ಶಂಕರಃ । ಶೇಷಃ ಸುಪರ್ಣ ಇಂದ್ರಶ್ಚ ಮನಾಂಸ್ಯೇವ ಪೃಥಕ್ ಪೃಥಕ್ । ಅಹಂಭಾವ ಮನೋರುದ್ರಃ ಶೇಷೋ ಸೌಪಾಂಚ- ರಾತ್ರಿಕಂ । ವೈದಿಕಂ ಗರುಡೋಥೇಂದ್ರೋ ಯಜ್ಞಾದಿ ವಿಷಯಂ ಮನ ಇತಿ । ತಂತ್ರಸಾರೇಪಿ । ರುದ್ರೋಹಂಕಾರ ಉದ್ದಿಷ್ಟಃ ಸ್ಕಂದೇಂದ್ರೌಮನ ಉಚ್ಯತೇ । ಅಹಂಕಾರಃ ಶೇಷವೀಂದ್ರಾವಪಿ ವಿದ್ವದ್ಭಿರೀರಿತಾ ಇತಿ ।**

ಒಂದೇ ವಿಷಯದಲ್ಲಿ ಅನೇಕ ಪ್ರಮಾಣಗಳನ್ನು ತೋರುತ್ತಾರೆ. ಕಾಠಕ ಭಾಷ್ಯದಲ್ಲಿಯೂ ರುದ್ರ ಗರುಡ ಶೇಷ ಮೂವರೂ ಮನೋಭಿಮಾನಿಗಳೆಂದಿದೆ, ಐತರೇಯ ಭಾಷ್ಯದಲ್ಲಿಯೂ ಮನಸ್ಸಿನಲ್ಲೇ ಪ್ರಾಣಾತ್ಮಕನಾಗಿ ವಾಯು, ಮನೋ ರೂಪದಿಂದ ರುದ್ರ, ಶೇಷ ಗರುಡ ಇಂದ್ರರು ಪ್ರತ್ಯೇಕ ಪ್ರತ್ಯೇಕವಾಗಿ ಮನೋಭಿಮಾನಿ ಗಳು ಎಂದಿದೆ. ಅಹಂಭಾವದ ಮನಸ್ಸಿಗೆ ರುದ್ರ, ಪಾಂಚರಾತ್ರಾದಿ ವಿಷಯಕ ಮನಸ್ಸಿಗೆ ಶೇಷ, ವೈದಿಕ ವಿಷಯಕ ಮನಸ್ಸಿಗೆ ಗರುಡ, ಯಜ್ಞಾದಿ ವಿಷಯಕ ಮನಸ್ಸಿಗೆ ಇಂದ್ರ ಅಭಿಮಾನಿಗಳು—ಹೀಗೆ ಹೇಳಿದೆ. ತಂತ್ರಸಾರದಲ್ಲಿಯೂ ಇದೇ ರೀತಿಯಾಗಿಯೇ ರುದ್ರನು ಅಹಂಕಾರನೆಂದು ಸ್ಕಂದೇಂದ್ರರು ಮನಸ್ಸೆಂದು,ಅಹಂಕಾರ ಶೇಷವೀಂದ್ರರೆಂದು ಜ್ಞಾನಿಗಳಿಂದ ಹೇಳಿಸಿಕೊಂಡಿರುತ್ತಾರೆ ಎಂದು ಹೇಳಿದೆ.

**ಗೀತಾತಾತ್ಪರ್ಯೇಪಿ । ಉಮಾ ಬುದ್ಧಿರಿತಿ ಜ್ಞೇಯಾ ಶಬ್ದಾದಿ ಜ್ಞಾನದಾಯಿತಾ । ಮತಿದೋ ಮನ ಉದ್ದಿಷ್ಟ ಇಂದ್ರಃ ಸ್ಕಂದೋಪಿ.**

**ತತ್ಸುತ ಇತಿ । ಭಾಷ್ಯೇಪಿ । ವಾಗಭಿಮಾನಿನ್ಯುಮಾ ಮನೋಭಿಮಾನಿನಿ ರುದ್ರೇ ವಿಲೀಯತ ಇತಿ । ನಿತ್ಯಮನಸೋಧಿಷ್ಠಾನಮಾಹ ।**

ಪ.ಸಂ.—ನಿತ್ಯೇಂದ್ರಿಯಂ ಈಶೋ ಲಕ್ಷ್ಮೀ ಬ್ರಹ್ಮಾದಿ ಸರ್ವಜೀವಾನಾಂ ಸ್ವರೂಪ ಭೂತಮ್ ।

**ಪರಮಾತ್ಮನೋ ಮನೋವತ್ತ್ವೇ ಪ್ರಮಾಣಂ ತು । ಚಂದ್ರಮಾ ಮನಸೋಜಾತಃ । ತನ್ಮನೋ ಕುರುತೇತ್ಯಾದಿ ಶ್ರುತಿಃ । ತಥಾ ಬೃಹದ್ಭಾಷ್ಯಮಪಿ । ಅಪ್ ಸೃಷ್ಟ್ಯರ್ಥಂ ಮನೋಕುರುತೇತಿ । ಮನೋವಾಕ್ ಪ್ರಾಣರೂಪೋಸೌ ಭಗವಾನ್ ಪುರುಷೋತ್ತಮಃ । ಮನೋವಾಕ್ಪ್ರಾಣ ತಸ್ತಸ್ಯ ಜಾತಾ ಅನ್ಯೇಭಿಮಾನಿನ ಇತಿ । ಲಕ್ಷ್ಮ್ಯಾಮನಃ ಸದ್ಭಾವೇ ತು ಯಂ ಕಾಮಯೇ ತಂ ತಮುಗ್ರಂ ಕೃಣೋಮೀತಿ ಶ್ರುತಿಃ । ಕಾಮನಾಯಾ ಮನಃ ಸ್ವರೂಪತ್ವಾತ್ ।**

ಪಾರ್ವತಿಯು ಬುದ್ಧಿ ಕೊಡುವವಳಾದ್ದರಿಂದ ಬುದ್ಧಿ ಎನಿಸಿಕೊಂಡಿರುತ್ತಾಳೆ. ಇಂದ್ರನು, ಉಮಾಪುತ್ರನಾದ ಸ್ಕಂದನು (ಶಬ್ದಜ್ಞಾನಾದಿ) ಬುದ್ಧಿ ಕೊಡುವರಾದ್ದರಿಂದ ಮನಸ್ಸೆನಿಸಿ ಕೊಂಡಿರುತ್ತಾರೆ ಎಂದು ಗೀತಾತಾತ್ಪರ್ಯದಲ್ಲಿ ಹೇಳಿರುತ್ತದೆ. ಭಾಷ್ಯದಲ್ಲಿಯೂ ವಾಗಭಿಮಾನಿನೀ ಉಮಾ ಮನೋಭಿಮಾನಿರುದ್ರನಲ್ಲಿ ಲಯ ಹೊಂದುತ್ತಾಳೆ ಎಂದು ಹೇಳಿದೆ. ನಿತ್ಯೇಂದ್ರಿಯಸ್ಥಾನ ಹೇಳುತ್ತಾರೆ.

ಪರಮಾತ್ಮ, ಲಕ್ಷ್ಮೀ, ಬ್ರಹ್ಮಾದಿ ಸರ್ವಜೀವರಾಶಿಯ ಸ್ವರೂಪಗಳಾದವುಗಳು. ಪರಮಾತ್ಮನಿಗೆ ಮನ ಇದೆ ಎಂಬ ವಿಷಯದಲ್ಲಿ ಪ್ರಮಾಣಗಳು. ಚಂದ್ರನು ಮನಸ್ಸಿನಿಂದ ಹುಟ್ಟಿದನು, ಹೀಗೆ ಪುರುಷಸೂಕ್ತ, ಶ್ರೀಹರಿ ಮನವಮಾಡುತ್ತಾನೆ ಎಂದು ಶ್ರುತಿಯು. ಹಾಗೆಯೇ ಬೃಹದ್ಭಾಷ್ಯದಲ್ಲಿ ಉದಕವನ್ನು ಹುಟ್ಟಿಸಲು ಮನ ಮಾಡಿದೆ ಎಂದು ಹೇಳಿದೆ. ಪುರುಷೋತ್ತಮನಾದ ಪರಮಾತ್ಮನು ತಾನೇ ತನ್ನ ಮನಸ್ಸು ವಾಕ್ಕು, ಪ್ರಾಣಾದಿರೂಪನಾದವನು. ಪರಮಾತ್ಮನ ಮನಸ್ಸಿನಿಂದ ಮನಸ್ಸು, ವಾಕ್ಕು, ಪ್ರಾಣಗಳು ಹುಟ್ಟಿದರು. ಲಕ್ಷ್ಮೀದೇವಿಗೆ ಮನಸ್ಸಿದೆ ಎಂಬಲ್ಲಿ ಪ್ರಮಾಣಗಳೆಂದರೆ, ಅಂಭೃಣೀ ರೂಪದಲ್ಲಿ ನಾನು ಯಾರನ್ನು ಬಯಸಿದರೆ ರುದ್ರನನ್ನು ಮಾಡಬಲ್ಲೆ, ಬ್ರಹ್ಮನನ್ನು ಮಾಡಬಲ್ಲೆ ಎಂದು ಹೇಳಿರುತ್ತಾರೆ. ಕಾಮನೆ(ಬಯಕೆ) ಮನೋ ರೂಪವೇ ಆಗಿರುತ್ತದೆ

**ತಥಾ ಭಾಷ್ಯಮಪಿ । ಯಥಾ ಶ್ರೀರ್ನಿತ್ಯಮುಕ್ತಾಪಿ ಪ್ರಾಪ್ತ ಕಾಮಾಪಿ ಸರ್ವದಾ। ಉಪಾಸ್ತೇ ನಿತ್ಯಶೋ ವಿಷ್ಣುಮೇವಂ ಭಕ್ತ್ಯೋಹರೇರ್ಭವೇದಿತಿ। ತತ್ರ ಧ್ಯಾನಸ್ಯ ಮನೋರೂಪತ್ವಾತ್ । ಜೀವಾನಾಂ ತು ಸ್ವರೂಪಂಮನ ಆದಿಕಂ ಮುಕ್ತೌ ಸಮ್ಯಗಭಿವ್ಯಜ್ಯತೇ । ತದುಕ್ತಂ ಭಾಷ್ಯೇ । ಕಾಮೇನ**

ಮನೋನಮನೋಕಾಮ ಆಗಾದ್ಧೃದಯಾದ್ಧೃದಯಮಿತಿ । ಮರ್ತ್ಯಂ ದೇಹಂ ಪರಿತ್ಯಜ್ಯ ಚಿತಿಮಾತ್ರಾತ್ಮದೇಹಿನಃ । ಚಿತಿ ಮಾತ್ರೇಂದ್ರಿಯಾಶ್ಚೈವ ಪ್ರವಿಶ್ಯಾವಿಷ್ಣುಮವ್ಯಯಂ। ತದಂಗಾನುಗೃಹೀತೈಶ್ಚ ಸ್ವಾಂಗೈರೇವ ಪ್ರವರ್ತನಂ । ಕುರ್ವಂತಿ ಭುಂಜತೇ ಭೋಗಾಂಸ್ತದಂತರ್ಬಹಿರೇವವೇತಿ । ಬೃಹದ್ಭಾಷ್ಯೇಪಿ ।

ಹಾಗೆಯೇ ಭಾಷ್ಯದಲ್ಲಿಯೂ ಲಕ್ಷ್ಮೀದೇವಿಯು ನಿತ್ಯಮುಕ್ತಳೇ ಆದರೂ ಆಪ್ತಕಾಮಳೇ ಆದರೂ ನಿತ್ಯದಲ್ಲಿಯೂ ಶ್ರೀಹರಿ ಉಪಾಸನಾವನ್ನು ಮಾಡುತ್ತಲೇ ಇರುತ್ತಾಳೆ. ಭಕ್ತರ ಲಕ್ಷಣ ಅಂತಹದಾದ್ದರಿಂದ ಎಂದಿದೆ. ಉಪಾಸನೆಯು ಮನೋ ರೂಪವೇ ಆಗಿರುತ್ತದೆ. ಇತ್ಯಾದಿಗಳಿಂದ ಲಕ್ಷ್ಮೀದೇವಿಗೂ ಮನಸ್ಸುಂಟು.

ಜೀವಿಗಳ ಸ್ವರೂಪ ಭೂತವಾದ ಮನಸ್ಸು ಮುಕ್ತಿಯಲ್ಲಿ ಅಭಿವ್ಯಕ್ತವಾಗುತ್ತದೆ ಇದನ್ನು ಭಾಷ್ಯದಲ್ಲಿ ಮನಮಾತ್ರದಿಂದಲೇ ಅಪೇಕ್ಷಿತವಾದುದು, ಮನ ಮಾತ್ರ ದಿಂದಲೇ ಮನಸ್ಸಿಗೆ ಬಂದು ಹೀಗೆ ಭೋಗಗಳನ್ನು ಪಡೆಯುತ್ತಾರೆ ಎಂದು ಹೇಳಿದೆ. ಮನುಷ್ಯ ದೇಹವನ್ನು ಬಿಟು ಜ್ಞಾನ ಮಾತ್ರ (ಚಿನ್ಮಾತ್ರ) ದೇಹವನ್ನು ಪಡೆದು ಚಿತಿಮಾತ್ರೇಂದ್ರಿಯಗಳಿಂದಲೇ ವಿಷ್ಣುವಿನದೇಹವನ್ನು ಪ್ರವೇಶಿಸಿ, ಅವನ ಅಂಗಗಳಲ್ಲೇ ತಮ್ಮ ಅವಯವಗಳಿಂದ ಭೋಗವನ್ನು ಅನುಭವಿಸುತ್ತಾರೆ. ಹೊರಗೆ ಹಾಗೂ ಒಳಗೆ ಬೇಕಾದುದು ತಿನ್ನುತ್ತಾರೆ. ಮಾಡುತ್ತಾರೆ, ನೋಡುತ್ತಾರೆ ಎಂದು ಹೇಳಿದೆ.

ಸ್ವರೂಪಭೂತ ಚಿತ್ತೇನ ಕಾಮಾದ್ಯಾಃ ಸ್ಯುಃ ಸುಖಾತ್ಮಕಾಃ । ದುಃಖಾತ್ಮಕಾಃ ಪ್ರಾಕೃತಾವಾ ಮುಕ್ತಾನಾಂ ನ ಕಥಂಚನ । ಮನಶ್ಚ ದ್ವಿವಿಧಂ ಮತಂ । ಚೇತನಂ ಚ ಜಡಂ ಚೇತಿ ಚಕ್ಷುರಾದ್ಯಂತಥೈವ ಚ । ಚೇತನಂ ತ್ವಿಂದ್ರಿಯಂ ಹ್ಯಾತ್ಮ ಸ್ವರೂಪಂ ನಾಪರಂಸ್ಮೃತಂ । ಮುಕ್ತಾನಾಂ ಚೇತನಂ ತ್ವೇವ ಬದ್ಧಾನಾಮುಭಯಂತಥೇತಿ । ಛಾಂದೋಗ್ಯ ಭಾಷ್ಯೇಪಿ। ಸ್ವರೂಪೇಣೈವ ಶಕ್ತೋಽಪಿ ಜೀವದೇಹಸ್ಥಿತೋ ಹರಿಃ ಭುಂಕ್ತೇ ತದಿಂದ್ರಿಯೈಃ ಭೋಗಾಂಶ್ಚರಿತ್ರೈರಿಂದ್ರಿಯೈಃ ಸ್ವಕೈರಿತಿ । ಪ್ರಮಾಣ ಲಕ್ಷಣೇಪಿ । ಪ್ರತ್ಯಕ್ಷಂ ಸಪ್ತವಿಧಂ । ಸಾಕ್ಷಿಷಡಿಂದ್ರಿಯ ಭೇದೇನೇತಿ । ಸ್ವರೂಪೇಂದ್ರಿಯಂ ಸಾಕ್ಷೀತ್ಯುಚ್ಯತ ಇತಿ ಟೀಕಾ ।

ಸ್ವರೂಪವಾದ ಮನಸ್ಸಿನಿಂದ ಅಭೀಷ್ಟಗಳೆಲ್ಲಾ ಆಗುತ್ತವೆ. ಎಲ್ಲಾ ಸುಖಾತ್ಮರುಗಳೇ, ಪ್ರಾಕೃತ(ಪ್ರಕೃತಿ ಸಂಬಂಧ)ದಲ್ಲಿ ದುಃಖಾತ್ಮಕಗಳೇ ಮುಕ್ತಿ ಪರ್ಯಂತವು. ಮನಸ್ಸು ಎರಡು ವಿಧವೆಂದು ಸಮ್ಮತವು. ಚೇತನಾತ್ಮಕವೆಂದೂ, ಜಡಾತ್ಮಕವೆಂದೂ ಚಕ್ಷುರಾದಿಗಳೆಲ್ಲವೂ ಎರಡು ವಿಧವೇ, ಚೇತನವಾದ ಇಂದ್ರಿಯಗಳು ಜೀವನ ಸ್ವರೂಪವೇ ಬೇರೆಯಲ್ಲ. ಮುಕ್ತರಿಗೆ ಚೇತನಾತ್ಮಕವಾದವುಗಳು ಸಂಸಾರಿಗಳಿಗೆ ಉಭಯಾತ್ಮವಾದವುಗಳು. ಛಾಂದೋಗ್ಯ ಭಾಷ್ಯದಲ್ಲಿಯೂ ಶ್ರೀಹರಿ ಸರ್ವಶಕ್ತನಾದರೂ ಜೀವಸ್ಥಿತನಾಗಿ ಅವನ ಇಂದ್ರಿಯಗಳಿಂದಲೇ ವಿಷಯಗಳನ್ನು

ಅನುಭವಿಸುತ್ತಾನೆ. ಹಾಗೂ ತನ್ನ ಇಂದ್ರಿಯಗಳಿಂದಲೂ ಅನುಭವಿಸುತ್ತಾನೆ. ಪ್ರಮಾಣಲಕ್ಷಣದಲ್ಲಿಯೂ ಪ್ರತ್ಯಕ್ಷ ಏಳು ವಿಧವೆಂದಿದೆ. ಸಾಕ್ಷಿ ಮನಸ್ಸು ಹಾಗೂ ಸೇರಿ ಆರುಗಳು. ಸ್ವರೂಪ ಇಂದ್ರಿಯವೇ ಸಾಕ್ಷಿ ಎನಿಸಿಕೊಳ್ಳುತ್ತದೆ. ಹೀಗೆ ಟೀಕೆಯಲ್ಲಿ ಇಂದ್ರಿಯಗಳ ಬಗ್ಗೆ ಹೇಳಿದೆ.

**ಅನುವ್ಯಾಖ್ಯಾನೇಪಿ । ಪ್ರಾಕೃತಂ ಶುದ್ಧ ಚೈತನ್ಯಮಕ್ಷಂತು ದ್ವಿವಿಧಂ ಮತಂ । ಶುದ್ಧಮೀಶರಮಾಮುಕ್ತೇಷ್ವನ್ಯತ್ರ ಪ್ರಾಕೃತೈರ್ಯುಕ್ತಂ । ನಿರ್ದೋಷಮೇವ ಚೈತನ್ಯಮನ್ಯತ್ರೋಭಯಮಿಷ್ಯತ ಇತಿ । ಅನಿತ್ಯ ಮನಸೋಧಿಷ್ಠಾನಮಾಹ ।**

ಪ.ಸಂ.—ಅನಿತ್ಯೇಂದ್ರಿಯಂ ಬ್ರಹ್ಮಾದಿ ಸರ್ವಜೀವಾನಾಂ ಬಾಹ್ಯಂ । ತತ್ಪಂಚವಿಧಂ । ಮನೋ ಬುದ್ಧಿರಹಂಕಾರಃ ಚಿತ್ತಂ ಚೇತನಂ ಚೇತಿ ।

**ಬ್ರಹ್ಮಾದೀನಾಂ ಪ್ರಾಕೃತ ಶರೀರವತ್ವಾದನಿತ್ಯಂ ಮನ ಆದೀಂದ್ರಿಯಂ ಸಿದ್ಧಂ । ಪೂರ್ವೋಕ್ತ ಪ್ರಮಾಣೈಶ್ಚೇತಿ ಭಾವಃ ।**

ಅನುವ್ಯಾಖ್ಯಾನದಲ್ಲಿಯೂ ಚಕ್ಷುರಾದಿ ಇಂದ್ರಿಯಗಳು ಪ್ರಾಕೃತವೆಂದೂ, ಶುದ್ಧ ಚೈತನ್ಯವೆಂದು ಎರಡು ವಿಧವು. ಶುದ್ಧ ಚೈತನ್ಯಾತ್ಮಕವಾದುದು ಈಶನಲ್ಲಿ, ಮುಕ್ತರಲ್ಲಿ ಹಾಗೂ ಮಿಕ್ಕವರಲ್ಲಿ ಪ್ರಾಕೃತವಾದುದು. ಮೋಕ್ಷದಿಂದಲೇ ನಿರ್ದೋಷ ಚೈತನ್ಯವು. ಸಂಸಾರದಲ್ಲಿ ಭಯಾತ್ಮಕವು. ಅನಿತ್ಯ ಮನಸ್ಸಿಗೆ ಆಶ್ರಯವನ್ನು ಹೇಳುತ್ತಾರೆ. ಅನಿತ್ಯವಾದ ಇಂದ್ರಿಯಗಳು ಬ್ರಹ್ಮಾದಿ ಸರ್ವಜೀವರಲ್ಲಿ ಸ್ವರೂಪದಿಂದ ಹೊರಗೆ ಐದುವಿಧವಾಗಿವೆ—ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಚೇತನ ಹೀಗೆಂದು. ಬ್ರಹ್ಮಾದಿ ದೇವತೆಗಳ ಶರೀರಗಳು ಪ್ರಾಕೃತಗಳಾಗಿರುವುದರಿಂದ ಮನ ಆದಿಗಳೆಲ್ಲವೂ ಅನಿತ್ಯವಾದವುಗಳೇ ಎಂದು ಪೂರ್ವೋಕ್ತ ಪ್ರಮಾಣಗಳಿಂದ ಸಿದ್ಧವು.

**ಜೀವಾಶ್ರಿತಾ ನಿತ್ಯ ಮನಸೋ ವಿಭಾಗಮಾಹ । ತತ್ಪಂಚವಿಧಮಿತಿ । ತದುಕ್ತಂ ಸೂತ್ರೇ ಭಾಷ್ಯೇ ಚ । ಓಂ ಪಂಚವೃತ್ತಿರ್ಮನೋ ವದ್ವ್ಯಪ-ದಿಶ್ಯತೇ ಓಂ । ಯಥಾ ಹ ವೈ ಮನಃ ಪಂಚಧಾವ್ಯಪದಿಶ್ಯತೇ । ಮನೋ ಬುದ್ಧಿರಹಂಕಾರಶ್ಚಿತ್ತಂ ಚೇತನೇತೀತಿ । ಸಂಕಲ್ಪವಿಕಲ್ಪರೂಪಂ ಮನಃ । ನಿಶ್ಚಯ ರೂಪಾಬುದ್ಧಿಃ । ಅಸ್ವರೂಪೇ ಸ್ವರೂಪಮತಿರಹಂಕಾರಃ । ಸ್ಮರಣ ಹೇತುಶ್ಚಿತ್ತಂ । ಚೇತಸೋವ್ಯಾಪ್ತಿಶ್ಚೇತಿ ಟೀಕಾ । ನನ್ವೇವಮತ್ರ ವಿಕಲ್ಪ ಪದೋಕ್ತ ಸಂಶಯಸ್ಯ ಅಹಂಕಾರ ಪದೋಕ್ತ ಮಿಥ್ಯಾಜ್ಞಾನಸ್ಯ ಚ ಬ್ರಹ್ಮವಾಯ್ವೋರಭಾವಾತ್ಪಂಚವೃತ್ತಿ ಮನೋನ ಯುಕ್ತಂ । ತದುಕ್ತಂ ದ್ವಿತೀಯ ಸ್ಕಂಧ ಭಾಗವತೇ ಚತುರ್ಮುಖೇನೈವ । ನ ಭಾರತೀ ಮೇಂಗ-ಮೃಷೋಪ ಲಕ್ಷ್ಯತೇ ನ ಕರ್ಹಿ ಚಿನ್ಮೇ ಮನಸೋ ಮೃಷಾಗತಿಃ ।**

**ನಮೋಹೃಷೀಕಾಣಿ ಪತಂತ್ಯಸತ್ಪಥೇ ಯನ್ಮೇ ಹೃದೌತ್ಕಂಠ್ಯವತಾಧೃತೋ ಹರಿರಿತಿ ।**

ಮನಸ್ಸು-ಮನ, ಬುದ್ಧಿ ಅಹಂಕಾರ ಚಿತ್ತ ಚೇತನಗಳೆಂದು ಐದು ವಿಧವಾಗಿ ಉಪದಿಷ್ಟವಾಗಿದೆ. ಸಂಕಲ್ಪ (ಹೀಗೆ ಮಾಡುತ್ತೇನೆ) ಎಂಬುದು. ವಿಕಲ್ಪ (ಆಗತ್ತೋ ಇಲ್ಲವೋ–ಸಂಶಯ) ಇವೆರಡೂ ಮನಸ್ಸೇ, ನಿಶ್ಚಯರೂಪವಾದುದು ಬುದ್ಧಿಯು, ತತ್ ಸ್ವರೂಪವಲ್ಲದರಲ್ಲಿ ಸ್ವರೂಪವೆಂಬ(ಭ್ರಮೆ) ಅಹಂಕಾರವು, ಸ್ಮೃತಿಗೆ ಕಾರಣವಾದುದು ಚಿತ್ತವು. ಅನೇಕ ವಿಷಯಗಳನ್ನು ವಿಷಯೀಕರಿಸಿ ವ್ಯಾಪ್ತವಾಗಿರುವುದೇ ಚೇತನವು. ಹೀಗೆ ಟೀಕಾಕಾರರು ಬರೆದಿರುತ್ತಾರೆ. ವಿಕಲ್ಪಪದೋಕ್ತ ಸಂಶಯವು ಅಹಂಕಾರಪದದಿಂದ ಹೇಳಿದ ಮಿಥ್ಯಾಜ್ಞಾನ, ಬ್ರಹ್ಮವಾಯುಗಳಿಗೆ ಇಲ್ಲವಾದ್ದರಿಂದ ಮನಸ್ಸು ಐದು ವಿಧಗಳೆಂದು ಹೇಳುವುದು ಯುಕ್ತವಲ್ಲ ಎಂದರೆ, ಇದನ್ನು ಚತುರ್ಥ. ಸ್ಕಂಧ ಭಾಗವತದಲ್ಲಿ ಬ್ರಹ್ಮದೇವರೇ ಹೇಳಿಕೊಂಡಿದ್ದಾರೆ. 'ನನ್ನ ಮಾತು ಎಂದಿಗೂ ಪೊಳ್ಳು (ಸುಳ್ಳು) ಹೇಳುವುದಿಲ್ಲ. ನನ್ನ ಮನಸ್ಸಿಗೆ ಎಂದೆಂದಿಗೂ ವ್ಯರ್ಥ ಸುಳ್ಳು ವಿಷಯಗಳುಬರುವುದಿಲ್ಲ, ನನ್ನ ಇಂದ್ರಿಯಗಳು ದುರ್ಮಾರ್ಗ (ಅಯೋಗ್ಯ ವಿಷಯಗಳಲ್ಲಿ) ದಲ್ಲಿ ಚಲಿಸುವುದಿಲ್ಲ. ಅತಿ ಔತ್ಕಂಠ್ಯದಿಂದ ಪರಮಾತ್ಮನೇ ಶ್ರೀಹರಿಯೇ ಧೃತ(ವಿಷಯ) ನಾಗಿರುತ್ತಾನೆ, ಹೀಗೆ ಹೇಳಿರುತ್ತಾರೆ.

**ಋಗ್ಭಾಷ್ಯೇಪಿ । ಯತ್ಸ್ವಯಂ ಪ್ರತಿಭಾತಸ್ಯ ಸಂಶಯಾರ್ಥಂ ಗುರೋರ್ವಚಃ । ಸುಪರ್ಣಾದೇರ್ವಿರಿಂಚಸ್ಯ ಕೇವಲಂ ಧರ್ಮಕಾರಣಮಿತಿ । ತತ್ರ ಸುಪರ್ಣಾದೇಃ ಸಂಶಯಮುಕ್ತ್ವಾ ಚತುರ್ಮುಖಸ್ಯ ಸಂಶಯಾಭಾವೋಕ್ತೇಃ। ತಟ್ಟೀಕಾಯಾಂ ತು ಸುಪರ್ಣಾದೇರ್ಗುರೋರ್ವಚೋನಿಗದರೂಪಂ ತದಸ್ಮಾಭಿರ್ದೃಷ್ಟೋಯಂ ವೇದೋವಾಯುಕ್ತಿಂಚಿದ್ವೇತಿ ಸಂಶಯ ನಿವೃತ್ತ್ಯರ್ಥಂ ವೇದ ಏವಾಯಮಿತಿ ನಿಶ್ಚಯಾರ್ಥಂ ಭವತಿ । ವಿರಿಂಚಸ್ಯ ತು ಸಂಶಯಾ ಭಾವಾತ್ಕೇವಲಂ ಧರ್ಮಕಾರಣಂ ಭವತೀತ್ಯುಕ್ತವತ್ ।**

ಋಗ್ಭಾಷ್ಯದಲ್ಲಿಯೂ ಗರುಡಾದಿಗಳಿಗೆ ಪ್ರತಿಭಾತ(ಸ್ವಯಂ ಹೊಳೆದ) ವಿಷಯದಲ್ಲಿ ಸಂಶಯ ಬರುತ್ತದೆ, ಆಗ ಗುರುಗಳಾದ ಚತುರ್ಮುಖರ ವಾಕ್ಯದಿಂದ ಸಂಶಯ ಪರಿಹಾರವಾಗುತ್ತದೆ. ಚತುರ್ಮುಖ ಬ್ರಹ್ಮದೇವರಿಗೆ ಕೇವಲ ಧರ್ಮಕಾರಣ ನಿಶ್ಚಿತವಾದ ಮನವೇ ಇರುತ್ತದೆ ಎಂದು, ಗರುಡಾದಿಗಳಿಗೆ ಸಂಶಯ, ಬ್ರಹ್ಮದೇವರಿಗೆ ತದಭಾವ ಹೇಳಿದೆ. ಅಲ್ಲಿ ಟೀಕಾದಲ್ಲಿಯ ಗರುಡಾದಿಗಳಿಗೆ ಹೊಳೆದ ವಿಷಯವು ತನಗೆ ಹೊಳೆದದ್ದು ವೇದದಲ್ಲಿಯ ವಿಷಯವೋ ? ಬೇರೆ ಯಾರಾದರೂ ಹೇಳಿದ ವಿಷಯವೋ ! ಎಂದು ಸಂಶಯ ಬಂದಾಗ ಗುರೂಕ್ತಿಯಿಂದ ಇದು ವೇದದ್ದೇ ಎಂದು

ಸಂಶಯ ಪರಿಹಾರವಾಗುತ್ತದೆ. ಬ್ರಹ್ಮನಿಗೆ ಅದೂ ಇಲ್ಲವಾದ್ದರಿಂದ ಸಂಶಯ ಪ್ರಸಕ್ತಿಯೇ ಇಲ್ಲ. ಕೇವಲ ಧರ್ಮಕಾರಣವಾದ ಮನಸ್ಸೇ ಎಂಬುದು ಯುಕ್ತವು.

**ನ ಚೈವಂ ವಾಯ್ವವತಾರಸ್ಯ ಹನೂಮತೋ ಯದ್ಯೈನಮೇಷಬಾಧತೇ ತದಾ ವಿಮೋಚಯಾಮ್ಯಹಂ । ಯದಿಸ್ವ ಶಕ್ನುತೇ ಸ್ವಯಂ ಸ್ವಮೋಚನಾಯ ತದ್ವರಮಿತಿ ತಾತ್ಪರ್ಯ ನಿರ್ಣಯೋ ಕಥಂ ಸಂಶಯೋಕ್ತಿಃ । ತತ್ರ ಕುಂಭಕರ್ಣೇನ ಸುಗ್ರೀವಾಪಹರಣ ಕಾಲೇ ಏವಂ ಸಂಶಯೇನ ಹನೂಮತಃ ಸಹಗಮನೋಕ್ತೇರಿತಿ ವಾಚ್ಯಂ । ತತ್ರಾಪಿ ನಿಶ್ಚಯದ್ವಯಸ್ಯೈವೋಕ್ತೇಃ । ತಥಾ ಹಿ । ಯದಾ ತದೇತಿ ಹೇತ್ವರ್ಥೇಕಾಲಾರ್ಥೇಚಾಪಿ ಭಣ್ಯತ ಇತ್ಯುಕ್ತೇರ್ಯದಾ ತದೇತಿ ಶಬ್ದೌ ಹೇತ್ವರ್ಥೇ ।**

ಹಾಗಿಲ್ಲ, ವಾಯು ಅವತಾರವಾದ ಹನುಮಂತನು, ಕುಂಭಕರ್ಣನು ಸುಗ್ರೀವನನ್ನು ಎತ್ತಿಕೊಂಡು ಹೋಗುವಾಗ ಹಿಂಬಾಲಿಸಿ, ಕುಂಭಕರ್ಣನು ಸುಗ್ರೀವನನ್ನು ಬಾಧಿಸಿದರೆ ಬಿಡುತ್ತೇನೆ ಎಂದುಕೊಂಡನು. ಅಂತೆಯೇ ಹಿಂಬಾಲಿಸಿದನು ಎಂದಿರುವುದರಿಂದ ಹನುಮಂತನಿಗೆ ಸಂಶಯ ಹೇಳಿದೆ. ಎಂದರೆ, ಹಾಗಿಲ್ಲ ಯದಾ ತದಾ ಶಬ್ದಗಳು ಕಾಲಾರ್ಥಕಗಳೂ ಹೌದು, ಕಾರಣಾರ್ಥಕಗಳೂ ಹೌದು ಎಂದು ಹೇಳಿದುದರಿಂದ ಎರಡೂ ಅರ್ಥದಲ್ಲಿಯೂ ಸಂಶಯಾರ್ಥ ಇರುವುದಿಲ್ಲ. ಹೇಗೆಂದರೆ,

**ತಥಾ ಚ ಯದಾ ಯಸ್ಮಾದೇಷ ಕುಂಭಕರ್ಣ ಏನಂ ಸುಗ್ರೀವಂ ಬಾಧತೇ ತದಾ ತಸ್ಮಾದಹಂ ವಿಮೋಚಯಾಮಿ ಮೋಚಯಿಷ್ಯಾಮಿ ಇತ್ಯೇಕೋ ನಿಶ್ಚಯಃ । ತಥಾ ಸ್ವಯಂ ಸುಗ್ರೀವಃ ಕುಂಭಕರ್ಣಾಂಗುಲೀ ವಿವರೇಣ ಸ್ವಮೋಚನಾಯ ಶಕ್ನುತೇ ತದಾ ತದಪಿವರಮಿತಿ ದ್ವಿತೀಯೋ ನಿಶ್ಚಯಃ । ಅತ ಏವೋತ್ತರತ್ರ ನಿರ್ಣಯೋತಥೈವೋಕ್ತಿಃ ।**

ಯಾವ ಕಾರಣದಿಂದ ಕುಂಭಕರ್ಣ ಸುಗ್ರೀವನನ್ನು ಬಾಧಿಸುತ್ತಾನೆ. ಆ ಕಾರಣದಿಂದ ಇವನನ್ನು ರಕ್ಷಿಸುತ್ತೇನೆ ಎಂಬುದು ಒಂದರ್ಥ. ಯಾವಾಗ ಸುಗ್ರೀವ ಬಿಡಿಸಿಕೊಳ್ಳುವನೋ ಆಗ ಕ್ಷೇಮವೇ ಆಯಿತು. ಹೀಗೆ ನಿಶ್ಚಯ ಜ್ಞಾನದಿಂದಲೇ ಹಿಂಬಾಲಿಸಿದ್ದಾಗಲೀ ಸಂಶಯವಿಲ್ಲ. ಅಂತೆಯೇ ಮುಂದಿನ ನಿರ್ಣಯ ಕಥೆಯೂ ಸಂಗತವಾಗಿದೆ.

**ತಲೇ ನ ಚೈನಂ ನಿಜಘಾನ ರಾಕ್ಷಸಃ ಪಿಪೇಷ ಭೂಮೌ ಪತಿತಂ ತತೋಽಪಿ । ಸಮುದ್ಗತೋ ಸೌವಿವರೇಂಗುಲೀನಾಂ ಜಘಾನ ಶೂಲೇನ ಪುನಃ ಸರಾಕ್ಷಸಃ । ಅನೋಽಥ ಶೂಲಂ ಪ್ರಪತತ್ತದೀಕ್ಷ್ಯ ರವೇಃ ಸುತಸ್ಸೋಽಪರಿಮಾರುತಾತ್ಮಜಃ । ಪ್ರಗೃಹ್ಯ ಜಾನೌ ಪ್ರಣಿಧಾಯ ಶೀಘ್ರಂ ಬಭಂಜ**

**ತಂಪ್ರೇಕ್ಷ್ಯಸನಾದ ಚೋಚ್ಚೈರಿತಿ। ಅತೋಬ್ರಹ್ಮವಾಯ್ವೋಃಸಂಶಯಾದ್ಯಭಾವಾತ್ಕಥಂ ವಿಕಲ್ಪಾತ್ಮಕ ಮನ ಆದೀತಿ ಚೇತ್ । ಉಚ್ಯತೇ ।**

ಕುಂಭಕರ್ಣನು ಅಂಗೈಯಿಂದ ಹೊಡೆದ, ಕೆಳಬಿದ್ದ ಸುಗ್ರೀವನನ್ನು ಅಂಗಾಲಿನಿಂದ ತಿಕ್ಕಿದನು ಬೆರಳುಗಳನಡುವಿನಿಂದ ಎದ್ದು ಬರುವ ಸುಗ್ರೀವನನ್ನು ತ್ರಿಶೂಲದಿಂದ ಕೊಲ್ಲಲು ಪ್ರಯತ್ನಿಸಿದನು. ಕುಂಭಕರ್ಣನ ಆ ತ್ರಿಶೂಲ ಅಗಾಧ ಮಹಿಮೆ ಇರುವುದೆಂದು ಕಿತ್ತುಕೊಂಡು ತನ್ನ ಮೊಳಕಾಲಿನಿಂದ ಮುರಿದನು, ಗಟ್ಟಿಯಾಗಿ ಧ್ವನಿ ಮಾಡಿದನು. ಹೀಗೆ ಹೇಳಿದೆ. ಆದುದರಿಂದ ಹನುಮದವತಾರದಲ್ಲಿಯೂ ಸಂಶಯಾದಿಗಳಿಲ್ಲವಾದ್ದರಿಂದ ಸಂಕಲ್ಪ ವಿಕಲ್ಪಾತ್ಮಕ ಮನಸ್ಸೆಂದು, ಐದು ವಿಭಾಗ ಮಾಡಿ, ಬ್ರಹ್ಮದೇವರಿಗೆ ಹೇಳಿದುದು ಹೇಗೆ ಯುಕ್ತವಾಗುತ್ತದೆ ಎಂದರೆ ಹೇಳುತ್ತೇವೆ.

**ತ್ರಯೋಽರ್ಥಾಃ ಸರ್ವವೇದೇಷ್ವಿತ್ಯಾದಿ ಪ್ರಮಾಣೇಭ್ಯಃ ಸರ್ವಸ್ಯಾಪಿ ವೇದಸ್ಯಾರ್ಥತ್ರಯಂ ಸಿದ್ಧಂ। ತಥಾ ಚ ಬ್ರಹ್ಮವಾಯ್ವೋರರ್ಥತ್ರಯವರ್ಣನ ಸಾಮರ್ಥ್ಯ ಸದ್ಭಾವಾದೇವಮರ್ಥ ಏವಂ ಚಾರ್ಥ ಇತಿ ವ್ಯವಸ್ಥಿತ ವಿಕಲ್ಪ ರೂಪ ನಿಶ್ಚಯ ಏವ ನ ತು ಮಿಥ್ಯಾಜ್ಞಾನ ರೂಪ ಸಂಶಯಃ। ಏವಂ ಪರಮಾತ್ಮ ಪ್ರೇರಣಯೈವಾಹಂಕಾರೋಮೀತಿ ಅಸ್ವತಂತ್ರ ಕರ್ತರಿ ಸ್ವಸ್ಮಿನ್ಪರಾಧೀನಕರ್ತೃತ್ವರೂಪಾಹಂಕಾರಸ್ಯಾಪಿ ಸಂಭವೋ ನತು ಮಿಥ್ಯಾಮತಿಃ। ಅತೋ ನ ಬ್ರಹ್ಮವಾಯ್ವೋಃ ಪಂಚವೃತ್ತಿ ಮನೋಽನುಪತ್ತಿರಿತ್ಯಲಂ। ಇತಿ ಮನಃ ಪ್ರಕರಣಮ್ ।**

ಬ್ರಹ್ಮವಾಯುಗಳಿಗೆ ಮಿಥ್ಯಾಜ್ಞಾನ ಸಂಶಯಗಳಿಲ್ಲವಾದರೂ ರೂಪಾಂತರ ವಿಕಲ್ಪ ಅಹಂಕಾರಗಳುಂಟಾದ್ದರಿಂದ ಐದು ರೂಪಗಳಾದ ಮನೋವೃತ್ತಿಗಳು ಬ್ರಹ್ಮವಾಯುಗಳಲ್ಲಿ ಒಪ್ಪಬೇಕೆನ್ನುತ್ತಾರೆ. ಹೇಗೆಂದರೆ, ವೇದಗಳಿಗೆ 'ತ್ರಯೀ' ಎಂದು ಹೆಸರು. ಸರ್ವವೇದರಾಶಿಗೆ ಮೂರು ಅರ್ಥಗಳು ಎಂಬುದು ಪ್ರಮಾಣಸಿದ್ಧವು. ಸರ್ವವೇದಗಳ ಮೂರು ಅರ್ಥಗಳೂ ಹೇಳುವ ಸಮಗ್ರಶಕ್ತಿಯೂ ಬ್ರಹ್ಮವಾಯುಗಳಿಗೆ, ಮಿಥ್ಯಾಜ್ಞಾನರೂಪ ಸಂಶಯವಿಲ್ಲ ಆದರೂ ನಿಶ್ಚಿತವಾದ ಇದೊಂದು ಅರ್ಥ, ಇದೂ ಒಂದು ಅರ್ಥವೆಂಬ ವಿಕಲ್ಪ ಇದ್ದೇ ಇದೆ. ಮತ್ತು ಪರಮಾತ್ಮನ ಪ್ರೇರಣೆಯಿಂದಲೇ ನಾನು ಮಾಡುತ್ತೇನೆ ಎಂದು ಅಸ್ವತಂತ್ರರಾದ ತಮ್ಮಲ್ಲಿ ಕರ್ತೃತ್ವರೂಪ ಜ್ಞಾನವಿದೆ ಇದು ಮಿಥ್ಯಾಜ್ಞಾನವಲ್ಲ, ಅಸ್ವತಂತ್ರ ಪ್ರಕಾರವೇ ಆಗಿದ್ದರೂ ಕರ್ತಾ ಎಂಬ ಜ್ಞಾನವಿದೆ. ಇದು ಅಹಂಕಾರಾತ್ಮಕವಾದ್ದರಿಂದ ಪಂಚ ವೃತ್ತ್ಯಾತ್ಮಕವಾದ ಮನಸ್ಸು ಬ್ರಹ್ಮವಾಯುಗಳದ್ದು, ಇಷ್ಟು ವಿಚಾರ ಸಾಕು.

ಹೀಗೆ "ಮನಸ್ತತ್ತ್ವ ಪ್ರಕರಣ"ವು ಕನ್ನಡಾನುವಾದದೊಂದಿಗೆ ಸಮಾಪ್ತಗೊಂಡಿತು.

# ೨೩. ಇಂದ್ರಿಯ ಪ್ರಕರಣ

ಇದಾನೀಂ ಇಂದ್ರಿಯತ್ವಂ ನಿರೂಪಯಿತುಂ ತದ್ವಿಭಾಗಮಾಹ ।

ಪ.ಸಂ.– ಇಂದ್ರಿಯಾಣ್ಯಪಿ ದ್ವಿವಿಧಾನಿ ।

ಸ್ವಸ್ವವಿಷಯ ದ್ರವಣಶಕ್ತಿಮತ್ವಂ ಇಂದ್ರಿಯ ಲಕ್ಷಣಂ । ತಚ್ಚೇಶ ಲಕ್ಷ್ಮೀ ಮುಕ್ತ ಸ್ವರೂಪೇಂದ್ರಿಯೇಷು ಚಾನುಗತಂ । ಇದಂ ವಿಷಯ ಜಾತಮುದ್ದಿಶ್ಯ ದ್ರುತೇರಿಂದ್ರಿಯಮಿತಿ ನಿರ್ವಚನಾತ್ । ತದುಕ್ತಂ ಭಾಷ್ಯೇ ವಿಷಯದ್ರವಣಾತ್ತೇಷಾಮಿಂದ್ರಿಯತ್ವ ಮುದಾಹೃತಮಿತಿ । ಶ್ರೋತ್ರೇಂದ್ರಿಯಸ್ಯ ವಿಷಯ ದ್ರವಣಂ ತು ಜ್ಞಾನೋತ್ಪತ್ತಿ ಪ್ರಕರಣೇ ವಕ್ಷ್ಯಾಮಃ ।

ಕ್ರಮಪ್ರಾಪ್ತವಾದ ಇಂದ್ರಿಯಗಳನ್ನು ನಿರೂಪಿಸುತ್ತಾರೆ. ಮೊದಲು ವಿಭಾಗವನ್ನು ಮಾಡುತ್ತಾರೆ. ಇಂದ್ರಿಯಗಳು ಎರಡು ವಿಧವಾದವು, ತನ್ನ ತನ್ನ ವಿಷಯಗಳನ್ನು ಕುರಿತು ಹರಿಯುವ ಶಕ್ತಿ ವಿಶಿಷ್ಟತೆಯೇ ಇಂದ್ರಿಯ ಸಾಮಾನ್ಯ ಲಕ್ಷಣವು. ಇದು ಲಕ್ಷ್ಮೀದೇವಿಯಲ್ಲಿಯೂ, ಮುಕ್ತರ ಸ್ವರೂಪೇಂದ್ರಿಗಳಲ್ಲಿಯೂ ಅನುಗತವಾಯಿತು. ವಿಷಯಗಳನ್ನು ಕುರಿತು(ದ್ರುತೇಃ)ತ್ವರದಿಂದ ಹೋಗುವವುಗಳಾದ್ದರಿಂದ ಇಂದ್ರಿಯಗಳೆಂದು ನಿರ್ವಚನವು. ಇದನ್ನೇ ಭಾಷ್ಯದಲ್ಲಿ ವಿಷಯಗಳನ್ನು ಕುರಿತು (ದ್ರವಣ) ಹರಿಯುವಿಕೆಯಿಂದಲೇ ಇವುಗಳಿಗೆ ಇಂದ್ರಿಯಗಳೆಂದು ಹೆಸರು ಎಂದು ಹೇಳಿದೆ. ಶ್ರೋತ್ರೇಂದ್ರಿಯಕ್ಕೆ ವಿಷಯ (ಶಬ್ದಗಳು) ಕುರಿತು ಹೋಗುವಿಕೆಯನ್ನು ಜ್ಞಾನೋತ್ಪತ್ತಿ ಪ್ರಕರಣದಲ್ಲಿ ಹೇಳುತ್ತೇವೆ.

ನ ಚಾಲೋಕೇಽತಿವ್ಯಾಪ್ತಿರಿತಿ ವಾಚ್ಯಂ । ತಸ್ಯ ಜ್ಞಾನೇಚ್ಛಾದಿವತ್ಸವಿಷಯಕತ್ವಾಭಾವಾತ್ । ಇಂದ್ರಿಯಾಣಾಂತು ಮೀಯಂತ ಇತಿ ಮಾತ್ರಾವಿಷಯಾ ಇತಿ ಗೀತಾಭಾಷ್ಯೇ ಮಾತ್ರಾಸ್ಪರ್ಶಾಸ್ತು ಕೌಂತೇಯೇತಿ ಗೀತಾಸ್ಥ ಮಾತ್ರಾ ಶಬ್ದ ವ್ಯಾಖ್ಯಾನರೂಪ ಇಂದ್ರಿಯವಿಷಯತ್ವಂ ಮಾತ್ರಾತ್ವಮಿತಿ ವಿಷಯ ದ್ರವಣೋಕ್ತೇಃ । ನ ಚಾಂಡಾದ್ಬಹಿರ್ಗತೇಷ್ವಿಂದಿಯೇಷ್ವವ್ಯಾಪ್ತಿಃ । ತೇಷಾಂ ಪಂಚ ತನ್ಮಾತ್ರೋಪಾದಾನತ್ವೇನ ತದ್ದ್ರವಣೋಪಪತ್ತೇಃ । ತಾರ್ಕಿಕಾಸ್ತು । ಶರೀರ ಸಂಯುಕ್ತ ಜ್ಞಾನ ಕಾರಣ ಮತೀಂದ್ರಿಯ ಮಿಂದ್ರಿಯಮಿತೀಂದ್ರಿಯ ಲಕ್ಷಣಮಾಹುಃ । ತನ್ನ ಈಶ ಲಕ್ಷ್ಮೀ ಮುಕ್ತಸ್ವರೂಪೇಂದ್ರಿಯೇಷ್ವವ್ಯಾಪ್ತೇಃ ।

ಆಲೋಕ(ಬೆಳಕು)ದಲ್ಲಿ ವಿಷಯಗಳ ಕುರಿತು ಹರಿಯುವ ಲಕ್ಷಣ ಬಂದಿರುವುದರಿಂದ ಅತಿವ್ಯಾಪ್ತಿ—ಎಂದರೆ, ಇಲ್ಲ ಜ್ಞಾನ ಇಚ್ಛಾದಿಗಳಂತೇ ಅದಕ್ಕೆ ಸವಿಷಯಕತೆ ಇಲ್ಲ. ಆದ್ದರಿಂದ ಅತಿವ್ಯಾಪ್ತಿ ಬರುವುದಿಲ್ಲ. (ಮೀಂ ಜ್ಞಾಪನೇ) ಮೀಯಂತೇ ತಿಳಿಯುವವುಗಳಾಗುತ್ತವೆ. ವಿಷಯಗಳ ಮಾತ್ರಾಃ ಎಂದು ವಿಷಯಗಳಿಗೆ ಹೆಸರು. ಹೀಗೆ ಗೀತಾಭಾಷ್ಯದಲ್ಲಿ 'ಮಾತ್ರಾಸ್ಪರ್ಶಾಸ್ತು ಕೌಂತೇಯ' ಬಂದ ಗೀತೆಯಲ್ಲಿಯ ಮಾತ್ರಾ ಶಬ್ದ ವ್ಯಾಖ್ಯಾನ ಸಂದರ್ಭದಲ್ಲಿ ಇಂದ್ರಿಯ ವಿಷಯಕತೆಯೋ ಮಾತ್ರತೆ ಎಂದು ಮಾತ್ರಗಳೆಂದರೆ ವಿಷಯಗಳು. ಅದರ ಸ್ಪರ್ಶವೆಂದರೆ ಅದರ ಕುರಿತು ಹೋಗುವಿಕೆ ಇಂದ್ರಿಯಗಳಿಗೆಂದು ಹೇಳಿರುತ್ತಾರೆ. ಅಂಡದಿಂದ ಹೊರಗಿರುವ ಇಂದ್ರಿಯಗಳಲ್ಲಿ ಈ ಲಕ್ಷಣ ಬರಲಿಲ್ಲವೆಂದು ಅನ್ನಬಾರದು. ಅವುಗಳಲ್ಲಿ (ತನ್ಮಾತ್ರ ರೂಪಾದಿ ವಿಷಯಗಳು) ಅವುಗಳಿಗೆ ಉಪಾದಾನತೆ ಇರುವುದರಿಂದ ವಿಷಯಗಳು ಕುರಿತು ದ್ರವಣರೂಪ ಲಕ್ಷಣವು ಬರುತ್ತದೆ. ತಾರ್ಕಿಕರು ಶರೀರ ಸಂಯುಕ್ತವು ಜ್ಞಾನಕಾರಣವು ಅತೀಂದ್ರಿಯವು ಆಗಿರುವುದೇ ಇಂದ್ರಿಯ ಲಕ್ಷಣವೆಂದು ಹೇಳುತ್ತಾರೆ. ಅದು ಅಪದ್ಧವು. ಶ್ರೀಶನ, ಲಕ್ಷ್ಮೀದೇವಿಯ ಮುಕ್ತರ ಇಂದ್ರಿಯಗಳಲ್ಲಿ ಈ ಲಕ್ಷಣ ಬರುವುದಿಲ್ಲ.

**ತೇಷಾಂ ಶರೀರ ಸಂಯುಕ್ತತ್ವಾಭಾವಾತ್ । ನ ಚ ತೇಷಾಂ ಇಂದ್ರಿಯಾಣಿ ನ ಸಂತ್ಯೇವೇತಿ ವಾಚ್ಯಮ್ । ಪೂರ್ವೋದಾಹೃತ ಬಹು ಪ್ರಮಾಣ ವಿರೋಧಾತ್ । ಕಿಂ ಚ । ರಾಮಕೃಷ್ಣಾದ್ಯವತಾರೇಷು ಚಕ್ಷು ರಾದೀಂದ್ರಿಯಾಣಾಂ ಪ್ರತ್ಯಕ್ಷತ್ವೇನಾತೀಂದ್ರಿಯತ್ವಾಭಾವಾದವ್ಯಾಪ್ತಿಃ । ನ ಹಿ ತತ್ರಾಪಿ ಗೋಲಕಾತಿರಿಕ್ತ ಅತೀಂದ್ರಿಯ ಸದ್ಭಾವಃ ಪ್ರಮಾಣ ಪ್ರಮಿತಃ । ಐಕಾತ್ಮ್ಯ ಪ್ರತ್ಯಯಸಾರಮಿತಿ ಶ್ರುತಿ ವಿರೋಧಾತ್ । ಅಪಿ ಚ । ಬ್ರಹ್ಮಾಂಡಾದ್ಬಹಿರ್ವಿದ್ಯಮಾನೇಷು ತದಾವರಣೇಷ್ವಿಂದ್ರಿಯೇಷ್ವ ವ್ಯಾಪ್ತಿಃ । ತೇಷಾಂ ಶರೀರ ಸಂಯುಕ್ತತ್ವಾಭಾವಾತ್ । ನ ಚ ತಾನಿನ ಸಂತ್ಯೇವೇತಿ ವಾಚ್ಯಮ್ । ಭಾಗವತಾದಿ ಪುರಾಣ ವಿರೋಧಪ್ರಸಂಗಾತ್ ।**

ಅವರಿಗೆ ಸ್ವರೂಪಾತಿರಿಕ್ತ ಇಂದ್ರಿಯಗಳಿಲ್ಲದೇ ದೇಹ ಸಂಯುಕ್ತತೆ ಇಲ್ಲವಾದ್ದರಿಂದ ಅವರಿಗೆ ಇಂದ್ರಿಯಗಳಿಲ್ಲ ಅನ್ನೋಣವೇ ಅಂದರೆ ಹಾಗನ್ನಬಾರದು. ಏಕೆಂದರೆ, ಪೂರ್ವದಲ್ಲಿ ಹೇಳಿದ ಬಹುಪ್ರಮಾಣ ವಿರೋಧ ಬರುವುದರಿಂದ ಮತ್ತು ರಾಮಕೃಷ್ಣಾದಿ ಅವತಾರಗಳಲ್ಲಿ ಚಕ್ಷುರಾದಿ ಇಂದ್ರಿಯಗಳು ಪ್ರತ್ಯಕ್ಷವಾಗಿ ಅತೀಂದ್ರಿಯತೆ ಅಸಂಭವವಾಗಿರುವುದರಿಂದ ಅವತಾರಗಳಲ್ಲಿ ಗೋಲಕಾತಿರಿಕ್ತ ಅತೀಂದ್ರಿಯ ಇಂದ್ರಿಯವು ಪ್ರಮಾಣ ಪ್ರಮಿತವಾಗಿರುವುದಿಲ್ಲ ಮತ್ತು ಸ್ವಗತಭೇದ ವರ್ಜಿತನಾಗಿ ಒಂದೇ ಸಾರ ಸ್ವರೂಪನು. 'ಐಕಾತ್ಮ್ಯ ಪ್ರತ್ಯಯಸಾರಂ ಜ್ಞಾನಾನಂದ ಸ್ವರೂಪನು' ಎಂದು ಶ್ರುತಿ ಹೇಳಿರುವುದರಿಂದ ಅದರ ವಿರೋಧ ಬರುತ್ತದೆ. ಮತ್ತು

ಬ್ರಹ್ಮಾಂಡ ಬಹಿಸ್ಥ ಇಂದ್ರಿಯಗಳಿಗೆ ದೇಹ ಸಂಯುಕ್ತತೆ ಇಲ್ಲದಿರುವುದರಿಂದ ಅವ್ಯಾಪ್ತಿಯು, ಬ್ರಹ್ಮಾಂಡದ ಹೊರಗೆ ಇಂದ್ರಿಯಗಳೇ ಇಲ್ಲ ಅನ್ನಬಾರದು ಭಾಗವತ ವಿರೋಧ ಬರುವುದರಿಂದ—ಇತ್ಯಾದಿ ದೋಷಗಳು ಬರುವುದರಿಂದ ತಾರ್ಕಿಕರು ಹೇಳುವ ಇಂದ್ರಿಯ ಲಕ್ಷಣವು ಅಗ್ರಾಹ್ಯವಾಗಿರುತ್ತದೆ.

**ತಸ್ಮಾತ್ತಲ್ಲಕ್ಷಣಮಯುಕ್ತಂ। ಏತೇನ ತದೀಯಂ ಸ್ಮೃತಿಜನನೇತ್ಯಾದಿ ಲಕ್ಷಣಾಂತರಮಪ್ಯಯುಕ್ತಮ್ । ಸ್ವರೂಪೇಂದ್ರಿಯೇಷ್ವವ್ಯಾಪ್ತೇಃ । ತತ್ರೇಂದ್ರಿಯ ಮನಃ ಸಂಯೋಗೋತ್ಪತ್ತಿ ಕ್ರಮೇಣ ಜ್ಞಾನೋತ್ಪತ್ತೇರಯೋಗಾತ್ । ತಾನಿದ್ವಿವಿಧಾನಿನಿರ್ದಿಶತಿ ।**

ಪ.ಸಂ.—ತತ್ತ್ವಭೂತಾನಿ ತತ್ತ್ವಭಿನ್ನಾನಿ ಚೇತಿ । ಪುನಃ ದ್ವಿವಿಧಂ ಜ್ಞಾನೇಂದ್ರಿಯಾಣಿ, ಕರ್ಮೇಂದ್ರಿಯಾಣಿ ಚೇತಿ ।

**ಜ್ಞಾನ ಕರ್ಮೇಂದ್ರಿಯಾಣ್ಯಪಿ ಸಂಖ್ಯಾಸಂಜ್ಞಾಭ್ಯಾಮಾಹ ।**

ಪ.ಸಂ.— ಘ್ರಾಣಂ ರಸನ ಚಕ್ಷುಃ ಶ್ರೋತ್ರ, ತ್ವಗ್ರೂಪಾಣಿ ಜ್ಞಾನೇಂದ್ರಿಯಾಣಿ ಪಂಚ । ವಾಕ್ಪಾಣಿಪಾಯುಉಪಸ್ಥಾನಿ ಕರ್ಮೇಂದ್ರಿಯಾಣಿ ಪಂಚ । ನಿತ್ಯಾಃ ನಿತ್ಯ ಭೇದೇನ ಪುನಃ ದ್ವಿವಿಧಾನಿ ।

**ತದುಕ್ತಂ ಭಾಷ್ಯೇ । ಶ್ರೋತ್ರಾದೀನಿತು ಪಂಚೈವ ತಥಾವಾಗಾದಿ ಪಂಚಕಂ । ಮನೋ ಬುದ್ಧಿ ಸಹಾಯಾನಿ ದ್ವಾದಶೈವ ಇಂದ್ರಿಯಾಣಿತ್ಯಿತಿ। ನ ಚೈತತ್ಪ್ರಮಾಣೇನೇಂದ್ರಿಯಾಣಾಂ ದ್ವಾದಶತ್ವಾತ್ಕಥಂ ದಶವಿಧತ್ವಮುಕ್ತ ಮಿತಿವಾಚ್ಯಮ್ । ಪೂರ್ವಮನಸ ಇಂದ್ರಿಯತ್ವಾಭಿದಾನಾತ್ । ಬುದ್ಧೇಶ್ಚ ಮನಃ ಪಂಚವೃತ್ತಿಷು ಪ್ರವಿಷ್ಟತ್ವಾತ್ । ಅವಶಿಷ್ಟಾನಾಂ ದಶತ್ವಂ ನ ವಿರುದ್ಧಮಿತಿ ಭಾವಃ ।**

ದೋಷಗಳು ಹಿಂದೆ ಹೇಳಿರುವುದರಿಂದ ತಾರ್ಕಿಕಾದಿಗಳು ಇನ್ನೂ ಹೇಳುವ ಸ್ಮೃತಿಜನಕತೆಯೇ ಮೊದಲಾದ ಇಂದ್ರಿಯ ಲಕ್ಷಣಾಂತರಗಳೂ ಅಯುಕ್ತಗಳೇ ಆಗಿರುತ್ತವೆ ಮತ್ತು ಸ್ವರೂಪೇಂದ್ರಿಯಗಳಲ್ಲಿ ಅವ್ಯಾಪ್ತಿಯೂ ಬರುತ್ತದೆ. ಅಲ್ಲಿ ಇಂದ್ರಿಯ ಮನಸ್ಸಂಯೋಗ ಕ್ರಮದಿಂದ ಜ್ಞಾನೋತ್ಪತ್ತಿಕ್ರಮವಿಲ್ಲದಿರುವುದರಿಂದ, ಇಂದ್ರಿಯಗಳು ಎರಡು ವಿಧಗಳೆಂದು ತಿಳಿಸುತ್ತಾರೆ. ತತ್ವಗಳಾದ ಇಂದ್ರಿಯಗಳು, ತತ್ವಾತಿರಿಕ್ತ ಇಂದ್ರಿಯಗಳೆಂದು ಎರಡು ವಿಧಗಳು ಮತ್ತು ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳೆಂದೂ ಎರಡು ವಿಧಗಳಾಗಿರುತ್ತವೆ. ಜ್ಞಾನ, ಕರ್ಮೇಂದ್ರಿಯ ಗಳಲ್ಲೂ ಸಂಕೇತಗಳಿರುತ್ತವೆ. ಜ್ಞಾನೇಂದ್ರಿಯಗಳು ಮೂಗು, ನಾಲಿಗೆ, ಕಣ್ಣು, ಕಿವಿ, ಚರ್ಮಗಳೆಂದು ಐದು. ಕರ್ಮೇಂದ್ರಿಯಗಳಲ್ಲಿ ವಾಕ್, ಕೈ, ಕಾಲು, ಪಾಯು (ಮಲಮೂತ್ರ ನಿರ್ಗಮನ ಸ್ಥಾನ) ಉಪಸ್ಥ(ರೇತೋ ನಿರ್ಗಮನ ಸ್ಥಾನ) ಹೀಗೆ

ಐದು ಇವೆ. ಇದನ್ನು ಭಾಷ್ಯದಲ್ಲಿ ಹೇಳಿರುತ್ತಾರೆ ಕಿವಿಯೇ ಮೊದಲಾಗಿ ಜ್ಞಾನೇಂದ್ರಿಯಗಳು ಐದು ಹಾಗೆ ವಾಗಾದಿ ಕರ್ಮೇಂದ್ರಿಯಗಳು ಐದು, ಮನಸ್ಸು ಬುದ್ಧಿ ಸಹಾಯಕಗಳು ಹೀಗೆ ಒಟ್ಟಾಗಿ ಹನ್ನೆರಡು ಎಂದು ಇದೆ. ಈ ಪ್ರಮಾಣದಿಂದ ಇಂದ್ರಿಯಗಳು ಹನ್ನೆರಡಾಗಿರಲಾಗಿ, ಹತ್ತು ಎಂದಿರುವುದು ಅಪದ್ಧವಲ್ಲವೇ—ಅಂದರೆ ಅಲ್ಲ. ಮೊದಲು ಮನಸ್ಸಿಗೆ ಇಂದ್ರಿಯತ್ವವನ್ನು ಹೇಳಿರುವುದರಿಂದ ಮತ್ತು ಬುದ್ಧಿಗೆ ಐದು ವೃತ್ತಿಗಳಲ್ಲಿ ಒಂದಾಗಿ ಹೇಳಿರುವುದರಿಂದ—ಈ ಎರಡು ಬಿಟ್ಟು ಉಳಿದವು ಹತ್ತು ಎಂದು ಹೇಳಿರುವುದರಿಂದ ವಿರೋಧವಿರುವುದಿಲ್ಲ.

**ತತ್ತ್ವರೂಪಾಣಾಂ ದಶೇಂದ್ರಿಯಾಣಾಮುಪಾದಾನಮಾಹ ।**

ಪ.ಸಂ.—ತತ್ರ ತತ್ತ್ವರೂಪಾಣ್ಯನಿತ್ಯಾನಿ ಜ್ಞಾನ ಕರ್ಮೇಂದ್ರಿಯರೂಪಾಣಿ ತೈಜಸ ಅಹಂಕಾರೋಪಾದಾನಕಾನಿ । ತತ್ತ್ವಭಿನ್ನಾನಿ ನಿತ್ಯಾನಿ ಜ್ಞಾನಕರ್ಮೇಂದ್ರಿಯಾಣಿ ಈಶ, ಲಕ್ಷ್ಮೀ ಸರ್ವಜೀವಾನಾಂ ಸ್ವರೂಪಭೂತಾನಿ । ತಾನಿ ಸಾಕ್ಷೀತ್ಯುಚ್ಯಂತೇ ।

**ತದುಕ್ತಂ ತೃತೀಯ ಸ್ಕಂಧಭಾಗವತೇ । ತೈಜಸಾನೀಂದ್ರಿಯಾಣ್ಯೇವ ಕ್ರಿಯಾಜ್ಞಾನ ವಿಭಾಗಶ ಇತಿ । ದ್ವಿತೀಯ ಸ್ಕಂಧ ಭಾಗವತೇಪಿ । ತೈಜಸಾತ್ತುವಿಕುರ್ವಾಣಾದಿಂದ್ರಿಯಾಣಿದಶಾಭವನ್ । ಶ್ರೋತ್ರತ್ವಕ್‌ಘ್ರಾಣದೃಕ್ ಜಿಹ್ವಾವಾಗ್ದೋರ್ಮೇಢ್ರಾಂಘ್ರಿಪಾಯವ ಇತಿ। ದ್ವಿತೀಯತಾತ್ಪರ್ಯೇಪಿ। ಅತಿ ಜಾಜ್ವಲ್ಯಮಾನತ್ವಾತ್ತೈಜಸಾನೀಂದ್ರಿಯಾಣ್ಯಪೀತಿ । ಅತ್ರಶ್ರೋತ್ರಾದೀಂದ್ರಿಯಾಣಾಂ ಜ್ಞಾನ ಜನಕತ್ವ ಶಕ್ತಿಃ ವಾಗಾದಿ ಕರ್ಮೇಂದ್ರಿಯಾಣಾಂ ಕರ್ಮಜನಕತ್ವಶಕ್ತಿಃ । ತದುಕ್ತಂ ತೃತೀಯ ಸ್ಕಂಧ ತಾತ್ಪರ್ಯೇ । ಕ್ರಿಯಾ ಶಕ್ತೀನಿವಾಗಾದ್ಯಾನೀಂದ್ರಿಯಾಣೀತರಾಣಿತು । ಜ್ಞಾನ ಶಕ್ತೀನಿ ಮನಸಾ ದೇವಾಶ್ಚಜ್ಞಾನಶಕ್ತಯ ಇತಿ । ನಿತ್ಯೇಂದ್ರಿಯಾಣಾಮಧಿಷ್ಠಾನಮಾಹ ।**

ದ್ವಿತೀಯ ಸ್ಕಂಧ ಭಾಗವತದಲ್ಲಿ, ತೈಜಸ ಅಹಂಕಾರವನ್ನು ಕಡೆಯುವುದರಿಂದ ಹತ್ತು ಇಂದ್ರಿಯಗಳು ಹುಟ್ಟಿದವು. ಕಿವಿ, ಚರ್ಮ, ಮೂಗು, ಕಣ್ಣು, ನಾಲಿಗೆ, ವಾಕ್(ಕಿರಿನಾಲಿಗೆ) ಕೈ, ಉಪಸ್ಥ, ಪಾಯು, ಪಾದ ಹೀಗೆ ಹೇಳಿದೆ. ದ್ವಿತೀಯ ತಾತ್ಪರ್ಯದಲ್ಲಿ ಅತಿ ಪ್ರಕಾಶಮಾನಗಳಾಗಿರುವುದರಿಂದ ತೈಜಸಗಳಾದವು ಇಂದ್ರಿಯಗಳು ಎಂದು, ಕಿವಿಯೇ ಮೊದಲಾದ ಜ್ಞಾನೇಂದ್ರಿಯಗಳಿಗೆ ಜ್ಞಾನ ಹುಟ್ಟಿಸುವ ಶಕ್ತಿ, ವಾಕ್ ಮೊದಲಾದ ಕರ್ಮೇಂದ್ರಿಯಗಳಿಗೆ ಕರ್ಮ ಹುಟ್ಟಿಸುವ ಶಕ್ತಿ, ಹೇಗೆಂದರೆ ತೃತೀಯಸ್ಕಂಧ ತಾತ್ಪರ್ಯದಲ್ಲಿ ಹೇಳಿದೆ. ಜ್ಞಾನೇಂದ್ರಿಯಗಳಿಗೆ ಜ್ಞಾನ ಜನಕ ಶಕ್ತಿ, ಕರ್ಮಜನಕ ಶಕ್ತಿ ಮನಸ್ಸಿಗೆ ಮನನಾದಿ ಶಕ್ತಿ ದೇವತೆಗಳಿಂದಲೇ ಎಂದು ಹೇಳಿದೆ. ನಿತ್ಯ ಇಂದ್ರಿಯಗಳು ಈಶ, ಲಕ್ಷ್ಮೀ ಸರ್ವ ಜೀವರ ಸ್ವರೂಪಗಳೆಂದು ಹಿಂದೆ ಹೇಳಿದೆ.

**ಈಶ ಲಕ್ಷ್ಮ್ಯೋಃ ಮುಕ್ತಾನಾಂ ನಿತ್ಯೇಂದ್ರಿಯ ಸದ್ಭಾವೇ ಪ್ರಮಾಣಾನಿ ತು ಮನಃ ಪ್ರಕರಣ ಏವೋಕ್ತಾನ್ಯನು ಸಂಧೇಯಾನಿ। ಬ್ರಹ್ಮಾದ್ಯ-ಪೇಕ್ಷಯಾ ಈಶ ಲಕ್ಷ್ಮ್ಯೋಃ ಇಂದ್ರಿಯಯೋರ್ವಿಶೇಷಮಾಹ।**

ಪ.ಸಂ.—ಈಶ ಲಕ್ಷ್ಮ್ಯೋಃ ದಶೇಂದ್ರಿಯಾಣ್ಯಪಿ ಪ್ರತ್ಯೇಕಂ ಗಂಧಾದಿ ಸರ್ವಪದಾರ್ಥ ವಿಷಯಕಾಣಿ।

**ಕೇಶನಖಾದೀನ್ಯಪಿ ಸರ್ವ ಗ್ರಾಹಕತ್ವಶಕ್ತಿಮಂತೀತ್ಯಪಿದ್ರಷ್ಟವ್ಯಂ। ತದುಕ್ತಂ ವಿಶ್ವತಶ್ಚಕ್ಷುರುತ ವಿಶ್ವತೋಮುಖೋವಿಶ್ವತೋಬಾಹುರುತ ವಿಶ್ವತಸ್ಪಾದಿತಿಶ್ರುತೌ। ತದ್ ವ್ಯಾಖ್ಯಾನಂ ಚ ಗೀತಾತಾತ್ಪರ್ಯೇ ಸ್ಪಷ್ಟಂ। ಸರ್ವತಃ ಪಾಣಿಪಾದಾದಿರ್ಯತಃ ಪಾಣ್ಯಾದಿ ಶಕ್ತಿಮಾನ್। ಕೇಶಾದಿಷ್ವಪಿ ಸರ್ವತ್ರ ಕೃಷ್ಣ ಕೇಶೋಹಿಯಾದವಃ। ಅಣೋರಣುತರೈರೂಪೈಃಪಾಣಿ ಪಾದಾದಿ ಸಂಯುತೈಃ। ಸರ್ವತ್ರ ಸಂಸ್ಥಿತತ್ವಾದ್ವಾ ಸರ್ವತಃ ಪಾಣಿಪಾದವಾನಿತಿ।**

ಈಶ. ಲಕ್ಷ್ಮೀ ಸರ್ವಜೀವರಿಗೆ, ನಿತ್ಯವಾದ ಇಂದ್ರಿಯಗಳುಂಟು ಎಂಬುದನ್ನು ಮನಸ್ತತ್ವ ಪ್ರಕರಣದಲ್ಲಿ ಹೇಳಿರುವುದನ್ನು ಅನುಸಂಧಾನ ಮಾಡಿಕೊಳ್ಳಬೇಕು. ಬ್ರಹ್ಮಾದಿ ಜೀವರಕ್ಕಿಂತಲೂ ಈಶ ಲಕ್ಷ್ಮೀದೇವಿಯರ ಇಂದ್ರಿಯಗಳು ಅತ್ಯಂತ ವಿಶೇಷ ವಿಲಕ್ಷಣವಾದವು. ಈಶ ಲಕ್ಷ್ಮೀ ಇಂದ್ರಿಯಗಳು ಒಂದೊಂದೂ ಸಕಲ ಗಂಧಾದ್ಗಿ ವಿಷಯಗಳನ್ನು ವಿಷಯೀಕರಿಸುತ್ತದೆ. ಇವರ ಕೂದಲು, ಉಗುರುಗಳು ಸಹಾ ಎಲ್ಲಾ ವಿಷಯಗಳನ್ನು ಗ್ರಹಿಸುತ್ತವೆ. ಇದನ್ನೇ ಪುರುಷಸೂಕ್ತದಲ್ಲಿ ಎಲ್ಲೆಡೆಯಲ್ಲಿಯೂ ಕಣ್ಣು, ಎಲ್ಲೆಡೆಯಲ್ಲಿಯೂ ಮುಖ, ಎಲ್ಲೆಡೆಯಲ್ಲಿಯೂ ಕೈಗಳು, ಎಲ್ಲೆಡೆಯಲ್ಲಿಯೂ ಕಾಲುಗಳು ಎಂದು ಹೇಳಿದೆ. ಇದರ ವ್ಯಾಖ್ಯಾನ ರೂಪವಾದ ಗೀತಾತಾತ್ಪರ್ಯದಲ್ಲಿ ಸ್ಪಷ್ಟವಾಗಿ ಎಲ್ಲೆಡೆಯಲ್ಲಿಯೂ ಮುಖ, ಕಾಲು, ಕೈಗಳೆಂದರೆ ಸರ್ವತ್ರ ವ್ಯಾಪ್ತನಾಗಿ, ಸರ್ವಶಕ್ತನು ಎಂದರ್ಥವೆಂದು ಹೇಳಿದೆ. ಕೇಶಾದಿಗಳಲ್ಲಿಯೂ ಸರ್ವಶಕ್ತಿ ಇರುವುದರಿಂದ ಯದುಕುಲಶ್ರೇಷ್ಠನಾದ ಶ್ರೀಕೃಷ್ಣನು-ಕೃಷ್ಣ ಕೇಶನೆಂದು ಹೇಳಿದೆ.

**ಏತೇನ ರೂಪಗ್ರಾಹಕಂ ಚಕ್ಷುಃ ರಸಗ್ರಾಹಕಂ ರಸನಂ ಇತ್ಯಾದಿ ಚಕ್ಷುರಾದಿ ಲಕ್ಷಣಂ ಪರಾಸ್ತಂ। ಪರಮಾತ್ಮ ಚಕ್ಷುರಾದಾವತಿವ್ಯಾಪ್ತೇಃ। ಏವಂ ಲಕ್ಷ್ಮೀಂದ್ರಿಯಾಣಾಮಪಿ ಸಾಮರ್ಥ್ಯಂ ಬೋಧ್ಯಂ। ಬ್ರಹ್ಮಾದೀಂದ್ರಿಯಾಣಾಂ ನೈತಾದೃಶಂ ಸಾಮರ್ಥ್ಯಮಿತ್ಯಾಹ।**

ಪ.ಸಂ.—ಮುಕ್ತಾನಾಂ ಅಮುಕ್ತಾನಾಮಪಿ ಬ್ರಹ್ಮಾದೀನಾಮಿಂದ್ರಿಯಾಣಿ ತತ್ತದ್ಯೋಗ್ಯ ಪದಾರ್ಥ ವಿಷಯಕಾಣಿ।

**ತತ್ತ್ರದ್ಯೋಗ್ಯೇತಿ । ಚಕ್ಷುಷಾ ರೂಪಗ್ರಹಣಂ ರಸನೇನ ರಸಗ್ರಹಣ ಮಿತ್ಯಾದಿ ರೂಪೇಣೇತ್ಯರ್ಥಃ । ತದುಕ್ತಂ ದ್ವಿತೀಯ ಸ್ಕಂಧ ಭಾಗವತೇ । ಘ್ರಾಣೇನ ಗಂಧಂ ರಸನೇನ ವೈರಸಂ ರೂಪಂ ತು ದೃಷ್ಟ್ಯಾ ಸ್ಪರ್ಶಂ ತ್ವಚೈವ । ಶ್ರೋತ್ರೇಣ ಚೋಪೇತ್ಯನಭೋ ಗುಣಂ ತತ್ಪ್ರಾಯೇಣನಾವೃತ್ತಿಮುಪೈತಿಯೋಗೀತಿ । ಅನಿತ್ಯೇಂದ್ರಿಯಾಣಾಮಾಶ್ರಯಮಾಹ ।**

ಮೂ.ಸಂ — ಅನಿತ್ಯಾನಿ ತತ್ತ್ವಭಿನ್ನಾನಿ ದಶೇಂದ್ರಿಯಾಣಿ ಬ್ರಹ್ಮಾದಿ ಸರ್ವಜೀವಾನಾಂ ।

ಹೀಗೆ ಹೇಳುವುದರಿಂದ ರೂಪವನ್ನು ಗ್ರಹಿಸುವುದು ಚಕ್ಷುಸ್ಸು ರಸಗ್ರಾಹಕ ವಾದುದು ರಸನೇಂದ್ರಿಯವು ಹೀಗೆ ಇಂದ್ರಿಯಗಳ ಲಕ್ಷಣ ಹೇಳುವುದು ಸರಿಯಲ್ಲ ವೆಂದು ನಿರಾಕೃತವಾಯಿತು. ಪರಮಾತ್ಮನ ಇಂದ್ರಿಯಗಳಲ್ಲಿ ಸರ್ವ ವಿಷಯಗ್ರಾಹಕತೆ ಇರುವುದರಿಂದ ಅವ್ಯಾಪ್ತಿ ಬರುತ್ತದೆ. ಶ್ರೀಶನ ಇಂದ್ರಿಯಗಳಂತೆ ಲಕ್ಷ್ಮೀ ಇಂದ್ರಿಯ ಗಳಿಗೂ ಸರ್ವಗ್ರಾಹ್ಯತ್ವವನ್ನು ತಿಳಿಯಬೇಕು. ಬ್ರಹ್ಮಾದಿ ದೇವತೆಗಳ ಇಂದ್ರಿಯ ಗಳಿಗೆ ಅಂಥಹ ಶಕ್ತಿ ಇರುವುದಿಲ್ಲ. ಮುಕ್ತರ, ಅಮುಕ್ತ ಬ್ರಹ್ಮಾದಿ ಜೀವರಾಶಿಗಳ ಇಂದ್ರಿಯಗಳು ಆ ಪದಾರ್ಥ ಮಾತ್ರ ಗ್ರಾಹಕಗಳು ಆಗಿರುತ್ತವೆ. ಅಂದರೆ, ಚಕ್ಷುರಿಂದ್ರಿಯದಿಂದ ರೂಪಮಾತ್ರ ಗ್ರಹಣವು, ರಸನೇಂದ್ರಿಯದಿಂದ ರಸವು, ಮೂಗಿ ನಿಂದ ಗಂಧವು, ಕಿವಿಯಿಂದ ಶಬ್ದವು, ಚರ್ಮದಿಂದ ಶೀತೋಷ್ಣ ಸ್ಪರ್ಶವು ಹೀಗೆ ದ್ವಿತೀಯಸ್ಕಂಧ ಭಾಗವತದಲ್ಲಿ ಮೂಗಿನಿಂದ ಗಂಧ, ನಾಲಿಗೆಯಿಂದ ರಸ, ಕಣ್ಣಿನಿಂದ ರೂಪ, ಚರ್ಮದಿಂದ ಸ್ಪರ್ಶ, ಕಿವಿಯಿಂದ ಆಕಾಶಗುಣವಾದ ಶಬ್ದ, ಪ್ರಾಯಶಃ ಯೋಗಿ ಆದವನು ಇದರ ಆವರ್ತನೆಯನ್ನು ಮಾಡುವುದಿಲ್ಲ, ಅನಿತ್ಯೇಂದ್ರಿಯಗಳ ಆಶ್ರಯವನ್ನು ಹೇಳುತ್ತಾರೆ. ತತ್ತ್ವಭಿನ್ನಗಳಾದ ಅನಿತ್ಯಗಳಾದ ಇಂದ್ರಿಯಗಳು ಬ್ರಹ್ಮಾದಿ ಸರ್ವಜೀವಸ್ಥೂಲದೇಹದಲ್ಲಿರುವವುಗಳು.

**ತತ್ ಶರೀರಾಣಾಮನಿತ್ಯತ್ವೇನ ತನ್ನಾಶೇ ತದಿಂದ್ರಿಯಾಣಾಮಪಿ ನಾಶ ಇತಿ ಭಾವಃ । ನನ್ವನಿತ್ಯ ಬ್ರಹ್ಮಾದೀಂದ್ರಿಯಾಣಾಮುಪಾದಾನಂ ಕಿಮ್ । ನ ತಾವತ್ತೈಜಸಾಹಂಕಾರಃ । ತಸ್ಯ ಬ್ರಹ್ಮಾಂಡಾದ್ಬಹಿರೇವ ಸತ್ತ್ವಾತ್ । ತನ್ಮಾತ್ರಸ್ಯ ಸ್ಥೂಲೇಂದ್ರಿಯ ಕಾರಣತ್ವಾಭಾವಾಚ್ಚ । ನಾಪಿಪಂಚಭೂತಾನಿ । ತೇಷಾಂ ಅಪಿ ಬಹಿರ್ಗತತ್ವಾದಿತಿ ಚೇತ್ । ಉಚ್ಯತೇ ।**

ಬ್ರಹ್ಮಾದಿ ಸರ್ವಜೀವರ ದೇಹಗಳು ಅನಿತ್ಯಗಳಾದ್ದರಿಂದ ದೇಹಗಳ ನಾಶದಿಂದ ಇಂದ್ರಿಯಗಳ ನಾಶವಾಗುತ್ತವೆ ಎಂದು ಅಭಿಪ್ರಾಯವು. ಸರ್ವಜೀವರ ಇಂದ್ರಿಯ ಗಳಿಗೆ ಉಪಾದಾನವಾದುದು ಯಾವುದು, ತೈಜಸಾಹಂಕಾರವಲ್ಲ, ಅದು ಬ್ರಹ್ಮಾಂಡದ ಹೊರಗೆ ಇರುವುದರಿಂದ ಅವುಗಳ ವಿಷಯಗಳಿಗೆ ಸ್ಥೂಲೇಂದ್ರಿಯ ಕಾರಣತೆ ಅಸಂಭವ

ವಾದ್ದರಿಂದ ಪಂಚಭೂತಗಳೆಂದರೆ ಅವು ಬ್ರಹ್ಮಾಂಡದ ಹೊರಗಿರುವವುಗಳೇ ಆಗಿರುವು ದರಿಂದ ಅಸಿಸ್ಯ, ಇಂದ್ರಿಯಗಳ ಉಪಾದಾನ ಯಾವುದು ಎಂದರೆ, ಹೇಳುತ್ತೇವೆ.

**ಬ್ರಹ್ಮಾಂಡಾಂತಃ ಪಂಚಭೂತ ಸೃಷ್ಟ್ಯನಂತರಂ ಬ್ರಹ್ಮಾದಿಗತ ಸೂಕ್ಷ್ಮೇಂದ್ರಿಯಾಣಾಮೇವ ಭೂತೈರುಪಚಯಃ । ಬ್ರಹ್ಮಾಂಡಾಂತಃ ಪಂಚಭೂತ ಸೃಷ್ಟಿಶ್ಚಾತ್ಮನ ಆಕಾಶಃ ಸಂಭೂತ ಇತ್ಯಾದಿ ಶ್ರುತಿ ಸಿದ್ಧಾ । ಅತೋನ ದೋಷಃ । ತದುಕ್ತಂ ಭಾಷ್ಯೇ । ನಿತ್ಯಾನ್ಯೇತಾನಿ ಸೌಕ್ಷ್ಮ್ಯೇಣ ಹೀಂದ್ರಿಯಾಣಿತು ಸರ್ವಶಃ । ತೇಷಾಂ ಭೂತೈರುಪಚಯಃ । ಸೃಷ್ಟಿ ಕಾಲೇವಿಧೀಯತ ಇತಿ । ತೃತೀಯ ಸ್ಕಂಧ ತಾತ್ಪರ್ಯೇಽಪಿ । ಸೂಕ್ಷ್ಮೇಂ ದ್ರಿಯಾಣಿ ಸಂತ್ಯೇವ ಸ್ಯುಃ ಸ್ಥೂಲಾನ್ಯಹಂ ಕೃತೇಃ । ಭೂತೇಭ್ಯಶ್ಚೋಪ ಚೀಯಂತೇ ಪುನರ್ಬ್ರಹ್ಮ ಶರೀರತ ಇತಿ । ಯುಕ್ತಿಪಾದೀಯ ಸುಧಾಯಾ ಮಪಿ । ಸೂಕ್ಷ್ಮರೂಪೇಣ ನಿತ್ಯಮಪೀಂದ್ರಿಯ ಮಹಂಕಾರ ಭೂತಾಂ ಶೈರುಪಚಿತತ್ವಾತ್ಪ್ರಾಕೃತಮಿತಿ । ಇಂದ್ರಿಯಾಭಿಮಾನಿನ ಆಹ ।**

ಪ.ಸಂ.—ಬ್ರಹ್ಮಾದಯಃ ಸೂರ್ಯಾದಯಶ್ಚ ತದಭಿಮಾನಿನಃ ।

ಬ್ರಹ್ಮಾಂಡದ ಒಳಗೆ ಪಂಚಭೂತದ ಸೃಷ್ಟ್ಯನಂತರ ಬ್ರಹ್ಮಾದಿಯ ಸೂಕ್ಷ್ಮೇಂದ್ರಿಯ ಗಳಿಗೆ ಪಂಚಭೂತಗಳಿಂದ ಉಪಚಯವಾಗುತ್ತದೆ. ಬ್ರಹ್ಮಾಂಡದೊಳಗೆ ಪಂಚಭೂತ ಗಳ ಸೃಷ್ಟಿಯು 'ಆತ್ಮನ ಆಕಾಶಸ್ಸಂಭೂತಃ' ಪರಮಾತ್ಮನಿಂದ ಆಕಾಶ, ಆಕಾಶದಿಂದ ವಾಯು ಇತ್ಯಾದಿ ಶ್ರುತಿಗಳೇ ಪ್ರಮಾಣವು. ಆದುದರಿಂದ ದೋಷವಿಲ್ಲ. ಇದನ್ನು ಭಾಷ್ಯದಲ್ಲಿ ನಿತ್ಯವಾದ ಇಂದ್ರಿಯಗಳು ಸೂಕ್ಷ್ಮಗಳು ಸರ್ವ ಜೀವರಲ್ಲಿ ಅವುಗಳಿಗೆ ಪಂಚಭೂತಗಳಿಂದ ಉಪಚಯವು(ದೊಡ್ಡದಾಗುವಿಕೆ). ಇದು ಸೃಷ್ಟಿಕಾಲದಲ್ಲಿ ಮಾಡ ಲಾಗುತ್ತದೆ ಹೀಗೆ ಹೇಳಿದೆ. ತೃತೀಯ ತಾತ್ಪರ್ಯದಲ್ಲಿಯೂ ಸಹ ಸೂಕ್ಷ್ಮವಾದ ಇಂದ್ರಿಯಗಳು ಅಹಂಕಾರತತ್ವದ ದಶೆಯಿಂದ ಸ್ಥೂಲಗಳಾಗುತ್ತವೆ, ಭೂತಗಳಿಂದ ಉಪಚಯವನ್ನು ಹೊಂದುತ್ತದೆ. ಬ್ರಹ್ಮಾದಿ ಶರೀರವನ್ನಾರಂಭಿಸಿ ಎಂದು ಯುಕ್ತಿ ಪಾದೀಯ ಸುಧಾದಲ್ಲಿಯೂ ಹೇಳಿದೆ. ಇಂದ್ರಿಯಗಳು ಸೂಕ್ಷ್ಮರೂಪದಿಂದ ನಿತ್ಯ ಗಳಾದರೂ ಅಹಂಕಾರ ಭೂತಾಂಶಗಳಿಂದ ಉಪಚಿತಗಳಾಗಿ ಪ್ರಾಕೃತಗಳೂ ಎನಿಸಿ ಕೊಳ್ಳುತ್ತವೆ ಹೀಗೆ ಹೇಳಿದೆ—ಇಂದ್ರಿಯಾಭಿಮಾನಿಗಳು ಬ್ರಹ್ಮಾದಿಗಳು ಹಾಗೂ ಸೂರ್ಯಾದಿ ದೇವತೆಗಳು.

**ತದುಕ್ತಂ ಕಾಠಕಭಾಷ್ಯೇ । ಸೋಮ ವಿತ್ತಪ ಸೂರ್ಯಾಪ್ಯಾ ಅಶ್ವ್ಯ ಗ್ನೀಂದ್ರೇಂದ್ರಸೂನವಃ । ಯಮೋ ದಕ್ಷಶ್ಚೇಂದ್ರಿಯೇಶಾ ಇತಿ । ತಂತ್ರ ಸಾರೇಪಿ । ದಿಗ್ವಾಯುಸೂನು ಸೂರ್ಯಾಶ್ಚ ವರುಣಶ್ಚಾಶ್ವಿನಾವಪಿ । ವಹ್ನಿ ದಕ್ಷಾವಿಂದ್ರಸೂನುರ್ಮಿತ್ರಶ್ಚೈವಮನುಸ್ತಥಾ । ಇಂದ್ರಿಯಾಣಾ**

ಇತಿ । ವಿಷಯ ದ್ರವಣಾತ್ತೇಷಾಂ ಇಂದ್ರಿಯತ್ವಮುದಾಹೃತಮ್ । ತೇಷಾಂ ನಿಯಾಮಕಃ ಪ್ರಾಣಃ ಸ್ಥಿತ ಏವಾಖಿಲ ಪ್ರಭುರಿತಿ । ಐತರೇಯ ಭಾಷ್ಯೇಪಿ ।

ಲಾಠಕ ಭಾಷ್ಯದಲ್ಲಿ ಚಂದ್ರ, ಕುಬೇರ, ಸೂರ್ಯ, ವರುಣ, ಅಶ್ವಿನೀದೇವತೆಗಳು, ಅಗ್ನಿ, ಜಯಂತ, ಯಮ. ದಕ್ಷ ಈ ಹತ್ತು ದೇವತೆಗಳು ಇಂದ್ರಿಯಕ್ಕೆ ಒಡೆಯರು ಎಂದು ತಂತ್ರಸಾರದಲ್ಲಿ ವಾಕ್, ವಾಯುಸೂನು, ಸೂರ್ಯ, ವರುಣ, ಅಶ್ವಿನಿಗಳು, ಅಗ್ನಿ, ದಕ್ಷ, ಜಯಂತ, ಮಿತ್ರ, ಮನು ಈ ಹತ್ತು ದೇವತೆಗಳು ಇಂದ್ರಿಯಾಭಿಮಾನಿಗಳೆಂದು ಹೇಳಿರುತ್ತದೆ. ವಿಷಯಗಳ ಕುರಿತು ಹರಿಯುವುದರಿಂದ ಇವುಗಳಿಗೆ ಇಂದ್ರಿಯಗಳೆಂದು ಹೆಸರು. ಇವರೆಲ್ಲರಿಗೂ ನಿಯಾಮಕನು ಪ್ರಾಣನು, ಇವರೆಲ್ಲರಲ್ಲೂ ಇದ್ದು ಸಮರ್ಥನಾಗಿರುವವನು. ಇನ್ನು ಐತರೇಯ ಭಾಷ್ಯದಲ್ಲಿಯೂ,

ಅಧ್ಯಾತ್ಮಮಗ್ನಿರ್ವಾಗಾಖ್ಯಶ್ಚಕ್ಷುಃ ಸೂರ್ಯಃ ಪ್ರಕೀರ್ತಿತಃ। ಮಿತ್ರೋ ಯಮಶ್ಚ ವರುಣಃ ಕುಬೇರಶ್ಚ ದಿಗೀಶ್ವರಾಃ । ಶ್ರೋತ್ರಾಭಿಮಾನಿನಃ ಸರ್ವೇ ವೈದಿಕಶ್ರವಣೋಚಿತಂ । ಶ್ರೋತ್ರಂ ಚಂದ್ರಸ್ತಥಾಸ್ಮಾರ್ತಂ ತಾಂತ್ರಿಕ ಶ್ರವಣೋಚಿತಂ । ಶ್ರೋತ್ರಂತು ವರುಣಃ ಕಾವ್ಯಶಾಸ್ತ್ರಾರ್ಥಂ ಮಿತ್ರಏವ ಚ । ಶ್ರೋತ್ರಂ ಯನ್ನೀತಿ ಶಾಸ್ತ್ರಾರ್ಥಂ ಕುಬೇರಸ್ತತ್ರ ಕೀರ್ತಿತ ಇತಿ। ಷಟ್‌ಪ್ರಶ್ನಭಾಷ್ಯೇಪಿ । ತಸ್ಮಾದಿಂದ್ರಸ್ತ್ವಿಂದ್ರಿಯಾತ್ಮಾ ತಸ್ಯ ಸೋಮೋನ್ನ ದೇವತೇತಿ । ನನ್ವಿಂದ್ರಿಯಾಭಿಮಾನಿನೋ ದೇವಾಃ ಬ್ರಹ್ಮ ವಾಯುಃ ಶರೀರೇಷು ಸಂತಿ ನ ವಾ । ನೇತಿ ಪಕ್ಷೇತಯೋರಿಂದ್ರಿಯ ವ್ಯಾಪಾರೋ ನಸ್ಯಾತ್ । ಯದಿ ಸಂತಿ ತರ್ಹಿ ತಯೋಃ ಸರ್ವಜೀವೋತ್ತಮತ್ವಂ ನ ಸ್ಯಾತ್ । ಏವಂ ಪರಮಾತ್ಮೇಂದ್ರಿಯೇಷ್ವೇತೇಷಾಂ ಸತ್ತ್ವೇ ಪರಮಾತ್ಮನಃ ಸ್ವಾತಂತ್ರ್ಯಂ ನಸ್ಯಾತ್ । ತಥಾ ಮುಕ್ತಾನಾಮಿಂದ್ರಿಯೇಷು ತತ್ಸತ್ತ್ವೇತೇಷಾಂ ಸಂಸಾರಸಾಮ್ಯಂ ಸ್ಯಾದಿತಿ ಚೇನ್ನ ।

ವಾಗಭಿಮಾನಿ ಆದ ಅಗ್ನಿ ಅಧ್ಯಾತ್ಮನಾದವನು, ಸೂರ್ಯಚಕ್ಷುರಭಿಮಾನಿಯಾದ್ದರಿಂದ ಚಕ್ಷುಸ್ಸು ಅನಿಸಿಕೊಳ್ಳುತ್ತಾನೆ. ಸೂರ್ಯ, ಯಮ, ವರುಣ, ಕುಬೇರ ಈ ನಾಲ್ವರೂ ದಿಗಭಿಮಾನಿಗಳು. ಶ್ರೋತ್ರೇಂದ್ರಿಯಕ್ಕೆ ಅನೇಕರು ಅಭಿಮಾನಿಗಳು ಒಂದೊಂದು ವಿಷಯಕ ಶ್ರವಣಗಳಿಗೆ, ವೈದಿಕ ಶ್ರವಣಾರ್ಹ ವಿಷಯಕ ಶ್ರವಣಕ್ಕೆ ಚಂದ್ರನು ಹಾಗೆ ಸ್ಮಾರ್ತ(ಸ್ಮೃತಿ)ವಿಷಯಕ ಶ್ರವಣಾರ್ಹವಾದವುಗಳಿಗೆ ವರಣನು. ಕಾವ್ಯಶಾಸ್ತ್ರಾದಿ ಅರ್ಥಗಳ ಶ್ರವಣಕ್ಕೆ ಮಿತ್ರನು, ನೀತಿ ಶಾಸ್ತ್ರಾರ್ಥಗಳ ಶ್ರವಣಕ್ಕೆ ಕುಬೇರನು ಹೀಗೆ ಪ್ರಸಿದ್ಧರಾಗಿರುತ್ತಾರೆ. ಷಟ್‌ಪ್ರಶ್ನ ಭಾಷ್ಯದಲ್ಲಿಯೂ, ಆದಕಾರಣದಿಂದಲೇ ಇಂದ್ರನು ಅಭಿಮಾನಿಯೂ ಅದಕ್ಕೆ ಅನ್ನಾಭಿಮಾನಿ ಚಂದ್ರನು. ಇಂದ್ರಿಯಾ

ಭಿಮಾನಿದೇವತೆಗಳು ಬ್ರಹ್ಮವಾಯುಗಳ ಶರೀರಗಳಲ್ಲಿ ಇದ್ದಾರೆಯೋ ? ಇಲ್ಲವೇ ? ಇಲ್ಲವೆಂದಲ್ಲಿ ಇಂದ್ರಿಯ ವ್ಯಾಪಾರವೇ ಇಲ್ಲವಾಗಲಿ, ಇದ್ದಾರೆ ಎಂದರೆ ಅವರಿಗೆ ಜೀವೋತ್ತಮತೆ ಇಲ್ಲವಾಗಲಿ, ಪರಮಾತ್ಮನ ಇಂದ್ರಿಯಗಳಲ್ಲಿ ಅವರಿರುವುದಾದರೆ ಅವನಿಗೆ ಸರ್ವಸ್ವಾತಂತ್ರ್ಯವಿಲ್ಲವಾಗಲಿ ಮತ್ತು ಮುಕ್ತರ ಇಂದ್ರಿಯಗಳಲ್ಲಿ ಇವರಿದ್ದರೆ ಅವರಿಗೆ ಸಂಸಾರಾವಸ್ಥೆ ಬರಲಿ—ಹೀಗೆ ಪ್ರಶ್ನೆಗಳು ಬಂದರೆ ಹೇಳುತ್ತಾರೆ, ಹಾಗನ್ನ ಬಾರದು.

ಇಂದ್ರಿಯಾಭಿಮಾನಿದೇವಾನಾಂ ಪರಮಾತ್ಮಾಂಗೇಭ್ಯೋ ಜಾತತ್ವೇನ ಸಾಯುಜ್ಯಭಾಕ್ತ್ವೇನ ಚ ಮುಕ್ತೌ ತದಾಶ್ರಿತತ್ವಾವಶ್ಯಂ ಭಾವಾತ್ । ತದುಕ್ತಂ ದ್ವಿತೀಯ ತಾತ್ಪರ್ಯೇ । ಸ್ವೋತ್ಪತ್ತ್ಯಂಗೇಷು ದೇವಾನಾಂ ಅನ್ಯೇಷಾಂ ಪಾದ ಮೂಲತಃ । ಮುಕ್ತಿಸ್ತು ವಿಹಿತಾ ವಿಷ್ಣೋರ್ನಿರ್ದಿಷ್ಟೇಷು ಯಥಾ ವಚಃ ಇತಿ । ಸೂತ್ರಭಾಷ್ಯೇ ಚ । ಓಂ ಅಂಗೇಷು ಯಥಾಶ್ರಯಭಾವಃ ಓಂ । ಅಂಗದೇವತಾನಾಂ ಯಥಾಯಥಾ ಪರಮೇಶ್ವರಾಂಗಾಶ್ರಯತ್ವಂ ಚಕ್ಷೋಃ ಸೂರ್ಯೋ ಅಜಾಯತೇತ್ಯಾದಿ ತಥಾ ಭಾವನಾ ಕರ್ತವ್ಯೇತ್ಯಾದಿ ।

ಇಂದ್ರಿಯಾಭಿಮಾನಿ ದೇವತೆಗಳು ಪರಮಾತ್ಮನ ಇಂದ್ರಿಯಗಳಿಂದಲೇ ಹುಟ್ಟಿರುವುದರಿಂದ, ಸಾಯುಜ್ಯಮೋಕ್ಷ ಭಾಗಿಗಳಾಗಿರುವುದರಿಂದ, ಮುಕ್ತಿಯಲ್ಲಿ ಪರಮಾತ್ಮಾಶ್ರಯತ್ವವನ್ನು ಅವಶ್ಯ ಒಪ್ಪಲೇಬೇಕಾದುದರಿಂದ ಭಗವದಿಂದ್ರಿಯಾಧಿಷ್ಠಾನ ಒಪ್ಪಲೇಬೇಕು. ತೃತೀಯ ತಾತ್ಪರ್ಯದಲ್ಲಿ, ತಮ್ಮ ಉತ್ಪತ್ತಿಗೆ ಕಾರಣವಾದ ವಿಷ್ಣುವಿನ ಅಂಗಗಳಲ್ಲಿ ಇಂದ್ರಿಯಾಭಿಮಾನಿದೇವತೆಗಳಿಗೆ, ಮಿಕ್ಕ ದೇವತೆಗಳಿಗೆ ಪಾದತಳದಲ್ಲಿ ಹೀಗೆ ಮುಕ್ತಿಯು ಸೂತ್ರಭಾಷ್ಯದಲ್ಲಿಯೂ ಪರಮಾತ್ಮನ ಅಂಗಗಳಲ್ಲಿ ಯಥಾಯೋಗ್ಯವಾಗಿ 'ಚಕ್ಷುಸೂರ್ಯೋ ಅಜಾಯತ' ಇತ್ಯಾದಿ ಶ್ರುತ್ಯುಕ್ತ ಕ್ರಮವಾಗಿ ಅವರವರ ಹುಟ್ಟಿನ ಸ್ಥಾನಗಳಲ್ಲಿ ಅವರವರ ಸ್ಥಿತಿಗಳ ಎಂದು ತಿಳಿಯುವುದು.

ಅಂಗೈಃ ಪರಾದ್ಯೈ ಹಿ ದೇವಾ ವಿಸೃಷ್ಟಾಸ್ತತ್ತದ್ಗುಣಾನ್ ಪರಮೋ ಸಂಹರೇತ । ತಾಂ ಶ್ಚಾಪಿ ತತ್ರೈವ ವಿಚಿಂತ್ಯದೇವಾನ್ ಸ್ಥಾನಂ ಮುಮುಕ್ಷುಃ ಪರಮಂ ವ್ರಜೇತೇತಿ । ಬ್ರಹ್ಮವಾಯು ಶರೀರೇಷ್ವಿಂದ್ರಿಯಾಭಿಮಾನಿ ದೇವಾನಾಂ ವಿವಾದ ಪೂರ್ವಕಂ ನಿರ್ಗಮನಪ್ರವೇಶಯೋರ್ಬೃಹದಾರಣ್ಯಕೋಪನಿಷದಾದಾವುಕ್ತೇಃ । ನ ಚ ತಚ್ಛರೀರಂ ನ ಬ್ರಹ್ಮ ಶರೀರಮಿತಿ ವಾಚ್ಯಂ । ಬೃಹದ್ಭಾಷ್ಯ ವಿರೋಧ ಪ್ರಸಂಗಾತ್ । ತಥಾ ಹಿ ಬೃಹದ್ಭಾಷ್ಯಂ । ಅಹಂ ಶ್ರೇಯೋ ವಿವಾದಂ ತು ಯೇನ ಕೃತ್ವಾಖಿಲಾಃ ಸುರಾಃ । ಅಸಮರ್ಥಾಃ ಸ್ವರಕ್ಷಾಯಾಂ ಸವಾಯುಃ ಸುರನಾಯಕಃ । ವಿವದಂತೋಽಖಿಲಾ ದೇವಾ ವಾಯುರ್ನಾರಾಯಣಂ ಪ್ರಭುಂ । ಅಹಂ

**ಶ್ರೇಯಾನಹಂ ಶ್ರೇಯಾನಿತಿವಾಯುಪುರಃ ಸರಾಃ । ಉಕ್ತಂ ಭಗವತಾ ತೇನ ಯೇನತ್ಯಕ್ತೇಽಖಿಲಾ ಅಪಿ । ಸ್ಥಾತುಂ ನ ಶಕ್ತಾಃ ಸ ಶ್ರೇಯಾನಿತ್ಯುಕ್ತಾಃ ಪುನರಾಗತಾಃ ।**

ಪರಶಬ್ದವಾಚ್ಯನಾದ ಪರಮಾತ್ಮನ ಅಂಗದಿಂದ ಯಾವ ಯಾವ ದೇವತೆಗಳು ಹುಟ್ಟಿದರೋ ಆ ಗುಣಗಳನ್ನು ಆ ಅವಯವಗಳಲ್ಲಿ ಅನುಸಂಧಾನದೊಂದಿಗೆ ಚಿಂತಿಸಬೇಕು. ಆ ದೇವತೆಗಳನ್ನು ಅಲ್ಲಲ್ಲೇ ಚಿಂತಿಸಬೇಕು. ಇದರಿಂದ ಮುಮುಕ್ಷುವು ಮುಕ್ತನಾಗುತ್ತಾನೆ ಎಂದು ಶ್ರುತಿಯು ಬ್ರಹ್ಮವಾಯುಗಳ ದೇಹೇಂದ್ರಿಯಗಳಲ್ಲಿ ಇಂದ್ರಿಯಾಭಿಮಾನಿ ದೇವತೆಗಳ ವಿವಾದ ಪೂರ್ವಕ ಹೋಗುವಿಕೆ, ಬರುವಿಕೆಗಳು ಬೃಹದಾರಣ್ಯಕದಲ್ಲಿ ಹೇಳಿದೆ. ಅದು ಬ್ರಹ್ಮನ ಶರೀರವೇ ಅಲ್ಲ ಅನ್ನಬಾರದು. ಬೃಹದ್ಭಾಷ್ಯ ವಿರೋಧ ಬರುವುದರಿಂದ ಬೃಹದ್ಭಾಷ್ಯದಲ್ಲಿ ಎಲ್ಲಾ ದೇವತೆಗಳೂ 'ನಾನು ಶ್ರೇಷ್ಠ, ನಾನೇ ಸಮರ್ಥ'ನೆಂದು ವಿವಾದ ಮಾಡಿದರೂ ಸ್ವರಕ್ಷಣೆಯಲ್ಲೇ ಅಸಮರ್ಥರಾದ ಆ ದೇವತೆಗಳನ್ನು ವಾಯುದೇವರು ನಾರಾಯಣನಲ್ಲಿ ಕರೆದುಕೊಂಡು ಹೋದರು. ಅಲ್ಲಿಯೂ ನಾನೇ ಹೆಚ್ಚು, ನಾನೇ ಹೆಚ್ಚೆಂದು ವಿವಾದಿಸಿದರು. ಆಗ ಪರಮಾತ್ಮನು–ಪರೀಕ್ಷೆಯಾಗಲಿ, ಯಾರು ಸ್ಥಾನ ಬಿಟ್ಟರೆ, ದೇಹ ಬಿದ್ದು ಹೋಗುತ್ತದೆಯೋ ಅವರೇ ಶ್ರೇಷ್ಠರು ಎಂದನು. ಆ ಮಾತು ಕೇಳಿ ಎಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಪರೀಕ್ಷೆಯಲ್ಲಿ ತೊಡಗಿದರು.

**ಉತ್ಕ್ರಾಂತಾಶ್ಚ ಪುನಃ ಸರ್ವೇತದ್ವಿಜ್ಞಪ್ತ್ಯೈ ಪೃಥಕ್ ಪೃಥಕ್ । ಉತ್ಕ್ರಾಂತೇಷು ಬ್ರಹ್ಮದೇಹಾಚ್ಛರೀರಂ ನ ಪಪಾತ ಹ । ಋತಉತ್ಕ್ರಾಂತಮೇಕಂ ತು ತದನ್ಯೇ ನಿವಸಂತಿ ಹಿ । ಪ್ರಾಣ ಉಚ್ಚಕ್ರಮಿಷ್ಯತಿ ಸ್ಥಾತುಂ ನಾಶಕ್ನುವನ್ಪರ ಇತಿ। ಐತರೇಯ ಭಾಷ್ಯಮಪಿ । ವಾಚಾಹಿಂಸಾಮ ಕುರ್ವಂಸ್ತೇ ವಿವದಂತಃ ಪರಸ್ಪರಂ । ತೇ ವಿಷ್ಣೋರಾಜ್ಞಯಾಪ್ರೋಚನ್ನುತ್ಕ್ರಾಮಾಮ ಪೃಥಕ್ ಪೃಥಕ್ । ದೇಹಾದಬ್ಜಭವಸ್ಯಾಸ್ಮಾದ್ಯಸ್ಮಿನ್ ಉತ್ಕ್ರಾಂತ ಏವ ಹಿ । ಶರೀರಂ ಪದ್ಯತೇ ಶ್ರೇಯಾನ್ಸನ ಇತ್ಯವಧಾರ್ಯತಾಂ। ತತಃ ಕ್ರಮೇಣ ಚಾಗ್ನ್ಯಾದ್ಯಾ ನಿಷ್ಕ್ರಾಂತಾಸ್ತೇಷುಸರ್ವಶಃ । ನಿಷ್ಕ್ರಾಂತೇಷು ನನ್ವೈಪಾತಃ ಶರೀರಸ್ಯಾಭವತ್ಕ್ವಚಿತ್ । ವಾಯಾವುತ್ಕ್ರಾಂತ ಏವೈ ತಚ್ಛರೀರಮಪತತ್ ಕ್ಷಿತೌ । ಪುನಸ್ತೇ ಪ್ರಾವಿಶನ್ ಸರ್ವೇ ವಹ್ನಿಸೂರ್ಯೌ ಶಶೀ ಶಿವಃ । ನೋತ್ಥಾನಮಭವತ್ತೇಷು ಪ್ರವಿಷ್ಟೇಷ್ವಪಿ ಸರ್ವಶಃ । ವಾಯೌ ಪ್ರವಿಷ್ಟೇತೂತ್ಥಾನಂ ಕಾಯಸ್ಯಾಸೀತ್ತದೈವಚೇತಿ ।**

ಬ್ರಹ್ಮದೇವರ ದೇಹದಲ್ಲಿ ಅಗ್ನ್ಯಾದಿಗಳೆಲ್ಲರೂ ಒಬ್ಬೊಬ್ಬರೇ ಹೊರ ಹೊರಟರು. ದೇಹವು ಬೀಳಲಿಲ್ಲ ಒಬ್ಬ ವಾಯು ವಿನಃ ಎಲ್ಲರೂ ದೇಹ ಬಿಟ್ಟು ಹೋದರು.

ಪ್ರಾಣನು ಯಾವಾಗ ಬಿಟ್ಟು ಹೋದನೋ ಆಗ ದೇಹ ಬಿದ್ದು ಹೋಯಿತು. ಹೀಗೆ ಐತರೇಯ ಭಾಷ್ಯದಲ್ಲಿದೆ. ಆಗ ಶಾಂತಚಿತ್ತರಾಗಿಯೇ ಪರಸ್ಪರ ವಿವಾದಗ್ರಸ್ತರಾಗಿ ಪುನಃ ವಿಷ್ಣು ಆಜ್ಞೆಯಿಂದ ಯಾರು ಸೇರಿದರೆ ದೇಹ ಏಳುವುದೋ ಅವರೇ ಶ್ರೇಷ್ಠ ರೆಂದು–ಪುನಃ ಅಗ್ನ್ಯಾದಿಗಳು ಒಬ್ಬೊಬ್ಬರಾಗಿ ಪ್ರವೇಶಿಸಿದರು. ದೇಹವು ಏಳಲಿಲ್ಲ, ಕೊನೆಗೆ ವಾಯುದೇವರು ಪ್ರವೇಶಿಸುತ್ತಿರಲಾಗಿ ದೇಹವು ಎದ್ದು ನಿಂತಿತು.

ನನು ಬ್ರಹ್ಮದೇಹೇ ವಾಯುಪ್ರವೇಶ ನಿರ್ಗಮನಾಭ್ಯಾಂ ತಚ್ಛರೀರ-ಪಾತಾಪಾತಾವಯುಕ್ತೌ । ತಚ್ಛರೀರಾಭಿಮಾನಿನಶ್ಚತುರ್ಮುಖಸ್ಯ ತನ್ನಿ-ಯಾಮಕಸ್ಯ ಪರಮಾತ್ಮನಶ್ಚ ಸತ್ತ್ವೇನ ತತ್ರ ತಯೋರಸ್ವಾತಂತ್ರ್ಯ ಪ್ರಸಂ-ಗಾದಿತಿ ಚೇನ್ನ । ಇಂದ್ರಿಯಾಭಿಮಾನಿನಾಮಹಂಕಾರ ಪರಿಹಾರಾರ್ಥಂ ಬಲ ಪರೀಕ್ಷಾರ್ಥಂ ಚ ತಯೋರೌದಾಸೀನ್ಯೇನ ಸ್ಥಿತಿ ಸಂಭವಾತ್ । ತದುಕ್ತಂ ಐತರೇಯ ಭಾಷ್ಯೇ । ಉದಾಸೀನವದಾಸ್ತಾಂತೌ ಕೇಶವಶ್ಚಾಬ್ಜ ಸಂಭವಃ । ತೇಷಾಂ ಬಲ ಪರೀಕ್ಷಾರ್ಥಂ ವಾಯ್ವಾದೀನಾಂ ಸಮಸ್ತಶ ಇತಿ । ಯದ್ವಾ । ಏಕಾಂಶೇನ ಸ್ವದೇಹೇ ಬ್ರಹ್ಮಾಸುಪ್ತವತ್‌ಸ್ಥಿತಃ । ಅಂಶಾಂತರೇಣ ಬಹಿರ್ನಿರ್ಗತಃ । ತದುಕ್ತಂ ತೃತೀಯ ತಾತ್ಪರ್ಯೇ ।

ಬ್ರಹ್ಮನ ದೇಹದಲ್ಲಿ ವಾಯುವಿನ ಗಮನ ನಿರ್ಗಮನಗಳಿಂದ ದೇಹದ ಬೀಳು ಏಳುಗಳು ಹೇಳಿದ್ದು ಸರಿ ಅಲ್ಲ, ಏಕೆಂದರೆ, ದೇಹಾಭಿಮಾನಿ ಬ್ರಹ್ಮ ಅವನ ನಿಯಾಮಕ ನಾದ ಪರಬ್ರಹ್ಮರಿರಲಾಗಿ ಬೀಳು ಏಳುಗಳು ಹೇಗೆ ? ಎಂದರೇ ನಿಜವೇ, ಆದರೇ ಇಂದ್ರಿಯಾಭಿಮಾನಿ ದೇವತೆಗಳ ಅಹಂಕಾರ ಪರಿಹಾರಾರ್ಥವಾಗಿಯೂ, ಅವರವರ ಬಲ ಪರೀಕ್ಷಾರ್ಥವಾಗಿಯೂ. ಬ್ರಹ್ಮ ಪರಬ್ರಹ್ಮ ಉದಾಸೀನರಾಗಿದ್ದುದರಿಂದ ದೇಹದ ಬೀಳು ಏಳುಗಳಾದವು. ಇದನ್ನು ಐತರೇಯ ಭಾಷ್ಯದಲ್ಲಿ ಹೇಳಿದೆ. ಉದಾಸೀನದವ ರಂತೆ ಕೇಶವ ಅಬ್ಜಸಂಭವರು ಇದ್ದರು. ಆ ದೇವತೆಗಳ ವಾಯುದೇವರ ಪರೀಕ್ಷಾರ್ಥ ವಾಗಿಯೇ ಎಂದು ಅಥವಾ ಬ್ರಹ್ಮದೇವರು ಒಂದಂಶದಿಂದ ದೇಹದಲ್ಲಿ ನಿದ್ದೆ ಹೋದವ ರಂತೆ ಇದ್ದು ಒಂದಂಶದಿಂದ ಹೊರಗೆ ಹೊರಟರು. ಆದ್ದರಿಂದ ಹಾಗಾಯಿತು ಎಂದು ತೃತೀಯ ತಾತ್ಪರ್ಯದಲ್ಲಿ ಇದೆ.

ಅಂಶೇನ ಸುಪ್ತೋ ಬ್ರಹ್ಮಾಭೂದಂಶೇನ ನಿರಗಾತ್ತಥಾ । 'ಸ್ವದೇಹಾ-ದ್ವಾಯು ಸಹಿತೋ ವಿಷ್ಣುನಾ ಚ ಜಗತ್ಪ್ರಭುಃ । ತಮುತ್ಥಾಪಯಿತುಂ ದೇವಾಸ್ತಾನ್ಯತೇತ್ರೀನ್ಮಹಾಬಲಾನ್ । ನ ಶಕ್ನುವನ್ನೇಕ ಸಂಸ್ಥಾಸ್ತತಸ್ತೇತ್ವ ವಿಶಂಸ್ತ್ರಯಃ । ಉದತಿಷ್ಠದ್ಬ್ರಹ್ಮದೇಹಸ್ತದಾ ತೇಷಾಂ ಪ್ರಭಾವತ ಇತಿ । ಪನ್ನೇವಂ ಬ್ರಹ್ಮವಾಯು ದೇಹೇಷ್ವಿಂದ್ರಿಯಾಭಿಮಾನಿನಾಂ ಸತ್ತ್ವೇಽಪಿ ತನ್ನಿ ಯಾಮಕತ್ವಂ ನ ಸಂಭವತಿ । ತಯೋರುತ್ತಮತ್ವಾತ್ । ಕಿಂ ತು ತನ್ನಿ-ಯಮ್ಯತಯ್ಯೈವೇತಿ ವಕ್ತವ್ಯಂ ।

ಒಂದಂಶದಿಂದ ನಿದ್ದೆ ಹೋದವನಂತೇ ಬ್ರಹ್ಮನಿದ್ದನು. ಇನ್ನೊಂದಂಶದಿಂದ ಹೊರ ಹೊರಟನು. ಬ್ರಹ್ಮದೇವರು ತನ್ನ ದೇಹದಿಂದ ವಾಯುವಿನಿಂದಲೂ ವಿಷ್ಣುವಿನಿಂದಲೂ ಸಹ ಹೊರಗೆ ಹೊರಟನು. ದೇಹ ಬಿದ್ದು ಹೋಯಿತು. ಅದನ್ನೆಬ್ಬಿಸಲು ಯಾವ ದೇವತೆಯೂ ಸಮರ್ಥನಾಗಲಿಲ್ಲ ಎಲ್ಲರೂ ಏಕೀಭವಿಸಿದರೂ ಸಮರ್ಥರಾಗಲಿಲ್ಲ. ಯಾವಾಗ ಬ್ರಹ್ಮ ವಾಯು ವಿಷ್ಣು ಮೂರು ದೇವತೆಗಳು ದೇಹಪ್ರವೇಶಮಾಡಿದರೋ ಆಗ ದೇಹ ನಿಂತಿತು. ಮೂವರ ಪ್ರಭಾವದಿಂದಲೇ ಒಟ್ಟಿನಲ್ಲಿ ಬ್ರಹ್ಮವಾಯುಗಳ ದೇಹದಲ್ಲಿ ಇಂದ್ರಿಯಾಭಿಮಾನಿ ದೇವತೆಗಳಿದ್ದರೂ ಬ್ರಹ್ಮವಾಯು ಉತ್ತಮರಾದ್ದರಿಂದ ನಿಯಾಮಕರಾಗಿ ಅಲ್ಲ, ನಿಯಮ್ಯರಾಗಿಯೇ ಇರುತ್ತಾರೆ.

ತಥಾ ಚ ಬ್ರಹ್ಮದೇಹೇ ಬ್ರಹ್ಮಣ ಏವೇತರೇಂದ್ರಿಯ ದೇವತಾ ನಿಯಾಮಕತ್ವ ಸಂಭವಾದ್ವಾಯು ಪ್ರವೇಶೋ ವ್ಯರ್ಥಃ । ಏವಂ ವಾಯು ಶರೀರೇಪಿ ವಾಯೋರೇವೇತರ ನಿಯಾಮಕತ್ವ ಸಂಭವಾತ್ ಬ್ರಹ್ಮ ಪ್ರವೇಶೋ ವ್ಯರ್ಥ ಇತಿ ಚೇನ್ನ ।

ಬ್ರಹ್ಮನದೇಹದಲ್ಲಿ ಇಂದ್ರಿಯದೇವತೆಗಳು ನಿಯಮ್ಯರಾಗಿದ್ದ ಮೇಲೆ ವಾಯು ದೇವರ ಅಗತ್ಯವಿಲ್ಲ. ಹೀಗೆ ವಾಯು ದೇಹದಲ್ಲಿ ಬ್ರಹ್ಮನ ಪ್ರವೇಶ ಅಗತ್ಯವಿಲ್ಲ ಅಲ್ಲವೇ ಅಂದರೆ ಹಾಗೆನ್ನಬಾರದು.

ಪರಸ್ಪರೋಪಕಾರೇಣೈವ ದೇಹದ್ವಯ ಉಭಯೋಃ ಪ್ರವೇಶ ಸಂಭವಾತ್ । ತದುಪಕಾರಶ್ಚ ಬೃಹದ್ಭಾಷ್ಯ ಏವೋಕ್ತಃ । ಪ್ರಾಣಂ ವಿನಾ ನ ಚ ಬ್ರಹ್ಮಾ ತಂ ವಿನಾ ಪ್ರಾಣ ಏವ ಚ । ಅನ್ಯೋನ್ಯಾಪಾಶ್ರಯಾಚ್ಛಕ್ತಾ ಸ್ಥಾತುಮನ್ಯೇ ಕುತಸ್ತತಃ । ಅನ್ನಾಭಿಮಾನೀ ಬ್ರಹ್ಮೈವ ಪ್ರಾಣೋ ವಾಯುರುದಾಹೃತಃ । ಅನ್ಯೋನ್ಯಾನುಪ್ರವಿಷ್ಟೌತೌ ಸರ್ವದೈವತು ಸಂಸ್ಥಿತೌ। ವಾಯುಂ ವಿನಾ ಬ್ರಹ್ಮಣೋಪಿ ದೇಹೋಯಂ ಪೂತಿಮೇಷ್ಯತಿ ವಾಯುಶ್ಚ ಶೋಷಮಾಪ್ನೋತಿ ವಿನಾ ಬ್ರಹ್ಮಾಣಮಂಜಸೇತಿ । ಏತೇನ ನ ಚಾದಿತ್ಯಸ್ಯಾಪ್ಯತತ್ಸರ್ವಶರೀರಸ್ಥತ್ವಂ ಭವದಭ್ಯುಪಗಮಾದಿತಿ ವಾಚ್ಯಂ। ತಸ್ಯಾಪಿ ಬ್ರಹ್ಮಾದಿ ಸರ್ವ ಶರೀರಸ್ಥತ್ವಾನುಪಪತ್ತೇರಿತಿ ಸರ್ವಗತತ್ವಾಧಿಕರಣ ಟೀಕಾ ವಿರೋಧೋಪಿ ಪರಾಸ್ತಃ । ನಿಯಾಮಕತ್ವಾಭಾವೇಪಿ ನಿಯಮ್ಯ ತಯಾ ಸ್ಥಿತ್ಯಂಗೀಕಾರಾತ್ । ಮುಕ್ತಾನಾಮಪೀಂದ್ರಿಯಾಭಿಮಾನಿನೋ ದೇವಾ ಅಧಮಾನಾಂ ನಿಯಾಮಕತಯೋತ್ತಮಾನಾಂ ನಿಯಮ್ಯತಯಾ ತತ್ತದಿಂದ್ರಿಯೇಷು ಬಹಿರ್ವಾಸ್ವೇಚ್ಛಯಾ ವರ್ತಂತೇ । ತದುಕ್ತಂ ಛಾಂದೋಗ್ಯ ಭಾಷ್ಯೇ ।

ಪರಸ್ಪರ ಉಪಕಾರದಿಂದಲೇ ಎರಡೂ ದೇಹಗಳಲ್ಲಿ ಪ್ರವೇಶವು ಆಗುತ್ತದೆ. ಆ ಉಪಕಾರವನ್ನೇ ಬೃಹದ್ಭಾಷ್ಯದಲ್ಲಿ ಹೇಳಿದೆ. ಪ್ರಾಣನನ್ನು ಬಿಟ್ಟು ಬ್ರಹ್ಮನು,

ಬ್ರಹ್ಮನನ್ನು ಬಿಟ್ಟು ಪ್ರಾಣನು ಇರುವುದಿಲ್ಲ. ಇವರೀರ್ವರೂ ಅನ್ಯೋನ್ಯಾಶ್ರಯಿಗಳು ಹೀಗೆ ಹೇಳಿದೆ. ಇವರು ಬಿಟ್ಟಿರುವುದಿಲ್ಲ. ಅನ್ನಕ್ಕೆ ಮುಖ್ಯಾಭಿಮಾನಿ ಬ್ರಹ್ಮನು, ಹಾಗೆಯೇ ಮುಖ್ಯಾಭಿಮಾನಿ ಪ್ರಾಣನು. ಈವರೀರ್ವರೂ ತಮ್ಮ ತಮ್ಮ ಎರಡೂ ದೇಹಗಳಲ್ಲಿ ಪ್ರವಿಷ್ಟರಾಗಿಯೇ ಇರುತ್ತಾರೆ. ವಾಯುದೇವರಿಲ್ಲದೇ ಬ್ರಹ್ಮದೇಹವು ಪವಿತ್ರವೆನಿಸುವುದಿಲ್ಲ. ಬ್ರಹ್ಮದೇವರಿಲ್ಲದ ವಾಯುದೇಹವು ಚೆನ್ನಾಗಿ ವೈಶಿಷ್ಟ್ಯವನ್ನು ಹೊಂದುವುದಿಲ್ಲ ಹೀಗೆ ಹೇಳಿರುತ್ತದೆ. ಹೀಗಿರುವುದರಿಂದ ಆದಿತ್ಯನಿಗೂ ಸರ್ವಶರೀರ ಗಳಲ್ಲಿರುವಿಕೆ ಇರಲಿ ನೀವೇ ಒಪ್ಪಿರುವುದರಿಂದ, ಹೀಗೆನ್ನಬಾರದು. ಬ್ರಹ್ಮಶರೀರದಲ್ಲಿ ರುವಿಕೆ ಒಪ್ಪಿರುವುದರಿಂದ, ಈ ರೀತಿ ಒಪ್ಪಿರುವುದರಿಂದ ಸರ್ವಗತತ್ವಾಧಿಕರಣ ವಿರೋಧವು ಪರಿಹಾರವಾಯಿತು. ಇಂದ್ರಿಯಾಭಿಮಾನಿ ದೇವತೆಗಳಿಗೆ ನಿಯಾಮಕತೆ ಇಲ್ಲವಾಗಿ ನಿಯಮ್ಯತೆ ಒಪ್ಪಿರುವುದರಿಂದ ಮುಕ್ತರ ಇಂದ್ರಿಯಗಳಲ್ಲೂ ಇಂದ್ರಿಯಾ ಭಿಮಾನಿ ದೇವತೆಗಳು, ಮುಕ್ತರಾದ ನಂತರ ಸೋತ್ತಮರ ದೇಹಗಳಲ್ಲಿ ನಿಯಮ್ಯ ರಾಗಿ ಸ್ವಾಧಮರಲ್ಲಿ ನಿಯಾಮಕರಾಗಿ, ದೇಹದಲ್ಲಿಯೂ ಹೊರಗೂ ಸ್ವೇಚ್ಛೆಯಿಂದ ಇರುತ್ತಾರೆ. ಇದನ್ನು ಛಾಂದೋಗ್ಯ ಭಾಷ್ಯದಲ್ಲಿ,

ತುರೀಯಾಯಾಮವಸ್ಥಾಯಾಂ ಪ್ರಾಣಾದೇವ ನಿಬೋಧನಂ । ತಥಾಪಿ ಸಂಸ್ಮೃತಿಸ್ತತ್ರ ಪ್ರಾಣವಶ್ಯತಯಾ ಭವೇತ್ । ಪ್ರಾಣಸ್ಯವಶ್ಯ- ತಾನಾಮತದ್ಭಕ್ತ್ಯಾ ತತ್ಪ್ರಸಾದತಃ । ಪ್ರಾಣಾವಶ್ಯೇ ಮನೋವಶ್ಯಮಿಂದ್ರಿ ಯಾಣಿ ಚ ಸರ್ವಶ ಇತಿ । ಪ್ರಾಣಾದೇವ ನಿಬೋಧನಮಿತ್ರತ್ರೈವಕಾರಃ ಪ್ರಾಣಾನ್ನಿಬೋಧನಂ ಭವತ್ಯೇವೇತ್ಯಯೋಗವ್ಯವಚ್ಛೇದಾರ್ಥಃ । ನತ್ವಿತರ ದೇವತಾ ನಿಯಮನವ್ಯವಚ್ಛೇದಾರ್ಥಃ । ಅನ್ಯಥಾಮುಕ್ತ ಸ್ವಕೀಯಾ ವರಯಂ ತೃತಾ ಚ ಮುಕ್ತಾವಪಿ ಬ್ರಹ್ಮಪುರಃ ಸರಾಹಾವಿತ್ಯನುವ್ಯಾಖ್ಯಾನ ವಿರೋಧಾಪತ್ತೇಃ । ತಥಾಽಥರ್ವಣಭಾಷ್ಯೇಽಪಿ । ಪ್ರತಿಬಿಂಬೋ ಹರೇಃ ಪ್ರಾಣಸ್ತಸ್ಯಚಾನ್ಯಾಃ ಕಲಾಃ ಕ್ರಮಾತ್ । ಕಲಾನಾಂ ದೇವತಾ ಅನ್ಯಾದೇ ವತಾನಾಂ ನರಾ ಅಪಿ । ತಸ್ಮಾತ್ ಸರ್ವೇಷು ಮುಕ್ತೇಷು ನರೇಷ್ವಪಿ ನಿಯಾಮಕಾಃ । ತಿಷ್ಠಂತಿ ನಾತ್ರಸಂದೇಹಃ ಪರಮಾತ್ಮನಿ ಚಾಖಿಲಾ ಇತಿ । ಸ್ವರೂಪೇಂದ್ರಿಯಂ ಸಾಕ್ಷೀತ್ಯುಕ್ತಂ ।

ಕೊನೆಯ: ಅವಸ್ಥೆಯಲ್ಲಿ ಮುಕ್ತಿಯೋಗ್ಯರಿಗೆ ಪ್ರಾಣನಿಂದಲೇ ವಿಜ್ಞಾನವು. ಅಂತ್ಯದಲ್ಲಿ ಯೋಗ್ಯ ಸಂಸ್ಮರಣವಾದರೂ ಪ್ರಾಣವಶ್ಯತೆರೂಪವಾಗಿಯೇ, ಪ್ರಾಣವಶ್ಯತೆ ಎಂದರೆ, ಪ್ರಾಣನಲ್ಲಿ ಭಕ್ತಿ, ಪ್ರಾಣನ ಅನುಗ್ರಹದಿಂದಲೇ ಎಂಬ ಜ್ಞಾನ, ಪ್ರಾಣನಲ್ಲಿ ವಶ್ಯತಾ ಹುಟ್ಟುತ್ತಿರಲು ಮನಆದಿ ಇಂದ್ರಿಯಗಳಲ್ಲಿ ತದಭಿಮಾನಿದೇವತೆಗಳಲ್ಲಿ ವಶ್ಯತಾ ಹುಟ್ಟುತ್ತದೆ. ವಶ್ಯತೇ ಎಂದರೆ ಅವರಲ್ಲಿ ಭಕ್ತಿ. ಅವರ ಅನುಗ್ರಹದಿಂದಲೇ ಪುರುಷಾರ್ಥಗಳೆಂಬ ಜ್ಞಾನ.

ಛಾಂದೋಗ್ಯ ಭಾಷ್ಯದಲ್ಲಿಯು ಪ್ರಾಣಾದೇವ ನಿಬೋಧನಂ ಎಂಬಲ್ಲಿಯು ಏವಕಾರವು ಪ್ರಾಣನಿಂದ ನಿಬೋಧನಂ (ವಿಜ್ಞಾನವು) ಆಗುವುದೆಂದು ಅಯೋಗ ವ್ಯವಚ್ಛೇದಾರ್ಥಕ ಏವಕಾರವು ಅನ್ಯರಿಂದಲ್ಲ ಎಂಬರ್ಥದ ಅನ್ಯಯೋಗ ವ್ಯವಚ್ಛೇದಾರ್ಥಕವಲ್ಲ. ಹಾಗಿಲ್ಲವಾದರೆ, ಮುಕ್ತನು ತನ್ನವರನ್ನು ನಿಯಮಿಸುತ್ತಾನೆ. ಮುಕ್ತಿಯಲ್ಲಿ ಬ್ರಹ್ಮನೇ ಮೊದಲಾದವರು, ಸ್ವಾ ಅವರವರನ್ನು ನಿಯಮಿಸುತ್ತಾರೆ. ಎಂಬ ಅನುವ್ಯಾಖ್ಯಾನ ವಿರೋಧ ಬರುತ್ತದೆ. ಹಾಗೆಯೇ, ಅಥರ್ವಣ ಭಾಷ್ಯದಲ್ಲಿ ಶ್ರೀಹರಿಗೆ ಪ್ರಾಣನು ಪ್ರತಿಬಿಂಬನು. ಪ್ರಾಣನಿಗೆ ಅನ್ಯರು ಪ್ರತಿಬಿಂಬರು. ಕ್ರಮವಾಗಿ ವಾಯು ಕಲಾಗಳಿಗೆ (ಅಂಶಗಳಿಗೆ) ದೇವತೆಗಳು ಪ್ರತಿಬಿಂಬರು, ದೇವತೆಗಳಿಗೆ ನರರು ಪ್ರತಿಬಿಂಬರು, ಆದುದರಿಂದ ಸರ್ವಮುಕ್ತರಲ್ಲಿ ನರರಲ್ಲೂ ನಿಯಾಮಕರು ಇದ್ದೇ ಇರುತ್ತಾರೆ. ಎಲ್ಲಾ ದೇಹಗಳಲ್ಲಿಯೂ ಸೋತ್ತಮರು ನಿಯಾಮಕರು. ಈ ವಿಷಯದಲ್ಲಿ ಸಂದೇಹವಿಲ್ಲ. ಪರಮಾತ್ಮನಲ್ಲಿ ಎಲ್ಲರೂ, ಎಲ್ಲರಲ್ಲಿಯೂ ಪರಮಾತ್ಮನು ಅತಿ ಮುಖ್ಯನು. ಇತರರು ಅಮುಖ್ಯರು. ಸ್ವರೂಪೇಂದ್ರಿಯವನ್ನೇ ಸಾಕ್ಷಿಯೆಂದು ಸೂಚಿಸಿರುತ್ತಾರೆ.

**ತಸ್ಯ ಮುಕ್ತ್ಯವಸ್ಥಾಯಾಂ ಸಾಕ್ಷಾದೇವ ಸರ್ವ ಪದಾರ್ಥ ವಿಷಯಕತ್ವೇ ವಿವಾದಾಭಾವಾತ್ಸಂಸಾರಾವಸ್ಥಾಯಾಂ ವಿಷಯಾನಾಹ ।**

ಪ.ಸಂ.—ಸಂಸಾರಾವಸ್ಥಾಯಾಮಪಿ ಸಾಕ್ಷಿಸ್ವರೂಪೇಂದ್ರಿಯಸ್ಯಾತ್ಮಾ ಮನಸ್ತದ್ಧರ್ಮಾಃ ಸುಖದುಃಖಾದಯೋ ಅವಿದ್ಯಾ ಕಾಲೋಽವ್ಯಾಕೃತಾಕಾಶಶ್ಚ ಸಾಕ್ಷಾದೇವ ವಿಷಯಾಃ ।

**ಪ್ರಮಾಣಪದ್ಧತ್ಯುಕ್ತಾನ್ವಿಷಯಾನನುವದತಿ । ಆತ್ಮಾ ಮನ ಇತ್ಯಾದಿನಾ । ಆತ್ಮಾದೀನಾಂ ಸಾಕ್ಷಿವೇದ್ಯತ್ವಂ ಚಾನುಪದಮೇವ ದರ್ಶಯಿಷ್ಯಾಮಃ । ಸಾಕ್ಷಾದೇವೇತಿ । ನ ತು ಘಟಾದಿವತ್ ಜ್ಞಾನದ್ವಾರೇತ್ಯರ್ಥಃ । ಪರಂಪರಾ ಸಂಬಂಧೇನ ಸಾಕ್ಷಿ ವಿಷಯಾಃ ಕ ಇತ್ಯಾಕಾಂಕ್ಷಾಯಾಮಾಹ ।**

ಪ.ಸಂ.—ಬಾಹ್ಯೇಂದ್ರಿಯದ್ವಾರಾ ಶಬ್ದಾದಯೋಽಪಿ ಸಾಕ್ಷಿವಿಷಯಾಃ ।

ಸ್ವರೂಪೇಂದ್ರಿಯವೇ ಸಾಕ್ಷೀ ಎನಿಸಿಕೊಳ್ಳುವುದೆಂದು ಹೇಳಿದಿರಿ. ಮುಕ್ತ್ಯವಸ್ಥೆಯಲ್ಲಿ ಎಲ್ಲಾ ವಿಷಯಗಳೂ ಸಾಕ್ಷಾದ್ವಿಷಯಗಳಾಗುತ್ತವೆ. ಸಂಸಾರಾವಸ್ಥೆಯಲ್ಲಿ ಸಾಕ್ಷಿ ವಿಷಯಗಳು ಯಾವುವು ಎಂದರೆ, ಆತ್ಮಾ ಮನಸ್ಸು, ಅದರ ಧರ್ಮಾಧರ್ಮಗಳು ಸುಖದುಃಖಾದಿಗಳು, ಅವಿದ್ಯಾ, ಕಾಲ, ಅವ್ಯಾಕೃತಾಕಾಶ ಇವುಗಳು, ಸಾಕ್ಷಾತ್ತಾಗಿಯೇ ವಿಷಯಗಳಾಗುತ್ತವೆ. ಪ್ರಮಾಣ ಪದ್ಧತಿಯಲ್ಲಿ ಆತ್ಮಾದಿಗಳ ಸಾಕ್ಷಾದ್ವಿಷಯಕತೆ ಹೇಳಿರುತ್ತದೆ. ಸಾಕ್ಷಿಗೆ ಆತ್ಮಾದಿ ವಿಷಯಕತೆಯನ್ನು ಸದ್ಯದಲ್ಲೇ ನಿರೂಪಿಸುತ್ತೇವೆ. ಘಟಾದಿಗಳಂತೇ ಜ್ಞಾನ ದ್ವಾರಾ ವಿಷಯಗಳಲ್ಲಿ ಪರಂಪರೆಯಾಗಿ ಸಾಕ್ಷಿ ವಿಷಯಗಳು ಯಾವುವು ಎಂದರೆ, ಬಾಹ್ಯೇಂದ್ರಿಯದ್ವಾರ ಗಂಧಾದಿಗಳು, ರೂಪಾದಿಗಳು.

**ನನ್ವಾತ್ಮಾಕಾಶಾದಿ ವ್ಯತಿರಿಕ್ತಾನಾಂ ಬಾಹ್ಯೇಂದ್ರಿಯಾಗೋಚರಾಣಾಂ ಧರ್ಮಾಧರ್ಮಾದೀನಾಂ ಕಥಂ ಸಾಕ್ಷಿ ವಿಷಯತ್ವಮಿತ್ಯತ ಆಹ ।**

ಪ.ಸಂ.—ಜ್ಞಾತತಯಾಽಜ್ಞಾತತಯಾ ಸರ್ವೇಽಪಿ ಅತೀಂದ್ರಿಯಾಃ ಸಾಕ್ಷಿವಿಷಯಾಃ ।

**ಶ್ರುತ್ಯನುಮಾನಾದಿ ಜನ್ಯ ಅತೀಂದ್ರಿಯ ಪದಾರ್ಥ ವಿಷಯಕ ಜ್ಞಾನಸ್ಯ ಸಾಕ್ಷಿವಿಷಯತ್ವೇನ ತದ್‌ದ್ವಾರಾತದ್ವಿಷಯಸ್ಯಾಪಿ ಸಾಕ್ಷಿವಿಷಯತ್ವಮಿತಿ ಭಾವಃ । ಅಜ್ಞಾತತಯೇತಿ । ಯಸ್ಮಿನ್ ಅರ್ಥೇ ಯಸ್ಯ ಪುರುಷಸ್ಯ ಕದಾಪಿ ಪ್ರಮಾಣ ಪ್ರವೃತ್ತಿರೇವ ನಾಸ್ತಿ ಸೋಽಪಿ ಸಾಕ್ಷಿ ವಿಷಯ ಏವ । ಏತದತಿರಿಕ್ತಂ ಕಿಂಚಿನ್ನಾವೇದಿಷಮಿತಿ ತತ್ಪದಾರ್ಥ ವಿಷಯಕ ಜ್ಞಾನಸ್ಯ ಸಾಕ್ಷಿವೇದ್ಯತ್ವೇನ ತದ್ವಿಷಯಸ್ಯಾಪಿ ತದ್ವಿಷಯತ್ವಾದಿತ್ಯರ್ಥಃ । ಏತಚ್ಚ ಪದ್ಧತಿ ನ್ಯಾಯಾಮೃತ ಸುಧಾಸು ಉಪಪಾದಿತಮಿತಿ ಭಾವಃ । ನನು ಸಾಕ್ಷೀನಾಮ ನ ಪ್ರಮಾಣಾಂತರಂ । ಮಾನಾಭಾವಾದ್ಗೌರವಾಚ್ಚ । ಐಂದ್ರಿಯಕಾಣಾಂ ಚೇಂದ್ರಿಯೈರೇವ ಜ್ಞಾನಸಂಭವಾತ್ । ಅತೀಂದ್ರಿಯಾಣಾಂ ಚಾನುಮಾನಾಗಮಾಭ್ಯಾಂ ಸಿದ್ಧಿ ಸಂಭವಾದಿತ್ಯತ ಆಹ ।**

ಪ.ಸಂ.—ಸಾಕ್ಷ್ಯನಂಗೀಕಾರೇ ಕಾಲಾಽಕಾಶಾದ್ಯಸಿದ್ಧಿ ಪ್ರಸಂಗಾತ್ ।

ಆತ್ಮ ಆಕಾಶ ವ್ಯತಿರಿಕ್ತಗಳಾದ, ಬಾಹ್ಯೇಂದ್ರಿಯ ವಿಷಯಗಳಾದ ಧರ್ಮಾಧರ್ಮಾದಿಗಳಿಗೆ ಸಾಕ್ಷಿ ವಿಷಯತ್ವವು ಹೇಗೆ ಎಂದರೆ, ತಿಳಿದ ಹಾಗೂ ತಿಳಿಯದ ಹಾಗೂ ಎಲ್ಲಾ ಅತೀಂದ್ರಿಯ ವಿಷಯಗಳೂ ಸಾಕ್ಷಿಗೆ ವಿಷಯಗಳು (ತಿಳಿಯತಕ್ಕವುಗಳು) ಶ್ರುತಿಯಿಂದ (ಕೇಳಿದ್ದು) ಅನುಮಾನದಿಂದ ಹುಟ್ಟಿದ ಅತೀಂದ್ರಿಯ ಪದಾರ್ಥ ವಿಷಯಕ ಜ್ಞಾನವು ಸಾಕ್ಷಿ ವಿಷಯಗಳಾದ್ದರಿಂದ ತದ್ವಾರಾ(ಸಾಕ್ಷಿ ಮೂಲಕ) ವಿಷಯಗಳಾಗುವುದೂ ಸಾಕ್ಷಿ ವಿಷಯಗಳೇ ಎಂದಭಿಪ್ರಾಯವು, ತಿಳಿಯದ ಎಂಬುದರರ್ಥವೇನಂದರೆ, ಯಾವ ಮನುಷ್ಯಗೆ ಯಾವ ಅರ್ಥದಲ್ಲಿ ಪ್ರಮಾಣ ಪ್ರವೃತ್ತಿಯೇ ಇಲ್ಲವೋ ಸೋಽಪಿ ಸಾಕ್ಷಿ ವಿಷಯವೇ. ಇವುಗಳ ಹೊರತು ಸ್ವಲ್ಪವನ್ನು ನಾನು ತಿಳಿದಿಲ್ಲವೆಂಬ ತಿಳಿಯದ ಪದಾರ್ಥ ವಿಷಯಕ ಜ್ಞಾನವು ಸಾಕ್ಷಿಗೆ ತಿಳಿಯಲರ್ಹವಾದ್ದರಿಂದ ಆ ವಿಷಯಗಳಿಗೂ ಸಾಕ್ಷಿ ವಿಷಯತೆಯೇ ಎಂದರ್ಥವು. ಈ ವಿಷಯಗಳು ಪದ್ಧತಿ ನ್ಯಾಯಾಮೃತ ಸುಧಾದಿಗಳಲ್ಲಿ ಉಪಪಾದಿತಗಳಾಗಿರುತ್ತವೆ. ಎಂದಭಿಪ್ರಾಯವು. ಸಾಕ್ಷಿ ಎಂದರೇನು–ಪ್ರಮಾಣಾಂತರವಂತೂ ಅಲ್ಲ. ಆ ವಿಷಯದಲ್ಲಿ ಪ್ರಮಾಣಗಳಿರುವುದಿಲ್ಲ. ಗೌರವವೂ ಬರುತ್ತದೆ. ಐಂದ್ರಿಕ ಪದಾರ್ಥಗಳು ಇಂದ್ರಿಯದಿಂದಲೇ ತಿಳಿಯುತ್ತದೆ. ಅತೀಂದ್ರಿಯ ಪದಾರ್ಥಗಳು ಆಗಮಾನುಮಾನಗಳಿಂದ ಸಿದ್ಧಿಸುತ್ತವೆ. ಸಾಕ್ಷಿಯನ್ನು ಏಕೆ ಒಪ್ಪಬೇಕು ಎಂದರೆ ಹೇಳುತ್ತಾರೆ. ಸಾಕ್ಷಿಯನ್ನು ಒಪ್ಪದಿದ್ದರೆ ಕಾಲ ಆಕಾಶಾದಿಗಳು ಸಿದ್ಧಿಸದೇ ಹೋಗಬೇಕಾದೀತು.

ಉಪಲಕ್ಷಣಮೇತತ್ । ಇಂದ್ರಿಯಕಾಣಾಮತೀಂದ್ರಿಯಾಣಾಂ ಚಾ ಸಿದ್ಧಿ ಪ್ರಸಂಗಾತ್ । ತಜ್ಞಾನ ಪ್ರಾಮಾಣ್ಯ ಗ್ರಾಹಕಸ್ಯ ಸಾಕ್ಷಿ ವ್ಯತಿರಿಕ್ತಸ್ಯ ಅಭಾವಾದಿತಿ ವಕ್ಷ್ಯಮಾಣತ್ವಾದಿತ್ಯಪಿ ದ್ರಷ್ಟವ್ಯಂ । ತಥಾ ಹಿ । ಆತ್ಮಾ ಜೀವಸ್ತಾವತ್ಸಾಕ್ಷಿ ವೇದ್ಯಃ । ಅಹಮಿತಿ ಪ್ರತೀಯ ಪ್ರತೀಯಮಾನತ್ವಾತ್। ನ ಚಾಹಮಿತಿ ಪ್ರತ್ಯಯೋ ನ ಸಾಕ್ಷಿರೂಪಃ ಕಿಂ ತು ಮಾನಸಾನುಭವ ರೂಪ ಇತಿ ವಾಚ್ಯಂ ।

ಇದನ್ನು ಉಪಲಕ್ಷಣವಾಗಿ ತಿಳಿಯಬೇಕು. ಸಾಕ್ಷಿ ಒಪ್ಪದಿದ್ದರೆ ಅತೀಂದ್ರಿಯ ಇಂದ್ರಿಯಕಾದಿ ಸಕಲಪದಾರ್ಥಗಳು ಸಿದ್ಧಿಸದೇ ಹೋಗಬೇಕಾದೀತು. ಎಲ್ಲಾ ಜ್ಞಾನಗಳ ಪ್ರಮಾಣ್ಯತೆ ಸಾಕ್ಷಿ ವಿನಃ ಗ್ರಾಹಕವಾದುದು ಬೇರೆ ಯಾವುದೂ ಇರುವುದಿಲ್ಲ. ಅದನ್ನು ತೋರಿಸುತ್ತೇವೆ. ಆತ್ಮಾ ಎಂದರೆ ಜೀವನು, ಅವನು ಸಾಕ್ಷಿವೇದ್ಯ— ಅಹಂ ಎಂಬ ವ್ಯವಹಾರವಿರುವುದರಿಂದ, ಆ ವ್ಯವಹಾರವು ಸಾಕ್ಷಿ ಅಲ್ಲ, ಮಾನಸಾನುಭವರೂಪ ಎನ್ನಬಾರದು ಏಕೆಂದರೆ,

ಆತ್ಮನೋ ಮನೋವಿಷಯಕತ್ವೇ ಕದಾಚಿದಾತ್ಮ ವಿಷಯಕ ಸಂಶಯ ವಿಪರ್ಯಯೌ ಸ್ಯಾತಾಂ । ನಹಿ ಕಶ್ಚಿದಹಮಹಂ ನ ಭವಾಮಿತಿ ವಿಪರ್ಯಯಂವಾಽಹಂವಾ ನವೇತಿ ಸಂಶಯಂವಾ ಕರೋತಿ । ತತ್ಕಸ್ಯ. ಹೇತೋಃ । ಸಾಕ್ಷಿವೇದ್ಯತ್ವಾದೇವೇತ್ಯಂಗೀಕರ್ತವ್ಯಂ । ತದುಕ್ತಮನು ವ್ಯಾಖ್ಯಾನೇ । ಸಾಕ್ಷಿ ಸಿದ್ಧೇತ್ವ ಸಂಶಯಾತ್ । ಸಾಕ್ಷಿಸಿದ್ಧಸ್ಯ ನ ಕ್ವಾಪಿ ಬಾಧ್ಯತ್ವಂ ತದದೋಷತ ಇತಿ । ಮನೋಗ್ರಾಹ್ಯೇ ಕ್ವಚಿದ್ವಿಪರ್ಯಯಃ ಸಂಶಯಶ್ಚ ದೃಶ್ಯತೇ । ಯಥೇದಂ ರಜತಮಿತಿ ಭ್ರಮೇ ಪ್ರಾಮಾಣ್ಯಾವಧಾರಣಮಾವಶ್ಯಕಂ । ಅನ್ಯಥಾ ನಿಷ್ಕಂಪ ಪ್ರವೃತ್ತ್ಯಭಾವ ಪ್ರಸಂಗಾತ್। ತಚ್ಚ ಪ್ರಾಮಾಣ್ಯಾವಧಾರಣಂ ನ ಸಾಕ್ಷಿಣಾ । ಅಯಥಾರ್ಥ ಜ್ಞಾನೇ ಪ್ರಾಮಾಣ್ಯಸ್ಯ ಬಾಧಿತತ್ವೇನ ಸಾಕ್ಷಿ ಗ್ರಾಹ್ಯತ್ವಾಯೋಗಾತ್ । ಅತೋ ಮನಸೈವೇತಿ ವಕ್ತವ್ಯಂ । ಅತ ಏವ ತತ್ರ ಕದಾಚಿತ್ಸಂಶಯೋಽಪಿಯುಜ್ಯತೇ ಇದಂ ಜ್ಞಾನಂ ಪ್ರಮಾಣಂ ವಾ ನವೇತಿ । ತದ್ಯುಕ್ತಮನುವ್ಯಾಖ್ಯಾನೇ ।

ಆತ್ಮಗೆ ಮನೋ ವಿಷಯತೆ ಹೇಳಿದರೆ, ಆತ್ಮ ವಿಷಯಕವಾದ ಸಂಶಯವೋ ಅಥವಾ ಭ್ರಾಂತಿಯೋ ಎಂದಿಗಾದರೂ ಒಂದು ಸಲ ಬರಬೇಕಾದೀತು. ಎಂದಿಗೂ ನಾನಿಲ್ಲಿಲ್ಲ ಎಂದಾಗಲೀ, ನಾನಿದ್ದೀನೋ ಇಲ್ಲವೋ ಎಂದಾಗಲೀ, ಸ್ವವಿಷಯಕ ಸಂಶಯವಾಗಲೀ, ಭ್ರಾಂತಿ ಆಗಲಿ ಬಂದಿರುವುದು ಯಾರಿಗೂ ಅನುಭವವಿರುವುದಿಲ್ಲ. ಏಕೆ ಬರುವುದಿಲ್ಲ. ತನ್ನ ವಿಷಯದಲ್ಲಿ ಸಾಕ್ಷಿಸಿದ್ಧವಾಗಿರುವುದರಿಂದ ಎಂದೇ ಒಪ್ಪಬೇಕು. ಅದನ್ನೇ ಅನುವ್ಯಾಖ್ಯಾನದಲ್ಲಿ ಸಾಕ್ಷಿಸಿದ್ಧ ವಿಷಯದಲ್ಲಿ ಅಸಂಶಯವು.

ಸಾಕ್ಷಿ ಸಿದ್ಧ ವಿಷಯದಲ್ಲಿ ಎಂದಿಗೂ ಬಾಧ್ಯತೆ ಇರುವುದಿಲ್ಲ. ಅಲ್ಲಿ ಯಾವ ದೋಷ ಪ್ರಸಕ್ತಿಯೂ ಇಲ್ಲದ ಕಾರಣ ಎಂದು ಹೇಳಿರುತ್ತಾರೆ. ಮನಸ್ಸಿಗೆ ವಿಷಯಸ್ಥಳದಲ್ಲಿ ಕೆಲವೆಡೆ ಸಂಶಯ ಭ್ರಾಂತಿಗಳು ಕಂಡಿರುತ್ತವೆ ಹೇಗೆಂದರೆ, ಕಪ್ಪೆಚಿಪ್ಪನ್ನು ನೋಡಿ, ಬೆಳ್ಳಿಯೆಂಬ ಭ್ರಮೆ ಹುಟ್ಟುತ್ತದೆ. ಅಲ್ಲಿ ಮೊದಲು ಪ್ರಾಮಾಣ್ಯ ಜ್ಞಾನವೇ ಇಲ್ಲವಾದರೆ ಝಟಿತಿ ತೆಗೆದುಕೊಳ್ಳುವ ಬುದ್ಧಿ ಏಕೆ ಹುಟ್ಟುತ್ತಿತ್ತು. ನಂತರ ಬೆಳ್ಳಿ ಅಲ್ಲ ಎಂದು ಬಾಧ ಬಂದ ಮೇಲೆ ಅದು ಭ್ರಮೆ ಎಂದು ಜ್ಞಾನವಾಗುತ್ತದೆ. ಮೊದಲು ಬೆಳ್ಳಿ ಎಂಬ ಜ್ಞಾನ, ಅದರಲ್ಲಿ ಪ್ರಾಮಾಣ್ಯತೆ ಸಾಕ್ಷಿ ಮೂಲಕ ಅಲ್ಲ, ಮೊದಲು ಭ್ರಾಂತಿ ಬಂದಿತ್ತು. ಈಗ ಹೋಯಿತು ಎಂಬುದನ್ನು ಸಾಕ್ಷಿಗ್ರಹಿಸುತ್ತದೆ. ಮೊದಲಿನ ಭ್ರಾಂತಿ ಸಾಕ್ಷಿಯಿಂದಲೇ ಆಗಿದ್ದರೆ, ಪುನಃ ಪ್ರಮಾ (ಯಥಾರ್ಥಜ್ಞಾನ) ಸಾಕ್ಷಿಗೆ ಬಂದಿರಬೇಕಾಗಿದ್ದಿತು. ಆದುದರಿಂದ ಬಾಹ್ಯೇಂದ್ರಿಯದಿಂದ ಬರುವ ಭ್ರಮು, ಸಂಶಯ, ಪ್ರಮ ಇವುಗಳು ಮನಸ್ಸಿನಿಂದಲೇ ಎಂದು ಒಪ್ಪಬೇಕು. ಆದುದರಿಂದಲೇ, ಸಾಕ್ಷಿ ವಿಷಯದಲ್ಲಿ ಎಂದಿಗೂ ಸಂಶಯವಾಗಲೀ, ವಿಪರೀತ ಜ್ಞಾನವಾಗಲೀ ಬರುವುದಿಲ್ಲ. ಇದನ್ನು ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ.

**ಯತ್ಕಿಂಚಿತ್ ವ್ಯಭಿಚಾರಿಸ್ಯಾದ್ದರ್ಶನಂ ಮಾನಸಂಹಿತದಿತಿ । ಏವಂ ಸದೇವದತ್ತೋ ಗೌರೋ ನ ವಾ ಪರಮಾಣುರ್ಗುರುತ್ವಾಧಿಕರಣಂ ನವೇತಿ ಸಂಶಯೋ ಮಾನಸ ಇತಿ ತಾರ್ಕಿಕೈರಪ್ಯಂಗೀಕೃತಮಿತಿ । ನನ್ವಾತ್ಮನೋ ಮನೋವೇದ್ಯತ್ವಾಭಾವೇಪ್ಯನುಮಾನ ವೇದ್ಯತ್ವಮಸ್ತು । ತಥಾ ಹಿ ।**

ಅಂತೆಯೇ ತಾರ್ಕಿಕರು ನಿಜವಾಗಿ ಕೊಟ್ಟದ್ದು ಬಿಳೀದೋ ಅಲ್ಲವೋ ಪರಮಾಣುವಿನಲ್ಲಿ ತೂಕವಿದೆಯೋ ಇಲ್ಲವೋ ಇತ್ಯಾದಿ ಸಂಶಯಗಳು ಮಾನಸಿಕ ವಾದುವುಗಳೇ ಎಂದು ಒಪ್ಪಿರುತ್ತಾರೆ. ಆತ್ಮಗೆ ಮನೋವಿಷಯಕತೆ ಇಲ್ಲವಾದರೂ ಅನುಮಾನದಿಂದ ತಿಳಿಯುವನೆಂದು ಏಕೆ ಒಪ್ಪಬಾರದು. ಈ ಕ್ರಮದಲ್ಲಿ—

**ಬುದ್ಧ್ಯಾದಯಸ್ತಾವದ್ಗುಣಾಃ ತೇ ಚ ಗುಣ್ಯಾಶ್ರಿತಾಃ ರೂಪಾದಿವತ್ । ತೇ ಚ ನದಿಕ್ಕಾಲಮನಸಾಂ ಗುಣಾಃ ವಿಶೇಷಗುಣತ್ವಾತ್। ನಾಪಿ ಪೃಥಿವ್ಯಾದಿಗುಣಾಃ ಬಾಹ್ಯೇಂದ್ರಿಯಾಗ್ರಾಹ್ಯತ್ವಾತ್ । ನಾಪ್ಯಾಕಾಶ ಗುಣಾಃ ಶ್ರೋತ್ರಾಗ್ರಾಹ್ಯತ್ವಾತ್। ಅತಃ ಪರಿಶೇಷಾದ್ಬುದ್ಧ್ಯಾದೀನಾಂ ಯೋ ಗುಣೀ ಸ ಏವಾತ್ಮೇತಿ ಚೇನ್ನ । ಮನಸ ಏವ ಬುದ್ಧ್ಯಾದ್ಯಾಶ್ರಯತ್ವೋಪಪತ್ತೇಃ । ನ ಚ ನ ಮನೋ ವಿಶೇಷ ಗುಣಾಶ್ರಯ ಇತಿ ವಾಚ್ಯಂ । ಧರ್ಮಿ ಕಲ್ಪನಾತೋ ವರಂ ಧರ್ಮಕಲ್ಪನಮಿತಿ ನ್ಯಾಯೇನ ಧರ್ಮ್ಯಂತರ ಕಲ್ಪ-ನಾಪೇಕ್ಷಯಾ ಮನೋಗುಣತ್ವ ಕಲ್ಪನಸ್ಯೈವ ಲಘುತ್ವಾತ್ । ಕಿಂ ಚ ।**

ಬುದ್ಧ್ಯಾದಿಗಳೆಲ್ಲಾ ಗುಣಗಳೇ ಆದುದರಿಂದ ಹೀಗೆ ಅನುಮಾನವು. ಬುದ್ಧ್ಯಾದಿ ಗುಣಗಳು ಗುಣ್ಯಾಶ್ರಿತವಾದವುಗಳು, ರೂಪಾದಿಗಳಂತೆ, ಗುಣಗಳಾದ್ದರಿಂದ (ಗುಣಾಃ ಪಕ್ಷ. ಗುಣ್ಯಾಶ್ರಿತಾಃ ಸಾಧ್ಯ, ಗುಣತ್ವಾತ್ ಹೇತು) ಬುದ್ಧ್ಯಾದಿ ಗುಣಗಳಾಶ್ರಯವಾದ ಗುಣ್ಯವೆಂದರೆ ದಿಕ್ಕು, ಕಾಲಾದಿಗಳಾಗುವುದಿಲ್ಲ ವಿಶೇಷಗುಣವಾಗಿರುವುದರಿಂದ, ಪೃಥಿವ್ಯಾದಿಗಳು ಆಗುವುದಿಲ್ಲ, ಅವುಗಳು ಬಾಹ್ಯೇಂದ್ರಿಯ ಗ್ರಾಹ್ಯವಾಗಿರುವುದರಿಂದ, ಬುದ್ಧಿ ಆಕಾಶಗುಣವಂತೂ ಅಲ್ಲ. ಶ್ರೋತ್ರೇಂದ್ರಿಯ ಅಗ್ರಾಹ್ಯವಾಗಿರುವುದರಿಂದ. ಆದುದರಿಂದ ಪರಿಶೇಷ (ವಿಚಾರದಿಂದ ಬೇರೆ ಇಲ್ಲವಾದ ಕಾರಣ) ಬುದ್ಧಿಗೆ ಆಶ್ರಯತೆ ಇಂದ ಆತ್ಮ ಸಿದ್ಧನಾಗುತ್ತಾನೆ. ಹೀಗೆ ಅನುಮಾನದಿಂದ ಆತ್ಮನು ಗೊತ್ತಾಗುತ್ತಿರಲು, ಸಾಕ್ಷಿಯನ್ನು ಒಪ್ಪುವುದೇಕೆ ? ಎಂದರೆ ಹಾಗನ್ನಬಾರದು—ಹೀಗೆಂದರೆ. ಮನಸ್ಸಿಗೆ ಬುದ್ಧ್ಯಾದಿ ಆಶ್ರಯತೆ ಉಪಪನ್ನ (ಯುಕ್ತ) ವಾಗುತ್ತದೆ ಮತ್ತು ಧರ್ಮಿಕ ಕಲ್ಪನೆಗಿಂತಲು ಧರ್ಮದ ಕಲ್ಪನೆ ಲಘು ಶ್ರೇಷ್ಠವೆಂಬ ನೀತಿಯಂತೆ ಬುದ್ಧಿಗೆ ಮನೋಗುಣತೆ ಕಲ್ಪನೆಯೇ ಸಾಕಾಗಿ ಆತ್ಮನೇ ಸಿದ್ಧಿಸದೇ ಹೋಗುವ ಪ್ರಸಂಗ ಬರುತ್ತದೆ. ಮತ್ತೂ,

**ಲಿಂಗಾನುಸಂಧಾನಂ ವಿನಾಪ್ಯಾವಿಪಾಲ ಗೋಪಾಲಾನಾಂ ಝಡಿತ್ಯೇವ ಅಹಂ ಪ್ರತ್ಯಯಸ್ಯ ಜಾಯಮಾನತ್ವೇನ ಲೈಂಗಿಕತ್ವಾನುಪಪತ್ತೇಃ । ಅಪಿ ಚ । ಸುಷುಪ್ತಿಕಾಲ ಆತ್ಮವಿಷಯಂ ಜ್ಞಾನಂ ಅಂಗೀಕರ್ತವ್ಯಂ । ಅನ್ಯಥಾ ಸುಪ್ತೋತ್ಥಿತಾನಂತರಂ ಏವತ್ಕಾಲ ಪರ್ಯಂತಮಹಂ ಸುಖಮಸ್ವಾಪ್ಸ್ಯಮ್ ಇತಿ ಉತ್ತರಕಾಲೀನ ಅನನುಭವ ಪ್ರಸಂಗಾತ್ । ಅನನುಭೂತಾರ್ಥೇ ಸ್ಮರಣಾಭಾವಾತ್ । ನ ಚ ಸ್ವಾಪಕಾಲೇ ಮನಸ್ಯಾತ್ಮಜ್ಞಾನಮಿತಿ ವಕ್ತುಂ ಯುಕ್ತಂ । ಸರ್ವೇಂದ್ರಿಯಾಣಾಂ ಉಪರತತ್ವಾತ್ ।**

ಹೇತುಗಳ ಅನುಸಂಧಾನವಿಲ್ಲದಯೇ ತಜ್ಞ, ಅಜ್ಞ, ದನಕಾಯುವವನಿಗೂ ತೀವ್ರದಲ್ಲೇ 'ನಾನು' ಎಂಬ ಜ್ಞಾನ ಹುಟ್ಟುವುದರಿಂದ ಆತ್ಮಜ್ಞಾನಕ್ಕೆ ಲೈಂಗೀಕತೆ (ಹೇತುವಿನಿಂದ ಹುಟ್ಟುವಿಕೆ) ಅಸಂಭಾವಿತವೇ ಆಗಿರುತ್ತದೆ. ಮತ್ತು ನಿದ್ದೆ ಕಾಲದಲ್ಲಿ (ಮನಸ್ಸಿಗೆ) ಆತ್ಮವಿಷಯತೇ ಒಪ್ಪಲೇಬೇಕು. ಇಲ್ಲವಾದರೆ ಎಚ್ಚರವಾದಮೇಲೆ ಸುಖವಾಗಿ ಮಲಗಿದ್ದೆ ಎಂಬ ಅನುಭವ ಬರದೇ ಹೋಗಬೇಕಾದೀತು. ಅನುಭವವಿಲ್ಲದ ಸ್ಮೃತಿ ಬರುವುದಿಲ್ಲ. ನಿದ್ದೆಯಲ್ಲಿ ಮನಸ್ಸಿನಿಂದ ಆತ್ಮಜ್ಞಾನವೆಂದು ಹೇಳುವುದು ಯುಕ್ತವಲ್ಲ. ಸರ್ವ ಇಂದ್ರಿಯಗಳೂ ಉಪರವಾಗಿರುವುದರಿಂದ ಆತ್ಮ ಸಿದ್ಧ್ಯರ್ಥವಾಗಿ ಸಾಕ್ಷಿಯನ್ನು ಒಪ್ಪಲೇಬೇಕು.

**ನ ಚಾಹಂ ಸುಖಂ ಅಸ್ವಾಪ್ಸಮಿತಿ ಪ್ರತ್ಯಯೋ ನಾನುಸ್ಮೃತಿ । ಕಿಂತು ಉತ್ತರಕಾಲೇ ಅನುಭವ ಏವೇತಿ ವಾಚ್ಯಂ । ಸಾಮಗ್ರೀ ವಿರಹಾತ್ । ನ**

ಚ ಸುಷುಪ್ತಿಕಾಲೇ ಅಹಮಾಸಮಿದಾನೀಂ ಸತ್ತ್ವಾದಿತ್ಯನುಮಾನಮೇವ ಸಾಮಗ್ರೀತಿ ವಾಚ್ಯಂ। ಪೂರ್ವಕಾಲಸ್ಯ ಅಪಿ ಅಸಿದ್ಧತ್ವೇನ ಆಶ್ರಯಾ-ಸಿದ್ಧೇಃ। ಕಿಂಚಾತ್ಮನೋದ್ಯಾಪ್ಯಸಿದ್ಧತ್ವೇನ ಅಪ್ರಸಿದ್ಧವಿಶೇಷಣತ್ವಾ-ಪತ್ತೇಃ। ತದುಕ್ತಮನುವ್ಯಾಖ್ಯಾನೇ। ಪಕ್ಷೀಕರ್ತುಮಶಕ್ಯತ್ವಾತ್-ನಾನುಮಾ ತತ್ರ ವರ್ತತ ಇತಿ। ಅತಃ ಸಾಕ್ಷಿಣೈವಾತ್ಮಸಿದ್ಧಿಃ। ಏವಂ ಮನಃ ಸಿದ್ಧಿರಪಿ ಸಾಕ್ಷಿಣೈವ। ಅಹಂ ತದ್ವಿಷಯಕಮನೋವಾನ್ ತತ್ರಮೇ ಮನಃ ಪತತಿ ಇತ್ಯಾದಿ ಪ್ರತ್ಯಯಸ್ಯ ಸಾಕ್ಷಿರೂಪತ್ವಾತ್। ನ ಹಿ ಮನೋ ಮನೋ ಗ್ರಾಹ್ಯಮಿತಿ ವಕ್ತುಂ ಯುಕ್ತಂ। ಇಂದ್ರಿಯಾಣಾಂ ಅತೀಂದ್ರಿಯತ್ವಾತ್।

ನಾನು ಸುಖವಾಗಿ ಮಲಗಿದ್ದೆ ಎಂಬ ಜ್ಞಾನವು ಅನುಸ್ಮೃತಿ ಅಲ್ಲ ಎನ್ನಕೂಡದು. ಏಕೆಂದರೆ, ಮುಂದೆ ಅನುಭವ ಬರುವುದರಿಂದ ಸಾಮಗ್ರೀ ಇಲ್ಲವಾದ್ದರಿಂದ ಎದ್ದೆ ಕಾಲದಲ್ಲಿದ್ದೇ ಈಗೆಯೂ ಇರುವುದರಿಂದ ಹೀಗೆ ಅನುಮಾನವೇ ಸಾಮಗ್ರೀ ಅನ್ನುತ್ತೇವೆ ಅಂದರೆ ಹೀಗೂ ಅನ್ನಬಾರದು. ಪೂರ್ವಕಾಲವೇ ಸಿದ್ಧಿಸಿಲ್ಲವಾದ್ದರಿಂದ ಪಕ್ಷವೇ ಸಿದ್ಧಿಸಿಲ್ಲವಾದ್ದರಿಂದ ಆಶ್ರಯಾಸಿದ್ಧಿ ಬರುತ್ತದೆ ಮತ್ತು ಆತ್ಮಸಿದ್ಧಿಸಿಲ್ಲವಾದ್ದರಿಂದ ಅಪ್ರಸಿದ್ಧ ವಿಶೇಷಣ ದೋಷವೂ ಬರುತ್ತದೆ. ಇದನ್ನೇ ಅನುವ್ಯಾಖ್ಯಾನದಲ್ಲಿ ಹೇಳಿದೆ. ಪಕ್ಷ ಮಾಡಲೇ ಬರುವುದಿಲ್ಲವಾದ್ದರಿಂದ, ಅಲ್ಲಿ ಅನುಮಾನವೇ ಕೂಡುವುದಿಲ್ಲ. ಆದುದರಿಂದ ಸಾಕ್ಷಿ ಇಂದಲೇ ಆತ್ಮನ ಸಿದ್ಧಿಯು. ಹೀಗೆ ಮನಸ್ಸಿನ ಸಿದ್ಧಿಯೂ ಸಾಕ್ಷಿ ಇಂದಲೇ. ಅಹಂ (ನಾನು) ಆ ವಿಷಯಕ ಮನಸ್ಸುಳ್ಳವನು. ನನ್ನ ಮನಸ್ಸು ಅಲ್ಲಿ ಬಿದ್ದಿದೆ. ಇತ್ಯಾದಿ ಜ್ಞಾನ ಸಾಕ್ಷಿರೂಪವೇ ಆಗಿರುತ್ತದೆ. ಮನಸ್ಸು ಮನಸ್ಸಿನಿಂದಲೇ ತಿಳಿಯತಕ್ಕದ್ದು ಎಂಬುದು ಯುಕ್ತವಲ್ಲ ಇಂದ್ರಿಯಗಳೆಲ್ಲವೂ ಅತೀಂದ್ರಿಯಗಳಾಗಿರುವುದರಿಂದ.

ನನ್ವನುಮಾನೇನೈವ ಮನಃ ಸಿದ್ಧಿಃ। ನ ಚ ಲಿಂಗಾಭಾವಃ। ಯುಗಪದ್ ಜ್ಞಾನಾನುತ್ಪತ್ತಿಃ ಮನಸೋ ಲಿಂಗಮಿತಿ ಭಗವತಾ ಗೌತ-ಮೇನೋಕ್ತತ್ವಾತ್। ತಥಾ ಹಿ। ಬಾಹ್ಯೇಂದ್ರಿಯೇಷು ಸ್ವೈಃ ಸ್ವೈರ್ವಿಷಯೈ-ರ್ಯುಗಪತ್‌ಸನ್ನಿಕರ್ಷೇಷ್ವಾತ್ಮನಾಧಿಷ್ಠಿತೇಷ್ವಪಿ ನ ಯುಗಪದ್ ಜ್ಞಾನಾನಿ ಜಾಯಂತೇ। ತೇನ ಜ್ಞಾಯತೇ ಸ್ತ್ಯೇತೇಭ್ಯೋನ್ಯತ್ಸಹಕಾರಿ ಯತ್ಸಂಯೋಗ ಕ್ರಮಾತ್ ಜ್ಞಾನಕ್ರಮಸ್ತದೇವ ಮನ ಇತಿ ಚೇನ್ನ।

ಅನುಮಾನದಿಂದಲೇ ಮನಸ್ಸಿನ ಸಿದ್ಧಿಯು. ಅಂತೆಯೇ ಹೇತುವಿಲ್ಲ ಅನ್ನಬಾರದು. ಏಕಕಾಲದಲ್ಲಿಯೇ ಅನೇಕ ವಿಷಯಗಳು ಹೊಳೆಯದೇ ಇರುವಿಕೆಯೇ ಮನಸ್ಸಿದ್ಧಿಗೆ ಕಾರಣವೆಂದು ಗೌತಮರು ಹೇಳುತ್ತಾರೆ. ಹೇಗೆಂದರೆ, ಬಾಹ್ಯವಾದ ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಿಂದ ಸನ್ನಿಕೃಷ್ಟಗಳಾದರೂ ಇಂದ್ರಿಯಗಳೂ

ಆತ್ಮನಿಂದ ಅಧಿಷ್ಠಿತಗಳಾದರೂ ಏಕಕಾಲದಲ್ಲಿ ಜ್ಞಾನವಾಗುವುದಿಲ್ಲ. ಇದರಿಂದ ಗೊತ್ತಾಗುತ್ತದೆ ಇಂದ್ರಿಯಗಳಿಗೆ ಜ್ಞಾನಜನಕ ಸಹಕಾರಿ ಇಂದ್ರಿಯಾತಿರಿಕ್ತ ಒಂದು ಇದೆ ಎಂದು. ಇಂದ್ರಿಯಗಳಿಗೂ, ವಸ್ತುಗಳಿಗೂ ಸಂಯೋಗ ಕ್ರಮ. ಆ ಕ್ರಮಾನುಸಾರವೇ ಜ್ಞಾನವಾಗುತ್ತದೆ, ಆ ಕ್ರಮವೇ ಮನಸ್ಸು. ಹೀಗೆ ಮನಸು ಲಿಂಗಗಳಿಂದ ಗೊತ್ತಾಗುತ್ತದೆ. ಸಾಕ್ಷಿವೇದ್ಯವೆನಬಾರದು. ಅಂದರೆ ಇದು ತಪ್ಪು.

**ಆತ್ಮನ ಏವೈವಂವಿಧ ಸಾಮರ್ಥ್ಯ ಕಲ್ಪನೋಪಪತ್ತೌ ಮನೋರೂಪ ಸಹಕಾರ್ಯಂತರಾ ಪರಿಕಲ್ಪನಾತ್ । ವೃಕ್ಷಾತ್ಪತತಃ ಫಲಸ್ಯ ಕ್ರಮವರ್ತಿ-ನ್ಯಾಕಾಶ ಸಂಯೋಗೇ ಸಹಕಾರ್ಯಂತರ ಪರಿಕಲ್ಪನಾ ಪ್ರಸಂಗಾಚ್ಚ । ಯುಗಪದ್ ಜ್ಞಾನಾನುತ್ಪತ್ತಿಮಜಾನತೋಽಪಿ ಮಮ ಮನೋಽನ್ಯತ್ರ ಗತಮಿತಿ ಝುಡಿತಿ ಪ್ರತ್ಯಯ ದರ್ಶನಾಚ್ಚ । ಯಥಾ ಯುಗಪನ್ಮಾಣವಕೋ ಗಚ್ಛತಿ ಪತತಿ ಚ ಪಂಥಾನಮೀಕ್ಷತೇ ವಹತಿ ಚ ಕಮಂಡಲುಂ ಜಿಘ್ರತಿ ಚ ಪುಷ್ಪಾಣಿ ಶ್ರೃಣೋತಿ ಚ ಶಬ್ದಮಿತಿ ಪ್ರತ್ಯಯಬಲಾತ್ ಕರ್ತುರ್ಯುಗ-ಪದೇವ ನಾನಾವ್ಯಾಪಾರೋ ದೃಶ್ಯತೇ ತಥೇಂದ್ರಿಯಾಣಾಮಪಿ ಕರಣಾನಾಂ ನಾನಾ ಪದಾರ್ಥವಿಷಯಕ ಸಮೂಹಾಲಂಬನ ಜ್ಞಾನಸ್ಯ ಯುಗ-ಪತ್ಸಂಭವಾತ್ । ದೀರ್ಘಶಷ್ಕುಲೀಭಕ್ಷಣಾದೌ ಸರ್ವೇಂದ್ರಿಯೈರ್ಯುಗ-ಪದ್ ಜ್ಞಾನಸ್ಯ ದರ್ಶನಾಚ್ಚ ಮನಃ ಕಲ್ಪನಾವಸರಃ ।**

ಆತ್ಮಗೆ ಕ್ರಮಬದ್ಧವಾದ ಜ್ಞಾನೋತ್ಪಾದನ ಸಾಮರ್ಥ್ಯ ಕಲ್ಪಿಸಲು ಬರುತ್ತಿರಲಾಗಿ ಮನೋರೂಪ ಸಹಕಾರಿ ಕಲ್ಪನಾ ವ್ಯರ್ಥವಾಗುತ್ತದೆ. ಸಹಕಾರಿ ಕಲ್ಪಿಸುವುದಾದರೆ ವೃಕ್ಷದಿಂದ ಬೀಳುವ ಹಣ್ಣಿಗೆ ಗುರುತ್ವವಲ್ಲದೇ, ಕ್ರಮವಾಗಿರುವ ಆಕಾಶ ಸಂಯೋಗಾದಿಗಳಿಗೂ ಸಹಕಾರಿತಾ ಕಲ್ಪಿಸುವ ಪ್ರಸಂಗ ಬರುತ್ತದೆ. ಏಕ ಕಾಲದಲ್ಲಿ ಜ್ಞಾತವಾಗದೇ ಇರುವಾಗ ಆ ಮನುಷ್ಯಗೆ ನನ್ನ ಮನಸ್ಸು ಎಲ್ಲಿಯೋ ಹೋಗಿದ್ದಿತು ಎಂದು ತಕ್ಷಣದಲ್ಲಿ ಅನುಭವ ಕಂಡಿರುತ್ತದೆ. ಮತ್ತು ಹುಡುಗನು ಒಂದೇ ಸಲ ಹೋಗುತ್ತಾನೆ, ತಿನ್ನುತ್ತಾನೆ, ದಾರಿ ನೋಡುತ್ತಾನೆ, ಭಾರ ಹೊತ್ತಿದ್ದಾನೆ, ಹೂವನ್ನು ಮೂಸಿಸುತ್ತಾನೆ, ಶಬ್ದಗಳನ್ನೂ ಕೇಳುತ್ತಾನೆ ಎಂಬ ವ್ಯವಹಾರ ಬಲದಿಂದ ಮಾಡುವವನಲ್ಲಿ ಒಂದೇ ಸಲ ಅನೇಕ ವ್ಯಾಪಾರ (ಕೆಲಸಗಳು) ಕಾಣುತ್ತವೆ. ಹಾಗೂ ಕರಣಗಳಾದ ಇಂದ್ರಿಯಗಳಿಗೆ ನಾನಾ ಪದಾರ್ಥ ವಿಷಯಕ ಸಮೂಹಾಲಂಬನ ಜ್ಞಾನವು ಏಕಕಾಲದಲ್ಲೇ ಹುಟ್ಟಿರುವುದು ಕಂಡಿರುವುದರಿಂದ ಮನಸ್ಸಿನ ಕಲ್ಪನಾ ಅಗತ್ಯವಿರುವುದಿಲ್ಲ.

**ನನ್ವೇವಮಪಿ ಬುದ್ಧ್ಯಾದಯಃ ಸಂಯೋಗಾಸಮವಾಯಿಕಾರಣಕಾಃ ಜನ್ಯವಿಶೇಷಗುಣತ್ವಾತ್ ಶಬ್ದವದಿತ್ಯನುಮಾನೇನಾ ಸಮವಾಯಿ ಕಾರಣ ಸಂಯೋಗ ಸಿದ್ಧೌ ತದಾಶ್ರಯತ್ವೇನ ಮನಃಸಿದ್ಧಿರಿತಿ ಚೇನ್ನ ।**

**ಆತ್ಮೇಂದ್ರಿಯ ಸಂಯೋಗಸ್ಯೈವ ಅಸಮವಾಯಿಕಾರಣತ್ವೋಪಪತ್ತೌ ಆತ**
**ಮನಃ ಸಂಯೋಗಸ್ಯ ಕಾರಣತ್ವ ಅಪರಿಕಲ್ಪನಾತ್ । ಸಮವಾಯಸ್ಯ**
**ನಿರಾಕೃತತ್ವಾಚ್ಚ । ವಿಭಾಗಜ ಶಬ್ದೇ ಶಬ್ದಜ ಶಬ್ದೇ ಚತ್ವನ್ನಯೋಃ ವ್ಯಭಿ-**
**ಚಾರಾಚ್ಚ ।**

ಇಷ್ಟಾದರೂ ಬುದ್ಧ್ಯಾದಿಗಳು ಸಂಯೋಗರೂಪ ಅಸಮವಾಯಿಕಾರಣೋ-
ತ್ಪಾದಕಗಳು ಜನ್ಯವಿಶೇಷಗುಣವಾಗಿರುವುದರಿಂದ, ಶಬ್ದದಂತೆ–ಹೀಗೆ ಅನುಮಾನ
ದಿಂದ ಅಸಮವಾಯಿರೂಪ ಸಂಯೋಗ ಸಿದ್ಧಿಸುತ್ತಿರಲು, ಅದರಾಶ್ರಯವಾಗಿ ಮನಸ್ಸು
ಸಿದ್ಧವಾಗುತ್ತದೆ ಹೀಗೆನ್ನಬಾರದು. ಆತ್ಮೇಂದ್ರಿಯ ಸಂಯೋಗಕ್ಕೆ ಅಸಮವಾಯಿ
ಕಾರಣತೆ ಸಿದ್ಧಿಸುತ್ತಿರಲು ಅದಕ್ಕೆ ಇನ್ನೊಂದು ಕಲ್ಪನಾ ವ್ಯರ್ಥವೇ ಆಗುತ್ತದೆ.
ಸಮವಾಯವನ್ನು ನಿರಾಕರಿಸಿಯೂ ಇದೆ ಮತ್ತು ನಿನ್ನ ಮತದರೀತಿಯಾಗೆ
ವಿಭಾಗಜ ಶಬ್ದ ಶಬ್ದಜ ಶಬ್ದಗಳಲ್ಲಿ ವ್ಯಭಿಚಾರವೂ ಬರುತ್ತದೆ.

**ತಂತುರೂಪಾದ್ಯಸಮವಾಯಿಕಾರಣ ಜನ್ಯೇಷು ಘಟರೂಪಾದಿಷು**
**ವ್ಯಭಿಚಾರಾಚ್ಚ । ಅಧಿಕಂ ತು ಸುಧಾಯಾಂ ದ್ರಷ್ಟವ್ಯಂ । ನನ್ವೇವ-**
**ಮಪ್ಯಾಗಮಾದೇವ ಮನಃಸಿದ್ಧಿರಸ್ತು ನ ಸಾಕ್ಷಿಣೇತಿ ಚೇನ್ನ । ಜಾತಿ**
**ಬಧಿರಾಣಾಂ ಮನಃ ಪ್ರತೀತ್ಯಭಾವ ಪ್ರಸಂಗಾತ್ । ತಸ್ಮಾತ್ ಸಿದ್ಧಂ ಸಾಕ್ಷಿ**
**ಗ್ರಾಹ್ಯತ್ವಂ ಮನಸಃ । ಏವಂ ಮನೋಧರ್ಮಾಃ ಸುಖದುಃಖೇಚ್ಛಾದ**
**ಯೋಽಪಿ ಸಾಕ್ಷಿ ಗ್ರಾಹ್ಯಾಃ । ಅಹಂ ದುಃಖೀ ಸುಖೀತ್ಯಾದಿ ಪ್ರತ್ಯಯಾನಾಂ**
**ಸಾಕ್ಷಿರೂಪತ್ವಾತ್ । ನ ಚ ಸುಖದುಃಖಾದೀನಾಂ ನ ಮನೋಧರ್ಮತ್ವಂ**
**ಕಿಂತ್ವಾತ್ಮ ಧರ್ಮತ್ವಮಿತಿ ವಾಚ್ಯಂ । ಅಂತಃಕರಣ ಪರಿಣಾಮತ್ವಸ್ಯ ಗುಣ**
**ಪ್ರಕರಣೇ ವಕ್ಷ್ಯಮಾಣತ್ವಾತ್ । ನ ಚಾಯಮನುಭವೋ ಮಾನಸಃ ।**

ತಂತುರೂಪಾದಿ ಅಸಮವಾಯಿ ಕಾರಣದಿಂದ ಹುಟ್ಟಿದ ಪಟರೂಪಾದಿಗಳಲ್ಲಿ
ವ್ಯಭಿಚಾರವೂ ಬರುತ್ತದೆ. ಆದ್ದರಿಂದ ಆತ್ಮಮನಃ ಸಂಯೋಗಕ್ಕೆ ಕಾರಣತೆ ಕಲ್ಪನಾ
ಯೋಗ್ಯವಲ್ಲ. ಹೆಚ್ಚಿನ ಸಾಧಕ–ಬಾಧಕಗಳನ್ನೂ ಸುಧಾದಲ್ಲಿ ಕಾಣಬಹುದು.
ಇಷ್ಟಾದರೂ ಆಗಮದಿಂದಲೇ ಮನಸ್ಸಿನ ಸಿದ್ಧಿಯು. ಸಾಕ್ಷಿಯಿಂದ ಅನ್ನುವುದು
ಬೇಡ—ಹೀಗೆನ್ನಬಾರದು. ಹುಟ್ಟು ಕಿವುಡನಿಗೆ ಮನಸ್ಸಿನ ಪ್ರತೀತಿಯೇ ಇಲ್ಲ
ವಾಗುವ ಪ್ರಸಂಗ ಬರುತ್ತದೆ. ಆದಕಾರಣ ಮನಸ್ಸಿಗೆ ಸಾಕ್ಷಿ ಸಿದ್ಧತವೇ. ಹೀಗೆ
ಮನೋಧರ್ಮಗಳಿಂದ ಸುಖ–ದುಃಖ ಇಚ್ಛಾದಿಗಳು ಸಹ ಸಾಕ್ಷಿಗ್ರಾಹ್ಯವಾದವೇ
ಆಗಿರುತ್ತವೆ. ನಾನು ಸುಖ ಉಳ್ಳವನು, ದುಃಖ ಉಳ್ಳವನು ಇವೇ ಮೊದಲಾದ
ವ್ಯವಹಾರಗಳಿಗೆ ಸಾಕ್ಷಿ ಸಿದ್ಧತೆಯೇ ಇರುವುದರಿಂದ ಸುಖದುಃಖಾದಿಗಳು ಮನೋ
ಧರ್ಮಗಳಲ್ಲ, ಆತ್ಮ ಧರ್ಮಗಳು ಹೀಗೆನಬಾರದು, ಸುಖದುಃಖಾದಿಗಳು ಅಂತಃಕರಣ

ಪರಿಮಾಣಾರೂಪಗಳೆಂದು ಗುಣಪ್ರಕರಣದಲ್ಲಿ ಹೇಳುತ್ತೇವೆ. ಅಹಂ ಸುಖೀ ಇತ್ಯಾದಿಗಳು ಅನುಭವವು ಮಾನಸಿಕವಲ್ಲ ಅನ್ನುತ್ತೇವೆ.

**ಇಂದ್ರಿಯಾಣಾಂ ಸ್ವಧರ್ಮಗ್ರಹಣೇ ಸಾಮರ್ಥ್ಯಾಯೋಗಾತ್ । ಸಂತ್ವಾತ್ಮಧರ್ಮಾಃ ಸುಖಾದಯಃ ತಥಾಪಿ ನ ಮನೋಗ್ರಾಹ್ಯಾಃ । ಕದಾಪಿ ಸುಖದುಃಖಾದೌ ಸಂದೇಹಾದ್ಯಭಾವಾತ್ । ನ ಹಿ ಮಮಾನುಭೂತಂ ಸುಖಂವಾ ನವೇತಿ ಕಶ್ಚಿತ್ ಸಂದಿಗ್ಧೇನವಾ ಮಯಾನುಭೂತಂ ದುಃಖಮೇವ ನ ತು ಸುಖಮಿತಿ ಸುಖವಿಷಯೇ ವಿಪರ್ಯಯಸ್ತೋ ಭವತಿ । ಅತಃ ಸುಖದುಃಖಾದಯಃ ಸಾಕ್ಷಿವೇದ್ಯಾ ಇತಿ ಸಿದ್ಧಂ ।**

ಇಂದ್ರಿಯಗಳಿಗೆ ಸ್ವಧರ್ಮಗ್ರಹಣ ಸಾಮರ್ಥ್ಯವಿಲ್ಲದಿರುವುದರಿಂದ ಸುಖಾದಿಗಳು ಆತ್ಮಧರ್ಮಗಳೇ ಆಗಲಿ. ಆದರೂ ಅವುಗಳು ಮನಸ್ಸಿನಿಂದಲೇ ಗ್ರಹಣಾರ್ಹವಾದುವು. ಏಕೆಂದರೆ, ಸುಖದುಃಖಾದಿಗಳಲ್ಲಿ ಸಂಶಯವಿಲ್ಲವಾದ್ದರಿಂದ ಮತ್ತು ಯಾರಿಗೂ ನಾನನುಭವಿಸಿದ ಸುಖವು ದುಃಖವೇ ಎಂದಾಗಲೀ, ಸುಖವಲ್ಲ ಎಂದು ಅನುಭವಿಸಿ, ಸುಖದಲ್ಲಿ ವಿಪರೀತ ಜ್ಞಾನವಾಗಲೀ ಕಂಡಿರುವುದಿಲ್ಲ. ಆದುದರಿಂದ ಸುಖದುಃಖಾದಿಗಳು ಸಾಕ್ಷಿವೇದ್ಯಗಳೇ ಎಂದು ಸಿದ್ಧಾಂತವು.

**ಏತಚ್ಚ ಸಂಖ್ಯಾಧಿಕರಣ ಸುಧಾಯಾಂ ಚರ್ಚಿತಂ । ಏವಂ ಭಾವರೂಪ ಅಜ್ಞಾನಮಪಿ ಸಾಕ್ಷಿಗ್ರಾಹ್ಯಂ । ಅಹಮಜ್ಞೋ ಮಾಮನ್ಯಂಚನ ಜಾನಾಮಿ ಇತಿ ಅನುಭವಾತ್ । ನ ಚಾಯಂ ಮಾನಸಃ । ನಿರ್ಬಾಧ ಪ್ರತೀತಿತ್ವಾತ್ । ಆಶ್ರಯ ಗ್ರಹಣ ಅಸಮರ್ಥಸ್ಯ ಮನಸ ಆತ್ಮಗತಾಜ್ಞಾನ ಗ್ರಾಹಕತ್ವಾಸಂಭವಾಚ್ಚ । ನ ಚ ಶ್ರೋತ್ರೇಂದ್ರಿಯೇಣ ಶಬ್ದಗ್ರಹ- ವನ್ಮನಸಾ ಅಜ್ಞಾನ ಮಾತ್ರಗ್ರಹ ಇತಿ ವಾಚ್ಯಂ । ಆಶ್ರಯರಾಹಿತ್ಯೇನ ಶಬ್ದ ಗ್ರಹವತ್ಕದಾಪ್ಯಜ್ಞಾನಸ್ಯಾಶ್ರಯಂ ವಿನಾಽಜ್ಞಾನಾತ್ । ನಹ್ಯಜ್ಞಾನ- ಮಿತಿ ಪ್ರತೀತಿಃ ಕಿಂತ್ವಹಮಜ್ಞ ಇತಿ । ನ ಚ ಸಾಕ್ಷ್ಯುಪನೀತ ಆತ್ಮನಿ ಮನಸಾ ಅಜ್ಞಾನ ಪ್ರತೀತಿರಿತಿ ವಾಚ್ಯಂ । ಕ್ಲೃಪ್ತ ಸಾಕ್ಷಿಣೈವಾಜ್ಞಾನ ಪ್ರತೀತ್ಯುಪಪತ್ತೌ ಉಪನೀತಭಾನಾ ಕಲ್ಪನಾತ್ ।**

ಈ ವಿಷಯವು ಸಂಖ್ಯಾಧಿಕರಣ ಸುಧೆಯಲ್ಲಿ ಚರ್ಚಿತವಾಗಿದೆ. ಹೀಗೆ ಭಾವರೂಪ ಅಜ್ಞಾನವೂ ಸಾಕ್ಷಿ ಇಂದಲೇ ಸಿದ್ಧವಾಗುವುದು. ಏಕೆಂದರೆ, ಅಹಂ ನಾನು ಅಜ್ಞನು, ಬೇರೆ ಏನೂ ತಿಳಿದಿಲ್ಲ ಎಂಬ ಅನುಭವವಿರುವುದರಿಂದ, ಈ ಅನುಭವವು ಮಾನಸಿಕವೆನ್ನಲಾಗುವುದಿಲ್ಲ. ಏಕೆಂದರೆ, ನಿರ್ಬಾಧಾನುಭವವಾಗಿರುವುದರಿಂದ ಆಶ್ರಯಗ್ರಹಣ ಅಸಮರ್ಥವಾದ ಮನಸ್ಸಿಗೆ ಆತ್ಮನಲ್ಲಿರುವ ಅಜ್ಞಾನ ಗ್ರಹಣ ಸಾಮರ್ಥ್ಯವು ಅಸಂಭಾವಿತವೇ ಆಗಿರುವುದರಿಂದ ಮತ್ತು ಶ್ರೋತ್ರೇಂದ್ರಿಯದಿಂದ ಶಬ್ದ

ಗ್ರಹಿಸುವಂತೆ ಮನಸ್ಸಿನಿಂದ ಅಜ್ಞಾನ ಗ್ರಹಣವಾಗುತ್ತದೆ. ಅಂತಲೂ ಅನ್ನಬಾರದು, ಆಶ್ರಯವಿಲ್ಲದೇ ಶ್ರೋತ್ರೇಂದ್ರಿಯಕ್ಕೆ ಶಬ್ದಗ್ರಾಹಕ ಶಕ್ತಿಯೋ ಹಾಗೆಯೇ ಅಜ್ಞಾನಕ್ಕೆ ಆಶ್ರಯವಿಲ್ಲದೇ ಗ್ರಾಹಕತೆ ಇಲ್ಲ—ಏಕೆ, ಅಜ್ಞಾನವೇ ಆಗಿರುವುದರಿಂದ. ಹಾಗಲ್ಲ. ಆತ್ಮನಿಂದ ತಂದೊದಗಿಸಿರುವುದೇ ಮನಸ್ಸಿನ ಅಜ್ಞಾನ ಪ್ರತೀತ ಅನ್ನಬಹುದಲ್ಲ? ಅಂದರೆ, ಅದು ತಪ್ಪು, ಹಾಗನ್ನಬಾರದು. ಕ್ಲೃಪ್ತನಾದ ಸಾಕ್ಷಿ ಇಂದಲೇ ಸುಖ ದುಃಖಾದಿ ಪ್ರತೀತಿಯುಕ್ತವಾಗುತ್ತಿರಲು ಸಾಕ್ಷಿಯಿಂದ ಒದಗಿದ್ದೆಂಬ ಕಲ್ಪನಾ ಅಯುಕ್ತವೇ ಆಗಿರುತ್ತದೆ.

**ಕಿಂ ಚ ಸುಪ್ತಿಕಾಲೇ ಅಜ್ಞಾನ ಪ್ರತೀತಿರಾವಶ್ಯಕೀ । ಸುಪ್ತೋತ್ಥಿತಸ್ಯ ನ ಕಿಂಚಿದ್ಘಟಾದಿಕಮವೇದಿಷ್ಯಮಿತ್ಯನುಸ್ಮೃತೇಃ । ನ ಹೀ ಸುಪ್ತಿಕಾಲೇ ಅಜ್ಞಾನೋಪಸ್ಥಾಪಕಂ ಕಿಂಚಿದಸ್ತಿ ಮನಸೋಪ್ಯುಪರತತ್ವಾತ್ । ಅತಃ ಸಾಕ್ಷಿಣೈವಾಜ್ಞಾನ ಪ್ರತೀತಿರಿತಿ ಸಿದ್ಧಂ ಸಾಕ್ಷಿ ವೇದ್ಯತ್ವಮಜ್ಞಾನಸ್ಯ । ಅಧಿಕಂ ತು ಅವಿದ್ಯಾಪ್ರಕರಣೇ ವಕ್ಷ್ಯಾಮಃ ।**

ಮತ್ತು ನಿದ್ರಾಕಾಲದಲ್ಲಿ ಅಜ್ಞಾನವನ್ನು ಒಪ್ಪಲೇಬೇಕು. ಮಲಗಿ ಎದ್ದ ಕೂಡಲೇ ನನಗೆ ಇಲ್ಲಿ ಯಾವ ಜ್ಞಾನವೂ ಇರಲಿಲ್ಲ ಎಂಬ ಅನುಸರಿಸಿದ ಸ್ಮೃತಿ ಬರುವುದರಿಂದ. ನಿದ್ದೆ ಕಾಲದಲ್ಲಿ ಅಜ್ಞಾನವನ್ನು ಹುಟ್ಟಿಸುವುದು (ಎಬ್ಬಿಸುವುದು) ಯಾವುದೂ ಇರುವುದಿಲ್ಲ. ಮನಸ್ಸು ಉಪರತವೇ ಆಗಿರುವುದರಿಂದ ಸಾಕ್ಷಿಯಿಂದಲೇ ಅಜ್ಞಾನಾದಿಗಳ ತಿಳುವಳಿಕೆ ಎಂದು ಸಿದ್ಧವು. ಅಜ್ಞಾನಕ್ಕೆ ಸಾಕ್ಷಿ ವೇದ್ಯತೆ ಎಂದು ಸಿದ್ಧವು. ಹೆಚ್ಚಿನ ವಿಷಯವನ್ನು ಅವಿದ್ಯಾ ಪ್ರಕರಣದಲ್ಲಿ ತಿಳಿಸುತ್ತೇವೆ.

**ನ ಚ ಅನಾದಿ ಮಾಯಯಾ ಸುಪ್ತ ಇತ್ಯಾದ್ಯಾಗಮಾತ್ ತತ್ಸಿದ್ಧಿಃ । ಜಾತಿಬಧಿರಾಣಾಂ ಅಜ್ಞಾನ ಪ್ರತೀತ್ಯಭಾವ ಪ್ರಸಂಗಾದಿತಿ । ವಿಷಯವ್ಯಾಕೃತಾಕಾಶೋಪಿ ಸಾಕ್ಷಿವೇದ್ಯಃ । ಇಹ ವಿಹಂಗಮಃ ಪತತಿ ಇತಿ ಪ್ರತ್ಯಯಸ್ಯ ಸಾಕ್ಷಿರೂಪತ್ವಾತ್ । ನ ಚೇಹ ಇತಿ ಪ್ರತ್ಯಯಶ್ಚ ಚಾಕ್ಷುಷಶ್ಚಕ್ಷುರನ್ವಯ ವಿಧಾನಾದಿತಿ ವಾಚ್ಯಂ । ರೂಪರಹಿತ ದ್ರವ್ಯತ್ವೇನ ಚಾಕ್ಷುಷತ್ವ ಸಾಮಗ್ರೀ ವಿರಹಾತ್ । ಇಂದ್ರಿಯಾನುವಿಧಾನಸ್ಯ ಪಕ್ಷಿಗ್ರಹಣ ಏವ ಉಪಯುಕ್ತತ್ವಾತ್ । ನ ಚ ಸಾಕ್ಷಿಣೋ ಬಹಿರರ್ಥೇ ಪಕ್ಷಿಣಿ ಸ್ವಾತಂತ್ರ್ಯಾಭಾವಾಚ್ಚಕ್ಷುಷಶ್ಚಾಕಾಶೇ ಸಾಮರ್ಥ್ಯಾಭಾವಾತ್ ಕಥಂ ಇಹ ಪಕ್ಷೀ ಪತತಿ ಇತಿ ಪ್ರತ್ಯಯಃ ಸಾಕ್ಷಿಣಾ ನಿರ್ವಾಹ್ಯ ಇತಿ ವಾಚ್ಯಂ। ಸಾಕ್ಷಿಣೋಪನೀತ ಆಕಾಶೇ ಚಕ್ಷುಷೇಹ ಪಕ್ಷೀತಿ ಪ್ರತ್ಯಯ ಸಂಭವಾತ್ । ಸುರಭಿಶ್ಚಂದನ ಖಂಡ ಇತಿ ಪ್ರತ್ಯಯವತ್ ।**

ಅನಾದಿ ಕಾಲದ ಮಾಯಾ (ಭಗದದಿಚ್ಛೆ)ದಿಂದ ನಿದ್ರೆ ಎಂಬ ಆಗಮದಿಂದ

ಅಜ್ಞಾನ ಸಿದ್ಧವು ಎನ್ನಬಾರದು. ಹುಟ್ಟು ಕಿವುಡಗೆ ಆಗವು ಜ್ಞಾನವು ಇಲ್ಲ ವಾದುದರಿಂದ ಅಜ್ಞಾನವೇ ಇಲ್ಲವಾಗಬೇಕಾದೀತು. ಹೀಗೆ ಅವ್ಯಾಕೃತಾಕಾಶವೂ ಸಾಕ್ಷಿ ಇಂದಲೇ ಸಿದ್ಧಿಸುತ್ತದೆ. ಇಲ್ಲಿ ಪಕ್ಷಿ ಬೀಳುತ್ತದೆ ಎಂಬ ಜ್ಞಾನವು ಸಾಕ್ಷಿ ರೂಪವೇ ಆಗಿರುವುದರಿಂದ ಇಲ್ಲಿ ಪಕ್ಷಿ ಎಂಬ ಜ್ಞಾನವು ಚಕ್ಷುರಿಂದ್ರಿಯಕ್ಕೆ ಕಣ್ಣಿಗನುಸರಿಸಿದ ಕ್ರಮದಿಂದ ಎಂತಲೂ ಅನಬಾರದು. ಆಕಾಶವು ರೂಪವಿಲ್ಲದ ದ್ರವ್ಯವಾದುದರಿಂದ ಕಣ್ಣಿಗೆ ಕಾಣುವ ಸಾಮಾಗ್ರೀ ಇಲ್ಲವಾದ್ದರಿಂದ, ಅಲ್ಲಿ ಚಕ್ಷುರಿಂದ್ರಿಯದ ಉಪಯೋಗವು ಪಕ್ಷಿಜ್ಞಾನ ಮಾತ್ರದಲ್ಲೇ ಉಪಯುಕ್ತವಾದ್ದರಿಂದ ಸಾಕ್ಷಿಗೆ ಹೊರಗಿರುವ ಪಕ್ಷಿಜ್ಞಾನ ಸ್ವತಃ ಆಗುವುದಿಲ್ಲ. ಕಣ್ಣಿಗೆ ಆಕಾಶ ವಿಷಯವಲ್ಲ ಅಂದ ಮೇಲೆ ಇಲ್ಲಿ ಪಕ್ಷಿ ಬೀಳುತ್ತದೆ ಎಂಬ ಜ್ಞಾನ ಹೇಗೆ ಅಂದರೆ, ಸಾಕ್ಷಿ ಇಂದ ತಂದುಕೊಟ್ಟ ಆಕಾಶದಲ್ಲಿ ಕಣ್ಣಿನಿಂದ ಇಲ್ಲಿ ಪಕ್ಷಿ ಎಂಬ ಜ್ಞಾನ ಸಂಭಾವಿತವೇ ಆಗಿರುತ್ತದೆ. ಕಣ್ಣಿನಿಂದ ಗಂಧದ ಚೆಕ್ಕೆಯನ್ನು ಕಂಡು ಸುಗಂಧ ಉಳ್ಳದ್ದು ಎಂಬ ಜ್ಞಾನ ಹೇಗೆಯೋ ಹಾಗೆ ಅಲೌಕಿಕ ಸನ್ನಿಕರ್ಷದಿಂದ ಆತ್ಮನಿಂದ ಉಪನೀತ (ಸ್ವಾಭಾವಿಕವಾಗಿ) ಬಂದ ಜ್ಞಾನವಿಷಯವಾದ ಆಕಾಶದಲ್ಲಿ ಕಣ್ಣಿನಿಂದ ಇಲ್ಲಿ ಪಕ್ಷಿ ಎಂಬ ಜ್ಞಾನವು.

**ನ ಚಾಲೋಕಾವಯವ ಏವ ಇಹ ಪ್ರತ್ಯಯ ವಿಷಯಃ ನ ತು ಆಕಾಶ ಇತಿ ವಾಚ್ಯಂ । ಇಹ ಆಲೋಕ ಇಹ ಆಲೋಕ ಅಭಾವ ಇತ್ಯಾದಿ ಪ್ರತ್ಯಯಾನಾಂ ತಥಾಪಿ ಅನಿರ್ವಾಹಾತ್ । ನನ್ವಥಾಪಿ ನಾಕಾಶಂ ಸಾಕ್ಷಿ ಪ್ರತ್ಯಕ್ಷಂ । ಅನುಮಾನೇನೈವ ತತ್ಸಿದ್ಧಿ ಸಂಭವಾತ್ ।**

ಇಹ ಎಂಬುದು ಆಕಾಶಾವಯವವಲ್ಲ. ಅಲ್ಲಿ ತೋರುವುದು ಬೆಳಕಿನ ಒಂದು ಭಾಗ ಅನ್ನಬಾರದು. ಏಕೆಂದರೆ, ಇಲ್ಲಿ ಬೆಳಕು, ಇಲ್ಲಿ ಬೆಳಕಿಲ್ಲ ಎಂಬ ವ್ಯವಹಾರವೇ ನಿರ್ವಾಹವಾಗದೇ (ಅರ್ಥವಿಲ್ಲದ್ದಾಗಿ) ಹೋಗಬೇಕಾದೀತು. ಪುನಃ ಪೂರ್ವಪಕ್ಷ ಮಾಡುತ್ತಾರೆ. ಆದರೂ ಆಕಾಶವು ಸಾಕ್ಷಿ ಪ್ರತ್ಯಕ್ಷವಲ್ಲ. ಆದರೆ ಅನುಮಾನದಿಂದ ತಿಳಿಯತಕ್ಕದ್ದು. ಹೇಗೆಂದರೆ ಶಬ್ದವು ಗುಣವೇ ಆಗಿದೆ. ಸಾಮಾನ್ಯವಾಗಿ ನಮ್ಮ ಬಹಿರಿಂದ್ರಿಯದಿಂದ ತಿಳಿಯುವುದಾಗಿರುವುದರಿಂದ ರೂಪದಂತೇ ಎಂಬ ಅನುಮಾನವು

**ತಥಾ ಹಿ । ಶಬ್ದಸ್ತಾವದ್ಗುಣಃ ಸಾಮಾನ್ಯವತ್ವೇ ಸತ್ಯಸ್ಮದಾದಿ-ಬಾಹ್ಯೈಕೇಂದ್ರಿಯಗ್ರಾಹ್ಯತ್ವಾತ್ । ರೂಪವತ್ । ಗುಣತ್ವಾದ್ದ್ರವ್ಯಾಶ್ರಿತ ಇತಿ ಸಾಮಾನ್ಯತಃ ಶಬ್ದಾಶ್ರಯದ್ರವ್ಯಸಿದ್ಧೌ ಶಬ್ದೋ ನ ಸ್ಪರ್ಶವದ್ವಿಶೇಷ ಗುಣಃ ಪ್ರತ್ಯಕ್ಷತ್ವೇ ಸತ್ಯಕಾರಣ ಗುಣಪೂರ್ವಕತ್ವಾತ್ಸುಖಾದಿವತ್ । ನಾಪಿ ಆತ್ಮಗುಣಃ । ಬಾಹ್ಯೇಂದ್ರಿಯಗ್ರಾಹ್ಯತ್ವಾತ್ । ರೂಪಾದಿವತ್ । ನಾಪಿ ದಿಕ್ಕಾಲಮನಸಾಂ ಗುಣಃ ವಿಶೇಷಗುಣತ್ವಾತ್ಪ್ರತ್ಯಕ್ಷತ್ವಾಚ । ಅತಃ ಪರಿಶೇಷಾತ್ ಶಬ್ದಗುಣಕ ಆಕಾಶಃ ಸಿದ್ಧಿರಿತಿ ಚೇನ್ನ ।**

ಈ ಅನುಮಾನದಿಂದ ಗುಣವಾದ್ದರಿಂದ ಸಾಮಾನ್ಯತಃ ಶಬ್ದಾಶ್ರಯ ದ್ರವ್ಯವೆಂದು ಸಿದ್ಧಿಸಲು ಶಬ್ದವು ಸ್ಪರ್ಶದಂತೇ ವಿಶೇಷ ಗುಣವಲ್ಲ. ಪ್ರತ್ಯಕ್ಷವಾಗಿಯೂ ಮತ್ತೊಂದಕ್ಕೆ ಕಾರಣವಾಗದ ಗುಣಪೂರ್ವಕತೆ ಇರುವುದರಿಂದ ಸುಖಾದಿಗಳಂತೆ, ರೂಪದಂತೇ ಬಾಹ್ಯೇಂದ್ರಿಯ ಗ್ರಾಹ್ಯತೆ ಇರುವುದರಿಂದ ಆತ್ಮಗುಣವಂತೂ ಅಲ್ಲ. ಶಬ್ದವು ವಿಶೇಷ ಗುಣವಾಗಿರುವುದರಿಂದ ಪ್ರತ್ಯಕ್ಷವೂ ಆಗಿರುವುದರಿಂದ ದಿಕ್ಕಿನ, ಕಾಲದ, ಮನಸ್ಸಿನ, ಗುಣವಂತೂ ಅಲ್ಲ. ಹೀಗೆ ಒಟ್ಟಿನಲ್ಲಿ ವಿಚಾರ ಮಾಡಲು ಶಬ್ದಾಶ್ರಯವಾದ ಆಕಾಶವು ಅನುಮಾನದಿಂದ ಸಿದ್ಧಿಸುತ್ತದೆ ಎಂದರೆ ತಪ್ಪು. ಹಾಗೆನ್ನಬಾರದು.

**ಜಾತಿ ಬಧಿರಾಣಾಂ ಆಕಾಶ ಪ್ರತ್ಯಯಾಭಾವ ಪ್ರಸಂಗಾತ್ । ಶಬ್ದಜ್ಞಾನಾಭಾವೇನ ಅನುಮಾನಾಪ್ರವೃತ್ತೇಃ । ಕಿಂ ಚ ಶಬ್ದೋ ಗುಣ ಇತ್ಯತ್ರ ವರ್ಣಾತ್ಮಕಃ ಶಬ್ದೋ ವಾ ಪಕ್ಷೋಧ್ವನ್ಯಾತ್ಮಕೋ ವಾ । ನಾದ್ಯಃ । ತಸ್ಯ ದ್ರವ್ಯತ್ವಸ್ಯ ಸಾಧಯಿಷ್ಯಮಾಣತ್ವಾತ್ । ನ ದ್ವಿತೀಯಃ। ತಸ್ಯ ಪೃಥಿವ್ಯಾದಿ ಗುಣತ್ವೋಪಪತ್ತೇಃ । ನ ಚ ಪ್ರತ್ಯಕ್ಷತ್ವೇ ಸತ್ಯ ಕಾರಣ ಗುಣಪೂರ್ವಕತ್ವಂ ಪೃಥಿವ್ಯಾದ್ಯನಾಶ್ರಿತತ್ವ ಸಾಧಕಮಿತಿವಾಚ್ಯಂ । ಪಿಠರಪಾಕ ಪಕ್ಷೇ ಘಟಾದಿ ನಿಷ್ಠ ಪಾಕಜರೂಪೇ ವ್ಯಭಿಚಾರ ಪ್ರಸಂಗಾತ್ । ಕಿಂ ಚ ಭೇರೀ ಶಂಖಾದಿ ನಿಷ್ಠತಯಾ ಶಬ್ದಸ್ಯ ಪ್ರತೀಯಮಾನತ್ವೇನ ಅನುಮಾನಸ್ಯ ಪ್ರತ್ಯಕ್ಷ ಬಾಧಃ ।**

ಆಕಾಶವು ಆಗಮದಿಂದ ಎಂದು ತಿಳಿಯುವುದು ಎಂದರೆ ಹುಟ್ಟು ಕಿವುಡನಿಗೆ ಆಕಾಶ ವ್ಯವಹಾರವೇ ಇಲ್ಲವಾಗಬೇಕಾದೀತು. ಶಬ್ದಜ್ಞಾನವೇ ಇಲ್ಲವಾದ್ದರಿಂದ ಅನುಮಾನ ಪ್ರವೃತ್ತಿಯೂ ಇರುವುದಿಲ್ಲ ಮತ್ತು ಶಬ್ದವು ಗುಣವೆಂಬ ಪಕ್ಷದಲ್ಲಿ ವರ್ಣಾತ್ಮಕ ಶಬ್ದಗಳೇ ? ಅಥವಾ ಧ್ವನ್ಯಾತ್ಮಕ ಶಬ್ದಗಳೇ ? ವರ್ಣರೂಪ ಶಬ್ದಗಳನ್ನು ನಾವು ದ್ರವ್ಯವೆಂದು ಸಾಧಿಸುವವರಿದ್ದೇವೆ. ಮೊದಲನೆಯ ಪಕ್ಷವು ಕೂಡುವುದಿಲ್ಲ. ಧ್ವನ್ಯಾತ್ಮಕ ಶಬ್ದವೆಂದರೆ ಅದಕ್ಕೆ ಪೃಥಿವ್ಯಾದಿ ಗುಣವು ಯುಕ್ತವಾಗುವುದರಿಂದ ನಾವು ಹಿಂದೆ ಪ್ರತ್ಯಕ್ಷವೂ ಆಗಿ ಅಕಾರಣಗುಣಪೂರ್ವಕತೆ ರೂಪ ಹೇತುವಿನಿಂದ ಪೃಥಿವೀ ಅನಾಶ್ರಿತತೆಯನ್ನು ಸಿದ್ಧಿಸಿದೆ ಎನ್ನಬಾರದು. ಪಿಠರಪಾಕ ಪಕ್ಷದಲ್ಲಿ ಘಟಾದಿಗಳಲ್ಲಿರುವ ಪಾಕದ ರೂಪದಲ್ಲಿ ವ್ಯಭಿಚಾರ ಬರುತ್ತದೆ ಮತ್ತು ಭೇರಿ ಶಂಖಾದಿಗಳಲ್ಲಿ ಶಬ್ದ ಕಂಡುಬರುವುದರಿಂದ ಅನುಮಾನಕ್ಕೆ ಪ್ರತ್ಯಕ್ಷ ಬಾಧವೂ ಬರುತ್ತದೆ.

**ನನು ಶಬ್ದಸ್ಯ ಶಂಖಾದ್ಯಾಶ್ರಯತ್ವೇ ಶ್ರೋತ್ರೇಂದ್ರಿಯೇಣ ಶಬ್ದಪ್ರತ್ಯಕ್ಷಮೇವ ನ ಸ್ಯಾತ್ । ತಥಾ ಹಿ । ಶ್ರೋತ್ರಂ ಸಂಬದ್ಧಂ ಸತ್ ಶಬ್ದಂ ಗೃಹ್ಣಾತಿ ಉತ ಅಸಂಬದ್ಧಂ । ನಾಂತ್ಯಃ । ಅತಿ ಪ್ರಸಂಗಾತ್ । ನಾದ್ಯಃ ।**

**ಸಂಬಂಧೋಪಾಯಾಭಾವಾತ್ । ನಹಿ ಶಬ್ದಃ ಶಂಖಪರಿತ್ಯಜ್ಯ ಶ್ರೋತ್ರ ದೇಶಂ ಗಚ್ಛತಿ । ಅಮೂರ್ತತ್ವಾತ್ । ನ ವಾ ಶ್ರೋತ್ರಂ ಗಚ್ಛತಿ । ವಿಭು-ತ್ವಾತ್ । ಅತಃ ಶಬ್ದಸ್ಯ ಆಕಾಶಗುಣತ್ವಂ ಅಂಗೀಕೃತ್ಯ ಸ್ವಸಮವಾಯಿದೇಶೇ ವೀಚೀತರಂಗ ನ್ಯಾಯೇನ ಶಬ್ದಾಂತರೋತ್ಪಾದೇಯಃ ಶಬ್ದಃ ಕರ್ಣದೇಶ ಸಂಬಂದ್ಧಃ ಸ ಏವ ಶ್ರೋತ್ರಗ್ರಾಹ್ಯ ಇತಿ ಸಿಧ್ಯತಿ ಇತಿ ಚೇನ್ನ । ಶಬ್ದಸ್ಯೈವ ಶ್ರೋತ್ರಂ ಪ್ರತ್ಯಾಗಮನೋಪಪತ್ತೇಃ । ಪುಷ್ಪಾದಿಗಂಧವತ್ । ನ ಚ ಪುಷ್ಪಾವಯವ ಸಂಬದ್ಧ ಏವ ಗಂಧಸ್ತೈಃ ಸಹಾಗಚ್ಛತೀತಿ ವಾಚ್ಯಂ । ಅಸಿದ್ಧೇಃ ।**

ಶಬ್ದಕ್ಕೆ ಶಂಖಾದಿ ಆಶ್ರಯ ಒಪ್ಪುವುದಾದರೆ, ಕಿವಿಯಿಂದ ಶಬ್ದ ಪ್ರತ್ಯಕ್ಷವೇ ಆಗದೇ ಹೋಗಬೇಕಾದೀತು. ಹೇಗೆಂದರೆ, ಕಿವಿಯು ಸಂಬದ್ಧವಾದ ಶಬ್ದವನ್ನು ಗ್ರಹಿಸುತ್ತದೆಯೋ ? ಅಸಂಬದ್ಧವಾಗಿಯೇ ಗ್ರಹಿಸುತ್ತದೆಯೋ ? ಸಂಬದ್ಧವಾಗದೇ ಗ್ರಹಿಸುತ್ತದೆ ಎಂಬ ಎರಡನೇ ಪಕ್ಷ ಅಯುಕ್ತವು. ಅತಿಪ್ರಸಂಗವಾಗುವುದರಿಂದ (ಯಾವ ಇಂದ್ರಿಯಕ್ಕೂ ವಿಷಯಸ್ಪರ್ಶವಿಲ್ಲದೇ ಜ್ಞಾನವಾಗಲಿ ಎಂಬ) ಸಂಬದ್ಧವಾಗಿ ಎಂಬ ಎರಡನೇ ಪಕ್ಷವೂ ಸರಿ ಅಲ್ಲ. ಸಂಬಂಧದುಪಾಯವಾದುದಿಲ್ಲವಾದ್ದರಿಂದ ಶಬ್ದವಾದುದು ಶಂಖವನು ಬಿಟ್ಟು ಶ್ರೋತ್ರದ ಬಳಿ ಹೋಗುತ್ತದೆ ಎಂದರೆ ತಪ್ಪು— ಅಮೂರ್ತವಾದ್ದರಿಂದ ಶ್ರೋತ್ರೇಂದ್ರಿಯಗಳಲ್ಲಿ ಹೋಗುತ್ತದೆ ಅನ್ನಲೂ ಬರುವುದಿಲ್ಲ— ವಿಭುವಾದ್ದರಿಂದ. ಅದುದರಿಂದ ಶಬ್ದವಾದುದು ಆಕಾಶ ಗುಣವೆಂದು ಒಪ್ಪಿ, ತನ್ನ ಸಮವಾಯಿ ಪ್ರದೇಶದಲ್ಲಿ ವೀಚೀತರಂಗ ನ್ಯಾಯದಿಂದ ಶಬ್ದಾಂತರಗಳು ಹುಟ್ಟುತ್ತಿರಲು ಯಾವ ಶಬ್ದವು ಕಿವಿಗೆ ಸಂಬದ್ಧವಾಗುತ್ತದೋ ಆ ಶಬ್ದವೇ ಕಿವಿಯಿಂದ ಗೃಹೀತವಾಗುತ್ತದೆ. ಹೀಗೆ ಸಿದ್ಧವಾಗುತ್ತದೆ ಎಂಬುದು ಅಪದ್ಧವೇ. ಶಬ್ದವೇ ಕಿವಿಯನ್ನು ಕುರಿತು ಬರುವುದೆಂಬುದೇ ಯುಕ್ತವಾಗುತ್ತದೆ. ಹೂವಿನ ಗಂಧಾದಿಗಳಂತೇ ! ಅಲೌಕಿಕಸನ್ನಿಕರ್ಷದಿಂದ ಪುಷ್ಪಗಳ ಅವಯವಗಳಿಂದ ಕಲೆತು ಗಂಧ ಹೋಗುತ್ತದೆ ಎನ್ನಬಾರದು (ಅದು ಕಣ್ಣಿಗೆ ಕಂಡಿಲ್ಲವಾದುದರಿಂದ) ಅಸಿದ್ಧವಾದುದರಿಂದ.

**ಶಬ್ದಸ್ಯಾಪಿ ಶಂಖಾವಯವೈರಾಗಮನ ಸಂಭವಾತ್ । ತದುಕ್ತಂ ಬೃಹದ್ಭಾಷ್ಯೇ । ಶಬ್ದೋ ಹಿ ಸ್ಥಾನಾಂತರಂಗತ್ವಾಪ್ರತಿಶ್ರುತಿತ್ವಂ ಉಪೈತೀತಿ । ಶ್ರೋತ್ರಸ್ಯ ವಾ ಶಬ್ದದೇಶಂ ಪ್ರತಿಗಮನಂ ಅಸ್ತು ಚಕ್ಷುರ್ವತ್ । ನ ಚ ಆಕಾಶಸ್ಯ ವಿಭೋರ್ನ ಗಮನಮಿತಿ ವಾಚ್ಯಂ । ಭೂತಾಕಾಶಸ್ಯ ವಿಭುತ್ವಾಭಾವಾತ್ । ತಾಮಸಾಹಂಕಾರ ಕಾರ್ಯತ್ವೇನ ಗಮನಸಂಭವಾಚ್ಚ । ಶ್ರೋತ್ರೇಂದ್ರಿಯಸ್ಯ ಶುದ್ಧಾಕಾಶತ್ವೇ ಸಾಧಕಾಭಾವಾಚ್ಚ ।**

ಶಬ್ದಕ್ಕೆ ಶಂಖಾದಿಗಳಿಂದ ಬರುವಿಕೆ ಸಂಭಾವಿತವೇ ಆಗಿರುತ್ತದೆ. ಇದನ್ನು ಬೃಹದ್ಭಾಷ್ಯದಲ್ಲಿ ಹೇಳಿರುತ್ತಾರೆ. ಶಬ್ದವಾದರು ಸ್ಥಾನಾಂತರಗಳಿಗೆ ಹೋಗಿಯೋ ಎಲ್ಲಾ ಕಿವಿಗಳಲ್ಲಿ ಬೀಳುತ್ತದೆ ಎಂದು ಅಥವಾ ಶ್ರೋತ್ರೇಂದ್ರಿಯವೇ ಶಬ್ದದಲ್ಲಿ ಹೋಗಿ ಗ್ರಹಿಸುತ್ತದೆ. ಚಕ್ಷುರಿಂದ್ರಿಯದಂತೇ ವಿಭುವಾದ್ದರಿಂದ ಆಕಾಶಕ್ಕೆ ಗಮನ ಕೊಡುವುದಿಲ್ಲ ಎನಬಾರದು. ಭೂತಾಕಾಶ ವಿಭುವಲ್ಲ. ಆದುದರಿಂದ ಮತ್ತು ಭೂತಾಕಾಶ ತಾಮಸಾಹಂಕಾರದಿಂದ ಹುಟ್ಟಿದುದರಿಂದ, ಅದಕ್ಕೆ ಗಮನ ಯುಕ್ತವೇ ಆಗಿರುತ್ತದೆ. ಶ್ರೋತ್ರೇಂದ್ರಿಯವು ಶುದ್ಧಾಕಾಶವೆನಲು ಸಾಧಕಗಳಿರುವುದಿಲ್ಲ ವಾದುದರಿಂದ,

**ಅಸ್ತು ವಾ ಕಥಂಚಿತ್ ಭೂತಾಕಾಶಸಿದ್ಧಿರನುಮಾನಾತ್। ಅವ್ಯಾಕೃತ ಆಕಾಶಸಿದ್ಧಿಸ್ತು ಸಾಕ್ಷಿಣೈವ। ತತ್ಸಾಧಕಲಿಂಗಾಭಾವಾತ್। ಆಕಾಶದ್ವೈತಂ ತುಸಾಧಿತಮಥಸ್ತಾತ್। ನ ಚ ಆಗಮಾದಾಕಾಶಸಿದ್ಧಿಃ। ಜಾತಿ ಬಧಿರಾಣಾಂ ಆಕಾಶ ಪ್ರತ್ಯಯಾಭಾವ ಪ್ರಸಂಗಾತ್। ತಸ್ಮಾದಾಕಾಶಸಿದ್ಧಿಃ ಸಾಕ್ಷಿಣೈವ। ತದುಕ್ತಂ ಪ್ರಕೃತ್ಯಧಿಕರಣಾನುವ್ಯಾಖ್ಯಾನೇ। ಸತ್ಯತ್ವಂ ಗಗನಾದೇಶ್ಚ ಸಾಕ್ಷಿ ಪ್ರತ್ಯಕ್ಷ ಸಾಧಿತಮಿತಿ। ಸುಧಾಯಾಮಪ್ಯೇವಮೇವೋಪಪಾದಿತಮಿತಿ। ಅಧಿಕಂ ತು ಸುಧಾಯಾಂ ದ್ರಷ್ಟವ್ಯಂ। ಏವಂ ಕಾಲೋಽಪಿ ಸಾಕ್ಷಿ ಪ್ರತ್ಯಕ್ಷ ಏವ। ಇದಾನೀಂ ಘಟ ಇತ್ಯಾದಿ ಪ್ರತೀತೇಃ ಸಾಕ್ಷಿರೂಪತ್ವಾತ್। ನನು ಕಾಲೋನ ಸಾಕ್ಷಿ ಪ್ರತ್ಯಕ್ಷಃ। ತದಿತರ ಪ್ರಮಾಣ ವಿಷಯತ್ವಾದಿತಿ ಚೇನ್ನಃ।**

ಭೂತಾಕಾಶವು ಅನುಮಾನದಿಂದ ಸಿದ್ಧಿಸಿದರೂ ಅವ್ಯಾಕೃತಾಕಾಶವು ಸಾಕ್ಷಿಯಿಂದಲೇ ಸಿದ್ಧವಾಗುತ್ತದೆ. ಅವ್ಯಾಕೃತಾಕಾಶ ಸಾಧಕ ಹೇತುವಿಲ್ಲವಾದ್ದರಿಂದ ಆಕಾಶದ ಎರಡನ್ನು ಸಾಧಿಸಿದ್ದೇವೆ ಆಗಮದಿಂದ ಆಕಾಶದ ಸಿದ್ಧಿಯು ಅಸಂಭಾವಿತವೇ. ಹುಟ್ಟು ಕಿವುಡನಿಗೆ ಆಕಾಶ ವ್ಯವಹಾರವೇ ಇಲ್ಲವಾಗಬೇಕಾದೀತು. ಆದುದರಿಂದ ಆಕಾಶ ಸಿದ್ಧಿಯು ಸಾಕ್ಷಿಯಿಂದಲೇ. ಇದನ್ನು ಪ್ರಕೃತ್ಯಧಿಕರಣ ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ ಸತ್ಯತ್ವಂಗಗನಾದೇಶ್ಚ ಪ್ರತ್ಯಕ್ಷವಾಗಿ ಸಾಕ್ಷಿಯಿಂದ ಸಾಧಿತವಾಗಿದೆ. ಹೀಗೆಂದು ಸುಧಾದಲ್ಲಿಯೂ ಹೀಗೆ ಸಾಧಿಸಿರುತ್ತದೆ. ಹೆಚ್ಚಿನ ವಿಷಯವನ್ನು ಸುಧಾದಲ್ಲಿ ಕಾಣಬಹುದು. ಹೀಗೆ ಕಾಲವು ಸಾಕ್ಷಿ ಪ್ರತ್ಯಕ್ಷವೇ. ಈಗ ಘಟವಿದೆ ಮೊದಲಾದ ಪ್ರತ್ಯಕ್ಷವು ಸಾಕ್ಷಿರೂಪವೇ ಆಗಿರುವುದರಿಂದ ಕಾಲವು ಪ್ರತ್ಯಕ್ಷವೇ ಯಾವ ಬೇರೆ ಪ್ರಮಾಣಗಳಿಂದ ತಿಳಿಯಲನರ್ಹವಾದುದರಿಂದ ಹೀಗನಬಾರದು.

**ಪ್ರಮಾಣಾಂತರಸ್ಯ ತತ್ರ ಅನವಕಾಶಾತ್। ತಥಾ ಹಿ। ನ ತಾವತ್ಪ್ರತ್ಯಕ್ಷಂ। ರೂಪಾಭಾವಾತ್। ನಾ ಪಿ ಆಗಮಃ। ಜಾತಿಬಧಿರಾಣಾಂ**

ಅಪಿ ಇದಾನೀಂ ಇತಿ ಪ್ರತ್ಯಯಾತ್ । ನಾಪಿ ಅನುಮಾನಂ । ತತ್ಪ್ರತಿಬದ್ಧ ಲಿಂಗಾಭಾವತ್ । ಕಿಂ ಚ ಅನುಮಾನಮಪಿ ಕಾಲಪಕ್ಷಕಂ ವಾ ಕಾಲ-ಸಾಧ್ಯಕಂ ವಾ । ನಾದ್ಯದ್ವಿತೀಯೌ । ಆಶ್ರಯಾಸಿದ್ಧಿ ಅಪ್ರಸಿದ್ಧ ವಿಶೇಷಣ-ತ್ವಯೋರಾಪಾತಾತ್ । ತತ್ಸಿದ್ಧೌ ಚ ಅನುಮಾನವೈಯರ್ಥ್ಯಾತ್ । ತದುಕ್ತಂ ಪ್ರಕೃತ್ಯಧಿಕರಣಾನುವ್ಯಾಖ್ಯಾನೇ । ಪಕ್ಷೀ ಕರ್ತುಮಶಕ್ಯತ್ವಾತ್ ನಾನುಮಾತತ್ರ ವರ್ತತ ಇತಿ । ಕಿಂ ಚ ಅಸ್ತು ಯಥಾ ಕಥಂಚಿದನುಮಾನ ಪ್ರವೃತ್ತಿಃ ।

ಬೇರೆ ಪ್ರಮಾಣಗಳಿಗವಕಾಶವಿರುವುದಿಲ್ಲ. ಹೇಗೆಂದರೆ ಪ್ರತ್ಯಕ್ಷನಂತೂ ಇಲ್ಲ—ರೂಪವಿಲ್ಲವಾದ್ದರಿಂದ ಅನುಮಾನವೂ ಸಾಧಕವಾಗುವುದಿಲ್ಲ—ಅನುಕೂಲ ಲಿಂಗ ವಾದುದರಿಂದ ಮತ್ತು ಅನುಮಾನವು ಕಾಲ ಪಕ್ಷಕವೇ ? ಸಾಧಕವೇ ? ಎರಡೂ ಪಕ್ಷಗಳಲ್ಲಿಯೂ ಆಶ್ರಯಾಸಿದ್ಧಿ ಅಪ್ರಸಿದ್ಧ ವಿಶೇಷಣತೆ ದೋಷ ಬರುತ್ತದೆ. ಕಾಲ ಸಿದ್ಧಿವಿಲ್ಲವಾದ್ದರಿಂದ, ಅದು ಸಿದ್ಧಿಸಿದರೆ ಅನುಮಾನವೇ ವ್ಯರ್ಥವಾಗುತ್ತದೆ. ಇದನ್ನು ಪ್ರಕೃತ್ಯಧಿಕರಣ ಅನುವ್ಯಾಖ್ಯಾನ ಸುಧಾದಲ್ಲಿ ಹೇಳಿರುತ್ತಾರೆ. ಕಾಲವನ್ನು ಪಕ್ಷ ಮಾಡಲು ಬರುವುದಿಲ್ಲ—ಸಾಧ್ಯ ಬರುವುದಿಲ್ಲ. ಕಾಲ ವಿಷಯದಲ್ಲಿ ಅನುಮಾನವು ಒದಗುವುದಿಲ್ಲ. ಇರಲಿ ಕಥಂಚಿತ್ ಒಂದು ವೇಳೆ ಅನುಮಾನ ಪ್ರವೃತ್ತಿಯು ಎಂದರೆ,

ತಥಾಪಿ ಕಾಲಸಿದ್ಧಿಂ ವಿನಾ ವ್ಯಾಪ್ತಿಪಕ್ಷಧರ್ಮತಾ ಜ್ಞಾನಯೋ-ರಯೋಗಃ । ಅಯಮಿತಿವಾ ತದಿತಿವಾ ತಯೋರ್ಜ್ಞಾನಂ ವಕ್ತವ್ಯಂ । ತತ್ರ ತತ್ತೇದಂತಯೋತದ್ದೇಶೈ ತತ್ಕಾಲ ಸಂಬಂಧ ರೂಪತ್ವಾತ್ । ತಥಾ ಚ ವ್ಯಾಪ್ತಿ ಗ್ರಹಕಾಲ ಏವ ಕಾಲಸ್ಯ ಸಿದ್ಧ್ಯನುಮಾನ ವೈಯರ್ಥ್ಯಾತ್ । ತದುಕ್ತಂ ಅನುವ್ಯಾಖ್ಯಾನೇ । ತದೇತದಿತಿ ಸರ್ವಂ ಚ ದೃಶ್ಯಂ ವಾ ಸ್ಮೃತಿಗೋಚರಂ । ಸಾಕ್ಷಿ ಸಿದ್ಧೇನ ಕಾಲೇನ ಖಚಿತಂ ಹ್ಯೇವ ವರ್ತತೇ । ತಸ್ಮಾನ್ಸತಂವಿನಾ ಕಿಂಚತ್ ಸ್ಮರ್ತುಂ ದ್ರಷ್ಟುಮಥಾಪಿ ವಾ । ಶಕ್ಯಂ ತನ್ನಿತ್ಯ ಸಿದ್ಧಿರ್ಹಿ ನಾನುಮಾವಸರೋ ಭವೇದಿತಿ । ತಾರ್ಕಿಕಾಸ್ತು ।

ಮೊದಲು ಕಾಲವೇ ಸಿದ್ಧಿಸಿಲ್ಲವಾದ್ದರಿಂದ ವ್ಯಾಪ್ತಿ ಪಕ್ಷಧರ್ಮತಾಗಳ ಜ್ಞಾನವೇ ಆಗುವುದಿಲ್ಲ. ಅದು, ಇದು, ಹೀಗೆ ಜ್ಞಾನವಾದರೆ ಅದರ ಇದರ ದೇಶ ಕಾಲಗಳ ಸಂಬಂಧ ಜ್ಞಾತವಾಗುತ್ತದೆ. ವ್ಯಾಪ್ತಿ ಜ್ಞಾನಕ್ಕೆ ಅವಕಾಶವಿಲ್ಲದ ಮೇಲೆ ಅನುಮಾನ ವ್ಯರ್ಥವಾಗುತ್ತದೆ. ಇದನ್ನೇ ಅನುವ್ಯಾಖ್ಯಾದಲ್ಲಿ ಹೇಳಿರುತ್ತಾರೆ. ಕಣ್ಣಿಗೆ ಕಾಣುವುದಾಗಲೀ, ಕಾಣದುದಾಗಲೀ ಅದು ಇದು ಇತ್ಯಾದಿ ಸರ್ವವೂ ಸಾಕ್ಷಿಯಿಂದಲೇ ಸಿದ್ಧವಾದ ಕಾಲದಿಂದಲೇ ಖಚಿತವಾದ ಪ್ರವೃತ್ತಿ ಆಗುತ್ತದೆ. ಆದುದರಿಂದ ಸಾಕ್ಷಿಯನ್ನು ಹೊರತಾಗಿ ಜ್ಞಾಪಿಸಲಾಗಲಿ, ನೋಡಲಾಗಲಿ ಶಕ್ಯ

ವಿಲ್ಲವು. ಆದುದರಿಂದ ನಿತ್ಯಸಿದ್ಧವಾದ ಸಾಕ್ಷಿ ವಿನಃ ಕಾಲಾಕಾಶಗಳ ಸಿದ್ಧಿಯಲ್ಲಿ ಅನುಮಾನ ಆಗಮಗಳ ಅವಕಾಶವೇ ಇರುವುದಿಲ್ಲ. ತಾರ್ಕಿಕರಾದರೋ—

ಪರಾಪರ ವ್ಯತಿಕರಯೌಗಪದ್ಯಾಯೌಗಪದ್ಯ ಚಿರಕ್ಷಿಪ್ರ ಪ್ರತ್ಯಯ ಲಿಂಗಃಕಾಲ ಇತಿ ನ್ಯಾಯಭಾಷ್ಯಂ । ಅಸ್ಯಾರ್ಥಃ । ಅಸ್ತಿ ತಾವತ್ ಸ್ಥವಿರೇ ಪರೋಽಯಮಿತಿ ಪ್ರತ್ಯಯೋ ಯೂನಿ ಚಾಪರ ಇತಿ । ನ ಚ ದಿಕ್ ಕೃತ ಪರಾಪರ ಪ್ರತ್ಯಯ ವಿಲಕ್ಷಣತ್ವಾತ್ಪರಾಪರ ವ್ಯತಿಕರ ಪ್ರತ್ಯಯ ಇತ್ಯುಚ್ಯತೇ। ಯುಗಪದಾಗತಾವಯುಗಪದಾಗತಾವಿತಿ ದ್ವೌಪ್ರತ್ಯಯೌ । ತಥಾ ಚಿರೇಣಾ ಗತೋ ಚಿರೇಣಾಗತ ಇತಿ ದ್ವೌ ಪ್ರತ್ಯಯೌ । ತ ಏತೇ ಷಟ್ ಪ್ರತ್ಯಯಾಃ ಕಾಲಸ್ಯ ಲಿಂಗಾನಿ । ಕಾಲಾಭಾವೇ ಚೈತೇಷಾಂ ನಿರಾಲಂಬನತ್ವಾಪತ್ತೇಃ । ನ ಹಿ ದ್ರವ್ಯಮೇವಾಲಂಬನಂ । ತದ್ವಿಲಕ್ಷಣ ಪ್ರತ್ಯಯತ್ವಾದಿತಿ । ತನ್ನ । ಪ್ರತ್ಯಯಾನಾಮೇವ ಕಾಲವಿಶಿಷ್ಟ ವ್ಯಕ್ತಿ ವಿಷಯಕತ್ವೇ ನ ಕಾಲ ಜ್ಞಾನೇನ ಕಾಲಾನುಮಾನ ಅಸಂಭವಾತ್। ನ ಹಿ ದಂಡಿ ಜ್ಞಾನೇನ ದಂಡಾನುಮಾನಂ ಸಂಭವತಿ । ನ ಚ ವಿಶಿಷ್ಟ ಜ್ಞಾನಮಿದಂ ವಿಶೇಷಣ ಜ್ಞಾನಪೂರ್ವಕಂ ವಿಶೇಷಣಂ ಚ ಕಾಲ ಏವ ಇತ್ಯನುಮೀಯತೇ ಇತಿ ವಾಚ್ಯಂ ।

ಕಾಣಾದ ಸೂತ್ರದ ನ್ಯಾಯಭಾಷ್ಯದಲ್ಲಿ ಕಾಲದ ವಿಷಯವಾಗಿ ಹೀಗೆ ಹೇಳುತ್ತಾರೆ "ಪರಾಪರವ್ಯತಿಕರಯೌಗಪದ್ಯಾಯೌಗಪದ್ಯ ಚಿರಕ್ಷಿಪ್ರ ಪ್ರತ್ಯಯ ಲಿಂಗಃ ಕಾಲಃ." ಇದರ ಅರ್ಥ ಹೀಗಿರುತ್ತದೆ—ಎಲ್ಲದರಿಂದಲೂ ಬೇರೆಯಾದ ಅತಿ ದೊಡ್ಡದಾದ ಒಂದು ವಸ್ತು ಇದೆ ಎಂಬ ಜ್ಞಾನವಿದೆ. ಅದನ್ನು ದಿಕ್‌ನಲ್ಲಿರುವ ಪರಾಪರ ಜ್ಞಾನದಿಂದ ವಿಲಕ್ಷಣವಾದ್ದರಿಂದ ಪರಾಪರವ್ಯತಿರಿಕ್ತವೆಂದು ಹೇಳುತ್ತಾರೆ. ಏಕಕಾಲದಲ್ಲಿ ಬಂದುದು, ಪ್ರತ್ಯೇಕ ಬಂದುದು ಹೀಗೆಯೇ ಎರಡು ಜ್ಞಾನಗಳಿವೆ. ಹಾಗೆಯೇ ಜಾಗ್ರತೆಯಾ ಬಂದುದು ತಡವಾಗಿ ಬಂದುದು, ಹೀಗೆ ಎರಡು ಜ್ಞಾನ ಗಳಿವೆ. ಈ ಆರು ಪ್ರತ್ಯಯ (ವ್ಯವಹಾರ ಜ್ಞಾನ)ಗಳೂ ಆಕಾಶಕ್ಕೆ ಜ್ಞಾಪಕಗಳು. ಕಾಲ ಜ್ಞಾನವೇ ಇಲ್ಲವೆಂದರೆ, ಹಿಂದೆ ಹೇಳಿದ ಆರು ವ್ಯವಹಾರಗಳಿಗೂ ಗತಿ ಇಲ್ಲದೇ ಹೋಗಬೇಕಾಗುತ್ತದೆ. ಆರು ವ್ಯವಹಾರಗಳಿಗೆ ದ್ರವ್ಯವೇ ಗತಿ ಎನ್ನೋಣ ಅಂದರೆ ಸರಿಯಲ್ಲ. ದ್ರವ್ಯವಿಲಕ್ಷಣ ಪ್ರತ್ಯಯವಾಗಿರುವುದರಿಂದ ಇದು ತಪ್ಪು ಪರಾಪರಾದಿ ವ್ಯವಹಾರಗಳಿಗೆಯೇ ಕಾಲವಿಶಿಷ್ಟ ವ್ಯಕ್ತಿ ವಿಷಯಕತೆ ಇದ್ದರೆ, ಪ್ರತ್ಯೇಕ ಕಾಲ ಜ್ಞಾನದಿಂದ ಕಾಲ ಸಾಧಕಾನುಮಾನ ಸಂಭವಿಸುವುದೇ ಇಲ್ಲ. ದಂಡೀ ಎಂಬ ವಿಶಿಷ್ಟ ಜ್ಞಾನದಿಂದ ದಂಡ ಸಾಧಕಾನುಮಾನ ಸಂಭವಿಸುವುದಿಲ್ಲ ಹಾಗೆಯೇ ವಿಶಿಷ್ಟ ಜ್ಞಾನವು ವಿಶೇಷಣ ಜ್ಞಾನಪೂರ್ವಕವು. ಆ ವಿಶೇಷಣ ಜ್ಞಾನವೇ ಕಾಲ ವಿಷಯಕವೆನ್ನುತ್ತೀವೆ ಎಂಬುದೂ ತಪ್ಪೇ—ಹಾಗೆನ್ನಬಾರದು.

**ತರ್ಹಿ ಕಾಲಜ್ಞಾನಾನುಮಾನತ್ವಾಪತ್ತ್ಯಾ ಕಾಲಾನುಮಾನಾತ್ಮಾ ಭಾವ ಪ್ರಸಂಗಾತ್ ಕಿಂ ಚ ಕಾಲರೂಪ ವಿಶೇಷಣ ಜ್ಞಾನಮನುಮಾನಾತ್ ಪೂರ್ವಂ ಕೇನ ಪ್ರಮಾಣೇನ ವಕ್ತವ್ಯಂ । ನ ತಾವದನುಮಾನಾಂತರೇಣ । ಅನವ-ಸ್ಥಾಪತ್ತೇಃ । ಅತಃ ಸಾಕ್ಷಿಣೈವೇತಿ ಸಿದ್ಧಂ ನಃ ಸಮೀಹಿತಂ । ನನು ಶರೀರೇ-ವಲೀಪಲಿತಕಾರ್ಕಶ್ಯಾದಿಕಂ ಪ್ರತ್ಯಕ್ಷೇಣ ಅನುಭೂಯತೇ । ತಚ್ಚ ಕಾರಣ ಜನ್ಯಂ ಕಾರ್ಯತ್ವಾದ್ಘಟವದಿತ್ಯನುಮಾನೇನತತ್ಕಾರಣ ಸಿದ್ಧೌ।ತಚ್ಚ ಕಾರಣಂ ಕಾಲ ಏವೇತಿ ಚೇನ್ನ । ಕಾಲ ಸಂಬಂಧಸ್ಯ ಸರ್ವದಾ ವಿದ್ಯಮಾನತ್ವೇನ ವಲೀಪಲಿತಾದಿ ಮಾತ್ರ ಕಾರಣತ್ವಾನುಪಪತ್ತೇಃ । ಉಭಯವಾದಿ ಸಿದ್ಧಾ-ಕಾಶಾದಿದ್ರವ್ಯಾಣಾಮೇವ ವಲೀಪಲಿತಾದಿ ಕಾರಣತಾ ಶಕ್ತಿ ಕಲ್ಪನೋ-ಪಪತ್ತಾವತಿರಿಕ್ತ ಕಾಲ ಕಲ್ಪನೇ ಗೌರವಾಚ್ಚ ।**

ಹಾಗಾದರೆ, ಕಾಲಜ್ಞಾನದನುಮಾನವೇ ಆಗಿ ಕಾಲಾನುಮಾನವು ಅಸಂಭವವೇ ಆಗುತ್ತದೆ ಮತ್ತು ಕಾಲ, ರೂಪ ವಿಶೇಷಣ ಜ್ಞಾನವು ಅನುಮಾನದಕಿಂತಲೂ ಮೊದಲು, ಯಾವ ಪ್ರಮಾಣದಿಂದ ತಿಳಿಯಿತು ಅಂದರೆ, ಹೇಳಬೇಕು ಬೇರೆ ಅನುಮಾನದಿಂದಲಂತೂ ಅಲ್ಲ, ಅನವಸ್ಥಾ ಬರುವುದರಿಂದ, ಆದುದರಿಂದ ಸಾಕ್ಷಿಯಿಂದಲೇ ಎಂದು ಹೇಳಬೇಕು. ನಮ್ಮಭಿಪ್ರಾಯವೇ ಸಿದ್ಧಿಸಿತು.

ನಮ್ಮ ಶರೀರಗಳಲ್ಲಿ ಪುಷ್ಠಿ, ಸುಕ್ಕುಗಟ್ಟ ಮುಪ್ಪುದುತ್ವ ಇವು ಪ್ರತ್ಯಕ್ಷದಿಂದ ಕಾಣುತ್ತವೆ. ಇವು ಹುಟ್ಟುವವು ಆದುದರಿಂದ ಇವಕ್ಕೆ ಒಂದು ಕಾರಣವಿರಲೇ ಬೇಕು ಎಂಬ ಯುಕ್ತಿಯಿಂದ ಕಾರಣವು ಸಿದ್ಧವಾಗಲು ಅದೇ ಕಾಲವೆನ್ನುತ್ತೇವೆ ಎಂಬುದು ಸರಿಯಾದುದಲ್ಲ. ಕಾಲದ ಸಂಬಂಧವು ಯಾವಾವಲೂ ಇರುವುದರಿಂದ ಪುಷ್ಠಿಸುಕ್ಕು ಇವುಗಳಿಗೆ ಮಾತ್ರ ಕಾರಣತೆ ಯುಕ್ತವಾಗುವುದಿಲ್ಲ. ಉಭಯವಾದಿ ಸಿದ್ಧವಾದ ಆಕಾಶಾದಿ ದ್ರವ್ಯಗಳಿಗೆಯೇ ಪುಷ್ಠಿಸುಕ್ಕುಗಳ ಕಾರಣ ಶಕ್ತಿ ಕಲ್ಪನೆ ಯುಕ್ತವಾಗುತ್ತಿರಲು ಕಾಲದ ಕಲ್ಪನೆಯು ಗೌರವವೇ ಆಗುತ್ತದೆ.

**ಸ್ಯಾದೇತತ್ । ಬಹುತರ ತರಣಿ ಪರಿಸ್ಪಂದಾಂತರಿತ ಜನ್ಮತ್ವಂ ಪರತ್ವಂ। ಅಲ್ಪ ತರಸೌ ರಸಂ ಚಾರಾಂತರಿತ ಜನ್ಮತ್ವಂ ಚಾಪರತ್ವಂ । ಏಕ ತಪನ ಸಂಚಾರ ವಿಶಿಷ್ಟತ್ವಂ ಯೌಗಪದ್ಯಂ । ಅನೇಕ ತಪನ ಸಂಚಾರ ವಿಶಿಷ್ಟತ್ವ ಮಯೌಗಪದ್ಯಂ । ಬಹುತರಣಿ ಕ್ರಿಯಾವಿಶಿಷ್ಟತ್ವಂ ಚಿರತ್ವಂ । ಕತಿಪಯ ತರಣಿ ಕ್ರಿಯಾವಿಶಿಷ್ಟತ್ವಂ ಕ್ಷಿಪ್ರತ್ವಂ । ಏತೈಃ ಪ್ರತ್ಯಯೈಃ ಕಾಲೋನು-ಮೀಯತೇ । ತರಣಿ ಕ್ರಿಯಾಹಿತರಣಿಗತಾ । ಸಾ ಚ ಸ್ಥವಿರಾದಿಪಿಂಡೇಷು ಸಾಕ್ಷಾತ್ ಸಂಬಂಧಾಭಾವಾತ್ಪರಂಪರಾ ಸಂಬಂಧೇನೈವ ವಾಚ್ಯಾ । ತತ್ಪರಂಪರಾ ಸಂಬಂಧ ಘಟಕ ಏವ ಕಾಲ ಇತಿ ಚೇನ್ನ । ಸೂರ್ಯ ರತ್ಯಾಕಾಶಾದಿತಾಮೇವ ತತ್ಸಂಬಂಧ ಘಟಕತ್ವೋಪಪತ್ತೌ ಅತಿರಿಕ್ತಕಾಲ**

**ಅಕಲ್ಪನಾತ್ । ಕಿಂ ಚ ಸುಷುಪ್ತ್ಯವಸ್ಥಾಯಾಂ ಕಾಲೋಽನುಭೂಯತೇ । ಏತಾವಂತಂ ಕಾಲಂ ಸುಖಮಹಮಸ್ವಾಪ್ಸಮಿತ್ಯುತ್ತರ ಕಾಲೀನ ಪರಾಮರ್ಶಾತ್ । ನ ಚ ಸುಷುಪ್ತೌ ಪ್ರಮಾಣಾಂತರಸ್ಯ ಪ್ರಸಕ್ತಿರಸ್ತಿ । ಅತಃ ಸಾಕ್ಷಿಣೈವಕಾಲಸಿದ್ಧಿಃ । ನ ಚಾಗಮಾತ್ತತ್ಸಿದ್ಧಿಃ । ಜಾತಿಬಧಿರಾಣಾಮಪಿ ತತ್ಪ್ರತ್ಯಯಾದಿತ್ಯಲಂ । ತದುಕ್ತಮನುವ್ಯಾಖ್ಯಾನೇ । ಕಾಲೋ ಹಿ ಸಾಕ್ಷಿ ಪ್ರತ್ಯಕ್ಷಃ ಸುಷುಪ್ತೌ ಚ ಪ್ರತೀತಿತ ಇತಿ ।**

**ಇತಿ ಇಂದ್ರಿಯ ಪ್ರಕರಣಮ್**

ಪರತೆ, ಅಪರತೆ, ಯೋಗಪದ್ಯತೆ, ಅಯೋಗ ಪದ್ಯತೆಗಳೆಂದರೆ, ಅನೇಕ (ಬಹು) ಸೂರ್ಯನು ತಿರುಗುವುದರಲ್ಲಿ ಹುಟ್ಟಿದುದು ಪರಧರ್ಮವು. ಸ್ವಲ್ಪ ಸೂರ್ಯ ಸಂಚಾರದ ಒಳಗೆ ಹುಟ್ಟಿದುದು ಅಪರಧರ್ಮವು. ಒಂದೇ ಸೂರ್ಯ ಸಂಚಾರ ವಿಶಿಷ್ಟವಾದುದು ಯೌಗಪದ್ಯ (ಏಕ ಕಾಲಿಕ) ಅನೇಕ ಸೂರ್ಯ ತಪನ ಸಂಚಾರ ವಿಶಿಷ್ಟವಾದುದು ಅಯೌಗಪದ್ಯ (ಅನೇಕ ಕಾಲಿಕ). ಅನೇಕ ಸೂರ್ಯ ಕ್ರಿಯಾ ವಿಶಿಷ್ಟವಾದುದು, ಕೆಲ ಸೂರ್ಯ ಕ್ರಿಯಾ ವಿಶಿಷ್ಟವಾದುದು ಕ್ಷಿಪ್ರತೆ. ಈ ಪ್ರತ್ಯಯಗಳಿಂದ ಕಾಲ ಅನುಮಿತವಾಗುತ್ತದೆ. ಸೂರ್ಯನ ಕ್ರಿಯೆ ಸೂರ್ಯನಲ್ಲಿರುತ್ತದೆ. ಆ ಕ್ರಿಯೆ ದೊಡ್ಡ ದೊಡ್ಡ ವಸ್ತುಗಳಲ್ಲಿ ಸಾಕ್ಷಾತ್ತಾಗಿ ಸಂಬಂಧವಿಲ್ಲವಾದ್ದರಿಂದ, ಪರಂಪರಾ ಸಂಬಂಧವೇ ಹೇಳಬೇಕು. ಆ ಪರಂಪರಾ ಸಂಬಂಧವೇ (ಸಂಬಂಧದಿಂದ ಒದಗುವುದೇ) ಕಾಲವು ಎನ್ನಬಾರದು. ಸೂರ್ಯರಶ್ಮಿಯಿಂದ ಆಕಾಶ ದಿಕ್ಕುಗಳಿಗೆ ಅಸಂಬಂಧ ಘಟಿತತೆ ಯುಕ್ತವಾಗುತ್ತಿರಲು, ಕಾಲ ಕಲ್ಪನಾ ಅಯುಕ್ತವೇ ಆಗುತ್ತದೆ ಮತ್ತು ನಿದ್ರಾವಸ್ಥೆಯಲ್ಲಿ ಕಾಲವು ಅನುಭವದಲ್ಲಿ ಬರುತ್ತದೆ. ಇಷ್ಟು ಹೊತ್ತಿನವರೆವಿಗೂ ಸುಖವಾಗಿ ಮಲಗಿದ್ದೆ ಎಂದು, ಎದ್ದಮೇಲೆ ಸ್ಮೃತಿ ಬರುತ್ತದೆ. ನಿದ್ದೆಯಲ್ಲಿ ಯಾವ ಪ್ರಮಾಣ ಪ್ರಸಕ್ತಿಯೂ ಇರುವುದಿಲ್ಲ. ಆದುದರಿಂದ ಸಾಕ್ಷಿಯಿಂದಲೇ ಕಾಲದ ಸಿದ್ಧಿಯು. ಆಗಮದಿಂದ ಕಾಲ ಸಿದ್ಧಿ ಆಗುವುದಿಲ್ಲ. ಹುಟ್ಟು ಕಿವುಡರಿಗೆ ಕಾಲವ್ಯವಹಾರವೇ ಇಲ್ಲವಾಗಬೇಕಾದೀತು. ಇದನ್ನು ಅನುವ್ಯಾಖ್ಯಾನದಲ್ಲಿ ಕಾಲವು ಸಾಕ್ಷಿ ಪ್ರತ್ಯಕ್ಷವು—ನಿದ್ರೆಯಲ್ಲಿ ಜ್ಞಾತವಾಗುವುದರಿಂದ ಹೀಗೆ ಹೇಳಿದ್ದಾರೆ.

ಹೀಗೆ ದ್ರವ್ಯದಲ್ಲಿ ಹನ್ನೊಂದನೆಯದಾದ ಇಂದ್ರಿಯ ಪ್ರಕರಣದೊಂದಿಗೆ ಮಧ್ವಸಿದ್ಧಾಂತಸಾರದಲ್ಲಿ ಇಪ್ಪತ್ತೊಂದನೇ ಪ್ರಕರಣವು ಕನ್ನಡಾನುವಾದದೊಂದಿಗೆ ಸಮಾಪ್ತಿಗೊಂಡಿತು.

**॥ ಶ್ರೀ ಕೃಷ್ಣಾರ್ಪಣಮಸ್ತು ॥**